ತುಮಕೂರು ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)


ಸಂಶೋಧಕ

ರವೀಶ ಜಿ. ಎನ್.

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು



ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - 583276

೨೦೧೭

ತುಮಕೂರು ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ

(ಕನ್ನಡ ವಿಶ್ವವಿದ್ಯಾಲಯಕ್ಕೆ ಪಿಹೆಚ್.ಡಿ. ಪದವಿಗಾಗಿ ಸಲ್ಲಿಸಿದ ಮಹಾಪ್ರಬಂಧ)

ಸಂಶೋಧಕ

ರವೀಶ ಜಿ. ಎನ್.

ಮಾರ್ಗದರ್ಶಕರು

ಡಾ. ವಾಸುದೇವ ಬಡಿಗೇರ

ಪ್ರಾಧ್ಯಾಪಕರು



ಸಮಾಜ ವಿಜ್ಞಾನಗಳ ನಿಕಾಯ

ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ - 583276

೨೦೧೩

ಮಾರ್ಗದರ್ಶಕರ ದೃಢೀಕರಣ ಪತ್ರ

ರವೀಶ ಜಿ.ಎನ್. ಇವರು ಪಿಎಚ್.ಡಿ. ಪದವಿಗಾಗಿ ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ **ತುಮಕೂರು ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ** ಎಂಬ ಈ ಮಹಾಪ್ರಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದಾರೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಹಾಗೂ ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ದೃಢೀಕರಿಸುತ್ತೇನೆ.

ಮಾರ್ಗದರ್ಶಕರು

(ಡಾ.ವಾಸುದೇವ ಬಡಿಗೇರ)
ಪ್ರಾಧ್ಯಾಪಕರು
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 08/08/2016
ಸ್ಥಳ: ವಿದ್ಯಾರಣ್ಯ

ಸಂಶೋಧಕರ ಪ್ರಮಾಣ ಪತ್ರ

ತುಮಕೂರು ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ ಎಂಬ ಮಹಾಪ್ರಬಂಧವನ್ನು ಪಿಎಚ್.ಡಿ. ಪದವಿಗಾಗಿ ಕನ್ನಡ ವಿಶ್ವವಿದ್ಯಾಲಯದ ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಡಾ. ವಾಸುದೇವ ಬಡಿಗೇರ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಲಾಗಿದೆ.

ಪ್ರಸ್ತುತ ಮಹಾಪ್ರಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿ ಮತ್ತು ಇತರ ಉದ್ದೇಶಗಳಿಗೆ ಬಳಸಿಕೊಂಡಿಲ್ಲವೆಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಸಂಶೋಧಕ

(ರವೀಶ ಜಿ.ಎನ್.)
ಪ್ರಾಚೀನ ಇತಿಹಾಸ ಮತ್ತು ಪುರಾತತ್ವ
ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩೨೭೬

ದಿನಾಂಕ: 08/08/2016
ಸ್ಥಳ: ವಿದ್ಯಾರಣ್ಯ

ಪರಿವಿಡಿ

ಅಧ್ಯಾಯ ೧

ಪ್ರಸ್ತಾವನೆ

ಪ್ರಸ್ತಾವನೆ

ಮನುಷ್ಯ ಅನಾದಿಕಾಲದಿಂದಲೂ ತನ್ನನ್ನು ತಾನು ರಕ್ಷಿಸಿಕೊಳ್ಳಲು ಒಂದಲ್ಲ ಒಂದು ರೀತಿಯಲ್ಲಿ ತಂತ್ರೋಪಾಯಗಳನ್ನು ಆವಿಷ್ಕರಿಸಿಕೊಳ್ಳುತ್ತಾ ಬಂದಿದ್ದಾನೆ. ನಾಗರಿಕನಾದಂತೆ ತನ್ನ ಸಮುದಾಯದವರೊಂದಿಗೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ನೆಲೆ ನಿಲ್ಲಲು ಆರಂಭಿಸಿ ಗ್ರಾಮ ಸಮಾಜದ ಹುಟ್ಟಿಗೂ ಕಾರಣನಾಗಿದ್ದಾನೆ. ಆ ಮೂಲಕ ತನ್ನ ಮತ್ತು ತನ್ನವರ ರಕ್ಷಣೆಗಾಗಿ ಗ್ರಾಮಗಳ ಸುತ್ತಲೂ ಕಾಪುಗೋಡೆಗಳನ್ನು ಕಟ್ಟಿಕೊಳ್ಳಲು ಮುಂದಾದನು. ಈ ಬದಲಾವಣೆ ಕೋಟೆ–ಕೊತ್ತಲಗಳನ್ನು ಗ್ರಾಮಾಡಳಿತ ಮತ್ತು ನಗರ ರಾಜ್ಯಗಳು ಏಳಿಗೆ ಹೊಂದಿದ ಸಂದರ್ಭದಲ್ಲಿ ಮಹತ್ವದ ಸ್ಥಾನವನ್ನು ಗಳಸಿಕೊಳ್ಳುವಂತೆ ಮಾಡಿತು. ಏಕೆಂದರೆ ಪ್ರತಿಯೊಂದು ನಗರ ರಾಜ್ಯವೂ ರಾಜ್ಯ ವಿಸ್ತರಣಾ ಮಹತ್ವಾಕಾಂಕ್ಷೆಗೆ ಹೆಚ್ಚು ಪ್ರಾಧಾನ್ಯತೆ ನೀಡುತ್ತಿದ್ದವು. ಇಂತಹ ಮಹತ್ವಕಾಂಕ್ಷೆ ನಗರ ರಾಜ್ಯಗಳನ್ನು ನಿರಂತರ ಸಂಘರ್ಷದಲ್ಲಿ ತೋಡಗುವಂತೆ ಮಾಡಿತು. ಈ ಸಂಘರ್ಷಗಳಿಂದ ತಮ್ಮ ರಾಜ್ಯವನ್ನು ರಕ್ಷಿಸಿಕೊಳ್ಳಲು ಬಲಿಷ್ಠ ಕೋಟೆ ಕೋತ್ತಲಗಳ ಮೋರೆ ಹೋಗುವಂತಹ ವಾತಾವರಣವನ್ನು ಸೃಷ್ಟಿಸಿತು. ಕ್ರಮೇಣ ಅವು ನಗರ ರಾಜ್ಯಗಳ ಪ್ರತಿಷ್ಠೆಯ ಸಂಕೇತವಾಗಿ ಪರಿಗಣಿಸಲ್ಪಟ್ಟವು. ಯಾವ ರಾಜ್ಯ ಅಧಿಕ ಸಂಖ್ಯೆಯ ಕೋಟೆಗಳನ್ನು ಹೊಂದಿತ್ತೋ ಅದು ಯಾವ ರಾಜನಿಂದಲೂ ಬೇಧಿಸಲ್ಪಡದ ರಾಜ್ಯವಾಗಿ ಗುರುತಿಸಿಕೊಳ್ಳುತ್ತಿತ್ತು. ಈ ಉದ್ದೇಶದಿಂದಲೇ ಅಂದು ಯಾವುದೇ ಒಂದು ರಾಜ್ಯ ಹೊಂದಿದ್ದ ಕೋಟೆಯ ಬಲಿಷ್ಠತೆ ಆಧಾರದ ಮೇಲೆಯೇ ಆ ರಾಜ್ಯದ ಅಳಿವು–ಉಳಿವಿನ ಸಂಗತಿ ನಿರ್ಧಾರವಾಗುತ್ತಿತ್ತು. ಕೌಟಿಲ್ಯ, ಮನು, ಕಾಮಾಂದಕ, ಶುಕ್ರ ಮೊದಲಾದ ರಾಜನೀತಿಜ್ಞರು ಈ ಕಾರಣಕ್ಕಾಗಿ ಕೋಟೆ ಇಲ್ಲದ ರಾಜನನ್ನು ವಿಷರಹಿತ ಹಾವಿನಂತೆ ಹಾಗೂ ಕಡಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿಯಂತೆ ಎಂದು ವರ್ಣಿಸಿದ್ದಾರೆ. ಹಾಗಾಗಿ ರಾಜನು ತನ್ನ ಅಸ್ತಿತ್ವವನ್ನು ಉಳಿಸಿಕೊಳ್ಳಲು ನಿರಂತರವಾಗಿ ಬದಲಾವಣೆಗೆ ಒಳಪಡುತ್ತಿದ್ದ ಯುದ್ಧನೀತಿ ಮತ್ತು ಆಯುಧೋಪಕರಣಗಳ ಆವಿಷ್ಕಾರಕ್ಕೆ ಅನುಗುಣವಾದ ಕೋಟೆ–ಕೊತ್ತಲಗಳ ನಿರ್ಮಾಣಕ್ಕೆ ಮುಂದಾಗುತ್ತಿದ್ದನು.

ಸಾಮಾನ್ಯವಾಗಿ ಪ್ರಭುವರ್ಗ ತಮ್ಮ ರಕ್ಷಣೆಗಾಗಿ ಕೈಗೊಳ್ಳುತ್ತಿದ್ದ ಮುನ್ನೆಚ್ಚರಿಕಾ ಕ್ರಮಗಳು ಸಾಮಾನ್ಯ ಜನರಲ್ಲೂ ಸಹ ತಮ್ಮನ್ನು ತಾವೇ ರಕ್ಷಿಸಿಕೊಳ್ಳುವ ವಿಷಯದಲ್ಲಿ ಜಾಗೃತಗೊಳ್ಳುವಂತೆ

ಮಾಡಿತು. ಇದರ ಫಲವೇ ಗ್ರಾಮಗಳ ಸುತ್ತಲೂ ನಿರ್ಮಿಸಲ್ಪಟ್ಟ ಕಾಪುಗೋಡೆಗಳು ಇಂದಿಗೂ ಅವಶೇಷಗಳ ರೂಪದಲ್ಲಿ ಕಂಡುಬರುತ್ತವೆ. ಹೀಗೆ ನಿರ್ಮಾಣಗೊಂಡ ಕೋಟೆ-ಕೊತ್ತಲಗಳು ಅತ್ಯಾಧುನಿಕ ಮಾರಕಾಸ್ತ್ರ ಆವಿಷ್ಕಾರಗೊಳ್ಳುವವರೆಗೂ ಮನುಷ್ಯನ ರಕ್ಷಣೆಗಾಗಿ ಇದ್ದಂತಹ ಏಕ ಮಾತ್ರ ತಂತ್ರವಾಗಿತ್ತು. ಬಹುಶಃ ಇದರಿಂದಲೇ ಕೋಟೆಯನ್ನು ರಾಜ್ಯ ರಕ್ಷಣೆಯ ವಿಷಯದಲ್ಲಿ ಮನುಷ್ಯನ ನಾಡಿ ಮಿಡಿತದೊಂದಿಗೆ ಹೋಲಿಕೆ ಮಾಡಲಾಗಿದೆ. ಅಂದರೆ ಮನುಷ್ಯನಿಗೆ ನಾಡಿ ಮಿಡಿತ ಎಷ್ಟು ಮುಖ್ಯವೋ, ರಾಜನಿಗೆ ಕೋಟೆಯು ಅಷ್ಟೇ ಮುಖ್ಯವಾಗಿತ್ತು. ನಾಡಿಮಿಡಿತ ನಿಂತರೆ ಮನುಷ್ಯ ಹೇಗೆ ಸಾವನ್ನಪ್ಪುತ್ತಿದ್ದನೋ ಹಾಗೆಯೇ ರಾಜನು ಕೋಟೆ-ಕೊತ್ತಲಗಳನ್ನು ಕಳೆದುಕೊಂಡರೆ ತನ್ನ ಅಧಃಪತನವನ್ನು ತಾನೇ ಆಹ್ವಾನಿಸಿಕೊಂಡಂತೆಯೇ. ಈ ಉದ್ದೇಶದಿಂದ ಕೌಟಿಲ್ಯ, ಮನು, ಶುಕ್ರ, ಕಾಮಾಂದಕ, ತಿರುವಳ್ಳವರ್ ಮೊದಲಾದ ರಾಜನೀತಿಜ್ಞರು, ಕನಕದಾಸ, ಹರಿಹರ, ವಿರುಪಾಕ್ಷ ಪಂಡಿತ, ಕೆಳದಿ ಬಸವರಾಜ, ಲಿಂಗಣ್ಣಕವಿ ಮೊದಲಾದ ಕವಿವರ್ಯರು ಆಯಾಯ ಪರಿಸರಕ್ಕೆ ಅನುಗುಣವಾಗಿ ವಿವಿಧ ಪ್ರಕಾರದ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಳ್ಳಲು ಸಲಹೆ ಸೂಚನೆ ನೀಡಿರುವುದು ಶಾಸ್ತ್ರ ಮತ್ತು ಸಾಹಿತ್ಯ ಗ್ರಂಥಗಳಿಂದ ತಿಳಿಯುತ್ತದೆ.

ಸಾಮಾನ್ಯವಾಗಿ ಜಗತ್ತಿನಾದ್ಯಂತ ಶಾಸ್ತ್ರ ಗ್ರಂಥಗಳು ಉಲ್ಲೇಖಿಸುವ ವಾಸ್ತುವಿನ್ಯಾಸದಂತೆ ಆಯಾಯ ಪರಿಸರದ ಸ್ವಾಭಾವಿಕ ಅಭೇದ್ಯತೆ, ಪ್ರಾಕೃತಿಕ ಸಂಪತ್ತು, ಭೂರಚನೆ ಹಾಗೂ ಸ್ಥಳೀಯ ಯುದ್ಧನೀತಿ ಮತ್ತು ಆಯುಧೋಪಕರಣಗಳ ಬಳಕೆಗೆ ಅನುಗುಣವಾಗಿ ಕೋಟೆ ಕೊತ್ತಲ ನಿರ್ಮಾಣಗೊಂಡಿರುತ್ತವೆ. ಕ್ರಮೇಣ ಮದ್ದು ಗುಂಡು ಮತ್ತು ಮಾರಕಾಸ್ತ್ರ ಶೋಧಿಸಲ್ಪಟ್ಟ ೧೮ ಮತ್ತು ೧೯ನೆಯ ಶತಮಾನದವರೆಗೂ ಇವು ಮಹತ್ವದ ಸ್ಥಾನ ಪಡೆದುಕೊಂಡಿದ್ದವು. ನಂತರದಲ್ಲಿ ಈ ಬೆಳವಣಿಗೆಯೇ ಕೋಟೆ-ಕೊತ್ತಲಗಳ ಅವಸಾನಕ್ಕೆ ಇವು ಕಾರಣವಾಯಿತು. ಆದರೂ ಪ್ರಸ್ತುತ ಆಧುನಿಕ ಸಂದರ್ಭದಲ್ಲಿ ವೈಜ್ಞಾನಿಕ ತಂತ್ರಜ್ಞಾನದಿಂದ ಕೋಟೆ ಗೋಡೆ ನಿರ್ಮಿಸಿಕೊಂಡು ದೇಶದ ಗಡಿ ರಕ್ಷಣೆ ಮಾಡುತ್ತಿರುವುದು ಮಹತ್ವದ ಸಂಗತಿ. ಅಂದರೆ ಇಂದು ಗಡಿ ರಕ್ಷಣೆಗೆ ಕಲ್ಲು, ಮಣ್ಣು, ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣಗೊಂಡ ಗೋಡೆಯ ಬದಲಿಗೆ ಕಬ್ಬಿಣದ ಬೇಲಿ, ಲೇಸರ್ ಕಿರಣಗಳನ್ನು ಬಳಸಿಕೊಳ್ಳುತ್ತಿದ್ದಾರೆ. ಇಂದಿಗೂ ದೇಶದ ಗಡಿ ವೀಕ್ಷಣೆಗಾಗಿ ಕಾವಲು ಗೋಪುರ(Watching Tower)ಗಳು ಹೆಚ್ಚು ಮಾನ್ಯತೆಗಳಿಸಿಕೊಂಡಿವೆ ಎಂದರೆ ಕೋಟೆ-ಕೊತ್ತಲಗಳಿಗೆ ಅವಸಾನ ಎನ್ನುವುದಿಲ್ಲ ಎಂಬ ಅಂಶ ಸ್ಪಷ್ಟವಾಗುತ್ತದೆ. ಸ್ವಾತಂತ್ರ್ಯಕ್ಕೂ ಪೂರ್ವ ವಿಕೇಂದ್ರೀಕರಣ ಆಡಳಿತ ವ್ಯವಸ್ಥೆ ಇದ್ದುದರಿಂದ ಪ್ರತಿ ಸಂಸ್ಥಾನವು ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಹವಣಿಸುತ್ತಿತ್ತು. ಅದಕ್ಕಾಗಿ ಪ್ರತಿ ೨೦ರಿಂದ ೩೦ ಕಿ. ಮೀ. ಅಂತರದಲ್ಲಿ ಕೋಟೆ-ಕೊತ್ತಲಗಳನ್ನು ನಿರ್ಮಿಸಿಕೊಳ್ಳಲು ಮುಂದಾಗುತ್ತಿದ್ದವು. ಇಂದು ರಾಜಪ್ರಭುತ್ವ ಅಂತ್ಯಗೊಂಡು ಒಕ್ಕೂಟ ರಾಜ್ಯಗಳ ಕೇಂದ್ರೀಕೃತ ಆಡಳಿತ ಇರುವುದರಿಂದ ಇಡೀ ದೇಶದಾದ್ಯಂತ ಕೋಟೆ-ಕೊತ್ತಲ ನಿರ್ಮಿಸಿಕೊಳ್ಳುವ ಅಗತ್ಯವಿಲ್ಲ. ಆದರೆ ದೇಶದ ಗಡಿ ಭಾಗಗಳಲ್ಲಿ ಮಾತ್ರ ಸುಸಜ್ಜಿತ ಸೇನೆ ಇರುವುದರಿಂದ ಅವರ ಮತ್ತು ದೇಶದ ರಕ್ಷಣೆಗಾಗಿ ಹಾಗೂ ಶತ್ರುಗಳು ದೇಶದ ಒಳಗೆ ನುಸುಳದಂತೆ ತಡೆಯುವ ಉದ್ದೇಶದಿಂದ ಅವಶ್ಯವಿರುವಲ್ಲಿ ಮಾತ್ರ ಕಬ್ಬಿಣದ ಬೇಲಿ ಮತ್ತು ಲೇಸರ್ ಕಿರಣಗಳಿಂದ ತಡೆಗೋಡೆಗಳನ್ನು ನಿರ್ಮಿಸಲಾಗುತ್ತಿದೆ. ಬಹುಶಃ ಜಗತ್ತಿನಲ್ಲಿ

ಇಂತಹ ಅತ್ಯಾಧುನಿಕ ಸಾರಿಗೆ ವ್ಯವಸ್ಥೆ, ಮಾರಕಾಸ್ತ್ರಗಳು ಆವಿಷ್ಕಾರಗೊಂಡರೂ ಕೋಟೆ-ಕೊತ್ತಲಗಳು ಮಾತ್ರ ಎಂದಿಗೂ ತನ್ನ ಮಹತ್ವವನ್ನು ಕಳೆದುಕೊಳ್ಳುವುದಿಲ್ಲ ಎಂಬುದು ಇದರಿಂದ ವೇದ್ಯವಾಗುತ್ತದೆ. ಒಂದು ವೇಳೆ ಮುಂದಿನ ತಲೆಮಾರಿನಲ್ಲಿ ಏನಾದರೂ ಅವುಗಳ ನಿರ್ಮಾಣ ಶೈಲಿ ಬದಲಾಗಬಹುದೇ ಹೊರತು ಅವುಗಳೇ ಅವಸಾನ ಹೊಂದುತ್ತವೆ ಎಂದು ನಿರ್ಧರಿಸಲು ಸಾಧ್ಯವಿಲ್ಲ.

ವಾಸ್ತವವಾಗಿ ರಕ್ಷಣಾ ವಾಸ್ತು ಎಂಬುದನ್ನು ಕೋಟೆ ಎಂಬ ಪದಕ್ಕೆ ಸಂವಾದಿಯಾಗಿ ಬಳಸಲಾಗುತ್ತಿದೆ. ಆದುದರಿಂದ ಪ್ರಾರಂಭದಲ್ಲಿ ಕೋಟೆಯು ಮಣ್ಣಿನ ದಿಬ್ಬ, ಬಿದಿರಿನ ತಡೆಗೋಡೆ, ಆಳವಾದ ಕಂದಕಗಳಿಂದ ನಿರ್ಮಿಸಲ್ಪಡುತ್ತಿತ್ತು. ಕ್ರಮೇಣ ಕಲ್ಲು, ಮಣ್ಣು, ಇಟ್ಟಿಗೆ ಮತ್ತು ಗಾರೆಯಿಂದ ರೂಪಿಸಿಕೊಳ್ಳಲು ಮುಂದಾದರು. ಪ್ರಸ್ತುತ ಕಬ್ಬಿಣದ ಬೇಲಿ ಮತ್ತು ಲೇಸರ್ ಕಿರಣಗಳನ್ನೇ ಕೋಟೆ ಗೋಡೆಯನ್ನಾಗಿ ಬಳಸಿಕೊಳ್ಳಲಾಗುತ್ತಿದೆ. ರಕ್ಷಣಾ ವಾಸ್ತು ಎಂಬ ಪದವನ್ನು ಅರ್ಥೈಸಲು ಕೋಟೆ, ಸೈನಿಕ ಶಿಬಿರ, ಪುರ ಎಂಬ ಪದಗಳನ್ನು ರಕ್ಷಣೆಗೆ ಸಂವಾದಿಯಾಗಿ ಬಳಸಿಕೊಳ್ಳಲಾಗಿದೆ. ಇದುವರೆಗೂ ರಕ್ಷಣಾ ವಾಸ್ತು ಎಂದರೆ ಕೇವಲ ಪ್ರಾಗಿತಿಹಾಸ ಕಾಲದಿಂದ ಪ್ರಸ್ತುತ ದಿನಮಾನಗಳವರೆಗೆ ಕೋಟೆ-ಕೊತ್ತಲಗಳ ರಚನೆ, ವಾಸ್ತು ವಿನ್ಯಾಸ, ಲಕ್ಷಣ ಮತ್ತು ಮಹತ್ವ ಎಂದೇ ಪರಿಭಾವಿಸಿಕೊಳ್ಳಲಾಗುತ್ತಿತ್ತು. ಆದರೆ ಕೋಟೆಗೆ ಸೈನಿಕ ಶಕ್ತಿಯ ಅನಿವಾರ್ಯತೆ ಏನು ಎಂಬ ಅರಿವಿದ್ದರೂ ಅದನ್ನು ಕೋಟೆಗೆ ಸಂವಾದಿಯಾಗಿ ಬಳಸಿಕೊಳ್ಳುವ ಪ್ರಯತ್ನಗಳಾಗಿಲ್ಲ. ಅಂದರೆ ರಕ್ಷಣಾ ವಾಸ್ತುಶಿಲ್ಪವನ್ನು ಕೇವಲ ರಕ್ಷಣೆ, ವಾಸ್ತು, ಶಿಲ್ಪ ಎಂಬ ಮೂರು ಪದಗಳ ಅರ್ಥದ ಹಿನ್ನೆಲೆಯಲ್ಲಿ ವಿಶ್ಲೇಷಣೆಗೆ ಒಳಪಡಿಸಿದ್ದಾರೆಯೇ ಹೊರತು ಸೈನಿಕ ಶಕ್ತಿ ಇಲ್ಲದೆ ಎಂತಹ ಕೋಟೆ-ಕೊತ್ತಲಗಳಿಂದಲೂ ಯಾವ ಸಾಧನೆಯನ್ನು ಮಾಡಲಾಗದು ಎಂಬ ಅಂಶವನ್ನು ಯಾರು ಮನಗಂಡಿಲ್ಲ. ಹಾಗಾಗಿ ಕೋಟೆಗಳ ನಿರ್ಮಾಣದ ಹಿಂದಿನ ಉದ್ದೇಶ ಹಾಗೂ ಅವುಗಳಿಗೆ ಪೂರಕವಾಗಿ ತುಮಕೂರು ಜಿಲ್ಲೆಯಲ್ಲಿದ್ದ ಸೈನಿಕ ಕೇಂದ್ರಗಳು ಆಯಾಯ ಸಂಸ್ಥಾನದ ರಕ್ಷಣೆಯಲ್ಲಿ ಹೇಗೆ ತಮ್ಮ ಪಾತ್ರವಹಿಸುತ್ತಿದ್ದವು ಎಂಬುದನ್ನು ಮೊದಲ ಬಾರಿಗೆ ಅರ್ಥೈಸಲಾಗಿದೆ. ರಕ್ಷಣೆ, ವಾಸ್ತು, ಶಿಲ್ಪ ಇತ್ಯಾದಿ ಶಬ್ದಗಳನ್ನು ಪ್ರಭುತ್ವ ಕೇಂದ್ರಿತವಾಗಿ ನೋಡುವುದರೊಂದಿಗೆ ಸಾಮಾನ್ಯ ಜನರ ಭಾಗವಹಿಸುವಿಕೆ ಮತ್ತು ಅವರ ಜೀವನ ವಿಧಾನ ಹೇಗಿತ್ತು ಎಂಬುದನ್ನು ವಿಶ್ಲೇಷಿಸಲಾಗಿದೆ.

ಸಾಮಾನ್ಯವಾಗಿ ರಕ್ಷಣೆ ಎಂದರೆ ಕಾಪಾಡು, ಕಾವಲು, ಸಂರಕ್ಷಕ ಎಂಬ ಅರ್ಥವಿದೆ. ರಾಜನು ತನ್ನ ಹಾಗೂ ತನ್ನ ಸಮುದಾಯ ಮತ್ತು ಸಂಬಂಧಿಕರ ರಕ್ಷಣೆಗಾಗಿ ಕೋಟೆ ಇಲ್ಲವೆ ಸೈನಿಕ ಕೇಂದ್ರಗಳನ್ನು ನಿರ್ಮಿಸುತ್ತಿದ್ದನು. ಇವೆರಡರ ಉದ್ದೇಶವೂ ಪ್ರಜಾ ಸಮುದಾಯದ ರಕ್ಷಣೆಯೇ ಆಗಿರುವುದರಿಂದ ಸೈನಿಕ ಕೇಂದ್ರಗಳನ್ನು ಕೋಟೆಗಳೆಂದು ಪರಿಗಣಿಸುವುದರಲ್ಲಿ ತಪ್ಪಿಲ್ಲ ಎನಿಸುತ್ತದೆ. ಆದುದರಿಂದ ಸೈನಿಕ ಶಿಬಿರಗಳನ್ನು ಕೋಟೆಗೆ ಸಂವಾದಿಯಾಗಿ ರಕ್ಷಣಾ ವಾಸ್ತುವಿನ ಪರಿಧಿಯಲ್ಲಿ ಅರ್ಥೈಸಲಾಗಿದೆ. ರಾಜನೀತಿಜ್ಞನಾದ ಮನು ರಾಜ್ಯದ ರಕ್ಷಣೆಗಾಗಿ ಗಜಪಡೆ, ಅಶ್ವಪಡೆ, ರಥದಳ, ಕಾಲ್ದಳವನ್ನು ಒಳಗೊಂಡ ನರದುರ್ಗವನ್ನು ನಿರ್ಮಿಸಿಕೊಳ್ಳಬೇಕೆಂದು ಸೂಚಿಸಿರುವುದರಿಂದ ಸೈನ್ಯವು ಸಹ ಕೋಟೆಯಂತೆ ಕಾರ್ಯ ನಿರ್ವಹಿಸಲ್ಪಡುತ್ತಿತ್ತು. ಹಾಗಾಗಿ

ಪ್ರಸ್ತುತ ಮಹಾಪ್ರಬಂಧದಲ್ಲಿ ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಸೈನಿಕ ಕೇಂದ್ರ ಅಥವಾ ಶಿಬಿರಗಳನ್ನು ರಕ್ಷಣೆಯ ದೃಷ್ಟಿಯಿಂದ ಕೋಟೆಗೆ ಸಂವಾದಿಯಾಗಿ ಬಳಸಿಕೊಳ್ಳಲಾಗಿದೆ.

ವಾಸ್ತು ಎಂಬುದನ್ನು ಮನುಷ್ಯನು ವಾಸಯೋಗ್ಯ ಪ್ರದೇಶದಲ್ಲಿ ಕ್ರಮಬದ್ಧವಾಗಿ ನಿರ್ಮಿಸಿಕೊಂಡ ಕಟ್ಟಡ ಎಂದು ಅರ್ಥೈಸಲಾಗಿದೆ. ಆದರೆ ಜಗತ್ತಿನ ಎಲ್ಲಾ ಕಟ್ಟಡಗಳು ವಾಸ್ತುಬದ್ಧವಾಗಿ ನಿರ್ಮಾಣಗೊಂಡಿವೆಯಾ? ನಿರ್ಮಾಣಗೊಂಡಿದ್ದರೆ ಸಾಮ್ರಾಜ್ಯಗಳೇಕೆ ಅವಸಾನ ಹೊಂದುತ್ತಿದ್ದವೆಂಬ ಸಂದೇಹ ಸಹಜವಾಗಿ ಮೂಡುತ್ತದೆ. ಏಕೆಂದರೆ ಒಂದು ವೇಳೆ ವಾಸ್ತುಬದ್ಧವಾಗಿಯೇ ಎಲ್ಲಾ ಕೋಟೆ-ಕೊತ್ತಲಗಳು ನಿರ್ಮಾಣಗೊಂಡಿದ್ದಲ್ಲಿ ಯಾವ ಸಾಮ್ರಾಜ್ಯಗಳು ಅವಸಾನ ಹೊಂದುವ ಪ್ರಮೇಯವೇ ಇರುತ್ತಿರಲಿಲ್ಲ. ಯಾವುದೇ ಸಾಮ್ರಾಜ್ಯ, ರಾಜ್ಯ ಇಲ್ಲವೆ ಸಂಸ್ಥಾನದ ಭವಿಷ್ಯ ಕೋಟೆಯ ಬಲಿಷ್ಠತೆಯ ಮೇಲೆಯೇ ಎಲ್ಲಾ ಕಾಲದಲ್ಲೂ ನಿರ್ಧಾರವಾಗುತ್ತಿರಲಿಲ್ಲ. ಯಾವ ರಾಜ್ಯ ಚಾಣಾಕ್ಷತನದ ರಾಜ ನೈಪುಣ್ಯತೆಯನ್ನು ಹೊಂದಿರುತ್ತಿತ್ತೋ ಅದು ದೀರ್ಘ ಕಾಲದವರೆಗೆ ಆಳ್ವಿಕೆಗೆ ಒಳಪಟ್ಟಿರುವುದು ಚರಿತ್ರೆಯ ಪುಟಗಳಿಂದ ತಿಳಿಯುತ್ತದೆ. ಹಾಗಾಗಿ ಎಲ್ಲಾ ಮಾದರಿಯ ಕಟ್ಟಡಗಳು ಶಾಸ್ತ್ರೋಕ್ತವಾಗಿಯೇ ನಿರ್ಮಿಸಲ್ಪಡುತ್ತಿದ್ದವು ಎಂದು ಒಪ್ಪಿಕೊಳ್ಳಲಾಗದು. ಸಾಮಾನ್ಯವಾಗಿ ಶಾಸ್ತ್ರಗ್ರಂಥಗಳು ಉಲ್ಲೇಖಿಸುವ ವಾಸ್ತುವಿನ್ಯಾಸವನ್ನು ತಮ್ಮ ಅನುಕೂಲಕ್ಕೆ ತಕ್ಕಂತೆ ಆಯಾಯ ಪರಿಸರಕ್ಕೆ ಅನುಗುಣವಾಗಿ ಕೋಟೆ-ಕೊತ್ತಲಗಳನ್ನು ನಿರ್ಮಾಣ ಮಾಡಿಕೊಳ್ಳುತ್ತಿದ್ದರು. ಆದುದರಿಂದ ಯಾವುದೇ ಕಟ್ಟಡವನ್ನು ವಾಸ್ತುವಿನ್ಯಾಸದ ಪರಿಧಿಯಲ್ಲಿ ನೋಡಿದಾಗ ಅದು ಅಪರಿಪೂರ್ಣವಾಗಿಯೇ ಕಾಣುತ್ತದೆ. ಏಕೆಂದರೆ ತುಮಕೂರು ಜಿಲ್ಲೆಯ ಗಿರಿದುರ್ಗದ ಪ್ರತಿ ನಿರ್ಮಿತಿಯಲ್ಲೂ ಶಾಸ್ತ್ರಗ್ರಂಥ ಸೂಚಿಸುವ ವಾಸ್ತು ವಿನ್ಯಾಸವನ್ನು ಕಾಣಲಾಗುವುದಿಲ್ಲ. ಬದಲಿಗೆ ಸ್ಥಳೀಯ ವಾಸ್ತು ವೈವಿಧ್ಯತೆ ಮತ್ತು ಸ್ವಾಭಾವಿಕ ಅಭೇದ್ಯತೆಯೇ ಪ್ರತಿ ನಿರ್ಮಿತಿಯಲ್ಲಿ ಕಂಡುಬರುತ್ತದೆ. ಯಾವ ಕಾಲದಲ್ಲಿ ಹೆಚ್ಚು ಗಾಳಿಯ ತೀವ್ರ ಇರುತ್ತದೆಯೋ ಅದಕ್ಕೆ ವಿರುದ್ಧ ದಿಕ್ಕಿನಲ್ಲಿ ಹೇಗೆ ಗೋಡೆ ನಿರ್ಮಿಸಬೇಕು ಎಂಬುದು ಜಿಲ್ಲೆಯ ಪ್ರತಿ ಕೋಟೆಯ ನಿರ್ಮಿತಿಯಲ್ಲೂ ಕಾಣಬಹುದು. ಕೆಲವೊಮ್ಮೆ ಅಲ್ಲಿಯ ಭೌಗೋಳಿಕ ಸಂರಚನೆಯು ಸಹ ಕೋಟೆಗಿಂತಲೂ ಹೆಚ್ಚಿನ ಭದ್ರತೆಯನ್ನು ನೀಡುತ್ತದೆ. ಹಾಗಾದಾಗ ಅದನ್ನು ವಾಸ್ತುವಿನ ಪರಿಧಿಯಲ್ಲಿ ಸೇರಿಸಬೇಕೋ ಅಥವಾ ಬೇಡವೋ ಎಂಬ ಸಂದೇಹ ಸಹಜವಾಗಿ ಉಂಟಾಗುತ್ತದೆ. ಏಕೆಂದರೆ ಜಿಲ್ಲೆಯಲ್ಲಿ ನೈಸರ್ಗಿಕ ಹೆಬ್ಬಂಡೆ ಕಲ್ಲಾಸರೆ, ಗುಹೆ, ನಿಲುವುಗಲ್ಲುಗಳಿಗೆ ಹೊಂದಿಕೊಂಡಂತೆಯೇ ಕೋಟೆಗೋಡೆ ನಿರ್ಮಾಣಗೊಂಡಿದೆ. ಕೆಲವೆಡೆ ಇಡೀ ಬೆಟ್ಟದ ಸಂರಚನೆಯೇ ಅಭೇದ್ಯತೆಯನ್ನು ಕಲ್ಪಿಸಿದೆ. ಹಾಗಾಗಿ ಪ್ರಸ್ತುತ ಮಹಾಪ್ರಬಂಧದಲ್ಲಿ ನೈಸರ್ಗಿಕ ನಿರ್ಮಿತಿಗಳನ್ನೂ ಸಹ ವಾಸ್ತು ಪರಿಧಿಯಲ್ಲಿ ಸೇರಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಶಿಲ್ಪ ಎಂದರೆ ಕೆತ್ತನೆ, ಆಕೃತಿ ಎಂಬ ಅರ್ಥವಿದೆ. ಅಂದರೆ ದೇವಾಲಯ, ಕೋಟೆ ಕೊತ್ತಲ, ಕೆರೆ ಕಟ್ಟೆ, ಬಾವಿ, ನಗರ ಯೋಜನೆ, ನೀರಾವರಿ ಸಂಬಂಧಿ ಕಾಲುವೆ ಮೊದಲಾದ ನಿರ್ಮಿತಿಗಳು ಇದರ ವ್ಯಾಪ್ತಿಯಲ್ಲಿ ಬರುತ್ತವೆ. ಕೋಟೆ-ಕೊತ್ತಲ ಇದರ ಪರಿಧಿಯಲ್ಲಿ ಬರುತ್ತದೆಯಾದರೂ ಶಿಲ್ಪಶಾಸ್ತ್ರ ಗ್ರಂಥಗಳು ಸೂಚಿಸುವಂತೆ ಎಲ್ಲೂ ನಿರ್ಮಾಣಗೊಂಡಿಲ್ಲ. ಪ್ರತಿ ಕೋಟೆಯೂ ಸ್ಥಳೀಯ ಪರಿಸರಕ್ಕೆ ಅನುಗುಣವಾಗಿ ನಿರ್ಮಾಣಗೊಂಡಿದೆ. ಹಾಗಾಗಿ ರಕ್ಷಣಾ ವಾಸ್ತು ಎಂದರೆ ಪ್ರಜೆಗಳು

ಇಲ್ಲವೇ ರಾಜನು ತನ್ನ ಸಮುದಾಯ ಮತ್ತು ಸಂಪತ್ತನ್ನು ಕಾಡು ಪ್ರಾಣಿ ಇಲ್ಲವೇ ಶತ್ರುಗಳಿಂದ ರಕ್ಷಿಸಿಕೊಳ್ಳಲು ಗ್ರಾಮ, ಪಟ್ಟಣ, ರಾಜಧಾನಿಯ ಸುತ್ತಲೂ ಸೈನಿಕರು ಅಥವಾ ಕಾಪುಗೋಡೆಯಿಂದ ಸುತ್ತುವರೆದ ನಿರ್ಮಿತಿಯಾಗಿದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ರಕ್ಷಣೆ, ವಾಸ್ತು, ಶಿಲ್ಪ ಎಂಬ ಮೂರೂ ಪದಗಳನ್ನು ಈ ಅರ್ಥದಲ್ಲಿ ವಿಶ್ಲೇಷಿಸಲಾಗಿದೆ.

ಅಧ್ಯಯನದ ಉದ್ದೇಶ

ಸಾಮಾನ್ಯವಾಗಿ ಯಾವುದೇ ಒಂದು ಅಧ್ಯಯನ ನಿರ್ದಿಷ್ಟ ಗುರಿಯನ್ನು ಹೊಂದಿದ್ದರೆ ಮಾತ್ರ ಅದು ಯಶಸ್ವಿಯುತ ಅಧ್ಯಯನವಾಗಲು ಸಾಧ್ಯವಾಗುತ್ತದೆ. ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಕೋಟೆ–ಕೊತ್ತಲ, ಬುರುಜು, ಸೈನಿಕ ಶಿಬಿರ, ಪುರಗಳ ಹಿಂದಿನ ಐತಿಹಾಸಿಕತೆ, ಅವುಗಳೊಟ್ಟಿಗಿನ ತಳ ಸಮುದಾಯಗಳ ಜೀವನ ವಿಧಾನವನ್ನು ತಳಸ್ಪರ್ಶಿಯವಾಗಿ ಅಧ್ಯಯನ ಕೈಗೊಂಡು ಅದನ್ನು ಸಮಾಜಮುಖಿಯನ್ನಾಗಿಸುವ ಒಟ್ಟು ಆಶಯದಿಂದ ಈ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ. ಅಂದರೆ ಕೇವಲ ಒಂದು ಜಿಲ್ಲೆಯಲ್ಲಿ ೩೦೦ಕ್ಕೂ ಹೆಚ್ಚು ಕೋಟೆ–ಕೊತ್ತಲಗಳಿವೆ ಎಂದರೆ ಅಂದಿನ ಕಾಲಘಟ್ಟದಲ್ಲಿ ಸಾಮಾನ್ಯನ ಜೀವನ ಶೈಲಿ ಹೇಗಿತ್ತು, ಇಷ್ಟೊಂದು ನಿರ್ಮಿತಿಗಳ ಹಿಂದಿನ ಸಾವು, ನೋವು, ತ್ಯಾಗ, ಬಲಿದಾನ ಮತ್ತು ಅವರ ಕಲಿತನ ಹೇಗಿತ್ತು ಎಂಬ ಅಂಶ ಪ್ರಮುಖವೆನಿಸಿಕೊಳ್ಳುತ್ತದೆ. ಹಾಗಾಗಿ ಇವೆಲ್ಲವುಗಳನ್ನು ಒಟ್ಟಾಗಿ ಗಮನಿಸಿದಾಗ ಯಾವ ಯಾವ ಕಾಲಘಟ್ಟಗಳಲ್ಲಿ ರಾಜಕೀಯ ಅಭದ್ರತೆ ಹೇಗಿತ್ತು ಅದರಿಂದ ಪಾರಾಗಲು ನಿರ್ಮಾಣಗೊಂಡ ಕೋಟೆ–ಕೊತ್ತಲಗಳೆಷ್ಟು ಎಂಬ ಅಂಶ ಸ್ಪಷ್ಟವಾಗುತ್ತದೆ. ಇಂತಹ ಔಚಿತ್ಯ ಪೂರ್ಣ ಸಂಗತಿಗಳನ್ನು ಬೆಳಕಿಗೆ ತಂದು ಇಂದಿನ ಯುವ ಪೀಳಿಗೆಯಲ್ಲಿ ನಮ್ಮ ನಾಡು ನುಡಿ, ಸಂಸ್ಕೃತಿ ರಕ್ಷಣೆಯಲ್ಲಿ ಕೋಟೆ–ಕೊತ್ತಲಗಳ ಪಾತ್ರ ಹೇಗಿತ್ತು ಎಂಬುದರ ಕುರಿತು ಅರಿವು ಮೂಡಿಸಲು ಇಂತಹ ಅಧ್ಯಯನಗಳು ಸಹಕಾರಿಯಾಗುತ್ತವೆ. ಪ್ರಕೃತಿ ವಿಕೋಪ ಹಾಗೂ ಮನುಷ್ಯನ ಸ್ವಾರ್ಥಕ್ಕೆ ಸಿಲುಕಿ ಸಂಪೂರ್ಣವಾಗಿ ಅವಸಾನಗೊಳ್ಳುವ ಮುನ್ನ ಅವುಗಳನ್ನು ಒಂದೆಡೆ ದಾಖಲಿಸುವ ಉದ್ದೇಶ ಈ ಮಹಾಪ್ರಬಂಧದ್ದಾಗಿದೆ. ಈ ಅಧ್ಯಯನವು ಮುಂದಿನ ಸಂಶೋಧನಾಕಾರರಿಗೆ ಪೂರಕವಾಗಲೆಂದು ಜಿಲ್ಲೆಯ ಪ್ರಾಗಿತಿಹಾಸ, ಐತಿಹಾಸಿಕತೆ, ಐತಿಹ್ಯ, ಶಾಸನ, ಜನಾಂಗೀಯ ಅಂಶ, ಧಾರ್ಮಿಕತೆ, ನಂಬಿಕೆ ಮತ್ತು ಆಚರಣೆ ಮೊದಲಾದ ಮಾಹಿತಿಗಳ ಆಗರ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳ ಮೂಲಕ ಪಡೆಯಲು ಸಾಧ್ಯವಿದೆ ಎಂಬುದು ನನ್ನ ಅಭಿಪ್ರಾಯ.

ನಿರಂತರ ರಾಜಕೀಯ ಸಂಘರ್ಷಗಳಿಂದ ಕೂಡಿದ ತುಮಕೂರು ಜಿಲ್ಲೆಯಲ್ಲಿ ಸಮುದಾಯ ಇಲ್ಲವೇ ರಾಜ ರಕ್ಷಣೆ ಪಡೆಯಲು ಗ್ರಾಮ, ಪಟ್ಟಣ, ರಾಜಧಾನಿ, ರಕ್ಷಣಾ ಕೇಂದ್ರಗಳ ಸುತ್ತಲೂ ಕೋಟೆ ಕೊತ್ತಲಗಳು ನಿರ್ಮಾಣಗೊಂಡರೂ, ಅದರ ಹಿಂದೆ ನಮ್ಮ ನಾಡು ನುಡಿ ಸಂಸ್ಕೃತಿಗಳನ್ನು ಉಳಿಸಿ ಬೆಳೆಸಿದಂತಹ ಮಹತ್ವದ ಇತಿಹಾಸ ಅಡಗಿದೆ. ರಾಜಪ್ರಭುತ್ವ ಅಂತ್ಯವಾಗಿ ಪ್ರಜಾತಂತ್ರ ಸರ್ಕಾರ ರೂಪುಗೊಂಡ ಮೇಲೆ ಇವು ಪ್ರಕೃತಿ ವಿಕೋಪ ಹಾಗೂ ಮನುಷ್ಯನ ಸ್ವಾರ್ಥಕ್ಕೆ ಸಿಲುಕಿ ಕಣ್ಮರೆಯಾಗುತ್ತಿವೆ. ಹಾಗಾಗಿ ಜಿಲ್ಲೆಯ ಇಂತಹ ೧೭೦ಕ್ಕೂ ಹೆಚ್ಚು ಕೋಟೆ ಕೊತ್ತಲ ಹಾಗೂ ೧೧೦ಕ್ಕೂ ಹೆಚ್ಚು ಸೈನಿಕ ಕೇಂದ್ರಗಳ ಇತಿಹಾಸವನ್ನು ವಿವಿಧ ಮಗ್ಗಲುಗಳಿಂದ ಅಧ್ಯಯನ ಮಾಡಿ ಅವು ಸಂಪೂರ್ಣವಾಗಿ ನಾಶವಾಗುವ ಮುನ್ನ ಒಂದೆಡೆ ದಾಖಲಿಸಿ

ಮುಂದಿನ ಪೀಳಿಗೆಗೆ ಮಾದರಿಯಾಗಿಸುವ ಪ್ರಯತ್ನವನ್ನು ಪ್ರಸ್ತುತ ಅಧ್ಯಯನದ ಮೂಲಕ ಮಾಡಲಾಗಿದೆ. ತುಮಕೂರು ಜಿಲ್ಲೆಯ ಕೋಟೆ-ಕೊತ್ತಲ, ಬುರುಜು, ಸೈನಿಕ ಶಿಬಿರ, ಪುರಗಳನ್ನು ಅಧ್ಯಯನದ ಅನುಕೂಲಕ್ಕಾಗಿ ರಾಜಧಾನಿ ಕೇಂದ್ರಿತ ಕೋಟೆಗಳು, ರಕ್ಷಣಾ ಕೇಂದ್ರಿತ ಕೋಟೆಗಳು, ಗ್ರಾಮ ಮಟ್ಟದ ಕೋಟೆಗಳು, ಬುರುಜುಗಳು ಎಂಬುದಾಗಿ ನಾಲ್ಕು ಪ್ರಕಾರಗಳಲ್ಲಿ ವಿಂಗಡಿಸಿಕೊಂಡು ಅವುಗಳೊಂದಿಗೆ ಜನ ಸಮುದಾಯ ಹೊಂದಿದ್ದ ನಿಕಟಪೂರ್ವ ಸಂಬಂಧವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಏಕೆಂದರೆ ಕೋಟೆ ಕೊತ್ತಲಗಳ ನಿರ್ಮಾಣ ಕೇವಲ ರಾಜನೊಬ್ಬನಿಂದಲೇ ಪೂರ್ಣಗೊಳ್ಳುವುದಿಲ್ಲ. ಅವುಗಳಿಗೆ ಸಾಮಾನ್ಯ ಜನರ ಸಹಕಾರ ಅಗತ್ಯವಿರುತ್ತದೆ. ಆದುದರಿಂದ ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಕಾರಣೀಭೂತರಾದ ಸಾಮಾನ್ಯ ಜನರ ಜೀವನ ವಿಧಾನ ಕೋಟೆ ಕಾಳಗ, ಯುದ್ಧ ಮತ್ತು ಮುತ್ತಿಗೆಯಂತಹ ಸಂದರ್ಭದಲ್ಲಿ ಹೇಗಿರುತ್ತಿತ್ತು? ಯಾವ ರೀತಿಯ ರಕ್ಷಣಾ ಕ್ರಮಗಳನ್ನು ಕೈಗೊಳ್ಳುತ್ತಿದ್ದರು ಇತ್ಯಾದಿ ಸಂಗತಿಗಳು ಮುಖ್ಯವಾಗುತ್ತವೆ. ಹಾಗಾಗಿ ಜಿಲ್ಲೆಯ ಕೋಟೆ-ಕೊತ್ತಲ, ಸೈನಿಕ ಶಿಬಿರ, ಪುರಗಳನ್ನು ಜನಸಾಮಾನ್ಯರೊಂದಿಗೆ ಮುಖಾಮುಖಿಯಾಗಿಸಿ ಅವರ ತ್ಯಾಗ, ಬಲಿದಾನಗಳನ್ನು ತಿಳಿಯಪಡಿಸುವ ಉದ್ದೇಶ ಪ್ರಸ್ತುತ ಅಧ್ಯಯನದ್ದು.

ಅಧ್ಯಯನದ ವ್ಯಾಪ್ತಿ

ಯಾವುದೇ ಒಂದು ಅಧ್ಯಯನ ಇಲ್ಲವೇ ಸಂಶೋಧನೆ ಯಶಸ್ವಿ ಆಗಬೇಕೆಂದರೆ ಅದಕ್ಕೊಂದು ನಿರ್ದಿಷ್ಟ ಚೌಕಟ್ಟು ಇಲ್ಲವೆ ವ್ಯಾಪ್ತಿ ಇರಬೇಕಾಗುತ್ತದೆ. ಏಕೆಂದರೆ ನಿರ್ದಿಷ್ಟ ವ್ಯಾಪ್ತಿ ಇಲ್ಲದ ಅಧ್ಯಯನವು ಗೊಂದಲಮಯವಾಗಿ ಸಂಶೋಧನಾ ಮಿತಿಯನ್ನು ತೀವ್ರಗೊಳಿಸಿ ಅದರ ಹಾದಿಯನ್ನು ತಪ್ಪಿಸುತ್ತದೆ. ಪ್ರಸ್ತುತ ಅಧ್ಯಯನವು ತುಮಕೂರು ಜಿಲ್ಲೆಯ ಹತ್ತು ತಾಲೂಕುಗಳಿಗೆ ಸೀಮಿತಗೊಂಡರೂ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆ, ಕರ್ನಾಟಕದ ಹಾಸನ, ಮಂಡ್ಯ, ರಾಮನಗರ, ಚಿಕ್ಕಬಳ್ಳಾಪುರ, ತಮಿಳುನಾಡಿನ ಧರ್ಮವರಂ ಜಿಲ್ಲೆಗಳ ಶಾಸನ ಮತ್ತು ಕೋಟೆ-ಕೊತ್ತಲಗಳನ್ನು ಆಂಶಿಕವಾಗಿ ಆಯಾಯ ವಿಷಯದ ಸಂದರ್ಭಗಳಲ್ಲಿ ಬಳಸಿಕೊಳ್ಳಲಾಗಿದೆ. ತುಮಕೂರು ಜಿಲ್ಲೆಯ ೧೦ ತಾಲೂಕುಗಳಲ್ಲಿ ಕಂಡುಬರುವ ಕೋಟೆ ಕೊತ್ತಲ, ಬುರುಜು, ಪುರ ಮತ್ತು ಸೈನಿಕ ಶಿಬಿರಗಳಿರುವ ಸ್ಥಳಗಳನ್ನು ಪೂರ್ಣಪ್ರಮಾಣದಲ್ಲಿ ಅಧ್ಯಯನಕ್ಕೆ ಒಳಪಡಿಸಲಾಗಿದೆ. ಜಿಲ್ಲೆಯ ಎಲ್ಲಾ ಕೋಟೆ-ಕೊತ್ತಲಗಳ ರಚನೆ, ವಾಸ್ತುವಿನ್ಯಾಸ, ತಂತ್ರಗಾರಿಕೆ, ಲಕ್ಷಣ, ಹಾಗೂ ಪುರ ಮತ್ತು ಸೈನಿಕ ಶಿಬಿರಗಳ ಮಹತ್ವವನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪ್ರಸ್ತುತ ಅಧ್ಯಯನವನ್ನು ಶಾತವಾಹನರ ಕಾಲದಿಂದ ಆಧುನಿಕ ಕಾಲಘಟ್ಟದವರೆಗೂ ಕಾಲಮಿತಿಯನ್ನು ನಿಗದಿಪಡಿಸಿಕೊಳ್ಳಲಾಗಿದೆ.

ಅಧ್ಯಯನದ ಸ್ವರೂಪ

ಪ್ರಸ್ತುತ ಮಹಾಪ್ರಬಂಧವನ್ನು ಆರು ಅಧ್ಯಾಯಗಳಾಗಿ ವಿಂಗಡಿಸಲಾಗಿದೆ. ಪ್ರತಿ ಅಧ್ಯಾಯದಲ್ಲೂ ಉಪಶೀರ್ಷಿಕೆಗಳನ್ನು ಮಾಡಿಕೊಂಡು ಸಂಶೋಧನೆ ಕೈಗೊಳ್ಳಲಾಗಿದೆ. ಮೊದಲ ಅಧ್ಯಾಯವು ಅಧ್ಯಯನದ ಉದ್ದೇಶ, ವ್ಯಾಪ್ತಿ, ಸ್ವರೂಪ, ಅಧ್ಯಯನದ ವಿಧಿ ವಿಧಾನ ಮತ್ತು ಇದುವರೆಗೂ

ನಡೆದ ಅಧ್ಯಯನಗಳ ಸಮೀಕ್ಷೆಯನ್ನು ಒಳಗೊಂಡಿದೆ. ಎರಡನೆಯ ಅಧ್ಯಾಯವು ಜಿಲ್ಲೆಯ ಭೌಗೋಳಿಕ ಮತ್ತು ಚಾರಿತ್ರಿಕತೆಯನ್ನು ವಿಷದಪಡಿಸುತ್ತದೆ. ಸುಮಾರು ೩೦೦ಕ್ಕೂ ಹೆಚ್ಚು ಬೆಟ್ಟ-ಗುಡ್ಡಗಳಿಂದ ಕೂಡಿದ ತುಮಕೂರು ಜಿಲ್ಲೆಯು ಪ್ರಾಗಿತಿಹಾಸ ಕಾಲದಿಂದಲೂ ವಾಸಯೋಗ್ಯವಾಗಿತ್ತು ಎಂಬುದು ಹಲವು ಪುರಾತತ್ವಜ್ಞರ ಶೋಧನೆಗಳಿಂದ ದೃಢಪಟ್ಟಿದೆ. ಕ್ರಮೇಣ ಈ ಭೌಗೋಳಿಕ ಸಂರಚನೆಯೇ ಹಲವು ಆಡಳಿತ ವಿಭಾಗ ಮತ್ತು ಸಂಸ್ಥಾನಗಳ ರಚನೆಗೂ ಕಾರಣವಾಗಿದೆ. ಹೀಗೆ ನಿರ್ಮಾಣಗೊಂಡ ಸಂಸ್ಥಾನಗಳ ರಕ್ಷಣೆಗಾಗಿ ೩೦೦ಕ್ಕೂ ಹೆಚ್ಚು ಕೋಟೆ-ಕೊತ್ತಲ, ಪುರ, ಸೈನಿಕ ಶಿಬಿರಗಳ ಚರಿತ್ರೆಯನ್ನು ಶಾತವಾಹನರ ಕಾಲದಿಂದಲೂ ಪ್ರಸ್ತುತ ದಿನಮಾನದವರೆಗೂ ತಂದು ಕಾಲಮಾನದ ಚೌಕಟ್ಟಿನೊಳಗೆ ಚರ್ಚಿಸಲಾಗಿದೆ.

ಮೂರನೆಯ ಅಧ್ಯಾಯವು ರಕ್ಷಣಾ ವಾಸ್ತುಶಿಲ್ಪದ ಹುಟ್ಟು ಮತ್ತು ಬೆಳವಣಿಗೆಯ ಕುರಿತಾಗಿದೆ. ರಕ್ಷಣಾ ವಾಸ್ತುಶಿಲ್ಪದ ಅರ್ಥ ಮತ್ತು ಮಹತ್ವವನ್ನು ವಿಶೇಷವಾಗಿ ಚರ್ಚಿಸಲಾಗಿದೆ. ಮುಖ್ಯವಾಗಿ ಶಾಸ್ತ್ರಗ್ರಂಥಗಳು ಸೂಚಿಸುವ ಕೋಟೆಗಳ ವಾಸ್ತುವಿನ್ಯಾಸವನ್ನು ಜಿಲ್ಲೆಯ ಪ್ರಾಕೃತಿಕ ಸಂರಚನೆ ಮತ್ತು ಕೋಟೆಯ ರಚನೆಯೊಂದಿಗೆ ಮುಖಾಮುಖಿಯಾಗಿಸಿ ಸಾಮ್ಯತೆ ಮತ್ತು ವೈವಿಧ್ಯತೆಯನ್ನು ಚರ್ಚಿಸಲಾಗಿದೆ. ಕೋಟೆಯ ಲಕ್ಷಣಗಳಾದ ಬುರುಜು, ದ್ವಾರ, ಕಂದಕ, ಪ್ರಾಕಾರ, ಫಿರಂಗಿ, ತೆನೆ, ಅಂಬುಕಿಂಡಿ, ಮುಗಿಲಟ್ಟಣೆ ಮೊದಲಾದವುಗಳನ್ನು ಕ್ಷೇತ್ರಕಾರ್ಯದಿಂದ ಲಭ್ಯವಾದ ಆಕರ ಸಾಮಗ್ರಿಗಳನ್ನು ಆಧರಿಸಿ ವಿಶ್ಲೇಷಿಸಲಾಗಿದೆ.

ನಾಲ್ಕನೆಯ ಅಧ್ಯಾಯದಲ್ಲಿ ಜಿಲ್ಲೆಯಲ್ಲಿ ಕಂಡುಬರುವ ಕೋಟೆ ಕೊತ್ತಲ, ಬುರುಜು, ಸೈನಿಕ ಶಿಬಿರ, ಪುರಗಳನ್ನು ರಾಜಧಾನಿ ಕೇಂದ್ರಿತ, ರಕ್ಷಣಾ ಕೇಂದ್ರಿತ, ಗ್ರಾಮ ಕೇಂದ್ರಿತ, ಬುರುಜು ಎಂದು ನಾಲ್ಕು ಪ್ರಕಾರಗಳಲ್ಲಿ ವಿಭಜಿಸಿಕೊಳ್ಳಲಾಗಿದೆ. ಇವುಗಳನ್ನು ಶಾಸನ, ಸಾಹಿತ್ಯ ಕೃತಿ, ಐತಿಹ್ಯ, ಕಥೆ, ಕಾವ್ಯ, ಪುರಾಣ ಮೊದಲಾದ ಆಕರಗಳ ಮೂಲಕ ತಲಸ್ಪರ್ಶಿ ಅಧ್ಯಯನ ಮಾಡಲಾಗಿದೆ. ಈ ಎಲ್ಲಾ ಕೋಟೆ ಕೊತ್ತಲಗಳ ನಿರ್ಮಾಣದ ಹಿಂದಿನ ಉದ್ದೇಶ, ಮಹತ್ವ, ವಾಸ್ತುವಿನ್ಯಾಸ, ಲಕ್ಷಣ ಮೊದಲಾದ ಸಂಗತಿಗಳನ್ನು ಕ್ಷೇತ್ರ ಅಧ್ಯಯನದ ಮೂಲಕ ನಿರೂಪಿಸಲಾಗಿದೆ.

ಐದನೆಯ ಅಧ್ಯಾಯದಲ್ಲಿ ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಕೋಟೆ ಕೊತ್ತಲಗಳ ರಕ್ಷಣಾ ಸಂಬಂಧಿ ಸ್ಮಾರಕಗಳಾದ ಬುರುಜು, ಕಂದಕ, ದ್ವಾರ, ಕಾವಲುಗೋಪುರ, ನೀರಿನ ಆಶ್ರಯ ತಾಣ, ಗರಡಿಮನೆ, ಮದ್ದಿನಮನೆ, ಕಣಜ, ಫಿರಂಗಿ, ಉಬ್ಬುಶಿಲ್ಪ, ಅರಮನೆ, ತುಪ್ಪದ ಕಣಜ, ದೇವಾಲಯ ಮೊದಲಾದವನ್ನು ವಿಶ್ಲೇಷಿಸಲಾಗಿದೆ. ಇವುಗಳ ನಿರ್ಮಾಣದ ಹಿಂದಿನ ಉದ್ದೇಶ, ಬಳಕೆ, ರಚನೆ, ವಾಸ್ತುವಿನ್ಯಾಸ, ಮಹತ್ವ ಹೀಗೆ ವಿವಿಧ ದೃಷ್ಟಿಕೋನಗಳನ್ನು ಪ್ರಸ್ತುತಪಡಿಸಲಾಗಿದೆ.

ಕೊನೆಯ ಅಧ್ಯಾಯವು ಸಮಾರೋಪ. ಅಧ್ಯಯನದ ಒಟ್ಟು ಫಲಿತಗಳನ್ನು ಇಲ್ಲಿ ನೀಡಲಾಗಿದೆ. ಕಾಲಮಾನ ಮತ್ತು ಕ್ಷೇತ್ರವ್ಯಾಪ್ತಿಯ ಇತಿಮಿತಿಯಲ್ಲಿ ಕಟ್ಟಿಕೊಟ್ಟ ಈ ಫಲಿತಗಳು ಮುಂದಿನ ಸಂಶೋಧನೆಗೆ ಪೂರಕವಾಗುವುದನ್ನು ವಿವರಿಸಲಾಗಿದೆ. ಮಹಾಪ್ರಬಂಧಕ್ಕೆ ಪೂರಕವಾದ ಅನುಬಂಧದಲ್ಲಿ ಕೋಟೆಯ ಪದಕೋಶ, ಕೋಟೆಗಳ ಪಟ್ಟಿ, ಸೈನಿಕ ಶಿಬಿರ ಮತ್ತು ಪುರಗಳ ಪಟ್ಟಿ, ನಕಾಶೆ, ಛಾಯಾಚಿತ್ರಗಳನ್ನು ನೀಡಲಾಗಿದೆ.

ಅಧ್ಯಯನದ ವಿಧಾನ

ಯಾವುದೇ ಒಂದು ಅಧ್ಯಯನ ಸುಸೂತ್ರವಾಗಿ ನಡೆಯಬೇಕೆಂದರೆ ಅದಕ್ಕೆ ಅಧ್ಯಯನ ಶಿಸ್ತು ಅಥವಾ ಅಧ್ಯಯನ ಕ್ರಮ ಎಂಬುದು ಅತಿಮುಖ್ಯವಾಗಿರುತ್ತದೆ. ಇಲ್ಲವೆಂದರೆ ಸಂಶೋಧನೆಯ ಹಾದಿ ಸಡಿಲಗೊಂಡು ತನ್ನ ಮಹತ್ವವನ್ನು ಕಳೆದುಕೊಳ್ಳುತ್ತದೆ. ಪ್ರಸ್ತುತ ಮಹಾಪ್ರಬಂಧವು ಸಂಪೂರ್ಣ ಕ್ಷೇತ್ರಕಾರ್ಯ ಆಧಾರಿತವಾಗಿದೆ. ಜಿಲ್ಲೆಯಲ್ಲಿ ಕೋಟೆ–ಕೊತ್ತಲ ಪುರ, ಸೈನಿಕ ಶಿಬಿರಗಳಿಗೆ ಸಂಬಂಧಿಸಿದಂತೆ ದೊರೆಯುವ ಶಾಸನ, ಸಾಹಿತ್ಯ ಕೃತಿ, ಐತಿಹ್ಯ ಕಥೆ, ಕಾವ್ಯ, ಲಾವಣಿ, ಪರಿಚಯಾತ್ಮಕ ಕೃತಿ, ಬಿಡಿಲೇಖನ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಅಂತರ್‌ಶಿಸ್ತೀಯ ಅಧ್ಯಯನ ಮಾಡಲಾಗಿದೆ. ಪ್ರಾರಂಭದಲ್ಲಿ ಜಿಲ್ಲೆಯ ಕುರಿತು ಇದುವರೆಗೂ ಪ್ರಕಟಿತ ಮತ್ತು ಅಪ್ರಕಟಿತ ಕೃತಿ, ಲೇಖನ, ವರದಿ, ಗ್ಯಾಜಿಟಿಯರ್, ಸಂಶೋಧನಾ ಪ್ರಬಂಧ ಮೊದಲಾದವುಗಳಲ್ಲಿ ಉಲ್ಲೇಖವಿರುವ ಕೋಟೆ–ಕೊತ್ತಲಗಳ ಪಟ್ಟಿಯನ್ನು ಸಿದ್ಧಪಡಿಸಿಕೊಳ್ಳಲಾಯಿತು. ನಂತರ ಜಿಲ್ಲೆಯ ಗ್ರಾಮಸೂಚಿಯನ್ನು ಆಧರಿಸಿ ದುರ್ಗ, ಕೋಟೆ, ಪುರ, ಪಾಳ್ಯ, ಗೆರೆ, ಗಿರಿ, ವಾಡೆ, ಗುಡ್ಡ, ಮಡಗು, ಸೀಮೆ ಎಂಬ ಸ್ಥಳನಾಮಗಳನ್ನು ಹೊಂದಿರುವ ಗ್ರಾಮಗಳ ಪಟ್ಟಿಯನ್ನು ಸಿದ್ಧಪಡಿಸಿಕೊಂಡು ಆ ಗ್ರಾಮಗಳಿಗೆ ಕ್ಷೇತ್ರಕಾರ್ಯ ಕೈಗೊಂಡಾಗ ಅಂತಹ ಗ್ರಾಮಗಳಲ್ಲೆಲ್ಲಾ ಕೋಟೆ–ಕೊತ್ತಲ ಇರುವುದು ಕಂಡುಬಂದಿದೆ. ಉದಾಹರಣೆಗೆ ಹಂಪಯ್ಯನದುರ್ಗ, ತಿಪ್ಪಯ್ಯನದುರ್ಗ, ಸಿದ್ಧಾಪುರ, ವೆಂಕಟಾಪುರ, ಕಲ್ಲುಕೋಟೆ, ಸಮುದ್ರನಕೋಟೆ, ಹನುಮಂತಗಿರಿ, ಮಂಗಳವಾಡ, ರಾಜನಬಂಡೆ, ಸ್ವಾರಮ್ಮನಬೆಟ್ಟ ಮೊದಲಾದ ಗ್ರಾಮಗಳಲ್ಲಿ ಈ ವಿಧಾನವನ್ನು ಅನುಸರಿಸಿ ಕ್ಷೇತ್ರಕಾರ್ಯ ಕೈಗೊಳ್ಳಲಾಗಿದೆ. ಜೊತೆಗೆ ಈ ರೀತಿಯ ಸ್ಥಳನಾಮ ಇರುವ ಗ್ರಾಮಗಳ ಬಳಿ ಸ್ಥಳೀಯರಿಂದ ಮಾಹಿತಿ ಪಡೆದು ಆ ಗ್ರಾಮಗಳ ಸುತ್ತಲೂ ಇದ್ದಿರಬಹುದಾಗಿದ್ದ ಕೋಟೆಗಳನ್ನು ಶೋಧಿಸಿ ವಿಶ್ಲೇಷಿಸಲಾಗಿದೆ. ಹೀಗೆ ಜಿಲ್ಲೆಯಾದ್ಯಂತ ಇರುವ ಸಮುದಾಯ ಕೇಂದ್ರಿತ ಮತ್ತು ಪ್ರಭುತ್ವ ಕೇಂದ್ರಿತ ಕೋಟೆಗಳ ಮಾಹಿತಿಯನ್ನು ಸ್ಥಳೀಯರಿಂದಲೇ ಪಡೆದು ಆ ಪ್ರದೇಶಗಳ ಕ್ಷೇತ್ರಕಾರ್ಯ ಮಾಡಿ ಅವುಗಳ ಲಕ್ಷಣ, ಪ್ರಕಾರ, ಉದ್ದೇಶ, ಮಹತ್ವ ಮೊದಲಾದ ಸಂಗತಿಗಳನ್ನು ವಿಶ್ಲೇಷಿಸಲಾಗಿದೆ.

ವಿಶೇಷವಾಗಿ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಸ್ಥಳೀಯರಿಂದ ಮಾಹಿತಿಯನ್ನು ಧ್ವನಿಮುದ್ರಿಕೆ ಮತ್ತು ಬರವಣಿಗೆ ಮೂಲಕ ಸಂಗ್ರಹಿಸಿ, ಪ್ರತಿ ಕೋಟೆಗೆ ಸಂಬಂಧಿಸಿದಂತೆ ಆಯಾಯ ಸ್ಥಳದಲ್ಲೇ ಪ್ರತ್ಯಕ್ಷವಾಗಿ ತಲನಕಾಶೆಯನ್ನು ಬಿಡಿಸಿಕೊಂಡು ಕೋಟೆಯ ಪ್ರಮುಖ ಲಕ್ಷಣಗಳಾದ ಪ್ರಕಾರ, ಕೊತ್ತಲ ಅಂಬುಕಿಂಡಿ, ಫಿರಂಗಿಕಿಂಡಿ, ವೀಕ್ಷಣಾಕಿಂಡಿ, ಕಂದಕ, ತೆನೆ, ಇಳಿವೊರೆ ಮೊದಲಾದವುಗಳ ಅಳತೆ ಹಾಗೂ ಛಾಯಾಚಿತ್ರಗಳನ್ನು ತೆಗೆದು ಅವುಗಳ ಲಕ್ಷಣಗಳನ್ನು ಅಲ್ಲಿಯೇ ಟಿಪ್ಪಣಿ ಮಾಡಿಕೊಂಡು ನಂತರದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಲ್ಲದೆ ಕೋಟೆ ಕೊತ್ತಲಗಳಿಗೆ ಸಂಬಂಧಿಸಿದಂತೆ www.wikimapia.org ಎಂಬ ಅಂತರ್ಜಾಲ ತಾಣದ ಮೂಲಕ ನಕಾಶೆಗಳನ್ನು ಬಿಡಿಸಿ, ಕೋಟೆ ಗೋಡೆ ಮತ್ತು ಕೊತ್ತಲಗಳ ಅಳತೆಯನ್ನು ಮಾಡಿಕೊಳ್ಳಲಾಗಿದೆ. ಹೀಗೆ ಕ್ಷೇತ್ರಕಾರ್ಯದಲ್ಲಿ ಸಂಗ್ರಹಿಸಿದ ಮಾಹಿತಿ ಮತ್ತು ಸಾಹಿತ್ಯ, ಪುರಾತತ್ವ ಆಕರಗಳನ್ನು ಸಂಯೋಜಿಸಿ ವಿಶ್ಲೇಷಣೆಯ ಮೂಲಕ ಮಹಾಪ್ರಬಂಧವನ್ನು ಸಿದ್ಧಪಡಿಸಲಾಗಿದೆ.

ಅಧ್ಯಯನಗಳ ಸಮೀಕ್ಷೆ

ತುಮಕೂರು ಜಿಲ್ಲೆಯ ಕೋಟೆ–ಕೊತ್ತಲಗಳಿಗೆ ಸಂಬಂಧಿಸಿದಂತೆ ಇದುವರೆಗೆ ಹಲವು ಪರಿಚಯಾತ್ಮಕ ಕೃತಿ, ಬಿಡಿಲೇಖನ, ಕೈಪಿಡಿ ಕೃತಿ, ಎಂ.ಫಿಲ್. ಪ್ರಬಂಧ ಮತ್ತು ಪಿಹೆಚ್.ಡಿ. ಮಹಾಪ್ರಬಂಧಗಳು ಹೊರಬಂದಿವೆ. ಪ್ರಮುಖವಾಗಿ ಮುನಿರಾಜ್ ಅವರ **ತುಮಕೂರು ಜಿಲ್ಲೆಯ ಗಿರಿದುರ್ಗಗಳ ಐತಿಹಾಸಿಕ ಅಧ್ಯಯನ** ಎಂಬ ಪಿಹೆಚ್.ಡಿ. ಮಹಾಪ್ರಬಂಧದಲ್ಲಿ ೧೨ ಗಿರಿದುರ್ಗಗಳಾದ ನಿಡುಗಲ್ಲು, ಪಾವಗಡ, ಮಧುಗಿರಿ, ಮಿಡಿಗೇಶಿ, ದೇವರಾಯನದುರ್ಗ, ಹುತ್ತರೀದುರ್ಗ, ಹುಲಿಯೂರುದುರ್ಗ, ಚೆನ್ನರಾಯನದುರ್ಗ, ಭಸ್ಮಾಂಗಿ ಮೊದಲಾದ ಕೋಟೆಗಳನ್ನು ಪುರಾತತ್ವೀಯವಾಗಿ ಅಧ್ಯಯನ ಮಾಡಲಾಗಿದೆ. ಮುದ್ದವೀರಪ್ಪ ಅವರ **ತುಮಕೂರು ಜಿಲ್ಲೆಯ ಕೋಟೆ–ಕೊತ್ತಲಗಳ ಜಾನಪದೀಯ ಅಧ್ಯಯನ** ಎಂಬ ಪಿಹೆಚ್.ಡಿ. ಮಹಾಪ್ರಬಂಧವು ಕೇವಲ ೧೮ ಪ್ರಮುಖವಾದ ಕೋಟೆ–ಕೊತ್ತಲಗಳನ್ನು ಜನಪದೀಯವಾಗಿ ಕಥೆ ಕಾವ್ಯ, ಐತಿಹ್ಯ, ಪುರಾಣಗಳನ್ನು ಆಧರಿಸಿ ಸಮುದಾಯಗಳನ್ನು ಸಮೀಪ ತರುವ ಪ್ರಯತ್ನ ಮಾಡಿದ್ದಾರೆ. ಕಾವಲಮ್ಮ ಅವರ **ಮಧುಗಿರಿ ಮಹಾನಾಡ ಪ್ರಭುಗಳು** ಎಂಬ ಪಿಹೆಚ್.ಡಿ. ಪ್ರಕಟಿತ ಮಹಾಪ್ರಬಂಧದಲ್ಲಿ ಮಹಾನಾಡ ಪ್ರಭುಗಳ ಕಾಲದಲ್ಲಿ ನಿರ್ಮಾಣಗೊಂಡ ಮುಮ್ಮಡಿ ಪಟ್ಟಣ, ಸಿದ್ಧಾಪುರ, ಕೊಡಗದಾಲ, ಮಧುಗಿರಿ, ಚೆನ್ನರಾಯನದುರ್ಗ, ಕೋಟೆಗಳ ಕಿರು ಪರಿಚಯ ನೀಡುತ್ತದೆ. ಚಿತ್ತಯ್ಯ ಪೂಜಾರ್ ಅವರ **ನಿಡುಗಲ್ಲು ಪರಿಸರದ ಸಾಂಸ್ಕೃತಿಕ ಅಧ್ಯಯನ** ಎಂಬ ಪಿಹೆಚ್.ಡಿ. ಮಹಾಪ್ರಬಂಧವು ನಿಡುಗಲ್ಲು ಪ್ರದೇಶದ ಸಾಂಸ್ಕೃತಿಕ ಚರಿತ್ರೆಯನ್ನು ತಿಳಿಯಲು ನೆರವಾಗುತ್ತದೆ. ಈಗಾಗಲೇ ನನ್ನ ಅಧ್ಯಯನದಲ್ಲಿ ಬಂದಿರುವ **ನಿಡುಗಲ್ಲು ಪರಿಸರದ ರಕ್ಷಣಾ ವಾಸ್ತುಶಿಲ್ಪ** ಎಂಬ ಎಂ.ಫಿಲ್. ನಿಬಂಧದಲ್ಲಿ ನಿಡುಗಲ್ಲು, ದೇವರಬೆಟ್ಟ, ಕನ್ನಮೇಡಿ, ಬಂಗಾರನಾಯಕದುರ್ಗ, ವೈ.ಎನ್.ಹೊಸಕೋಟೆ ಎಂಬ ಐದು ಕೋಟೆಗಳನ್ನು ಪುರಾತತ್ವೀಯವಾಗಿ ಅಧ್ಯಯನ ಮಾಡಲಾಗಿದೆ. ಅದೇ ರೀತಿ ಕರ್ನಾಟಕದ ವಿವಿಧ ವಿಶ್ವವಿದ್ಯಾನಿಲಯಗಳಲ್ಲಿ ಅಧ್ಯಯನಗಳಾಗಿರುವ ರಕ್ಷಣಾ ವಾಸ್ತುಶಿಲ್ಪ ಕುರಿತ ಉತ್ತರ ಕರ್ನಾಟಕದ ಕೋಟೆಗಳು, ರಾಯಚೂರು ಕೋಟೆಗಳು, ಕೆಳದಿ ಅರಸರ ಕಾಲದ ಕೋಟೆಗಳು ಹಾಗೂ ಕನ್ನಡ ವಿಶ್ವವಿದ್ಯಾಲಯದಲ್ಲಿನ ಬೆಳಗಾವಿ, ಚಿತ್ರದುರ್ಗ, **ಬಳ್ಳಾರಿ ಜಿಲ್ಲೆಗಳ ರಕ್ಷಣಾ ವಾಸ್ತುಶಿಲ್ಪ** ಎಂಬ ಮಹಾಪ್ರಬಂಧಗಳನ್ನು ಪರಾಮರ್ಶಿಸಲಾಗಿದೆ. ತುಮಕೂರು ಜಿಲ್ಲೆಯ ಸಾಂಸ್ಕೃತಿಕ ಇತಿಹಾಸವನ್ನು ತಿಳಿಯಪಡಿಸುವ ಮಂಜುನಾಥ ಡಿ. ಅವರ **ಸಿರಾದ ನವಾಬರು** ರಾಘವೇಂದ್ರ ಅವರ **ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ** ಮಹೇಶ್ ಕುಮಾರ್ ಡಿ. ಎಚ್. ಅವರ **ಚೆನ್ನರಾಯನದುರ್ಗ ಪರಿಸರದ ಇತಿಹಾಸ ಮತ್ತು ಪುರಾತತ್ವ** ದಾಸಪ್ಪ ಎನ್. ಅವರ **ಕೋರಾ ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ** ನಾಗೇಂದ್ರ ಬಿ.ಸಿ. ಅವರ **ತುಮಕೂರು ಪಟ್ಟಣದ ಸಾಂಸ್ಕೃತಿಕ ಅಧ್ಯಯನ** ರೇವಣಸಿದ್ದಪ್ಪ ಅವರ ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ, ಶ್ರೀನಿವಾಸ ಎ.ಜಿ. **ನಿಟ್ಟೂರು ಪರಿಸರದ ಸಾಂಸ್ಕೃತಿಕ ಅಧ್ಯಯನ** ಎಂಬ ಎಂ.ಫಿಲ್. ನಿಬಂಧಗಳನ್ನು ನನ್ನ ಅಧ್ಯಯನಕ್ಕೆ ಪೂರಕವಾಗಿ ಮಾಹಿತಿಗಳನ್ನು ಬಳಸಿಕೊಳ್ಳಲಾಗಿದೆ.

ನಿ.ಕೃ.ರಾಮಶೇಷನ್ ಅವರ **ಮಧುಗಿರಿ** ಎಂಬ ಐಬಿಹೆಚ್ ಪ್ರಕಾಶನದ ಮಾಲಿಕೆಯ ಕೃತಿಯು ಮಧುಗಿರಿ, ಮಿಡಿಗೇಶಿ, ಚೆನ್ನರಾಯನದುರ್ಗ, ಬೇಡತ್ತೂರು ಕೋಟೆಗಳ ಕಿರು ಪರಿಚಯವನ್ನು ನೀಡುತ್ತದೆ. ನಂಜಂಡಸ್ವಾಮಿ ಅವರ **ಕಲ್ಪಸಿರಿ** ಎಂಬ ಸಂಪಾದನ ಕೃತಿಯು ಜಿಲ್ಲೆಯ ಭೌಗೋಳಿಕ ಮತ್ತು ಸಾಂಸ್ಕೃತಿಕ ಚರಿತ್ರೆಯ ಪಕ್ಷಿನೋಟವನ್ನು ನೀಡುತ್ತದೆ. ಭಾಸ್ಕರಪ್ಪ ಅವರ **ತುಮಕೂರು ಜಿಲ್ಲಾ ದರ್ಶನ** ಎಂಬ ಸಂಪಾದನಾ ಕೃತಿ ಜಿಲ್ಲೆಯ ಪ್ರಾಗಿತಿಹಾಸ ನೆಲೆಗಳು ಮತ್ತು ಪಾಳೆಯಪಟ್ಟುಗಳ ಪ್ರಾಥಮಿಕ ಮಾಹಿತಿ ನೀಡುತ್ತದೆ. ಕವಿತಾಕೃಷ್ಣ ಅವರ **ಜಯಮಂಗಲಿ** ಎಂಬ ಕೃತಿಯು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಅರಸು ಮನೆತನ ಮತ್ತು ಅವರ ಕಾಲದ ಪ್ರಮುಖವಾದ ೧೭೮ ಕೋಟೆಗಳ ಮಾಹಿತಿಯನ್ನು ನೀಡುತ್ತದೆ. ಕೆ.ಬಿ.ಶಿವತಾರಕ್ ಅವರ **ಕರ್ನಾಟಕದ ಪುರಾತತ್ವ ನೆಲೆಗಳು** ಎಂಬ ಕೃತಿಯು ಜಿಲ್ಲೆಯ ಪುರಾತತ್ವ ನೆಲೆಗಳ ಪ್ರಾಥಮಿಕ ಮಾಹಿತಿಯನ್ನು ನೀಡುತ್ತದೆ. ನಾಗರಾಜ ರಾವ್ ಅವರ **ಚಿಕ್ಕನಾಯಕನಹಳ್ಳಿ ತಾಲೂಕು ಸಾಂಸ್ಕೃತಿಕ ಅಧ್ಯಯನ** ಎಂಬ ಕೃತಿಯು ಚಿಕ್ಕನಾಯಕನಹಳ್ಳಿ ತಾಲೂಕಿನಲ್ಲಿ ಆಳ್ವಿಕೆ ನಡೆಸಿದ ಹಾಗಲವಾಡಿ ಪಾಳೆಯಗಾರರ ಕುರಿತು ಮತ್ತು ಪ್ರಾಗಿತಿಹಾಸ ನೆಲೆಗಳ ಪಕ್ಷಿನೋಟವನ್ನು ಹೊಂದಿದೆ. ಡಿ.ಎನ್. ಯೋಗೀಶ್ವರಪ್ಪ ಅವರ **ಹಾಗಲವಾಡಿ ಪಾಳೆಯಗಾರರು** ಎಂಬ ಕೃತಿಯು **ಹಾಗಲವಾಡಿ ಮನೆತನದ ಕಾಲದ ಸಾಂಸ್ಕೃತಿಕ ಕೊಡುಗೆಗಳ** ಕುರಿತು ಚರ್ಚೆ ಮಾಡಿದೆ. ಎಂ.ಎಂ. ಕಲ್ಬುರ್ಗಿ ಅವರ ಮಹಾನಾಡ ಪ್ರಭುಗಳು ಎಂಬ ಸಂಪಾದನಾ ಕೃತಿಯು **ಮಧುಗಿರಿ ಮಹಾನಾಡ ಪ್ರಭುಗಳ ರಾಜಕೀಯ ಚರಿತ್ರೆ**, ಅವರ ಕಾಲದ ಪ್ರಮುಖ ರಾಜಧಾನಿಗಳು, ಮಹಾರಾಣಿಯರು, ದೇವಾಲಯಗಳು, ರಾಜಕೀಯ ಸಂಘರ್ಷಗಳ ಸಮಗ್ರ ಮಾಹಿತಿಯನ್ನು ನೀಡುತ್ತದೆ. ಚೆಲುವರಾಜನ್ ಅವರ **ಪಾವಗಡ ತಾಲೂಕು ದರ್ಶನ** ಎಂಬ ಕೃತಿಯು ಪಾವಗಡ ಮತ್ತು ನಿಡುಗಲ್ಲು ಪಾಳೆಯಗಾರರ ಪರಿಚಯವನ್ನು ಮಾಡಿಕೊಟ್ಟಿದೆ. ಡಿ.ಎನ್. ಯೋಗೀಶ್ವರಪ್ಪ ಅವರು **ಸಿರಾ ಮತ್ತು ಮಧುಗಿರಿ ಕೋಟೆಗೆ** ಸಂಬಂಧಿಸಿದಂತೆ ಬಿಡಿಲೇಖನವನ್ನು ಇತಿಹಾಸ ದರ್ಶನ ಸಂಪುಟಗಳಲ್ಲಿ ಮಂಡಿಸಿದ್ದಾರೆ.

ಇಷ್ಟೆಲ್ಲಾ ಸಂಶೋಧನಾ ಪ್ರಬಂಧ ಮತ್ತು ಕೃತಿಗಳ ಜೊತೆಗೆ ಜಿಲ್ಲೆಗೆ ಸಂಬಂಧಿಸಿದ ಪ್ರಕಟಿತ ಮತ್ತು ಅಪ್ರಕಟಿತ ವರದಿ, ಕೈಪಿಡಿ, ನಿಯತಕಾಲಿಕೆ, ಶಾಸನ ಸಂಪುಟ, ಸಾಹಿತ್ಯ, ಭಾರತೀಯ ಸರ್ವೇಕ್ಷಣ ಇಲಾಖೆಯಿಂದ ಪ್ರಕಟಣೆಗೊಂಡ ನಕಾಶೆ, ಸಂಚಿಕೆ, ಸ್ಥಳಿಯ ಲೇಖಕರಿಂದ ಪ್ರಕಟಗೊಂಡ ತಾಲೂಕು ದರ್ಶನ, ಪರಿಚಯಾತ್ಮಕ ಕೃತಿ, ಬಿಡಿ ಲೇಖನ, ಸರ್ಕಾರದಿಂದ ಪ್ರಕಟಗೊಂಡ ಗೆಜೆಟೀಯರ್, ಮಾಲಿಕೆಗಳು ಹಾಗೂ ಸ್ಥಳೀಯವಾಗಿ ದೊರೆಯುವ ಐತಿಹ್ಯ, ಕಥೆ, ಕಾವ್ಯ, ಪುರಾಣ, ಸ್ಥಳಪುರಾಣ ಮೊದಲಾದ ಎಲ್ಲಾ ಆಕರಗಳು ಜಿಲ್ಲೆಯ ಸಾಂಸ್ಕೃತಿಕ ಚರಿತ್ರೆಯನ್ನು ಕಟ್ಟಿಕೊಡುತ್ತವೆ. ಆದರೂ ತುಮಕೂರು ಜಿಲ್ಲೆಯಲ್ಲಿ ೩೦೦ಕ್ಕೂ ಹೆಚ್ಚು ಗಿರಿದುರ್ಗ ಮತ್ತು ಸ್ಥಳದುರ್ಗ, ಸೈನಿಕ ಶಿಬಿರಗಳ ಕುರಿತು ಸಮಗ್ರವಾಗಿ ಇದುವರೆಗೂ ಅಧ್ಯಯನಗಳಾಗಿರದ ಕಾರಣ ಪ್ರಸ್ತುತ ಮಹಾಪ್ರಬಂಧದಲ್ಲಿ ಕೋಟೆ, ಕೊತ್ತಲ, ಪುರ, ಬುರುಜು, ಸೈನಿಕ ಶಿಬಿರಗಳ ಹಿಂದಿನ ಸಾಮಾಜಿಕ, ರಾಜಕೀಯ, ಧಾರ್ಮಿಕ, ಸಾಂಸ್ಕೃತಿಕ ಸಂಗತಿಗಳನ್ನು ತಲಸ್ಪರ್ಶಿಯವಾಗಿ ಅಧ್ಯಯನ ಮಾಡಲಾಗಿದೆ. ಏಕೆಂದರೆ ಕೇವಲ ಗಿರಿದುರ್ಗಗಳಿಗೆ ಮಾತ್ರ ಅಧ್ಯಯನ ಸೀಮಿತಗೊಂಡರೆ ಸ್ಥಳದುರ್ಗಗಳ ಪಾತ್ರ ಇರಲಿಲ್ಲವೇ ಎಂಬ ಸಂದೇಹ ಏರ್ಪಡುತ್ತದೆ. ಜಿಲ್ಲೆಯಲ್ಲಿ ಗಿರಿದುರ್ಗಗಳಿಗಿಂತ

ಸ್ಥಳದುರ್ಗಗಳೇ ಸಾಂಸ್ಕೃತಿಕವಾಗಿ ಶ್ರೀಮಂತಿಕೆ ಹೊಂದಿದ್ದವು ಎಂಬ ಸಂಗತಿ ಶಾಸನ, ಸ್ಥಳಪುರಾಣ, ಐತಿಹ್ಯ, ಸಾಹಿತ್ಯಗಳಿಂದ ತಿಳಿಯುತ್ತದೆ. ಅಲ್ಲದೇ ಗಂಗ, ರಾಷ್ಟ್ರಕೂಟ, ಹೊಯ್ಸಳ, ವಿಜಯನಗರದಂತಹ ಅರಸು ಮನೆತನಗಳು ಕೈದಾಳ, ಕುಣಿಗಲ್, ಹುಳಿಯಾರು, ಚಿಕ್ಕನಾಯಕನಹಳ್ಳಿ ಮೊದಲಾದ ಸ್ಥಳದುರ್ಗಗಳಲ್ಲಿ ತಮ್ಮ ಯುವರಾಜರನ್ನು ನೇಮಕ ಮಾಡಿ ಅವರಿಗೆ ತರಬೇತಿ ನೀಡುತ್ತಿದ್ದರು ಎಂದರೆ ಜಿಲ್ಲೆಯ ಸ್ಥಳದುರ್ಗಗಳ ಐತಿಹಾಸಿಕತೆ ಗೋಚರವಾಗುತ್ತದೆ. ಆದುದರಿಂದ ಪ್ರಸ್ತುತ ಮಹಾಪ್ರಬಂಧದಲ್ಲಿ ಸ್ಥಳದುರ್ಗ ಮತ್ತು ಗಿರಿದುರ್ಗ ಎಂಬ ಎರಡು ಮಾದರಿಯ ಕೋಟೆ-ಕೊತ್ತಲಗಳನ್ನು ಹಾಗೂ ಸೈನಿಕ ಶಿಬಿರಗಳ ಐತಿಹಾಸಿಕ ಮಹತ್ವವನ್ನು ಸಮಗ್ರವಾಗಿ ಅಧ್ಯಯನ ಮಾಡಲಾಗಿದೆ.

ಅಧ್ಯಾಯ ೨

ಭೌಗೋಳಿಕ ಮತ್ತು ಚಾರಿತ್ರಿಕ ಹಿನ್ನೆಲೆ

೨.೧. ಭೌಗೋಳಿಕತೆ

ಇತಿಹಾಸ ಭೂತಕಾಲದ ಕಥೆಯಾದರೆ ಬದಲಾವಣೆಯ ನಿರೂಪಣೆಯೇ ಅದರ ಸಾರವಾಗುತ್ತದೆ.[೧] ಮಾನವನ ಜೀವನ ಶೈಲಿ, ಅವನ ಚಿಂತನೆ, ನಂಬಿಕೆ, ಆಚರಣೆ, ಭಾಷೆ, ಸಂಪ್ರದಾಯಗಳ ವಿಕಾಸವು ಅಲ್ಲಿನ ಪರಿಸರದಿಂದ ಪ್ರಭಾವಿತಗೊಂಡಿರುತ್ತದೆ. ಜಗತ್ತಿನ ಎಲ್ಲಾ ಸಂಸ್ಕೃತಿ, ನಾಗರಿಕತೆಗಳು ಹಳ್ಳ-ಕೊಳ್ಳ, ನದಿ ಸಂಚಯಗಳಲ್ಲೇ ಏಳಿಗೆ ಹೊಂದಿರುವುದು. ಏಕೆಂದರೆ ಮನುಷ್ಯನ ಅತ್ಯವಸರಗಳಲ್ಲಿ ನೀರು ಸಹ ಒಂದಾಗಿದ್ದು ಅಲ್ಲಿನ ಪರಿಸರಕ್ಕೆ ತಕ್ಕಂತೆ ಆ ಸಂಸ್ಕೃತಿಯು ರೂಪುಗೊಂಡಿರುತ್ತದೆ. ಯಾವುದೇ ಒಂದು ರಾಷ್ಟ್ರ ಅಥವಾ ಪ್ರದೇಶವನ್ನು ಐತಿಹಾಸಿಕವಾಗಿ ಅಧ್ಯಯನ ಮಾಡಬೇಕಾದರೆ ಅಲ್ಲಿನ ಭೌಗೋಳಿಕ ಪರಿಸರವನ್ನು ಅರ್ಥೈಸಿಕೊಂಡಾಗ ಮಾತ್ರ ನೈಜ ಸಂಗತಿಗಳು ಬೆಳಕಿಗೆ ತರಲು ಸಾಧ್ಯವಾಗುತ್ತದೆ. ಇಲ್ಲವೆಂದರೆ ಅಪರಿಪೂರ್ಣವಾದ ಚಿತ್ರಣವನ್ನು ಕಟ್ಟಿಕೊಟ್ಟಂತಾಗುತ್ತದೆ. ಹಾಗಾಗಿ ಜಗತ್ತಿನ ಐತಿಹಾಸಿಕತೆಯ ವಿಕಾಸವನ್ನು ತಿಳಿಯಲು ಸ್ವಾರಸ್ಯಕರವಾದ ಪ್ರಾಕೃತಿಕ ವೈವಿಧ್ಯತೆಗಳನ್ನು ತಿಳಿಯುವುದು ಅವಶ್ಯಕವಾಗಿರುತ್ತದೆ. ಈ ಹಿನ್ನೆಲೆಯಲ್ಲಿ ತುಮಕೂರು ಜಿಲ್ಲೆಯನ್ನು ಪ್ರಾಗಿತಿಹಾಸ ಕಾಲದಿಂದ ಬ್ರಿಟಿಷರವರೆಗಿನ ಚಾರಿತ್ರಿಕ ಘಟನಾವಳಿಗಳ ಏರುಪೇರಿಗೆ ಕಾರಣೀಭೂತವಾದ ಭೌಗೋಳಿಕ ಅಂಶಗಳನ್ನು ಐತಿಹಾಸಿಕವಾಗಿ ಅಧ್ಯಯನಕ್ಕೆ ಒಳಪಡಿಸಲಾಗಿದೆ.

೨.೧.೧. ಬೆಟ್ಟಗಳು

ಗಂಗರ ಕಾಲದಲ್ಲಿ ಸುಜನ ಜನಪದ ಎಂದು ಉಲ್ಲೇಖಿತಗೊಂಡಿರುವ[೨] ತುಮಕೂರು ಜಿಲ್ಲೆಯಲ್ಲಿ ಅತಿ ಹೆಚ್ಚು ಬೆಟ್ಟ-ಗುಡ್ಡಗಳು ಕಂಡುಬರುತ್ತವೆ. ರಾಮನಗರ ಜಿಲ್ಲೆಯಿಂದ ರಾಯಚೂರಿನವರೆಗೆ ಹಬ್ಬಿಕೊಂಡಿರುವ ಈ ಕಣಶಿಲೆಯ ಬೆಟ್ಟಸಾಲುಗಳು ಜಿಲ್ಲೆಯ ಪೂರ್ವಾರ್ಧದ ಮೂಲಕ ಉತ್ತರ ದಕ್ಷಿಣಾಭಿಮುಖವಾಗಿ ಹಾದು ಹೋಗಿವೆ. ಈ ಬೆಟ್ಟಗಳ

ಸಾಲು ಸುಮಾರು ೨೫೦ ಕೋಟಿ ವರ್ಷಗಳ ಹಿಂದೆ ರೂಪಗೊಂಡಿತ್ತೆಂದು ಭೂವಿಜ್ಞಾನಿಗಳು ಅಭಿಪ್ರಾಯಪಟ್ಟಿದ್ದಾರೆ.[೩]

ತುಮಕೂರು ಜಿಲ್ಲೆಯಲ್ಲಿ ಗ್ರಾನೈಟ್ ಜಾತಿಗೆ ಸೇರಿದ ಎತ್ತರದ ಹೆಬ್ಬಂಡೆ, ಏಕಶಿಲಾ ಬೆಟ್ಟ ಹಾಗೂ ಕೊಡುಗಲ್ಲು ಮಾದರಿಯ ಶಿಲಾ ಸಮುಚ್ಚಯ ಇರುವ ಬೆಟ್ಟ-ಗುಡ್ಡಗಳು ಪ್ರಾಗಿತಿಹಾಸ ಕಾಲದಿಂದಲೂ ಮಾನವನೊಂದಿಗೆ ಅನ್ಯೋನ್ಯ ಸಂಬಂಧವನ್ನು ಹೊಂದಿದ್ದವು ಎಂಬುದಕ್ಕೆ ೩೬೦ಕ್ಕೂ ಹೆಚ್ಚು ದೊರೆತ ಪ್ರಾಗಿತಿಹಾಸ ನೆಲೆಗಳಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಆದಿಮಾನವ ಕಾಡು ಪ್ರಾಣಿಗಳನ್ನು ಬೇಟೆಯಾಡಲು ಬೇಕಾದ ಆಯುಧಗಳನ್ನು ಈ ಕಣಶಿಲೆಗಳೇ ಆಗಿದ್ದವು. ನೈಸರ್ಗಿಕವಾಗಿ ರೂಪುಗೊಂಡ ಕಲ್ಲಾಸರೆ, ಗುಹೆ, ನೀರಿನ ಆಶ್ರಯಗಳು ಜಿಲ್ಲೆಯ ಬಹುತೇಕ ಬೆಟ್ಟ ಗುಡ್ಡಗಳಲ್ಲಿ ಕಂಡುಬರುತ್ತದೆ. ಆದುದರಿಂದಲೇ ಜಿಲ್ಲೆಯಲ್ಲಿ ಕರ್ನಾಟಕದ ಬೇರೆ ಪರಿಸರಕ್ಕಿಂತ ಭಿನ್ನವಾಗಿದೆ. ಆದಿಮ ಸಂಸ್ಕೃತಿಯ ಹುಟ್ಟಿಗೂ ಮತ್ತು ಅದು ಇಂದಿಗೂ ಜೀವಂತಿಕೆಯಿಂದ ಇರುವಂತೆ ಮಾಡಿವೆ. ಇದೇ ನೈಸರ್ಗಿಕ ಸಂರಚನೆಯೇ ಅರಸೊತ್ತಿಗೆ ಕಾಲಘಟ್ಟದಲ್ಲಿ ಕೋಟೆ-ಕೊತ್ತಲಗಳ ನಿರ್ಮಾಣಕ್ಕೆ ಯೋಗ್ಯವಾದ ಅಭೇದ್ಯ ಪ್ರದೇಶಗಳನ್ನು ಒದಗಿಸಿದೆ. ಇದರ ಕುರುಹಾಗಿಯೇ ಇಂದು ಜಿಲ್ಲೆಯು ಕರ್ನಾಟಕಲ್ಲೇ ಅತಿಹೆಚ್ಚು ಕೋಟೆಗಳನ್ನು ಹೊಂದಿರಲು ಸಾಧ್ಯವಾಗಿದೆ.

ತುಮಕೂರು ಜಿಲ್ಲೆಯಲ್ಲಿ ದೇವರಾಯನದುರ್ಗ-೧೧೯೭ ಮೀ. ನಿಡಗಲ್ಲುಬೆಟ್ಟ-೧೨೪೮ ಮೀ. ಮಧುಗಿರಿ ಬೆಟ್ಟ-೧೧೭೯ ಮೀ. ಹುತ್ತರಿದುರ್ಗ ಬೆಟ್ಟ-೧೧೧೨ ಮೀ. ರಾಮದೇರ ಬೆಟ್ಟ-೧೧೬೪. ಸೀತಕಲ್ ಬೆಟ್ಟ-೧೦೦೪ ಮೀ. ಮಿಡಿಗೇಶಿ ಬೆಟ್ಟ-೧೦೨೩ ಮೀ. ಹುಲಿಯೂರದುರ್ಗ-೯೪೦ಮೀ, ಪಾವಗಡ ಬೆಟ್ಟ-೯೪೦ಮೀ, ಚನ್ನರಾಯನದುರ್ಗ-೧೧೨೦ಮೀ, ಕೊರಟಗೆರೆ ಬೆಟ್ಟ-೮೦೦ ಮೀ[೪] ಹೀಗೆ ಸುಮಾರು ೨೦೦ಕ್ಕೂ ಹೆಚ್ಚು ಅತಿ ಎತ್ತರದ ಬೆಟ್ಟ ಗುಡ್ಡಗಳು ಕಂಡುಬರುತ್ತವೆ. ಪ್ರತಿ ಬೆಟ್ಟದೊಂದಿಗೆ ಅನಾದಿಕಾಲದಿಂದಲೂ ಮಾನವ ಅನ್ಯೋನ್ಯ ಸಂಬಂಧ ಹೊಂದಿದ್ದ ಎಂಬುದಕ್ಕೆ ಸಾಂಸ್ಕೃತಿಕ ನಾಯಕರ, ಸ್ಥಳೀಯ ದೇವತೆ, ಪ್ರಾಣಿ ಸಂಕುಲ ಮೊದಲಾದವುಗಳ ಹೆಸರುಗಳಿವೆ. ರಾಮದೇವರ ಬೆಟ್ಟ, ಕಾಮನದುರ್ಗ, ಬಂಗಾರುಕೊಂಡ ಇತ್ಯಾದಿ ಹೆಸರುಗಳಿಂದ ಕರೆಯಲ್ಪಡುವ ಬೆಟ್ಟಗಳನ್ನು ಗಮನಿಸಿದರೆ ಔಚಿತ್ಯಪೂರ್ಣವಾದ ಅದೆಷ್ಟೋ ಸಂಗತಿಗಳು ಹುದುಗಿರುವುದು ಗೋಚರವಾಗುತ್ತದೆ. ಅಂತಹ ಔಚಿತ್ಯಪೂರ್ಣವಾದ ಸಂಗತಿಗಳ ಕುರುಹುಗಳಾಗಿಯೇ ಇಂದು ಬೆಟ್ಟ ಗುಡ್ಡಗಳಿಗೂ ಸಹ ಕಥೆ, ಕಾವ್ಯ, ಐತಿಹ್ಯಗಳಿಂದ ಹೆಣೆದುಕೊಂಡಿರುವ ಸಂಗತಿ ತಿಳಿಯುತ್ತದೆ. ಅನೇಕ ಬೆಟ್ಟಗಳು ಇಂದಿಗೂ ಅಲ್ಲಿ ಆಳ್ವಿಕೆ ನಡೆಸಿದವರ ಹೆಸರಿನಿಂದಲೇ ಕರೆಯಲ್ಪಡುತ್ತದೆ. ಉದಾಹರಣೆಗೆ ತಿಮ್ಮಾನಾಯಕನ ಬೆಟ್ಟ, ಬಂಗಾರನಾಯಕನ ಬೆಟ್ಟ ಮೊದಲಾದವು. ತುಮಕೂರು ಜಿಲ್ಲೆಯಲ್ಲಿ ಬೆಟ್ಟಗಳೊಂದಿಗೆ ಗುರುತಿಸಿಕೊಂಡ ಐತಿಹ್ಯ ಮತ್ತು ಸ್ಥಳನಾಮ ನಿಷ್ಪತ್ತಿಯನ್ನು ವಿಶ್ಲೇಷಿಸಿದರೆ

ಬಂಗಾರನಾಯಕನದುರ್ಗ, ಬಂಗಾರ ರಾಮಗಿರಿ, ಸುವರ್ಣಗಿರಿ, ಬೆನಕವಜ್ರ, ಬಂಗಾರುಕೊಂಡ ರತ್ನಗಿರಿ ಎಂಬಂತಹ ನಾಮಗಳು ಹೊನ್ನು, ಬಂಗಾರದ ಹಿನ್ನೆಲೆಯಿಂದ ಬಂದಂತಹವು ಎಂಬುದು ಸ್ಪಷ್ಟವಾಗುತ್ತದೆ. ಆದರೆ ಫಲವತ್ತತೆಯಿಲ್ಲದ ಇಂತಹ ಬರಡು ನೆಲದಲ್ಲಿ ಹೊನ್ನಿನ ರಾಶಿ ಎಲ್ಲಿಂದ ಬಂದಿತು ಎಂಬ ಸಂದೇಹ ಉಂಟಾಗುವುದು ಸಹಜ. ಹೊನ್ನಿನ ಹಿನ್ನೆಲೆಯಲ್ಲಿ ಪ್ರಸಿದ್ಧಿಗೆ ಬಂದ ಬೆಟ್ಟಗಳು ಕೋಲಾರದ ಹಟ್ಟಿ, ಆಂಧ್ರದ ಬಂಗಾರ ರಾಮಗಿರಿ, ತುಮಕೂರಿನ ಬೆಳ್ಳಾವೆಗೆ ಸಮೀಪ ಇರುವುದರಿಂದ ಚಿನ್ನದ ಗಣಿಗಾರಿಕೆ ಇಲ್ಲವೇ ಚಿನ್ನದ ವ್ಯಾಪಾರ ನಡೆಯುತ್ತಿತ್ತು ಎಂಬ ಅಂಶವನ್ನು ಸ್ಪಷ್ಟಪಡಿಸುತ್ತದೆ. ಇದಕ್ಕೆ ಪೂರಕವೆಂಬಂತೆ ನಿಡುಗಲ್ಲಿನ ನಗರೇಶ್ವರ ದೇವಾಲಯ ಹಾಗೂ ಮಿಡಿಗೇಶಿಯ ಮಲ್ಲೇಶ್ವರ ದೇವಾಲಯಕ್ಕೆ[11] ಅಲ್ಲಿನ ಮುತ್ತಿನ ವ್ಯಾಪಾರಿಗಳು ದತ್ತಿ ಬಿಟ್ಟ ಹಾಗೂ ವೈಶ್ಯರ ವರ್ಣನೆ ಅಲ್ಲಿಯೇ ದೊರೆತಿರುವ ಶಾಸನಗಳಿಂದ ತಿಳಿಯುತ್ತದೆ. ಬಹುಶಃ ಬರಡು ನೆಲವನ್ನು ಹೊಂದಿರುವ ಜಿಲ್ಲೆಯಲ್ಲಿ ಇಷ್ಟೊಂದು ಸಂಖ್ಯೆಯ ಪಾಳೆಯಪಟ್ಟುಗಳು ಏಳಿಗೆ ಹೊಂದಿರುವುದು ಈ ಕಾರಣದಿಂದಲೇ ಇರಬಹುದು. ಹೀಗೆ ಪ್ರಾಕೃತಿಕ ಸಂಪತ್ತಿನೊಂದಿಗಿನ ಮಾನವನ ಸಂಬಂಧವನ್ನು ಸೂಕ್ಷ್ಮವಾಗಿ ವಿವಿಧ ದೃಷ್ಟಿಕೋನಗಳಿಂದ ಅಧ್ಯಯನಕ್ಕೆ ಒಳಪಡಿಸಿದಾಗ ಮಾತ್ರ ನೈಜಚಿತ್ರಣ ದೊರೆಯಲು ಸಾಧ್ಯ.

೨.೧.೨. ಜಲ ಸಂಪತ್ತು

ನೀರಿಲ್ಲದ ಜಗತ್ತನ್ನು ಕಲ್ಪಿಸಿಕೊಳ್ಳಲು ಸಾಧ್ಯವಿಲ್ಲ. ಸಕಲ ಜೀವಕೋಟಿಗೂ ನೀರೇ ಮೂಲ. ಅದರಲ್ಲೂ ವೈದಿಕರಿಗೆ ಶಿವನ ತಲೆಯ ಮೇಲಿಂದ, ವಿಷ್ಣುವಿನ ಪಾದಗಳಿಂದ ಹರಿಯುವ ಪವಿತ್ರ ದೇವತಾಸ್ವರೂಪಿಣಿ[12] ಎಂದು ಪರಿಗಣಿಸಲ್ಪಟ್ಟಿರುವ ಭಾರತದಲ್ಲಿ ಪ್ರತಿ ನದಿ, ಹಳ್ಳ, ಕೊಳ್ಳ, ಕೆರೆ ಬಾವಿಗಳ ಬಳಿ ಅದೆಷ್ಟೋ ಸಂಸ್ಕೃತಿಗಳ ನಂಬಿಕೆ–ಆಚರಣೆಗಳು ಹುಟ್ಟಿಕೊಂಡು ಇಂದಿಗೂ ಜೀವಂತಿಕೆಯಿಂದ ಇರುವಂತೆ ಮಾಡಿದೆ. ಹಾಗಾಗಿ ಜಲ ಸಂಪನ್ಮೂಲ ಇರುವ ಪ್ರದೇಶಗಳನ್ನು ಸೂಕ್ಷ್ಮವಾಗಿ ಅಧ್ಯಯನ ಮಾಡಿದಾಗ ಮಾತ್ರ ಅದರ ಹಿಂದಿನ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಮೊದಲಾದ ಸಂಗತಿಗಳ ಮೇಲೆ ಬೆಳಕು ಚೆಲ್ಲಲು ಸಾಧ್ಯವಾಗುತ್ತದೆ.

ಸಾಮಾನ್ಯವಾಗಿ ಪ್ರಾಚೀನ ಕಾಲದಿಂದಲೂ ಬಹುತೇಕ ರಾಜಮನೆತನಗಳು ಕೃಷಿ, ವ್ಯಾಪಾರ ಮತ್ತು ರಕ್ಷಣೆಯನ್ನು ದೃಷ್ಟಿಯಲ್ಲಿಟ್ಟುಕೊಂಡೇ ನದಿಮೂಲ ಇರುವಲ್ಲಿ ಮಾತ್ರ ತಮ್ಮ ಆಡಳಿತ ಕೇಂದ್ರಗಳನ್ನು ಸ್ಥಾಪಿಸಿರುವುದು ಕಂಡುಬರುತ್ತದೆ. ಆದರೆ ತುಮಕೂರು ಜಿಲ್ಲೆಯಲ್ಲಿ ಅಂತಹ ಹೇಳಿಕೊಳ್ಳುವ ಯಾವ ನದಿ ಮೂಲಗಳು ಕಂಡುಬರುವುದಿಲ್ಲ. ಹಾಗಾಗಿ ಕರ್ನಾಟಕದ ಚರಿತ್ರೆಗೆ ತಿರುವು ನೀಡುವಂತಹ ಯಾವುದೇ ರಾಜಮನೆತನಗಳಾಗಲಿ ಇಲ್ಲವೇ ಅಂತಹ ಘಟನೆಗಳಾವು ಸಂಭವಿಸಿಲ್ಲ. ಕೇವಲ ಗಡಿ ಪ್ರದೇಶವನ್ನಾಗಿ ಮಾಡಿಕೊಂಡಿದ್ದ ಇಂದಿನ

ತುಮಕೂರು ಜಿಲ್ಲೆಯಲ್ಲಿ ತಮ್ಮ ರಾಜ್ಯದ ಗಡಿ ರಕ್ಷಣೆಗಾಗಿ ದಂಡನಾಯಕರನ್ನೋ, ಇಲ್ಲವೇ ಅಧಿಕಾರಿಗಳನ್ನೋ ನೇಮಿಸಿರುವುದು ಶಾಸನಗಳಿಂದ ತಿಳಿಯುತ್ತದೆ. ಉದಾಹರಣೆಗೆ ರಾಷ್ಟ್ರಕೂಟರ ಕಾಲದಲ್ಲಿ ಬಂಕೇಶ, ಹೊಯ್ಸಳರ ಕಾಲದಲ್ಲಿ ಗೂಳಿಬಾಚಿದೇವ ಮೊದಲಾದವರು ಇಲ್ಲಿನ ಪ್ರಮುಖ ಅಧಿಕಾರಿಗಳಾಗಿದ್ದರು.[೬] ತುಮಕೂರು ಜಿಲ್ಲೆಯು ಅಭೇದ್ಯವಾದ ದಟ್ಟಡವಿ ಮತ್ತು ಬೆಟ್ಟಗುಡ್ಡಗಳಿಂದ ಕೂಡಿದ್ದರಿಂದ, ಉತ್ತರದ ಅರಸುಮನೆತನಗಳಿಗೆ ದಕ್ಷಿಣದಿಂದ ಯಾವುದೇ ದಾಳಿಗಳು ಎದುರಾಗದಂತೆ ಗಡಿಯಲ್ಲೇ ತಡೆಗೋಡೆಯಾಗಿ ಕೋಟೆ-ಕೊತ್ತಲಗಳ ನಿರ್ಮಾಣಕ್ಕೆ ಅನುಮತಿ ನೀಡಿದ್ದರು. ಬಹುಶಃ ಇದರಿಂದಲೇ ಪಲ್ಲವ, ಚೋಳ, ಪಾಂಡ್ಯರು ಉತ್ತರದ ದಂಡೆಯಾತ್ರೆ ಕೈಗೊಂಡಾಗ ತುಮಕೂರಿನ ಹಾದಿಯನ್ನು ಬಿಟ್ಟು ಆಂಧ್ರಪ್ರದೇಶದ ಅನಂತಪುರ ಜಿಲ್ಲೆಯ ಮೂಲಕ ಸೇನೆ ರವಾನಿಸುತ್ತಿದ್ದರೆಂಬ ಸಂಗತಿ ಶಾಸನಗಳಿಂದ ತಿಳಿಯುತ್ತದೆ. ಒಂದು ವೇಳೆ ಜಿಲ್ಲೆಯ ಕೆಲವೊಂದು ಪ್ರದೇಶಗಳು ಇವರ ಆಳ್ವಿಕೆಗೆ ಒಳಪಟ್ಟರೂ ಬಹುಕಾಲ ಇಲ್ಲಿಯೇ ನೆಲೆ ನಿಲ್ಲಲಾಗದೆ ಹಿಂದೆ ಸರಿಯುವಂತೆ ಮಾಡುತ್ತಿತ್ತು. ಏಕೆಂದರೆ ಇಲ್ಲಿಯ ಭೌಗೋಳಿಕ ರಚನೆ ಸ್ಥಳೀಯರನ್ನು ಹೊರತುಪಡಿಸಿ ಹೊರಗಿನವರಿಗೆ ಹೊಂದಿಕೊಳ್ಳಲು ಆಗುತ್ತಿರಲಿಲ್ಲ. ಜಿಲ್ಲೆಯಲ್ಲಿ ಬೃಹತ್ ಜಲಮೂಲ ಕಂಡುಬರದಿದ್ದರೂ ವಿಭಿನ್ನ ಸಂಸ್ಕೃತಿಯೊಂದರ ಹುಟ್ಟಿಗೂ ಕಾರಣವಾಗಿದೆ. ಅಂದರೆ ಜಿಲ್ಲೆಯಲ್ಲಿ ಮಳೆ ನೀರನ್ನು ಸೂಕ್ತ ರೀತಿಯಲ್ಲಿ ಬಳಸಿಕೊಳ್ಳಲು ಕೆರೆ ಕಾಲುವೆ, ತಲಪರಿಗೆ ಮೊದಲಾದಂತಹವುಗಳ ನಿರ್ಮಾಣಕ್ಕೆ ನಾಂದಿಯಾಯಿತು.

ಜಿಲ್ಲೆಯ ಕೋಟೆ-ಕೊತ್ತಲ ಇರುವ ಬಹುತೇಕ ಸ್ಥಳಗಳಲ್ಲಿ ಕೆರೆ-ಕಟ್ಟೆಗಳು ಇರುವುದು ಕಂಡುಬರುತ್ತದೆ. ಏಕೆಂದರೆ ಕೆರೆ ಕಟ್ಟೆಗಳು ಈ ಭಾಗದ ಜನರಿಗೆ ಜೀವನಾಡಿಗಳಿದ್ದಂತೆ; ಅವುಗಳಿರುವಲ್ಲಿಯೇ ಜನರ ದಿನನಿತ್ಯದ ಕೆಲಸಗಳು ನಡೆಯುತ್ತಿದ್ದವು. ಈ ಕೆರೆ ಕಟ್ಟೆಗಳಲ್ಲಿ ಸಂಗ್ರಹಗೊಂಡ ನೀರನ್ನೇ ಕ್ರಮೇಣ ಕೋಟೆಯ ರಕ್ಷಣೆಗಾಗಿ ನಿರ್ಮಾಣವಾಗುತ್ತಿದ್ದ ಕಂದಕಗಳಿಗೆ ಬಳಸುತ್ತಿದ್ದರು. ಉದಾಹರಣೆಗೆ ಸಿರಾ, ಪಾವಗಡ, ಮಧುಗಿರಿ, ಕುಣಿಗಲ್ಲು, ತುಮಕೂರು, ಕಂದಿಕೆರೆ, ಸಿದ್ದಾಪುರ, ಹುಳಿಯೂರು, ನಿಡುಗಲ್ಲು ಮೊದಲಾದ ಕೋಟೆ ಕೊತ್ತಲಗಳಿರುವಲ್ಲಿ ಅವುಗಳ ಸಮೀಪವೇ ಕೆರೆಗಳಿರುವುದು ಕಂಡುಬರುತ್ತದೆ. ಹೀಗೆ ಕೋಟೆಯ ಸಮೀಪವೇ ಕೆರೆ ಇರುವುದರಿಂದ ಕೋಟೆಯ ಒಳಗಿನವರ ದಿನನಿತ್ಯದ ಬಳಕೆಗೂ ಹಾಗೂ ಅಲ್ಲಿಯೇ ಸಮೀಪ ಕೃಷಿ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಲು ಸಾಧ್ಯವಾಗುವಂತೆ ಮಾಡಿದೆ. ಆದುರಿಂದಲೇ ಸಣ್ಣಪುಟ್ಟ ಮನೆತನಗಳಿಗೆ ಆಹಾರ ಪದಾರ್ಥಗಳ ಅಭಾವ ಎದುರಾಗದೇ ಬಹುಕಾಲದವರೆಗೂ ಹೊಯ್ಸಳ, ವಿಜಯನಗರದಂತಹ ಬೃಹತ್ ರಾಜ್ಯಗಳನ್ನೇ ಎದುರು ಹಾಕಿಕೊಂಡಿರುವುದು ಶಾಸನ ಮತ್ತು ಐತಿಹ್ಯಗಳಿಂದ ತಿಳಿಯುತ್ತದೆ. ಉದಾ: ಗಂಗರ ವಿರುದ್ಧ-ನೊಳಂಬರು, ಹೊಯ್ಸಳರ ವಿರುದ್ಧ-ನಿಡುಗಲ್ಲು ಚೋಳರು, ರಣದುಲ್ಲಾಖಾನನ ವಿರುದ್ಧ-ಹಾಗಲವಾಡಿ ಪಾಳೆಯಗಾರರು, ವಿಜಯನಗರ ಮತ್ತು ಹೈದರ್, ಟಿಪ್ಪು ವಿರುದ್ಧ-ನಿಡುಗಲ್ಲು ಪಾಳೆಯಗಾರರು

ಹೀಗೆ ಹಲವು ಸಣ್ಣಪುಟ್ಟ ಅರಸುಮನೆತನಗಳು ಸಾರ್ವಭೌಮ ರಾಜ್ಯಗಳ ವಿರುದ್ಧವೇ ಹೋರಾಟಕ್ಕೆ ಇಳಿದಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ.

ವಿಶೇಷವಾಗಿ ವರ್ಷಪೂರ್ತಿ ನೀರಿನ ನೈಸರ್ಗಿಕ ಸಂಗ್ರಹಣಾ ಕುಳಿ, ದೋಣೆ, ಹೊಂಡ ಮೊದಲಾದವು ಜಿಲ್ಲೆಯಲ್ಲಿ ಕಂಡುಬರುವುದರಿಂದ ಕರ್ನಾಟಕದಲ್ಲೇ ಅತಿ ಹೆಚ್ಚು ಪ್ರಾಗಿತಿಹಾಸಿಕ ನೆಲೆಗಳು ದೊರೆಯಲು ಸಾಧ್ಯವಾಗಿದೆ. ಜಿಲ್ಲೆಯಲ್ಲಿ ಜಲಮೂಲಗಳಾದ ಕೆರೆಗಳನ್ನು ಚಾರಿತ್ರಿಕವಾಗಿ ನೋಡುವುದಾದರೆ ಕೆರೆ ಮೂಲಗಳಿಂದಲೇ ತುರುವೇಕೆರೆ, ಕಂದಿಕೆರೆ, ಹಂದನಕೆರೆ, ಅರಸೀಕೆರೆ, ದೊಡ್ಡೇರಿ ಮುಂತಾದ ಹಲವು ಗ್ರಾಮ, ಪಟ್ಟಣಗಳ ಹುಟ್ಟು ಸಹ ಆಗಿರುವುದು ಗೋಚರವಾಗುತ್ತದೆ. ಅಲ್ಲದೆ ಸಮುದ್ರ, ಸಾಗರ, ಸಂದ್ರ ಎಂಬಂತಹ ಕೆರೆ ಮೂಲಗಳಿರುವ ಮಾಯಸಂದ್ರ, ನಾಗಸಂದ್ರ, ರಂಗಸಮುದ್ರ, ಗಂಗಾಸಾಗರ ಮೊದಲಾದ ಕಡೆ ಹೊಯ್ಸಳರ ಅವಶೇಷಗಳಿರುವುದು ಈ ಜಲಮೂಲ ನೆಲೆಗಳನ್ನು ಅರಸಿದಾಗ ಕಂಡುಬಂದಿದೆ. ಇಂತಹ ಜಲಮೂಲಗಳನ್ನು ಅಥವಾ ಜಲಸಂಪತ್ತನ್ನು ಅಧ್ಯಯನಕ್ಕೆ ಒಳಪಡಿಸುವ ಶಿಸ್ತು ಬದಲಾದರೆ ಅದರ ಹಿಂದಿನ ರಾಜಕೀಯ ಮತ್ತು ಸಾಂಸ್ಕೃತಿಕ ಬದುಕನ್ನು ನಿರ್ವಚಿಸಲು ಸಾಧ್ಯವಾಗುತ್ತದೆ ಎಂಬುದು ಇದರಿಂದ ವೇದ್ಯವಾಗುತ್ತದೆ.

ತುಮಕೂರಿನಲ್ಲಿ ಜಲಸಂಪತ್ತನ್ನು ಕೃಷಿಗೆ ಬಳಸಿಕೊಂಡ ನಿದರ್ಶನಗಳು ಗಂಗರ ಕಾಲದಿಂದ ದೊರೆಯುತ್ತದೆ. ಗಂಗರ ರಾಚಮಲ್ಲನ ಕ್ರಿ.ಶ. ೯೨೦ರ ರಂಗಾಪುರ ಶಾಸನ ಮತ್ತು ಬರಗೂರಿನ ಶಾಸನಗಳು ನಾರಣಬ್ಬೆಯು ಕೆರೆ–ಕಟ್ಟಿಸಿದ್ದನ್ನು, ತುಮಕೂರಿನ ಕ್ರಿ.ಶ. ೯೫೫ರ ಶಾಸನ–ಅಮಾನಿಕೆರೆಯ ನಿರ್ಮಾಣವನ್ನು ತಿಳಿಸುತ್ತದೆ. ಹೀಗೆ ಹಲವು ಶಾಸನಗಳು ಜಲಸಂಪತ್ತನ್ನು ಒಂದೆಡೆ ಸಂಗ್ರಹಿಸಿಕೊಳ್ಳುವ ಕೆರೆ–ಕಟ್ಟೆಗಳ ನಿರ್ಮಾಣದ ಕುರಿತು ಮಾಹಿತಿ ನೀಡುವುದರ ಮೂಲಕ ಆ ಕೆರೆಯ ಕೆಳಗೆ ಜೀವಂತವಾಗಿರುವಂತಹ ಹಲವು ಸಂಸ್ಕೃತಿಗಳಿಗೆ ಕಾಲವನ್ನು ನಿರ್ಧರಿಸಲು ಸಹಾಯಕವಾಗುವುದರಿಂದ ಸಾಂಸ್ಕೃತಿಕ ಚರಿತ್ರೆಯ ರಚನೆಗೂ ಸಹಕಾರಿಯಾಗಿವೆ.

ತುಮಕೂರು ಜಿಲ್ಲೆಯಲ್ಲಿ ಸಾರ್ವಕಾಲಿಕವಾಗಿ ಹರಿಯುವ ನದಿಗಳಿಲ್ಲದಿದ್ದರೂ ಮಳೆಗಾಲದಲ್ಲಿ ಬೆಟ್ಟ–ಗುಡ್ಡಗಳಿಂದ ಹರಿದು ಕೆರೆ–ಕಟ್ಟೆಗಳಲ್ಲಿ ಸೇರುವಂತಹ ಹಲವು ನದಿ ಸಂಚಯಗಳಿವೆ. ಉದಾಹರಣೆಗೆ ಶಿಂಷಾ ನದಿಯು ದೇವರಾಯನದುರ್ಗದಲ್ಲಿ ಹುಟ್ಟಿ ಕಡಬ, ನಾಗೇನಹಳ್ಳಿ ಮೂಲಕ ಕುಣಿಗಲ್ಲಿನಲ್ಲಿ ನಾಗಿನಿ ನದಿಯೊಂದಿಗೆ ಸೇರಿಕೊಂಡು ಹಂಪನಪುರದಲ್ಲಿ ಕಾವೇರಿ ನದಿಯನ್ನು ಕೂಡಿಕೊಳ್ಳುತ್ತದೆ. ಜಯಮಂಗಲಿ ನದಿ ದೇವರಾಯನದುರ್ಗದ ಜಲಗೊಂದಿಯಲ್ಲಿ ಹುಟ್ಟಿ ಹೊನ್ನವಳ್ಳಿಯಲ್ಲಿ ಪೆನ್ನಾರ್ ನದಿಗೆ ಸೇರುತ್ತದೆ. ಸುವರ್ಣಮುಖಿ ಮತ್ತು ಗರುಡಾಚಲ ನದಿಗಳು ದೇವರಾಯನದುರ್ಗದಲ್ಲಿ ಹುಟ್ಟಿ ಹೊನ್ನವಳ್ಳಿಯಲ್ಲಿ ಜಯಮಂಗಲಿ ನದಿಯನ್ನು ಸೇರುತ್ತವೆ. ಉತ್ತರ ಪಿನಾಕಿನಿಯು ಪಾವಗಡದಲ್ಲಿ ಹರಿಯುವ ಏಕೈಕ ನದಿಯಾಗಿದೆ.

ಅದೇ ರೀತಿ ಜಿಲ್ಲೆಯಲ್ಲಿ ಮಾರ್ಕೋನಹಳ್ಳಿ ಅಣೆಕಟ್ಟು, ಸಂಕನಪುರ ಅಣೆಕಟ್ಟು, ಮಂಗಳಕೆರೆ, ತೀತಾ ಅಣೆಕಟ್ಟುಗಳು ಪ್ರಮುಖ ನೀರಾವರಿ ಯೋಜಿತ ಅಣೆಕಟ್ಟುಗಳಾಗಿವೆ.[೯]

ಜಿಲ್ಲೆಯಲ್ಲಿ ಬಂಡೆಕಲ್ಲುಗಳಿರುವ ಬೆಟ್ಟದ ತಪ್ಪಲುಗಳಲ್ಲಿ ಮಳೆಗಾಲದಲ್ಲಿ ಹರಿದು ಬೇಸಿಗೆಯಲ್ಲಿ ಬತ್ತಿಹೋಗುವ ನದಿ, ತೊರೆ, ಹಳ್ಳಗಳ ಎಡಬಲಗಳಲ್ಲಿ ತಲಪರಿಗೆಗಳು ಕಂಡುಬರುತ್ತದೆ. ಸಾಮಾನ್ಯವಾಗಿ ಮಳೆಗಾಲದಲ್ಲಿ ಇಂತಹ ಕಡೆಗಳಲ್ಲಿ ಮಳೆ ಬಿದ್ದಾಗ ನೀರು ಭೂಗರ್ಭದಲ್ಲಿ ಅಂತರ್ಗತವಾಗಿ ಹರಿಯುತ್ತಾ ಮರಳು ಅಥವಾ ಉಸುಗು ಇರುವಲ್ಲಿ ಒಸರುವಂತೆ ಮಾಡುತ್ತದೆ. ಇಂತಹ ನೀರು ಉಕ್ಕುವ, ಊರುವ, ಜಿನುಗುವ, ಒಸರುವ ಸ್ಥಳವೇ ತಲಪರಿಗೆ[೧೦] ಇತ್ತೀಚೆಗೆ ನದಿ, ಹಳ್ಳ, ಕೊಳ್ಳ, ಬಾವಿ, ತಲಪರಿಗೆಗಳು ಬತ್ತಿ ಹೋಗುತ್ತಿರುವುದು ಕೊಳವೆಬಾವಿಗಳ ಪ್ರಮಾಣ ಹೆಚ್ಚಾಗುವಂತೆ ಮಾಡಿದೆ. ಹಾಗಾಗಿ ಅಂತರ್ಜಲದ ಮಟ್ಟ ೨೦೦೮ರಲ್ಲಿ ೧೮.೧೪ ಮೀ.ನಷ್ಟು ಇದ್ದಿದ್ದು ೨೦೦೯ರಲ್ಲಿ ೧೩.೬೦ ಮೀ[೧೧] ನಷ್ಟು ಇಳಿದಿದೆ. ಇಂದು ಜಿಲ್ಲೆಯಲ್ಲಿ ೩೦೦ ಅಡಿಗಳಿಗಿಂತಲೂ ಆಳಕ್ಕೆ ಅಂತರ್ಜಲ ಮಟ್ಟ ಕುಸಿದಿರುವುದು ಈ ಅಂಕಿ ಸಂಖ್ಯೆಗಳಿಂದ ತಿಳಿಯುತ್ತದೆ.

೨.೧.೩. ಭೂ ರಚನೆ

ತುಮಕೂರು ಜಿಲ್ಲೆಯು ದಖ್ಖನ್ ಪ್ರಸ್ಥಭೂಮಿಯ ಪುರಾತನ ಶಿಲಾಖಂಡದ ಪೂರ್ವದ ಅಂಚಿನಲ್ಲಿ ಇರುವುದರಿಂದ ಭೂಗರ್ಭಶಾಸ್ತ್ರದ ಪ್ರಕಾರ ಇಲ್ಲಿನ ಮಣ್ಣು ಪ್ರಾಚೀನ ಜಾತಿಯದಾಗಿದೆ. ಮಧುಗಿರಿ, ಚಿಕ್ಕನಾಯಕನಹಳ್ಳಿ ಮತ್ತು ಸಿರಾ ತಾಲೂಕಿನ ಉತ್ತರ ಮತ್ತು ಪೂರ್ವ ಭಾಗವನ್ನು ಬಿಟ್ಟರೆ ಉಳಿದೆಲ್ಲ ಭೂಮಿ ಗಡುಸಾಗಿದೆ. ಶಿರಾ ಮತ್ತು ಪಾವಗಡ ತಾಲೂಕಿನ ಉತ್ತರಕ್ಕಿರುವ ಭೂಮಿಯ ಕಪ್ಪು ಬಣ್ಣದ ಹುಡಿಹುಡಿಯಾದ ಎರೆ ಜಾತಿಯ ಮಣ್ಣು ವ್ಯವಸಾಯಕ್ಕೆ ಯೋಗ್ಯವಾದ ಫಲವತ್ತತೆಯಿಂದ ಕೂಡಿದೆ. ಜಿಲ್ಲೆಯ ದಕ್ಷಿಣ ಮತ್ತು ಪಶ್ಚಿಮ ಭಾಗಗಳಲ್ಲಿ ಮಾತ್ರ ಕೆಂಪು ಮಣ್ಣು, ಪೂರ್ವವಲಯದಲ್ಲಿ ಮರಳು ಮಿಶ್ರಿತ ಮಣ್ಣು ಕಂಡುಬರುತ್ತದೆ. ಚಿಕ್ಕನಾಯಕನಹಳ್ಳಿ, ತುರುವೇಕೆರೆ ಪರಿಸರದಲ್ಲಿ ಬೆಣಚುಕಲ್ಲಿನಿಂದ ಹರಡಿಕೊಂಡ ಭೂಮಿಯಿದೆ.[೧೨]

ಒಟ್ಟಾರೆ ತುಮಕೂರು ಜಿಲ್ಲೆಯಲ್ಲಿ ಮೂರು ವಿಧದ ಗುಣಸ್ವಭಾವದ ಮಣ್ಣು ಕಂಡುಬರುತ್ತದೆ. ಮಧುಗಿರಿ, ಕೊರಟಗೆರೆ, ತುಮಕೂರು, ಕುಣಿಗಲ್ ಭಾಗಗಳಲ್ಲಿ ಕೆಂಪು ಜೇಡಿಮಣ್ಣು, ಚಿಕ್ಕನಾಯಕನಹಳ್ಳಿಯನ್ನು ಹೊರತುಪಡಿಸಿ ಉಳಿದೆಡೆ ಮರಳುಮಿಶ್ರಿತ ಕೆಂಪುಮಣ್ಣು, ಚಿಕ್ಕನಾಯಕನಹಳ್ಳಿಯಲ್ಲಿ ಕಪ್ಪು ಮಣ್ಣು ಕಂಡುಬರುತ್ತದೆ.[೧೩]

ಸಹಜವಾಗಿ ಎಲ್ಲಿ ಫಲವತ್ತಾದ ಮಣ್ಣು ಸಿಗುತ್ತದೋ ಅಲ್ಲಿ ಶ್ರೀಮಂತಿಕೆಯಿಂದ ಕೂಡಿದ ಸಂಸ್ಕೃತಿ ಇರುತ್ತದೆ. ಆದುದರಿಂದ ಆಯಾಯ ಪರಿಸರದ ಮಣ್ಣಿನ ರಚನೆಯು ಆಯಾಯ

ಪರಿಸರದ ಸಂಸ್ಕೃತಿಯ ಮೇಲೆ ಪ್ರಭಾವ ಬೀರಿರುವುದು ಗೋಚರವಾಗುತ್ತದೆ. ಪಾವಗಡ, ಸಿರಾ, ಮಧುಗಿರಿ, ಕೊರಟಗೆರೆ ತಾಲೂಕುಗಳಲ್ಲಿ ಕೆಂಪುಮಿಶ್ರಿತ ಮಣ್ಣು ಕಂಡುಬರುತ್ತಿದ್ದು, ಮಳೆಯನ್ನು ಆಶ್ರಯಿಸಿ ಎಣ್ಣೆ ಕಾಳುಗಳನ್ನು ಅತಿ ಹೆಚ್ಚು ಬೆಳೆಯುತ್ತಾರೆ. ಈ ನಾಲ್ಕು ತಾಲೂಕಿನ ಜನರು ಉಳಿದ ತಾಲೂಕುಗಳಿಗಿಂತ ಬಹುಶ್ರಮಜೀವಿಗಳಾಗಿದ್ದು, ಇವರಿಗೆ ಆರು ತಿಂಗಳು ಕೆಲಸವಿದ್ದರೆ ಉಳಿದ ಆರು ತಿಂಗಳು ಕೆಲಸವಿರುವುದಿಲ್ಲ. ಹಾಗಾಗಿ ಇಲ್ಲಿಯರ ಜೀವನ ಶೈಲಿ ಇತರೆಡೆಗಳಿಗಿಂತ ಭಿನ್ನವಾಗಿರುವುದು ಕಂಡುಬರುತ್ತದೆ.

ತುಮಕೂರು ಜಿಲ್ಲೆಯು ಫಲವತ್ತಾದ ಬಯಲುಸೀಮೆ ಹೊಂದಿದ್ದು ಹಲವು ರಾಜಮನೆತನಗಳಲ್ಲಿ ಈ ಪ್ರದೇಶಕ್ಕಾಗಿ ನಿರಂತರ ಕಾದಾಟ ನಡೆಯುವಂತೆ ಮಾಡಿತು. ಬಹುಶಃ ಫಲವತ್ತಾದ ಸಿರಾವನ್ನು ಹೈದರಾಲಿ ಹೈದರಾಬಾದ್ ನಿಜಾಮನಿಂದ ೩ ಲಕ್ಷ ರೂಪಾಯಿಗೆ ಪಡೆದುಕೊಂಡದ್ದು,[೧೪] ಶೇಂಗಾ ಎಣ್ಣೆಗೆ ಪ್ರಸಿದ್ಧಿ ಹೊಂದಿದ್ದ ಹೈದರಾಬಾದಿನ ನಿಜಾಮನ ವಶದಲ್ಲಿದ್ದ ಅನಂತಪುರ ಜಿಲ್ಲೆಗೆ ಸೇರಿದ ಪಾವಗಡವನ್ನು ಮೈಸೂರು ಒಡೆಯರು ಹಣ ಕೊಟ್ಟು ಪಡೆದುಕೊಂಡಿದ್ದನ್ನು ಗಮನಿಸಿದರೆ ಜಿಲ್ಲೆಯ ಮಣ್ಣಿನ ರಚನೆ, ಫಲವತ್ತತೆಯ ಮಹತ್ವವನ್ನು ತಿಳಿಯಬಹುದು.

೨.೧.೪. ಖನಿಜ ಸಂಪತ್ತು

ತುಮಕೂರು ಜಿಲ್ಲೆಯಲ್ಲಿ ಮ್ಯಾಂಗನೀಸ್, ಗ್ರಾನೈಟ್, ಮೆಗ್ನೇಷಿಯಂ, ಬಂಗಾರ, ಸುಣ್ಣದ ಕಲ್ಲು ಮೊದಲಾದ ಖನಿಜ ಸಂಪತ್ತು ಕಂಡುಬರುತ್ತದೆ. ಜಿಲ್ಲೆಯಲ್ಲಿ ಹೇರಳವಾಗಿ ಗ್ರಾನೈಟ್‌ಕಂಡುಬರುವುದರಿಂದ ಬಹುತೇಕ ಕೋಟೆ ಕೊತ್ತಲಗಳು ಗ್ರಾನೈಟ್ ಶಿಲೆಯಿಂದ ನಿರ್ಮಿಸಲ್ಪಟ್ಟಿವೆ. ಆದರೆ ದೊಡ್ಡೇರಿ, ಸಿರಾ, ಹುತ್ತರಿದುರ್ಗ ಮೊದಲಾದ ಕಡೆ ಮಣ್ಣಿನಲ್ಲಿ ನಿರ್ಮಾಣಗೊಂಡ ಕೋಟೆಗಳಿವೆ. ಸಾಮಾನ್ಯವಾಗಿ ಜಿಲ್ಲೆಯಾದ್ಯಂತ ಸ್ಥಳೀಯವಾಗಿ ಸಿಗುವಂತಹ ಶಿಲಾಮಾಧ್ಯಮವೇ ಅಲ್ಲಿಯ ಕೋಟೆ-ಕೊತ್ತಲ, ದೇವಾಲಯ, ಅರಮನೆ ಮೊದಲಾದ ನಿರ್ಮಿತಿಗಳಿಗೆ ಬಳಸಲಾಗಿದೆ. ಹಾಗಾಗಿ ಶಿಲೆ ಅಥವಾ ಮಣ್ಣಿನ ರಚನೆಯ ಜ್ಞಾನವನ್ನರಿಯದೆ ಆಯಾಯ ಪರಿಸರದ ಸಾಂಸ್ಕೃತಿಕ ಬದುಕನ್ನು ನಿರೂಪಿಸಲು ಸಾಧ್ಯವಿಲ್ಲ. ದಖನ್ ಪ್ರಸ್ಥಭೂಮಿ ಮೃದು ಸ್ಫಟಿಕ ಶಿಲಾರಚನೆಯಲ್ಲಿ ಹಾಯ್ದು ಹೋಗಿರುವ ಗ್ರಾನೈಟ್ ಬೆಟ್ಟಸಾಲು ಜಿಲ್ಲೆಯ ಪೂರ್ವಭಾಗದ ನಿಡುಗಲ್‌ನಿಂದ ಮತ್ತು ದಕ್ಷಿಣದ ಹುಲಿಯೂರು ದುರ್ಗದವರೆಗಿದೆ.[೧೫]

ಅದೇ ರೀತಿ ಜಿಲ್ಲೆಯಲ್ಲಿ ಅಸ್ಬೆಸ್ಟಾಸ್ ಲೋಹವು ಹೊಸಮಾಚನಹಳ್ಳಿ, ಹುಳಿಯಾರು, ಕುಣಿಗಲ್‌ನಲ್ಲಿ, ಕೋರನ್‌ಡಮ್ ಲೋಹವು ಮಧುಗಿರಿ, ಕೊರಟಗೆರೆ, ಪಾವಗಡ, ಸಿರಾ, ಕುಣಿಗಲ್‌ಗಳಲ್ಲಿ, ರೂಬಿಸ್ಟೋನ್ ಮತ್ತು ಕೆಂಪುಹರಳುಗಳು ಪಾವಗಡದಲ್ಲಿ, ಚೌಳು ಜೇಡಿಮಣ್ಣು-ಕಾರೆಕುರ್ಚಿಯು, ಮುಸುಕೊಂಡ್ಲಿ, ಜಾನೆಹಾರಗಳಲ್ಲಿ, ಫೇಲ್ಡ್‌ಸ್ಪಾರ್ ಶಿಲಾಲೋಹ ಕುಣಿಗಲ್‌ನಲ್ಲಿ, ಚಿನ್ನದಅದಿರು ಬೆಳ್ಳಾರದಲ್ಲಿ, ಸುಣ್ಣದಕಲ್ಲು ಗುಬ್ಬಿ, ಚಿಕ್ಕನಾಯಕನಹಳ್ಳಿಗಳಲ್ಲಿ, ಕಾರೆಕುರ್ಚಿಯ

ಚಿಕ್ಕನಾಯಕನಹಳ್ಳಿಯಲ್ಲಿ, ಮ್ಯಾಂಗನೀಸ್ ಅದಿರು ಹತ್ಯಾಳ, ಶಿವಸಂದ್ರ, ದೊಡ್ಡಗುಣಿಗಳಲ್ಲಿ, ಕುರುಂದದ ಕಲ್ಲು ಪಾವಗಡ, ಮಧುಗಿರಿ, ಶಿರಾ, ಕೊರಟಗೆರೆಗಳಲ್ಲಿ, ಹಸಿರುಗಾರ್ನೆಟ್ ಕುಣಿಗಲ್ಲಿನ ಬಂಡೀಹಳ್ಳಿಯಲ್ಲಿ, ಪೆಗ್ಮೆಟೈಟ್ ಶಿಲೆಗಳಲ್ಲಿ ಫೆಲ್ಸಾಪಾರ್ ಲೋಹವು ಕುಣಿಗಲ್‌ನಲ್ಲಿ, ಬೆಣಚುಕಲ್ಲು ತಿಪಟೂರು, ಗುಬ್ಬಿ, ಕೊರಟಗೆರೆಗಳಲ್ಲಿ ದೊರೆಯುತ್ತವೆ.[೧೬]

ಖನಿಜ ಸಂಪತ್ತಿನೊಂದಿಗೆ ಮನುಷ್ಯನ ಸಂಬಂಧವನ್ನು ಸೂಕ್ಷ್ಮವಾಗಿ ಗ್ರಹಿಸಿಕೊಂಡರೆ ಹಲವು ಸಂಗತಿಗಳು ಗೋಚರವಾಗುತ್ತವೆ. ಎ.ವಿ.ನರಸಿಂಹಮೂರ್ತಿ ಅವರು ಹೊನ್, ಹೇಮ, ಸುವರ್ಣ ಎಂಬ ಪದಗಳಿರುವ ಸ್ಥಳಗಳಲ್ಲಿ ಶೋಧನೆ ನಡೆಸಿದರೆ ಚಿನ್ನದ ಉದ್ಯಮಕ್ಕೆ ಅಥವಾ ಗಣಿಗಾರಿಕೆಗೆ ಸಂಬಂಧಿಸಿದ ಕಾರ್ಯ ಚಟುವಟಿಕೆಗಳು ಕಂಡುಬರುತ್ತವೆ[೧೭] ಎಂದು ಅಭಿಪ್ರಾಯಪಟ್ಟಿದ್ದಾರೆ ಜಿಲ್ಲೆಯಲ್ಲಿಯೂ ಸಹ ಬಂಗಾರ ಅಥವಾ ಹೊನ್ನಿನ ಹಿನ್ನೆಲೆಯುಳ್ಳ ಹೊನ್ನೆಬಾಗಿ, ಬಂಗಾರ ನಾಯಕನದುರ್ಗ, ಬಂಗಾರುಕೊಂಡ, ರತ್ನಗಿರಿ, ಸುವರ್ಣಗಿರಿ, ಹೊನ್ನೆನಹಳ್ಳಿಯಂತಹ ಸ್ಥಳನಾಮಗಳು ಇರುವುದನ್ನು ಗಮನಿಸಿದರೆ ಬಹುಶಃ ಚಿನ್ನದ ಉದ್ಯಮಕ್ಕೆ ಸಂಬಂಧಿಸಿದ ಕಾರ್ಯಚಟುವಟಿಕೆಗಳು ನಡೆಯುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಚಿಕ್ಕನಾಯಕನಹಳ್ಳಿ ತಾಲೂಕಿನ ಹೊನ್ನೇಬಾಗಿ, ಬೆಳ್ಳಾರ ಹಾಗೂ ಪಾವಗಡಕ್ಕೆ ಹೊಂದಿಕೊಂಡಿರುವ ಆಂಧ್ರದ ಬಂಗಾರು ರಾಮಗಿರಿ, ತುಮಕೂರಿಗೆ ಹತ್ತಿರದಲ್ಲಿರುವ ಕೋಲಾರದಲ್ಲಿ ಚಿನ್ನದ ಗಣಿಗಳು ಇರುವುದರಿಂದ ಈ ಭಾಗದಲ್ಲಿ ಚಿನ್ನದ ಉದ್ದಿಮೆ ಇತ್ತು ಎಂಬುದನ್ನು ಖಚಿತಪಡಿಸುತ್ತದೆ. ಇತ್ತೀಚೆಗೆ ಖನಿಜ ಮತ್ತು ಭೂಗರ್ಭ ಸರ್ವೇಕ್ಷಣ ಇಲಾಖೆಯವರು ಅಜ್ಜನಳ್ಳಿ ಮತ್ತು ಹುಲಿಯೂರುದುರ್ಗದ ಹಳ್ಳಗಳಲ್ಲಿ ಮಳೆ ಬಂದಾಗ ಚಿನ್ನದ ಅದಿರು ಮಳೆಯ ನೀರಿನಲ್ಲಿ ಕೊಚ್ಚಿಕೊಂಡು ಬರುತ್ತಿದೆ ಎಂಬ ವರದಿಯನ್ನು ಸಲ್ಲಿಸಿರುವುದನ್ನು ಗಮನಿಸಿದರೆ ಜಿಲ್ಲೆಯ ಹಲವೆಡೆ ಚಿನ್ನದ ಗಣಿಗಾರಿಕೆ ನಡೆಯುತ್ತಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಹಾಗಾಗಿ ಈ ಭಾಗದಲ್ಲಿ ಮತ್ತಷ್ಟು ಅಧ್ಯಯನಗಳಾಗಬೇಕಾದ ಅವಶ್ಯಕತೆಯಿದೆ.

ತಿಮ್ಮಾಯಕನ ಅದೇ ರೀತಿ ಜಿಲ್ಲೆಯಲ್ಲಿ ಕಾವಲುರಂಗಾಪುರ, ಬೆಟ್ಟ, ನಿಡಗಲ್ಲು, ತಾಯಗೊಂಡನಹಳ್ಳಿ, ಕತ್ತಿರಾಜನಹಳ್ಳಿ, ಕತ್ತಿಕ್ಯಾತನಹಳ್ಳಿ, ಕರಿಯಮ್ಮನಪಾಳ್ಯ ಮೊದಲಾದೆಡೆ ಕಬ್ಬಿಣದ ಗಣಿಗಾರಿಕೆ ನಡೆಸಿರುವುದಕ್ಕೆ ಸುಮಾರು ಎರಡು ಎಕರೆಗಳಿಗಿಂತಲೂ ವಿಶಾಲ ಪ್ರದೇಶದಲ್ಲಿ ಕಬ್ಬಿಣವನ್ನು ಕಾಯಿಸಿ ಸೋಸುವಂತಹ ಮಣ್ಣಿನ ಕೊಳವೆ ಮತ್ತು ಕಿಟ್ಟದ ರಾಶಿ ಕಂಡುಬರುತ್ತದೆ. ಹಾಗಾಗಿ ಈ ಭಾಗಕ್ಕೆ ಕಬ್ಬಿಣದ ಅದಿರು ಎಲ್ಲಿಂದ ತರಲಾಗುತ್ತಿತ್ತು, ಇಲ್ಲವೆ ಕಬ್ಬಿಣದ ನಿಕ್ಷೇಪಗಳು ಸ್ಥಳಿಯವಾಗಿಯೇ ದೊರೆಯುತ್ತಿತ್ತೆ ಎಂಬ ಸಂದೇಹವನ್ನು ಉಂಟುಮಾಡುತ್ತದೆ. ಬಹುಶಃ ಬುಕಾನನ್ ಬರವಣಿಗೆಗಳಲ್ಲಿ ದಕ್ಷಿಣದ ವಿವಿಧ ಪಾಳೆಯಪಟ್ಟುಗಳು ಬಳ್ಳಾರಿಯಿಂದ ಕತ್ತೆಗಳ ಮೂಲಕ ಸಾಗಿಸುತ್ತಿದ್ದರು ಎಂಬ ಉಲ್ಲೇಖವನ್ನು ಗಮನಿಸಿದರೆ

ಇಂದಿನ ತುಮಕೂರು ಭಾಗದಲ್ಲಿದ್ದ ಪಾಳೆಯಪಟ್ಟುಗಳಿಗೆ ಸಹ ಹೀಗೆಯೇ ಬಂದಿರುವ ಸಾಧ್ಯತೆ ಇದೆ. ದಕ್ಷಿಣದ ಬಹುತೇಕ ಪಾಳೆಯಪಟ್ಟುಗಳು ವಿಜಯನಗರ ಅರಸರ ಸಾಮಂತತ್ವವನ್ನು ಒಪ್ಪಿಕೊಂಡಿದ್ದವು. ಆದುದರಿಂದ ಪಾಳೆಯಪಟ್ಟುಗಳು ಅವರಿಂದ ಕಬ್ಬಿಣದ ಅದಿರನ್ನು ತರಿಸಿಕೊಂಡು ಸ್ಥಳೀಯವಾಗಿಯೇ ಅದನ್ನು ಶುದ್ಧೀಕರಿಸಿ ಆಯುಧಗಳನ್ನು ತಯಾರಿಸಿಕೊಳ್ಳುತ್ತಿದ್ದರು. ನಂತರ ಇಲ್ಲಿ ತಯಾರಾದ ಆಯುಧಗಳನ್ನು ವ್ಯಾಪಾರಿ ಕೇಂದ್ರಗಳಲ್ಲಿ ಮಾರಾಟ ಮಾಡುತ್ತಿದ್ದರೆಂದು ಈ ಆಯುಧ ತಯಾರಿಕಾ ಕೇಂದ್ರಗಳಲ್ಲಿ ಕಂಡುಬರುವ ಕಿಟ್ಟದ ಪ್ರಮಾಣದಿಂದ ಸ್ಪಷ್ಟವಾಗುತ್ತದೆ.

೨.೧.೫. ಅರಣ್ಯ ಹಾಗೂ ಪ್ರಾಣಿಸಂಪತ್ತು

ತುಮಕೂರು ಜಿಲ್ಲೆಯಲ್ಲಿ ೪೪.೯೮೪ ಹೆಕ್ಟೇರ್‌ನಷ್ಟು[೧೮] ಅರಣ್ಯ ಪ್ರದೇಶ ಕಂಡುಬರುತ್ತದೆ. ಇದು ಸಾಧಾರಣ ಒಣ ಭೂಪ್ರದೇಶ ಆಗಿರುವುದರಿಂದ ಬಹುತೇಕ ಎಲೆ ಉದುರುವಂತಹ ಶುಷ್ಕ ಅಥವಾ ಕುರುಚಲು ಗಿಡಗಳಿಂದ ಕೂಡಿದೆ.[೧೯] ಆದುದರಿಂದಲೇ ಜಿಲ್ಲೆಯು ಬೃಹತ್ ವನ್ಯಮೃಗಗಳಿಗೆ ವಾಸಯೋಗ್ಯವಾಗಿಲ್ಲ. ಇಲ್ಲಿ ಕಂಡುಬರುವ ಮರಗಳು ಬಹುತೇಕ ಉರುವಲು ಇಲ್ಲವೆ ಗೃಹೋಪಯೋಗಕ್ಕೆ ಬಳಸಲ್ಪಡುತ್ತವೆ. ಸಿದ್ಧರಬೆಟ್ಟ, ದೇವರಾಯನದುರ್ಗದ ಅರಣ್ಯವು ಔಷಧಿಯ ಗಿಡಗಳನ್ನು ಹೊಂದಿವೆ. ಹೆಚ್ಚಾಗಿ ಈ ಅರಣ್ಯಗಳಲ್ಲಿ ಜಾಲಾರಿ, ದಿಂಡಿಗ, ಹೊನ್ನೆ, ಕರಿಮುತ್ತಿ, ಅಳಲೆ, ಹುಣಸೆ, ಶ್ರೀಗಂಧ, ಬಾಗೆ, ಧೂಪ, ಕಗ್ಗಲಿ, ಕಾರೆ, ಪಾಲೆ, ಬಂದರಿ, ತಂಗಡಿ, ಕಕ್ಕೆ, ಸೀತಾಫಲ, ಕುರುಚಲು ಪೊದೆಗಳು ಕಂಡುಬರುತ್ತವೆ.[೨೦] ಇಂತಹ ಪರಿಸರ ಇರುವಲ್ಲಿ ಮಾತ್ರ ಕಾಡುಹಂದಿ, ಕರಡಿ, ಚಿರತೆ, ಮುಂಗುಸಿ, ಹಾವು, ಕಾಡುಕೋಳಿ, ಜಿಂಕೆ ಮೊದಲಾದ ಪ್ರಾಣಿ ಸಂಕುಲ ಕಂಡುಬರುತ್ತದೆ.

ತುಮಕೂರು ಜಿಲ್ಲೆಯ ಬೆಟ್ಟ-ಗುಡ್ಡಗಳ ಬಳಿ ಹೆಚ್ಚಾಗಿ ಕುರುಚಲು ಮಾದರಿಯ ಮುಳ್ಳಿನ ಪೊದೆಗಳು ಹರಡಿಕೊಂಡಿರುವುದು ಪಾಳೆಯಪಟ್ಟುಗಳಿಗೆ ವನದುರ್ಗಗಳಂತೆ ಅವು ರಕ್ಷಣಾಗೋಡೆಗಳಾಗಿಯೂ ಬಳಕೆಗೊಳ್ಳುತ್ತಿದ್ದವು. ಏಕೆಂದರೆ ಶತ್ರುಗಳಿಗೆ ಈ ಮುಳ್ಳಿನ ಪೊದೆಗಳು ಅತಿ ಪ್ರಯಾಸವನ್ನು ಉಂಟುಮಾಡಿ ಅವರ ದಾಳಿಯ ವೇಗವನ್ನು ಕುಂಠಿತಗೊಳ್ಳುವಂತೆ ಮಾಡುತ್ತಿದ್ದವು. ಕೆಲವೊಮ್ಮೆ ಶತ್ರುಗಳ ದಾಳಿಯನ್ನು ಅರಿತ ಸೈನಿಕರು ಮೊದಲೇ ಇಂತಹ ಪೊದೆಗಳಲ್ಲಿ ಅವಿತುಕೊಂಡು ಹಠಾತ್ತಾದ ಪ್ರತಿದಾಳಿಯನ್ನು ಮಾಡಲು ಅನುವು ಮಾಡಿಕೊಡುತ್ತಿದ್ದವು. ನಿಡುಗಲ್ಲು, ವೈ.ಎನ್.ಹೊಸಕೋಟೆ(ಎಲ್ಲಪ್ಪನಾಯಕನ ಹೊಸಕೋಟೆ), ಮಿಡಿಗೇಶಿ, ದೇವರಾಯನದುರ್ಗ, ಕಾಮನದುರ್ಗ, ಚನ್ನರಾಯನದುರ್ಗ ಮೊದಲಾದ ಕಡೆ ಇರುವ ನೆಲಗೋಟೆಗಳಲ್ಲಿ ಇಂದಿಗೂ ಇಂತಹ ಮುಳ್ಳಿನ ಪೊದೆ, ಕುರುಚಲು ಗಿಡಗಳಿಂದ ಕೂಡಿರುವಂತಹದ್ದೇ ಕಂದಕ ನಿರ್ಮಾಣದಂಥ ಕಾರ್ಯಕ್ಕೆ ಮುಂದಾಗದಿರುವುದರ ಹಿಂದಿನ ಉದ್ದೇಶವು ಆಗಿರಬಹುದು. ಇಂತಹ ಗಿಡ ಅಥವಾ ಪೊದೆಗಳ ವಿಶೇಷತೆ ಎಂದರೆ

ಬೆಂಕಿಯನ್ನು ಅತಿವೇಗವಾಗಿ ಹರಡುತ್ತದೆ. ಬೇಸಿಗೆಯ ಸಂದರ್ಭದಲ್ಲಿ ಏನಾದರೂ ಶತ್ರುಗಳು ದಾಳಿ ಮಾಡಿದರೆ ಇಂತಹ ಮೊದೆಗಳಿಗೆ ಬೆಂಕಿಯನ್ನು ಹಚ್ಚಿದರೆ ಅದು ಬಹುಬೇಗ ವಿಶಾಲ ಪ್ರದೇಶವನ್ನು ವ್ಯಾಪಿಸಿಕೊಂಡು ಶತ್ರು ಪಾಳೆಯದಲ್ಲಿ ಅಪಾರ ಸಾವು-ನೋವು ಉಂಟಾಗುವಂತೆ ಮಾಡುತ್ತಿತ್ತು. ಆದುದರಿಂದಲೇ ಜಿಲ್ಲೆಯ ಪಾಳೆಯಪಟ್ಟುಗಳು ಕುರುಚಲು ಗಿಡಗಳ ಬೆಳವಣಿಗೆಗೆ ಆದ್ಯತೆ ನೀಡುತ್ತಿದ್ದರೆಂದು ಇಂದಿಗೂ ಈ ಪರಿಸರದಲ್ಲಿ ಕಂಡುಬರುವ ಕುರುಚಲು ಗಿಡಗಳಿಂದ ತಿಳಿಯುತ್ತದೆ. ಬಹುಶಃ ಓಬನಾಯಕನದುರ್ಗ, ಬೆನಕನಹಳ್ಳಿ, ಕೊರಟಗೆರೆ, ಸಿದ್ಧರಬೆಟ್ಟ, ಇಂದ್ರಬೆಟ್ಟ, ಹೊಸದುರ್ಗ, ಹೊಸಹಳ್ಳಿ, ಸಿಂಗರೆಡ್ಡಿಹಳ್ಳಿ, ಕನಿಕಲಬಂಡೆ ಮೊದಲಾದಂತಹ ಗಿರಿದುರ್ಗಗಳಲ್ಲಿ ಕೇವಲ ಕಾವಲುಗಾರನ ವಸತಿ ಅದರ ಸುತ್ತ ಆಯತ ಇಲ್ಲವೆ ವೃತ್ತಾಕಾರದ ಕೋಟೆ ಗೋಡೆ ಮಾತ್ರ ನಿರ್ಮಾಣಗೊಂಡಿವೆ ಎಂದರೆ ಇಂತಹ ಸ್ವಾಭಾವಿಕ ಅಭೇದ್ಯತೆ ಇದ್ದಾಗ ಮಾತ್ರ ಅದು ಸಾಧ್ಯವಾಗುತ್ತದೆ. ಏಕೆಂದರೆ ಬೃಹತ್ ಪ್ರಮಾಣದ ಅರಣ್ಯ ಇದ್ದರೆ ಅದರ ರಚನಾ ವಿನ್ಯಾಸವೇ ಬೇರೆಯ ರೀತಿಯಲ್ಲಿ ಇರುತ್ತಿತ್ತು. ಆದ್ದರಿಂದ ಜಿಲ್ಲೆಯಲ್ಲಿ ಬೃಹತ್ ಅರಣ್ಯ ಪ್ರದೇಶ ಇರುವೆಡೆಗೂ ಮತ್ತು ಇಲ್ಲದಿರುವಲ್ಲಿಗೂ ಇರುವ ವ್ಯತ್ಯಾಸವನ್ನು ಸಹಜವಾಗಿಯೇ ಗುರುತಿಸಲು ಸಾಧ್ಯವಿದೆ.

ತುಮಕೂರು ಜಿಲ್ಲೆಯಲ್ಲಿ ಕುರುಚಲು ಗಿಡ ಮತ್ತು ಹುಲ್ಲುಗಾವಲು ಪ್ರದೇಶ ಹೆಚ್ಚಿನ ಪ್ರಮಾಣದಲ್ಲಿ ಇರುವುದರಿಂದ ಪಶುಪಾಲಕ ಸಂಸ್ಕೃತಿ ಜಿಲ್ಲೆಯಾದ್ಯಂತ ವ್ಯಾಪಿಸಿಕೊಂಡಿರುವುದು ಕಂಡುಬರುತ್ತದೆ. ಇಂದಿಗೂ ಜಿಲ್ಲೆಯ ಯಲ್ಲಪ್ಪನಾಯಕನಹಳ್ಳಿ, ಕೊಲಮೆಗೆರೆ ರಾಂಪುರ, ಜೆಟ್ಟಿಅಗ್ರಹಾರ, ಪುಲುಮಾಚಿ ಮೊದಲಾದೆಡೆ ದನದ ಮಂದೆಗಳಿವೆ. ಇವು ಪ್ರಾಚೀನ ಕಾಲದಲ್ಲಿ ಸಂಪತ್ತಿನ ಸಂಕೇತ ಆಗಿದ್ದರಿಂದ ಇವುಗಳ ರಕ್ಷಣೆಗಾಗಿ ಕೋಟೆಗಳನ್ನು ನಿರ್ಮಿಸುತ್ತಿದ್ದರು ಎಂಬ ಅಂಶ ಜಿಲ್ಲೆಯಲ್ಲಿ ಕಂಡುಬಂದ ತುರುಗೋಳ್‌ಗಳ ಉಲ್ಲೇಖ, ಪಶು ಸಂಬಂಧಿ ಐತಿಹ್ಯ, ಪಾಳೆಯಗಾರರ ರಾಯರೇಖೆ, ಕಾವಲ್ ಎಂಬ ಸ್ಥಳನಾಮ (ಬಿದರಕೆರೆಕಾವಲು, ಅಮೃತ್‌ಕಾವಲ್, ಕಾವಲ್‌ರಂಗಾಪುರ, ಹನುಮಂತರಾಯನ ಕಾವಲ್) ಮೊದಲಾದ ಆಕರಗಳಿಂದ ತಿಳಿಯುತ್ತದೆ. ಪರಿಸರದಲ್ಲಿ ಇಂದಿಗೂ ಮನುಷ್ಯನೇ ಬೆಟ್ಟ ಏರಲು ತ್ರಾಸದಾಯಕ ಪಡುವಲ್ಲಿ ಸ್ಥಳೀಯವಾದ ದನದ ಮಂದೆ ಸರಾಗವಾಗಿ ಏರುತ್ತವೆ ಎಂದರೆ ಬಹುಶಃ ಪಾಳೆಯಗಾರರು ಆಯಾಯ ಪರಿಸರಕ್ಕೆ ಹೊಂದಿಕೊಳ್ಳುವ ತಳಿಗಳನ್ನು ಆಯಾಯ ಕಾಲಕ್ಕೆ ತಕ್ಕಂತೆ ಅಭಿವೃದ್ಧಿ ಪಡಿಸುತ್ತಿದ್ದಿರಬೇಕು. ಏಕೆಂದರೆ ಯುದ್ಧ, ವ್ಯಾಪಾರ, ವಹಿವಾಟಿನ ಸಂದರ್ಭದಲ್ಲಿ ಆಹಾರ ಸಾಮಗ್ರಿಗಳನ್ನು ಸಾಗಿಸಲು ಈ ಪಶುಗಳೇ ಸಾರಿಗೆ ಮಾಧ್ಯಮವಾಗಿ ಅಂದು ಪ್ರಚಲಿತವಿದ್ದರಿಂದ ಅವುಗಳ ರಕ್ಷಣೆಗಾಗಿಯೂ ಕ್ರಮಕೈಗೊಳ್ಳುತ್ತಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಹಾಗಲವಾಡಿ ಮೇಲೆ ಬಿಜಾಪುರದ ಸೇನಾಧಿಪತಿ ರಣದುಲ್ಲಾಖಾನನು ದಾಳಿ ಮಾಡಿದಾಗ ತಮ್ಮನ್ನು ತಾವು ರಕ್ಷಿಸಿಕೊಳ್ಳಲು ನಾಯಕರು

ರಾತ್ರಿಯ ವೇಳೆಯಲ್ಲಿ ಪಶುಗಳ ಕೋಡುಗಳಿಗೆ ಪಂಜುಗಳನ್ನು ಕಟ್ಟಿ ಶತ್ರು ಸೈನ್ಯದ ಮೇಲೆ ಹರಿಬಿಟ್ಟಿದ್ದರಿಂದ ರಣದುಲ್ಲಾಖಾನ್ ಅನಿವಾರ್ಯವಾಗಿ ಸಂಧಾನ ಮಾಡಿಕೊಳ್ಳಬೇಕಾಯಿತು. ಅಂದರೆ ಪಾಳೆಯಪಟ್ಟುಗಳು ತಮ್ಮ ರಕ್ಷಣೆಗಾಗಿ ಪ್ರಾಣಿಸಂಕುಲವನ್ನು ಹೇಗೆಲ್ಲಾ ಬಳಸಿಕೊಳ್ಳುತ್ತಿದ್ದವು ಎಂಬುದು ಇದರಿಂದ ಗೋಚರಿಸುತ್ತದೆ.

೨.೧.೬. ವಾಯುಗುಣ, ಹವಾಮಾನ ಮತ್ತು ಜನಸಾಂಧ್ರತೆ

ತುಮಕೂರು ಜಿಲ್ಲೆಯು ಉತ್ತರ ದಕ್ಷಿಣವಾಗಿ ೧೦೨ ಮೈಲಿ, ಪೂರ್ವ ಪಶ್ಚಿಮವಾಗಿ ೬೭ ಮೈಲಿ ಉದ್ದಗಲವಿದೆ. ಒಟ್ಟು ೪೦೭೩೭ ಚದರ ಮೈಲಿ ವಿಸ್ತೀರ್ಣವನ್ನು ಹೊಂದಿದೆ.[೨೧] ಜಿಲ್ಲೆಯು ೧೩.೫೩ರಿಂದ ೧೪.೨೭ರವರೆಗಿನ ಅಕ್ಷಾಂಶ ಹಾಗೂ ೭೭ರಿಂದ ೭೭.೩೧ವರೆಗಿನ ರೇಖಾಂಶ ಪ್ರದೇಶದಲ್ಲಿದೆ.[೨೨] ಸಮುದ್ರ ಮಟ್ಟದಿಂದ ಸರಾಸರಿ ೨೭೦೦ ಅಡಿ ಎತ್ತರದಲ್ಲಿರುವ ಜಿಲ್ಲೆಯು ಉಷ್ಣವಲಯದಲ್ಲಿ ಇದ್ದರೂ ಸಹ ದಕ್ಷಿಣದ ಸುಡುಬಿಸಿಲಾಗಲಿ, ಉತ್ತರದ ಉರಿಗಾಳಿಯಾಗಲಿ, ಅತಿವೃಷ್ಠಿ ಮತ್ತು ಅನಾವೃಷ್ಠಿಗಳು ಸಂಭವಿಸುವುದಿಲ್ಲ. ಅದೇ ರೀತಿ ಶಿವಮೊಗ್ಗದ ಕುಳಿಗಾಳಿ, ಕೋಲಾರದ ಒಣಹವೆ, ಮದ್ರಾಸಿನ ಕಡೆಯಿಂದ ಬಿಸಿ ಬರುವ ಸೈಕ್ಲೋನ್(ನೀರ್ಗಾಳಿ)ಗಳ ಹಾವಳಿ, ಪಶ್ಚಿಮದ ಕರಾವಳಿಯಲ್ಲಾಗುವ ಭೋರ್ಗರೆವ ಕುಂಭದ್ರೋಣಗಳು ಸಹ ಕಂಡುಬರುವುದಿಲ್ಲ. ಆದುದರಿಂದಲೇ ಜಿಲ್ಲೆಯು ಪ್ರಾಗಿತಿಹಾಸಿಕ ಕಾಲದಿಂದಲೂ ವಾಸಯೋಗ್ಯವಾದ ಸುರಕ್ಷಿತ ಪ್ರದೇಶವಾಗಿ ಉತ್ತರ, ದಕ್ಷಿಣದಿಂದ ವಲಸೆ ಬಂದ ಸಂಸ್ಕೃತಿ ಮತ್ತು ಸಮುದಾಯಗಳಿಗೆ ಆಶ್ರಯ ತಾಣವಾಗಿತ್ತು. ಉದಾಹರಣೆಗೆ ತಮಿಳುನಾಡಿನ ಕಂಚಿಪಲ್ಲವರೊಂದಿಗೆ ತಮ್ಮ ಮೂಲವನ್ನು ಗುರುತಿಸಿಕೊಳ್ಳುವ ನೊಳಂಬರು ಹೇಮಾವತಿಯಲ್ಲಿ, ಆಂಧ್ರದ ಚೋಳರು ನಿಡುಗಲ್ಲಿನಲ್ಲಿ, ರಾಷ್ಟ್ರಕೂಟರ ಯುವರಾಜ ಸ್ತಂಭನು ಕುಣಿಗಲ್ಲಿನಲ್ಲಿ, ಸೊನ್ನಾಲಿಗೆಯಿಂದ ಬಂದ ಮಹನಾಡ ಪ್ರಭುಗಳು ಬಿಜ್ಜಾವರ, ಕೋರಾ, ಎಣ್ಣೆಗೆರೆ, ಮುಮ್ಮಡಿಪಟ್ಟಣ, ಹೊಸಹಳ್ಳಿ ಮೊದಲಾದೆಡೆ ನೆಲೆ ನಿಲ್ಲಲು ಮುಂದಾದದ್ದು ಈ ಕಾರಣದಿಂದಲೇ ಇರಬೇಕು.

ಜಿಲ್ಲೆಯ ಹವಾಗುಣವು ಡಿಸೆಂಬರ್‌ನಿಂದ ಫೆಬ್ರವರಿ ತಿಂಗಳವರೆಗೆ ಗರಿಷ್ಠ ೩೦.೯೦ ಡಿಗ್ರಿ ಸೆಂಟಿಗ್ರೇಡ್ ಉಷ್ಣಾಂಶ ಹೊಂದಿರುತ್ತದೆ. ಶೇ.೬೭ರಷ್ಟು ಮಾತ್ರ ಗಾಳಿಯಲ್ಲಿ ತೇವಾಂಶ ಇರುತ್ತದೆ. ಮಾರ್ಚ್‌ನಿಂದ ಮೇ ತಿಂಗಳವರೆಗೆ ಬಿಸಿ ಹವಾಗುಣವಿದ್ದು, ೪೦ ಡಿಗ್ರಿಯಿಂದ ೪೧ ಡಿಗ್ರಿ ಸೆಂಟಿ ಗ್ರೇಡ್‌ವರೆಗೆ ಉಷ್ಣಾಂಶವಿರುತ್ತದೆ. ಜೂನ್‌ನಿಂದ ಆಗಸ್ಟ್ ತಿಂಗಳಲ್ಲಿ ಸರಾಸರಿ ೫೨೯.೯. ಮೀ.ಮೀ. ಮಳೆ ಆದರೂ ಬಿಸಿ ಹವಾಮಾನವಿರುತ್ತದೆ. ಈ ಅವಧಿಯಲ್ಲಿ ಜಿಲ್ಲೆಯ ಬಹುಭಾಗ ಹಸಿರಿನಿಂದ ಕೂಡಿ ಅಂತರ್ಜಲ ಮಟ್ಟವನ್ನು ಹೆಚ್ಚಿಸಿಕೊಳ್ಳುತ್ತದೆ. ಅಕ್ಟೋಬರ್ ಮತ್ತು ನವೆಂಬರ್ ತಿಂಗಳುಗಳಲ್ಲಿ ಮಾರುತಗಳು ಈಶಾನ್ಯ ದಿಕ್ಕಿನಿಂದ ಬೀಸುವುದರಿಂದ ಬಂಗಾಳ ಕೊಲ್ಲಿಯಲ್ಲಿ ಉಂಟಾಗುವ ಆವರ್ತ ಮಾರುತಗಳಿಂದ ಮಳೆ ಬರುವ ಸಾಧ್ಯತೆ ಇರುತ್ತದೆ.

ಹೀಗೆ ಎಲ್ಲಾ ದಿಕ್ಕುಗಳಿಂದಲೂ ಸುರಕ್ಷೆಯಿಂದಿರುವ ತುಮಕೂರು ಜಿಲ್ಲೆಯಲ್ಲಿ ವಿವಿಧ ಸಮುದಾಯ, ಸಂಸ್ಕೃತಿಗಳು ಇಂದಿಗೂ ಸಮೃದ್ಧವಾಗಿರುವಂತೆ ಮಾಡಿದೆ. ಜಿಲ್ಲೆಯ ಬೆಟ್ಟ ಗುಡ್ಡಗಳ ಬಳಿ ಇಂದಿಗೂ ಬೇಡ, ಕಾಡುಗೊಲ್ಲ, ಕುರುಬ ಬುಡಕಟ್ಟು ಸಮುದಾಯಗಳೇ ವಾಸವಿರುವುದು ಕಂಡುರುತ್ತದೆ. ಸದೃಢ ದೇಹಕಟ್ಟನ್ನು ಹೊಂದಿರುವ ಈ ಬುಡಕಟ್ಟು ಜನರು ಪಾಳೆಯಪಟ್ಟು ಹಾಗೂ ಅರಸು ಮನೆತನಗಳಿಗೆ ಬೇಕಾದ ಸೈನಿಕ ಶಕ್ತಿಯನ್ನು ಬಳಸಿಕೊಳ್ಳಲು ಅನುವು ಮಾಡಿಕೊಟ್ಟಿತು. ವಿಶೇಷವಾಗಿ ಜಿಲ್ಲೆಯಲ್ಲಿ ಅಧಿಕಾರಕ್ಕೆ ಬಂದವರೆಲ್ಲ ಬುಡಕಟ್ಟು ಮೂಲದವರೇ ಆಗಿರುವುದರಿಂದ ಅವರ ಸೈನಿಕ ಶಕ್ತಿಯನ್ನು ಇಮ್ಮಡಿಗೊಳಿಸಿತು. ಬಹುಶಃ ಈ ಕಾರಣಕ್ಕಾಗಿಯೇ ಭಾಗದ ಪಾಳೆಯಪಟ್ಟುಗಳಿಂದ ನುರಿತಂಥ ಬೇಡ ಪಡೆಯನ್ನು ಕೋಟೆಕಾಳಗಕ್ಕೆ ಪಡೆದುಕೊಳ್ಳುತ್ತಿದ್ದರೆಂದು ಕೃಷ್ಣದೇವರಾಯ ಆಮುಕ್ತ ಮೌಲ್ಯದ ಎಂಬ ಕೃತಿಯಲ್ಲಿ ಉಲ್ಲೇಖಿಸಿದ್ದಾನೆ. ಅದೇ ರೀತಿ ಮೈಸೂರು ಒಡೆಯರಿಗೆ ಅಂಗರಕ್ಷಕ ಪಡೆಯು ಇಂತಹ ಬೇಡಪಡೆಯಿಂದಲೇ ಕೂಡಿತ್ತು ಎಂದರೆ ಅವರಿಗೆ ಈ ಬೇಡಪಡೆ ಎಲ್ಲಿಂದ, ಯಾರು ತರಬೇತಿಗೊಳಿಸಿ ಕಳುಹಿಸುತ್ತಿದ್ದರು ಎಂಬ ಸಂದೇಹ ಉಂಟಾಗುತ್ತದೆ. ಅವರ ಅಧೀನ ಪಾಳೆಯಗಾರರು ಬೇಡ ಪಡೆಯನ್ನು ತರಬೇತಿಗೊಳಿಸಿ ಕಳುಹಿಸುವ ಜವಾಬ್ದಾರಿ ಹೊತ್ತುಕೊಂಡಿದ್ದರು ಎಂಬ ಅಂಶ ಇದರಿಂದ ಗೋಚರವಾಗುತ್ತದೆ. ಸಾಮಾನ್ಯವಾಗಿ ಯಾವುದೇ ಒಂದು ಚರಿತ್ರೆ ರಚಿಸುವಾಗ ಅಲ್ಲಿಯ ಸುತ್ತಲಿನ ಪರಿಸರದೊಂದಿಗೆ ತೌಲನಿಕವಾಗಿ ಅಧ್ಯಯನ ಮಾಡಿದಾಗ ಮಾತ್ರ ಸ್ಥಳಿಯ ಚರಿತ್ರೆಯನ್ನು ಕಟ್ಟಿಕೊಡಲು ಸಾಧ್ಯವಾಗುತ್ತದೆ. ಏಕೆಂದರೆ ಯಾವುದೇ ಒಂದು ಪ್ರದೇಶದ ಸಾಂಸ್ಕೃತಿಕ ಚಹರೆಯನ್ನು ತಿಳಿಯದೇ ಆ ಪರಿಸರವನ್ನು ಆಳ್ವಿಕೆ ನಡೆಸಿದ ರಾಜ ಮಹಾರಾಜರ ಚರಿತ್ರೆಯನ್ನು ಅಧ್ಯಯನ ಮಾಡಿದಾಗ ಅದು ಅಪರಿಪೂರ್ಣವಾಗುತ್ತದೆ. ಉದಾಹರಣೆಗೆ ಹೇಮಾವತಿಯ ೧೨ನೇ ಶತಮಾನದ ಶಾಸನ ನೊಳಂಬರ ಮೂಲವನ್ನು ತಿಳಿಸುತ್ತ 'ಪಲ್ಲವಜಾತಃ ಕುಲತಿಲಕ ಮೌನಿಶ್ವರ ವಂಶಜ ಕಿರಾತನೃಪ' ಎಂದು ಉಲ್ಲೇಖಿಸುತ್ತದೆ. ಅಂದರೆ ಶಾಸನ ಸಾರವು ಬೇಟೆಯಲ್ಲಿ ನುರಿತ ಅರಸನೊಬ್ಬ ಎಂಬ ಅರ್ಥವನ್ನು ನೀಡುತ್ತದೆ. ಸಹಜವಾಗಿ ಬೇಟೆಯಲ್ಲಿ ನುರಿತ ಅರಸನೆಂದರೆ ಆತ ಬುಡಕಟ್ಟು ಮೂಲದವನಿರಬೇಕು ಎಂಬ ಅಂಶ ಸ್ಪಷ್ಟವಾಗುತ್ತದೆ. ಏಕೆಂದರೆ ಶಿಷ್ಟ ಪಂಗಡಗಳು ಎಂದಿಗೂ ಬೇಟೆಯಲ್ಲಿ ನುರಿತಂಥವರಲ್ಲ. ಹೀಗಿದ್ದರೂ ನೊಳಂಬರನ್ನು ವೀರಶೈವರೆಂದು ಗುರುತಿಸುವಲ್ಲಿ ಅರ್ಥವಿಲ್ಲ. ಇದಕ್ಕೆ ಪೂರಕವಾಗಿ ಹೇಮಾವತಿ ಪರಿಸರದಲ್ಲಿ ಇಂದಿಗೂ ಬೇಟೆಯಲ್ಲಿ ನುರಿತಂತಹ ಬೇಡ ಸಮುದಾಯವೇ ವಾಸವಾಗಿರುವುದು ಕಂಡುಬರುತ್ತದೆ. ಆದುದರಿಂದ ಶಾಸನದ ಉಲ್ಲೇಖಕ್ಕೂ ಸ್ಥಳೀಯವಾಗಿ ದೊರೆಯುವ ಸಾಂಸ್ಕೃತಿಕ ಚಹರೆಗೂ ಸಾಮ್ಯತೆಯನ್ನು ಕಂಡುಕೊಂಡಾಗ ಮಾತ್ರ ನೈಜ ಚಿತ್ರಣವನ್ನು ನೀಡಲು ಸಾಧ್ಯ. ಆದ್ದರಿಂದ ಯಾವುದೇ ಒಂದು ಪ್ರದೇಶದಲ್ಲಿ ಯೋಧ ಪರಂಪರೆಯ

ಹಿನ್ನೆಲೆಯುಳ್ಳ ಸಮುದಾಯ ಇದೆ ಎಂದರೇ ಅಲ್ಲಿ ಅವರೇ ಅಧಿಕಾರದ ಗದ್ದುಗೆಯನ್ನು ಏರಲು ಸಾಧ್ಯವಾಗುತ್ತದೆಯೆ ಹೊರತು ಮತ್ತಾವುದೋ ಸಮುದಾಯ ಅಧಿಕಾರಕ್ಕೆ ಬರಲು ಸಾಧ್ಯವಿಲ್ಲ. ಆದುದರಿಂದ ಬುಡಕಟ್ಟು ಮೂಲದವರೇ ಹೆಚ್ಚಿನ ಸಂಖ್ಯೆಯಲ್ಲಿ ಇರುವ ಜಿಲ್ಲೆಯಲ್ಲಿ ಸುಮಾರು ೪೦ಕ್ಕೂ ಹೆಚ್ಚು ಸಣ್ಣಪುಟ್ಟ ಪಾಳೆಯಪಟ್ಟುಗಳು ಅಧಿಕಾರವನ್ನು ಪಡೆಯುವಂತೆ ಮಾಡಿತು. ಅದರ ಕುರುಹಾಗಿ ಇಂದು ಜಿಲ್ಲೆಯಲ್ಲಿ ೩೦೦ಕ್ಕೂ ಅಧಿಕ ಕೋಟೆ ಕೊತ್ತಲಗಳನ್ನು ಕಾಣಲು ಸಾಧ್ಯವಾಗುತ್ತದೆ.

೨.೩. ಪ್ರಾಗಿತಿಹಾಸ ಕಾಲ

ಜಗತ್ತಿನಲ್ಲಿ ಮನುಷ್ಯ ತನ್ನನ್ನು ತಾನೆ ಸಂಪೂರ್ಣವಾಗಿ ತರಬೇತಿಗೊಳಪಡಿಸಿಕೊಂಡ ಏಕೈಕ ಪ್ರಾಣಿ.[೨೩] ಅವನು ಎಲ್ಲಿಂದ ಬಂದ, ಹೇಗೆ ಹುಟ್ಟಿದ, ಹೇಗೆ ಬೆಳೆದ, ಅವನ ಕಾಲದ ವ್ಯವಸ್ಥೆ ಹೇಗಿತ್ತು ಎಂಬಂತಹ ವಿಷಯಗಳು ಕುತೂಹಲ ಮೂಡಿಸುತ್ತವೆ. ಹಾಗಾಗಿ ಅಕ್ಷರ ಜ್ಞಾನವಿಲ್ಲದ ಅಂದಿನ ಸಾಂಸ್ಕೃತಿಕ ಬದುಕನ್ನು ನಿರ್ವಚಿಸುವುದು ಕಷ್ಟಸಾಧ್ಯವೇ ಸರಿ. ಆದರೂ ಆಯಾಯ ಕಾಲಘಟ್ಟಗಳಲ್ಲಿ ಜೀವಿಸಿದ್ದ ಮನುಷ್ಯ ಮತ್ತು ಆತ ಬಳಸಿ ಬಿಟ್ಟು ಹೋಗಿರುವ ಭೌತಿಕ ಕುರುಹುಗಳಾದ ವಾಸವಿದ್ದ ಪ್ರದೇಶ, ಗುಹೆ, ಕಟ್ಟಡ, ಚಿತ್ರಕಲೆ, ಮಡಿಕೆ–ಕುಡಿಕೆ, ಆಯುಧ–ಉಪಕರಣ ಮೊದಲಾದ ಪ್ರಾಚ್ಯಾವಶೇಷಗಳಿಂದ ಅವರ ಸಾಂಸ್ಕೃತಿಕ ಚಿತ್ರಣವನ್ನು ರೂಪಿಸಲು ಸಾಧ್ಯವಿದೆ. ಪ್ರಾಗಿತಿಹಾಸ ಮಾನವ ಹುಟ್ಟಿನಿಂದಲೇ ಕೌಶಲಗಳ ತರಬೇತಿಯನ್ನು ಪಡೆಯುತ್ತಾ ನಿರಂತರವಾಗಿ ತನ್ನನ್ನು ತಾನು ಪರಿವರ್ತನಾಶೀಲನನ್ನಾಗಿಸಿಕೊಳ್ಳುತ್ತ ಹಲವು ಸಂಸ್ಕೃತಿಗಳ ಹುಟ್ಟಿಗೂ ಕಾರಣನಾಗಿದ್ದಾನೆ. ಆತನ ಬದುಕುನ್ನು ಅರಿತುಕೊಳ್ಳಬೇಕೆಂದರೆ ಆತ ವಿವಿಧ ಕಾಲಘಟ್ಟಗಳಲ್ಲಿ ಸವೆಸಿದ ಬದುಕನ್ನು ತಿಳಿದುಕೊಳ್ಳುವುದು ಅಗತ್ಯವಾಗುತ್ತದೆ. ಏಕೆಂದರೆ ಪ್ರಾಗಿತಿಹಾಸ ಕಾಲದ ಅದೆಷ್ಟೋ ಸಂಪ್ರದಾಯ, ರೂಢಿ, ಆಚರಣೆ, ನಂಬಿಕೆಗಳು ಇಂದಿಗೂ ಹಲವು ಸಮುದಾಯಗಳಲ್ಲಿ ಜೀವಂತವಾಗಿರುವುದು ಕಂಡುಬರುತ್ತದೆ. ಕೆಲವೊಮ್ಮೆ ಆಯಾಯ ಪರಿಸರದಲ್ಲಿ ದೊರೆತ ಪ್ರಾಗಿತಿಹಾಸ ಮಾನವನ ಕುರುಹುಗಳಿಗೂ ಅಲ್ಲಿಯೇ ಸುತ್ತಲಿನ ಪರಿಸರದಲ್ಲಿ ವಾಸಿಸುವ ಸಮುದಾಯಗಳ ಜೀವನ ಶೈಲಿಗೂ ಅನ್ಯೋನ್ಯ ಸಂಬಂಧವಿರುತ್ತದೆ. ಅಂತಹ ಸಂಗತಿಗಳನ್ನು ಅರಿತು ಅವುಗಳನ್ನು ತೌಲನಿಕವಾಗಿ ಯತ್ನೋಆರ್ಕಿಯಲಾಜಿಯ ಸಹಾಯದಿಂದ ಅಧ್ಯಯನಕ್ಕೆ ಒಳಪಡಿಸಿದರೆ ಅಲ್ಲಿಯ ಪ್ರಾಗಿತಿಹಾಸ ಮನುಷ್ಯನ ನೈಜ ಸಂಗತಿಗಳನ್ನು ಬೆಳಕಿಗೆ ತರಲು ಸಾಧ್ಯವಾಗುತ್ತದೆ. ಈ ದೃಷ್ಟಿಕೋನದಲ್ಲಿ ತುಮಕೂರು ಜಿಲ್ಲೆಯ ಪ್ರಾಗಿತಿಹಾಸ ಮನುಷ್ಯನ ಸಾಂಸ್ಕೃತಿಕ ಬದುಕನ್ನು ನಿರ್ವಚಿಸುವ ಕಾರ್ಯ ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಭಾರತದಲ್ಲಿ ಪ್ರಾಗಿತಿಹಾಸದ ಅಧ್ಯಯನವನ್ನು ಅವಲೋಕಿಸಿದರೆ ಕ್ಯೂಬೋಲ್ಡ್ ಎಂಬ ಬ್ರಿಟಿಷ್ ಅಧಿಕಾರಿ ೧೮೩೬ರಲ್ಲಿ ಕರ್ನಾಟಕದ ಕುಡುತಿನಿ ಮತ್ತು ಕಪ್ಪಗಲ್ ನೆಲೆಗಳನ್ನು

ಶೋಧಿಸುವುದರ ಮೂಲಕ ಭಾರತದ ಪ್ರಾಗಿತಿಹಾಸದ ಅಧ್ಯಯನವನ್ನು ಆರಂಭಿಸಿದರು. ಕರ್ನಾಟಕದ ಪ್ರಾಗಿತಿಹಾಸ ಮಾನವನ ಸಾಂಸ್ಕೃತಿಕ ಬದುಕಿಗಿಂತಲೂ ತುಮಕೂರು ಪ್ರದೇಶವೇನು ಹೊರತಾಗಿಲ್ಲ. ಆದರೂ ಕರ್ನಾಟಕದಲ್ಲಿ ಅತಿಹೆಚ್ಚು ಸುಮಾರು ೪೦೦ಕ್ಕೂ ಅಧಿಕ ಪ್ರಾಗಿತಿಹಾಸ ನೆಲೆಗಳಿವೆ ಎಂದಾಗ ಜಿಲ್ಲೆಯ ಪ್ರಾಗಿತಿಹಾಸ ನೆಲೆಗಳ ಕುರಿತು ಆಲೋಚಿಸುವಂತೆ ಮಾಡುವಂತಹ ಸಂಗತಿ ಸಹಜವಾಗಿದೆ. ಇಷ್ಟೊಂದು ನೆಲೆಗಳು ಒಂದೇ ಜಿಲ್ಲೆಯಲ್ಲಿ ಇರಲು ಕಾರಣವಾದರೂ ಏನಿರಬಹುದು ಎಂಬ ಸಂದೇಹ ಉಂಟಾಗುತ್ತದೆ. ಜಿಲ್ಲೆಯ ಪೂರ್ವ ಭಾಗದಲ್ಲಿ ಉತ್ತರ ದಕ್ಷಿಣವಾಗಿ ಹುತ್ರಿದುರ್ಗದಿಂದ ನಾಗಲಾಪುರದವರೆಗೆ ಸುಮಾರು ೨೫೦ಕ್ಕೂ ಅಧಿಕ ಬೆಟ್ಟಗುಡ್ಡಗಳಿಂದ ಕೂಡಿದೆ. ಪಶ್ಚಿಮದಲ್ಲಿ ವಿಶಾಲ ಫಲವತ್ತಾದ ಕೆಂಪು ಮಿಶ್ರಿತ ಮಣ್ಣು, ಚಿಕ್ಕನಾಯಕನಹಳ್ಳಿ, ಗುಬ್ಬಿ, ತುರುವೆಕೆರೆ, ತಿಪಟೂರು ತಾಲೂಕುಗಳಲ್ಲಿ ಬೆಣಚುಕಲ್ಲು, ಉಳಿದೆಡೆ ಡೈಕ್ ಮತ್ತು ಬಸಾಲ್ಟ್ ಶಿಲಾಸಮುಚ್ಚಯ, ಮಡಿಕೆ ಕುಡಿಕೆಗಳ ತಯಾರಿಕೆಗೆ ಬೇಕಾಗುವ ಜೇಡಿಮಣ್ಣು, ಮಳೆಗಾಲದಲ್ಲಿ ಮೃದುವಾಗುವಂತಹ ಭೂ ರಚನೆ, ದಟ್ಟವಾದ ಅಭಯಾರಣ್ಯಗಳು ಇಲ್ಲದಿರುವಂತಹದ್ದು, ಕುರುಚಲು ಮತ್ತು ಎಲೆ ಉದುರುವ ಗಿಡಗಳು, ವರ್ಷಪೂರ್ತಿ ನೀರಿನ ಸಂಗ್ರಹಣೆಗಾಗಿ ಇರುವ ದೊಡ್ಡ ಕುಣಿಗಳಂತಹ ಶಿಲಾ ರಚನೆ, ಬೇಟೆಯಾಡಲು ಸಣ್ಣಪುಟ್ಟ ಪ್ರಾಣಿಸಂಕುಲ ಹಾಗೂ ಅವುಗಳನ್ನು ಹಿಡಿಯಲು ನೈಸರ್ಗಿಕವಾದ ಕಲ್ಲಾಸರೆ, ಪೊಟರೆ, ಕಲ್ಲು ಗುಂಡುಗಳ ಮಧ್ಯೆ ಅವಿತುಕೊಳ್ಳಲು ಇರುವಂತಹ ಬೆಟ್ಟಗುಡ್ಡಗಳ ರಚನೆಯು ಪ್ರಾಗಿತಿಹಾಸ ಮನುಷ್ಯನಿಗೆ ವಾಸಯೋಗ್ಯ ಪ್ರದೇಶವನ್ನು ಒದಗಿಸಿದೆ. ಆದುದರಿಂದಲೇ ಪ್ರಾಗಿತಿಹಾಸ ಕಾಲದ ಅತಿ ಹೆಚ್ಚು ವಸತಿನೆಲೆಗಳು ಜಿಲ್ಲೆಯಲ್ಲಿ ಕಂಡುಬಂದಿವೆ.

ಹೇರಳವಾದ ಅರಣ್ಯ ಸಂಪನ್ಮೂಲ, ಕಟ್ಟಡ ಮತ್ತು ಆಯುಧೋಪಕರಣ ತಯಾರಿಕೆಗೆ ಬೇಕಾಗುವ ಶಿಲಾ ಸಮುಚ್ಚಯ, ವರ್ಷವಿಡೀ ಯಾವ ದಿಕ್ಕಿನಿಂದಲೂ ಎಂತಹ ದುಷ್ಪರಿಣಾಮಗಳನ್ನು ಬೀರದಂತಹ ವಾತಾವರಣ ಇರುವುದರಿಂದ ತುಮಕೂರು ಜಿಲ್ಲೆಯಲ್ಲಿ ಶ್ರೀಮಂತಿಕೆಯಿಂದ ಕೂಡಿದ ಹಲವು ಪ್ರಾಗಿತಿಹಾಸ ಕಾಲದ ನೆಲೆಗಳು ಕಂಡುಬರುತ್ತವೆ. ಕಿಬ್ಬನಾಯಕಹಳ್ಳಿಯ ಅಶುಲೀಯನ್ ಮಾದರಿಯ ಕೈಗಾರಿಕಾ ನೆಲೆ ಇರುವುದು ಜಿಲ್ಲೆಯಲ್ಲಿ ಶ್ರೀಮಂತ ಸಂಸ್ಕೃತಿ ಇತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ. ಜಿಲ್ಲೆಯಲ್ಲಿ ಹಲವು ವಿದ್ವಾಂಸರು ೨೬೬ಕ್ಕೂ ಹೆಚ್ಚು ನೆಲೆಗಳನ್ನು ಶೋಧಿಸಿದ್ದು, ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ೫೩ ಹೊಸದಾದ ಪ್ರಾಗಿತಿಹಾಸ ನೆಲೆಗಳನ್ನು ಶೋಧಿಸಿ ಅವುಗಳ ವೈವಿಧ್ಯತೆಯನ್ನು ಚರ್ಚಿಸಲಾಗಿದೆ. ಆದರೂ ಜಿಲ್ಲೆಯಾದ್ಯಂತ ಮತ್ತಷ್ಟು ಸೂಕ್ಷ್ಮವಾಗಿ ಅಧ್ಯಯನ ಮಾಡಿದರೆ ಇನ್ನಷ್ಟು ಹೊಸದಾದ ಸಂಗತಿಗಳನ್ನು ಬೆಳಕಿಗೆ ತರುವಲ್ಲಿ ಸಾಧ್ಯವಾಗುತ್ತದೆ.

೨.೩.೧. ಆದಿ ಹಳೆಶಿಲಾಯುಗ(ಕ್ರಿ.ಪೂ.೨೫೦೦೦-೨೦೦೦೦)

ಈ ಯುಗದ ಮನುಷ್ಯ ಅನಾಗರಿಕನಾಗಿ ಅಲೆಮಾರಿ ಜೀವನವನ್ನು ಕೃಷಿ, ಪಶುಪಾಲನೆ,

ಬೆಂಕಿ, ಮಡಕೆ ತಯಾರಿಕೆಯಂತಹ ಯಾವುದರ ಪರಿವೆಯಿಲ್ಲದಂತೆ ನಡೆಸುತ್ತಿದ್ದನು. ಸಿಗುವಂತಹ ಗೆಡ್ಡೆ-ಗೆಣಸು, ಹಣ್ಣು-ಹಂಪಲು, ಪ್ರಾಣಿ-ಪಕ್ಷಿಗಳ ಹಸಿಮಾಂಸವನ್ನು ತಿನ್ನುತ್ತಿದ್ದನು. ಮಳೆ, ಬಿಸಿಲಿನಿಂದ ರಕ್ಷಿಸಿಕೊಳ್ಳಲು ಮರದ ಪೊಟರೆ, ಗುಹೆಗಳಲ್ಲಿ ವಾಸಿಸುತ್ತಾ ಪ್ರಾಣಿಗಳ ಚರ್ಮ, ಎಲೆ ತೊಗಟೆಗಳನ್ನು ಉಡುಪುಗಳನ್ನಾಗಿ ಧರಿಸುತ್ತಿದ್ದನು. ಈತನಿಗೆ ಈ ಕಾಲಘಟ್ಟದಲ್ಲಿ ತಿಳಿದಿದ್ದ ಕೌಶಲ್ಯವೆಂದರೆ ಅರಣ್ಯೋತ್ಪನ್ನಗಳನ್ನು ಸಂಗ್ರಹಿಸುವ ಹಾಗೂ ಪ್ರಾಣಿಗಳನ್ನು ಬೇಟೆಯಾಡುವಂತಹದ್ದಾಗಿದೆ.[೨೪]

ಇಂತಹ ಅನಾಗರಿಕ ಜೀವನವನ್ನು ನಡೆಸುತ್ತಿದ್ದ ಮನುಷ್ಯನಿಗೆ ತನ್ನ ಅತ್ಯವಸರಗಳಾದ ಗೆಡ್ಡೆಗೆಣಸು ಅಗೆಯಲು, ಪ್ರಾಣಿಗಳ ಬೇಟೆಗೆ ಮತ್ತು ಅವುಗಳ ಚರ್ಮವನ್ನು ತೆಗೆಯಲು ವಿವಿಧ ಮಾದರಿಯ ಆಯುಧೋಪಕರಣಗಳನ್ನು ಆವಿಷ್ಕರಿಸಿಕೊಂಡನು. ಇಂತಹ ಆಯುಧಗಳಿಂದಲೇ ಅಂದಿನ ಮನುಷ್ಯನ ಜೀವನ ವಿಧಾನ ತಿಳಿಯಲು ಸಾಧ್ಯತೆಗಳುಂಟು. ಜಿಲ್ಲೆಯಲ್ಲಿ ಆದಿ ಹಳೆಶಿಲಾಯುಗಕ್ಕೆ ಸಂಬಂಧಿಸಿದಂತೆ ೨೧ ನೆಲೆಗಳಲ್ಲಿ ಈ ರೀತಿಯ ಅವಶೇಷಗಳು ಕಂಡುಬರುತ್ತವೆ. ಇವುಗಳಲ್ಲಿ ಕಿಬ್ಬನಹಳ್ಳಿಯ ನೆಲೆಯು ೧೯೨೪ರಲ್ಲಿ ಸಂಪತ್ ಐಯ್ಯಂಗಾರ್ ಎಂಬುವವರಿಂದ ಶೋಧಿಸಲ್ಪಟ್ಟಿತ್ತು. ಇಲ್ಲಿ ದೊರೆಯುವ ಕೈಗೊಡಲಿ, ಮೊನಚಾದ ಚಕ್ಕೆಕಲ್ಲಿನ ಆಯುಧ, ಸೀಳುಗತ್ತಿ, ಕೊಕ್ಕಿನಾಕಾರದ ಆಯುಧ, ಮಚ್ಚುಗತ್ತಿ, ಕೊಚ್ಚುಗತ್ತಿ, ದುಂಡಾದ ಚಪ್ಪಟೆ, ಅಗಲವಾದ ತೆಲುಚಕ್ಕೆ, ಹೆರಗತ್ತಿ, ತಿರುಳಾಯುಧ[೨೫] ಮೊದಲಾದ ೧೨೧ ಮಾದರಿಯ ಆಯುಧಗಳು ಕಂಡುಬಂದಿವೆ. ಈ ಆಯುಧೋಪಕರಣಗಳು ಕಲ್ಲಿನಿಂದ ಕಲ್ಲಿಗೆ ಕುಟ್ಟುವ, ಭಾರವಾದ ಕಲ್ಲು ಸುತ್ತಿಗೆ ವಿಧಾನ, ಲಘುಕಲ್ಲು ಸುತ್ತಿಗೆ ವಿಧಾನ, ಕೊಳವೆ ಸುತ್ತಿಗೆ ವಿಧಾನಗಳಿಂದ ತಯಾರಿಸಲ್ಪಟ್ಟಿರುವುದು ಅವುಗಳ ರಚನಾ ಶೈಲಿಯಿಂದ ತಿಳಿದುಬರುತ್ತದೆ. ಅಶ್ಯೂಲಿಯನ್ ಕೈಗೊಡಲಿ ಗುಬ್ಬಿ ತಾಲೂಕಿನ ಕೈಮರ, ಅಪ್ಪೇನಹಳ್ಳಿಗಳಲ್ಲಿ ಹಾಗೂ ಮಧುಗಿರಿ ತಾಲೂಕಿನ ಕೊಪ್ಪ ಮೊದಲಾದ ಪ್ರದೇಶಗಳಲ್ಲಿ ಕಂಡುಬರುತ್ತವೆ.

೨.೩.೨. ಮಧ್ಯ ಹಳೆಶಿಲಾಯುಗ (ಕ್ರಿಪೂ.೧೦,೦೦೦-೪೦,೦೦೦)

ಇದು ಆದಿಹಳೆಶಿಲಾಯುಗ ಸಂಸ್ಕೃತಿಯ ಮುಂದುವರಿಕೆಯ ಭಾಗವಾಗಿದೆ. ಆದಿ ಹಳೆಯಶಿಲಾಯುಗದ ಸಂದರ್ಭದಲ್ಲಿ ಒಟ್ಟುಗೂಡಿ ವನ್ಯ ಪ್ರಾಣಿಗಳನ್ನು ಬೇಟೆಯಾಡುವಂತಹ ಕಷ್ಟದ ಕೆಲಸವನ್ನು ಬಿಟ್ಟು ಮಧ್ಯ ಹಳೆಶಿಲಾಯುಗದ ಜನರು ಬಿಲ್ಲು ಬಾಣಗಳ ಮೂಲಕ ನಿಂತಲ್ಲೇ ವೇಗವಾಗಿ ಓಡುವಂತಹ ಪ್ರಾಣಿ ಮತ್ತು ಹಾರುವ ಪಕ್ಷಿಗಳನ್ನು ಬೇಟೆಯಾಡುವ ಕೌಶಲ್ಯವನ್ನು ಬೆಳೆಸಿಕೊಂಡರು. ಹೊಲಿಗೆ ಮಾಡುವ ಕೌಶಲ್ಯವನ್ನು ಕಂಡುಕೊಂಡದ್ದು ಈ ಕಾಲದ ಪ್ರಗತಿಯ ಸಂಕೇತವಾಗಿದೆ. ಇದರಿಂದ ಪ್ರಾಣಿಗಳ ಚರ್ಮವನ್ನು ತನಗೆ ಬೇಕಾದ ರೀತಿಯಲ್ಲಿ ಕತ್ತರಿಸಿ ಹೊಲಿದುಕೊಳ್ಳಲು ಅನುವಾಯಿತು.[೨೬] ಆಯುಧ ತಯಾರಿಕೆಗೆ ಈ ಯುಗದಲ್ಲಿ ಬಳಸಲ್ಪಟ್ಟಿರುವ ಶಿಲಾಮಾದರಿ, ತಾಂತ್ರಿಕತೆಯಿಂದ ಭಿನ್ನವಾಗಿದೆ. ಈ

ಅವಧಿಯಲ್ಲೂ ಕೈಗೊಡಲಿ, ಮಚ್ಚುಗತ್ತಿ, ಚಕ್ರಾಕಾರದ ಉಪಕರಣಗಳು ಮುಂದುವರಿದಿರುವುದು[೨೭] ಕಂಡುಬರುತ್ತದೆ. ನೀಳಚಕ್ಕೆ, ಮೊನೆ, ಕೊರೆಯುಳಿಗಳನ್ನು ಮಾತ್ರ ಹೊಸದಾಗಿ ಸೇರ್ಪಡೆ ಮಾಡಿಕೊಂಡರು. ಇವು ಹೆಚ್ಚಾಗಿ ಮೂಗನಾಯಕನಕೋಟೆ, ಅಪ್ಪೆನಹಳ್ಳಿಗಳಲ್ಲಿ ದೊರೆತಿವೆ. ಒಟ್ಟಾರೆ ಜಿಲ್ಲೆಯಲ್ಲಿ ಈ ಯುಗಕ್ಕೆ ಸಂಬಂಧಿಸಿದಂತೆ ೨೩ ನೆಲೆಗಳಿಂದ[೨೮] ೨೪೬ ಮಾದರಿಯ ಉಪಕರಣಗಳು ಕಂಡುಬಂದಿವೆ. ಗುಬ್ಬಿ ತಾಲೂಕಿನ ಅಪ್ಪೆನಹಳ್ಳಿ, ಓಬಳಾಪುರ, ಅಗಳಿಕೆಕೆರೆ, ದೊಡ್ಡಗುಣಿ, ಮೂಗನಾಯಕನಕೋಟೆ, ಮಾರಶೆಟ್ಟಿಹಳ್ಳಿ, ಮಂಚಲ್ದೊರೆ, ಯಕ್ಕಲಕಟ್ಟೆ, ಕೈಮರ, ಶಿವಪುರ, ಮಧುಗಿರಿ ತಾಲೂಕಿನ ಅವರ್ಗಲ್ಲು, ಗುಟ್ಟೆ, ಮಿಡಿಗೇಶಿ, ತಿಪಟೂರು ತಾಲೂಕಿನ ಕರಡಿಮರ, ಬೊಮ್ಮೇನಹಳ್ಳಿ, ಹರೇನಹಳ್ಳಿ, ಹೊನ್ನೇಮಾರನಹಳ್ಳಿ, ಪಾವಗಡ ತಾಲೂಕಿನ ನಿಡುಗಲ್ಲು ಮೊದಲಾದ ಸ್ಥಳಗಳಲ್ಲಿ ಬೆಣಚುಕಲ್ಲು ಮತ್ತು ಅಗ್ನಿ ಶಿಲೆಯ ಆಯುಧೋಪಕರಣಗಳು ದೊರೆತಿವೆ.[೨೯]

೨.೩.೩. ಅಂತ್ಯ ಹಳೆಶಿಲಾಯುಗ (ಕ್ರಿ.ಪೂ.೧೦೦೦೦ ಕ್ರಿ.ಪೂ. ೨೫೦೦೦)

ಅಂತ್ಯ ಶಿಲಾಯುಗದ ಸಂದರ್ಭದಲ್ಲಿ ಶೀತಹವಾಗುಣ ಕಡಿಮೆಯಾಗಿ ಉಷ್ಣತೆ ಹೆಚ್ಚಾಗಿದ್ದರಿಂದ ಪ್ರಾಣಿ ಸಂಕುಲ ಮತ್ತು ಸಸ್ಯ ಸಂಪತ್ತಿನ ಮೇಲೆ ವ್ಯತಿರಿಕ್ತ ಪರಿಣಾಮವನ್ನು ಉಂಟುಮಾಡಿತು. ಇದರ ಪರಿಣಾಮವಾಗಿ ಅಭೇದ್ಯ ಕಾಡುಗಳ ಸಂಖ್ಯೆ ಕಡಿಮೆಯಾಗಿ ಕುರುಚಲು ಅಥವಾ ಹುಲ್ಲುಗಾವಲುಗಳು ವಿಶಾಲವಾಗಿ ವ್ಯಾಪಿಸಿಕೊಂಡವು. ಇದರ ಪರಿಣಾಮವೇ ಕಾಡುಕೋಣ, ಎಮ್ಮೆ, ಕತ್ತೆ, ಜಿಂಕೆ, ನಾಯಿ, ದನ ಮೊದಲಾದ ಪ್ರಾಣಿ ಸಂಕುಲಗಳು ಹುಲ್ಲುಗಾವಲು ಇರುವ ಪ್ರದೇಶಕ್ಕೆ ವಲಸೆ ಹೋಗಲು ಆರಂಭಿಸಿದವು. ಬಹುಶಃ ಈ ಪರಿವರ್ತನೆಯೇ ಅಂತ್ಯ ಹಳೆಶಿಲಾಯುಗದ ಮನುಷ್ಯನ ಜೀವನ ವಿಧಾನ ಇತರ ಸಂಸ್ಕೃತಿಗಳಿಗಿಂತ ಭಿನ್ನವಿರುವಂತೆ ಮಾಡಿತು. ಈ ಯುಗದ ಮನುಷ್ಯ ಮೀನು ಮತ್ತು ಇತರ ಜಲಚರ ಪ್ರಾಣಿಗಳ ಬೇಟೆಯನ್ನು ಆರಂಭಿಸಿದ. ಈ ಆರಂಭವೇ ಮುಂದೆ ಆಹಾರ ಪದಾರ್ಥಗಳನ್ನು ಒಂದೆಡೆ ಸಂಗ್ರಹಿಸಿಕೊಳ್ಳುವಂತೆ ಮಾಡಿತು. ಹೀಗೆ ನವೀನ ಜೀವನ ವಿಧಾನವನ್ನು ಕಂಡುಕೊಂಡ ಮನುಷ್ಯನು ಹಲವು ಜನರೊಂದಿಗೆ ಗುಡಿಸಲುಗಳಲ್ಲಿ ವಾಸಿಸಲು ಮುಂದಾಗಿ ಅಲೆಮಾರಿ ಜೀವನದಿಂದ ಆಗುತ್ತಿದ್ದ ತೊಂದರೆಗಳಿಗೆ ಪರಿಹಾರವನ್ನು ತಾತ್ಕಾಲಿಕವಾದರೂ ಕಂಡುಕೊಂಡನು. ಹೀಗೆ ಒಂದೆಡೆ ನೆಲೆನಿಂತ ಮನುಷ್ಯನಿಗೆ ಹಲವು ಪ್ರಾಣಿಸಂಕುಲಗಳ ಪರಿಚಯವಾಯಿತು. ಅವುಗಲ್ಲಿ ನಾಯಿ ಮೊದಲ ಸ್ಥಾನದಲ್ಲಿ ಗುರುತಿಸಿಕೊಂಡಿತು. ಕ್ರಮೇಣ ಕುರಿ, ಮೇಕೆ, ಎಮ್ಮೆ ಮೊದಲಾದವುಗಳನ್ನು ಹಾಲು ಮತ್ತು ಆಹಾರದಂತಹ ಉತ್ಪನ್ನಗಳನ್ನು ಪಡೆಯುವ ಉದ್ದೇಶದಿಂದ ಪಶುಪಾಲನೆಯಂತಹ ಕಾರ್ಯಗಳಲ್ಲಿ ತೊಡಗುವಂತೆ ಮಾಡಿತು.[೩೦]

ಹೀಗೆ ನಿರಂತರ ಕೌಶಲ್ಯಪೂರ್ಣವಾದ ಜೀವನ ವಿಧಾನವನ್ನು ಕಂಡುಕೊಂಡ ಈ ಯುಗದ ನೆಲೆಗಳು ಜಿಲ್ಲೆಯಲ್ಲಿ ೫೦ಕ್ಕೂ ಅಧಿಕ ಸ್ಥಳಗಳಲ್ಲಿ ಕಂಡುಬಂದಿವೆ. ಬಹುತೇಕ ನೆಲೆಗಳು ಮೂಗನಾಯಕನಕೋಟೆ ಪರಿಸರದಲ್ಲಿಯೇ ವಿಸ್ತರಿಸಲ್ಪಟ್ಟಿವೆ. ಆದುದರಿಂದ ಈ ಭಾಗದಿಂದಲೇ ಜಿಲ್ಲೆಯ ಇತರೆಡೆಗಳಿಗೆ ಮಾನವ ಸಂಸ್ಕೃತಿ ಹರಡಿಕೊಂಡಿರಬೇಕು.[೩೧] ಒಟ್ಟಾರೆ ಈ ಎಲ್ಲಾ ನೆಲೆಗಳಲ್ಲಿ ಅಲಗುಕತ್ತಿ, ಉಳಿ, ಕೊರೆಯುಳಿ, ದಬ್ಬಳ, ಬಾಣದಮೊನೆ, ಹೆರೆಗತ್ತಿ, ಕೆತ್ತುಮೊಳೆ, ಮಚ್ಚುಕತ್ತಿ, ಅಗಲವಾದ ತೆಳೆಚಕ್ಕೆ[೩೨] ೬೯೭ ಮುಂತಾದ ವೈವಿಧ್ಯಮಯ ಉಪಕರಣಗಳು ದೊರೆತಿವೆ. ವಿಶೇಷವಾಗಿ ಈ ಯುಗದ ಆರಂಭದಲ್ಲಿ ಕೈಯಿಂದ ನಂತರ ನಿಧನವಾಗಿ ತಿರುಗಿಸಲ್ಪಡುವ ಮೇಜು ಮತ್ತು ಮಂದಗತಿಯಲ್ಲಿ ತಿರುಗಿಸುವ ಚಕ್ರ ಹಾಗೂ ಪರಿಷ್ಕೃತ ಚಕ್ರಗಳಿಂದ ತೆಳುವಾದ ಮೃತ್‌ಪಾತ್ರೆಗಳನ್ನು ತಯಾರಿಸಿಕೊಳ್ಳುತ್ತಿದ್ದರು. ಈ ಮೃತ್‌ಪಾತ್ರೆಗಳು ಪೂರ್ಣಕಪ್ಪು, ಕಂದು, ಕಂದುಗೆಂಪು, ಬೂದುಬಣ್ಣದಲ್ಲಿ ತಯಾರಾಗುತ್ತಿದ್ದವು.

೨.೩.೫. ಸೂಕ್ಷ್ಮ ಶಿಲಾಯುಗ (ಕ್ರಿ.ಪೂ. ೬೦೦೦ ಕ್ರಿ.ಪೂ.೧೫೦೦)

ಈ ಯುಗವು ಮನುಷ್ಯ ನಾಗರಿಕನಾಗುವ ಹಾದಿಯತ್ತ ದಾಪುಗಾಲಿಡುವ ಮೊದಲ ಹಂತವಾದರೂ ಅಂತಹ ಮಹತ್ವಪೂರ್ಣ ಬದಲಾವಣೆಗಳೇನು ಸಂಭವಿಸಿಲ್ಲ. ನಿರಂತರ ಚಲನಶೀಲ ಜೀವನವನ್ನು ಆರಂಭಿಸಿದ ಈ ಯುಗದ ಮನುಷ್ಯ ಹೊಸ ಸಮುದಾಯ, ಪ್ರದೇಶಗಳ ಪರಿಚಯದಿಂದ ವಿಚಾರ ವಿನಿಮಯ ಮಾಡಿಕೊಳ್ಳಲು ಅವಕಾಶ ಕಲ್ಪಿಸಿತು. ಇದರ ಪರಿಣಾಮವೇ ಕುಡುಗೋಲಿನಂತಹ ಉಪಕರಣಗಳನ್ನು ಹುಲ್ಲು ಇಲ್ಲವೆ ಬಳ್ಳಿಗಳನ್ನು ಕಟಾವು ಮಾಡಲು ಸಾಧನಗಳನ್ನಾಗಿ ಅಭಿವೃದ್ಧಿಪಡಿಸಿಕೊಳ್ಳಲು ಸಾಧ್ಯವಾಗಿರುವುದು. ಆದರೂ ಕಾಡನ್ನು ಕಡಿದು ನೆಲವನ್ನು ಹಸನುಮಾಡಿ ಬೀಜ ಬಿತ್ತಿ ಆಹಾರ ಬೆಳೆಗಳನ್ನು ಬೆಳೆದುಕೊಳ್ಳುವಂತಹ ಕೌಶಲ್ಯವನ್ನು ಆವಿಷ್ಕರಿಸಿಕೊಳ್ಳಲಿಲ್ಲ ಎಂಬ ಅಂಶ ಸೋಜಿಗವೆನಿಸುತ್ತದೆ. ಆದರೆ ಸತ್ತವರನ್ನು ಹೂಳುವ, ಗವಿಗಳಲ್ಲಿ ವಾಸಿಸುವ, ಗೋಡೆ, ಕಲ್ಲಾಸರೆಗಳಲ್ಲಿ ಕೆಮ್ಮಣ್ಣು ಮತ್ತು ಸುಣ್ಣದಲ್ಲಿ ಚಿತ್ರ ಬರೆಯುವುದನ್ನು ಕಲಿತು[೩೩] ಸಾಂಸ್ಕೃತಿಕ ಚಹರೆಯನ್ನು ಮೂಡಿಸಿದನು.

ತುಮಕೂರು ಜಿಲ್ಲೆಯಲ್ಲಿ ಇದುವರೆಗೆ ಒಟ್ಟು ೬೬ ಸೂಕ್ಷ್ಮಶಿಲಾಯುಗದ ನೆಲೆಗಳು ಪತ್ತೆಯಾಗಿವೆ. ಇವುಗಳನ್ನು ವಿಶ್ಲೇಷಿಸಿದರೆ ಜನಸಂಖ್ಯೆಯ ಹೆಚ್ಚಳ, ಜಿಲ್ಲೆಯ ಹವಾಗುಣದಲ್ಲಾದ ಬದಲಾವಣೆ, ಪ್ರಾಣಿ ಸಂಕುಲದ ಜೀವನ ಶೈಲಿಯಲ್ಲಿ ಆದಂತಹ ಬದಲಾವಣೆಗಳು ಆತನ ಜೀವನ ಕ್ರಮದಲ್ಲೂ ಬದಲಾವಣೆಯಾಗುವಂತೆ ಮಾಡಿತು. ಈ ನೆಲೆಗಳಲ್ಲಿ ನೀಳಚಕ್ಕೆ-೮೦೬, ಹೆರೆಚಕ್ಕೆ-೪೪೬, ಮೊನೆ-೩೩, ಮೂಲಶಿಲಾಗಟ್ಟಿ-೪೬೬ ಉಪಕರಣಗಳು ಕ್ರಿ.ಪೂ.೬೦೦೦-೫೦೦೦ದಿಂದ ೨೦೦೦-೧೫೦೦ರವರೆಗಿನ ಕಾಲಘಟ್ಟಗಳಿಗೆ ಸಂಬಂಧಿಸಿವೆ.[೩೪] ಆಯುಧಗಳ ತಾಂತ್ರಿಕತೆಯ ಆಧಾರದ ಮೇಲೆ ೬೬ ನೆಲೆಗಳಲ್ಲಿ ೩೮ ನೆಲೆಗಳನ್ನು ಮೊದಲನೆಯ ಹಂತಕ್ಕೂ, ೩ ನೆಲೆಗಳನ್ನು ಎರಡನೆಯ ಹಂತಕ್ಕೂ, ೨೫ ನೆಲೆಗಳನ್ನು

ಮೂರನೆಯ ಹಂತಕ್ಕೂ ಸೇರಿಸಲಾಗಿದೆ. ಇವು ಕ್ವಾಟ್ಜ್, ಜಾಸ್ಪರ್, ಫೆಲ್ಸಪಾರ್, ಅದಿರುಯುಕ್ತ ಕ್ವಾಟ್ಜ್, ಅದಿರುಯುಕ್ತ ಜಾಸ್ಪರ್ ಜಾತಿಗೆ ಸೇರಿವೆ.

ಸೂಕ್ಷ್ಮ ಶಿಲಾಯುಗದಲ್ಲಿ ಮಾನವ ಅಲೆಮಾರಿ ಜೀವನದಿಂದ ಒಂದೆಡೆ ನೆಲೆನಿಂತು ಬೇಟೆ, ಮೀನುಗಾರಿಕೆ, ಆಹಾರ ಸಂಗ್ರಹಣೆ, ಆಹಾರ ಉತ್ಪಾದನೆಯಂತಹ ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರಿಂದ ಇದು ಸ್ಥಿತ್ಯಂತರದ ಕಾಲವಾಗಿ[೩೫] ಪರಿಗಣಿಸಲ್ಪಟ್ಟಿದೆ. ಹಗುರ ಉಪಕರಣಗಳನ್ನು ಆವಿಷ್ಕರಿಸಿಕೊಂಡದ್ದು ಆಹಾರ ಸಂಗ್ರಹಣೆ ಮತ್ತು ಬೇಟೆಗೆ ಬಹುಉಪಯುಕ್ತ ಉಪಕರಣಗಳಾದವು. ಈ ಸಂಸ್ಕೃತಿಗೆ ಸೇರಿದ ಚಕಮಕಿ ಕಲ್ಲು, ಜಾಸ್ಪರ್, ಕ್ವಾಟ್ಜ್, ಅಗೇಟ್ ಮಾದರಿಯ ಶಿಲೆಯಲ್ಲಿ ಹೆರೆಚೆಕ್ಕಿ, ಮೊನೆ, ನೀಳಚಕ್ಕೆ, ಅರ್ಧಚಂದ್ರಾಕಾರ ಮಾದರಿ, ಕೋರ್‌ಗಳು ಮಧುಗಿರಿ ತಾಲೂಕಿನ ಚಂದ್ರಗಿರಿ ಗ್ರಾಮದ ಪಶ್ಚಿಮಕ್ಕೆ ಥಲವಾದಿ ಆಂಜನೇಯ ದೇವಾಲಯದ ಬಳಿ ಹಾಗೂ ಪಾವಗಡ ತಾಲೂಕಿನ ಇಂದ್ರಬೆಟ್ಟ ಮತ್ತು ತಿಪ್ಪಯ್ಯನದುರ್ಗಗಳಲ್ಲಿ ಹೊಸದಾಗಿ ಪತ್ತೆಯಾಗಿವೆ.

೨.೩.೬. ನವಶಿಲಾಯುಗ(ಕ್ರಿ.ಪೂ.೨೦೦೦-೧೦೦೦)

ವಿಕಾಸದ ಯುಗವೆಂತಲೇ ಕರೆಯಲ್ಪಡುವ ನವಶಿಲಾಯುಗದಲ್ಲಿ ಮನುಷ್ಯ ಹೊಸತನದಿಂದ ಕೂಡಿದ ಕೌಶಲ್ಯಗಳನ್ನು ಪರಿಚಯಿಸಿದ್ದೇ ಹೊಸದೊಂದು ಯುಗಕ್ಕೆ ನಾಂದಿಯಾಗುವಂತೆ ಮಾಡಿತು. ಆರಂಭದಲ್ಲಿ ನದಿ-ಬಯಲುಗಳಲ್ಲಿ ಮಾತ್ರ ಕಂಡುಬರುತ್ತಿದ್ದ ನೆಲೆಗಳು ಕ್ರಮೇಣ ಬೆಟ್ಟ ಗುಡ್ಡಗಳ ಬಳಿ, ನೀರಿನ ಸೆಲೆ ಇರುವಲ್ಲಿಯೂ ವಸತಿಯನ್ನು ವಿಸ್ತರಿಸಿಕೊಂಡಿರುವುದು ಕಂಡುಬರುತ್ತದೆ. ಈ ಯುಗದ ಜನರು ತಮ್ಮ ನಿವೇಶನಗಳನ್ನು ವೃತ್ತ ಇಲ್ಲವೆ ಚೌಕ ಮಾದರಿಯ ಕಲ್ಲಿನ ಗೋಡೆಯನ್ನು ಕಟ್ಟಿ ಅದಕ್ಕೆ ದಿಂಬುಗಳನ್ನು ಜೋಡಿಸಿ ಮಣ್ಣನ್ನು ಲೇಪನ ಮಾಡುತ್ತಿದ್ದರು. ಪುನಃ ಆ ಗೋಡೆಗೆ ರಕ್ಷಣೆ ನೀಡಲು ಹೊರಭಾಗದ ಸುತ್ತಲೂ ಕಲ್ಲುಗುಂಡುಗಳನ್ನು ಜೋಡಿಸುತ್ತಿದ್ದರು. ನಿವೇಶನದ ಕೇಂದ್ರ ಭಾಗದಲ್ಲಿ ಕಂಬವೊಂದನ್ನು ನಿಲ್ಲಿಸಿ ಮೇಲ್ಭಾಗದಲ್ಲಿ ದಬ್ಬೆ ಇಲ್ಲವೆ ಸೊಪ್ಪುಗಳಿಂದ ಹೊದಿಕೆಯನ್ನು ಹಾಕುತ್ತಿದ್ದರು. ಸುಣ್ಣಕಲ್ಲು, ಚಕ್ಕೆ, ಹದವಾದ ಮಣ್ಣಿನಿಂದ ನೆಲವನ್ನು ಗಟ್ಟಿಗೊಳಿಸುತ್ತಿದ್ದರು. ದಿನನಿತ್ಯದ ಬಳಕೆಗಾಗಿ ಕೈಯಿಂದ ಇಲ್ಲವೆ ಚಕ್ರದಿಂದ ತಯಾರಿಸಿದ ಬೂದು, ಕೆಂಪು, ಕಂದುಗೆಂಪು, ಕಪ್ಪು ಬೂದು ಬಣ್ಣದ ಮೃತ್‌ಪಾತ್ರೆಗಳನ್ನು ಬಳಸುತ್ತಿದ್ದರು. ಹುರಳಿ, ಗೋಧಿ, ಜೋರೆ, ಉತ್ತುತ್ತಿ, ಅಲಸಂದೆ, ಉದ್ದು, ಹೆಸರು, ಬಾರ್ಲಿ, ಅವರೆ ಮೊದಲಾದ ಆಹಾರ ಧಾನ್ಯಗಳನ್ನು ಬಳಸುತ್ತಿದ್ದರೆಂದು ವಸತಿ ನೆಲೆಗಳಲ್ಲಿ ದೊರೆಯುವ ಅವಶೇಷಗಳಿಂದ ತಿಳಿಯುತ್ತದೆ. ಹಸು, ಎತ್ತು, ಎಮ್ಮೆ, ಕುರಿ, ಮೇಕೆ, ಕತ್ತೆ, ನಾಯಿ ಮೊದಲಾದ ಪ್ರಾಣಿಗಳನ್ನು ಸಾಕುತ್ತಿದ್ದರು. ಮೀನನ್ನು ಸಹ ಆಹಾರವಾಗಿ ಬಳಸಿಕೊಳ್ಳುತ್ತಿದ್ದರು ಎಂಬುದಕ್ಕೆ ದೊರೆತಿರುವ ಮೀನಿನ ಗಾಳಗಳಿಂದ ತಿಳಿಯುತ್ತದೆ. ತಕ್ಕಲಿ(ಚರಕ)ಯಿಂದ ನೂಲುವ, ಮರಗೆಲಸ, ಆಭರಣ ತಯಾರಿಕೆ,

ಚಾಪೆ ತಯಾರಿಕೆ ಇವರ ಪ್ರಮುಖ ಕಸುಬುಗಳಾಗಿವೆ. ಶವಸಂಸ್ಕಾರ ಪದ್ಧತಿಗಳು ರೂಢಿಯಲ್ಲಿದ್ದು, ದೊಡ್ಡವರ ಶವವನ್ನು ಗುಂಡಿಗಳಲ್ಲಿ ಮುಚ್ಚುತ್ತಿದ್ದರು.[೩೬]

ನವಶಿಲಾಯುಗ ಸಂಸ್ಕೃತಿಯು ಜಿಲ್ಲೆಯಲ್ಲಿ ವೈಶಿಷ್ಟ್ಯತೆಯಿಂದ ಕೂಡಿತ್ತೆಂದು ಇಂದಿಗೂ ಸ್ಥಳೀಯವಾಗಿ ಮಾರಮ್ಮ, ದುರ್ಗಮ್ಮ, ಸಪ್ಲಮ್ಮ, ಬೂತರಾಯ ಎಂಬುದಾಗಿ ಪೂಜೆಗೊಳ್ಳುತ್ತಿರುವ ನವಶಿಲಾಯುಗದ ಆಯುಧಗಳಿಂದ ತಿಳಿಯುತ್ತದೆ. ಈ ಪೂಜೆಗೊಳ್ಳುತ್ತಿರುವ ಆಯುಧಗಳನ್ನು ಅರಸಿ ಹೊರಟಾಗ ಆ ಪ್ರದೇಶದ ೫ ಕಿ.ಮೀ. ಅಂತರದಲ್ಲಿ ಬೂದಿದಬ್ಬದ ಅವಶೇಷ, ಸೂಕ್ಷ್ಮಶಿಲೋಪಕರಣ, ವಸತಿ ನೆಲೆ ಮೊದಲಾದ ಅವಶೇಷಗಳು ಜಿಲ್ಲೆಯಲ್ಲಿ ಕಂಡುಬಂದಿವೆ. ಈ ನೆಲೆಗಳಲ್ಲಿ ನಯಗೊಳಿಸಿದ ಡೈಕ್, ಬಸಾಲ್ಟ್ ಶಿಲೆಯ ಕೊಡಲಿ, ಬಾಚಿ, ಉಳಿ, ಸುತ್ತಿಗೆ, ಕೆತ್ತುಳಿ, ಉಜ್ಜುಗ ಅಥವಾ ಅರೆಯುವ ಕಲ್ಲು, ಕವಣೆಕಲ್ಲು ಮತ್ತು ಉಂಗುರು ಕಲ್ಲುಗಳು ಹಾಗೂ ಕಂದು, ಬೂದು ಬಣ್ಣದ ಮಡಕೆ ಅವಶೇಷಗಳು ಕಂಡುಬಂದಿವೆ. ಜಿಲ್ಲೆಯಲ್ಲಿ ಪಾವಗಡದ ತಾಲೂಕಿನಲ್ಲಿ ೩೦, ಮಧುಗಿರಿ ತಾಲೂಕಿನಲ್ಲಿ ೧೨, ಕೊರಟಗೆರೆ, ಸಿರಾ ತಾಲೂಕುಗಳಲ್ಲಿ ತಲಾ ಒಂದೊಂದು ಹೊಸ ನೆಲೆಯನ್ನು ಪತ್ತೆ ಹಚ್ಚಲಾಗಿದೆ.

೨.೩.೭. ಶಿಲಾತಾಮ್ರಯುಗ(ಕ್ರಿ.ಪೂ.೧೩೦೦-೮೦೦)

ವಾಸ್ತವವಾಗಿ ಶಿಲಾತಾಮ್ರಯುಗ ನೂತನ ಶಿಲಾಯುಗದೊಂದಿಗೆ ಗುರುತಿಸಿಕೊಳ್ಳುತ್ತದೆ. ಕ್ರಮೇಣ ನೂತನ ಶಿಲಾಯುಗದ ಒಂದು ಹಂತವು ತಾಮ್ರದ ಅದಿರು ಮತ್ತು ಇತರೆ ಲೋಹವನ್ನು ಶಿಲಾ ಆಯುಧೋಪಕರಣಗಳೊಟ್ಟಿಗೆ ಲೋಹವನ್ನು ಕರಗಿಸಿ ಶುದ್ಧ ಮಾಡಿ ಆಭರಣ, ಗೊಂಬೆ, ಆಯುಧ, ಉಪಕರಣ ತಯಾರಿಸುವ ಕೌಶಲ್ಯವನ್ನು ಬೆಳೆಸಿಕೊಂಡಿತು.[೩೭] ಕೆಲವೊಮ್ಮೆ ನೂತನ ಶಿಲಾಯುಗಕ್ಕಿಂತಲೂ ಭಿನ್ನವಾದ ಜೀವನ ಕ್ರಮವನ್ನು ಹೊಂದಿತ್ತು. ಹಾಗಾಗಿ ಈ ಯುಗವನ್ನು ಶಿಲಾತಾಮ್ರಯುಗವೆಂದು ಪ್ರತ್ಯೇಕವಾಗಿ ಗುರುತಿಸಲಾಗುತ್ತದೆ. ನೀಳಚಕ್ಕೆಗಳ ಉಪಯೋಗ, ಶಿಲೆಗೆ ಬದಲಾಗಿ ಲೋಹದ ಆಯುಧಗಳ ಬಳಕೆ, ಕುಸುರಿತನದ ಸುಟ್ಟ ಮಣ್ಣಿನ ಪಾತ್ರೆಗಳ ಮೇಲಿನ ವರ್ಣರೇಖಾ ಚಿತ್ರಗಳು, ಮಣ್ಣಿನ ಗೊಂಬೆ[೩೮] ಮೊದಲಾದ ಪ್ರಾಚ್ಯಾವಶೇಷಗಳಿಂದ ಅವರ ಸಾಂಸ್ಕೃತಿಕ ಬದುಕು ಹೇಗಿತ್ತು ಎಂಬುದು ಅನಾವರಣಗೊಳ್ಳುತ್ತದೆ. ಇದುವರೆಗೆ ತುಮಕೂರು ಜಿಲ್ಲೆಯಲ್ಲಿ ಈ ಸಂಸ್ಕೃತಿಗೆ ಸೇರಿದ ಅವಶೇಷಗಳು ಪಾವಗಡ ತಾಲೂಕಿನ ನಿಡಗಲ್ಲು, ವೈ.ಎನ್.ಹೊಸಕೋಟೆಯಲ್ಲಿ ಮಾತ್ರ ಕಂಡುಬಂದಿರುವುದನ್ನು ಗಮನಿಸಿದರೆ ಈ ಭಾಗದವರಿಗೆ ಲೋಹದ ಜ್ಞಾನ ತಿಳಿದಿರಲಿಲ್ಲ ಎಂಬ ಅಂಶ ಸ್ಪಷ್ಟಗೊಳ್ಳುತ್ತದೆ. ಜಿಲ್ಲೆಯ ಬಹು ಭಾಗದಲ್ಲಿ ನವಶಿಲಾಯುಗದ ವಸತಿ ನೆಲೆಗಳೆ ಕಂಡುಬರುವುದರಿಂದ ಆ ಸಂಸ್ಕೃತಿಯೇ ಮುಂದುವರೆದಿರಬೇಕು ಹಾಗಾಗಿಯೇ ಜಿಲ್ಲೆಯಲ್ಲಿ ತಾಮ್ರ ಶಿಲೋಪಕರಣಗಳು ಅತಿ ವಿರಳವಾಗಿ ಕಂಡುಬಂದಿವೆ.

೨.೩.೮. ಬೃಹತ್‌ಶಿಲಾಯುಗ ಸಂಸ್ಕೃತಿ (ಕ್ರಿಪೂ. ೧೨೦೦-೨೫೧)

ಈ ಕಾಲಘಟ್ಟದ ಮನುಷ್ಯ ಚಪ್ಪಟೆಮೂಗು, ಬಲವಾದ ದವಡೆ, ದೃಢಕಾಯ ದೇಹವನ್ನು ಹೊಂದಿ ನೂತನ ಶಿಲಾಯುಗ ಸಂಸ್ಕೃತಿ ಜೀವಂತ ಇರುವಾಗಲೇ ವಲಸೆ ಬಂದರೆಂಬುದು ಜಿಲ್ಲೆಯಲ್ಲಿ ದೊರೆತ ಪ್ರಾಚ್ಯಾವಶೇಷಗಳಿಂದ ತಿಳಿಯುತ್ತದೆ. ಇವರು ಎಲ್ಲಿಂದ ಬಂದರೆಂಬ ಸಂಗತಿ ಇನ್ನೂ ಚರ್ಚಾಸ್ಪದ ಸಂಗತಿಯಾಗಿಯೇ ಉಳಿದಿದೆ. ಈ ಯುಗದ ಮನುಷ್ಯ ಶಿಲೆ ಮತ್ತು ಇತರೆ ಲೋಹಗಳಿಗಿಂತಲೂ ಸದೃಢವಾದ ಕಬ್ಬಿಣವನ್ನು ಆವಿಷ್ಕರಿಸಿದ್ದು ಅವರ ಜೀವನ ಶೈಲಿಯಲ್ಲಿ ಮಹತ್ವಪೂರ್ಣ ಬದಲಾವಣೆಗೆ ದಾರಿ ಮಾಡಿಕೊಟ್ಟಿತ್ತು. ಆದುದರಿಂದಲೇ ಬೇಟೆ, ಕೃಷಿಯಂತಹ ಚಟುವಟಿಕೆಗಳಲ್ಲಿ ತೊಡಗಲು ಭಲ್ಲೆ, ಕೊಡಲಿ, ಸುತ್ತಿಗೆ, ಕುಳ[೩೯] ಮೊದಲಾದ ಆಯುಧೋಪಕರಣ ತಯಾರಿಕೆಗೆ ಸಹಕಾರಿಯಾಯಿತು. ಈ ಬದಲಾವಣೆಯೇ ನವಶಿಲಾಯುಗಕ್ಕಿಂತಲೂ ಕೃಷಿಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಮತ್ತು ಬೃಹತ್ ಪ್ರಮಾಣದ ಕಲ್‌ಗೋರಿಗಳನ್ನು ನಿರ್ಮಿಸಿಕೊಳ್ಳಲು ಸಾಧ್ಯವನ್ನಾಗಿಸಿರುವುದು. ಮೀನು ಹಿಡಿಯುವ, ಕುದುರೆ, ಎಮ್ಮೆ, ಎತ್ತು, ಆಕಳು, ನಾಯಿ, ಮೇಕೆ, ಕುರಿ ಮೊದಲಾದ ಪ್ರಾಣಿಗಳನ್ನು ಪಳಗಿಸುವ ಮತ್ತು ಸಾಕುವಂತಹ ಹಾಗೂ ನೂಲುವ, ನೇಯುವ, ಮಣಿಗಳ ಕೊರೆಯುವಿಕೆ, ಚಿನ್ನದ ರೇಖೆಯುಳ್ಳ ಬೆಣಚು ಕಲ್ಲನ್ನು ಶೋಧಿಸಿ ಅಗೆದು ಚಿನ್ನವನ್ನು ಸಂಗ್ರಹ ಮಾಡುವ, ಕಪ್ಪು ಮತ್ತು ಕೆಂಪು, ಏಕ ಮತ್ತು ದ್ವಿವರ್ಣವುಳ್ಳ ಮೃತ್‌ಪಾತ್ರೆಗಳ ಬಳಕೆಯು ಇವರ ಜೀವನ ಶೈಲಿಯನ್ನು ತಿಳಿಯಪಡಿಸುತ್ತದೆ.

ಈ ಮಾದರಿಯ ಸಂಸ್ಕೃತಿಯನ್ನು ನಿರ್ವಚಿಸುವ ನೆಲಗಳು ಜಿಲ್ಲೆಯಲ್ಲಿ ೩೮ ಇದ್ದು, ಅವುಗಳಲ್ಲಿ ೧೭- ವಸತಿ ನೆಲೆಗಳಾದರೆ, ಪಾಂಡವರ ಕಲ್ಲು, ಮೊರಿಯರ ಮನೆ ಎಂದು ಕರೆಯಲ್ಪಡುವ ಕಲ್ಲುವೃತ್ತ, ಕಲ್ಮನೆ, ನಿಲಸುಗಲ್ಲು, ಸ್ವಸ್ತಿಕ್, ಚಪ್ಪಟೆಯಾಕಾರದ ಹಾಸುಗಲ್ಲು[೪೦] ಮೊದಲಾದಂತಹ ಶಿಲಾಗೋರಿಗಳಿರುವ ೨೧ ನೆಲೆಗಳು ಕಂಡುಬರುತ್ತವೆ. ಕೆಲವೆಡೆ ವಸತಿ ನೆಲೆಗಳಲ್ಲೂ ಶಿಲಾಗೋರಿಗಳು ಕಂಡುಬರುತ್ತವೆ. ಜಿಲ್ಲೆಯಲ್ಲಿ ಪಾವಗಡ ತಾಲೂಕಿನ ತಿಪ್ಪಯ್ಯನದುರ್ಗ, ದೇವರಬೆಟ್ಟ, ಸಾರವಾಟಪುರ, ದವಡೆಬೆಟ್ಟ, ಮಧುಗಿರಿ ತಾಲೂಕಿನ ಬೂದೇನಹಳ್ಳಿ, ಬೇಡತ್ತೂರು, ಚಂದ್ರಗಿರಿ, ವೀರಣ್ಣೇಶ್ವರಬೆಟ್ಟ, ಕೊಡ್ಲಾಪುರ ಮೊದಲಾದ ಕಡೆ ಕಪ್ಪು, ಹೊಳಪುಳ್ಳ ಕಪ್ಪು ಮತ್ತು ಕೆಂಪು ಮೃತ್‌ಪಾತ್ರೆಯ ಅವಶೇಷಗಳು ಹೊಸದಾಗಿ ಪತ್ತೆಯಾಗಿವೆ. ಕೊರಟಗೆರೆ ತಾಲೂಕಿನ ನೇಗಿಲಾಲ ಗ್ರಾಮದ ಪಶ್ಚಿಮಕ್ಕೆ ಪಾಂಡವರ ಗುಟ್ಟೆಯಲ್ಲಿ ೪.೯೦ ಮೀ x ೪.೯೦ ಮೀ. ವ್ಯಾಸವಿರುವ ಮೂರು ವೃತ್ತಾಕಾರದ ಕಲ್ಲು ಚಪ್ಪಟೆ ಮಾದರಿಯ ಶಿಲಾಗೋರಿ, ಬೇಡತ್ತೂರಿನಲ್ಲಿ ೪ ಮೀx೪ ಮೀ ವ್ಯಾಸವಿರುವ ಎರಡು ವೃತ್ತಾಕಾರದ ಕಲ್ಲು ಚಪ್ಪಟೆ ಮಾದರಿಯ ಶಿಲಾಗೋರಿಗಳು, ಕಾತಗೊಂಡನಹಳ್ಳಿಯ ಗ್ರಾಮದ ಮಧ್ಯೆ ಇರುವ ಹೆಬ್ಬಂಡೆಯಲ್ಲಿ ೪ ಮೀ. x ೪ ಮೀ. ವ್ಯಾಸದ ವೃತ್ತಾಕಾರದ

ಕಲ್ಲು ಚಪ್ಪಟೆ ಮಾದರಿಯ ಶಿಲಾಗೋರಿ, ಪಾವಗಡ ತಾಲೂಕಿನ ಒಬೇನಹಳ್ಳಿ ಗ್ರಾಮದ ಪೂರ್ವ ಮತ್ತು ಪಶ್ಚಿಮ ದಿಕ್ಕಿಗೆ ಸುಮಾರು ೪೦ ಕಲ್ಲುವೃತ್ತ, ಕಲ್ಮನೆ, ನಿಲಸುಗಲ್ಲು, ಸ್ವಸ್ತಿಕ್, ಚಪ್ಪಟೆಯಾಕಾರದ ಹಾಸುಗಲ್ಲು, ಸ್ವಸ್ತಿಕ್ ಸಮಾಧಿ ಸುತ್ತಲೂ ಇರುವ ನಿಲುವುಗಲ್ಲು ಮಾದರಿ, ವೃತ್ತ ನಿಲುವುಗಲ್ಲು ಮಾದರಿಯ ಸಮಾಧಿಗಳು ಜಿಲ್ಲೆಯಲ್ಲೇ ಶ್ರೀಮಂತ ಸಂಸ್ಕೃತಿ ಇತ್ತು ಎಂಬುದನ್ನು ಸೂಚಿಸುವ ೧ ಮೀ. x ೧ ಮೀ.ನಿಂದ ೧೫ಮೀ x ೨೦ಮೀ. ವ್ಯಾಸವಿರುವ ಸಮಾಧಿಗಳು ಪತ್ತೆಯಾಗಿವೆ. ಈ ಸಂಸ್ಕೃತಿಯ ಕುರುಹುಗಳು ಬೆಟ್ಟ ಗುಡ್ಡಗಳ ಸಾಲು, ಕಣಿವೆ, ಕಲ್ಲು ಚಪ್ಪಡಿ ಇರುವ ಪ್ರದೇಶದಲ್ಲಿ ಹೆಚ್ಚಾಗಿ ಕಂಡುಬಂದಿದೆ. ಮೌರ್ಯ, ಶಾತವಾಹನಯುಗ ಆರಂಭವಾದರೂ ಜಿಲ್ಲೆಯಲ್ಲಿ ಇನ್ನೂ ಬೃಹತ್ ಶಿಲಾಯುಗ ಸಂಸ್ಕೃತಿ ಜೀವಂತಿಕೆಯಿಂದ ಇತ್ತು ಎಂಬುದಕ್ಕೆ ಪ್ರಾಚ್ಯಾವಶೇಷ ಮತ್ತು ಐತಿಹ್ಯಗಳಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಜಿಲ್ಲೆಯಲ್ಲಿ ಹೇರಳ ಶಿಲಾಸಮುಚ್ಚಯ ಮತ್ತು ಅರಣ್ಯ ಸಂಪತ್ತು, ಬೇಟೆಗಾಗಿ ಪ್ರಾಣಿಸಂಕುಲ ಇದ್ದಿದ್ದರಿಂದ ಹೊರ ಜಗತ್ತಿನೊಂದಿಗೆ ಹೊಂದಿಕೊಳ್ಳುವ ಇಲ್ಲವೆ ಪರಿವರ್ತನೆ ಹೊಂದುತ್ತಿದ್ದ ಸಮಾಜಕ್ಕೆ ಅನುಗುಣವಾದ ಜೀವನ ಶೈಲಿಯನ್ನು ರೂಢಿಸಿಕೊಳ್ಳುವ ಪ್ರಮೇಯವನ್ನು ಉಂಟುಮಾಡಿಲ್ಲ. ಹಾಗಾಗಿ ಕರ್ನಾಟಕದ ಇತರೆಡೆಗಳಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿ ಅಂತ್ಯವಾದರೂ ಜಿಲ್ಲೆಯಲ್ಲಿ ಇನ್ನೂ ಜೀವಂತಿಕೆಯಿಂದ ಇರುವಂತಹದ್ದು ಸ್ಪಷ್ಟವಾಗುತ್ತದೆ.

೨.೩.೯. ಇತಿಹಾಸ ಆರಂಭಕಾಲ(ಕ್ರಿ.ಶ.೧ ರಿಂದ ೩ನೆಯ ಶತಮಾನ)

ಸಹಜವಾಗಿ ಇತಿಹಾಸ ಆರಂಭ ಕಾಲದ ಮನುಷ್ಯ ನವಶಿಲಾಯುಗ ಮತ್ತು ಬೃಹತ್ ಶಿಲಾ ಸಂಸ್ಕೃತಿಗಳ ವಸತಿ ನೆಲೆ ಇರುವಲ್ಲೇ ಜೀವಿಸಿರುವುದಕ್ಕೆ ಆ ಸಂಸ್ಕೃತಿಯ ನೆಲೆಗಳಲ್ಲೇ ದೊರೆತಿರುವ ಪ್ರಾಚ್ಯಾವಶೇಷಗಳಿಂದ ಸ್ಪಷ್ಟವಾಗುತ್ತದೆ.[೪೧] ಕೇವಲ ಇತಿಹಾಸ ಆರಂಭ ಕಾಲದ ಜನವಸತಿ ನೆಲೆಗಳು ಪ್ರತ್ಯೇಕವಾಗಿ ಕಂಡುಬಂದಿರುವುದು ತೀರಾ ಅಪರೂಪ. ಈ ನೆಲಗಳಲ್ಲಿ ಶಿಲಾಲಿಪಿ, ಕೆಂಪು ಹೊಳಪುಳ್ಳ ಮೃತ್‌ಪಾತ್ರೆ, ಅರಟೈನ್ ಮಾದರಿಯ ಮದ್ಯದ ಜಾಡಿ, ನಕ್ಷಾಂಕಿತ ಪಾತ್ರ, ಕೆಂಪು ಲೇಪನದಡಿ ಬಿಳಿವರ್ಣ ಚಿತ್ರಗಳುಳ್ಳ ಮಡಕೆ ಭಾಗ[೪೨] ಸತುವಿನ ನಾಣ್ಯ, ಮಣ್ಣಿನ ಗೊಂಬೆ, ನಾನಾ ಪ್ರಕಾರದ ಚರ್ಟ್, ಕಾರ್ನೇಲಿಯನ್, ಅಗೇಟ್, ಜಾಸ್ಪರ್ ಮೊದಲಾದ ಶಿಲಾ ಪ್ರಕಾರದ ದಂತ ಮತ್ತು ಲೋಹದ ಮಣಿಗಳ ಅತ್ಯುತ್ಕೃಷ್ಟ ರಚನೆಗಳು ದೊರೆಯುವುದರಿಂದ ಉನ್ನತ ಸಂಸ್ಕೃತಿಯನ್ನು ಈ ವೇಳೆಗಾಗಲೇ ರೂಢಿಸಿಕೊಂಡಿರುವುದು ಗೋಚರಿಸುತ್ತದೆ. ಜಿಲ್ಲೆಯಲ್ಲಿ ಈ ಮಾದರಿಯ ಸಂಸ್ಕೃತಿಯ ಕುರುಹಾಗಿ ೧೯ ನೆಲೆಗಳು ಕಂಡುಬಂದಿದ್ದು, ಕೆಂಪು ಹೊಳಪುಳ್ಳ, ಕೆಂಪು ಲೇಪನದಡಿ ಬಿಳಿವರ್ಣ ಚಿತ್ರಗಳುಳ್ಳ ಮೃತ್‌ಪಾತ್ರೆ ಅವಶೇಷಗಳು ಪಾವಗಡದ ಕಾಮನದುರ್ಗ, ತಿಪ್ಪಯ್ಯನದುರ್ಗ, ಕೊಲಿಮೆಗೆರೆ ರಾಂಪುರ, ಇಂದ್ರಬೆಟ್ಟ, ಹೊಸಹಳ್ಳಿ ತಾಂಡ, ಸೂಲನಾಯಕನಹಳ್ಳಿ, ದೇವರಬೆಟ್ಟ,

ಬಂಗಾರನಾಯಕನ ಬೆಟ್ಟ, ಸಾರವಾಟಪುರ, ದವಡ ಬೆಟ್ಟ, ರಾಜನಬಂಡೆ, ಮಧುಗಿರಿಯ ಬೂದೇನಹಳ್ಳಿ, ಬೇಡತ್ತೂರು, ಚಂದ್ರಗಿರಿ, ವೀರಣ್ಣೇಶ್ವರ ಬೆಟ್ಟ, ಅಪ್ಪೇನಹಳ್ಳಿ, ಕೊಡ್ಲಾಪುರ, ಕೊರಟಗೆರೆಯ ನೇಗಿಬಾಲ ಎಂಬಲ್ಲಿ ಹೊಸದಾಗಿ ಪತ್ತೆಹಚ್ಚಲಾಗಿದೆ.

೨.೩.೧೦. ಪ್ರಾಗಿತಿಹಾಸ ಕಾಲದ ಸಾಂಸ್ಕೃತಿಕ ಆಚರಣೆಗಳು

ಯಾವುದೇ ಒಂದು ಪ್ರಾಗಿತಿಹಾಸ ಕಾಲದ ನೆಲೆಯನ್ನು ಕೇವಲ ಅನ್ವೇಷಣೆ ಅಥವಾ ಉತ್ಖನನ ಮಾಡಿದಾಗ ಉಪಕರಣ ಅಥವಾ ಅವಶೇಷಗಳಿಂದಲೇ ಆ ಪ್ರದೇಶದಲ್ಲಿ ಜೀವಿಸಿದ್ದ ಮನುಷ್ಯನ ಸಾಂಸ್ಕೃತಿಕ ಬದುಕನ್ನು ಕಟ್ಟಿಕೊಡಲು ಸಾಧ್ಯವಿಲ್ಲ. ಅವರ ಇಡೀ ಬದುಕಿನ ಜೀವನ ವಿಧಾನವನ್ನು ಭೌತಿಕ ಕುರುಹುಗಳೊಂದಿಗೆ ಪುನರ್‌ಅವಲೋಕಿಸಬೇಕಾದರೆ, ಊರಾಚೆಗೆ ದೂರದ ಯಾವುದೋ ದುರ್ಗಮ ಪ್ರದೇಶಗಳಲ್ಲಿ ವಾಸ ಮಾಡುವ ಹಲವು ಬುಡಕಟ್ಟು[೪೩]ಗಳ ಜೀವನ ವಿಧಾನ, ನಂಬಿಕೆ, ಆಚರಣೆ ಮೊದಲಾದವುಗಳನ್ನು ತೌಲನಿಕವಾಗಿ ಅಧ್ಯಯನ ಮಾಡಬೇಕಾಗುತ್ತದೆ. ಜಗತ್ತಿನೆಲ್ಲೆಡೆ ಆದಿಮಾನವನ ದೈಹಿಕ ಕಳೇಬರಹಗಳು ಅಸ್ತಮಿಸಿದರೂ ಆತ ಬಿಟ್ಟುಹೋದ ಆಚರಣೆ, ನಂಬಿಕೆಗಳು ಇಂದಿಗೂ ಜೀವಂತವಾಗಿರುವುದನ್ನು ಕಾಣಬಹುದು. ಇದಕ್ಕೆ ನಿದರ್ಶನವಾಗಿ ತುಮಕೂರು ಜಿಲ್ಲೆಯನ್ನು ಒಳಗೊಂಡಂತೆ ಕರ್ನಾಟಕದಾದ್ಯಂತ ಶಿಲಾಯುಗದ ಪಳೆಯುಳಿಕೆಗಳಾದ ಬೀಸುವ ಕಲ್ಲು, ರುಬ್ಬುವ ಕಲ್ಲುಗಳು ಇಂದಿಗೂ ಬಳಕೆಯಾಗುತ್ತಿರುವುದನ್ನು ಕಾಣಬಹುದು. ಆದರೆ ಇತ್ತೀಚೆಗೆ ಇವುಗಳ ಬಳಕೆ ಕಡಿಮೆಯಾದರೂ ಇದೇ ತಂತ್ರಜ್ಞಾನವನ್ನು ವೈಜ್ಞಾನಿಕವಾಗಿ ಬಳಸಿಕೊಳ್ಳಲಾಗುತ್ತಿದೆಯಷ್ಟೇ. ಆದರೂ ತುಮಕೂರು ಜಿಲ್ಲೆಯಲ್ಲಿ ಕೆಲವೊಂದು ವಿಶೇಷ ಹಬ್ಬ ಹರಿದಿನಗಳಾದ ನಾಗರ ಪಂಚಮಿ, ಶಿವರಾತ್ರಿಯಂತಹ ಹಬ್ಬಗಳಲ್ಲಿ ದೇವರಿಗೆ ಎಡೆ ಇಡಲು ಆ ವಸ್ತುಗಳಿಗೆ ಪಾವಿತ್ರತೆಯನ್ನು ಕಾಯ್ದುಕೊಳ್ಳಲು ಇಂದಿಗೂ ಬಹುತೇಕರು ಆಧುನಿಕ ಗಿರಣಿಗಳಿಗೆ ಹೋಗದೆ ಇಂತಹ ಅಪರೂಪಕ್ಕೆ ಎಲ್ಲೋ ಇರುವ ಬೀಸುವ, ರುಬ್ಬುವ ಕಲ್ಲುಗಳನ್ನು ತಂದು ಅಕ್ಕಿಯನ್ನು ಹಿಟ್ಟು ಮಾಡಿ ದೇವರಿಗೆ ಮೊದಲು ಅರ್ಪಿಸುವ ಪರಂಪರೆ ಮುಂದುವರೆದಿದೆ ಎಂದರೆ ಆಶ್ಚರ್ಯವೆನಿಸದಿರಲಾರದು. ಹಾಗೆಯೇ ಜಿಲ್ಲೆಯ ಉತ್ತರ ದಿಕ್ಕಿನ ಬಹುತೇಕ ಗ್ರಾಮದೇವತೆಗಳ ಗುಡಿಗಳಲ್ಲಿ ನವಶಿಲಾಯುಗದ ಆಯುಧಗಳು ಸಸ್ಯಹಾರಿ ಮತ್ತು ಮಾಂಸಹಾರಿ ದೇವತೆಗಳಾದ ಪೂಲೆರಮ್ಮ, ಮಾರಮ್ಮ, ದುರ್ಗಮ್ಮ, ಸಪ್ಲಮ್ಮ, ಕೊಲ್ಲೇರಮ್ಮ, ಕರಿಯಮ್ಮ ಎಂಬ ಹಲವು ನಾಮಗಳಿಂದ ಆರಾಧನೆಗೊಳ್ಳಲ್ಪಡುತ್ತಿವೆ. ಒಂದೊಂದು ದೇವತೆಯ ಹಿಂದೆ ಒಂದೊಂದು ಸಮುದಾಯ, ಸಂಸ್ಕೃತಿಗಳು ಗುರುತಿಸಿಕೊಂಡಿರುವುದನ್ನು ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಹೀಗೆ ಪ್ರಾಗಿತಿಹಾಸ ಕಾಲದ ಆಯುಧಗಳಿಗೆ ದೈವಿಸ್ವರೂಪ ಎಲ್ಲಿಂದ, ಯಾವಾಗ, ಹೇಗೆ ಬಂತು ಎಂಬುದು ಸ್ಪಷ್ಟವಾಗದಿದ್ದರೂ ಅವುಗಳೊಂದಿಗಿನ ಸಂಬಂಧವನ್ನು ಅಲ್ಲಗಳೆಯಲಾಗದು.

ಬೃಹತ್ ಶಿಲಾಯುಗದ ಶವಸಂಸ್ಕಾರ ಪದ್ಧತಿಯ ಕುರುಹುಗಳು ಸಹ ಜಿಲ್ಲೆಯಾದ್ಯಂತ ಕಂಡುಬರುತ್ತವೆ. ಜಿಲ್ಲೆಯಲ್ಲಿ ಹಿರಿಯರ ಹಬ್ಬ, ಯುಗಾದಿ, ರಾಮನವಮಿಗಳಂತಹ ಹಬ್ಬಗಳ ಸಂದರ್ಭಗಳಲ್ಲಿ ತಮ್ಮ ಹಿರಿಯರನ್ನು ಗೌರವಿಸುವುದಕ್ಕಾಗಿ ಅವರ ಸಮಾಧಿಗಳ ಬಳಿ ಪೂಜೆ ಪುನಸ್ಕಾರಗಳನ್ನು ಕೈಗೊಂಡು, ಅವರಿಗೆ ಪ್ರಿಯವಾದ ವಸ್ತುಗಳೊಂದಿಗೆ ಆಹಾರ ತಿನಿಸುಗಳನ್ನು ಇಟ್ಟು ದೀಪವನ್ನು ಹಚ್ಚಿ, ಪ್ರಾರ್ಥಿಸುವ ಪದ್ಧತಿ ಬಹುತೇಕ ಸಮುದಾಯಗಳಲ್ಲಿ ರೂಢಿಯಲ್ಲಿದೆ.

೨.೩೧೧.. ಪ್ರಾಗಿತಿಹಾಸ ಕಾಲದ ವರ್ಣಚಿತ್ರಗಳು

ಆದಿಮಾನವ ಪ್ರಾರಂಭದಲ್ಲಿ ಕೇವಲ ತನ್ನ ಉದರ ನಿರ್ವಹಣೆಗಾಗಿಯೇ ದಿನಪೂರ್ತಿ ವ್ಯಯಿಸುತ್ತಿದ್ದರಿಂದ ಗೆಡ್ಡೆಗೆಣಸು, ಪ್ರಾಣಿಗಳನ್ನು ಬೇಟೆಯಾಡುವಂತಹ ಕೌಶಲ್ಯಗಳತ್ತ ಗಮನಹರಿಸುತ್ತಿದ್ದನು. ಆದರೆ ಕಾಲಾಂತರಗಳಲ್ಲಿ ಆಹಾರ ಪದಾರ್ಥಗಳನ್ನು ಸುಲಭವಾಗಿ ಪಡೆಯುವಂತಹ ಆಯುಧೋಪಕರಣಗಳನ್ನು ಆವಿಷ್ಕರಿಸುತ್ತಾ ಹೋದಂತೆ ತನ್ನಲ್ಲಿರುವ ಭಾವನೆಗಳ ಅಭಿವ್ಯಕ್ತತೆಗಾಗಿ ಮತ್ತು ತನ್ನ ಮುಂದಿನ ಪೀಳಿಗೆಗೆ ತಮ್ಮ ಆಚರಣೆ, ನಂಬಿಕೆ, ಕೌಶಲ್ಯಗಳನ್ನು ಕಲಿಸುವುದಕ್ಕಾಗಿ ವಿಶ್ರಾಂತಿ ತೆಗೆದುಕೊಳ್ಳುವ ಸಮಯದಲ್ಲಿ ತಮ್ಮ ಸುತ್ತ ಮುತ್ತಲಿನ ಗಾಳಿ, ಬೆಳಕು, ಮಳೆಗಳಿಂದ ಸುರಕ್ಷಿತವಾದಂತಹ ಕಲ್ಲಾಸರೆ, ಗವಿ, ಹೆಬ್ಬಂಡೆ, ಕಲ್ಲುಗುಂಡುಗಳ ಮೇಲ್ಭಾಗಗಳಲ್ಲಿ ಚಿತ್ರಗಳನ್ನು ಕೆತ್ತುತ್ತ ಹೋಗಿರುವುದನ್ನು ಕಾಣಬಹುದಾಗಿದೆ. ಸಹಜವಾಗಿ ಇಂತಹ ಕೌಶಲ್ಯಪೂರ್ಣ ಜ್ಞಾನದ ಅಭಿವ್ಯಕ್ತತೆಯನ್ನು ಮಧ್ಯ ಹಳೆಶಿಲಾಯುಗದಿಂದ ಗುರುತಿಸಲಾಗುತ್ತಿದೆ. ಆಯಾಯ ಕಾಲಘಟ್ಟದಲ್ಲಿ ಆತ ಹೊಂದಿರುವ ಪರಿಸರದೊಂದಿಗಿನ ಸಂಬಂಧ, ಅಂದರೆ ಪ್ರಾಣಿಪಕ್ಷಿ, ಮನುಷ್ಯನ ಜೀವನ ಶೈಲಿಗೆ ಸಂಬಂಧಿಸಿದ ಗವಿ ಅಥವಾ ಕಲ್ಲಾಸರೆಗಳ ಒಳಬದಿಯಲ್ಲಿ ಕೆಂಪು ಮತ್ತು ಬಿಳಿಬಣ್ಣದಲ್ಲಿ ಬಿಡಿಸಿದ ಇಲ್ಲವೇ ಬಯಲು ಬಂಡೆಯ ಮೇಲೆ ಕುಟ್ಟಿ ಅಥವಾ ಚೂಪಾದ ಸಾಧನದಿಂದ ಸ್ಪಷ್ಟ ಗೆರೆಗಳನ್ನು ಮೂಡಿಸಿ ಬಿಡಿಸಿದ ಚಿತ್ರಗಳನ್ನು ಕಾಣಬಹುದಾಗಿದೆ. ಹಾಗೆಯೇ ಮೀನು, ಜಿಂಕೆ, ಘೇಂಡಾಮೃಗ ಮೊದಲಾದ ಪ್ರಾಣಿಗಳ ಚಿತ್ರಗಳು ಕಂಡುಬಂದರೆ ಸೂಕ್ಷ್ಮಶಿಲಾಯುಗವೆಂದೂ, ಗೂಳಿ ಕಂಡುಬಂದರೆ ನವಶಿಲಾಯುಗವೆಂದೂ, ಬಿಲ್ಲು ಬಾಣ ಹಿಡಿದಿರುವವನಿದ್ದರೆ ಬೃಹತ್ ಶಿಲಾಯುಗವೆಂದೂ, ಕುದುರೆ ಸವಾರ, ತ್ರಿಶೂಲ, ಆಂಜನೇಯ(ಮಂಗ) ಕಂಡುಬಂದರೆ ಆರಂಭ ಇತಿಹಾಸ ಕಾಲವೆಂದೂ ಗುರುತಿಸಬಹುದಾಗಿದೆ. ಹಾಗೆಯೇ ಬಿಳಿ ಬಣ್ಣದಲ್ಲಿ ವರ್ಣಚಿತ್ರಗಳಿದ್ದರೆ ಅವುಗಳ ಕಾಲಮಾನ ಬಹು ಹಿಂದಕ್ಕೆ ಹೋಗುತ್ತದೆ. ನಂತರದಲ್ಲಿ ಕೆಂಪು ಮತ್ತು ಇತರೆ ಬಣ್ಣಗಳು ಬಳಕೆಯಾಗಿವೆ ಎಂಬುದನ್ನು ಬಣ್ಣಗಳ ವೈಜ್ಞಾನಿಕ ಅಧ್ಯಯನಗಳಿಂದ ಸಾಬೀತಾಗಿದೆ.

ಈ ಹಿನ್ನೆಲೆಯಲ್ಲಿರುವ ನವಶಿಲಾಯುಗ, ತಾಮ್ರಶಿಲಾಯುಗ, ಬೃಹತ್ ಶಿಲಾಯುಗ, ಆರಂಭ ಇತಿಹಾಸ ಕಾಲಕ್ಕೆ ಸೇರಿದ ಬಿಳಿ ಮತ್ತು ಕೆಂಪು ಬಣ್ಣದ ವರ್ಣಚಿತ್ರಗಳು

ತುಮಕೂರು ಜಿಲ್ಲೆಯ ಕನ್ನಮೇಡಿ, ಬಂಗಾರ ನಾಯಕನದುರ್ಗ, ಕಾಮನದುರ್ಗ, ಇಂದ್ರ ಬೆಟ್ಟ, ತಿಪ್ಪಯ್ಯನದುರ್ಗ, ಕೊಲಿಮೆಗೆರೆ ರಾಂಪುರ, ನೇಗಿಲಾಲ, ಹೊಸಹಳ್ಳಿ, ಬುಡಸನಹಳ್ಳಿಗಳಲ್ಲಿ ಹೊಸದಾಗಿ ಪತ್ತೆ ಮಾಡಲಾಗಿದೆ.

೧. ಕನ್ನಮೇಡಿ

ಗ್ರಾಮದ ಪೂರ್ವ ದಿಕ್ಕಿಗಿರುವ ವೆಂಕಾವಧೂತ ಗುಹೆಯ ಬಳಿ ಮುಂಚಾಚಿದ ಹೆಬ್ಬಂಡೆಯ ಕೆಳಗೆ ಬಿಳಿ ಮತ್ತು ಕೆಂಪು ಬಣ್ಣದಲ್ಲಿ ಮನುಷ್ಯ, ಗೂಳಿ, ಬಿಲ್ಲು ಹಿಡಿದ ವ್ಯಕ್ತಿ, ಕೋಲಿನಿಂದ ಪಶುಗಳನ್ನು ಹೊಡೆಯುತ್ತಿರುವ ದೃಶ್ಯ, ಮೆರವಣಿಗೆ ಹೋಗುತ್ತಿರುವ ದೃಶ್ಯ, ಎರಡು ಎತ್ತುಗಳ ಮುಂದೆ ನಿಂತ ವ್ಯಕ್ತಿ, ಕೋತಿ, ಚೇಳಿನ ದೇಹ ಪಕ್ಷಿಯ ತಲೆಯನ್ನು ಹೊಂದಿರುವ ದೃಶ್ಯ, ಎಡಗಾಲನ್ನು ಮಡಚಿ ಬಲಗಾಲನ್ನು ಮುಂದಕ್ಕೆ ಇಟ್ಟು ಸೆರೆಯಾಳುಗುತ್ತಿರುವ ಹಾಗೂ ಅವನ ಎದೆಯ ಭಾಗಕ್ಕೆ ಒದೆಯಲು ಕಾಲನ್ನು ಎತ್ತಿರುವ ವ್ಯಕ್ತಿ, ಮಂಡಲ, ನಾಗರಹಾವು ಹೆಡೆಯನ್ನು ಎತ್ತಿರುವ, ಪೂರ್ಣರೂಪ ನೀಡಿರುವ ಗೂಳಿ, ಒಬ್ಬರ ಕೈ ಮತ್ತೊಬ್ಬರು ಹಿಡಿದು ಗುಂಪು ನೃತ್ಯ ಮಾಡುವ ದೃಶ್ಯ, ಕೆಂಪು ಬಣ್ಣದ ಆಂಜನೇಯನ ಶಿಲ್ಪ ಬಿಳಿ ಬಣ್ಣದಿಂದ ಚಿತ್ರಿಸಲ್ಪಟ್ಟಿವೆ. ಈ ವರ್ಣಚಿತ್ರಗಳಲ್ಲಿ ಗಮನಿಸಬೇಕಾದಂತಹ ಅಂಶವೆಂದರೆ ಕೆಲವು ಮನುಷ್ಯ ಗೂಳಿಯ ಚಿತ್ರಗಳು ಗೆರೆಗಳಂತೆ ಚಿತ್ರಿಸಲ್ಪಟ್ಟಿದ್ದರೆ ಮತ್ತೆ ಕೆಲವು ಚಿತ್ರಗಳಲ್ಲಿ ಮನುಷ್ಯನು ಎರಡೂ ಪಾದಗಳನ್ನು ಸ್ಪಷ್ಟವಾಗಿ ಊರಿರುವ ಕೈಗಳಿಗೆ ಬೆರಳನ್ನು ತಲೆಯ ಭಾಗದಲ್ಲಿ ಮೂಗು, ಕಣ್ಣು, ಬಾಯಿಗಳನ್ನು ಸ್ಪಷ್ಟವಾಗಿ ಮೂಡಿಸಿದ್ದಾನೆ. ಹಾಗೆಯೇ ಗೂಳಿಗೆ ದಷ್ಟಪುಷ್ಟ ಮೈಕಟ್ಟನ್ನು ನೀಡಿದ್ದಾರೆ. ಮತ್ತೆ ಕೆಲವು ಇಂಥ ಚಿತ್ರಗಳ ಮೇಲೆಯೇ ಕೆಂಪು ಬಣ್ಣದಲ್ಲಿ ಮನುಷ್ಯ, ಆಂಜನೇಯ(ಕೋತಿ) ಮತ್ತು ಗೂಳಿಗಳನ್ನು ಚಿತ್ರಿಸಿದ್ದಾರೆ. ಬಹುಶಃ ತುಮಕೂರು ಜಿಲ್ಲೆಯಲ್ಲಿ ಈ ನೆಲೆಯು ಎಲ್ಲ ನೆಲೆಗಳಿಗಿಂತ ಭಿನ್ನವಾಗಿರುವುದು ಗೋಚರಿಸುತ್ತದೆ. ಏಕೆಂದರೆ ಒಂದೇ ಕಲ್ಲಾಸರೆಯಲ್ಲಿ ನವಶಿಲಾಯುಗ, ಬೃಹತ್ ಶಿಲಾಯುಗ, ಇತಿಹಾಸ ಆರಂಭ ಕಾಲಕ್ಕೆ ಸಂಬಂಧಿಸಿದ ಅಷ್ಟು ವರ್ಣಚಿತ್ರಗಳಿರುವುದರಿಂದ ಈ ನೆಲೆಯಲ್ಲಿ ಸಾಂಸ್ಕೃತಿಕ ಚಹರೆಗಳು ನಿರಂತರನಾಗಿ ಮುಂದುವರೆದಿತ್ತು ಎಂಬುದನ್ನು ಅಲ್ಲಗಳೆಯಲಾಗದು. ಅಲ್ಲದೆ ಒಂದು ಸಂಸ್ಕೃತಿ ಜೀವಂತ ಇರುವಾಗಲೇ ಮತ್ತೊಂದು ಸಂಸ್ಕೃತಿ ಪ್ರವೇಶವಾಗಿರುವುದನ್ನು ಈ ವರ್ಣಚಿತ್ರಗಳಿಂದ ತಿಳಿಯಬಹುದು. ಏಕೆಂದರೆ ಒಂದು ಗುಂಪಿಗೂ ಮತ್ತೊಂದು ಗುಂಪಿಗೂ ಘರ್ಷಣೆಯಾಗಿರುವುದು ಹೊಡೆದಾಡುವ ದೃಶ್ಯಾವಳಿಂದ ತಿಳಿಯುತ್ತದೆ. ಇದಕ್ಕೆ ಪೂರಕವಾಗಿ ನವಶಿಲಾಯುಗ, ಶಿಲಾತಾಮ್ರಯುಗ, ಬೃಹತ್ ಶಿಲಾಯುಗ, ಆರಂಭ ಇತಿಹಾಸ ಕಾಲಕ್ಕೆ ಸೇರಿದ ಆಯುಧ, ಮೃತ್‌ಪಾತ್ರೆ ಮೊದಲಾದ ಅವಶೇಷಗಳು ಒಂದೇ ಕಡೆ ಹರಡಿಕೊಂಡಿವೆ.

೨. ಬಂಗಾರನಾಯಕನ ದುರ್ಗ

ಬೆಟ್ಟದ ಮಧ್ಯಭಾಗದಲ್ಲಿ ಬೂದುಗುಂಡು ಎಂಬ ಗುಂಡಿನ ಕೆಳಗೆ ಬಿಳಿ ಬಣ್ಣದ

ವರ್ಣಚಿತ್ರಗಳನ್ನು ಬಿಡಿಸಿದ್ದಾರೆ. ಇವುಗಳಲ್ಲಿ ವ್ಯಕ್ತಿಯ ಪಾದಗಳನ್ನು ಸ್ಪಷ್ಟವಾಗಿ ಊರಿರುವಂತೆ ಆದರೆ ಬೆರಳುಗಳನ್ನು ಚಿತ್ರಿಸಿಲ್ಲ. ಕೈಗಳಲ್ಲಿ ಮಾತ್ರ ದೊಡ್ಡದಾಗಿ ತೋರಿಸಿದ್ದು ಮುಖವನ್ನು ವರಹದಂತೆ ಉದ್ದವಾಗಿ ಬಿಡಿಸಿದ್ದು, ಕಿವಿಗಳನ್ನು ತೋರಿಸಿದ್ದಾರೆ. ಪ್ರತಿ ವ್ಯಕ್ತಿಗೂ ಶಿಶ್ನವನ್ನು ಚಿತ್ರಿಸಿದ್ದಾರೆ. ಒಬ್ಬ ವ್ಯಕ್ತಿಗೆ ಎರಡು ಕಣ್ಣು, ತಲೆಯಲ್ಲಿ ಕೂದಲನ್ನು ಇಳಿಬಿಟ್ಟಿರುವುದು ಸ್ಪಷ್ಟವಾಗಿ ಗೋಚರಿಸುತ್ತದೆ. ಎರಡು ನಾಯಿಗಳು, ಒಬ್ಬ ವ್ಯಕ್ತಿಯನ್ನು ಎರಡು ಕಡೆಯಿಂದ ಕೀಳುತ್ತಿರುವುದು. ಮತ್ತೊಬ್ಬ ದಂಡವನ್ನು ಹಿಡಿದಿರುವ ಸ್ತ್ರೀಯರಿಗೆ ಎದೆಯನ್ನು ಸ್ಪಷ್ಟವಾಗಿ ದೇಹದ ಎರಡೂ ಬದಿಯ ಪಕ್ಕಕ್ಕೆ ತೋರಿಸಿದ್ದು, ಒಬ್ಬ ಸ್ತ್ರೀಯು ತನ್ನ ಎರಡೂ ಮೊಲೆಗಳಲ್ಲಿ ಹಾಲನ್ನು ಇಬ್ಬರೂ ಮಕ್ಕಳಿಗೆ ಉಣಿಸುತ್ತಿರುವುದನ್ನು ಚಿತ್ರಿಸಿದ್ದಾರೆ. ಮತ್ತೊಬ್ಬಾಕೆಯ ಯೋನಿಯಿಂದ ಮಗುವೊಂದು ಹೊರಬರುತ್ತಿರುವ ಚಿತ್ರ ಜೊತೆಗೆ ಆಕೆ ತನ್ನ ಎರಡು ಮೊಲೆಗಳಿಂದ ಹಾಲನ್ನು ಉಣಿಸುತ್ತಿರುವ ಚಿತ್ರವನ್ನು ಬಿಡಿಸಿದ್ದಾರೆ. ಬಹುತೇಕ ಸ್ತ್ರೀಯರಿಗೆ ತಲೆಯ ಭಾಗದಲ್ಲಿ ಜಡೆಯನ್ನು ತೋರಿಸಲಾಗಿದೆ. ಈ ಮಾದರಿಯ ಸ್ತ್ರೀಯರ ಮೂರು ಚಿತ್ರಗಳಿವೆ. ಹಾವೊಂದು ಹೆಡೆಯೆತ್ತಿರುವ ಕಾಲ್ಪನಿಕ ಚಿತ್ರಗಳನ್ನು ಚಿತ್ರಿಸಲಾಗಿದೆ.

ಈ ಚಿತ್ರಗಳ ರಚನಾ ಶೈಲಿಯನ್ನು ಗಮನಿಸಿದರೆ ನವಶಿಲಾಯುಗ ಮತ್ತು ಬೃಹತ್ ಶಿಲಾಯುಗಕ್ಕೆ ಸೇರಿದ ಎರಡು ಚಿತ್ರಗಳಿರುವುದು ಕಂಡುಬರುತ್ತದೆ. ಈ ಚಿತ್ರಗಳಲ್ಲಿರುವ ವಿಶೇಷತೆಯೆಂದರೆ ಹೆರಿಗೆಯ ಕಲ್ಪನೆಯನ್ನು ವಿಷದಪಡಿಸಿರುವಂತಹದ್ದಾಗಿದೆ. ಅಂದರೆ ಅವರಿಗಿದ್ದಂತಹ ಈ ಅಭೂತಪೂರ್ವ ಜ್ಞಾನವನ್ನು ಗಮನಿಸಿದರೆ ಈ ಭಾಗದ ಸಂಸ್ಕೃತಿ ಎಷ್ಟು ಮುಂದುವರೆದಿತ್ತು ಎಂಬುದನ್ನು ತಿಳಿಯಬಹುದಾಗಿದೆ. ತುಮಕೂರು ಜಿಲ್ಲೆಯಲ್ಲಿ ಇಂತಹ ಅದೆಷ್ಟೋ ನೆಲೆಗಳಲ್ಲಿನ ಔಚಿತ್ಯಪೂರ್ಣ ಸಂಗತಿಗಳನ್ನು ಹೊರಗೆಡುವ ಅವಶ್ಯಕತೆ ಮುಂದಿನ ಸಂಶೋಧಕರ ಮೇಲಿದೆ. ಅಲ್ಲದೆ ಆ ನಿಟ್ಟಿನಲ್ಲಿ ಅಧ್ಯಯನಗಳಾಗಬೇಕಿವೆ.

೩. ಕಾಮನದುರ್ಗ

ಈ ಬೆಟ್ಟದ ಮಧ್ಯಭಾಗದಲ್ಲಿ ಬಾಲಂತ ಗುಂಡು ಎಂಬ ಕಲ್ಲಾಸರೆಯಲ್ಲಿ ಬಿಳಿ ಬಣ್ಣದ ವ್ಯಕ್ತಿಗಳ ಚಿತ್ರಗಳಿವೆ.

೪. ಇಂದ್ರ ಬೆಟ್ಟ

ಬೆಟ್ಟದ ತುದಿಯ ಪಶ್ಚಿಮ ದಿಕ್ಕಿನ ಕಲ್ಲಾಸರೆಯಲ್ಲಿ ಬಿಳಿ ಬಣ್ಣದ ಮನುಷ್ಯನ ಚಿತ್ರವಿದೆ.

೫. ತಿಪ್ಪಯ್ಯನದುರ್ಗ

ಬೆಟ್ಟದ ತುದಿಯ ಪೂರ್ವ ದಿಕ್ಕಿನ ಕಲ್ಲಾಸರೆಯಲ್ಲಿ ಬಿಳಿ ಬಣ್ಣದಲ್ಲಿ ಒಬ್ಬನಿಗೆ ತಲೆಯಲ್ಲಿ ಎರಡು ಕೋಡು, ಮತ್ತೊಬ್ಬನಿಗೆ ಒಂದು ಕೋಡು, ಕೋಡಿಲ್ಲದ ಮತ್ತೊಬ್ಬನಿಗೆ ಶಿಶ್ನವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ಹಾಗೆಯೇ ಬಲಗೈ ಮೇಲಕ್ಕೆತ್ತಿ ಎಡಗೈ ನೇರವಾಗಿ ಚಾಚಿರುವ

ವ್ಯಕ್ತಿ, ಕೋಲು ಹಿಡಿದಿರುವ ವ್ಯಕ್ತಿ, ಪಶುಗಳನ್ನು ಹೊಡೆಯುತ್ತಿರುವುದು, ಇಬ್ಬರು ವ್ಯಕ್ತಿಗಳ ಬಳಿ ಗೂಳಿಯಿರುವುದು, ಗೂಳಿ ಮತ್ತು ಅದರ ಕೆಳಗೆ ಸೂರ್ಯನ ಚಿತ್ರಗಳನ್ನು ಚಿತ್ರಿಸಲಾಗಿದೆ.

೬. ಕೊಲಿಮೆಗೆರೆ ರಾಂಪುರ

ಅಕ್ಕಮ್ಮಗಾರು ಬೆಟ್ಟದ ಬುಡದಲ್ಲಿರುವ ಕಲ್ಲಾಸರೆಯಲ್ಲಿ ವ್ಯಕ್ತಿಯೊಬ್ಬ ತನ್ನ ಎರಡು ಅಂಗೈಗಳಲ್ಲಿ ಏನನ್ನೋ ಕೀಳುವಂತಹ ಮತ್ತು ಆತನ ಕೆಳಗೆ ಮಂಡಲವಿರುವ, ವ್ಯಕ್ತಿಯೊಬ್ಬ ಕೋಲು ಹಿಡಿದಿರುವುದು, ಒಂದು ಅಂಗೈ ಮೇಲಕ್ಕೆ ಒಂದು ಅಂಗೈ ಕೆಳಕ್ಕೆ ಹಿಡಿದಿರುವ ವ್ಯಕ್ತಿ, ವೃತ್ತಾಕಾರದ ಮಂಡಲ, ವ್ಯಕ್ತಿಯ ತಲೆಯಲ್ಲಿ ಒಂದು ಕೋಡು ಮತ್ತು ಶಿಶ್ನವನ್ನು ಸ್ಪಷ್ಟವಾಗಿ ತೋರಿಸಲಾಗಿದೆ. ನವಿಲಿನ ತಲೆಯಿರುವ ನಾಟ್ಯ ಭಂಗಿಯಲ್ಲಿ ತ್ರಿಶೂಲವನ್ನು ಯಾರಿಗೂ ಚುಚ್ಚಲು ಹಿಡಿದಂತಹ ವ್ಯಕ್ತಿ, ಗೂಳಿ, ಇಬ್ಬರು ವ್ಯಕ್ತಿಗಳ ಮಧ್ಯೆ ಗೂಳಿ ಮೊದಲಾದ ಚಿತ್ರಗಳು ಬಿಳಿ ಬಣ್ಣದಲ್ಲಿವೆ. ಮತ್ತಿಬ್ಬರು ವ್ಯಕ್ತಿಗಳ ಚಿತ್ರಗಳು ಮಾತ್ರ ಕೆಂಪು ಬಣ್ಣದಲ್ಲಿವೆ.

೭. ನೇಗಿಲಾಲ

ಗ್ರಾಮದ ಪಶ್ಚಿಮಕ್ಕೆ ಪಾಂಡವರ ಗುಹೆಯಲ್ಲಿ ವೃತ್ತಾಕಾರದ ಕಲ್ಲು ಚಪ್ಪಟೆಯಾಕಾರದ ಸಮಾಧಿಯ ಕೆಳಗೆ ಬಿಳಿ ಬಣ್ಣದ ವ್ಯಕ್ತಿಯ ಚಿತ್ರವಿದೆ.

೮. ಹೊಸಹಳ್ಳಿ

ಗುರುದೇವಪ್ಪನ ಬೆಟ್ಟದ ತಪ್ಪಲಿನ ಒಂದನೆಯ ಕರಿಕಲ್ಲು ಗುಡ್ಡದಲ್ಲಿ ಹುಲಿ, ಗೂಳಿ, ಕೋಲು ಹಿಡಿದಿರುವ ವ್ಯಕ್ತಿ, ಇಬ್ಬರು ವ್ಯಕ್ತಿಗಳು ಬೇಟೆಯಾಡಿದ ಪ್ರಾಣಿಯನ್ನು ಒಂದು ಕಟ್ಟಿಗೆಯ ಮಧ್ಯಭಾಗಕ್ಕೆ ಕಟ್ಟಿ ಹೆಗಲ ಮೇಲೆ ಹೊತ್ತೊಯ್ಯುತ್ತಿರುವ ಗೀರುಚಿತ್ರಗಳಿವೆ. ಎರಡನೆಯ ಕರಿಕಲ್ಲು ಗುಡ್ಡದಲ್ಲಿ ಗೂಳಿ, ವ್ಯಕ್ತಿಯ ಚಿತ್ರಗಳನ್ನು ಎರಡೆರಡು ಪಟ್ಟಿಕೆಗಳಿಂದ ಚಿತ್ರಿಸಲಾಗಿದೆ.

೯. ಬುಡಸನಹಳ್ಳಿ

ಗ್ರಾಮದ ಉತ್ತರಕ್ಕಿರುವ ಬೆಟ್ಟದ ತಪ್ಪಲಿನ ೧.೭೦ ಮೀ ಅಗಲ, ೨.೮೦ ಮೀ. ಉದ್ದದ ಒಂದನೆಯ ಕಲ್ಲಾಸರೆಯಲ್ಲಿ(ಕಂಬಾಲಪಲ್ಲಿ ದೇವಾಲಯದ ಬಳಿ) ಬಿಳಿ ಮತ್ತು ಕೆಂಪು ಬಣ್ಣದ ಗೂಳಿ, ವ್ಯಕ್ತಿಯ ಚಿತ್ರಗಳಿವೆ. ಎರಡನೆಯ ಕಲ್ಲಾಸರೆಯಲ್ಲಿ ಗೂಳಿಯ ಬಿಳಿ ಬಣ್ಣದ ವರ್ಣಚಿತ್ರವಿದೆ. ಪಕ್ಕದ ೯.೮೦ ಉದ್ದ ೧೦.೭೦ ಮೀ. ಅಗಲದ ಮೂರನೆಯ ಕಲ್ಲಾಸರೆಯಲ್ಲಿ ಕುಟ್ಟಿ ಅದಕ್ಕೆ ಸುಣ್ಣ ಲೇಪಿಸಿರುವ ಗೂಳಿ ಮತ್ತು ಮೂರು ವ್ಯಕ್ತಿಗಳ ಚಿತ್ರಗಳಿವೆ.

೨.೩.೧೨. ನವ ಶೋಧಿತ ಪ್ರಾಗಿತಿಹಾಸ ನೆಲೆಗಳು

ಜಿಲ್ಲೆಯಾದ್ಯಂತ ೫೩ಕ್ಕೂ ಹೆಚ್ಚು ವಿವಿಧ ಕಾಲಘಟ್ಟಗಳಿಗೆ ಸಂಬಂಧಿಸಿದ ಭೌತಿಕ ಅವಶೇಷಗಳಾದ ಮಡಿಕೆ, ಕುಡಿಕೆ, ಆಯುಧೋಪಕರಣ, ಗವಿಚಿತ್ರ, ಗೀರುಚಿತ್ರ, ಕುಟ್ಟಿದ ಚಿತ್ರ ಮೊದಲಾದವು ಪತ್ತೆಯಾಗಿವೆ.

ಪಾವಗಡ ತಾಲೂಕು

ಕ್ರಸಂ.	ಗ್ರಾಮ	ಸೂಕ್ಷ್ಮ ಶಿಲಾಯುಗ	ನವಶಿಲಾಯುಗ		ಬೃಹತ್ ಶಿಲಾಯುಗ		ಆರಂಭ ಇತಿಹಾಸ ಕಾಲ	ನಿವೇಶನದ ಸ್ಥಳ
			ವಸತಿ ನೆಲೆ	ವರ್ಣಚಿತ್ರ ಗೀರುಚಿತ್ರ	ವಸತಿ ನೆಲೆ	ಗೋರಿ		
೧.	ಹೊಸದುರ್ಗ		✓					ಬೆಟ್ಟದ ತಪ್ಪಲು
೨.	ಕಾಮನದುರ್ಗ		✓	✓			✓	ಬೆಟ್ಟದ ತುದಿ
೩.	ಬ್ಯಾಡನೂರು		✓					ಬೆಟ್ಟದಲ್ಲಿ
೪.	ತಿಪ್ಪಯ್ಯನದುರ್ಗ	✓	✓	✓	✓		✓	ಬೆಟ್ಟದ ತುದಿ
೫.	ಕೆ.ರಾಂಪುರ	✓	✓					ಅಕ್ಕಮ್ಮಗಾರು ಬೆಟ್ಟದ ತಪ್ಪಲು
೬	ಇಂದ್ರಬೆಟ್ಟ	✓	✓	✓			✓	ಬೆಟ್ಟದ ತುದಿ ಮತ್ತು ತಪ್ಪಲು
೭.	ಒಬೇನಹಳ್ಳಿ		✓		✓	✓	✓	ಗ್ರಾಮದ ಪಶ್ಚಿಮ ದಿಕ್ಕಿನ ಬಯಲು
೮.	ಹೊಸಹಳ್ಳಿ ತಾಂಡ		✓					ಬೆಟ್ಟದ ತುದಿ
೯.	ಸೂಲನಾಯಕನಹಳ್ಳಿ		✓				✓	ಶಿವಾಲಯ ದೇವಾಲಯ
೧೦.	ಸಿಂಗರೆಡ್ಡಿಹಳ್ಳಿ		✓					ಬೆಟ್ಟದ ತಪ್ಪಲು
೧೧.	ಮಾರಮ್ಮನಹಳ್ಳಿ		✓					ಮಾರಮ್ಮ ದೇವಾಲಯ
೧೨.	ಯರ್ರಮ್ಮನಹಳ್ಳಿ			✓				ಬೆಟ್ಟದ ತುದಿ
೧೩.	ಹೊಸಹಳ್ಳಿ (ಅರಸೀಕೆರೆ)		✓	✓	✓			ಮಜ್ಜಿಗೆ ಬಂಡೆ
೧೪.	ದೇವರಬೆಟ್ಟ	✓	✓		✓	✓		ಬೆಟ್ಟದಲ್ಲಿ
೧೫.	ಬಂಗಾರನಾಯಕನಬೆಟ್ಟ		✓	✓			✓	ಬೆಟ್ಟದ ಮಧ್ಯ ಭಾಗ

೧೬.	ಸಾರವಾಟಪುರ		✓		✓		✓	ಗ್ರಾಮದ ಈಶಾನ್ಯ ದಿಕ್ಕಿನ ಬಯಲು ಪ್ರದೇಶ
೧೭.	ಮಧುರಾಯನಪಾಳ್ಯ		✓					ಅಕ್ಕಮ್ಮಗಾರು ದೇವಾಲಯ
೧೮.	ಹೊಸಹಟ್ಟಿ		✓					ಗ್ರಾಮದ ಉತ್ತರ ದಿಕ್ಕಿಗೆ
೧೯.	ಗಂಗಾಧರೇಶ್ವರ ಗುಡ್ಡದ ಗೇಟ್		✓					ದುರ್ಗಮ್ಮ ದೇವಾಲಯ
೨೦.	ವೀರನಾಗನಹಳ್ಳಿ		✓					ಮಾರಮ್ಮ ದೇವಾಲಯದ ಬಳಿ ಮತ್ತು ಬೆಟ್ಟದ ತಪ್ಪಲು
೨೧.	ಕಡಪಲ ಕೆರೆ		✓					ದುರ್ಗಮ್ಮ ದೇವಾಲಯದ ಬಳಿ ಮತ್ತು ಬೆಟ್ಟದ ತಪ್ಪಲು
೨೨.	ಗೊರಸಮಾವು		✓					ಮಾರಮ್ಮ ದೇವಾಲಯದ ಮತ್ತು ಬಯಲು ಪ್ರದೇಶ
೨೩.	ರಾಂಪೇಟಗೇಟ್		✓					ಮಾರಮ್ಮ ದೇವಾಲಯ ಮತ್ತು ಬಯಲು ಪ್ರದೇಶ
೨೪.	ಪಳವಳ್ಳಿಗೇಟ್ (ವೈ.ಎನ್. ಹೊಸಕೋಟೆ ಹೆದ್ದಾರಿ)		✓					ದುರ್ಗಮ್ಮ ದೇವಾಲಯ

೨೫.	ದವಡಬೆಟ್ಟ	✓		✓			✓	ಬೆಟ್ಟದ ತಪ್ಪಲು
೨೬.	ಗುಜ್ಜನಾಡು		✓					ಅಕ್ಕ್ಯಾತಮ್ಮ ದೇವಾಲಯ ಬೆಟ್ಟದ ತಪ್ಪಲು
೨೭.	ಕನ್ನೆಲಬೆಟ್ಟ		✓					ಅಕ್ಕಮ್ಮ ದೇವಾಲಯ
೨೮.	ಬುಡಸನಹಳ್ಳಿ		✓	✓	✓		✓	ಬೆಟ್ಟದ ತಪ್ಪಲು
೨೯.	ರಾಜನಬಂಡೆ		✓					ಬೆಟ್ಟದ ಮೇಲ್ಭಾಗ
೩೦.	ಕುರುಬರಹಳ್ಳಿ		✓					ಮಾರಮ್ಮ ದೇವಾಲಯದ ಬಳಿ
೩೧.	ಕನ್ನಮೇಡಿ		✓	✓	✓	✓	✓	ಬೆಟ್ಟದ ತಪ್ಪಲು, ವೆಂಕಾವಧೂತ ಗುಹೆ ಬಳಿ
೩೨.	ಮುಗದಾಳ ಬೆಟ್ಟ							ಬೆಟ್ಟದ ಮೇಲ್ಭಾಗ
೩೩.	ನಲಿಗಾನಹಳ್ಳಿ		✓		✓	✓	✓	ಬತ್ತದಗುಂಡು ಬಳಿ
೩೪.	ಬೊಮ್ಮತನಹಳ್ಳಿ		✓		✓	✓	✓	ಬಸವನದುರ್ಗದ ಬಳಿ

ಮಧುಗಿರಿ ತಾಲೂಕು

ಕ್ರಸಂ.	ಗ್ರಾಮ	ಸೂಕ್ಷ್ಮ ಶಿಲಾಯುಗ	ನವಶಿಲಾಯುಗ		ಬೃಹತ್ ಶಿಲಾಯುಗ		ಆರಂಭ ಇತಿಹಾಸ ಕಾಲ	ನಿವೇಶನದ ಸ್ಥಳ
			ವಸತಿ ನೆಲೆ	ವರ್ಣಚಿತ್ರ ಗೀರುಚಿತ್ರ	ವಸತಿ ನೆಲೆ	ಗೋರಿ		
೩೫.	ಬೂದೇನಹಳ್ಳಿ		✓		✓		✓	ಗ್ರಾಮದ ಪಶ್ಚಿಮಕ್ಕೆ ಜಯ ಮಂಗಲಿ ನದಿಯ ತೀರದಲ್ಲಿ
೩೬.	ಎಮ್ಮೆತಿಮ್ಮನಹಳ್ಳಿ		✓					ಚೌಡಮ್ಮ ದೇವಾಲಯದ ಬಯಲು

೩೭.	ಬೇಡತ್ತೂರು		✓		✓	✓	✓	ಬೆಟ್ಟದ ತಪ್ಪಲು
೩೮.	ಗುಟ್ಟೆ							ಬೆಟ್ಟದ ತಪ್ಪಲು
೩೯.	ಅಪ್ಪೇನಹಳ್ಳಿ		✓					ಭೂತರಾಯ ದೇವಾಲಯ
೪೦.	ರೆಡ್ಡಿಹಳ್ಳಿ	✓						ಮಾರಮ್ಮ ದೇವಾಲಯ
೪೧.	ಕಡಗತ್ತೂರು		✓					ಭೀಮಲಿಂಗೇಶ್ವರ ದೇವಾಲಯ
೪೨.	ಚಂದ್ರಗಿರಿ	✓	✓		✓		✓	ಬೆಟ್ಟದ ತಪ್ಪಲು
೪೩.	ಕೂಡ್ಲಾಪುರ		✓		✓		✓	ಸೂರ್ಯ ನಾರಾಯಣ ದೇವಾಲಯದ ಬಯಲು
೪೪.	ಗರಣಿ		✓					ಭೂತರಾಯನ ದೇವಾಲಯ
೪೫.	ವೀರಣ್ಣೇಶ್ವರ ಬೆಟ್ಟ		✓					ಬೆಟ್ಟದ ಮೇಲ್ಭಾಗ
೪೬.	ಪುಲಮಾಚಿ							ಭೂತಪ್ಪ ದೇವಾಲಯ
೪೭.	ತೋಟಮಡಗು		✓					ಬೆಟ್ಟದಲ್ಲಿ
೪೮.	ಕ್ಯಾತಗೊಂಡ ನಹಳ್ಳಿ					✓		ಗ್ರಾಮಮಧ್ಯದ ಗುಟ್ಟೆಯಲ್ಲಿ

ಕೊರಟಗೆರೆ ತಾಲೂಕು

ಕ್ರಸಂ.	ಗ್ರಾಮ	ಸೂಕ್ಷ್ಮ ಶಿಲಾಯುಗ	ನವಶಿಲಾಯುಗ		ಬೃಹತ್ ಶಿಲಾಯುಗ		ಆರಂಭ ಇತಿಹಾಸ ಕಾಲ	ನಿವೇಶನದ ಸ್ಥಳ
			ವಸತಿ ನೆಲೆ	ವರ್ಣಚಿತ್ರ ಗೀರುಚಿತ್ರ	ವಸತಿ ನೆಲೆ	ಗೋರಿ		
೪೯.	ಕಮ್ಮನಕೋಟೆ		✓					ದುರ್ಗಮ್ಮ ದೇವಾಲಯ

೫೦.	ನೇಗಿಲಾಲ				✓	✓	✓	ಗ್ರಾಮದ ಪಶ್ಚಿಮ ದಿಕ್ಕಿನ ಪಾಂಡವರ ಗುಟ್ಟೆಯಲ್ಲಿ

ಸಿರಾ ತಾಲೂಕು

ಕ್ರಸಂ.	ಗ್ರಾಮ	ಸೂಕ್ಷ್ಮ ಶಿಲಾಯುಗ	ನವಶಿಲಾಯುಗ		ಬೃಹತ್ ಶಿಲಾಯುಗ			
			ವಸತಿ ನೆಲೆ	ವರ್ಣಚಿತ್ರ ಗೀರುಚಿತ್ರ	ವಸತಿ ನೆಲೆ	ಗೋರಿ	ಆರಂಭ ಇತಿಹಾಸ ಕಾಲ	ನಿವೇಶನದ ಸ್ಥಳ
೫೧.	ಜೆಟ್ಟಿ ಅಗ್ರಹಾರ		✓					ಗ್ರಾಮದ ಪೂರ್ವಕ್ಕೆ
೫೨.	ಶಿರಾದಡವು			✓				ಬೆಟ್ಟದ ಮೇಲ್ಭಾಗ ಕಲ್ಲಾಸರೆ

ಮಡಕಶಿರ ತಾಲೂಕು(ಆಂಧ್ರಪ್ರದೇಶ)

ಕ್ರಸಂ.	ಗ್ರಾಮ	ಸೂಕ್ಷ್ಮ ಶಿಲಾಯುಗ	ನವಶಿಲಾಯುಗ		ಬೃಹತ್ ಶಿಲಾಯುಗ			
			ವಸತಿ ನೆಲೆ	ವರ್ಣಚಿತ್ರ ಗೀರುಚಿತ್ರ	ವಸತಿ ನೆಲೆ	ಗೋರಿ	ಆರಂಭ ಇತಿಹಾಸ ಕಾಲ	ನಿವೇಶನದ ಸ್ಥಳ
೫೩.	ಪತ್ತಿಕುಂಟ		✓	✓	✓		✓	ಅಕ್ಕಮ್ಮಗಾರ್ಲುಗುಟ್ಟ
೫೪.	ಕೋತಲಗುಟ್ಟ		✓					ಶಿವ ದೇವಾಲಯ
೫೫.	ಗುಂಡುಮಾಲ ಗೇಟ್		✓					ದುರ್ಗಮ್ಮ ದೇವಾಲಯ

೨.೪. ಇತಿಹಾಸ ಕಾಲ

ಕರ್ನಾಟಕದ ಬಯಲುಸೀಮೆಯ ಜಿಲ್ಲೆಗಳಲ್ಲಿ ಒಂದಾಗಿರುವ ತುಮಕೂರು ಜಿಲ್ಲೆಯು ಮಂಡ್ಯ, ಚಿತ್ರದುರ್ಗ, ಹಾಸನ, ಚಿಕ್ಕಮಗಳೂರು, ಬೆಂಗಳೂರು, ಚಿಕ್ಕಬಳ್ಳಾಪುರ, ಆಂಧ್ರಪ್ರದೇಶದ ಅನಂತಪುರ ಜಿಲ್ಲೆಗಳಿಂದ ಸುತ್ತುವರೆದಿದೆ. ಕರ್ನಾಟಕದ ಸಾಂಸ್ಕೃತಿಕ ಬದುಕಿನಲ್ಲಿ ವಿಶಿಷ್ಟ ಚಾಪು ಮೂಡಿಸಿರುವ ಜಿಲ್ಲೆಯು ಕದಂಬ ಮಹರ್ಷಿಗಳ ತಪೋಭೂಮಿಯೂ, ಮೃಕಂಡು ಮುನಿಗಳ ಯೋಗಭೂಮಿಯೂ, ಗೌತಮ ಮುನಿಗಳ ಆಶ್ರಮವೂ, ಶ್ರೀರಾಮ ಪಾಂಡವರಾದಿ ಮಹಾನ್ ಪುರುಷರು ನಲಿದಾಡಿದ ಭೂಮಿಯು, ಮಹಾಭಾರತದ ಸುಧನ್ವ ಆಳಿದ ಚಂಪಕಾ ನಗರವೂ[೪೫] ಹೌದು! ಹೀಗೆ ಪುರಾಣಾದಿಗಳಿಂದಲೂ ಗುರುತಿಸಿಕೊಂಡಿರುವ ಜಿಲ್ಲೆ

ನೇರವಲ್ಲದಿದ್ದರೂ ಪರೋಕ್ಷವಾಗಿಯಾದರೂ ಮೌರ್ಯರಿಂದ ಹಿಡಿದು ಬ್ರಿಟೀಷರವರೆಗೆ ಹಲವು ಅರಸುಮನೆತನಗಳ ಆಳ್ವಿಕೆಗೆ ಒಳಪಟ್ಟಿತ್ತು. ಅದರ ಕುರುಹಾಗಿ ಹಲವು ಕೋಟೆ, ಕೊತ್ತಲ, ದೇವಾಲಯ, ಕೆರೆ, ಬಾವಿ, ಶಾಸನ, ಕಟ್ಟಡಗಳಂತಹವುಗಳನ್ನು ಬಿಟ್ಟುಹೋಗಿದ್ದಾರೆ. ಕಾಲಗರ್ಭದಲ್ಲಿ ಅದೆಷ್ಟೋ ಆಕರಗಳು ಅವಶೇಷಗಳಾಗಿ ಉಳಿದಿವೆ. ಅಂತಹ ಪ್ರತಿಯೊಂದು ಅವಶೇಷದ ಹಿಂದೆ ನಿಖರವಾದ ಸಂಗತಿಗಳು ಅಡಗಿಕೊಂಡಿದ್ದು, ಪ್ರಸ್ತುತ ಮಹಾಪ್ರಬಂಧದಲ್ಲಿ ಇಂತಹ ಸಂಗತಿಗಳ ಮೇಲೆ ಬೆಳಕು ಚೆಲ್ಲುವ ಪ್ರಯತ್ನ ಮಾಡಲಾಗಿದೆ.

ಐತಿಹಾಸಿಕವಾಗಿ, ಪೌರಾಣಿಕವಾಗಿ ಭಿನ್ನವಾದ ನೆಲೆಗಟ್ಟನ್ನು ಹೊಂದಿರುವ ತುಮಕೂರಿನ ಉಲ್ಲೇಖ ಕ್ರಿ.ಶ.೧೫೫೫-೫೬ರ ಸೋಮೇಶ್ವರ ದೇವಾಲಯದಲ್ಲಿನ ಶಾಸನವು ತುಮ್ಮಗೂರು, ತುಂಬೆವೂರು ಎಂದೂ, (Ecvol Tuis p-77-78) ಕ್ರಿ.ಶ. ೧೫೫೫ರ ಅರಕೆರೆ ಶಾಸನವು ತುಮಕೊರ ಸೀಮೆ ಎಂಬುದಾಗಿ ಉಲ್ಲೇಖಿಸಿದೆ. ಆದರೆ ಐತಿಹ್ಯವೊಂದರ ಪ್ರಕಾರ ಕ್ರೀಡಾಪುರವನ್ನು (ಇಂದಿನ ಕೈದಾಳ) ಆಳ್ವಿಕೆ ಮಾಡುತ್ತಿದ್ದ ಗಂಗರ ಸಾಮಂತ ರಾಜರು ಈ ಪ್ರದೇಶದಲ್ಲಿ ಎತ್ತರವಾದ ದಿನ್ನೆಯೊಂದನ್ನು ನಿರ್ಮಿಸಿ ಶತ್ರುಗಳ ಚಲನವಲನ ವೀಕ್ಷಿಸಲು ಸೈನಿಕ ತುಕಡಿಯೊಂದನ್ನು ನೇಮಿಸಿದ್ದರಂತೆ. ಶತ್ರುಗಳು ಸಮೀಪಿಸಿದಾಗ ಅವರು ಜೋರಾಗಿ ನಗಾರಿ ಮತ್ತು ಟುಮಕಿ ಎಂಬ ವಾದ್ಯಗಳನ್ನು ಬಾರಿಸುತ್ತಿದ್ದರಂತೆ. ಇದರಿಂದ ಶತ್ರುಗಳು ಬಂದಿರುವರೆಂದು ಕೋಟೆ ಬಾಗಿಲುಗಳನ್ನು ಭದ್ರಪಡಿಸಿಕೊಳ್ಳುತ್ತಿದ್ದರೆಂದು ತಿಳಿಸುತ್ತದೆ. ಆದರೆ ಮತ್ತೊಂದು ವಾದವು ಕ್ರೀಡಾಪುರ ಸಂಸ್ಥಾನಕ್ಕೆ ಬೇಕಾದ ಸಿಡಿಮದ್ದುಗಳನ್ನು ತಯಾರಿಸುತ್ತಿದ್ದಾರೆಂದು, ಒಮ್ಮೆ ಇಲ್ಲಿಯೇ ಸಿಡಿದಿದ್ದರಿಂದ ಅದೇ ಶಬ್ದದಿಂದ ಈ ಪ್ರದೇಶ ಪ್ರಸಿದ್ಧಿಗೆ ಬಂದಿತೆಂದು, ಕ್ರಮೇಣ ಟುಂಕಿ, ಟುಮುಕಿ ಎಂಬ ಶಬ್ದಗಳೇ ಟುಮಕೂರು, ತುಮಕೂರು ಎಂಬ ಪದದ ಮೂಲಕ್ಕೆ ಕಾರಣವಾಯಿತೆಂದು ಹೇಳಲಾಗುತ್ತದೆ. ಆದರೂ ವಿಶೇಷವಾಗಿ ಈ ಪ್ರದೇಶದಲ್ಲಿ ತುಂಬೆ ಮತ್ತು ತೆಂಗಿನ ಗಿಡಗಳು ಹೇರಳವಾಗಿರುವುದರಿಂದ ಸಸ್ಯವಾಚಕದ ಹಿನ್ನೆಲೆಯಿಂದಲೂ ತುಮಕೂರು ಎಂಬ ಹೆಸರು ಬಂದಿರುವ ಸಾಧ್ಯತೆಗಳನ್ನು ಅಲ್ಲಗಳೆಯಲಾಗದು. ಜಿಲ್ಲೆಯಲ್ಲಿರುವ ಶಾಸನಗಳನ್ನು ಗಮನಿಸಿದರೆ ತುಮಕೂರು ಎಂಬ ನಾಮದ ಉಲ್ಲೇಖ ಕ್ರಿ.ಶ. ೧೦ನೆಯ ಶತಮಾನಕ್ಕಿಂತ ಹಿಂದಿನ ಯಾವ ಶಾಸನಗಳಲ್ಲೂ ಸಿಗುವುದಿಲ್ಲ. ಏಕೆಂದರೆ ಇಂದಿನ ಕ್ರೀಡಾಪುರ ಅಥವಾ ಕೈದಾಳವು ತುಮಕೂರಿಗೆ ತೀರ ಹತ್ತಿರದಲ್ಲಿ ಇರುವುದರಿಂದ ಕ್ರಿ.ಶ. ೧೦ನೆಯ ಶತಮಾನಕ್ಕಿಂತ ಹಿಂದೆ ಇಲ್ಲಿ ಗಂಗರ ಸಾಮಂತ ಮನೆತನ ಆಳ್ವಿಕೆ ನಡೆಸುತ್ತಿತ್ತು. ಹೀಗಾಗಿ ಇಂದಿನ ತುಮಕೂರು ಭಾಗದಲ್ಲಿ ಕ್ರೀಡಾಪುರದ ಅರಸರು ತಮ್ಮ ರಾಜಧಾನಿ ರಕ್ಷಣೆಗಾಗಿ ಕೇವಲ ಒಂದು ದಿನ್ನೆಯನ್ನು ನಿರ್ಮಿಸಿ ಕಾವಲಿಗಾಗಿ ಸೇನೆಯನ್ನು ನೇಮಿಸಿದ್ದು ತಿಳಿದುಬರುತ್ತದೆ. ನಗರದ ಸುತ್ತಲೂ ನಿರ್ಮಾಣಗೊಂಡ ಐದು ಕೆರೆಗಳಲ್ಲಿ ಸದಾ ನೀರು ತುಂಬಿ ತುಳುಕುತ್ತಿದ್ದುದರಿಂದ

ತುಮಕೇನಹಳ್ಳಿಯು, ತುಮ್ಮೆವೂರು ಆಗಿ ಕಾಲಾಂತರದಲ್ಲಿ ತುಮಕೂರು ಎಂಬುದಾಗಿ ಪರಿವರ್ತನೆ ಹೊಂದಿರುವ ಸಾಧ್ಯತೆಗಳೇ ಹೆಚ್ಚು. ಹೀಗೆ ಹಲವು ಸ್ವಾರಸ್ಯಕರವಾದ ಸಂಗತಿಗಳ ನೆಲೆವೀಡಾದ ತುಮಕೂರು ಜಿಲ್ಲೆಯನ್ನು ಹಲವು ರಾಜ ಮನೆತನಗಳು, ಪಾಳೆಯಪಟ್ಟುಗಳು ಆಳ್ವಿಕೆ ಮಾಡಿರುವುದು ಅವರು ಬಿಟ್ಟುಹೋದ ಪ್ರಾಚ್ಯಾವಶೇಷಗಳಿಂದ ತಿಳಿಯುತ್ತದೆ.

೨.೪.೧. ಮೌರ್ಯರು

ತುಮಕೂರು ಜಿಲ್ಲೆಯನ್ನು ಮೌರ್ಯರು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡಿದ್ದರು. ಅದಕ್ಕೆ ಸಂಬಂಧಿಸಿದ ಶಾಸನಗಳು ದೊರೆತಿವೆಯೇ? ಎಂಬ ವಿಚಾರಗಳನ್ನು ಚರ್ಚಿಸಿದರೆ, ತುಮಕೂರು ಜಿಲ್ಲೆಯಲ್ಲಿ ನಂದ ಮೌರ್ಯರಂತಹ ಅರಸು ಮನೆತನಗಳ ಪಾತ್ರ ನಗಣ್ಯವೆನಿಸುತ್ತದೆ. ಆದರೂ ಎಲ್ಲವನ್ನು ಶಾಸನಗಳಿಂದಲೇ ತಿಳಿಯುತ್ತವೆ ಎಂದರೂ ಈ ದೇಶದ ಚರಿತ್ರೆಯನ್ನು ಕಟ್ಟಲು ಸಾಧ್ಯವಿಲ್ಲ. ಕೆಲವೊಮ್ಮೆ ಮಿಥ್ಯಗಳಲ್ಲಿರುವ ಸತ್ಯಾಂಶಗಳನ್ನು ಹುಡುಕಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಬ್ರಹ್ಮಗಿರಿಯು ತುಮಕೂರು ಜಿಲ್ಲೆಗೆ ಕೇವಲ ೯೦ ಕಿ.ಮೀ.ಗಿಂತಲೂ ಕಡಿಮೆ ಅಂತರದಲ್ಲಿದೆ. ಅದು ಅಲ್ಲದೆ ಬ್ರಹ್ಮಗಿರಿ ಶಾಸನವೇ ಮೌರ್ಯರ ಗಡಿಯಂಚಿನ ಶಾಸನ ಎಂದ ಮಾತ್ರಕ್ಕೆ ಅದರಾಚೆಗೆ ಸಾಮ್ರಾಜ್ಯ ವಿಸ್ತಾರಗೊಂಡಿರಲಿಲ್ಲವೇ ಎಂಬ ಸಂದೇಹ ಏರ್ಪಡುತ್ತದೆ. ಒಂದು ವೇಳೆ ಬ್ರಹ್ಮಗಿರಿಯೇ ದಕ್ಷಿಣ ಭಾರತದ ಮೌರ್ಯರ ಗಡಿಭಾಗವಾಗಿದ್ದರೆ, ತನ್ನ ಸಾಮ್ರಾಜ್ಯದ ಗಡಿ ಭಾಗವಾದ ಬ್ರಹ್ಮಗಿರಿಯಿಂದ ಪಶ್ಚಿಮಕ್ಕೆ ೨೦೦ ಕಿ.ಮೀ.ಗೂ ಹೆಚ್ಚು ದೂರದಲ್ಲಿರುವ ಶ್ರವಣಬೆಳಗೊಳ ಅಥವಾ ಕಳ್ವಬೊಪ್ಪದಲ್ಲಿ ಸಂಪ್ರತಿ ಚಂದ್ರಗುಪ್ತಮೌರ್ಯ, ಭದ್ರಬಾಹುವಿನೊಂದಿಗೆ ಬಂದು ಸಲ್ಲೇಖನ ವ್ರತ ಕೈಗೊಳ್ಳಲು ಮನಸ್ಸು ಮಾಡುತ್ತಿರಲಿಲ್ಲ. ಒಂದುವೇಳೆ ಅದು ಜೈನರ ಪವಿತ್ರ ಕ್ಷೇತ್ರವಾಗಿ ಆ ಕಾಲಘಟ್ಟಕ್ಕೆ ರೂಪುಗೊಂಡಿದ್ದಾದರೆ ಅದನ್ನು ತನ್ನ ಸಾಮ್ರಾಜ್ಯಕ್ಕೆ ಸೇರಿಸಿಕೊಳ್ಳದೇ ಇರುತ್ತಿರಲಿಲ್ಲ. ಹಾಗಾಗಿ ಈ ಕ್ಷೇತ್ರಕ್ಕೆ ಹೊಂದಿಕೊಂಡಿರುವ ತುಮಕೂರು ಜಿಲ್ಲೆಯು ಸಹ ಮೌರ್ಯರ ಆಡಳಿತಕ್ಕೆ ಒಳಪಟ್ಟಿತ್ತು ಎಂಬುದನ್ನು ಸಾಮಾನ್ಯವಾಗಿ ಒಪ್ಪಿಕೊಳ್ಳಲೇಬೇಕಾಗುತ್ತದೆ. ಆದರೆ ಮೌರ್ಯರ ಕಾಲಕ್ಕೆ ಜಿಲ್ಲೆಯಲ್ಲಿ ಕೋಟೆ ಕೊತ್ತಲಗಳ ನಿರ್ಮಾಣ ಕಾರ್ಯ ಆರಂಭವಾಗಿತ್ತೇ ಎಂಬುದಕ್ಕೆ ಖಚಿತವಾದ ದಾಖಲೆಗಳ ಕೊರತೆ ಇರುವುದರಿಂದ ಇವರ ಕಾಲದಲ್ಲಿ ರಚಿಸಲ್ಪಟ್ಟವೆಂದು ಹೇಳುವ ಯಾವ ಕೋಟೆಗಳನ್ನೂ ಗುರುತಿಸಲಾಗಿಲ್ಲ.

೨.೪.೨. ಶಾತವಾಹನರು (ಕ್ರಿಪೂ. ೧೨೧ರಿಂದ ಕ್ರಿಶ. ೧೭೪)

ಮೌರ್ಯರಂತೆಯೇ ಶಾತವಾಹನರ ಆಳ್ವಿಕೆಗೆ ಸಂಬಂಧಿಸಿದ ಯಾವ ಪುರಾತತ್ವೀಯ ಆಕರಗಳನ್ನು ಜಿಲ್ಲೆಯಲ್ಲಿ ಕಾಣಲಾಗದು. ಒಂದುವೇಳೆ ಅವು ಇದ್ದಿರಬಹುದಾದರೆ ಅವು ಕಾಲಗರ್ಭದಲ್ಲಿ ಮಾನವನ ಸ್ವಾರ್ಥಕ್ಕೆ ಸಿಲುಕಿ ಅವಸಾನದ ಹಾದಿ ಹಿಡಿದಿವೆ. ಹಾಗಾಗಿ

ಜಿಲ್ಲೆಯಲ್ಲಿ ಶಾತವಾಹನರಿಗೆ ಸಂಬಂಧಿಸಿದ ಯಾವ ಭೌತಿಕ ಅವಶೇಷಗಳನ್ನು ಕಾಣಲಾಗದು. ಆದರೂ ತುಮಕೂರಿನ ಸ್ಥಳನಾಮ, ಸ್ಥಳಪುರಾಣಗಳನ್ನು ವಿವೇಚಿಸಿದರೆ ತುಮಕೂರು ಜಿಲ್ಲೆಯು ಶಾತವಾಹನರ ಆಳ್ವಿಕೆಗೆ ಒಳಪಟ್ಟಿರುವುದರಲ್ಲಿ ಎರಡು ಮಾತಿಲ್ಲ. ಇಂದಿನ ತುರುವೇಕೆರೆ ತಾಲೂಕಿನ ತಂಡಗದ ಸ್ಥಳಪುರಾಣವೊಂದು ಪೈಠಾಣದಲ್ಲಿ ಆಳ್ವಿಕೆ ಮಾಡುತ್ತಿದ್ದ ಸತ್ಯವರ್ಮನೆಂಬುವವನು ವಿಕ್ರಮನಿಂದ ಬಂಧಿತನಾಗಿ ಸೆರೆಮನೆಗೆ ತಳ್ಳಲ್ಪಟ್ಟನು. ಆಕಸ್ಮಿಕವಾಗಿ ಬಂಧನದಿಂದ ಮುಕ್ತನಾದ ಸತ್ಯವರ್ಮನು ಕುಂತಳಾ ದೇಶದ ತಂಡಗ ಗ್ರಾಮಕ್ಕೆ ಬಂದಾಗ ಬೈರಶೆಟ್ಟಿಯೊಂದಿಗೆ ಪರಿಚಯವಾಗಿ ಅವನ ಮಗಳಾದ ಶಾಂತಿಮತಿಯನ್ನು ವರಿಸಿ ಕೆಲ ದಿನಗಳ ನಂತರ ಉಜ್ಜೈನಿ ನಗರಕ್ಕೆ ಹೋದನು. ಆದರೆ ಅಲ್ಲಿಯು ವಿಕ್ರಮನಿಂದ ಬಂಧನಕ್ಕೊಳಗಾದ. ಕೊನೆಗೆ ಶಾಂತಿಮತಿಗೆ ಜನಿಸಿದ ಶಾಲಿವಾಹನ ಎಂಬ ಮಗ ತನ್ನ ತಾತನ ಸಂಬಂಧಿಕರಾದ ನಾಗಪ್ಪ ಮತ್ತು ಅವನ ತಂಗಿ ದುರ್ಗಮತಿಯರಿಂದ ವಿಕ್ರಮನ ವಿರುದ್ಧ ವೀರಾವೇಶದಿಂದ ಹೋರಾಡಿ ತನ್ನ ತಂದೆಯನ್ನು ಸೆರೆಮನೆಯಿಂದ ಬಿಡಿಸಿ ಶತ್ರುಸಂಹಾರ ಮಾಡಿದನೆಂದು ವಿಕ್ರಮನ ಮಗಳಾದ ಪುಷ್ಪವತಿಯನ್ನು ವಿವಾಹವಾಗುವುದರ ಮೂಲಕ ಪೈಠಾಣದಲ್ಲಿ ಶಾತವಾಹನ ಸಾಮ್ರಾಜ್ಯ ಸ್ಥಾಪಿಸಿದನೆಂದು[೪೬], ಈ ಶಾಲಿವಾಹನನೇ ಶಕಪುರುಷನೆಂದು ಸಂಬೋಧಿತನಾಗಿ ಕರೆಯಲ್ಪಟ್ಟಿದ್ದು.

ಶಾಲಿವಾಹನನು ಚಾರಿತ್ರಿಕ ದಾಖಲೆಗಳಲ್ಲಿ ಸಿಮುಖನೆಂದು ಉಲ್ಲೇಖಿತನಾಗಿದ್ದಾನೆ. ಇದಕ್ಕೆ ಪೂರಕವೆಂಬಂತೆ ಮಧುಗಿರಿ ತಾಲೂಕಿನ ಇಂದಿನ ಪುಲಮಾಚಿ ಎಂಬ ಗ್ರಾಮವು ವಸಿಷ್ಟಪುತ್ರ ಪುಲಮಾಯಿಯಿಂದ ಬಂದಿರಬೇಕು. ಏಕೆಂದರೆ ಪುಲಮಾಯಿ ಎಂಬ ಹೆಸರಿನಲ್ಲಿನ 'ಯಿ' ಅಪಭ್ರಂಶವಾಗಿ ಅದರ ಸ್ಥಾನದಲ್ಲಿ 'ಚಿ' ಎಂಬ ಅಕ್ಷರ ಸೇರ್ಪಡೆಯಾಗಿರುವುದನ್ನು ಗಮನಿಸಿದರೆ ಶಾತವಾಹನ ಅರಸ ಪುಲಮಾಯಿಗೂ ಪುಲಯಾಚಿ ಗ್ರಾಮಕ್ಕೂ ಸಂಬಂಧವಿದ್ದಿರಲೇಬೇಕು. ಏಕೆಂದರೆ ಶಕರ ರುದ್ರದಾಮನು ಇಂದಿನ ಪೈಠಾಣವನ್ನು ವಶಪಡಿಸಿಕೊಂಡಾಗ ಪುಲಮಾಯಿ ಕೆಲವು ಕಾಲ ಅಧಿಕಾರವನ್ನು ಕಳೆದುಕೊಂಡ ಆ ವೇಳೆಯಲ್ಲಿ ಏನಾದರೂ ಈ ಭಾಗಕ್ಕೆ ಬಂದಿರುವ ಸಾಧ್ಯತೆಗಳು ಇದ್ದಿರಬಹುದೆಂದು ಏಕೆಂದರೆ ಕರ್ನಾಟಕದಲ್ಲಿ ಇಟ್ಟಿಗೆಯ ಕೋಟೆ ನಿರ್ಮಿಸಲ್ಪಟ್ಟಿರುವುದು ಕೇವಲ ಶಾತವಾಹನ ಮತ್ತು ಕದಂಬರ ಕಾಲದಲ್ಲಿ ಮಾತ್ರ, ಹಿಂದೆ ಈ ಗ್ರಾಮದಲ್ಲಿ ಹೇರಳವಾದ ಇಟ್ಟಿಗೆಗಳಿದ್ದವೆಂದು, ಅವುಗಳನ್ನು ತಮ್ಮ ಮನೆಗಳ ನಿರ್ಮಾಣಕ್ಕೆ ಬಳಸಿಕೊಂಡಿರುವುದಾಗಿ ಇಂದಿಗೂ ಸ್ಥಳೀಯರು ಹೇಳುತ್ತಾರೆ. ಆದರೆ ಇಂದು ನೋಡಬಹುದಾದ ಯಾವ ಅವಶೇಷವನ್ನು ಸ್ಥಳೀಯರು ಬಿಟ್ಟಿಲ್ಲ. ಈ ಪ್ರದೇಶಕ್ಕೆ ಇಟ್ಟಿಗೆಗಳನ್ನು ಎಲ್ಲಿಂದ ತರುತ್ತಿದ್ದರು ಎಂಬುದು ಸೋಜಿಗದ ಸಂಗತಿ. ಇಂದಿಗೂ ಈ ಪ್ರದೇಶದಲ್ಲಿ ಇಟ್ಟಿಗೆಯ ಹೆಸರಿನಿಂದ ಕರೆಯಲ್ಪಡುವಂತಹ ಹಳೆ ಇಟ್ಟಿಗೆಯಲೋಟಿ, ಹೊಸ ಇಟ್ಟಿಗೆಯಲೋಟಿ ಎಂಬ ಹೆಸರುಗಳು ಕಂಡುಬರುತ್ತವೆ. ಬಹುಶಃ ಈ ಪ್ರದೇಶಗಳಿಂದಲೇ ಇಟ್ಟಿಗೆಗಳನ್ನು

ರವಾನಿಸುತ್ತಿದ್ದಿರಬೇಕು. ಇದಕ್ಕೆ ಪೂರಕವೆಂಬಂತೆ ಇಟ್ಟಿಗೆದಿಬ್ಬನ ಹಳ್ಳಿಯಲ್ಲಿರುವ ಶಾಸನ "ಎಡಚುಟ್ಟಲ ಕೋಂಟ ಎಲಿನವಾರು ಪಾಂಡ್ದು ರಾಜು ಕೊಮಾರುಡು, ಧರ್ಮರಾಜನುಂಡು ತಂಮುಡು ಅರಜುಂಡು, ಕೊಮಾರು ಅಭಿಮನ್ಯುಡು ಸಾದೆಲಾಡು, ಲಗುಮುಡು ಭೀಮುಡು[೪೮] ಎಂದು ಉಲ್ಲೇಖಿಸಿರುವುದನ್ನು ಗಮನಿಸಿದರೆ ಶಾತವಾಹನರು ಬೃಹತ್ ಶಿಲಾಯುಗದ ನೆಲೆಯಲ್ಲಿ ಕೋಟೆಯನ್ನು ಕಟ್ಟಿ ತಮ್ಮ ಆಳ್ವಿಕೆಗೆ ಒಳಪಡಿಸಿಕೊಂಡಿರಬೇಕು. ಹಾಗಾಗಿ ಜನರ ಆಡುಮಾತಿನಲ್ಲಿ ಪಾಂಡವರು ಆಳ್ವಿಕೆ ಮಾಡಿದ ಕೋಟೆ ಎಂಬುದಾಗಿ ಜನಮಾನಸದಲ್ಲಿ ಉಳಿದುಕೊಂಡಿರಬೇಕು. ಬಹುಶಃ ಈ ಹಿನ್ನೆಲೆಯಲ್ಲೇ ಲಕ್ಷ್ಮಣ್ ತೆಲಗಾವಿಯವರು ಬೃಹತ್ ಶಿಲಾಯುಗದ ಜನರು ಮತ್ತು ಶಾತವಾಹನರ ನಡುವಿನ ಸಂಬಂಧ ಪಿತೃತ್ವದ ಸಂಬಂಧವೆಂದು[೪೮] ವ್ಯಾಖ್ಯಾನಿಸಿರಬಹುದು. ಜಿಲ್ಲೆಯಲ್ಲಿ ಮೌರ್ಯ, ಶಾತವಾಹನರ ಕಾಲಘಟ್ಟ ಇರುವಾಗ ಇನ್ನೂ ಬೃಹತ್ ಶಿಲಾಯುಗದ ಸಂಸ್ಕೃತಿ ಮುಂದುವರೆಯುತ್ತಿದ್ದುದಕ್ಕೆ ಭೌತಿಕ ಅವಶೇಷಗಳಾದ ಮೃತ್‌ಪಾತ್ರೆ, ಶಿಲಾಗೋರಿಗಳಿರುವುದು ಕಂಡುಬಂದಿದೆ. ಅಲ್ಲದೆ ಜಿಲ್ಲೆಯಲ್ಲಿ ಎಲ್ಲೆಲ್ಲಿ ಪಾಂಡವರ ಕಲ್ಲು, ಪಾಂಡವರ ಗುಡ್ಡ, ಮೊರಿಯರ ಮನೆಗಳು ಕಂಡುಬರುತ್ತವೋ ಅಲ್ಲೆಲ್ಲಾ ಬೃಹತ್ ಶಿಲಾಯುಗದ ಸಂಸ್ಕೃತಿಯ ಅವಶೇಷಗಳಿವೆ ಎಂದೆನಿಸುತ್ತದೆ.

ಹಾಗೆಯೇ ಶಾಸನಗಳಲ್ಲಿ ಎಲ್ಲಿಯೂ ಶಾತವಾಹನರು ಆಂಧ್ರರೆಂದು ಉಲ್ಲೇಖಗೊಂಡಿಲ್ಲ. ಬದಲಿಗೆ ಇವರನ್ನೂ ಕುಂತಳಾದೀಶ್ವರರೆಂದು ಕರೆಯಲಾಗಿದೆ. ಮತ್ಸ್ಯಪುರಾಣ ಇವರ ೧೩ನೆಯ ದೊರೆಯನ್ನು ಕುಂತಳಸ್ವಾತಿ ಎಂದು ವಾತ್ಸಾಯನನ ಕಾಮಸೂತ್ರದಲ್ಲಿ ಕುಂತಳ ಶತಕರ್ಣಿ[೫೦]ಗಳೆಂದೂ ನಾನಾ ಘಾಟ್ ಶಾಸನ ಸಿಮುಖನನ್ನು "ರಾಯಸಿಮುಕ" ಎಂದೂ, ಜೈನಗ್ರಂಥ ಶಾಲಿವಾಹನ ಎಂದು ಕರೆದಿದೆ.[೪೯] ಕ್ರಿ.ಶ. ೪೫೦ರ ಶಾಂತಿವರ್ಮನ ತಾಳಗುಂದ ಶಾಸನವು ತಾಳಗುಂದದ ಪ್ರಾಣವೇಶ್ವರನು ಶಾತವಾಹನರ ಆರಾಧ್ಯ ದೇವನೆಂದು ಉಲ್ಲೇಖಿತವಾಗಿರುವುದರಿಂದ ರಾಜಶೇಖರನ ಕಾವ್ಯಮೀಮಾಂಸೆಯಲ್ಲಿ ಕುಂತಳಾಧೀಶ್ವರರೆಂದು ಉಲ್ಲೇಖಿತವಾಗಿರುವ ಶಾತವಾಹನರಿಗೂ[೫೧] ಇಂದಿನ ಕುಂತಳನಾಡಿಗೆ ಸೇರಿದ ತಂಡಗ ಗ್ರಾಮದ ಶಾಲಿವಾಹನನ ಸ್ಥಳ ಪುರಾಣಕ್ಕೂ ಸಂಬಂಧ ಇರಲೇಬೇಕು.

ಮೌರ್ಯರ ಶಾಸನಗಳಲ್ಲಿ ತಾಮ್ರಪರ್ಣಿ, ಕೇರಳಪುತ್ರ, ಚೋಳರ, ಪಾಂಡ್ಯರ, ಸಾತಿಯಪುತ್ರಗಳೆಂಬ ಮೇರೆಗಳ ಉಲ್ಲೇಖವಿದ್ದು, ತಾಮ್ರಪರ್ಣಿಯನ್ನು ಇಂದಿನ ಶ್ರೀಲಂಕಾ ಅಥವಾ ತಮಿಳುನಾಡಿನ ತಿನ್ನೆವೆಲ್ಲಿ ಜಿಲ್ಲೆಯ ತಾಮ್ರಪರ್ಣಿ ನದಿ ಪರಿಸರ ಎಂದೂ ಚೋಳ, ಪಾಂಡ್ಯರನ್ನು ತಮಿಳುನಾಡಿನಲ್ಲಿ, ಕೇರಳ ಪುತ್ರರನ್ನು ಕೇರಳದ ಪಶ್ಚಿಮ ಘಟ್ಟಗಳಲ್ಲಿ ಗುರುತಿಸುವ ಪ್ರಯತ್ನ ಮಾಡಲಾಗಿದೆ. ಆದರೆ ಸತಿಯಪುತ್ರರನ್ನು ಗುರುತಿಸುವಲ್ಲಿ ಮಾತ್ರ ಸ್ಪಷ್ಟತೆಯಿಲ್ಲ. ಕೆಲವು ವಿದ್ವಾಂಸರು ಇದನ್ನು ತಮಿಳುನಾಡಿನ ಬಿಲ್ಲುಪರಂ ಜಿಲ್ಲೆಯಲ್ಲಿನ ಜಂಬೈ ಎಂದು ಕ್ರಿ.ಶ. ೧ನೆಯ ಶತಮಾನದ ಬ್ರಾಹ್ಮಿ ಶಾಸನದಿಂದ ಗುರುತಿಸುವ ಪ್ರಯತ್ನ

ಮಾಡಿದ್ದಾರೆ. ಆದರೆ ಇದನ್ನು ಒಪ್ಪಲಾಗದು. ಏಕೆಂದರೆ ಅಶೋಕನ ಗಿರಿನಾರ್ ಮತ್ತು ಕಾಲ್ಸೀ ಶಾಸನಗಳಲ್ಲಿ ಸತಿಯಪುತೊ ಎಂದು ಔಗಡದ ಶಾಸನ 'ಸತಿಯಪುತೆ' ಎಂದೂ ಶಹಬಾಜ್‌ಘರ್ ಮತ್ತು ಮನ್‌ಷೇರಾ ಶಾಸನದಲ್ಲಿ ಸತಿಯಪುತೊ ಎಂದು ಇಷ್ಟೊಂದು ಶಾಸನಗಳಲ್ಲಿ ಉಲ್ಲೇಖಗೊಂಡಿರುವುದನ್ನು ಗಮನಿಸಿದರೆ ಕೇರಳಿಗರಿಗೆ ಸತಿಯಪುತ್ರರೆಂದೂ ಕರೆದಲ್ಲಿ ತಮ್ಮ ನಿಯಂತ್ರಣಕ್ಕೆ ಒಳಪಡದ ಪ್ರದೇಶದ ಜನರನ್ನು ಕುರಿತು ಇಷ್ಟೊಂದು ಪ್ರಮಾಣದಲ್ಲಿ ಉಲ್ಲೇಖಿಸುವ ಅವಶ್ಯಕತೆಯಾದರೂ ಏನಿತ್ತು ಎಂಬ ಪ್ರಶ್ನೆ ಏಳುತ್ತದೆ. ಇದರ ಕುರಿತು ವಿ.ಏ.ಸ್ಮಿತ್ ಅವರು ಸತಿಯಪುತ್ರ ಸಮುದಾಯವು ಕೊಯಮತ್ತೂರು ಜಿಲ್ಲೆಯ ಸತ್ಯಮಂಗಲದ ಕೆಲವು ಭಾಗಗಳು ಹಾಗೂ ಮೈಸೂರಿನ ಗಜಲಹಬ್ಬ ಕಣಿವೆಯೆಂದೂ, ಎಸ್.ವಿ.ವೆಂಕಟೇಶ್ವರ ಅವರು ಕಾಂಚೀಪುರವನ್ನು ರಾಜಧಾನಿಯನ್ನಾಗಿಸಿಕೊಂಡ ಸಮುದಾಯ ಅಥವಾ ರಾಜ್ಯವೇ ಸತಿಯಪುತ್ರವೆಂದೂ, ಪಿ.ಜೆ.ಡೋಮಾ ಅವರು ಕೇರಳದ ಚೇರಮಾನ ಪ್ರದೇಶದಲ್ಲಿ ಸತ್ಯಪುತ್ರರಿದ್ದರೆಂದೂ, ಎಸ್.ಕೃಷ್ಣಸ್ವಾಮಿ ಅಯ್ಯಂಗಾರ್ ಅವರು ಮಾತೃ ಪ್ರಧಾನ ಕುಟುಂಬಗಳಿರುವ ದಕ್ಷಿಣ ಕನ್ನಡದ ತುಳು ಮತ್ತು ಮಲಬಾರಿನ ನಾಯರ್ ಸಮುದಾಯಗಳೆಂದೂ, ಡಿ.ಆರ್.ಬಂಡಾರ್‌ಕರ್ ಅವರು ಮರಾಠದಲ್ಲಿ ಕಂಡುಬರುವ 'ಸಾತ್‌ಪುತೇ' ಎಂಬ ಅಡ್ಡ ಹೆಸರಿನಿಂದ ಕರೆಯಲ್ಪಡುವವರೆಂದೂ, ಡಿ.ಬೂಹ್ಲರ್ ಯಾವಾಗಲೂ ಸತ್ಯ ನುಡಿಯುವ ಕೊಂಗನಾಡಿನ ಅರಸರಿರಬೇಕೆಂದೂ ಟಿ.ಎನ್.ಸುಬ್ರಮಣ್ಯಂ ಮತ್ತು ಎಲ್.ಡಿ.ಬಾರ್ನೆಟ್ ಅವರು ಸತಿಯಪುತ್ರರು ಆಂಧ್ರದಿಂದ ವಲಸೆ ಬಂದು ಮಂಗಳೂರು ಪರಿಸರದಲ್ಲಿ ನೆಲೆಸಿರುವವರಿರಬೇಕೆಂದೂ, ಬಿ.ಎಂ.ಬರುವಾ ಅಶೋಕನ ಶಾಸನಗಳಿರುವ ಪಶ್ಚಿಮ ಘಟ್ಟ ಸಾಲಿನ ಸೋಪಾರದ ದಕ್ಷಿಣ ಭಾಗ ಚಿತ್ರದುರ್ಗದಿಂದ ಪಶ್ಚಿಮಕ್ಕೆ ಕೇರಳಪುತ್ರದಿಂದ ಉತ್ತರಕ್ಕಿರುವ ಪ್ರದೇಶ ಚೇರಮಾನವೆಂದಾರೆ ಅತಿಯಮಾನ್ ಎಂಬುದು ಸತಿಯಪುತ್ರ ಆಗಿದೆಯೆಂದು ವಾದಿಸುವರು. ಟಿ.ವಿ.ಮಹಾಲಿಂಗಂ ಸತಿಯಪುತ್ರರನ್ನೂ ಮೌರ್ಯ ಸಾಮ್ರಾಜ್ಯದ ದಕ್ಷಿಣದ ಗಡಿಗಳನ್ನು ಗುರುತಿಸುವ ಅನುಕ್ರಮಣಿಕೆಯಲ್ಲೇ ನೋಡಬೇಕೆಂದು ಹೇಳಿದ್ದಾರೆ.[೫೨] ಹೀಗೆ ಹಲವು ವಿದ್ವಾಂಸರು ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುವರಾದರೂ ಯಾರು ಸ್ಪಷ್ಟತೆಯನ್ನು ವ್ಯಕ್ತಪಡಿಸಿಲ್ಲ. ತುಮಕೂರು ಜಿಲ್ಲೆಯಲ್ಲಿ ಕಂಡುಬಂದ ಸ್ಥಳನಾಮ, ಸ್ಥಳಪುರಾಣಗಳ ಹಿನ್ನೆಲೆಯಲ್ಲಿ ಸತಿಯಪುತ್ರರ ಮೂಲವನ್ನು ವಿವೇಚಿಸುವ ಪ್ರಯತ್ನ ಮಾಡಲಾಗಿದೆ. ಬಹುಶಃ ಶಾಲಿವಾಹನನ ಸ್ಥಳ ಪುರಾಣವನ್ನು ಅವಲೋಕಿಸಿದಾಗ ಉಜ್ಜೈನಿಯಿಂದ ದಕ್ಷಿಣದ ತಂಡಗಕ್ಕೆ ವಲಸೆ ಬಂದಾಗ ಅವನಿಗೆ ಶಾಂತಿಯತಿಯೆಂಬಾಕೆಯೊಂದಿಗೆ ವಿವಾಹವಾದ ಕೆಲ ದಿನಗಳಾದ ನಂತರ ಮತ್ತೆ ಉಜ್ಜೈನಿಗೆ ಒಬ್ಬನೇ ಹಿಂದಿರುಗುತ್ತಾನೆ. ಆಗ ಗರ್ಭವತಿಯಾದ ಶಾಂತಿಮತಿಗೆ ಏಕಾಂಗಿ ಜೀವನ ಏರ್ಪಡುತ್ತದೆ. ಇವಳಿಗೆ ಜನಿಸಿದ ಶಕಪುರುಷ ಶಾಲಿವಾಹನ ತಾಯಿಯ ಆರೈಕೆಯಲ್ಲೇ ಬೆಳೆದು ದೊಡ್ಡವನಾಗಿ ಸಕಲ ವಿದ್ಯಪಾರಂಗತನಾಗಿ ತಾಯಿಯ ಮಾತಿನಲ್ಲಿ

ಎಂದೂ ಮೀರುತ್ತಿರಲಿಲ್ಲ. ಒಮ್ಮೆ ತನ್ನ ತಾಯಿಯನ್ನು ಜರೆದಿದ್ದ ದುರ್ಗಮತಿಯು ಶಾಲಿವಾಹನಲ್ಲಿ ವಿವಾಹವಾಗಲು ಬಯಕೆಯನ್ನು ವ್ಯಕ್ತಪಡಿಸಿದಾಗ ಆಕೆಗೆ ನಿನ್ನಂತ ಹೀನ ಕುಲದ ಸ್ತ್ರೀಗೆ ಸತ್ಯಯುತ ತಾಯಿಯ ವಂಶದಲ್ಲಿ ಜನಿಸಿದ ನಾನು ಬೇಕಾ ಎಂದು ಹೀಗೆಳೆಯುತ್ತಾನೆ. ಇಲ್ಲಿ ಸೂಕ್ಷ್ಮವಾಗಿ ಸತಿಯಪುತ್ರರೆಂದು ಮಾತೃಪ್ರಧಾನ ಹಿನ್ನೆಲೆಯಲ್ಲಿ ಬೆಳೆದಂತಹ ವಂಶ ತಮ್ಮದೆಂದು ನೇರವಾಗಿಯೇ ಹೇಳಿಕೊಂಡಿದ್ದಾನೆ. ಅಂದರೆ ಒಂದು ಹಂತದ ಶಾತವಾಹನ ವಂಶ ಪೈಠಾಣ, ಉಜ್ಜೈನಿ ಪ್ರದೇಶಗಳಲ್ಲಿ ಮೌರ್ಯರ ಸಾಮಂತರಾಗಿ ಆಳ್ವಿಕೆ ಮಾಡಿದ್ದಿರಬೇಕು. ಮೌರ್ಯರ ಕೊನೆಯ ಅರಸರ ಕಿರುಕುಳ ತಾಳಲಾರದೆ ಅವರಿಂದ ಅಧಿಕಾರ ಕಳೆದುಕೊಂಡ ಸತ್ಯವರ್ಮ ಕ್ರಿ.ಪೂ. ೧೬೦ರ ವೇಳೆಗೆ ದಕ್ಷಿಣದ ತಂಡಗಕ್ಕೆ ಬಂದಿರಬೇಕು. ಈ ಭಾಗವನ್ನೆಲ್ಲಾ ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಂಡಿದ್ದರಿಂದ ಈ ಭಾಗವನ್ನು ಸತಿಯಪುತ್ರರ ನಾಡೆಂದು ಕರೆಯಲ್ಪಟ್ಟಿರಬೇಕು. ಪುನಃ ಶಕಪುರುಷನ ಜನನದಿಂದ ಪೈಠಾಣದಲ್ಲಿ ಶಾತವಾಹನ ಹೇಳಿದಂತೆ ಸಾಮ್ರಾಜ್ಯವನ್ನು ಸ್ಥಾಪಿಸಿರಬಹುದು. ಹಾಗಾಗಿ ಎಲ್.ಡಿ.ಬಾರ್ನೆಟ್ ಆಂಧ್ರದ ಶಾತವಾಹನ ವಂಶದ ಮೂಲ ಪುರುಷರು ಕುಂತಳ ಭಾಗಕ್ಕೆ ಬಂದು ನೆಲೆಸಿದ್ದರಿಂದ ಒಪ್ಪಬಹುದು. ಹೀಗೆ ಬಂದ ಶಾತವಾಹನರು ಸತಿಯಪುತ್ರರೆಂದು ಇಲ್ಲಿನ ಸ್ಥಳೀಯರಿಂದ ಸಂಭೋದಿಸಲ್ಪಟ್ಟು ಇಂದಿಗೂ ಜನಮಾನಸದಲ್ಲಿ ಉಳಿದುಕೊಂಡಿದ್ದಾರೆ. ಈ ಕುಂತಳ ನಾಡಿಗೆ ಹೊಂದಿಕೊಂಡ ಕೇರಳದ ಕೆಲವು ಭಾಗಗಳು ಸತಿಯಪುತ್ರರ ಆಳ್ವಿಕೆಗೆ ಒಳಪಟ್ಟಿದ್ದರಿಂದ ಅದೂ ಸಹ ಸತಿಯಪುತ್ರ ನಾಡೆಂಬುದಾಗಿ ಪ್ರಸಿದ್ಧಿಗೆ ಬಂದಿದೆ ಎಂದರೆ ಅತಿಶಯೋಕ್ತಿಯಾಗಲಾರದು. ಏಕೆ ಇದನ್ನು ಒಪ್ಪಬೇಕೆಂದರೆ ಬಹುತೇಕ ಶಾತವಾಹನ ಅರಸರು ತಮ್ಮ ತಾಯಂದಿರ ಆರೈಕೆಯಲ್ಲಿಯೇ ಬೆಳೆದಿದ್ದನ್ನು ಕಾಣಬಹುದು. ಶಾಲಿವಾಹನ–ಶಾಂತಿಮಲೆ, ಗೌತಮಿಪುತ್ರ ಶಾತಕರ್ಣಿ–ಗೌತಮಿ ಬಾಲಶ್ರೀ, ಯಜ್ಞಶ್ರೀ ಶಾತಕರ್ಣಿ–ಯಜ್ಞಶ್ರೀ ಹೀಗೆ ಹಲವು ಅರಸರು ತಮ್ಮ ಹೆಸರಿನ ಮುಂದೆ ತಮ್ಮ ತಾಯಂದಿರ ಹೆಸರಿಂದಲೇ ಕರೆದುಕೊಂಡಿರುವುದನ್ನು ಗಮನಿಸಿದರೆ ಇವರನ್ನು ಸತಿಯಪುತ್ರರು ಎಂದು ಕರೆಯುವುದರಲ್ಲಿ ತಪ್ಪೇನಿಲ್ಲ.

೨.೪.೩. ಕದಂಬರು (ಕ್ರಿ.ಶ. ೪ನೆಯ ೬ನೆಯ ಶತಮಾನದಿಂದ ೬ನೆಯ ಶತಮಾನ)

ಮೌರ್ಯರ ಶಾತವಾಹನರಂತೆಯೇ ಕದಂಬರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅವರ ಆಡಳಿತದ ಕುರುಹುಗಳನ್ನು ಕಾಣಲಾಗದು. ಆದರೆ ಇತ್ತೀಚೆಗೆ ಪತ್ತೆಯಾದ ಕೃಷ್ಣವರ್ಮನ ಕೋರಾ ಶಾಸನದಿಂದ ಅಧಿಕೃತವಾಗಿ ತುಮಕೂರು ಜಿಲ್ಲೆಯಲ್ಲಿ ಕದಂಬರು ಆಳ್ವಿಕೆ ನಡೆಸಿದ್ದರು ಎಂಬ ಅಂಶ ಸ್ಪಷ್ಟವಾಗುತ್ತದೆ. ಕದಂಬ ಅರಸರಾದ ಕಂಗವರ್ಮ, ಶಾಂತಿವರ್ಮ, ಒಂದನೆಯ ಕೃಷ್ಣವರ್ಮ, ಶಿವಮಂದಾತವರ್ಮ, ವಿಷ್ಣುವರ್ಮ, ದೇವವರ್ಮ ಎರಡನೆಯ ಕೃಷ್ಣವರ್ಮರನ್ನು ಜಿಲ್ಲೆಯ ಶಾಸನಗಳು ಉಲ್ಲೇಖಿಸಿವೆ. ಅಲ್ಲದೆ ಮಯೂರವರ್ಮನು ಕ್ರಿ.ಶ. ೩–೪ನೆಯ

ಶತಮಾನದ ಚಂದ್ರವಳ್ಳಿ ಶಾಸನ ತುಮಕೂರು ಗಡಿಗೆ ಕೇವಲ ೬೦ ಕಿ.ಮೀ. ಅಂತರದಲ್ಲಿ ಇದೆ ಎಂದಿರುವುದರಿಂದ ತುಮಕೂರಿನ ಭಾಗ ಕದಂಬರ ನಿಯಂತ್ರಣಕ್ಕೆ ಒಳಪಟ್ಟಿತ್ತು ಎಂಬುದನ್ನು ಅಲ್ಲಗಳೆಯಲಾಗದು. ಕಂಗವರ್ಮ, ಕೃಷ್ಣವರ್ಮ, ಶಿವಮಾಂದಾತವರ್ಮ, ವಿಷ್ಣುವರ್ಮರನ್ನು ಗಂಗರ ೧ನೆಯ ಮಾಧವ ಮತ್ತು ಶ್ರೀಪುರುಷನ ಕಾಲದ ಮಳೆಕೋಟೆ, ದಂಡಿನಶಿವರ ಮತ್ತು ಕೆರೆಗೋಡಿರಂಗಾಪುರ ಶಾಸನಗಳಲ್ಲಿ ಕದಂಬ ವಂಶಾವಳಿಯನ್ನು ಹೇಳಿದ ನಂತರ ಗಂಗ ಅರಸನನ್ನು ಉಲ್ಲೇಖಿಸಿರುವುದರಿಂದ ಬಹುಶಃ ಗಂಗ ಅರಸರು ಶ್ರೀಪುರುಷನವರೆಗೂ ಕದಂಬರ ಸಾಮಂತರಾಗಿಯೇ ಮುಂದುವರೆದಿದ್ದರು ಎಂದು ಹೇಳಬಹುದಾಗಿದೆ.

ಕಾಕುಸ್ಥವರ್ಮನಿಗೆ ಶಾಂತಿವರ್ಮ ಮತ್ತು ಕೃಷ್ಣವರ್ಮ ಎಂಬ ಇಬ್ಬರು ಮಕ್ಕಳಿದ್ದು, ಕೃಷ್ಣವರ್ಮನ ಸೋದರಿಯ ಮಗನೇ ಅವನೀತ, ಮೂರನೆಯ ಮಾಧವನ ಸೋದರಿಯನ್ನು ಕದಂಬರ ಕೃಷ್ಣವರ್ಮ ಮದುವೆ ಮಾಡಿಕೊಂಡಿದ್ದರಿಂದ ಗಂಗವಾಡಿ ಕದಂಬರ ನಿಯಂತ್ರಣಕ್ಕೆ ಒಳಪಟ್ಟಿರಬಹುದೆಂದು ಊಹಿಸಲು ಸಾಧ್ಯವಿದೆ. ಕೃಷ್ಣವರ್ಮನ ಮಗ ವಿಷ್ಣುವರ್ಮನನ್ನು ಕೋರಾ, ಮೂಡಿಗೆರೆ, ಬೀರೂರು ಮೊದಲಾದ ಶಾಸನಗಳು ಉಲ್ಲೇಖಿಸಿದರೆ, ಕ್ರಿ.ಶ. ೫ನೆಯ ಶತಮಾನದ ಕೋರಾ ಶಾಸನ ವಿಷ್ಣುವರ್ಮ ಕೊಡಲೂರಿನಲ್ಲಿ ಆಳ್ವಿಕೆ ಮಾಡುತ್ತಿದ್ದನ್ನು ಅವನು ಹೆರ್ಬಾಟ ಸಾಟ್ಟಿಪಲ್ಲಿ ಜಾರಿಪಾಟ ಗ್ರಾಮಗಳನ್ನು ಬ್ರಹ್ಮದೇವ ಅಗ್ರಹಾರಕ್ಕೆ[೫೪] ದತ್ತಿ ಬಿಟ್ಟಿದನ್ನು ತಿಳಿಸುತ್ತದೆ. ಈ ಶಾಸನದಲ್ಲಿ ಉಲ್ಲೇಖ ಇರುವ ಶಾಂತಿವರಸನು ತನ್ನ ಚಿಕ್ಕಪ್ಪನಿರಬೇಕೆಂದು ಹಲವು ವಿದ್ವಾಂಸರ ಅಭಿಪ್ರಾಯವಾಗಿದೆ. ವಿಜಯ ಶಿವಮಾಂಧಾತವರ್ಮನು ಕ್ರಿ.ಶ. ೪೯೭–೫೦೩ರಲ್ಲಿ ತುಮಕೂರು ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ಕದಂಬ ಪಟ್ಟ ಮಹಿಷಿಯನ್ನು ವರಿಸಿದ್ದ ಅವನೀತನು ಮರುಕ ವಿಷಯದಲ್ಲಿ ಕೊಳ್ವಳ್ವಿ ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ತಿಳಿಸುತ್ತದೆ.

ಈ ಮರುಕರ ವಿಷಯವು(ಮರುಗರ ನಾಡು) ತುಮಕೂರು ತಾಲೂಕಿನ ಭಾಗಗಳನ್ನು ಒಳಗೊಂಡಿತ್ತೆಂದು ಹಿರೇಗುಂಡಗಲ್ಲಿನ ವೀರಗಲ್ಲುಗಳ ಆಧಾರದಿಂದ ಗೋಚರವಾಗುತ್ತದೆ. ಇದರಿಂದ ತುಮಕೂರು ಜಿಲ್ಲೆಯ ಪಶ್ಚಿಮ ಭಾಗವು, ಕದಂಬರ ಸ್ವಾಧೀನದಲ್ಲಿತ್ತು[೫೫] ಎಂದು ಊಹಿಸಲು ಅವಕಾಶವಿದೆ. ವಿಷ್ಣುವರ್ಮನ ನಂತರದ ಕದಂಬ ಅರಸನನ್ನು ತುಮಕೂರು ಜಿಲ್ಲೆಯಲ್ಲಿ ಗುರುತಿಸಲು ಯಾವ ಸ್ಪಷ್ಟ ಶಾಸನಗಳು ದೊರೆಯುವುದಿಲ್ಲ. ಆದರೂ ಕೆಲವೊಂದು ಸ್ಥಳನಾಮ ಮತ್ತು ಸ್ಥಳಪುರಾಣಗಳಿಂದ ಅವರ ಮೇಲೆ ಬೆಳಕು ಚೆಲ್ಲಲು ಸಹಕಾರಿಯಾಗುತ್ತವೆ.

ತುಮಕೂರು ಜಿಲ್ಲೆಯ ಕಡಬ ಗ್ರಾಮದ ಪದನಿಷ್ಪತ್ತಿಯನ್ನು ವಿಶ್ಲೇಷಿಸಿದಾಗ ಹಿಂದೆ ಇಲ್ಲಿ ಕದಂಬ ಋಷಿಗಳು ವಾಸವಾಗಿದ್ದರಿಂದ ಇದಕ್ಕೆ ಕದಂಬ ಕ್ಷೇತ್ರ ಎಂಬುದಾಗಿ ಹೆಸರು ಬಂದಿತೆಂದು ಸ್ಥಳಪುರಾಣ ತಿಳಿಸುತ್ತದೆ. ತಮಿಳು ಶಾಸನಗಳು ಇದನ್ನು 'ಚತುರ್ವೇದಿ

ಮಂಗಲಂ' ಎಂದು ಉಲ್ಲೇಖಿಸಿವೆ. ಶ್ರೀರಾಮಚಂದ್ರನು ಕದಂಬ ಋಷಿಯಿರುವ ಈ ಪ್ರದೇಶದ ಮೂಲಕ ಲಂಕೆಯಿಂದ ಹಿಂದಿರುಗುವಾಗ ಇಲ್ಲಿನ ಹಳ್ಳಕ್ಕೆ ಏರಿಯೊಂದನ್ನು ನಿರ್ಮಿಸಿದನೆಂದು ಸ್ಥಳಪುರಾಣ ತಿಳಿಸುತ್ತದೆ. ಬಹುಶಃ ಮಯೂರಶರ್ಮನು ಕಂಚಿಯಿಂದ ತಪ್ಪಿಸಿಕೊಂಡು ಮೊದಲಿಗೆ ಈ ಭಾಗಕ್ಕೆ ಬಂದು ಕದಂಬ ಋಷಿಯಿಂದ ದೀಕ್ಷೆ ಪಡೆದು[೫೬] ರಾಜ್ಯ ಕಟ್ಟಲು ಮುಂದೆ ಬಂದಿದ್ದರಿಂದ ಈ ರಾಜ್ಯಕ್ಕೆ ಕದಂಬ ಎಂಬ ಹೆಸರು ಪ್ರಾಪ್ತವಾಗಿರಬೇಕು. ಇದಕ್ಕೆ ಪೂರಕವೆಂಬಂತೆ ಕಡಬಾ ಸಂಸ್ಥಾನದ ಕೈಪಿಡಿ ಮತ್ತು ಹಿಂದೆ ಕಡಬಾ ಸಂಸ್ಥಾನವು ೩೭ ಗ್ರಾಮಗಳನ್ನು ಒಳಗೊಂಡ ಆಡಳಿತದ ವಿಭಾಗವಾಗಿತ್ತು. ಕ್ರಮೇಣ ಈ ವಿಭಾಗವನ್ನು ಮಯೂರವರ್ಮ ತನ್ನ ಸಂಬಂಧಿಕರಿಗೆ ಒಪ್ಪಿಸಿ[೫೭] ಬನವಾಸಿಯಲ್ಲಿಗೆ ಪಲಾಯನಗೊಂಡಿರಬೇಕು ಎಂದು ಉಲ್ಲೇಖಿಸಿದೆ. 'ಕಡಬ' ಎಂಬ ಪದವನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಕದಂಬ ಪದದಲ್ಲಿನ 'ದ' ಅಪಭ್ರಂಶವಾಗಿ 'ರ' ಎಂಬ ಅಕ್ಷರ ಬಂದು ಸೇರಿಕೊಂಡಿರಬೇಕು. ಆದ್ದರಿಂದ ಮಯೂರವರ್ಮನ ಕದಂಬ ವಂಶಕ್ಕೂ ಈ ಕಡಬಕ್ಕೂ ಅವಿನಾಭಾವ ಸಂಬಂಧ ಇರಬೇಕು. ಹೀಗೆ ಕದಂಬರ ರಾಜಕೀಯ ಬೆಳವಣಿಗೆಗಳ ಬಗೆಗೆ ಅಲ್ಪಸ್ವಲ್ಪ ಮಾಹಿತಿ ದೊರೆತರೂ ಅವರ ಕಾಲದಲ್ಲಿ ನಿರ್ಮಿಸಲ್ಪಟ್ಟವೆಂದು ಹೇಳಲಾಗುವ ಯಾವ ಕೋಟೆ–ಕೊತ್ತಲಗಳ ಪ್ರಾಚ್ಯಾವಶೇಷಗಳು ಕಂಡುಬರುವುದಿಲ್ಲ.

೨.೪.೪. ಗಂಗರು

ಕರ್ನಾಟಕದ ಚರಿತ್ರೆಯಲ್ಲಿ ಗಂಗ ಮನೆತನ ಅತ್ಯಂತ ಸುದೀರ್ಘವಾಗಿ ಆಳ್ವಿಕೆ ಮಾಡಿರುವಂಥವರಲ್ಲಿ ಒಬ್ಬರಾಗಿದ್ದು, ಸಾಂಸ್ಕೃತಿಕ ವಲಯಕ್ಕೆ ಅತ್ಯಮೂಲ್ಯ ಕೊಡುಗೆಗಳನ್ನು ನೀಡಿದ್ದಾರೆ. ಅಂತಹ ಸಾಂಸ್ಕೃತಿಕ, ರಾಜಕೀಯ ಬದುಕಿನ ಕುರುಹಾಗಿ ಹಲವಾರು ಪ್ರಾಚ್ಯ ಅವಶೇಷಗಳು ತುಮಕೂರು ಜಿಲ್ಲೆಯಲ್ಲಿ ಕಾಣಸಿಗುತ್ತವೆ. ಹಾಗಾಗಿ ತುಮಕೂರು ಜಿಲ್ಲೆಯ ಚಾರಿತ್ರಿಕ ಹಿನ್ನೆಲೆಯನ್ನು ಗಂಗರ ಕಾಲಘಟ್ಟದಿಂದ ಅಧಿಕೃತವಾಗಿ ಗುರುತಿಸಲಾಗುತ್ತದೆ. ಜಿಲ್ಲೆಯಲ್ಲಿ ಗಂಗರಿಗೆ ಸಂಬಂಧಿಸಿ ಕೋಟೆ ಕೊತ್ತಲ, ದೇವಾಲಯ, ಬಸದಿ, ಲೌಕಿಕ ಕಟ್ಟಡಗಳಂತಹ ಅವಶೇಷಗಳು ಕಂಡುಬಂದಿದ್ದು, ಅವುಗಳ ಪುನರ್ ಅವಲೋಕನವನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಮಾಡಲಾಗಿದೆ.

ಜಿಲ್ಲೆಯಲ್ಲಿ ಗಂಗರ ಕಾಲದಿಂದಲೇ ಕೋಟೆ ಕೊತ್ತಲಗಳ ನಿರ್ಮಾಣ ಕಾರ್ಯ ಆರಂಭವಾಯಿತೆಂದು ಅಧಿಕೃತ ದಾಖಲೆಗಳು ದೊರೆಯುತ್ತವೆ. ಹರಿವರ್ಮನ ನಂತರ ಗಂಗವಾಡಿ ನಿರಂತರ ದಾಳಿಗೆ ಒಳಗಾಗುತ್ತಿದ್ದರಿಂದ ಜಿಲ್ಲೆಯಲ್ಲಿ ಹಲವು ಸಾಮಂತರು, ಅಧಿಕಾರಿ ವರ್ಗ, ದಂಡನಾಯಕರು ಇಲ್ಲವೆ ಊರಗೌಡರಿಗೆ ಗ್ರಾಮ, ಪ್ರಾಂತ್ಯಗಳ ಆಡಳಿತ ನೋಡಿಕೊಳ್ಳಲು ನೇಮಿಸಿ ಆ ಮೂಲಕ ಕೋಟೆಗಳ ಹುಟ್ಟಿಗೆ ಕಾರಣರಾಗಿ ಗಡಿ ಪ್ರಾಂತ್ಯಗಳಲ್ಲೇ ಶತ್ರುಗಳನ್ನು ತಡೆಯುವ ತಂತ್ರವನ್ನು ರೂಪಿಸಿದ್ದರು.

೧. ಕೊಂಗುಣಿವರ್ಮ (ದಡಿಗ)

ಗಂಗರ ಕಾಲದ ಬೆಂಡಿಗಾನಹಳ್ಳಿ ತಾಮ್ರ ಶಾಸನವನ್ನು ಬಿಟ್ಟು ಉಳಿದೆಲ್ಲ ಶಾಸನಗಳು ಕೊಂಗುಣಿವರ್ಮನೇ ತಮ್ಮ ಮೂಲಪುರುಷನೆಂದು ಉಲ್ಲೇಖಿಸುತ್ತವೆ. ಕ್ರಿ.ಶ. ೭೩೩ ಶ್ರೀಪುರುಷನ ದಂಡಿನ ಶಿವರ ಶಾಸನದಲ್ಲಿ ಕೊಂಗುಣಿವರ್ಮನನ್ನು ಅವನ ಮಗ ಮಾಧವವರ್ಮನನ್ನು ಉಲ್ಲೇಖಿಸುತ್ತ ತಮ್ಮನ್ನು ಶ್ರೀಮತ್ನದಂಬ ಕುಲಗಗನ ಗಭಸ್ತಿ ಮೊಲಿನಃ ಕೃಷ್ಣವರ್ಮ ಮಹಾರಾದಿರಾಜಸ್ಯ ಎಂಬುದಾಗಿ ತಿಳಿಸುತ್ತದೆ.[೫೮] ಕೆರೆಗೋಡಿನ ರಂಗಾಪುರದ ಎರಡನೆಯ

ರಾಜಮಲ್ಲನ ಕ್ರಿ.ಶ. ೯೦೦ರ ಶಾಸನದಲ್ಲಿಯೂ ಕೊಂಗುಣಿವರ್ಮನ ಉಲ್ಲೇಖವಿದ್ದು, ಶ್ರೀ ಮತ್ಕದಂಬ ಕುಲಗಗನಗ ಭಕ್ತಿ ಮಿನ[೫೯] ಎಂದು ಉಲ್ಲೇಖನಾಗಿದ್ದಾನೆ.

೨. ಒಂದನೆಯ ಮಾಧವ

ಕೊಂಗುಣಿವರ್ಮನ ಮಗನಾದ ಒಂದನೆಯ ಮಾಧವವರ್ಮನ ಆಳ್ವಿಕೆಯನ್ನು ಉಲ್ಲೇಖಿಸುವಂತಹ ಮೇಳೆಕೋಟೆ ಶಾಸನವು ಇತ್ತೀಚೆಗೆ ದೊರೆತಿರುವುದರಿಂದ ಇವನಿಂದಲೇ ಗಂಗರ ಕಾಲದ ಆಳ್ವಿಕೆ ಜಿಲ್ಲೆಯಲ್ಲಿ ಆರಂಭವಾಗಿರಬೇಕೆಂದು ಒಪ್ಪಲಾಗುತ್ತದೆ. ಮೇಳೆಕೋಟೆ ತಾಮ್ರಶಾಸನದ ಕಾಲಮಾನವು ಕ್ರಿ.ಶ. ೪೦೦ರ ಕಾಲಘಟ್ಟಕ್ಕೆ ಸೇರಿರುವುದರಿಂದ ಎರಡನೆ ಮಾದವನ ಕಾಲ ಕ್ರಿ.ಶ ೪೬೦ರಿಂದ ಕ್ರಿ.ಶ ೪೭೫ ಹಾಗೂ ಮೂರನೆಯ ಮಾಧವನ ಕಾಲವು ಕ್ರಿ.ಶ ೪೮೦ರಿಂದ ೪೯೫ ಆಗಿರುವುದರಿಂದ ಬಹುಶಃ ಇದು ಕೊಂಗುಣಿವರ್ಮನ ಮಗನಾದ ಮೊದಲನೆಯ ಮಾಧವನಿಗೆ ಸೇರಿದ್ದಿರಬೇಕು. ಈ ಶಾಸನವು ಗಂಗೆಯ ರಾಜ್ಯದಲ್ಲಿ ಮಾಧವ ವರ್ಮನು ಬುದ್ದ ಸತ್ವ ವಿಹಾರಕ್ಕೆ ರಕ್ತತಟಾಕದ ೩ ಖಂಡುಗ, ಕಾಕ್ಯಶಿಲೆಯ ಪೂರ್ವ ದಿಕ್ಕಿನಲ್ಲಿ ೧೨ ಖಂಡುಗದ ಭೂಮಿಯನ್ನು ದತ್ತಿ ನೀಡಿರುವುದನ್ನು ಉಲ್ಲೇಖಿಸುತ್ತದೆ. ನಂತರದ ಶ್ರೀಪುರುಷ ಮತ್ತು ರಾಚಮಲ್ಲನ ಕೆರೆಗೋಡು ರಂಗಾಪುರ, ದಂಡಿನ ಶಿವರ ಶಾಸನಗಳ ವಂಶವೃಕ್ಷಗಳಲ್ಲಿ ಉಲ್ಲೇಖಿತಗೊಂಡಿದ್ದಾನೆ. ಆದರೆ ಈ ಶಾಸನದ ಕಾಲವನ್ನು ಕ್ರಿ.ಶ. ೪೦೦ ಎಂದು ನರಸಿಂಹಾಚಾರ್ಯರು ಗುರುತಿಸಿರುವುದು ಸರಿಯಿಲ್ಲ ಎಂದು ಜೆ ಎಫ್ ಫ್ಲೀಟರು ಲಿಪಿ ಹಿನ್ನೆಲೆಯಿಂದ ಕ್ರಿ.ಶ. ೫೦೦ರ ವೇಳೆಗೆ ಅವನೀತ ಅಧಿಕಾರದಲ್ಲಿದ್ದ ಶಾಸನದಲ್ಲಿನ ಮಾಧವವರ್ಮನು ಕ್ರಿ.ಶ. ೪೦೦ ಒಂದನೆಯ ಮಾಧವನ ಕಾಲಕ್ಕೆ ಸರಿಹೊಂದುತ್ತದೆ. ಹಾಗಾಗಿ ಇದರ ಕಾಲಮಾನ ಕ್ರಿ.ಶ ೪೦೦ ಎಂದು ಗುರುತಿಸಿದರೆ ಸರಿಯೆನಿಸುತ್ತದೆ. ಎಂ.ಜಿ ಮಂಜುನಾಥ ಈ ಶಾಸನದಲ್ಲಿರುವ ಪ್ರಾಚೀನ ಉಲ್ಲೇಖಗಳನ್ನ ಆಧರಿಸಿ ಕ್ರಿ.ಶ ೩೯ನೆಯ ವರ್ಷದ್ದಿರಬಹುದೆಂದು ತಮ್ಮ ಲೇಖನದಲ್ಲಿ ಸ್ಪಷ್ಟಪಡಿಸಿದ್ದಾರೆ. ಆದರೆ ಈ ಶಾಸನದ ಲಿಪಿಯ ಸ್ವರೂಪದಿಂದ ಕ್ರಿ.ಶ ೮–೯ನೆಯ ಶತಮಾನಕ್ಕೆ ಇದನ್ನು ಸೇರಿಸಬಹುದಾದರೂ ಅದರಲ್ಲಿನ ಮಾಹಿತಿ ಪೂರ್ವದ್ದು. ಬಹುಶಃ ಮೂಲ ಶಾಸನವನ್ನು ಕ್ರಿ.ಶ ೮–೯ನೆಯ ಶತಮಾನದಲ್ಲಿ ಪಡಿಯಚ್ಚು ಮಾಡಿರಬಹುದು (ಅಡಿಟಿಪ್ಪಣೆ ನಾಗರಾಜರಾವ್ ಎಂ ಜಿ, ಕೃಷ್ಣಮೂರ್ತಿ ಪಿ.ವಿ, ೨೦೦೪ ಇತಿಹಾಸ ದರ್ಶನ, ಸಂಪುಟ–೧೯, ಪುಟ.೩೧)

೩. ಹರಿವರ್ಮ (ಕ್ರಿಶ ೪೩೬-೪೬೦)

ಮೊದಲ ಮಾಧವನ ಮಗನಾದ ಹರಿವರ್ಮನ ಕಾಲಕ್ಕಾಗಲೇ ಕರ್ನಾಟಕದಲ್ಲಿ ಪಲ್ಲವರ ಹಸ್ತಕ್ಷೇಪ ಹೆಚ್ಚಿದ್ದರಿಂದ ರಾಜಧಾನಿಯನ್ನು ತಲಕಾಡಿಗೆ ಹಸ್ತಾಂತರಿಸಿದ ಇವನ ಆಳ್ವಿಕೆಯನ್ನು ಉಲ್ಲೇಖಿಸುವ ಶಾಸನ ಜಿಲ್ಲೆಯಲ್ಲಿ ಇಲ್ಲದಿದ್ದರೂ ಮಧುಗಿರಿ ಮತ್ತು ಪಾವಗಡಕ್ಕೆ ಹೊಂದಿಕೊಂಡಿರುವ ಪೆನುಕೊಂಡೆಯಲ್ಲಿ ತಾಮ್ರ ಶಾಸನ ಪತ್ತೆಯಾಗಿರುವುದರಿಂದ ಜಿಲ್ಲೆಯು ಸಹ ಆವನ ನೇರ ನಿಯಂತ್ರಣಕ್ಕೆ ಒಳಪಟ್ಟಿತ್ತೆಂದು ಒಪ್ಪಬೇಕಾಗುತ್ತದೆ.

೪. ೨ನೆಯ ಮಾಧವ (ಕ್ರಿ.ಶ. ೪೬೦-೪೭೫)

ಕೃಷ್ಣವರ್ಮನ ಮಗನಾದ ೨ನೆಯ ಮಾಧವನು ಸಿಂಹವರ್ಮನೆಂತಲೂ ಉಲ್ಲೇಖಿತಗೊಂಡಿದ್ದು ಪೆನುಗೊಂಡೆ ಶಾಸನದಲ್ಲಿ ಯುವರಾಜನಾಗಿರುವಾಗಲೇ ಉಲ್ಲೇಖಿತನಾಗಿರುವುದರಿಂದ ಇವನ ಆಳ್ವಿಕೆಯನ್ನು ಗುರುತಿಸಲು ಸಾಧ್ಯತೆಗಳಿವೆ. ೨ನೆಯ ಮಾಧವನು ಪಲ್ಲವ ಅರಸ ಶಿವಸ್ಕಂದವರ್ಮನಿಂದ ಪಟ್ಟಾಭಿಷಿಕ್ತನಾಗಿದ್ದನು.

೫. ವಿಷ್ಣುಗೋಪ

ಎರಡನೆಯ ಮಾಧವನಿಗೆ ಮಕ್ಕಳಿಲ್ಲದ ಕಾರಣ ಅವನ ತಮ್ಮನಾದ ವಿಷ್ಣುಗೋಪನಿಗೆ ಅಣ್ಣನ ಅಕಾಲ ಮರಣವು ಅಧಿಕಾರ ವಹಿಸಿಕೊಳ್ಳುವಂತೆ ಮಾಡಿತು. ಈತ ಪಲ್ಲವರ ವಿಜಯವರ್ಮನಿಂದ ಪಟ್ಟಾಭಿಷಕ್ತಗೊಂಡಿದ್ದ. ಈತನ ಉಲ್ಲೇಖ ಶ್ರೀಪುರಷ ಮತ್ತು ಎರಡನೆಯ ರಾಚಮಲ್ಲನ ದಂಡಿನ ಶಿವರ ಮತ್ತು ಕೆರೆಗೊಡು ರಂಗಾಪುರ ಶಾಸನಗಳಲ್ಲಿ ಬರುತ್ತದೆ.

೬. ಮೂರನೆಯ ಮಾಧವ (ತಂಡಗಾಲ ಮಾಧವ ಕ್ರಿ.ಶ. ೪೮೦-೪೯೫)

ಮೇಳೆಕೋಟೆ ಶಾಸನವನ್ನು ಇವನೊಂದಿಗೆ ಗುರುತಿಸುವ ಪ್ರಯತ್ನವನ್ನು ಜೆ.ಎಫ್ ಫ್ಲೀಟ್ ಮಾಡಿದ್ದಾರೆ. ಏಕೆಂದರೆ ಮೇಳೆಕೋಟೆ ಶಾಸನ ಈ ಪ್ರಾಂತ್ಯವನ್ನು 'ಸುಜನಜನಪದಸ್ಯ'[೬೧] ಎಂದು ಉಲ್ಲೇಖಿಸಿರುವುದರಿಂದ ಸುಖ-ಶಾಂತಿ, ನೆಮ್ಮದಿಯಿಂದ ಆಳ್ವಿಕೆಗೊಳಪಟ್ಟ ನಾಡು ಎಂಬ ಅರ್ಥವನ್ನು ನೀಡುತ್ತದೆ. ಆದರೆ ೩ನೆಯ ಮಾಧವನ ಕಾಲದಲ್ಲಿ ಮೃಗೇಶವರ್ಮನ ಕಾಲದ (ಕ್ರಿ.ಶ. ೪೨೭-೪೯೭) ಹಲಸಿ ಶಾಸನವು ಗಂಗರನ್ನು 'ತುಂಗಗಂಗಕುಲೋತ್ತಾದಿ'[೬೨] ಎಂದು ಕರೆದಿದೆ. ಅಂದರೆ ಹೊರಟಿದ್ದ ಗಂಗರನ್ನು ಮೃಗೇಶಿವರ್ಮ ಸೋಲಿಸಿದನೆಂದು ಸೂಚಿಸುತ್ತದೆ. ಹಾಗಾಗಿ ಮೂರನೆಯ ಮಾಧವನ ಕಾಲದಲ್ಲಿ ಸುಖ-ಶಾಂತಿಯಿಂದ ಇರಲು ಎಲ್ಲಿ ಸಾಧ್ಯವಾಗುತ್ತದೆ? ಅಲ್ಲದೆ ಹರಿವರ್ಮನ ಕಾಲಕ್ಕಿಂತ ಮುಂಚೆ ಒಂದನೆಯ ಮಾಧವನ ಕಾಲದಲ್ಲಿ ಈ ಭಾಗದಲ್ಲಿ ಯಾವುದೇ ಅರಸುಮನೆತನಗಳ ಕಲಹವನ್ನು ಕಾಣಲಾಗುವುದಿಲ್ಲ. ಹರಿವರ್ಮನ ನಂತರವೇ ಪಲ್ಲವರಾಗಲಿ, ಕದಂಬರಾಗಲಿ ಈ ಭಾಗದಲ್ಲಿ ಹಸ್ತಕ್ಷೇಪ ಮಾಡುತ್ತಿದ್ದುದಕ್ಕೆ ಉಲ್ಲೇಖ ಸಿಗುವುದು. ಆದುದರಿಂದ ಮೇಳೆಕೋಟೆ ಶಾಸನದ ಕಾಲವನ್ನು

ಕ್ರಿ.ಶ. ೪೦೦ ಎಂದು ಪರಿಗಣಿಸುವುದೇ ಸೂಕ್ತ. ಈ ವಾದವನ್ನು ನೀಲಕಂಠಶಾಸ್ತ್ರಿಗಳು ಸಹ ಒಪ್ಪಿಕೊಂಡಿದ್ದಾರೆ. ಮೂರನೆಯ ಮಾಧವನ ಆಳ್ವಿಕೆಯ ಕಾಲಕ್ಕೆ ಸಂಬಂಧಿಸಿದ ಕ್ರಿ.ಶ. ೪೮೪ರ ತಾಮ್ರ ಶಾಸನವೊಂದು ತನ್ನ ತಂದೆ ವಿಷ್ಣುಗೋಪನ ಅಧಿಕಾರಕ್ಕೆ ನೆರವಾಗಿದ್ದ ಸ್ಕಂದಶರ್ಮನಿಗೆ ತುಮಕೂರಿನ ತಿಪ್ಪೂರು[೬೩] ಗ್ರಾಮವನ್ನು ದತ್ತಿ ಬಿಟ್ಟಿದ್ದನ್ನು ಹೊರತುಪಡಿಸಿದರೆ ಮತ್ತೆಲ್ಲಿಯೂ ಈತನ ಪ್ರಸ್ತಾಪ ಬರುವುದಿಲ್ಲ.

೭. ಅವನೀತ (ಕ್ರಿ.ಶ. ಸು ೫೦೦-೫೪೦)

ಮೂರನೆಯ ಮಾಧವ ಮತ್ತು ಕದಂಬ ರಾಜಕುಮಾರಿಯೊಬ್ಬಳ ಮಗನಾಗಿದ್ದ ಈತನನ್ನು ನವಕಾಮನ ಕಾಲದ ಹೆಬ್ಬೂರಿನ ಶಾಸನ 'ಅವನೀತ ನಾಮಾ ಶ್ರೀಮತ್ಕೊಂಗಣಿ ಮಹಾರಾಜಹ! ತಸ್ಯಪುತ್ರ: ಪುನ್ನಾಹ ರಾಜ(೦)ಪ್ರಿ(ಯ)ಪುತ್ರಿಕಾ[೬೪] ಎಂಬುದಾಗಿ ಉಲ್ಲೇಖಿಸಿದೆ. ಇದರಲ್ಲಿ ಈತನನ್ನು ತನ್ನ ತಾಯಿಯ ತೊಡೆಯ ಮೇಲೆ ಇದ್ದಾಗಲೇ ಅರಸೊತ್ತಿಗೆಯನ್ನು ಪಡೆದನೆಂದೂ ಪುನ್ನಾಟದ ಅರಸನ ಮಗಳನ್ನು ವಿವಾಹವಾದನೆಂದು ಉಲ್ಲೇಖವಿದೆ. ದೊಡ್ಡಬಳ್ಳಾಪುರದ ಶಾಸನವು ಅವನೀತನು ತಿಪಟೂರಿನ ಬ್ರಹ್ಮನೋರ್ವ[೬೫] ನಿಗೆ ಗ್ರಾಮವನ್ನು ದತ್ತಿ ಬಿಟ್ಟಿರುವುದನ್ನು ದಾಖಲಿಸುತ್ತದೆ. ಇವನ ಆಳ್ವಿಕೆಗೆ ಸೇರಿದ ಕ್ರಿ.ಶ. ೫೪೫ರ ಸುಮಾರಿನ ಐದು ತಾಮ್ರ ಶಾಸನಗಳು ಮಧುಗಿರಿಯ ಕಡಗತ್ತೂರಿನ ಬಳಿ ದೊರೆತಿದ್ದು ಗಂಗರಾಜರ ವಂಶಾವಳಿಯನ್ನು ತಿಳಿಸುತ್ತದೆ.

೮. ದುರ್ವಿನೀತ (ಕ್ರಿ.ಶ. ೫೫೫ರಿಂದ ೬೦೫)

ಜೇಷ್ಠಾದೇವಿ ಮತ್ತು ಅವನೀತನ ಮಗನೇ ದುರ್ವಿನೀತನಾಗಿದ್ದು, ಗಂಗರಲ್ಲಿ ಅತ್ಯಂತ ಶ್ರೇಷ್ಠ ದೊರೆಯಾಗಿದ್ದಾನೆ. ಕೊಯಮತ್ತೂರಿನಿಂದ ಬಳ್ಳಾರಿ ಜಿಲ್ಲೆ[೬೬] ಯವರೆಗೆ ಈತನ ರಾಜ್ಯ ವ್ಯಾಪಿಸಿದ್ದರಿಂದ ಇವೆರಡರ ಮಧ್ಯ ಭಾಗದಲ್ಲಿರುವ ತುಮಕೂರು ಜಿಲ್ಲೆಯು ಸಹ ಈತನ ನೇರ ಆಳ್ವಿಕೆಗೆ ಒಳಪಟ್ಟಿತ್ತು. ನಗರ ಶಾಸನ[೬೭] ಬಾದಾಮಿ ಚಾಲುಕ್ಯ-ಪಲ್ಲವರ ನಡುವಿನ ಸೆಣಸಾಟದಲ್ಲಿ ಮಗಳ ಮಗನಾದ ಚಾಲುಕ್ಯರ ಜಯಸಿಂಹನ ಪಕ್ಷ ವಹಿಸಿ ಪರಂಪರಾಗತವಾದ ಸಿಂಹಾಸನದ ಮೇಲೆ ಕುಳ್ಳಿರಿಸಿದನೆಂದು ತಿಳಿಸುತ್ತದೆ. ಶ್ರೀ ಪುರುಷನ ಕಾಲದ ಕೊಂಡಜ್ಜಿ ಅಗ್ರಹಾರ ಶಾಸನವು ಕಿರಾತಾರ್ಜುನೀಯ ಪಜಾದಶಸರ್ಗ್ಗ ಟೀಕಾಕಾರೋ ದುರ್ವಿನೀತ ನಾಮದೇಯಿಃ ಎಂಬುದಾಗಿ (ಅಡಿಟಿಪ್ಪಣಿ-೨೪, ೨೦೦೯, ಶಾಸನ ಸಂಖ್ಯೆ ೨೨, ಪುಟ-೨೮೫) ಗುಮ್ಮರೆಡ್ಡಿಪುರ ಶಾಸನವು ಭಾರವಿಯ ಕಿರಾತಾರ್ಜುನೀಯದ ೧೫ ಸರ್ಗಗಳಿಗೆ ಟೀಕೆಯನ್ನು ಬರೆದಿರುವುದರ ಕುರಿತು, ಮಲ್ಲೊಹಳ್ಳಿ ತಾಮ್ರ ಶಾಸನ ಶ್ರೀ ಮದ್ವಲ್ಮೀಕಿ ಕುಲವರ್ಧನನೂ ವಾಜಸನೇಯ್ಯನು ಮಾಯಿಯೋ ಕಾಶ್ಯಪಗೋತ್ರದವನೂ ದೇವಶರ್ಮನ ಪದನಾಮದೇಯನಾದ ಮಹದೇವನೆಂಬ ಬ್ರಾಹ್ಮಣನಿಗೆ ದುರ್ವಿನೀತನು ಕಳಲೆ ಅಥವಾ ಚಿಂಪೂರೀಶ್ವರಸ್ಥಾನವನ್ನು ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಅಂದರೆ ವಾಲ್ಮೀಕಿ ವಂಶದ

ದೇವಶರ್ಮನೆಂಬ ಬ್ರಾಹ್ಮಣನಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ. ಈ ಶಾಸನದ ವಿಶೇಷತೆಯೆಂದರೆ ವಾಲ್ಮೀಕಿ ಕುಲದ ಅಂದರೆ ತಳಸಮುದಾಯ ಸೇರಿದ ಒಬ್ಬ ಪಂಡಿತನನ್ನು ಕ್ರಿ.ಶ. ೩–೪ನೆಯ ಶತಮಾನದವರೆಗೂ ಬ್ರಾಹ್ಮಣನೆಂದೇ ಸಂಭೋದಿಸುತ್ತಿದ್ದರೆಂದು ಶಾಸನದಲ್ಲೇ ಸ್ಪಷ್ಟ ಉಲ್ಲೇಖ ಸಿಗುತ್ತದೆ ಎಂದರೆ ನಂತರದ ಶತಮಾನಗಳಲ್ಲಿ ಜಾತಿ ಸಂಕರವನ್ನು ಹುಟ್ಟುಹಾಕಿ ಉನ್ನತ ವರ್ಗದವರು ಕೇವಲ ಸಮಾಜದಲ್ಲಿ ಮೇಲು–ಕೀಳು ಭಾವನೆಯನ್ನು ಸೃಷ್ಟಿಸಿದರು. ಶರ್ಮ ಎಂಬುದು ಕೇವಲ ಬ್ರಾಹ್ಮಣರಿಗೆ ಸಂಬಂಧಿಸಿದ್ದಲ್ಲ ಅದು ಎಲ್ಲ ಸಮುದಾಯದವರು ಬಳಸುವಂತಹ ಮನೆತನದ ಹೆಸರಾಗಿದ್ದಿರಬೇಕು. ಈ ಹಿನ್ನೆಲೆಯಲ್ಲಿ ವಿವೇಚಿಸಿದಾಗ ಬುಕಾನನ್‌ರ ಬರವಣಿಗೆಗಳಲ್ಲಿ ದಾಖಲುಗೊಂಡಿರುವ ಕದಂಬರು ಮೂಲತಃ ಬೇಡ ಬುಡಕಟ್ಟಿಗೆ ಸೇರಿದವರೆಂಬ ವಾದದಲ್ಲಿ ಸತ್ಯವಿದೆ. ಏಕೆಂದರೆ ಕ್ರಿಶ ೬ನೆಯ ಶತಮಾನದ ವೇಳೆಗೆ ಒಬ್ಬ ವಾಲ್ಮೀಕಿ ಸಮುದಾಯದ ಪಂಡಿತನನ್ನು ಬ್ರಾಹ್ಮಣನೆಂದು ಕರೆಯಲಾಗುತ್ತಿತ್ತು ಎಂದರೆ ಬೇಡ ಬುಡಕಟ್ಟುಗಳ ಬೆಂಬಲದಿಂದ ರಾಜ್ಯ ಸ್ಥಾಪಿಸಿದ ಮಯೂರವರ್ಮ ಒಬ್ಬ ಬೇಡನಾಗಿರಲೇ ಬೇಕು. ಗಂಗರ ಆರಂಭದ ದೊರೆಗಳಾದ ಕೊಂಗವರ್ಮ, ಮಾಧವವರ್ಮ, ಹರಿವರ್ಮ, ಅಯ್ಯುವರ್ಮ, ಕೃಷ್ಣವರ್ಮ ಎಂಬ ಹೆಸರುಗಳೊಂದಿಗೆ ವರ್ಮ ಎಂಬುದು ಉಲ್ಲೇಖವಾಗಿರುವುದನ್ನು ಮನ್ನಿಸಿದ ಇವರು ಸಹ ಬೇಡ ಬುಡಕಟ್ಟಿಗೆ ಸೇರಿರುವ ಸಾಧ್ಯತೆಗಳಿವೆ. ಬಹುಶಃ ಈ ಹಿನ್ನೆಲೆಯಿಂದಲೇ ಒಬ್ಬ ಬೇಡನಿಗೂ ಅರ್ಜುನನಿಗೂ ನಡೆದ ಕಥಾ ಪ್ರಸಂಗದ ಮೇಲೆ ಟೀಕೆಗಳನ್ನು ದುರ್ವಿನೀತನು ಬರೆದಿರಬೇಕೆನ್ನಿಸುತ್ತದೆ. ಹಾಗಾಗಿಯೇ ಶಾಸನದಲ್ಲಿ ಬೇಡರನನ್ನು ಬ್ರಾಹ್ಮಣನೆಂದು ಗುರುತಿಸಿರುವುದು. ಇವನ ಆಳ್ವಿಕೆಗೆ ಸಂಬಂಧಿಸಿದ ತುಮಕೂರು ಜಿಲ್ಲೆಯ ಸಮೀಪದ ತಿಪ್ಪೂರು[೬೮] ಗ್ರಾಮವನ್ನು ಸ್ಕಂದಶರ್ಮನಿಗೆ ದತ್ತಿ ನೀಡಿರುವುದನ್ನು ಉಲ್ಲೇಖಿಸುತ್ತದೆ.

೯. ಮುಷ್ಕರ (ಕ್ರಿ.ಶ. ೬೦೫–೬೨೦)

ದುರ್ವಿನೀತನ ಮಗನಾದ ಮುಷ್ಕರನು ನವಕಾಮನ ಹೆಬ್ಬೂರಿನ ಶಾಸನದಲ್ಲಿ ವರ್ಣಿಸಲ್ಪಟ್ಟಿದ್ದಾನೆ. ಇವನನ್ನು ಮಕ್ಕಾರ ಎಂತಲೂ ಶಾಸನದಲ್ಲಿ ಕರೆದಿದೆ. ಈತನ ಅಧೀನದಲ್ಲಿ ಹಲವು ಸಾಮಂತರು ಆಳುತ್ತಿದ್ದರೆಂದು ಗದಗದ ಬಳಿ ತನ್ನ ಹೆಸರಿನಲ್ಲಿ ಬಸ್ತಿಯನ್ನು ಕಟ್ಟಿಸಿದನೆಂದು ಗದಗದ ಲಕ್ಷ್ಮೇಶ್ವರದ ಕಂಬ ಬಸ್ತಿಯಲ್ಲಿರುವ ಶಾಸನ ಹೇಳುತ್ತದೆ. ಅಲ್ಲಿಯೇ ೨ನೆಯ ಮಾರಸಿಂಹ, ಇಮ್ಮಡಿ ಪುಲಕೇಶಿ, ಇಮ್ಮಡಿ ವಿಕ್ರಮಾದಿತ್ಯರ ಶಾಸನಗಳಿವೆ. ಈತನ ಆಳ್ವಿಕೆಯ ವಿಶೇಷತೆಯೆಂದರೆ ಬಾದಾಮಿ ಚಾಲುಕ್ಯರ ಆಳ್ವಿಕೆಯ ಪ್ರದೇಶದಲ್ಲಿ ಬಸದಿ ಕಟ್ಟಿಸಿರುವುದು. ಬಹುಶಃ ಈತ ಬಾದಾಮಿ ಚಾಲುಕ್ಯರ ಸಾಮಂತನಾಗಿ ನಿಷ್ಠೆಯಿಂದ ಇದ್ದಿರಬೇಕೆನ್ನಿಸುತ್ತದೆ. ಈತನ ನಂತರ ಆಳ್ವಿಕೆ ಮಾಡಿದ ಪೊಲವೀರನಿಗೆ ಸಂಬಂಧಿಸಿದಂತೆ ಯಾವ ಮಾಹಿತಿಯೂ ದೊರೆಯುವುದಿಲ್ಲ.

೧೦. ಶ್ರೀವಿಕ್ರಮ (ಕ್ರಿ.ಶ. ೬೪೪-೬೭೯)

ಪೊಲಗಾರನ ಮಗನಾದ ಶ್ರೀವಿಕ್ರಮನಿಗೆ ಸಂಬಂಧಿಸಿದಂತೆ ಕ್ರಿ.ಶ. ೭ನೆಯ ಶತಮಾನದ ಜಲಗಾರದಿಬ್ಬ ಶಾಸನವು ಶ್ರೀವಿಕ್ರಮನು ಆಳ್ವಿಕೆ ಮಾಡುತ್ತಿರುವಾಗ ಹೊನ್ನುಡುಕೆ ೭೦ ಎಂಬ ಪ್ರಾಂತ್ಯವನ್ನಾಳುತ್ತಿದ್ದ ಕಮರುಗನು ಶತ್ರುಗಳ ವಿರುದ್ಧ ಕಾದುತ್ತಾ ಸತ್ತನೆಂದು ಉಲ್ಲೇಖಿಸಿದೆ. ಶಾಸನವು ಸ್ವಸ್ತೀ ಶ್ರೀ ವಿಕ್ರಮರಾಪೃಥುಮೀಯನಾ ಮಾಧವ ಗಲ್ಲೆ ಕಮಯುಗ ಈರಿದಾನೋಂ ಪಲ್ಮಡಿಯರ. ಮ್ಮೆಯರುಪಡೆದು ಪೊನ್ನಿಡುಕ್ಕೆ ಏರಿ ಎತ್ತರ ಮರಿಯಾದಿಪಸಲ್ಲೊಳ್ಳಾದದುಂ ಅಂಮಸಂಕಾ" ಎಂದು ಉಲ್ಲೇಖಿಸಿದೆ.

೧೧. ಶ್ರೀವಲ್ಲಭ ಅಥವಾ ಭೂವಿಕ್ರಮ (ಕ್ರಿ.ಶ. ೬೭೯-೬೭೯)

ಶ್ರೀವಿಕ್ರಮನ ಹಿರಿಯ ಮಗನಾದ ಭೂ ವಿಕ್ರಮನ ಆಳ್ವಿಕೆಯ ಕಾಲಕ್ಕಾಗಲೇ ತುಮಕೂರು ಜಿಲ್ಲೆಯಲ್ಲಿ ಬಾದಾಮಿ ಚಾಲುಕ್ಯರ ಪ್ರಭಾವ ಕಡಿಮೆಯಾಗಿ ರಾಷ್ಟ್ರಕೂಟ ಮನೆತನದ ಕಾರ್ಯ ಚಟುವಟಿಕೆಗಳು ಹೆಚ್ಚಾದವೆಂದು ಹಿರೇಗುಂಡಗಲ್ಲಿನ ೨೧ ವೀರಗಲ್ಲುಗಳಿಂದ ವೇದ್ಯವಾಗುತ್ತದೆ. ಶ್ರೀಪುರುಷನ ಕಾದ ಕೊಂಡಜ್ಜಿ ಅಗ್ರಹಾರ ಶಾಸನವು ಈತನನ್ನು ಸಮರಾಧಿತತ್ರಿವರ್ಗೋನಿರಮಧ್ಯತರಿತ[೬೯] ಪ್ರತಿದಿನ ಮಭಿವರ್ಧ ಮಾನಪ್ರಬಾವೋ ಭೂ ವಿಕ್ರಮನಾಮಧೇಯ ಎಂಬುದಾಗಿ ಮುಂತಾದ ಅವನ ವರ್ಣನೆಯನ್ನು ನೀಡಿದ್ದು ವಿಳೆಂದೆ ಎಂಬಲ್ಲಿ ನಡೆದ ಘೋರ ಯುದ್ಧದಲ್ಲಿ ಪಲ್ಲವ ಅರಸನನ್ನು ಸೋಲಿಸಿದನೆಂದು ಹೇಳುತ್ತದೆ. ಹಿರೇಗುಂಡಗಲ್‌ನ ಶಾಸನವು ಸ್ವಸ್ತಿ ಶ್ರೀ ವಲ್ಲವ ಪೃಥುವೀರಾಜ್ಯಂಕೆಯ ಸಿಮೆಗೆಲ್ಲ ಕೇಸು ಮೊಣ್ಣುನಾಡಾಳೆ ಗುಣ್ಣಿಗೆ ವಾವಿಕ್ಕುತೊಟ್ಟಲಾಳುತ್ತಮ್ ಕಾಡುವಟ್ಟಿ ಬೋಳದುಶ್ಯೆ ನಲ್ಲಕ್ಕೇಳ್ ಎರೆದು ವಿಷ್ಕರ್[೭೦] ಎಂಬುದಾಗಿ ಉಲ್ಲೇಖಿಸಿದೆ. ಅಂದರೆ ಶ್ರೀ ವಲ್ಲಭನ ದಂಡನಾಯಕನಾದ ಸಿಯಗೆಲ್ಲನು ಕೆಸುಯಣ್ಣು ನಾಡನ್ನು ಆಳುತ್ತಿರುವಾಗ ಕಾಡುವಟ್ಟಿಯೊಡನೆ ನಡೆದ ಯುದ್ಧದಲ್ಲಿ ಒಬ್ಬ ವೀರನು ಮಡಿದನೆಂದು ಹೇಳಿದೆ. ಹಿರೇ ಗುಂಡಗಲ್ಲಿನ ಶ್ರೀವಲ್ಲಭ(ಭೂವಿಕ್ರಮನ)ಶಾಸನವು ಶ್ರೀ ಕಡ್ಡಾಣೆಪೃಥವಿ, ರಾಜ್ಯಂತೆಯೆ ಸಿಯಕೆಲ್ಲ ಕೆಸುಮಣ್ಣುನಾಡುಳೆ ಮೂರ್ತೆ ಅರಸರಾಳ್ ಮೂರಿದಾಸ ಕರಿಯತಮ್ಮನ್ ನಾಗತರಾಸರಾ ಮನೆಮಗವು ಬಾಗೆ ಊರುಳ್ ಬಲ್ಲಹನ್ ಎರೆನುಳ್ ಎರದು ವಿವಿನ್ ಶ್ರೀ ಗುಣ್ಣಿಜ್ಞಾಗಲಾ ಸಿಯಕೂಲ ಲಿಸಿಉನ್ನತನ್ ಎಸ್ಟುನ್ ಕೆಳೆಇ ನಿತ್ತನ್(ಶಾ.ಸ.೧೦೪, ಪುಟ-೧೬೪) ಎಂದು ಉಲ್ಲೇಖಿಸಿದ್ದು ಕಡ್ಡಾಣಿ ಶ್ರೀವಲ್ಲಭ ಎಂಬ ಅರಸನು ಅವನ ಸಾಮಂತ ಸಿಯಗೆಲ್ಲ ಕೈಮಣ್ಣು ನಾಡನ್ನು ಆಳ್ವಿಕೆ ಬಾಗೆಯೂರು ಯುದ್ಧದಲ್ಲಿ ತಮ್ಮ ಕಡೆಯ ವೀರನೊಬ್ಬ ಮಡಿದಿದ್ದನ್ನು ತಿಳಿಸುತ್ತದೆ. ಬಹುಶಃ ಭೂವಿಕ್ರಮನಿಗೆ ಶ್ರೀ ವಲ್ಲಭ ಎಂಬ ಬಿರುದು ಅವನು ಬಾದಾಮಿ ಚಾಲುಕ್ಯರಿಗೆ ಸಲ್ಲಿಸಿದ ಅನುಪಮ ಸೇವೆಯಿಂದ ಬಂದಿರಬಹುದಾಗಿದೆ.

೧೨. ಒಂದನೆಯ ಶಿವಮಾರ (ಕ್ರಿ.ಶ. ೬೭೯-೭೨೬)

ಶ್ರೀವಿಕ್ರಮನ ಮಗನಾದ ನವಕಾಯ ಅಥವಾ ಒಂದನೆಯ ಶಿಮಾರನು ತನ್ನ ಅಣ್ಣನಾದ ಭೂವಿಕ್ರಮನ ನಂತರ ಪಟ್ಟಕ್ಕೇರಿದನು. ಶ್ರೀಪುರುಷನ ಹೆಬ್ಬೂರು ಶಾಸನ[೧೧] ಒಂದನೆಯ ಶಿವಮಾರನ ಬಿರುದಾವಳಿಗಳನ್ನು ವರ್ಣಿಸಿದೆ.

೧೩. ಶ್ರೀಪುರುಷ (ಕ್ರಿ.ಶ. ೭೨೬-೭೮೮)

ಮೊದಲನೆಯ ಶಿವಮಾರನ ನಂತರ ಅಧಿಕಾರ ವಹಿಸಿಕೊಂಡ ಶ್ರೀಪುರುಷನು ಆರಂಭದ ಕೆಲವು ವರ್ಷಗಳನ್ನು ಬಿಟ್ಟರೆ ಉಳಿದೆಲ್ಲಾ ಜೀವನವನ್ನು ತನ್ನ ಗಡಿ ಪ್ರಾಂತ್ಯಗಳನ್ನು ಉಳಿಸಿಕೊಳ್ಳುವುದರಲ್ಲೇ ಕಳೆದನು. ಉತ್ತರದಲ್ಲಿ ಪ್ರಬಲರಾಗುತ್ತಿದ್ದ ರಾಷ್ಟ್ರಕೂಟರು ಗಂಗವಾಡಿಯ ಮೇಲೆ ದಾಳಿಮಾಡಲು ಸೈನ್ಯ ಸಮೇತ ಬಂದರೆಂದು ಮಧುಗಿರಿ ಶಾಸನ ಉಲ್ಲೇಖಿಸಿದೆ. ಮಗರೆನಾಡು-೩೦೦ನ್ನು ಆಳ್ವಿಕೆ ಮಾಡುತ್ತಿದ್ದ ಸಿಯಗೆಲ್ಲ ಶ್ರೀಪುರುಷ ಪ್ರಮುಖ ದಳಪತಿಯಾಗಿ ರಾಷ್ಟ್ರಕೂಟರ ಎಲ್ಲ ಕದನಗಳ ಮುಂದಾಳತ್ವ ವಹಿಸಿಕೊಂಡು ಬಲಿದಾನಗೈದ ವೀರಯೋಧರ ಬಂಧುಗಳಿಗೆ ಜಮೀನುಗಳನ್ನು ದತ್ತಿ ಬಿಟ್ಟನೆಂದು ಶಾಸನಗಳಿಂದ ತಿಳಿಯುತ್ತದೆ. ತುಮಕೂರಿನ ಹಿರೇಗುಂಡಗಲ್ ಬಳಿ ಕನ್ನರದೇವ (೧ನೆಯ ಕೃಷ್ಣ)ನಿಗೂ ಶ್ರೀಪುರುಷನಿಗೂ ಘೋರ ಕದನ ವೇರ್ಪಟ್ಟಿತ್ತು. ಆಗ ಶ್ರೀಪುರುಷನ ಕಡೆಯ ಕೆಲವರು ವೀರ ಮರಣ ಹೊಂದಿದರು. ಅದರ ಕುರುಹಾಗಿ ವೀರಗಲ್ಲನ್ನು ಹಾಕಿಸಿದನು. ಈ ಯುದ್ಧವು ಕಾಗೆಮೊಗೆಯೂರು, ಬಾಗೆಯೂರುಗಳಲ್ಲೂ ಮುಂದುವರೆದಿತ್ತೆಂದು ಅಲ್ಲಿಯ ವೀರಗಲ್ಲುಗಳಿಂದ ತಿಳಿದು ಬರುತ್ತದೆ. ಹಿರೇ ಗುಂಡಗಲ್‌ನ ವೀರಗಲ್ಲುಗಳು ಶ್ರೀಪುರುಷನು ರಾಜ್ಯವಾಳುತ್ತಿರುವಾಗ ಅವನ ಸಾಮಂತರಾದ ಕೆಸುಮಣ್ಣು ನಾಡಿನ ಸಿಯಗಲ್ಲು, ಬಾಗೆಯೂರಿನ-ಬಲ್ಲಹ ಪೊನ್ನಿಹಕ್ಕೆ-೭೦ ಸಾಮಂತರು, ಶ್ರೀಪುರುಷನ ದೊಡ್ಡಮಗ ಮೊದಲಾದ ವೀರಯೋಧರು ಕನ್ನರದೇವ(೧ನೆಯ ಕೃಷ್ಣ)ನ ವಿರುದ್ಧ ಹಿರೇಗುಂಡಗಲ್, ಶ್ರವಣ ಗುಡಿ, ಕಾಗೆಮೊಗೆಯೂರು, ಬಾಗೆಯೂರುಗಳಲ್ಲಿ ಹೋರಾಡುತ್ತ ವೀರಮರಣ ಹೊಂದಿದರೆಂದು ಸುಮಾರು ೧೫ ವೀರಗಲ್ಲುಗಳು ಉಲ್ಲೇಖಿಸುತ್ತವೆ[೨]. ಕ್ರಿ.ಶ. ೭೫೦ ಶ್ರೀಪುರುಷನ ಮಿಡಿಗೇಶಿ ಶಾಸನವು ರಾಷ್ಟ್ರಕೂಟರ ಒಂದನೆಯ ಕೃಷ್ಣನು ಗಂಗವಾಡಿಯ ಮೇಲೆ ದಾಳಿ ಮಾಡಿದಾಗ ಜಡಿಯ ಮುತ್ತರಸನೆಂಬ ವೀರಾಗ್ರಣಿಯು ಗರುಡನಾಗಿ ಹೋರಾಡಿ ವೀರಸ್ವರ್ಗವನ್ನು ಪಡೆದನೆಂದು ತಿಳಿಸುತ್ತದೆ. (ಅಡಿಟಿಪ್ಪಣಿ-ಬಾಸ್ಕರಪ್ಪ, ತುಮಕೂರು ಜಿಲ್ಲಾ ದರ್ಶನ, ಪುಟ-೨೭) ಹಿರೇ ಗುಂಡಗಲ್ ಗ್ರಾಮದ ಈಶಾನ್ಯ ದಿಕ್ಕಿಗಿರುವ ತಿಮ್ಮಕ್ಕನ ಹೊಲದ ೧ನೆಯ ವೀರಗಲ್ಲು ಶಾಸನವು ಶ್ರೀಪುರುಷನ ಸಮಕಾಲೀನ ಸಾಮಂತರು ಅಥವಾ ಅಧಿಕಾರಿಗಳಾದ ಸಿಮಗಲ್ಲು, ಕಡ್ಡಾನೆ, ಮೂರುಗೆರೆ ನಾಡಿನ ಮುರುಕೋಡೆ ಅಂಶಿಯರ್ ಎಂಬಾತ ಕನ್ನರಸನ ವಿರುದ್ಧ ಪಿಂಚನೂರು ಕದನದಲ್ಲಿ ಅಸುನೀಗಿದನೆಂದೂ ಅದಕ್ಕಾಗಿ ರೊಣವೊಡೆಯ ಎಂಬುವವನಿಗೆ ಗದ್ದೆಯನ್ನು ದತ್ತಿ ಬಿಟ್ಟು ವಿಚಾರವನ್ನು ತಿಳಿಸುತ್ತದೆ.

ಹಿರೇಗುಂಡಗಲ್‌ನ ಅದೇ ಸ್ಥಳದ ಮತ್ತೊಂದು ೫ನೆಯ ವೀರಗಲ್ಲು ಕುರಕಾಲರ ಮನಾಳಿಯರ್ ಎಂಬ ಸಿಯಗೆಲ್ಲನ ಸೇವಕರು (ಕನ್ನರಸನ ಸೇನೆಯ ಮೇಲೆ ಬಾಗೇವೂರಿನಲ್ಲಿ ದಾಳಿ ಮಾಡಿ ಸತ್ತನೆಂದು ಅವನಿಗಾಗಿ ಭೂಮಿಯನ್ನು ಬಾಳ್ಗಚ್ಚು[೭೩] ಆಗಿ ನೀಡಲಾಯಿತೆಂದು ತಿಳಿಸುತ್ತದೆ. ಹಿರೇಗುಂಡಗಲ್ ೧೩ನೇ ವೀರಗಲ್ಲು ಶಾಸನವು ಸಿಯಗೆಲ್ಲನು ಶ್ರೀಪುರುಷನ ಹಿರಿಯ ಮಗ ಶಿವಮಾರನೊಂದಿಗೆ ಕಾಗೆ ಮೊಗೆಯೂರು ಎಂಬಲ್ಲಿ ರಾಷ್ಟ್ರಕೂಟರ ವಿರುದ್ಧ ಹೋರಾಡುತ್ತ ಮಡಿದನೆಂದು[೭೪] ಅವನ ಹೆಸರಿನಲ್ಲಿ ಭೂಮಿಯನ್ನು ಬಾಳ್ಗಚ್ಚು ರೂಪದಲ್ಲಿ ದಾನ ನೀಡಿದ್ದನ್ನು ಉಲ್ಲೇಖಿಸುತ್ತದೆ. ಶ್ರೀಪುರುಷನು ವ್ರತವನ್ನು ಆಚರಿಸಿ ಮಾಣಿ, ಅಮ್ಮಭಟ್ಟ ಎಂಬುವವನಿಗೆ ಕೆರೆಗೋಡು ನಾಡಿನ ಬಲ್ಲಾಣಿವೊವಿಲ್ ಎಂಬ ಗ್ರಾಮವನ್ನು ತೆರಿಗೆಯಿಂದ ವಿನಾಯತಿ ನೀಡಲಾಯಿತ್ತೆಂದು ಗುಬ್ಬಿ ಶಾಸನ ತಿಳಿಸುತ್ತದೆ. (೬–೬೫) ಶ್ರೀ ಪುರುಷನಿಗೆ ವಿನೆಯಕಿನ ಮತ್ತು ಇಮ್ಮಡಿ ವಿಜಯ ಮಹಾದೇವಿಯರಲ್ಲಿ ಕ್ರಮವಾಗಿ ಜನಿಸಿದ ಶಿವಮಾರನು ಕಡಂಬೂರು ಮತ್ತು ಕುಣಿಗಲ್ ಪ್ರದೇಶಗಳಲ್ಲೂ, ವಿಜಯಾದಿತ್ಯನು ಕೆರಗೋಡಿ ಮತ್ತು ಅಸಂದಿಗಳನ್ನು ನೋಡಿಕೊಳ್ಳುತ್ತಿದ್ದರು. ಶ್ರೀಪುರುಷನ ದಳಪತಿ ಸಿಯಗೆಲ್ಲಾನು ಸಹ ಕಿರಿಯ ಮಗನೆಂದು ಭಾವಿಸಲಾಗಿದೆ.[೭೫]

೧೪. ಶಿವಮಾರ ಸೈಗೊಟ್ಟ (ಕ್ರಿ.ಶ. ೭೮೮–೮೧೨)

ಶ್ರೀಪುರುಷನ ತದನಂತರ ಅವನ ಮಗನಾದ ೨ನೆಯ ಶಿವಮಾರ ಸೈಗೊಟ್ಟ ಅಧಿಕಾರಕ್ಕೆ ಬಂದ. ಯುವರಾಜನಾಗಿರುವಾಗಲೇ ಕ್ರಿ.ಶ.೭೮೫ರಲ್ಲಿ ಕುಣಿಗಲ್ ನಾಡಿನ ಪ್ರಾಂತ್ಯಾಧಿಪತಿಯಾಗಿದ್ದನು. ಜೊತೆಗೆ ಶ್ರೀಪುರುಷನ ಸಾಮಂತ ಮರುಗರೆ ನಾಡನ್ನು ಆಳುತ್ತಿದ್ದ ಸಿಯಗಲ್ಲುನೊಂದಿಗೆ ಕಾಗೆಮೊಗೆಯೂರಲ್ಲಿ ಯುದ್ಧರಂಗದಲ್ಲಿ ಹೋರಾಟದ ಕುರಿತು ಹಿರೇಗೊಂಡಗಲ್ಲಿನ ೪ನೆಯ ವೀರಗಲ್ಲು ಶಾಸನ[೭೬] ಶ್ರೀ ಶಿವಮಾರ ಸೀಯಗೆಲ್ಲರ್ಕ್ಯಾಗಿಯಾಗೆ ಊರೊಳ್ವಲ್ಲಜನಾ ಖಾಳದುಳ್ತಮ್ಮುತುರ್ವ್ವರುಂ, ಎಱುದು ವಿವೋನ್ ಎಂಬುದಾಗಿ ಉಲ್ಲೇಖಿಸಿದೆ. ರಾಷ್ಟ್ರಕೂಟರ ಧ್ರುವನು ಶ್ರೀಪುರುಷನ ಮರಣದ ತರುವಾಯ ೨ನೆಯ ಶಿವಮಾರನ ಮೇಲೆ ದಾಳಿ ಮಾಡಿದ್ದನ್ನು ರಂಗಾಪುರದ ಎರಡನೇ ರಾಚಮಲ್ಲನ ಕ್ರಿ.ಶ.೮೦೦ ಶಾಸನವು ಪಲ್ಲವ ರಾಷ್ಟ್ರಕೂಟರು ಮಾಗದ ಮಾಳವ ಚಾಚೋ ವಿ ಲಾವಿ ಸತ್ವಲ್ಲ ಬಳುಖ್ಯ ವಂಶಜ ಮಹಾನೃಪತಿ ಪ್ರಮುಖೈರಧಿಷ್ಠತಂ ವಲ್ಲಭಸೈನ್ಯಮುನ್ನ ತಮತಂಗಳಿವಾಜಿಭಟ ಕುಲಞಯ ಸ್ಥಲ್ಲಲಿನಾಕ್ಷಿವಾರಿನಿವಹೇನ ಸವಂಸಮರೇನ್ನಪಾತ್ ಯೂತ್‌ಸತು ನೀತಿಮಾರ್ಗ್ಗ ಕೂಹ್ಣಾಗಿವರ್ಮ್ಮ ಧರ್ಮ್ಮ ಮಹಾರಾಜಾಧಿರಾಜ[೭೭] ಎಂಬುದಾಗಿ ಉಲ್ಲೇಖಿಸಿದೆ. ಅಂದರೆ ವಲ್ಲಭನ ಸಹಾಯಕ್ಕೆ (ರಾಷ್ಟ್ರಕೂಟ ಅರಸ) ಪಲ್ಲವ, ರಾಷ್ಟ್ರಕೂಟ, ಕುರು, ಮಾಗಧ, ಮಾಳವ, ಚಾಳುಕ್ಯ, ಹೈಹಯ ಮೊದಲಾದವರು ಬಂದರೂ ವಿಜಯಲಕ್ಷ್ಮಿ ಶಿವಮಾರನ ಕಡೆಯೇ ಇತ್ತೆಂದು ವರ್ಣಿಸಿದೆ. ನಿಟ್ಟೂರಿನ ಶಾಸನವು ಸಹ ಇದನ್ನೇ ಉಲ್ಲೇಖಿಸಿದೆ.

ಬಹುಶಃ ಧ್ರುವನು ಕ್ರಿ.ಶ. ೭೯೩ರ ನಂತರವೇ ಶಿವಮಾರನನ್ನು ಬಂಧಿಸಿ ಗಂಗವಾಡಿಯನ್ನು ನೋಡಿಕೊಳ್ಳಲು ತನ್ನ ಮಗ ಕಂಬರಸ(ಸ್ತಂಭ)ನನ್ನು ಕುಣಿಗಲ್ ನಾಡಿನಲ್ಲಿ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿರುವ ಸಾಧ್ಯತೆಗಳಿವೆ. ಅಲ್ಲದೆ ಶಿವಮಾರನು ರಾಜ್ಯವಾಳುತ್ತಿರುವಾಗ ಕೆಲ ವೀರರು ಬಲವರ್ಮನೊಂದಿಗೆ ಕಾದಿ, ಮಡಿದರೆಂದು ಶ್ರವಣಗುಡಿ ಶಾಸನದ[೭೮]ಲ್ಲಿನ ಉಲ್ಲೇಖ ಹಾಗೂ ಹಿರೇಗುಂಡಗಲ್ ಮತ್ತು ಸಂಕೇನಹಳ್ಳಿ ವೀರಗಲ್ಲುಗಳಲ್ಲಿಯೂ ಸಹ ಬಾಲವೆಮ್ಮರಸನ ವಿರುದ್ಧ ಶಿವಮಾರನ ನೆಚ್ಚಿನ ವೀರಯೋದರು ಕಾದುತ್ತಾ ಮಡಿದರೆಂಬ ಉಲ್ಲೇಖವಿದೆ. ಬಹುಶಃ ಮರುಗುಂದೂರಿನ ಕಾಳಗದ ನಂತರವೂ ಧ್ರುವನನ್ನು ಎದುರಿಸಿದ್ದಕ್ಕೆ ಉಲ್ಲೇಖ ಸಿಗುವುದರಿಂದ ಕ್ರಿ.ಶ. ೭೯೩ರ ನಂತರವೇ ಎರಡನೆಯ ಶಿವಮಾರ ಅಧಿಕಾರವನ್ನು ಕಳೆದುಕೊಂಡಿರಬೇಕು. ಕೊನೆಗೆ ರಾಷ್ಟ್ರಕೂಟ ಯುವರಾಜರಲ್ಲಿ ಆದಂತಹ ಕಲಹವು ಸೆರೆಮನೆಯಿಂದ ಮುಕ್ತನಾಗಿ ತನ್ನ ಮಗ ಮಾರಸಿಂಹನಿಗೆ ರಾಷ್ಟ್ರಕೂಟರ ಗೋವಿಂದ, ಪಲ್ಲವರ ನಂದಿವರ್ಮರ ಸಹಾಯದಿಂದ ಅಧಿಕಾರವನ್ನು ದೊರಕಿಸಿಕೊಟ್ಟನು.

೧೪. ಮಾರಸಿಂಹ ಎರೆಯಪ್ಪ (ಕ್ರಿ.ಶ. ೭೯೭–೮೧೩)

ಮಾರಸಿಂಹನು ತನ್ನ ತಂದೆ ಶಿವಮಾರನ ಕಾಲದಲ್ಲೇ ಪಟ್ಟವನ್ನು ಹೊಂದಿರಬಹುದೆಂದು ಕ್ರಿ.ಶ. ೭೯೭ರ ಮನ್ನೆಯ ಶಾಸನದಿಂದ ತಿಳಿಯುತ್ತದೆ. ಕ್ರಿ.ಶ. ೮೦೩ರ ಶಾಸನವು ಸಹ ಈತನನ್ನು ಉಲ್ಲೇಖಿಸುವುದರಿಂದ ತುಮಕೂರಿನ ಕೆಲವು ಭಾಗಗಳು ಈತನ ನಿಯಂತ್ರಣದಲ್ಲಿದ್ದವು. ಎರೆಯಪ್ಪನ ನಂತರ ಕಿರಿಯ ಸೋದರ ಒಂದನೆಯ ಪೃಥ್ವಿಪತಿ ಮತ್ತು ಮಗ ಎರಡನೆಯ ಪೃಥ್ವಿಪತಿಯ ಕುರಿತು ಜಿಲ್ಲೆಯಲ್ಲಿ ಯಾವ ದಾಖಲೆಗಳು ಸಿಗುವುದಿಲ್ಲ.

೧೫. ರಾಚಮಲ್ಲ–ಕ್ರಿ.ಶ. ೮೧೮–೮೩೭

ರಾಚಮಲ್ಲನು ಶಿವಮಾರ ಸೈಗೊಟ್ಟಿಯ ಸೋದರ ವಿಜಯಾದಿತ್ಯನ ಮಗನಾಗಿದ್ದು, ತನ್ನ ದೊಡ್ಡಪ್ಪ ಶಿವಮಾರನಿಗಾಗಿದ್ದ ಅಪಮಾನವನ್ನು ಅಳಿಸಿಹಾಕಲು ರಾಷ್ಟ್ರಕೂಟರ ಸಾಮಂತ ಬಂಕೇಶನನ್ನು ಸೋಲಿಸಿ ಸೇಡು ತೀರಿಸಿಕೊಂಡನು. ಜೊತೆಗೆ ತನ್ನ ಮಗಳಾದ ಜಾಯಬ್ಬೆಯನ್ನು ನೊಳಂಬರ ಚಾರುಪೊನ್ನೇರನ ಮಗ ಪೊಳಲ್ಚೋರನೊಂದಿಗೆ ವೈವಾಹಿಕ ಸಂಬಂಧ ಬೆಳೆಸಿದನು. ಆ ಮೂಲಕ ತುಮಕೂರು ಭಾಗವನ್ನು ಅಂದರೆ ನೊಳಂಬರನ್ನು ತನ್ನ ಸಾಮಂತರನ್ನಾಗಿಸಿಕೊಂಡನೆಂದು ಬರಗೂರು ಮತ್ತು ಅಲ್ಲೂಬ್ಬರು ಶಾಸನಗಳಿಂದ ತಿಳಿಯುತ್ತದೆ.[೭೯] ಅದೇ ರೀತಿ ರಾಷ್ಟ್ರಕೂಟರ ಹಿಡಿತದಿಂದ ಗಂಗವಾಡಿಯನ್ನು ಬಂಧಮುಕ್ತಗೊಳಿಸಲು ಶ್ರಮಿಸಿದನೆಂದು ಕೆರೆಗೋಡಿ ರಂಗಾಪುರ ಶಾಸನ ಮತ್ತು ಎಡತೊರೆ ಶಾಸನಗಳಿಂದ ಸ್ಪಷ್ಟವಾಗುತ್ತದೆ.

೧೬. ನೀತಿಮಾರ್ಗ (ಕ್ರಿ.ಶ. ೮೩೭–೮೭೦)

ರಾಚಮಲ್ಲನ ಮಗನಾದ ನೀತಿಮಾರ್ಗನು ಎರೆಯಗಂಗ, ಎರೆಗಂಗದೇವ ಎಂಬುದಾಗಿ

ಉಲ್ಲೇಖಿತಗೊಂಡಿದ್ದಾನೆ. ನೊಳಂಬರ ಪೊಳಲ್‌ಚೋರ ಬಾಗೂರಿನಲ್ಲಿ ನೀತಿಮಾರ್ಗನಿಂದ ಸೋಲಿಸಲ್ಪಟ್ಟಿದ್ದರಿಂದ ನೊಳಂಬರಿನ್ನು ಸ್ವತಂತ್ರಗೊಂಡಿರಲಿಲ್ಲ ಎನ್ನಿಸುತ್ತಿದೆ. ಹಾಗಾಗಿ ನೊಳಂಬರ ಅಧೀನದಲ್ಲಿದ್ದ ತುಮಕೂರಿನ ಕೆಲವು ಭಾಗಗಳು ಈತನ ಆಳ್ವಿಕೆಗೆ ಒಳಪಟ್ಟವು.

೧೭. ಸತ್ಯವಾಕ್ಯ ರಾಚಮಲ್ಲ (ಕ್ರಿ.ಶ. ೮೭೦-೯೦೭)

ಕೆರೆಗೂಡಿನ ರಂಗಾಪುರದ ಕ್ರಿ.ಶ. ೯೦೦ರ ಶಾಸನ[೮೦] ರಾಚಮಲ್ಲನು ಆಳ್ವಿಕೆ ಮಾಡುತ್ತಿದ್ದಾಗ ಅವನ ತಮ್ಮ ಬೂತುಗೇಂದ್ರನಿಗೆ ಗುಣದತ್ತರಂಗ ಎಂಬ ಬಿರುದಿತ್ತೆಂದು, ಈತ ಚೋಳರ ರಾಜರಾಜನನ್ನು ಸೋಲಿಸಿ ನೊಳಂಬರ ಮಹೇಂದ್ರನನ್ನು ಹಿರಿಯೂರು, ಸೊಳೂರು, ಸುಮಿಯ ಕದನಗಳಲ್ಲಿ ಸೋಲಿಸಿ ಕೊಂದು ಹಾಕಿ ನೊಳಂಬಂತಕ ಎಂಬ ಬಿರುದನ್ನು ಗಳಿಸಿದನೆಂದು ತಿಳಿಸುತ್ತದೆ. ಕಿಬ್ಬನಹಳ್ಳಿ ಶಾಸನ ಚಿಕ್ಕಪ್ಪ ಪೃಥುವಿಪತಿಯ ಮಗ ನನ್ನಿನಾದ ಗಂಗನು ಗಂಗಾವಾಡಿಯ ಮೇಲೆ ದಾಳಿ ಮಾಡಿದುದನ್ನು ಉಲ್ಲೇಖಿಸುವುದರಿಂದ ಜಿಲ್ಲೆಯ ಪಶ್ಚಿಮ ಭಾಗ ರಾಚಮಲ್ಲನ ನೇರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದು ಸ್ಪಷ್ಟವಾಗುತ್ತದೆ. ಹಾಗಾಗಿಯೇ ತನ್ನ ಮೊಮ್ಮಗಳಾದ ಚಂದ್ರಲಬ್ಬೆಯನ್ನು ಕುಣಿಗಲ್ ನಾಡಿನ ಪ್ರಾಂತ್ಯಾಧಿಕಾರಿಯನ್ನಾಗಿ ನೇಮಿಸಿದ್ದನು.

೧೮. ಎರಡನೆಯ ನೀತಿಮಾರ್ಗ (ಕ್ರಿ.ಶ. ೯೦೭-೯೨೦) (ಎರೆಯಪ್ಪ)

ಅಮೋಘವರ್ಷನ ಮಗಳಾದ ಚಂದ್ರಲಬ್ಬೆಗೂ ಮತ್ತು ಎರಡನೆಯ ರಾಚಮಲ್ಲನ ಸೋದರನಾದ ಬೂತುಗನಿಗೂ ಹುಟ್ಟಿದ ಮಗನೇ ಎರಡನೆಯ ನೀತಿಮಾರ್ಗ. ಈತ ೨ನೆಯ ರಾಚಮಲ್ಲನ ಆಳ್ವಿಕೆ ಕಾಲದಲ್ಲಿಯೇ ಕ್ರಿ.ಶ. ೯೧೯ರವರೆಗೆ ಗಂಗಾರಾಜ್ಯವನ್ನು ಪಾಲಿಸಿದನೆಂದು ಶಾಸನಗಳಿಂದ ತಿಳಿದುಬರುತ್ತದೆ. ಕೊಡ್ಲಾಪುರ ಶಾಸನ ಕ್ರಿ.ಶ. ೮೯೫-೮೯೮ರ ಮಧ್ಯದಲ್ಲಿ ನೀತಿಮಾರ್ಗನಿಗೂ ತುಂಬೆಪಾಡಿಯಲ್ಲಿ ಕಾಳಗವಾಗಿ ಮಹೇಂದ್ರನು ನೊಳಂಬರಿಂದ ಕೊಲ್ಲಲ್ಪಟ್ಟನೆಂಬ[೮೧] ಒಳಸುಳಿವನ್ನು ನೀಡುತ್ತದೆ. ಏಕೆಂದರೆ ಕಡಬದ ಅಮಾನಿಕೆರೆಯ ಕೋಡಿತೂಬಿನ ಹತ್ತಿರ ಇರುವ ಎರೆಯಪ್ಪನ ಕಾಲದ ವೀರಗಲ್ಲು ಶಾಸನವು 'ಸ್ವಸ್ತಿಶ್ರೀ ಅರಕೆಲ್ಲ ಮಗದಿ ಮಾಘರನ್ ಉಜಿಯರಾನಮಲ್ಲವರೊಟ್ಟಿ ಎಂಪುದಾರ್‌ವಿಗೆ ಊರುಳ್ಯ ಅವರೊಂದು ಎದೆಪ್ಪಾರ್ ಮಣಲ್ನೋದು ಆ ಉಡಾಳಿ ರಾಶಿಕರ್ ಎಂಬುದಾಗಿ ಉಲ್ಲೇಖಿಸಿದ್ದು, ಎರೆಯಪ್ಪನು ರಾಜ್ಯವಾಳುತ್ತಿರುವಾಗ ಪಲ್ಲವರಸ ಅಂದರೆ ರಾಷ್ಟ್ರಕೂಟ ದೊರೆಯೊಬ್ಬನಿಗೆ ಮೂರು ಬಾಗೆಯೂರು ಎಂಬಲ್ಲಿ ಅವನ ಪರವಿದ್ದ ನೊಳಂಬರ ಅಯ್ಯಿಗನ ವಿರುದ್ಧ ಅರಕೆಲ್ಲಾ ಮತ್ತು ಅವನ ಮಗ ಮೊರಗನು ಕಾರುತ್ತ ಸತ್ತರೆಂದು ತಿಳಿಸುತ್ತದೆ. ಕೊರಟಗೆರೆ ಬುರಗನಹಳ್ಳಿಗೆ ಈಶಾನ್ಯ ದಿಕ್ಕಿಗೆ ಇರುವ ಮುತ್ತಕ್ಕನ ಹೊಲದಲ್ಲಿನ ವೀರಗಲ್ಲು ಶಾಸನವು[೮೨] ಸ್ವಸ್ತಿಶ್ರೀ ಪೆಮ್ಮಡಿಯ ಬೆಸದೊಳ್ಮದೇವಿಯ ತಯಾನಿನ್ದರ ಪರಿವರಿತರೆ ನೆಲಮಕ್ಕಳ್ನೆದಸನ್ದು ತಲೆಯಸನ್ದುವ ಮೆಟ್ಟಿಲಗದೆನ್ದು ಗಣ್ಡ ಕೇಸರಿಯು ನೀಪಕೇಸರಿಯ ಮಕ್ಕಳ್ಫೂಯ್ಯನು ಅಚ್ಚಾಯ್ಯನು

ಯಾರ ಮನು ಗವಿಂಜನೂರ ಮಿತ್ತಿದಲ್ಲಿ ಕಾದಿಶತ್ಯ ಉಲ್ಲೇಖಿಸುತ್ತದೆ. ಎರೆಯಪ್ಪನು ಆಳ್ವಿಕೆಯ ಮಾಡುತ್ತಿರುವಾಗ ಅಂದರೆ ಮಹದೇವಿಯ ದೊಡ್ಡಣ್ಣನಾದ ಇಂದ್ರನು ಮುಂದೆ ತೃಟಿತವಾಗಿದ್ದು ನಂತರದಲ್ಲಿ ಗಂಡ ಕೇಸರಿಯ ಮಕ್ಕಳಾದ ಹೊಯ್ಯಾ ಮಾರಯ್ಯ ಅಂತಯ್ಯರು ಗಲಂಜನೂರು ಎಂಬಲ್ಲಿ ಕಾದುತ್ತಾ ಸತ್ತರೆಂದು ತಿಳಿಸುತ್ತದೆ. ಬಹುಶಃ ರಾಷ್ಟ್ರಕೂಟರ ಇಂದ್ರನು ಎರೆಯಪ್ಪನ ಮೇಲೆ ದಾಳಿ ಮಾಡಿದಾಗ ಇವನ ಕಡೆಯ ವೀರರನೇಕರು ಕಾದುತ್ತಾ ಸತ್ತರೆಂದು ತಿಳಿಸುತ್ತದೆ. ಈ ಉಲ್ಲೇಖಗಳನ್ನು ಗಮನಿಸಿದರೆ ನೊಳಂಬರ ಅಧಿಪತ್ಯ ತುಮಕೂರು ಜಿಲ್ಲೆಯಲ್ಲಿ ಕುಂಠಿತಗೊಳ್ಳಲಾರಂಭಿಸಿರಬಹುದು. ಏಕೆಂದರೆ ನೊಳಂಬರ ರಾಜಧಾನಿಗೆ ಕೇವಲ ೫೦ ಕಿ.ಮೀ. ಅಂತರದಲ್ಲಿರುವ ಬುರುಗನಹಳ್ಳಿಯಲ್ಲಿ ಗಂಗರ ವೀರಗಲ್ಲು ದೊರೆತಿರುವುದರಿಂದ ಗಂಗರು ಮಹೇಂದ್ರನನ್ನು ಪಂಜೇರು ಕಾಳಗದಲ್ಲಿ ಕೊಂದು ಪಂಜೇರಿನ ಬಹುಭಾಗವನ್ನು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡರೆಂಬ ಸಂಗತಿ ಸ್ಪಷ್ಟವಾಗುತ್ತದೆ. ಮೂರನೆಯ ಮಾರಸಿಂಹನ ಕೂಡ್ಲೂರು ತಾಮ್ರ ಶಾಸನವು ಸಹ ಪಂಜೇರು ಕದನದಲ್ಲಿ ನೀತಿಮಾರ್ಗ ಮಹೇಂದ್ರನನ್ನು ಕೊಂದು ನೂರಾರು ನಡುಗಿನಿ ಮಿಡಿಗೆ ಸುಳಿಶೈಲೆಂದ ತಿಪ್ಪೇರು ಪಂಜೇರು ದುರ್ಗಗಳನ್ನು ವಶಪಡಿಸಿಕೊಂಡನೆಂದು ತಿಳಿಸುವುದರಿಂದ ಮಹೇಂದ್ರನ ಅಂತ್ಯದೊಂದಿಗೆ ತುಮಕೂರಿನ ಬಹುಭಾಗ ಗಂಗರ ನೇರ ಹತೋಟಿಗೆ ಒಳಪಟ್ಟಿರಬೇಕು. ಆದ್ದರಿಂದಲೇ ತುಮಕೂರನ್ನು ವಶಪಡಿಸಿಕೊಳ್ಳಲು ರಾಷ್ಟ್ರಕೂಟರ ಇಂದ್ರನು ನಡೆಸಿದ ದಾಳಿಗೆ ಎರೆಯಪ್ಪನು ಪ್ರತಿರೋಧ ವ್ಯಕ್ತಪಡಿಸಿರುವುದು. ಮರಳಿ ಅಧಿಕಾರ ಪಡೆಯಲು ಇಂದ್ರನ ನೆರವು ಕೋರಿ ಅವರ ಪರವಾಗಿ ನೊಳಂಬರು ಯುದ್ಧದಲ್ಲಿ ಭಾಗವಹಿಸಿರಬಹುದು.

೧೯. ಮೂರನೆಯ ರಾಚಮಲ್ಲ ಕ್ರಿಶ. ೯೨೦-೯೩೭

ನರಸಿಂಹನ ತರುವಾಯ ಅವನ ತಮ್ಮನಾದ ನೀತಿಮಾರ್ಗ ೩ನೆಯ ರಾಚಮಲ್ಲನು ಪಟ್ಟಾಭಿಷಕ್ತನಾದನು. ಕ್ರಿಶ. ೯೩೪ರಲ್ಲಿ ನೊಳಂಬರ ಅಯ್ಯಪ್ಪನ ಮಗ ಅಣ್ಣಿಗನು ಗಂಗವಾಡಿಯ ಮೇಲೆ ದಂಡೆತ್ತಿ ಬಂದಾಗ ಶತ್ರುಗಳ ಪಾಲಿಗೆ ಭೀಕರವಾಗಿ ಎರಗಿದ ರಾಚಮಲ್ಲನ ಸೇನೆ ಅಣ್ಣಿಗನನ್ನು[೬೩] ಸೋಲಿಸಿತು. ಆದರೆ ರಾಚಮಲ್ಲನ ತಮ್ಮ ಬೂತುಗನು ರಾಷ್ಟ್ರಕೂಟರ ಮೂರನೆಯ ಕೃಷ್ಣನ ನೆರವು ಪಡೆದು ರಾಚಮಲ್ಲನನ್ನು ಕೊಂದು ಗಂಡ ಮಂಡಲವನ್ನು ತನ್ನ ತೆಕ್ಕೆಗೆ ತೆಗೆದುಕೊಂಡನು. ಗುಬ್ಬಿ ತಾಲೂಕಿನ ಪ್ರಭವನ ಹಳ್ಳಿಯ ವರದಯ್ಯನ ಹೊಲದಲ್ಲಿರುವ ವೀರಗಲ್ಲು ಮತ್ತೊಂದು ವೀರಗಲ್ಲು ದೊಡ್ಡಘಟ್ಟದ[೬೪] ಮತ್ತೊಂದು ಶಾಸನ ರಾಚಮಲ್ಲನನ್ನು ಉಲ್ಲೇಖಿಸಿದೆ.

೨೦. ಬೂತುಗ(ಕ್ರಿಶ. ೯೩೭-೩೬೦)

ಈತ ೩ನೆಯ ಕೃಷ್ಣನಿಂದ ಗಂಗವಾಡಿ ಪ್ರಾಂತ್ಯವನ್ನು ಪಡೆದು ನೊಳಂಬರ ಅಣ್ಣಿಗನನ್ನು ಕೊಂದು ತುಮಕೂರು ಭಾಗವನ್ನು ಪಡೆದುಕೊಂಡನು.

೨೧. ಎರಡನೆಯ ಮಾರಸಿಂಹ(ಕ್ರಿ.ಶ. ೯೬೦-೯೭೨)

ಬೂತುಗನ ಮಗನಾದ ಮಾರಸಿಂಹನ ಸಾಧನೆಗಳನ್ನು ಶ್ರವಣಬೆಳಗೊಳದ ಶಾಸನ ಉಲ್ಲೇಖಿಸಿದ್ದು, ಇನೆಯ ಕೃಷ್ಣನೊಂದಿಗೆ ಉತ್ತರದ ದಿಗ್ವಿಜಯಗಳಲ್ಲಿ ಭಾಗವಹಿಸಿ ತನ್ನ ಪರಾಕ್ರಮವನ್ನು ಮೆರೆಯುತ್ತಿರುವಾಗ ನೊಳಂಬರು ಗಂಗಮಂಡಲದ ಪ್ರದೇಶಗಳನ್ನು ಆಕ್ರಮಿಸಲು ಮುಂದಾದರು. ಮಾರಸಿಂಹನು ದುರಹಂಕಾರದಿಂದ ಮೆರೆಯುತ್ತಿದ್ದ ನೊಳಂಬರನ್ನು ಸಂಹರಿಸಿ ತನ್ನ ಗಡಿಗಳನ್ನು ರಕ್ಷಿಸಿಕೊಂಡನು. ತಿಪಟೂರಿನ ಕಿಬ್ಬನಹಳ್ಳಿ ಶಾಸನ ಸತ್ಯವಾಕ್ಯ ಕೊಂಗುಣಿವರ್ಮ ಧರ್ಮಮಹಾರಾಜಾಧಿರಾಜ ಕೋಳಾರ ಪುರವರೇಶ್ವರಂ ನನ್ದಗಿರಿನಾಥಂ ಚಲದುತ್ತಾರಂಗಂ ಶ್ರೀಮತ್ ನೊವಿಂಬಡುಳಾನ್ತಕಂ ಶ್ರೀಮತ್ ಪೆರ್ಮಾನದಿಗಳ್ ನೊಳಂಬರೆಲ್ಲಂ ಕೊನ್ದು.... ನೊಳಂಬಾಂತಕ[೮೬] ಎಂದು ಉಲ್ಲೇಖಿಸಿದೆ. ತುಮಕೂರು ಜಿಲ್ಲೆ ಗಂಗರ ನೇರ ಆಳ್ವಿಕೆಗೆ ಒಳಪಟ್ಟಿತ್ತು ಎಂಬುದನ್ನು ಹಾಗೂ ನೊಳಂಬರು ಸಂಪೂರ್ಣವಾಗಿ ಈ ಭಾಗದಲ್ಲಿ ಚೇತರಿಸಿಕೊಳ್ಳಲಾಗದೆ ಕಂಪಲಿ ಭಾಗಕ್ಕೆ ಮಾತ್ರ ಸೀಮಿತಗೊಂಡರೆಂದು ತಿಳಿಸುತ್ತದೆ. ಇವನ ಕಾಲದ ಮತ್ತೊಂದು ಘಟನೆಯೆಂದರೆ ಗುಬ್ಬಿಯ ಸಮೀಪದ ಬಾಗೆಯೂರು ಕೋಟೆಯಲ್ಲಿ ಜರುಗಿದ ಕದನದಲ್ಲಿ ತ್ರಿಭುವನವೀರ ಎಂಬುವವನನ್ನು ಕೊಂದು 'ವೈದಿಕುಲ ಕಾಲದಂಡ[೮೭] ಎಂಬ ಬಿರುದನ್ನು ಗಳಿಸಿರುವಂತಹದ್ದು, ಮಾರಸಿಂಹನ ಕೂಡಲೂರು ತಾಮ್ರ ಶಾಸನ ತ್ರಿಣೇತ್ರನಾದ ಮಾರಸಿಂಹನು ಮುಂಜಾರ್ಯನಿಗೆ ಬಡಗೆರೆ-೩೦೦ ನಾಡಿಗೆ ಸೇರಿದ ಬಾಗೆನೂರು ಗ್ರಾಮವನ್ನು ದತ್ತಿ ಬಿಟ್ಟನೆಂದು ಉಲ್ಲೇಖಿಸುತ್ತದೆ.

೨೨. ರಕ್ಕಸಗಂಗ ಮಾರಸಿಂಹ

ಸತ್ಯವಾಕ್ಯ ರಾಚಮಲ್ಲನ ನಂತರ ರಕ್ಕಸಗಂಗನು ಅಧಿಕಾರ ವಹಿಸಿಕೊಂಡನೆಂದು ಪೆಗ್ಗೂರು ಮತ್ತು ಶ್ರವಣಬೆಳ್ಗೊಳ ಶಾಸನಗಳಲ್ಲಿರುವ ಣ್ಣಂಭಟ್ಟರಕ್ಕಸನು ಇವನೇ ಇರಬೇಕು ಇವನ ಕೈಕೆಳಗೆ ಪುಳಿಗನೆಂಬಾತ ನೊಳಂಬವಾಡಿ ೩೨೦೦೦ ಪ್ರಾಂತ್ಯವನ್ನು ಆಳುತ್ತಿದ್ದನೆಂದು ತೆನಿಲಿ ಶಾಸನ[೮೮] ಉಲ್ಲೇಖಿಸುತ್ತದೆ.

ಹೀಗೆ ಕ್ರಿ.ಶ. ನಾಲ್ಕನೆಯ ಶತಮಾನದಿಂದ ೧೧ನೆಯ ಶತಮಾನದವರೆಗೆ ತುಮಕೂರು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಗಂಗ ಮನೆತನವು ತಮ್ಮ ಗಡಿ ಪ್ರಾಂತ್ಯಗಳನ್ನು ಉಳಿಸಿಕೊಳ್ಳುವಲ್ಲಿಯೇ ಸಾಕಷ್ಟು ಸಂಘರ್ಷವನ್ನು ಅನುಭವಿಸಿರುವುದು ಶಾಸನಗಳಿಂದ ವೇದ್ಯವಾಗುತ್ತದೆ. ಆದರೂ ತಮ್ಮ ಅವಧಿಯಲ್ಲಿ ಜಿಲ್ಲೆಯ ವೀರರನೇಕರು ರಾಜ್ಯ ರಕ್ಷಣೆಯಲ್ಲಿ ಬೆಂಗಾವಲಂತೆ ನಿಂತು ಪ್ರಾಣ ತೆತ್ತಿರುವುದು ವೀರಗಲ್ಲುಗಳಿಂದ ತಿಳಿಯುತ್ತದೆ. ಈ ಕಾದಾಟದೊಂದಿಗೂ ಜಿಲ್ಲೆಯಲ್ಲಿ ಕೋಟೆಗಳ ನಿರ್ಮಾಣಕ್ಕೂ ನಾಂದಿಹಾಡಿ ಹಲವು ಕೆರೆ, ಕಟ್ಟೆ, ಬಾವಿ, ದೇವಾಲಯಗಳ ಹುಟ್ಟಿಗೆ ಕಾರಣರಾಗಿ ಜಿಲ್ಲೆಯ ಐತಿಹಾಸಿಕತೆಯನ್ನು ಇಮ್ಮಡಿಗೊಳಿಸಿದ್ದಾರೆ.

೨.೪.೫. ಪಲ್ಲವರು

ಭಾರತದ ಚರಿತ್ರೆಯಲ್ಲಿ ಗಂಗರಿಗಿಂತಲೂ ಮುಂಚೆಯೇ ಪಲ್ಲವರು ಸಾಮ್ರಾಜ್ಯವನ್ನು ಸ್ಥಾಪಿಸಿದರೂ ತುಮಕೂರು ಜಿಲ್ಲೆಯಲ್ಲಿ ಇವರ ಕುರುಹುಗಳು ಕ್ರಿ.ಶ. ಮೂರನೆಯ ಶತಮಾನದ ನಂತರವೇ ಕಂಡುಬರುವುದರಿಂದ ಪಲ್ಲವರಿಗಿಂತ ಮೊದಲೇ ಜಿಲ್ಲೆಯಲ್ಲಿ ಗಂಗರ ಆಳ್ವಿಕೆಯ ಆರಂಭವಾಗಿದ್ದರಿಂದ ಚಾರಿತ್ರಿಕವಾಗಿ ಪಲ್ಲವರಿಗಿಂತಲೂ ಗಂಗರೇ ಪ್ರಾಚೀನರೆಂದು ಪರಿಗಣಿಸಬೇಕಾಗುತ್ತದೆ. ಪಲ್ಲವರಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅತಿ ಕಡಿಮೆ ಅವಶೇಷಗಳಿರುವುದನ್ನು ಗಮನಿಸಿದರೆ ಈ ಭಾಗದಲ್ಲಿ ಪಲ್ಲವರ ಹಸ್ತಕ್ಷೇಪಕ್ಕೆ ಗಂಗರು ಅವಕಾಶ ಕೊಟ್ಟಂತಿಲ್ಲ. ತಾಳಗುಂದ ಶಾಸನ ಹೇಳುವಂತೆ ಪಲ್ಲವರು ಕುಂತಳನಾಡನ್ನು ಮಯೂರವರ್ಮನಿಗೆ ಬಿಟ್ಟುಕೊಡುವುದಕ್ಕಿಂತ ಮೊದಲು ಮೂಲತಃ ಕರ್ಣಾಟಕದಲ್ಲಿದ್ದರೆಂದು ತಿಳಿಸುತ್ತದೆ.[೮೯] ಮೂಡುಗೆರೆ ಶಾಸನ ಕದಂಬರು ಮತ್ತು ಪಲ್ಲವರ ನಡುವೆ ಶಾಂತಿಯುತ ಸಂಬಂಧ ಇತ್ತೆಂದು ಸ್ಪಷ್ಟಪಡಿಸುತ್ತದೆ. ೨ನೆಯ ಮಾಧವವರ್ಮನು ಕ್ರಿ.ಶ. ೫ನೇ ಶತಮಾನದ ಹೆಬ್ಬೂರಿನ ಶಾಸನ ಪಲ್ಲವರಾಜರನ್ನು ಉಲ್ಲೇಖಿಸುತ್ತದೆ. ಅಂದರೆ ೨ನೆಯ ಮಾಧವನು ಪಲ್ಲವ ಶಿವಸ್ಕಂದವರ್ಮನಿಗೆ ಅಧೀನನಾಗಿದ್ದನೆಂದೂ, ಮಾಧವನ ತಂದೆ ಹರಿವರ್ಮನ ಪಟ್ಟಾಭಿಷೇಕವನ್ನು ಪಲ್ಲವ ಜಯಸಿಂಹವರ್ಮ ಮಾಡಿದನೆಂದೂ, ಮಾಧವನ ಪಟ್ಟಾಭಿಷೇಕಕ್ಕೆ ಸ್ವತಃ ಪಲ್ಲವ ಅರಸ ವಿಜಯಸ್ಕಂದವರ್ಮನು ಬಂದಿದ್ದನೆಂದು ಸ್ಪಷ್ಟಪಡಿಸುತ್ತದೆ.

ಹಿರೇಗುಂಡಗಲ್‌ನ ವೀರಗಲ್ಲು ಶಾಸನವು[೯೦] ಸ್ವಸ್ತಿಶ್ರೀ ವಲ್ಲಭ ಪೃಥುವಿರಾಜ್ಯಂಕಯೆಸಿಯೆಗೆಲ್ಲ ಸೆಸುಯಾಣ್ಣುನಾಡಾಳೆ ಗುಮ್ದೆಗೆ ವಾವಿಕ್ಕ ತೊಟ್ಟ ವಾಳುತ್ತುಮ್ ಕಾಡುವಟ್ಟಿ ಚೋಳದುಳ್ಳೈ ಪೆಬ್ಬೀಳನಲ್ಲಕ್ಕಳ್ ಎರೆದು ವಿಪ್ಪಾದ್ರ್ ಎಂದು ಉಲ್ಲೇಖಿಸಿದೆ. ಅಂದರೆ ವಿಳಿಂದೆ ಯುದ್ಧದಲ್ಲಿ ಶ್ರೀವಲ್ಲಭನು ಪಲ್ಲವ ಅರಸ ನಂದಿವರ್ಮ ಎಂಬುವವರೊಡನೆ ಎಂದು ಉಲ್ಲೇಖಿಸಿದೆ. ನಂತರದ ಕಾಲಘಟ್ಟದಲ್ಲಿ ಪಲ್ಲವರಿಗೂ ಚಾಳುಕ್ಯರಿಗೂ ನಿರಂತರ ಕಾಳಗವಾಗುತ್ತಿದ್ದಾಗ ಈ ಪ್ರದೇಶದ ಮುಖಾಂತರವೇ ಸೈನ್ಯ ಹೋಗುತ್ತಿತ್ತು. ಒಂದನೆಯ ನರಸಿಂಹವರ್ಮ ಬಾದಾಮಿಯ ಇಮ್ಮಡಿ ಪುಲಕೇಶಿಯನ್ನು ಸೋಲಿಸಿದ್ದರಿಂದ ಬಾದಾಮಿ ಚಾಲುಕ್ಯರ ಪರ ವಹಿಸಿದ್ದ ಗಂಗರು ಪಲ್ಲವರು ಸಾಮಂತತ್ವವನ್ನು ಒಪ್ಪಿಕೊಳ್ಳಬೇಕಾಯಿತು. ಆದರೆ ಹೆಚ್ಚಿನದಾಗಿ ತುಮಕೂರು ಭಾಗವನ್ನೊಳಗೊಂಡ ಗಂಗಮಂಡಲದ ಮೇಲೆ ಪದೇ ಪದೇ ದಾಳಿ ಮಾಡುತ್ತಿದ್ದರೇ ಹೊರತು ಯಾವುದೇ ಭಾಗವನ್ನು ಶಾಶ್ವತವಾಗಿ ತಮ್ಮ ನಿಯಂತ್ರಣಕ್ಕೆ ತೆಗೆದುಕೊಳ್ಳಲಾಗಿಲ್ಲ. ಆದುದರಿಂದ ಪಲ್ಲವರ ಕಾಲದಲ್ಲಿ ನಿರ್ಮಾಣಗೊಂಡ ಕೋಟೆ-ಕೊತ್ತಲಗಳನ್ನು ಕಾಣಲಾಗದು.

೨.೪.೬. ಬಾದಾಮಿ ಚಾಳುಕ್ಯರು (ಕ್ರಿ.ಶ. ೫೭೮-೭೫೭)

ತುಮಕೂರು ಜಿಲ್ಲೆಯನ್ನು ಬಾದಾಮಿ ಚಾಳುಕ್ಯ ಅರಸರು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡಿರುವುದಕ್ಕೆ ದಾಖಲೆಗಳಿಲ್ಲ. ಏಕೆಂದರೆ ಇವರು ಉತ್ತರದ ಕಡೆ ಹೆಚ್ಚು

ಆಸಕ್ತಿವಹಿಸಿದ್ದರು. ಜೊತೆಗೆ ದಖನ್ ಕರ್ನಾಟಕ ಗಂಗರ ನಿಯಂತ್ರಣದಲ್ಲಿತ್ತು. ಅಲ್ಲದೆ ತಮಿಳು ದೇಶದ ದಂಡಯಾತ್ರೆಗೆ ಅಷ್ಟು ಸುರಕ್ಷಿತವಲ್ಲದ ಬೆಟ್ಟ-ಗುಡ್ಡಗಳಿಂದ ಕೂಡಿದ ತುಮಕೂರು ಮಾರ್ಗವನ್ನು ಬಿಟ್ಟು ಕರ್ನೂಲು, ಬಳ್ಳಾರಿ, ಅನಂತಪುರ, ಚಿತ್ತೂರು ಮಾರ್ಗವನ್ನು ಬಳಸಿಕೊಂಡರು. ಹಾಗಾಗಿಯೇ ಬಾದಾಮಿ ಚಾಲುಕ್ಯರಿಗೆ ಸಂಬಂಧಿಸಿದ ತುಮಕೂರು ಜಿಲ್ಲೆಗೆ ಹೊಂದಿಕೊಂಡ ಅನಂತಪುರ ಜಿಲ್ಲೆಯ ಗೂಟಿ ತಾಲೂಕಿನ ಪೆಡ್ಡವಡಗೊರು, ತಾಡಪತ್ರಿಯ ಚಂದನ ಗ್ರಾಮಗಳಲ್ಲಿ ಶಾಸನಗಳು[೯೧] ದೊರೆಯುತ್ತವೆ. ಆದರೆ ತುಮಕೂರನ್ನು ಉಲ್ಲೇಖಿಸುವ ಯಾವ ಶಾಸನಗಳು ಜಿಲ್ಲೆಯಲ್ಲಿ ದೊರೆಯುತ್ತಿಲ್ಲ. ಏಕೆಂದರೆ ಈ ಭಾಗದಲ್ಲಿ ಗಂಗರು ಆಳ್ವಿಕೆಯಿದ್ದು ಬಾದಾಮಿ ಚಾಲುಕ್ಯರೊಂದಿಗೆ ಅವರು ವೈವಾಹಿಕ ಸಂಬಂಧವನ್ನು ಬೆಳೆಸಿಕೊಂಡಿದ್ದರು. ಆದ್ದರಿಂದಲೇ ಚಾಳುಕ್ಯರು ತುಮಕೂರು ಜಿಲ್ಲೆಯ ಭಾಗಗಳ ಮೇಲೆ ಪರೋಕ್ಷ ಅಧಿಕಾರವನ್ನು ಚಲಾಯಿಸುತ್ತಿದ್ದರೇ ಹೊರತು ನೇರ ಆಳ್ವಿಕೆಗೆ ಒಳಪಡಿಸಿಕೊಳ್ಳಲಿಲ್ಲ. ಆದರೂ ಕ್ರಿ.ಶ. ೫೬೭ರಿಂದ ೫೯೭ರ ಶಾಸನಗಳಲ್ಲಿ ಬಾದಾಮಿ ಚಾಳುಕ್ಯರ ಒಂದನೆಯ ಕೀರ್ತಿವರ್ಮನು ಗಂಗರನ್ನು ಸೋಲಿಸಿದನೆಂಬ ಉಲ್ಲೇಖಗಳು ಸಿಗುತ್ತವೆ. ನಗರದ ದುರ್ವಿನೀತನ ಶಾಸನವು ಜಯಸಿಂಹ ವಲ್ಲಭನ ಸಿಂಹಾಸನಕ್ಕೆ ತನ್ನ ಮಗಳಾದ ಗಂಗಮಹಾದೇವಿಯನ್ನು ಪಟ್ಟಕ್ಕೆ ತಂದನೆಂದು ತಿಳಿಸುವುದರಿಂದ ಗಂಗ ಮತ್ತು ಬಾದಾಮಿ ಚಾಳುಕ್ಯರ ನಡುವೆ ವೈವಾಹಿಕ ಸಂಬಂಧಗಳಿದ್ದವೆಂದು ಸ್ಪಷ್ಟವಾಗುತ್ತದೆ.[೯೨] ವಿಶೇಷವಾಗಿ ಹೇಮಾವತಿ ಶಾಸನದಲ್ಲಿ ಪದೇ ಪದೇ ತಮ್ಮ ಸಾಮಂತತ್ವವನ್ನು ದಿಕ್ಕರಿಸುತ್ತಿದ್ದ ಪೂರ್ವ ಚಾಳುಕರನ್ನು ನೊಳಂಬರು ಸೋಲಿಸಿದ್ದರಿಂದ ಕರ್ಣಾಟೈನಲ್ಲಿತಮಂಗಳಾಖ್ಯನ್ನೃ(ಹೇಮಾವತಿ, ಶಾ.ಸಂ.೨-೮, ಪುಟ.೨೬೮). ಅಂದರೆ ಕರ್ನಾಟರೆಂದು ಸಂಭೋದಿಸಲ್ಪಡುತ್ತಿದ್ದ ಬಾದಾಮಿ ಚಾಳುಕ್ಯರಿಂದ ಮೆಚ್ಚುಗೆಗೆ ಪಾತ್ರರಾದರೆಂಬ ಅಂಶ ಸ್ಪಷ್ಟವಾಗುತ್ತದೆ. ಒಟ್ಟಾರೆ ಬಾದಾಮಿ ಚಾಳುಕ್ಯರ ಆಳ್ವಿಕೆಗೆ ಸಂಬಂಧಿಸಿದಂತೆ ಅಲ್ಪಸ್ವಲ್ಪ ಮಾಹಿತಿ ಕಂಡುಬಂದರೂ ಅವರಿಂದ ನಿರ್ಮಿಸಲ್ಪಟ್ಟದ್ದೆಂದು ಹೇಳಲಾಗುವ ಯಾವ ಕೋಟೆಯನ್ನು ಜಿಲ್ಲೆಯಲ್ಲಿ ಕಾಣಲಾಗದು.

೨.೪.೭. ಪೂರ್ವ ಚಾಳುಕ್ಯರು (ಕ್ರಿ.ಶ. ೭೫೪-೯೭೩)

ಬಾದಾಮಿ ಚಾಳುಕ್ಯರ ಇಮ್ಮಡಿ ಕೀರ್ತಿವರ್ಮನನ್ನು ರಾಷ್ಟ್ರಕೂಟರ ದಂತಿದುರ್ಗ ಕ್ರಿ.ಶ. ೭೫೪ರಲ್ಲಿ ಪರಾಜಿತಗೊಳಿಸುವುದರ ಮೂಲಕ ಬಾದಾಮಿ ಚಾಳುಕ್ಯ ಮನೆತನಕ್ಕೆ ಸೇರಿದ ಹಲವು ಮನೆತನಗಳ ಹುಟ್ಟಿಗೆ ಕಾರಣವಾಯಿತು. ಇವರು ಸುಮಾರು ಎರಡು ಶತಮಾನಗಳಿಗೂ ಹೆಚ್ಚು ಕಾಲ ರಾಷ್ಟ್ರಕೂಟರ ಸಾಮಂತರಾಗಿಯೇ ಆಳ್ವಿಕೆ ನಡೆಸಿದರು.[೯೮] ಇವರ ಆಳ್ವಿಕೆಯನ್ನು ಸ್ಪಷ್ಟಪಡಿಸುವ ಒಂದನೆಯ ಕೃಷ್ಣನ ಗುಬ್ಬಿಯ ಶಾಸನ ಪೂರ್ವ ಚಾಲುಕ್ಯರ ವಂಶಾವಳಿಯನ್ನು ಉಲ್ಲೇಖಿಸುತ್ತದೆ. ಇದರಲ್ಲಿ ಚಾಲುಕ್ಯರ ಬಾಲವರ್ಮ ಅವನ ಮಗ ಯಶೋವರ್ಮ ಅವನ ಮಗ ವಿಮಲಾದಿತ್ಯ[೯೩] ಎಂಬುದಾಗಿ ಉಲ್ಲೇಖವಿದೆ. ಹಿರೇಗುಂಡಗಲ್‌ನ ಶಾಸನೋಕ್ತ

ವೀರಗಲ್ಲು ಬಾಲವರ್ಮ ಗಂಗಮಂಡಲವನ್ನು ವಶಪಡಿಸಿಕೊಳ್ಳಲು ದಾಳಿ ಮಾಡಿದಾಗ ಶಿವಮಾರನ ನೆಚ್ಚಿನ ಯೋಧರೊಂದಿಗೆ ರಣರಂಗದಲ್ಲಿ ಕಾದುತ್ತಾ ಮಡಿದನೆಂದು ತಿಳಿಸುತ್ತದೆ.[೬೫] ಈತನು ನೊಳಂಬಪಲ್ಲವ ಅರಸ ಮಂಗಳನನ್ನು ಪಟ್ಟಾಭಿಷಕ್ತನನ್ನಾಗಿಸಿದನು.

೨. ಯಶೋವರ್ಮ

ಇವನ ಕಾಲದಲ್ಲಿ ಗಂಗಮಂಡಲದ ಬಹುಭಾಗ ಪೂರ್ವ ಚಾಳುಕ್ಯರ ನಿಯಂತ್ರಣಕ್ಕೊಳಪಟ್ಟಿತ್ತು. ಏಕೆಂದರೆ ಕುಣಿಗಲ್ ನಾಡು(೩೦೦) ಪ್ರಾಂತ್ಯಾಧಿಕಾರಿಯನ್ನಾಗಿ ತನ್ನ ಮಗ ವಿಮಲಾದಿತ್ಯನನ್ನು ನೇಮಿಸಿದ್ದನು.[೬೬]

೩. ವಿಮಲಾದಿತ್ಯ

ಇವನು ತನ್ನ ತಂದೆಯ ಕಾಲದಲ್ಲಿಯೇ ಕುಣಿಗಲ್‌ನ ಪ್ರಾಂತ್ಯಾಧಿಕಾರಿಯಾಗಿದ್ದನು. ಬದನಗುಪ್ಪೆ ಶಾಸನ ಕ್ರಿ.ಶ. ೮೧೨ರಲ್ಲಿ ವಿಮಲಾದಿತ್ಯ ಅಥವಾ ಬಾಕಿರಾಜ ಎಂಬ ಅರಸನು ಆಳ್ವಿಕೆ ಮಾಡಿದನೆಂದು ಉಲ್ಲೇಖಿಸುತ್ತದೆ. ಅದೇ ರೀತಿ ಈತನ ಆಳ್ವಿಕೆಯನ್ನು ಕಡಬ ಶಾಸನವೂ ಸಹ ಉಲ್ಲೇಖಿಸುತ್ತದೆ.

೪. ಅಮ್ಮಣರಾಯ

ಧರ್ಮಪುರಿಯ ಕೆಳಗಟ್ಟೂರು ಶಾಸನ ಅಮ್ಮಣರಾಯನನ್ನು ಪೂರ್ವ ಚಾಳುಕ್ಯ ಮನೆತನದ ಒಂದನೆ ಅಮ್ಮರಾಯನೆಂದು ಕರೆದಿದ್ದು, ನೊಳಂಬ ಅರಸ ಅಯ್ಯಪ್ಪದೇವನು ಈತನನ್ನು ಯುದ್ಧದಲ್ಲಿ ಪರಾಜಿತನನ್ನಾಗಿಸಿ ಚಾಳುಕ್ಯರಿಗೆ ಬದ್ಧವೈರಿಯಾಗಿ ಮಾರ್ಪಟ್ಟನು.

೫. ವಿಜಯಾದಿತ್ಯ (ಕ್ರಿ.ಶ.೮೪೯–೮೯೨)

ಇವನು ನೊಳಂಬರ ಅರಸ ಮಂಗಿರಾಜನನ್ನು ಯುದ್ಧದಲ್ಲಿ ಕೊಂದು ನೊಳಂಬವಾಡಿಯನ್ನು ತನ್ನ ತೆಕ್ಕೆಗೆ ತೆಗೆದುಕೊಂಡಿದ್ದನು.[೬೭]

೬. ಒಂದನೆಯ ಭೀಮ

ಈತ ರಾಷ್ಟ್ರಕೂಟ ಮತ್ತು ಗಂಗರನ್ನು ನಿರಾವಾದ್ಯಪುರ, ಪೆರುವಂಗರ ಕದನಗಳಲ್ಲಿ ವಿಜಯಿಯಾದನೆಂದು ಎಂ.ವಿ.ಕೃಷ್ಣರಾವ್ ಅಭಿಪ್ರಾಯಪಟ್ಟಿದ್ದಾರೆ. ಚಾಳುಕ್ಯ ರಾಣಿ ಚಾಕಬ್ಬೆಯು 'ದೇವಿಯಂ' ಎಂದು ಕರೆಯಲ್ಪಟ್ಟಿದ್ದು ೨ನೆಯ ನೀತಿಮಾರ್ಗ ವಿವಾಹವಾದನೆಂದು ಕೊಡ್ಲೂರಿನ ಶಾಸನ ತಿಳಿಸುತ್ತದೆ.

೭. ಎರಡನೆಯ ಭೀಮ

ಎರಡನೆಯ ಭೀಮ ಕ್ರಿ.ಶ. ೯೩೪ರಲ್ಲಿ ಪೂರ್ವ ಚಾಳುಕ್ಯ ಸಿಂಹಾಸನಾಧಿಪತಿಯಾದನು. ಇವನಿಗೆ ಗಂಡ ಮಹೇಂದ್ರ, ಬೀರಮಹೇಂದ್ರ ಎಂಬ ಬಿರುದುಗಳಿದ್ದವು. ಸಿಂಹಾಸನಕ್ಕಾಗಿ

ನಡೆದ ಕಲಹದಲ್ಲಿ ಇವನ ಪ್ರತಿಸ್ಪರ್ಧಿಯಾಗಿ ಯುದ್ಧಮಲ್ಲನು ರಾಷ್ಟ್ರಕೂಟರ ನೆರವು ಪಡೆದನು. ಹಾಗಾಗಿ ನೊಳಂಬರ ಅಯ್ಯಪ್ಪದೇವನು ಸಹ ಇವನ ಕಡುವೈರಿಯಾದನು. ಕ್ರಿಶ. ೯೩೪ರ ಬೇಗೂರು ಶಾಸನ ಬೀರ ಮಹೇಂದ್ರ ದಂಡೆತ್ತಿ ಬಂದಾಗ ತುಂಬೆಪಾಡಿಯಲ್ಲಿ ಘೋರ ಕಾಳಗವಾಯಿತು. ಅಯ್ಯಪ್ಪನ ನೆರವಿಗೆ ಗಂಗರ ಇರುಗ ಬಂದು ಸಾಹಸವನ್ನು ಮೆರೆದ. ಹಾಗಾಗಿ ಗಂಗರ ಎರೆಯಪ್ಪನು ಇರುಗನಿಗೆ ನಾಗಭಟ್ಟರ ಪಟ್ಟವನ್ನು ಕಟ್ಟಿ ಬೆಂಪೂರು ೧೨ನ್ನು ನೀಡಿದನೆಂದು ತಿಳಿಸುತ್ತದೆ. ಕೊನೆಗೆ ಚಾಳುಕ್ಯ ಭೀಮನು ಅಯ್ಯಪ್ಪದೇವನನ್ನು ಕಾಳಗದಲ್ಲಿ ಕೊಂದು ಅವನ ರಾಜ್ಯವನ್ನು ತನ್ನ ತೆಕ್ಕೆಗೆ ತೆಗೆದುಕೊಂಡ ನಂತರ ನೊಳಂಬ ಅರಸ ಬೀರನೊಳಂಬ ಅಣ್ಣಿಗನು ಪೂರ್ವ ಚಾಳುಕ್ಯ ರಾಜಕುಮಾರಿಯನ್ನು ನೇಮಿಸಿದನು.

ಹೀಗೆ ಪೂರ್ವಚಾಳುಕ್ಯ ಮನೆತನದ ಬಹುತೇಕ ಅರಸರು ನೊಳಂಬಾದಿ ಮತ್ತು ಗಂಗವಾಡಿಗಳನ್ನು ಪಡೆಯಲು ಸದಾ ಘರ್ಷಣೆಯಲ್ಲೇ ನಿರತರಾಗಿದ್ದರು. ಹಾಗಾಗಿ ಆಡಳಿತಾತ್ಮಕವಾಗಿ ಆಳ್ವಿಕೆ ನಡೆಸಿದ್ದಕ್ಕೆ ಯಾವ ಕುರುಹುಗಳು ಜಿಲ್ಲೆಯಲ್ಲಿ ಸಿಗುವುದಿಲ್ಲ. ಆದರೂ ಪೂರ್ವ ಚಾಳುಕ್ಯರ ಕಾಲಕ್ಕಾಗಲೇ ಜಿಲ್ಲೆಯಲ್ಲಿ ನಿರಂತರ ದಾಳಿಗಳು ನಡೆಯುತ್ತಿದ್ದರಿಂದ ತಮ್ಮ ಆಡಳಿತ ಕೇಂದ್ರ ಇಲ್ಲವೇ ಗ್ರಾಮಮಟ್ಟದಲ್ಲಿ ಶತ್ರುಗಳಿಂದ ರಕ್ಷಣೆ ಪಡೆಯಲು ಕೋಟೆ-ಕೊತ್ತಲಗಳ ನಿರ್ಮಾಣಗೊಂಡಿರುವುದು ಶಾಸನಗಳಿಂದ ತಿಳಿಯುತ್ತದೆ.

೨.೪.೭. ರಾಷ್ಟ್ರಕೂಟರು (ಕ್ರಿಶ. ೭೫೭-೯೭೩)

ವೈಭವಪೂರಿತ ಕನ್ನಡದ ಗರಿಮೆಯನ್ನು ಉತ್ತರಭಾರತದಲ್ಲೂ ಹರಿಸಿದ ರಾಷ್ಟ್ರಕೂಟ ಮನೆತನಕ್ಕೆ ಸಂಬಂಧಿಸಿದ ಅಧಿಕೃತ ದಾಖಲೆಗಳು ತುಮಕೂರು ಜಿಲ್ಲೆಯಲ್ಲಿ ಅತಿ ವಿರಳವೆಂದರೆ ಆಶ್ಚರ್ಯವೆನಿಸುತ್ತದೆ. ಬಹುಶಃ ಇವರು ಉತ್ತರದ ಕಡೆ ಹೆಚ್ಚಿನ ಗಮನವನ್ನು ಹರಿಸಿದ್ದರಿಂದ ಮೈಸೂರು ಭಾಗವನ್ನು ನಿರ್ಲಕ್ಷಿಸಿರುವ ಸಾಧ್ಯತೆಗಳಿವೆ. ಈ ಭಾಗದಲ್ಲಿ ಆಳ್ವಿಕೆ ಮಾಡುತ್ತಿದ್ದ ಗಂಗ ಅರಸರಾದ ಶ್ರೀಪುರುಷ ಮತ್ತು ೨ನೆಯ ಶಿವಮಾರನ ನಂತರ ಬಹುತೇಕರು ರಾಷ್ಟ್ರಕೂಟರಿಗೆ ಬಹುನಂಬಿಕಸ್ಥ ಗೆಳೆಯರಾದರು. ಹಾಗಾಗಿಯೇ ರಾಷ್ಟ್ರಕೂಟರು ತುಮಕೂರು ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದರೆನ್ನಲು ಬಹು ಅಪರೂಪದ ಆಧಾರಗಳು ದೊರೆಯುತ್ತವೆ. ಜಿಲ್ಲೆಯಲ್ಲಿ ರಾಷ್ಟ್ರಕೂಟರ ಕಾಲಕ್ಕಾಗಲೇ ಶಾಸನೋಕ್ತ ಕೋಟೆ-ಕೊತ್ತಲಗಳ ನಿರ್ಮಾಣಕಾರ್ಯ ಕೈದಾಳ, ಕುಣಿಗಲ್ ಮೊದಲಾದ ಕಡೆ ಆರಂಭವಾಗಿದ್ದು, ದಕ್ಷಿಣದ ತಮ್ಮ ಗಡಿ ಪ್ರಾಂತ್ಯಗಳನ್ನು ರಕ್ಷಿಸಲು ಸಾಮಂತರು, ದಂಡನಾಯಕರು, ಅಧಿಕಾರಿ ವರ್ಗಕ್ಕೆ ಕೋಟೆ-ಕೊತ್ತಲಗಳ ನಿರ್ಮಾಣಕ್ಕೆ ಅನುಮತಿ ನೀಡಲಾಗುತ್ತಿತ್ತು. ಬಾದಾಮಿ ಚಾಳುಕ್ಯರ ಎರಡನೆಯ ಕೀರ್ತಿವರ್ಮನನ್ನು ಕ್ರಿ.ಶ. ೭೫೩ರಲ್ಲಿ ದಂತಿದುರ್ಗ ಸೋಲಿಸುವುದರ ಮೂಲಕ ರಾಷ್ಟ್ರಕೂಟ ಸಾಮ್ರಾಜ್ಯದ ಹುಟ್ಟಿಗೆ ಕಾರಣೀಭೂತನಾಗಿದ್ದಾನೆ. ಆದರೆ ಇವನ ಆಳ್ವಿಕೆಗೆ ಸಂಬಂಧಿಸಿದ ಯಾವ ಕುರುಹುಗಳು ತುಮಕೂರು ಜಿಲ್ಲೆಯಲ್ಲಿ ದೊರೆಯುವುದಿಲ್ಲ.

೧. ಒಂದನೆಯ ಕೃಷ್ಣ

ಚಾಳುಕ್ಯರ ಸಾಮಂತರಾಗಿದ್ದ ಗಂಗರ ಮೇಲೆ ದಾಳಿ ಮಾಡಿ ಅವರ ಗಂಗ ಮಂಡಲವನ್ನು ತಮ್ಮ ತೆಕ್ಕೆಗೆ ತೆಗೆದುಕೊಳ್ಳಲು ಒಂದನೆಯ ಕೃಷ್ಣನ ಕಾಲದಿಂದಲೇ ಆರಂಭವಾಗಿರಬೇಕು. ಹಾಗಾಗಿಯೇ ಹಿರೇಗುಂಡಗಲ್ ಬಳಿ ಸುಮಾರು ೨೧ ವೀರಗಲ್ಲುಗಳು ಬಿದ್ದಿರುವುದು. ಇಂತಹ ಕೆಲವು ವೀರಗಲ್ಲುಗಳಲ್ಲಿ ರಾಷ್ಟ್ರಕೂಟರ ಒಂದನೆಯ ಕೃಷ್ಣನಿಗೆ ಸಂಬಂಧಿಸಿದ ಮೊದಲ ಕುರುಹು ದೊರೆಯುತ್ತದೆ. ಒಂದನೆಯ ಕೃಷ್ಣನು ತುಮಕೂರು ಮಾರ್ಗವಾಗಿ ಶ್ರೀಪುರುಷನ ರಾಜಧಾನಿ ಮನ್ನೆಗೆ ದಾಳಿ ಮಾಡಲು ಬಂದಿದ್ದಿರಬೇಕು. ಆದ್ದರಿಂದಲೇ ಈ ಮಾರ್ಗ ಮಧ್ಯೆ ಬರುವ ಹಿರೇಗುಂಡಗಲ್ ಬಳಿ ಇಬ್ಬರಿಗೂ ಕದನವಾಗಿರಬೇಕು. ಈ ಕದನದ ಕುರಿತು ಹಿರೇಗುಂಡಗಲ್‌ನ ವೀರಗಲ್ಲು ಶಾಸನ[೯೯] ಉಲ್ಲೇಖಿಸುತ್ತದೆ. ಆದರೂ ತುಮಕೂರು ಭಾಗಗಳು ಶ್ರೀಪುರುಷನ ಸಾಮಂತ ನೊಳಂಬರ ಸಿಂಹಪೋತನು ಅಧೀನದಲ್ಲಿದ್ದವೆಂದು ಚಳ್ಳಕೆರೆಯ ದೊಡ್ಡವಳವರ್ತಿ ಶಾಸನದಿಂದ[೧೦೦] ಒಂದನೆಯ ಕೃಷ್ಣನು ಬಲವಂತವಾಗಿ ಜಿಲ್ಲೆಯಿಂದ ಹೊರದಬ್ಬಲ್ಪಟ್ಟನೆಂದು ಸ್ಪಷ್ಟವಾಗುತ್ತದೆ. ಅದೇ ರೀತಿ ೩ನೆಯ ಗೋವಿಂದನ ಕಡಬದ ತಾಮ್ರಶಾಸನದಲ್ಲಿ[೧೦೧] ಸಮಸ್ತ ಸಿದ್ದನ್ತ ಸಾಗರ ಪಾರಗ ಮುನಿಕತಸಂಕುಲಂ ದೇವಕುಲ ಮಾಸೀತ್ ಕನ್ನೇಶ್ವರನ್ನಾಯ ಸ್ವನಾಮಧೇಯಾಂಕಿತಂ ಅಸಾವಕಾಲವರ್ಷ ಇತಿವಿಖ್ಯತಃ ತಸ್ಯಸೂಃ ಅನತನೃಪ ಮಕುಟ ಮಣಿಗಣಕಿರಣಬಾಲರಂಜಿತ ಪದಯುಗಲ ನಖಮಯೂಖ ಪ್ರಭಾಭಾಸಿತ ಸಿಂಹಾಸನೋಪಾನ್ತಃ ಎಂಬುದಾಗಿ ಉಲ್ಲೇಖಗೊಂಡಿದ್ದಾನೆ. ಕ್ರಿ.ಶ.೭೫೬ರಿಂದ ೭೭೫ರ ವರೆಗೆ ಆಳ್ವಿಕೆ ನಡೆಸಿರುವ ರಾಷ್ಟ್ರಕೂಟರ ಒಂದನೆಯ ಕೃಷ್ಣ-ಕಣ್ಣ-ಕನ್ಹ ಎಂಬ ಅರಸನೇ ಕನ್ನರಸನಾಗಿರಬೇಕು. ಅಲ್ಲದೆ ತಾನು ನಿರ್ಮಿಸಿದ ದೇವಾಲಯವೊಂದು ಅವನ ಅಧಿಕಾರಕ್ಕೆ ಮುಕುಟಪ್ರಾಯವಾಗಿದೆ ಎಂದು ಅದನ್ನು ವರ್ಣಿಸಲ್ಪಟ್ಟಿರುವುದನ್ನು ಗಮನಿಸಿದರೆ ಬಹುಶಃ ಎಲ್ಲೋರದಲ್ಲಿ ನಿರ್ಮಾಣಗೊಂಡ ಈ ಕೈಲಾಸನಾಥ ದೇವಾಲಯದ ಮತ್ತೊಂದು ಹೆಸರು ಈ ಕನ್ನೇಶ್ವರ ಎಂಬುದಾಗಿರಬೇಕು. ಈ ದೇವಾಲಯದ ಹೆಸರೇ ಕೃಷ್ಣ ತನ್ನ ನಾಮದೇಯವನ್ನಾಗಿ ಹೊಂದಿರಬೇಕು. ಈ ಶಾಸನದ ವಿಶೇಷತೆಯೆಂದರೆ ಕನ್ನ, ಕಣ್ಣ, ಕನ್ಹ ಇವೆಲ್ಲಾ ಬೇಡರ ಮೂಲಹೆಸರುಗಳು. ಆದರೆ ಇವರು ತಮಗೆ ಮೊದಲೇ ಹೆಸರಿದ್ದರೂ. ಇಂತಹ ಬೇಡಮೂಲ ಹೆಸರುಗಳನ್ನು ಏಕೆ ಇಟ್ಟುಕೊಳ್ಳುತ್ತಿದ್ದರೆಂಬುದು ಆಶ್ಚರ್ಯವೆನಿಸುತ್ತದೆ. ಈ ಥರದ ಉಲ್ಲೇಖಗಳು ವಿಶೇಷವಾಗಿ ತುಮಕೂರು ಜಿಲ್ಲೆಯ ಶಾಸನಗಳಲ್ಲಿ ಕಂಡುಬರುತ್ತದೆ. ನಂತರದಲ್ಲಿ ಬಂದ ೨ನೇ ಕೃಷ್ಣನ ಮಗ ಕನ್ನರ ಸಹ ಹೇಮಾವತಿ ಶಾಸನದಲ್ಲಿ ಕನ್ನರಸ, ಕನ್ನರದೇವ ಎಂಬುದಾಗಿ ಉಲ್ಲೇಖಿಸಲ್ಪಟ್ಟಿದ್ದಾನೆ. ಈ ಕುರಿತಾಗಿ ಮತ್ತಷ್ಟು ಅಧ್ಯಯನಗಳಾಗುವ ಅವಶ್ಯಕತೆಯಿದೆ.

೨. ಎರಡನೆಯ ಗೋವಿಂದ (ಕ್ರಿ.ಶ. ೭೭೪-೮೦)

ಈತನ ಕಾಲದಲ್ಲೂ ತುಮಕೂರು ಜಿಲ್ಲೆಯ ಬಹುಭಾಗವನ್ನು ತಮ್ಮ ನಿಯಂತ್ರಣಕ್ಕೆ ಒಳಪಡಿಸಿಕೊಳ್ಳಲು ಆಗದಿರುವುದನ್ನು ಗಮನಿಸಿದರೆ ಬಹುಶಃ ಧ್ರುವನ ಆಳ್ವಿಕೆ ಬರುವವರೆಗೂ ರಾಷ್ಟ್ರಕೂಟ ಸಾಮ್ರಾಜ್ಯ ಅಷ್ಟು ಪ್ರಬಲವಾಗಿರಲಿಲ್ಲ ಎನಿಸುತ್ತದೆ. ಏಕೆಂದರೆ ರಾಷ್ಟ್ರಕೂಟ, ಹೈಹಯ, ಚಾಳುಕ್ಯ, ಭಟರಿಂದ ಕೂಡಿದ ಒಕ್ಕುಟವಲ್ಲಭ ಸೈನ್ಯವನ್ನು ಮುನ್ನಡೆಸುತ್ತಿದ್ದ ಧೋರನನ್ನು ಎರಡನೆಯ ಶಿವಮಾರನೊಬ್ಬನೇ ಸೋಲಿಸಿದ್ದನ್ನು[೧೦೨] ಗಮನಿಸಿದರೆ ರಾಷ್ಟ್ರಕೂಟರ ಸೈನ್ಯ ಬಲ ಎಷ್ಟಿತ್ತೆಂಬುದು ತಿಳಿಯುತ್ತದೆ. ಅಲ್ಲದೆ ಗಂಗರಲ್ಲಾದ ಅಂತಹ ಕಲಹದ ಸದುಪಯೋಗಪಡೆದ ಎರಡನೆಯ ಗೋವಿಂದನು ಎರಡನೆಯ ಶಿವಮಾರನಿಗೆ ಸಿಂಹಾಸನವನ್ನು ದೊರೆಯುವಂತೆ ಮಾಡಿ ಅವನನ್ನು ತನ್ನ ಸಾಮಂತನನ್ನಾಗಿಸಿಕೊಂಡನು. ಆದರೂ ಈ ಕಾರ್ಯ ಶ್ರೀಪುರುಷನು ಬದುಕಿರುವವರೆಗೂ ಸಾಧ್ಯವಾಗಲಿಲ್ಲ ಎಂಬುದು ತುಮಕೂರಿನ ಉತ್ತರ ಗಡಿಗೆ ಹೊಂದಿಕೊಂಡಿರುವ ಚಳ್ಳಕೆರೆ ತಾಲೂಕಿನಲ್ಲಿ ದೊರೆತ ಶ್ರೀಪುರುಷನ ಎರಡು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ಶ್ರೀಪುರುಷನ ಮರಣದ ನಂತರವೇ ಗಂಗರ ಪರವಿದ್ದ ನೊಳಂಬರ ಸಿಂಹಪೋತನ ಮಗ ಚಾರುಪೊನ್ನರು ರಾಷ್ಟ್ರಕೂಟರ ಮಾಂಡಳಿಕರನ್ನು ಒಪ್ಪಿಕೊಂಡಿರುವುದು ಮದುರೆಯ ಶಾಸನದಿಂದ ಸ್ಪಷ್ಟವಾಗುತ್ತದೆ.

೩. ಧ್ರುವ (ಕ್ರಿ.ಶ. ೭೮೦-೯೩)

ಎರಡನೆಯ ಗೋವಿಂದನ ಮರಣದ ನಂತರ ಅವನ ಸೋದರ ಧ್ರುವನು ಪಟ್ಟಕ್ಕೆ ಬಂದನು. ತನ್ನ ವಿರುದ್ಧ ಗೋವಿಂದನಿಗೆ ಬೆಂಬಲ ನೀಡಿದ್ದ ಶಿವಮಾರನನ್ನು ಬಂಧಿಸಿ ಗಂಗಮಂಡಲವನ್ನು ನೋಡಿಕೊಳ್ಳಲು ತನ್ನ ಹಿರಿಯ ಮಗನಾದ ಸ್ತಂಭ ಅಥವಾ ಕಂಬಯ್ಯನನ್ನು ನೇಮಿಸಿದನೆಂದೂ ಇವನ ಕೆಳಗೆ ಸಿರಾ ತಾಲೂಕಿಗೆ ಸೇರಿದ್ದ ಅಗಳಿ-೧೨ನ್ನು ಪುಲಿಯ ಎಂಬುವವನು ಆಳುತ್ತಿದ್ದನೆಂದು ಮೇಲಾಗಣಿ ಶಿಲಾಶಾಸನದಿಂದ[೧೦೩] ತಿಳಿಯುತ್ತದೆ. ಪೈಠಾಣ ತಾಮ್ರ ಶಾಸನವು[೧೦೪] ಸಹ ಶ್ರೀ ಕಾಞ್ಚೀಪತಿ ಸ್ಮತಾನ್ಕ್ಷಿತಿ ಭೃತೋಯ! ಪ್ರಪದ್ಯೋಪರಿ ಸ್ವಂಯಾನ ಪ್ರತಿತಂ ತಥಾಪಿನ ಕೃತಂ ಚೇತೋನ್ಯಥಾ ಭ್ರಾತರಂ ಎಂಬುದಾಗಿ ತನ್ನ ಅಧಿಕಾರಕ್ಕೆ ಪ್ರತಿರೋಧ ವ್ಯಕ್ತಪಡಿಸಿದ್ದ ಪಲ್ಲವ, ಗಂಗ, ವೆಂಗಿ, ಮಾಳವ ದೇಶಿಯನ್ನು ಸೋಲಿಸಿ ಅವರ ಪ್ರದೇಶಗಳನ್ನು ವಶಪಡಿಸಿಕೊಂಡಿರುವುದಾಗಿ ತಿಳಿಸುತ್ತದೆ. ಇದನ್ನು ಮಾರಸಿಂಹನ ಆಲೂರು ತಾಮ್ರಶಾಸನ, ಗಂಚಾಂ ಮಣ್ಣೆಂತಾಮ್ರ ಶಾಸನಗಳು ಹಾಗೂ ರಾಷ್ಟ್ರಕೂಟರ ರಾಧನಪುರ ಮತ್ತು ವಾಣೀತಾಮ್ರ ಶಾಸನಗಳು ಸಹ ಸ್ಪಷ್ಟಪಡಿಸುತ್ತವೆ.

೪. ಮೂರನೆಯ ಗೋವಿಂದ (ಕ್ರಿ.ಶ. ೭೯೩-೮೧೪)

ಧ್ರುವನ ಕಿರಿಯ ಮಗನಾದ ಮೂರನೆಯ ಗೋವಿಂದನಿಗೆ ಪಟ್ಟ ಕಟ್ಟಿದ್ದರಿಂದ ಇವನ ಇನ್ನೊಬ್ಬ ಮಗ ಗಂಗಮಂಡಲದ ಪ್ರಾಂತ್ಯಾಧಿಪತಿಯಾಗಿದ್ದ ಸ್ತಂಭನು ತನ್ನ ತಮ್ಮನ

ವಿರುದ್ಧವೇ ತಿರುಗಿಬಿದ್ದು ಪರಾಜಿತಗೊಂಡನು. ಆದರೂ ಗೋವಿಂದ ತಮ್ಮನನ್ನು ಕ್ಷಮಿಸಿ ಪುನಃ ಕ್ರಿ.ಶ. ೭೯೮ರಲ್ಲಿ ಅಧಿಕಾರ ದೊರಕಿಸಿಕೊಟ್ಟನೆಂದು ನವಸಾರಿ ಮತ್ತು ಪೈಠಾಣ ಶಿವವಾಯಿ, ವಾಣೀ, ರಾಧನಪುರ ಶಾಸನಗಳಿಂದ ದೃಢಪಡುತ್ತದೆ. ಕಡಬದ ಶಾಸನವು[೧೦೫] ಆರ್ಕಕೀರ್ತಿರಿತಿ ಖ್ಯಾತಿ ಯಾತನ್ಸನ್ಮುನಿಸತ್ತಮಃ ತಸ್ಮೈಮುನಿವರಾಯ ತಸ್ಯ ವಿಮಳಾದಿತ್ಯಸ್ಯಶವನೈಶರ ಪೀಡಾನೋದಾಯ ಮಯೂರ ಖಣ್ಡಿಮಧಿವಸತಿ ವಿಜಯಸ್ಕಸ್ಥಾವರೇ ಬಾಕಿರಾಜೇನ ವಿಜ್ಞಾಪಿತೋವಲ್ಲಬೇನ್ದ್ರಃ ಜಾಲಮಂಗಲನಾಮ, ಧೇಯಂಗ್ರಾಂವಾನ್ಯ ಎಂಬುದಾಗಿ ಉಲ್ಲೇಖಿಸುತ್ತದೆ. ಅಂದರೆ ವಲ್ಲಭನ ಕುಣಿಗಲ್ ಅಧಿಕಾರಿ ವಿಮಲಾದಿತ್ಯ ಶನಿಪೀಡ ನಿವಾರಣೆಗಾಗಿ ಆರ್ಕಕೀರ್ತಿ ಎಂಬ ಜೈನ ಮುನಿಗೆ ದತ್ತಿ ನೀಡಿದ್ದನ್ನು ತಿಳಿಸುತ್ತದೆ.

೫. ಅಮೋಘವರ್ಷ (ಕ್ರಿ.ಶ. ೮೧೪–೮೭೮)

ಅಮೋಘವರ್ಷನು ತುಮಕೂರಿನ ಕೆಲ ಪ್ರದೇಶಗಳನ್ನು ಹಿರೇಗುಂಡಲ್, ಕೈದಾಳ ಕಾಳಗಗಳ ಮೂಲಕ ಪಡೆದುಕೊಂಡನೆಂದು ನೀಲಗುಂದ, ಶಿರೂರು, ಕಲ್ಲಭಾವಿ, ಕನ್ನೂರು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಈತ ತನ್ನ ನೆಚ್ಚಿನ ದಂಡನಾಯಕ ಬಂಕೇಶನನ್ನು ಗಂಗವಾಡಿಯ ಮೇಲೆ ದಾಳಿ ಮಾಡಲು ಕಳುಹಿಸಿದಾಗ ತುಮಕೂರಿಗೆ ಸೇರಿದ ಕೈದಾಳ ಮೊದಲಾದ ದುರ್ಗಗಳನ್ನು ಗೆದ್ದುಕೊಂಡನೆಂದು ಕನ್ನೂರು ಶಾಸನ[೧೦೬] ತಕ್ಕೇದಾಳಾಭಿದಾನಂ ದುರ್ಗ್ಗಂ ವಪ್ಪಾರ್ಗ್ಗಳಾದಿ ದುರ್ಲ್ಲಂಘ್ಯಂ ಮೌಳ ಬಲಾರಿಪ್ಸಿ ತಮಪಿಸದಯಃ ಎಂಬುದಾಗಿ ಕೈದಾಳದ ದುರ್ಗದ ಅಬೇಧ್ಯತೆಯನ್ನು ತಿಳಿಸುತ್ತದೆ. ಆದರೂ ಈತ ತುಮಕೂರಿನ ಎಲ್ಲಾ ಪ್ರದೇಶಗಳನ್ನು ತನ್ನ ಅಧಿಪತ್ಯಕ್ಕೆ ಸೇರಿಸಿಕೊಂಡಿರಲಿಲ್ಲ ಎಂಬುದು ಒಂದನೆಯ ರಾಚಮಲ್ಲನ ಕೆರೆಗೋಡು ರಂಗಾಪುರ ಶಾಸನದಿಂದ ತಿಳಿಯುತ್ತದೆ. ಅಲ್ಲದೆ ಬಂಕೇಶನಿಗೆ ಯುದ್ಧರಂಗದಿಂದ ಹಿಂದಿರುಗುವಂತೆ ಆದೇಶಿಸಿ ತನ್ನ ಮಗಳಾದ ಚಂದ್ರೋಲಬ್ಬೆಯನ್ನು ಎರಗಂಗನ ಮಗ ಬೂತರಸನಿಗೆ ಕೊಟ್ಟು ವಿವಾಹ ಮಾಡಿ ವೈವಾಹಿಕ ಸಂಬಂಧವನ್ನು ಬೆಳೆಸಿದನು. ಈ ಶಾಸನದ ವಿಶೇಷತೆಯೆಂದರೆ ತುಮಕೂರು ಜಿಲ್ಲೆಯಲ್ಲಿ ಕ್ರಿ.ಶ. ೮ನೆಯ ಶತಮಾನಕ್ಕೂ ಮುಂಚೆ ಕೋಟೆ ಇದ್ದಿರಬಹುದೆಂಬ ಊಹೆಗೆ ಪುಷ್ಠಿಯನ್ನು ಕೈದಾಳದುರ್ಗ ಉಲ್ಲೇಖದಿಂದ ನೀಡಿದೆ. ಅಲ್ಲದೆ ಕಲ್ಲಬಾವಿ ಶಾಸನ ಶಿವಮಾರ ಅಮೋಘವರ್ಷನ ಮಾಂಡಲೀಕನಾಗಿದ್ದನೆಂದು ಉಲ್ಲೇಖಿಸುತ್ತದೆ.[೧೦೭]

೬. ಎರಡನೆಯ ಕೃಷ್ಣ (ಕ್ರಿ.ಶ. ೮೭೮–೯೧೪)

ಚಿಕ್ಕ ಸಾರಂಗಿಯ ಈತನ ಕ್ರಿ.ಶ.೯೦೩ ಶಾಸನ[೧೦೮] ಸ್ವಸ್ತಿಕಾಲವರ್ಷ ಶ್ರೀ ಪೃಥ್ವಿವಲ್ಲಭ ಮಹಾರಾಜಾಧಿರಾಜ ಜ್ಯಸಲ್ಲುತಿರೆ ಪ್ರಚಣ್ಣ ದಣ್ಣನಾಯಕ ಶ್ರೀದಾಮಪ್ಪೆಯ್ಯ ತೆಜ್ಜಣದಿಶಾವರಕ್ಕೆಲ್ಲ ದಡ್ಡನಾಯಕನಾಗಿ ಮಣ್ಣೆಯಾಳಿಗ ಎಂದು ಉಲ್ಲೇಖಿಸಿದೆ. ಗಂಗರನ್ನು ಸೋಲಿಸಿ ಮಣ್ಣೆಗೆ ಒಳಪಡುವ ತುಮಕೂರಿನ ಪ್ರದೇಶಗಳನ್ನು ನೇರ ಆಳ್ವಿಕೆಗೆ ಒಳಪಡಿಸಿಕೊಂಡಿದ್ದನೆಂದು ತಿಳಿಯುತ್ತದೆ. ಇವನ ನಂತರ ಬಂದ ಮೂರನೆಯ ಇಂದ್ರ ಉತ್ತರ ಭಾರತದ ಕಡೆ

ಹೆಚ್ಚು ಆದ್ಯತೆ ನೀಡಿದ್ದರಿಂದ ಗಂಗಮಂಡವನ್ನು ನಿರ್ಲಕ್ಷಿಸಿದನೆಂದೇ ಹೇಳಬೇಕು. ಈತನನ್ನು ಉಲ್ಲೇಖಿಸುವ ಯಾವ ಶಾಸನಗಳು ತುಮಕೂರು ಜಿಲ್ಲೆಯಲ್ಲಿ ದೊರೆಯುವುದಿಲ್ಲ.

೭. ಮೂರನೆಯ ಕೃಷ್ಣ

ಗಜಾಂಕುಶ ಚೋಳನ ವಿರುದ್ಧ ತನ್ನ ಸಾಮಂತ ದೀಪನ ಸೇನೆಯೊಂದಿಗೆ ಪೊನ್ನಯ್ಯನು ಕೃಷ್ಣನ ಆದೇಶದ ಮೇರೆಗೆ ಇರೀಬಿಯಲ್ಲಿ ಹೋರಾಡುತ್ತಾ ಸತ್ತನೆಂದು ಮಡಕಸಿರ ಶಾಸನ ಹೇಳುತ್ತದೆ.[೧೧೯] ಪೊನ್ನಯ್ಯ, ನೊಳಂಬರ ದಿಲೀಪರಸನ ಸೇನಾನಾಯಕನಾಗಿರಬೇಕು. ಪೊನ್ನಯ್ಯ ೩ನೆಯ ಕೃಷ್ಣನು ಗಜಾಂಕುಶ ಚೋಳನ ವಿರುದ್ಧ ಹೋರಾಡಲು ಆದೇಶಿಸಿದನೆಂದರೆ ದೀಪರಸನು ಸಹ ಕೃಷ್ಣನ ಸಾಮಂತನಾಗಿರಬಹುದು. ಹೆಬ್ಬಾಳ ಶಾಸನವು ಗಂಗಮಂಡಲವನ್ನು ಆಳ್ವಿಕೆ ಮಾಡುತ್ತಿದ್ದ ಬೂತಗನಿಗೆ ಕನ್ನರ ದೇವ(೩ನೇ ಕೃಷ್ಣ) ತನ್ನ ಸೋದರಿ ರೇವಕ ನಿಮಮಡಿಯನ್ನು ಬದ್ದಗದೇವ(ಅಮೋಘವರ್ಷ–೩)ನು ತನ್ನ ಮಗಳನ್ನು ಕೊಟ್ಟು ವೈವಾಹಿಕ ಸಂಬಂಧವನ್ನು ಬೆಳೆಸಿಕೊಂಡರೆಂದು ತಿಳಿಸುತ್ತದೆ. ಆದ್ದರಿಂದ ಗಂಗ ಮತ್ತು ರಾಷ್ಟ್ರಕೂಟ ಅರಸರ ಮಧ್ಯೆ ಶತ್ರುತ್ವ ಇಲ್ಲವಾಗಿ ಮಿತ್ರತ್ವ ಉದಯಿಸಿತು. ಬಹುಶಃ ಇದರಿಂದಲೇ ರಾಷ್ಟ್ರಕೂಟರ ಕೊನೆಯ ಅರಸ ಖೊಟ್ಟಿಗನನ್ನು ಇಮ್ಮಡಿ ತೈಲಪ ಕ್ರಿ.ಶ. ೯೭೩ರಲ್ಲಿ ಸೋಲಿಸಿ ರಾಷ್ಟ್ರಕೂಟ ಮನೆತನದ ಅವಸಾನಕ್ಕೆ ಕಾರಣವಾಗುವುದನ್ನು ತಡೆಯಲು ಗಂಗರು ಬಹು ಯತ್ನಿಸಿದರು. ಒಂದು ಕಾಲದಲ್ಲಿ ಬದ್ಧವೈರಿಗಳಾದ ಗಂಗರು ಕೊನೆ ಕೊನೆಗೆ ವಿಶಾಲ ಸಾಮ್ರಾಜ್ಯ ಅವಸಾನ ಹಿಡಿಯುತ್ತಿರುವುದನ್ನು ಕಂಡು ಸಹಿಸದಾದರು. ಈ ಪರಿವರ್ತನೆಯ ಹಿಂದಿನ ಉದ್ದೇಶ ನಿಜವಾಗಲೂ ಆಶ್ಚರ್ಯವೆನಿಸದಿರಲಾರದು.

೨.೪.೮. ನೊಳಂಬ ಪಲ್ಲವರು (ಕ್ರಿ.ಶ. ೭೫೦–೧೦೫೫)

ಕರ್ನಾಟಕದ ಚರಿತ್ರೆಯಲ್ಲಿ ಸಣ್ಣದೊಂದು ಅರಸುಮನೆತನ ಗಂಗ ಮತ್ತು ರಾಷ್ಟ್ರಕೂಟರ ಮಧ್ಯೆ ಏಳಿಗೆಗೆ ಬಂದು ಸಾಂಸ್ಕೃತಿಕ ಬದುಕಿಗೆ ಬಹುದೊಡ್ಡ ಕೊಡುಗೆ ನೀಡಿದೆಯೆಂದರೆ ಅತಿಶಯೋಕ್ತಿಯಾಗಲಾರದು. ತುಮಕೂರಿನ ಕೆಲವು ಭಾಗಗಳು ೧೦ನೆಯ ಶತಮಾನದವರೆಗೆ ಇವರ ನೇರ ಆಳ್ವಿಕೆಗೆ ಒಳಪಟ್ಟಿದ್ದವು. ಅದರ ಕುರುಹಾಗಿ ಕೋಟೆ–ಕೊತ್ತಲ, ದೇವಾಲಯಗಳನ್ನು ಇಂದಿಗೂ ಜಿಲ್ಲೆಯಲ್ಲಿ ಕಾಣಬಹುದಾಗಿದೆ. ಇವರು ತಮ್ಮನ್ನು ಶಾಸನಗಳಲ್ಲಿ ಕಾಂಚೀಪತಿ ಪುರವಾಧೀಶ್ವರರು ಎಂಬುದಾಗಿ ಕರೆದುಕೊಂಡಿದ್ದಾರೆ. ಆದರೆ ತಮಿಳುನಾಡಿನ ಪಲ್ಲವರಿಗೂ ನೊಳಂಬರಿಗೂ ಯಾವ ರೀತಿಯ ಸಂಬಂಧ ಇದ್ದಿರಬೇಕೆಂಬುದು ಇನ್ನು ತಿಳಿಯದ ಸಂಗತಿ. ಹೇಮಾವತಿಯ ಕ್ರಿ.ಶ. ೯೬೬ರ ದಿಲೀಪರಸನ ಶಾಸನ[೧೨೦] ನೊಳಂಬರ ಮೂಲ, ಅವರ ವಂಶಾವಳಿಯನ್ನು ತಿಳಿಸುತ್ತದೆ. ಈ ಶಾಸನದಲ್ಲಿ 'ಶ್ರೀ ಮೌನೀಶ್ವರ ವಂಶಜ ಕಾಂಚೀಪತಿಃಪಲ್ಲವಃ ಜಾತಃ ತತ್ಕುಲಜಃ ಕಿರಾತನೃಪ ತಿಂಜಿತ್ವಾರಣೇ ಚಣ್ಡಿಕಾಯ ಆ ರಾಧ್ಯಾರಿಜಯೇನ ಲೋಕವಿದಿ ತೋನೂ ಮಾರಿ ರಾಜೋಭವತ್‌ಕರ್ಣಾಟ್ಯೈರ್ನ್ನುತ ಮಂಗಳಾಖ್ಯ

ನೃಪ' ಎಂಬುದಾಗಿ ಉಲ್ಲೇಖವಿದೆ. ಶಿವನನ್ನು ಆರಾಧಿಸುವ ವಂಶ ಕಾಂಚಿ ಪಲ್ಲವ ಕುಲಕ್ಕೆ ಸೇರಿದ ಬೇಟೆಯಲ್ಲಿ ನುರಿತ ಅರಸನಾದ ತ್ರಿಣಯನ ವಂಶದಲ್ಲಿ ಹುಟ್ಟಿದ ಮಂಗಳ ಎಂಬುವವನು ಚಂಡಿಕ ದೇವಿಯ ಭಕ್ತ ಎಂದು ಅರ್ಥೈಸುತ್ತದೆ. ಆದರೆ ಇದನ್ನು ಎಂ.ಎಸ್.ನರಸಿಂಹಮೂರ್ತಿಯವರು ನೊಳಂಬರ ಇತಿಹಾಸ ಎಂಬ ಲೇಖನದಲ್ಲಿ ತ್ರಿಣಿಯನನ ವಂಶದಲ್ಲಿ ಹುಟ್ಟಿದ ಮಂಗಳನು ಕಿರಾತ ನೃಪತಿಯನ್ನು ಜಯಿಸಿ ಅಧಿಕಾರದ ಗದ್ದುಗೆಗೆ ಏರಿದ್ದಾನೆಂದು[೧೧೧] ತಪ್ಪಾಗಿ ಅರ್ಥೈಸಿದ್ದಾರೆ. ಏಕೆಂದರೆ ಮಂಗಳನಿಗಿಂತ ಮೊದಲೇ ಇಲ್ಲಿ ಯಾವ ಬೇಡ ಅರಸನು ಆಳ್ವಿಕೆ ಮಾಡಿರುವುದಕ್ಕೆ ದಾಖಲೆಗಳಿಲ್ಲ. ಒಂದು ವೇಳೆ ಇದ್ದಿದ್ದೇ ಆದರೆ ಮಿಡಿಗೇಶಿ ಕೇವಲ ಮೂವತ್ತು ಕಿ.ಮೀ. ಅಂತರದಲ್ಲಿರುವ ಹೆಂಜೇರುವಿನ ಮೇಲೆ ಶ್ರೀಪುರುಷ ದಾಳಿ ಮಾಡಿರುವ ಸಾಧ್ಯತೆಗಳಿರುತ್ತಿತ್ತು. ಆದರೆ ಮಿಡಿಗೇಶಿಯವರೆಗೆ ಶ್ರೀಪುರುಷನ ಸೇನೆ ಬಂದಿರುವುದಕ್ಕೆ ಮಿಡಿಗೇಶಿಯ ವೀರಗಲ್ಲುಗಳಿಂದ ಸ್ಪಷ್ಟತೆ ಸಿಗುತ್ತದೆ. ಹಾಗಾಗಿ ಇವರ ವಾದವನ್ನು ಒಪ್ಪಲಾಗದು. ಅದು ಅಲ್ಲದೆ ಹೆಂಜೇರು ಪರಿಸರವು ಮಂಗಳನ ಅಧಿಕಾರದ ಕಾಲಘಟ್ಟಕ್ಕೆ ಬಾದಾಮಿ ಚಾಳುಕ್ಯರ ಸಾಮಂತರಾದ ಪೂರ್ವ ಚಾಳುಕ್ಯರ ವಿಮಲಾಧಿತ್ಯನ ಆಳ್ವಿಕೆಗೊಳಪಟ್ಟಿತ್ತು. ಶಾಸನದಲ್ಲಿ ಕರ್ಣಾಟೈರ್ನುತ ಮಂಗಳಾಖ್ಯನೃಪ ಎಂಬ ಉಲ್ಲೇಖವಿರುವುದರಿಂದ ಬಹುಶಃ ಪದೇ ಪದೇ ತಮಗೆ ಪ್ರತಿರೋಧ ವ್ಯಕ್ತಪಡಿಸುತ್ತಿದ್ದ ಪೂರ್ವ ಚಾಳುಕ್ಯರನ್ನು ಸೋಲಿಸಿದ್ದರಿಂದ ಕ್ರಿ.ಶ. ೭೫೩ರ ಕಾಮನಗಡ ಶಾಸನದಲ್ಲಿ ಕರ್ಣಾಟರೆಂದು ಉಕ್ತವಾಗಿರುವ ಬಾದಾಮಿ ಚಾಳುಕ್ಯರ ಕೃಪೆಗೆ ಒಳಗಾಗಿರಬೇಕೆಂದು ಊಹಿಸುವ ಸಾಧ್ಯತೆಗಳೇ ಹೆಚ್ಚೆಂದು ಹೇಳಬೇಕು(ಲಕ್ಷ್ಮೀನಾರಾಯಣರಾಯ, ಪಂಚಮುಖಿ, ೨೦೦೮, ಕರ್ನಾಟಕದ ಇತಿಹಾಸ, ಪು.೯೫೩). ಆದ್ದರಿಂದ ಇವರ ವಾದವನ್ನು ಮತ್ತೊಂದು ದೃಷ್ಟಿಯಲ್ಲಿ ವಿಶ್ಲೇಷಿಸುವುದಾದರೆ ಈ ಭಾಗದಲ್ಲಿ ಪೂರ್ವ ಚಾಳುಕ್ಯರು ಆಳ್ವಿಕೆ ಮಾಡುತ್ತಿದ್ದರಿಂದ ಇವರನ್ನು ಬೇಡರೆಂದು ಒಪ್ಪಬೇಕಾಗುತ್ತದೆ. ಅದು ಅಲ್ಲದೆ ಅಷ್ಟು ಬಲಿಷ್ಠರಾದ ಇವರನ್ನು ಆರಂಭದಲ್ಲಿಯೇ ಎದುರಿಸಲು ಸಾಧ್ಯವೇ ಇಲ್ಲ. ಆದುದರಿಂದ ಬೇಡ ಸಮುದಾಯಕ್ಕೆ ಸೇರಿದ ಬೇಟೆಯಲ್ಲಿ ನುರಿತ ಶಿವನನ್ನು ಆರಾಧಿಸುವ ತ್ರಿಣಯನ(ಮುಕ್ಕಣ್ಣ, ತ್ರಿನೇತ್ರ)ನ ವಂಶದಲ್ಲಿ ಹುಟ್ಟಿದ ಮಂಗಳನು ಅಧಿಕಾರದ ಗದ್ದುಗೆಯನ್ನು ಏರಿರಬಹುದು ಎಂದು ಒಪ್ಪಬಹುದು. ಅಲ್ಲದೆ ಈ ಪರಿಸರದಲ್ಲಿ ಹಿಂದೆ ದಟ್ಟ ಅಡವಿಯಿತ್ತೆಂದು, ಆಗ ಕಾಡು ಮೃಗಗಳ ಹಾವಳಿ ಹೆಚ್ಚಾಗಿತ್ತೆಂದು ಅವುಗಳ ಕಿರುಕುಳದಿಂದ ಜನರು ರೋಸಿಹೋಗಿದ್ದಾಗ ಎಲ್ಲಿಂದಲೋ ಚಂದ್ರಾಯುಧನೆಂಬ ವೀರ ಕಾಡು ಮೃಗಗಳನ್ನು ಕೊಂದು ಜನರ ಮೆಚ್ಚುಗೆಗೆ ಪಾತ್ರನಾದನೆಂದು ಇವನೇ ಇಲ್ಲಿ ಕೆರೆಯನ್ನು ಕಟ್ಟಿ ಕೃಷಿಗೆ ಅನುವುಗೊಳಿಸಿದ; ಕೋಟೆ ಕಟ್ಟಿ ರಾಜ್ಯವಾಳಿದನೆಂದು ಸ್ಥಳೀಯರು ಇಂದಿಗೂ ಹೇಳುತ್ತಾರೆ. ಆದರೆ ಈ ಐತಿಹ್ಯವನ್ನು ಒಪ್ಪಲಾಗದಿದ್ದರೂ ಇಲ್ಲಿಯೇ ಇರುವ ಶಾಸನದಲ್ಲಿ ಬೇಟೆಯಲ್ಲಿ ನುರಿತ ಅರಸ ಅಧಿಕಾರಕ್ಕೆ ಬಂದ ಎಂಬುದಾಗಿ ಉಲ್ಲೇಖ ಸಿಗುವುದರಿಂದ ಬಹುಶಃ ಈ ಕಾಡುಮೃಗಗಳನ್ನು ಬೇಟೆಯಾಡುವ ವಿದ್ಯೆ ಕರಗತ ಮಾಡಿಕೊಂಡ ಬೇಡನೊಬ್ಬ ಇವುಗಳನ್ನು ಕೊಂದು

ಅಧಿಕಾರ ಸ್ಥಾಪಿಸಿದ್ದರಿಂದ ಕಿರಾತನೃಪ ಎಂಬ ಬಿರುದು ಗಳಿಸಿರುವ ಸಾಧ್ಯತೆಗಳಿವೆ. ಆದ್ದರಿಂದಲೇ ನಂತರದ ಕೆಲವು ಅರಸರ ಹೆಸರುಗಳಲ್ಲಿ ಬುಡಕಟ್ಟು ಮೂಲದ ಪದಗಳು ಸೇರಿಕೊಂಡಿರುವುದನ್ನು ಗುರುತಿಸಬಹುದು. ಸಿಂಹಪೋತ ಎಂದರೆ ದೃಢಕಾಯದವನೆಂದು, ಪೊಳಲ್ಚೋರ ಎಂದರೆ ಪೊಳಲ್–ಪಟ್ಟಣ; ಚೋರ–ಕಳ್ಳ ಎಂದರ್ಥ ಇಂದಿಗೂ ಸಹ ಈ ಭಾಗದಲ್ಲಿ ಬೇಡ ಬುಡಕಟ್ಟು ಸಮುದಾಯಗಳೇ ಹೆಚ್ಚಿಗೆ ಇರುವುದರಿಂದ ಸಿದ್ದೇಶ್ವರನನ್ನು ಹೆಂಜೇರಪ್ಪ ಸಿದ್ದಪ್ಪ ಎಂಬುದಾಗಿ ಸಂಬೋಧಿಸಲ್ಪಡುತ್ತಿದ್ದಾನೆ.

ನೊಳಂಬರ ಕಾಲದಲ್ಲಿ ನಿರಂತರ ದಾಳಿಗಳಿಂದ ತಮ್ಮ ರಾಜ್ಯವನ್ನು ರಕ್ಷಿಸಿಕೊಳ್ಳಲು ರಾಜ್ಯದ ಗಡಿ ಪ್ರಾಂತ್ಯದ ಸುತ್ತಲೂ ಕೋಟೆಗಳನ್ನು ನಿರ್ಮಿಸಿ ಅವುಗಳ ನಿರ್ವಹಣೆಗೆ ಒಬ್ಬ ಅಧಿಕಾರಿಯನ್ನು ನೇಮಿಸಲ್ಪಟ್ಟ ಉಲ್ಲೇಖಗಳು ಜಿಲ್ಲೆಯಲ್ಲಿ ಕಂಡುಬರುತ್ತದೆ.

೧. ಮಂಗಳ (ಕ್ರಿ.ಶ. ೭೪೦–೭೫)

ಹೇಮಾವತಿಯ ಶಾಸನ[೧೧೨] ಕರ್ಣಾಟೈರ್ನೈರ್ೃತ ಮಂಗಳಾಖ್ಯನೃಪ ಎಂದು ಉಲ್ಲೇಖಿಸುವುದರಿಂದ ಶಾಸನನೋಕ್ತವಾಗಿ ಮಂಗಳನೇ ನೊಳಂಬರ ಮೊದಲ ಅರಸ ಇರಬೇಕೆಂದು ಸ್ಪಷ್ಟಪಡಿಸುತ್ತದೆ.

೨. ಸಿಂಹಪೋತ (ಕ್ರಿ.ಶ.೭೭೫–೮೦೦)

ಈತನಿಗೆ ಸಂಬಂಧಿಸಿದ ಯಾವ ಶಾಸನವು ತುಮಕೂರು ಜಿಲ್ಲೆಯಲ್ಲಿ ದೊರೆತಿಲ್ಲ. ಆದರೆ ಚಳ್ಳಕೆರೆಯ ದೊಡ್ಡ ಉಳ್ವರ್ತಿ ಶಾಸನ ಗಂಗಯುವರಾಜರ ಮಧ್ಯೆ ನಡೆದ ಅಂತಃಕಲಹದಲ್ಲಿ ಶಿವಮಾರನ ಪಕ್ಷ ವಹಿಸಿದ್ದನೆಂದು ಉಲ್ಲೇಖಿಸಿದೆ.[೧೧೩] ದೊಡ್ಡಹುಲ್ಲೂರು ಮುದಿಗೆರೆ ಮತ್ತು ಗಂಚಾಂಶಾಸನಗಳು ಸಿಂಹಪೋತನನ್ನು ಶಿವಮಾರನ ಸಾಮಂತನೆಂದೂ, ಮಾವಳಿ ಚಿಕ್ಕಮದುರೆ, ದೊಡ್ಡ ಉಳ್ವರ್ತಿಯ ಶಾಸನಗಳು ಸಿಂಹಪೋತನನ್ನು ಮೂರನೆಯ ಗೋವಿಂದನ ಸಾಮಂತನೆಂದು ಉಲ್ಲೇಖಿಸಿವೆ.[೧೧೪] ಬಹುಶಃ ರಾಷ್ಟ್ರಕೂಟರ ಮೂರನೆಯ ಗೋವಿಂದ ಗಂಗ ಮಂಡಲದ ಮೇಲೆ ದಾಳಿ ಕೈಗೊಂಡಾಗ ಮಾರ್ಗ ಮಧ್ಯದಲ್ಲಿರುವ ನೊಳಂಬರನ್ನು ತನ್ನ ಸಾಮಂತರನ್ನಾಗಿ ಮಾಡಿಕೊಂಡಿರುವ ಸಾಧ್ಯತೆಗಳಿವೆ.

೩. ಚಾರುಪೊನ್ನೇರು (ಕ್ರಿ.ಶ.೮೦೦–೮೩೦)

ಚಿಕ್ಕಮದುರೆ ಶಾಸನ ಚಾರುಪೊನ್ನೇರನನ್ನು ರಾಷ್ಟ್ರಕೂಟರ ಮಾಂಡಳಿಕನಾಗಿದ್ದನೆಂದು ತಿಳಿಸುತ್ತದೆ.[೧೧೫] ಈತನ ಮತ್ತೊಂದು ಕ್ರಿ.ಶ. ೮೨೦ರ ಮಧುಗಿರಿ ಶಾಸನ ಚೋಳ ಮಹಾರಾಜನ ವಿರುದ್ಧ ಹೋರಾಡಿದ್ದನ್ನು ಹಾಗೂ ಕಂಬಗೂರು, ದೊಡ್ಡಉಳ್ವರ್ತಿ ಕೊಡಿಗೇನಹಳ್ಳಿ ಶಾಸನಗಳು[೧೧೬] ಈತನ ಆಳ್ವಿಕೆಯ ಮೇಲೆ ಬೆಳಕು ಚೆಲ್ಲುತ್ತವೆ.

೪. ಒಂದನೆಯ ಪೊಳಲ್ಚೋರ (ಕ್ರಿ.ಶ. ೮೩೦–೮೭೦)

ಈತನನ್ನು ಹೆಬ್ಬಟ್ಟಿ ಕಂಬದೂರು, ಬರಗೂರು, ಹೇಮಾವತಿ, ಮಧುಗಿರಿ, ಮಡಿವಾಳ

ಶಾಸನಗಳು ಉಲ್ಲೇಖಿಸುತ್ತವೆ. ತುರುವೇಕೆರೆಯ ಅಲ್ಲೂರು ಶಾಸನ ರಾಚಮಲ್ಲನ ಮಗಳಾದ ಜಾಯಬ್ಬೆಯನ್ನು ಪೊಳಲ್ಚೋರ ವಿವಾಹವಾದದ್ದನ್ನು ಮತ್ತು ಅಗಳಿ ಶಾಸನ ಶೈವನಾದರೂ ವಿಷ್ಣು ದೇವಾಲಯಕ್ಕೆ ಭೂಮಿಯನ್ನು ದತ್ತಿ ಬಿಟ್ಟಿರುವುದನ್ನು ತಿಳಿಸುತ್ತವೆ.[೧೧೭]

೫. ನೊಳಂಬಾಧಿರಾಜ ಮಹೇಂದ್ರ (ಕ್ರಿ.ಶ. ೮೭೦-೮೯೭)

ಈತ ನೊಳಂಬರಲ್ಲಿಯೇ ಬಲಿಷ್ಠ ಅರಸನಾಗಿದ್ದು, ತನ್ನ ಪರೀಕ್ಷಿಸಲು ಸಾಮರ್ಥ್ಯವನ್ನು ತಲಕಾಡಿನ ಸಮೀಪದವರೆಗೂ ಸೈನ್ಯವನ್ನು ನುಗ್ಗಿಸಿದನು. ಆದರೆ ವಿಧಿಯೇ ಬೇರೆ ಬಯಸಿತ್ತು ಎನ್ನಿಸುತ್ತದೆ. ಎರೆಯಪ್ಪನಿಂದ ಹತನಾದನು. ಇವನು ತನ್ನ ರಾಜ್ಯ ರಕ್ಷಣೆಗೆ ಗಡಿಯ ಸುತ್ತಲೂ ನಾಡುಗಣಿ, ಮಿಡಿಗೆ, ಸೂಳಿಶೈಲೇಂದ್ರ, ತಿಪ್ಪೂರು, ಪೆಂಜೇರು ಮೊದಲಾದ ಕೋಟೆಗಳನ್ನು ನಿರ್ಮಿಸಿಕೊಂಡಿದ್ದನೆಂದು ಕೂಡಲೂರು ಶಾಸನ ತಿಳಿಸುತ್ತದೆ. ಬಹುಶಃ ಮಿಡಿಗೆ ಎಂಬುದು ಇಂದಿನ ಮಧುಗಿರಿ ತಾಲೂಕಿನ ಮಿಡಿಗೇಶಿ; ಪಂಜೇರು ಎಂಬುದು ಇಂದಿನ ಮಡಕಸಿರಾ ತಾಲೂಕಿನ ಇಂದಿನ ಹೇಮಾವತಿ. ಥಪ್ಪೂರು ಗುಬ್ಬಿ ತಾಲೂಕಿನ ಇಂದಿನ ಬೇಗೂರು ತಿಪ್ಪೇರು ಆಗಿರುವ ಸಾಧ್ಯತೆಯಿದೆ. ಅದೇ ರೀತಿ ಸೂಳಿಶೈಲೇಂದ್ರ ಎಂಬುದು ಇಂದಿನ ಪಾವಗಡ ತಾಲೂಕಿನ ಶೈಲಾಪುರ ಅಥವಾ ಅದರ ಸಮೀಪವೇ ಇರುವ ನಿಡುಗಲ್ಲು ದುರ್ಗವೇ ಆಗಿರಬೇಕು. ಏಕೆಂದರೆ ಇವೆಲ್ಲವೂ ಹೆಂಜೇರು ರಾಜಧಾನಿ ಕೇಂದ್ರದಿಂದ ಬೇರೆ ಬೇರೆ ದಿಕ್ಕಿಗೆ ಇರುವುದರಿಂದ ರಾಜಧಾನಿ ಕೇಂದ್ರವನ್ನು ರಕ್ಷಿಸಲು. ಶತ್ರುಗಳ ದಾಳಿಯನ್ನು ಮೊದಲೇ ತಡೆಯುವ ಉದ್ದೇಶಕ್ಕಾಗಿ ನಿರ್ಮಿಸಿಕೊಂಡಿದ್ದರು. ಇವುಗಳ ನಿರ್ವಹಣೆಗಾಗಿ ಅಧಿಕಾರಿಗಳನ್ನು ನೇಮಿಸಲಾಗುತ್ತಿತ್ತು. ಬರಗೂರನ್ನು ಅವನ ರಾಣಿ ಅಕ್ಕಬ್ಬೆ ನೋಡಿಕೊಳ್ಳುತ್ತಿದ್ದಳೆಂದು ಸಿರಾ ಶಾಸನ ತಿಳಿಸುತ್ತದೆ. ಇಲ್ಲಿಯೇ ಮಹೇಂದ್ರೇಶ್ವರ ದೇವಾಲಯವನ್ನು ನಿರ್ಮಿಸಿ ಅದರ ನಿರ್ವಹಣೆಗಾಗಿ ನಂದೂರನ್ನು(ಸಿರಾ ನಾಡಿನ ಊರು) ದತ್ತಿ ಬಿಟ್ಟನು.[೧೧೮] ಈತನ ಕಾಲದಲ್ಲಿ ನೊಳಂಬರ ಪ್ರಾಬಲ್ಯವನ್ನು ಮುರಿಯಲು ಬಾಣರು, ಮೈದುಂಬರ ಮೇಲೆ ಗಂಗರ ಎರಡನೆಯ ಶಿವಮಾರನು ದಾಳಿ ಮಾಡಿದನು. ಎರೆಯಪ್ಪನ ನೇತೃತ್ವದಲ್ಲಿ ಬಂದ ಸೇನೆ ನೊಳಂಬರ ಮಿಡಿಗೇಶಿ ಸೊಳಿಶೈಲೇಂದ್ರ, ತಿಪ್ಪೇರು, ಪೆಂಜೇರು ದುರ್ಗಗಳನ್ನು ವಶಪಡಿಸಿಕೊಂಡನೆಂದು ಕೊಡಲೂರು ಶಾಸನ ತಿಳಿಸುತ್ತದೆ. ಕಳಗಟ್ಟೂರಿನ ಶಾಸನ ಮಹೇಂದ್ರ ಗಂಗವಾಡಿ ೯೬೦೦೦ ಪ್ರಾಂತ್ಯದ ಅಧಿಪತಿಯಾಗಿದ್ದನೆಂದು ತಿಳಿಸುತ್ತದೆ.[೧೧೯]

೧. ಒಂದನೆ ಅಯ್ಯಪದೇವ (ಕ್ರಿ.ಶ. ೮೯೭-೯೩೪)

ಮಹೇಂದ್ರ ಮತ್ತು ಗಂಗವಂಶದ ಗಾಮಬ್ಬೆಯ ಮಗನೇ ಅಯ್ಯಪದೇವನಾಗಿದ್ದಾನೆ. ಕ್ರಿ.ಶ. ೯೦೦ರ ತುಮಕೂರಿನ ಅರಕೇರೆ ಶಾಸನ ಅಸಂದಿ ಮೇಲೆ ದಾಳಿ ಮಾಡಿದ್ದನ್ನು ತಿಳಿಸುತ್ತದೆ. ಬರಗೂರಿನ ಶಾಸನ ಅಯ್ಯಪ್ಪ ಸೂರ್ಯ ಗ್ರಹಣದ ದಿನ ತನ್ನ ಪತ್ನಿಯರಾದ ನಾಗಿಯಬ್ಬೆ, ಹೆತಿಯಬ್ಬೆ ಇವರ ಕೋರಿಕೆ ಮೇರೆಗೆ ನಾಗಿಯಬ್ಬೆಯ ತಾಯಿ ನಾರಣಬ್ಬೆ

ಕಟ್ಟಿಸಿದ ಕೆರೆಯ ಎರಡೂ ತೂಬುಗಳ ಮಧ್ಯೆ ಗದ್ದೆಯನ್ನು ದತ್ತಿ ಬಿಟ್ಟಿರುವುದನ್ನು ತಿಳಿಸಿದರೆ[೧೨೦], ಈತನ ಆಳ್ವಿಕೆಯ ಮೇಲೆ ಕ್ರಿ.ಶ. ೮೯೭ರ ಮಧುಗಿರಿಯ ಶಾಸನ ಬೆಳಕು ಚೆಲ್ಲುತ್ತದೆ. ಎರೆಯಪ್ಪನಿಂದ ನೊಳಂಬರ ಅನೇಕ ದುರ್ಗಗಳನ್ನು ಮತ್ತೆ ಪಡೆಯಲು ಪ್ರಯತ್ನಿಸಿದಂತೆ ಕಾಣುತ್ತದೆ.[೧೨೧]

೭. ವೀರನೊಳಂಬ ಅಣ್ಣಿಗ(ಕ್ರಿ.ಶ. ೯೩೪–೯೪೦)

ಈತ ಅಯ್ಯಪದೇವನ ಮಗನಾಗಿದ್ದು, ಪೂರ್ವ ಚಾಳುಕ್ಯರ ಒಂದನೆಯ ಅಮ್ಮಣರಾಯನನ್ನು ಇಂದಿನ ತುಂಬಾಡಿ(ತುಂಬೆಪಾಡಿ)ಯಲ್ಲಿ ಎದುರಿಸಿದನೆಂದು ಬೇಗೂರು ಶಾಸನದಿಂದ ತಿಳಿಯುತ್ತದೆ. ಬರಗೂರಿನ ಶಾಸನದಲ್ಲೂ ಈತನ ಉಲ್ಲೇಖವಿದೆ. ಅದೇ ರೀತಿ ತಿಪಟೂರಿನ ಮಾದಿಹಳ್ಳಿ ಶಾಸನ ಮೂರನೆಯ ರಾಚಮಲ್ಲನೊಂದಿಗೆ ಯುದ್ಧ ಮಾಡಿದನೆಂದೂ,[೧೨೨] ಕ್ರಿ.ಶ. ೯೨೨ರ ಕಡಬಗೆರೆ ಶಾಸನ ಅಣ್ಣಿಗ ರಾಷ್ಟ್ರಕೂಟರ ಮೂರನೆಯ ಇಂದ್ರನ ಸೇನಾಪತಿ ದೇವಯ್ಯನೊಂದಿಗೆ ಕಾದಿದನೆಂದೂ ಉಲ್ಲೇಖಿಸಿವೆ.[೧೨೩] ಬಹುಶಃ ಆರಂಭದಲ್ಲಿ ಗಂಗರ ಮಿತ್ರನಾಗಿದ್ದುಕೊಂಡು ಪೂರ್ವ ಚಾಳುಕ್ಯರನ್ನು ಎದುರಿಸಿ, ತನ್ನ ಕೊನೆಯ ದಿನಗಳಲ್ಲಿ ರಾಷ್ಟ್ರಕೂಟರಿಗೆ ನಿಷ್ಠೆಯನ್ನು ತೋರಿಸಿರಬಹುದು. ಹಾಗಾಗಿಯೇ ಗಂಗ, ರಾಷ್ಟ್ರಕೂಟರಿಬ್ಬರ ಮಾಂಡಳಿಕರೆಂದು ಒಟ್ಟೊಟ್ಟಿಗೆ ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ.

೮. ಇರಿವ ನೊಳಂಬ ದಿಲೀಪ (ಕ್ರಿ.ಶ. ೯೪೧–೯೬೭)

ಹೇಮಾವತಿಯ ಶಾಸನ[೧೨೪] ಈತನನ್ನು ರಣರಂಗದಲ್ಲಿ ವೈರಿಗಳನ್ನು ಕೊಂದ ಪ್ರತಾಪಿ ದಿಲೀಪರಸ ಎಂದು ವರ್ಣಿಸಿದೆ. ಈತ ಕ್ರಿ.ಶ. ೯೪೯ರ ಮಡಕಶಿರಾ ಅಗಳಿ ಶಾಸನದಲ್ಲಿ ಗಜಾಂಕುಶ ಚೋಳನ ವಿರುದ್ಧ ಮೂರನೆಯ ಕೃಷ್ಣನ ಪರವಾಗಿ ರಿಪಿ ಕಾಳಗದಲ್ಲಿ ಭಾಗವಹಿಸಿದ್ದನೆಂದು ಉಲ್ಲೇಖಿಸಲ್ಪಟ್ಟಿರುವುದರಿಂದಲೇ ರಣರಂಗದಲ್ಲಿ ಕಲಿತನದಿಂದ ಹೋರಾಡಿ ಅನೇಕರ ಸಾವಿಗೆ ಕಾರಣವಾಗಿದ್ದಿರಬೇಕು. ಆದ್ದರಿಂದಲೇ ರಣರಂಗದಲ್ಲಿ ವೈರಿಗಳನ್ನು ಕೊಂದ ಪ್ರತಾಪಿಯೆಂದು ಕರೆಯಲ್ಪಟ್ಟಿರುವುದು. ಕೊಂಡಹಳ್ಳಿ, ಪುರವರ ಮೊದಲಾದ ಕಡೆ ಕೆರೆಗಳನ್ನು ನಿರ್ಮಿಸಿದನೆಂದು ಹೇಳಲಾಗುತ್ತದೆ.

೯. ನನ್ನಿನೊಳಂಬ (ಕ್ರಿ.ಶ. ೯೬೮–೯೭೧)

ಕೋಲಾರದ ಆವನಿ ಉತ್ತನೂರು ಐಮಂಗಳ ಶಾಸನಗಳು ಈತ ನೊಳಂಬ ಸಾಸಿರವನ್ನು ಆಳುತ್ತಿದ್ದಾಗಿ ಈ ಆಡಳಿತ ವಿಭಾಗದಲ್ಲಿ ಪಾವಗಣ, ಸಿರಾ, ಮಧುಗಿರಿಯ ಕೆಲವು ಭಾಗಗಳು ಒಳಪಟ್ಟಿದ್ದವೆಂದು ತಿಳಿಸುತ್ತವೆ. ಆದರೂ ತನ್ನ ಕೊನೆಯ ಅವಧಿಯಲ್ಲಿ ಗಂಗರ ಮಾರಸಿಂಹನಿಂದ ಈ ಪ್ರಾಂತ್ಯಗಳನ್ನೆಲ್ಲಾ ಕಳೆದುಕೊಂಡನೆಂದು ಚಿಕ್ಕ ಮದುರೆ, ಸಿರ್ಲಿಗೆ, ಮೊದಲಗೆರೆ, ಮಸಗನಹಳ್ಳಿ ಶಾಸನಗಳಿಂದ ವೇದ್ಯವಾಗುತ್ತದೆ.[೧೨೫]

೧೦. ಎರಡನೆಯ ಪೊಳಲ್ಚೋರ (ಕ್ರಿ.ಶ. ೯೨೫-೯೭೭)

ಈತ ಕ್ರಿ.ಶ. ೯೨೫ರ ಸುಮಾರಿನಲ್ಲಿ ಆಳುತ್ತಿದ್ದನೆಂದು ಪಾವಗಡ ಗಡಿಗೆ ಹೊಂದಿಕೊಂಡಿರುವ ಕಂಬದೂರಿನ ಶಾಸನ ತಿಳಿಯುತ್ತದೆ. ಪಲಕೋಡು, ಆವನಿಯ ಶಾಸನ ಸಹ ಈತನ ಮೇಲೆ ಬೆಳಕು ಚೆಲ್ಲುತ್ತವೆ.[೧೨೬]

೧೧. ಇಮ್ಮಡಿ ಮಹೇಂದ್ರ (ಕ್ರಿ.ಶ. ೯೭೭)

ಇಮ್ಮಡಿ ಪೊಳಲ್ಚೋರನ ವೇಳೆಗಾಗಲೇ ನೊಳಂಬರು ತಮ್ಮ ಮೂಲ ರಾಜಧಾನಿಯನ್ನು ಒಳಗೊಂಡಂತೆ ದಕ್ಷಿಣದ ಪ್ರಾಂತ್ಯಗಳನ್ನು ಕಳೆದುಕೊಂಡರೆನಿಸುತ್ತದೆ. ಆದ್ದರಿಂದಲೇ ಬಳ್ಳಾರಿಯ ಕಲಗೋಡು ಶಾಸನ ಬರಗೂರಿನಲ್ಲಿ ಮಹೇಂದ್ರ ಸೇನೆಯೊಂದಿಗೆ ತಂಗಿದ್ದ ಸಂಗತಿಯನ್ನು ಸೂಚಿಸುತ್ತದೆ. ಏಕೆಂದರೆ ಹಂಜೇರುನಲ್ಲಿ ರಾಚಮಲ್ಲನ ಸಾಮಂತ ಪುಲಿಂಗ ಎಂಬುವವನು ಆಳ್ವಿಕೆ ಮಾಡುತ್ತಿದ್ದರಿಂದ ನೊಳಂಬರು ಗಂಗರಿಂದ ಅಧಿಕಾರವನ್ನು ಕಳೆದುಕೊಂಡು ಕಂಪಿಲಿ ಪ್ರಾಂತ್ಯಕ್ಕೆ ಸ್ಥಳಾಂತರ ಹೊಂದಿದ್ದರು. ಪುನಃ ಇಮ್ಮಡಿ ಮಹೇಂದ್ರನ ಕಾಲದಲ್ಲಿ ಪ್ರಬಲರಾದ ನೊಳಂಬರು ಹಂಜೇರನ್ನು ಆಕ್ರಮಿಸಲು ಕಲ್ಯಾಣ ಚಾಲುಕ್ಯರ ನೆರವಿನೊಂದಿಗೆ ಬರಗೂರಿಗೆ ತಮ್ಮ ಸೇನೆಯೊಂದಿಗೆ ಬಂದಿರಬಹುದು.

೧೨. ಇರಿವ ನೊಳಂಬ ಘಟಿಯಂಕಕಾರ (ಕ್ರಿ.ಶ. ೧೧೦-೧೦೨೪)

ಈತನ ಆಳ್ವಿಕೆಯ ವೇಳೆಗಾಗಲೇ ತುಮಕೂರು ಜಿಲ್ಲೆಯ ಬಹುತೇಕ ಪ್ರದೇಶಗಳು ಚೋಳ ಮತ್ತು ಕಲ್ಯಾಣ ಚಾಳುಕ್ಯರ ಹಸ್ತಕ್ಷೇಪಕ್ಕೆ ಒಳಪಟ್ಟಿದ್ದರಿಂದ ಕಂಪಲಿ ಭಾಗಕ್ಕೆ ಮಾತ್ರ ಸಿಮೀತಗೊಂಡರು. ಏಕೆಂದರೆ ನಂತರದ ಅರಸರ ಶಾಸನಗಳು ಈ ಭಾಗದಲ್ಲಿ ಮಾತ್ರ ದೊರೆಯುತ್ತವೆ. ಆದರೂ ಈತ ಆರಂಭದ ಕಾಲಘಟ್ಟದಲ್ಲಿ ಮೂಲ ನೊಳಂಬವಾಡಿಯ ಮೇಲೆ ನಿಯಂತ್ರಣ ಸಾಧಿಸಿದ್ದನೆಂದು ಚಿತ್ತೂರಿನ ಪುಂಗನೂರು ಶಾಸನಗಳಿಂದ ವೇದ್ಯವಾಗುತ್ತದೆ.[೧೨೭] ಇವನ ನಂತರ ಆಳ್ವಿಕೆ ಮಾಡಿದ ನೊಳಂಬ ಅರಸರು ಕೇವಲ ಕಂಪಲಿ ಪ್ರದೇಶಕ್ಕೆ ಮಾತ್ರ ಸೀಮಿತಗೊಂಡು ಅಲ್ಲಿಯೇ ಆಳ್ವಿಕೆಯನ್ನು ಮುಂದುವರೆಸಿದರು. ಕ್ರಮೇಣ ಈ ಭಾಗದಲ್ಲೂ ತಮ್ಮ ಅಧಿಕಾರವನ್ನು ಕಳೆದುಕೊಂಡು ಸುಮಾರು ನಾಲ್ಕು ಶತಮಾನಗಳ ಸುದೀರ್ಘ ಇತಿಹಾಸಕ್ಕೆ ತೆರೆಯೆಳೆದರು.

೨.೪.೯. ಚೋಳರು

ಭಾರತದ ಚರಿತ್ರೆಯಲ್ಲಿ ಚೋಳರ ಅಭ್ಯುದಯ ಸಾಂಸ್ಕೃತಿಕ ವಲಯದಲ್ಲಿ ಮಗದೊಂದು ಯುಗವನ್ನೇ ಸೃಷ್ಟಿಸಿತೆಂದರೆ ಅತಿಶಯೋಕ್ತಿಯಾಗಲಾರದು. ಏಕೆಂದರೆ ಭಾರತೀಯ ಸಂಸ್ಕೃತಿಯನ್ನು ಕಡಲಾಚೆಯ ನಾಡುಗಳಿಗೆ ಪರಿಚಯಿಸಿದವರಲ್ಲಿ ಇವರೇ ಮೊದಲಿಗರು. ಆದರೂ ತುಮಕೂರು ಜಿಲ್ಲೆಗೆ ಇವರ ಆಳ್ವಿಕೆಗೆ ಸಂಬಂಧಿಸಿದಂತೆ ಕೇವಲ ಬೆರಳೆಣಿಕೆಯಷ್ಟು

ಮಾತ್ರ ಅವಶೇಷಗಳಿರುವುದು ಆಶ್ಚರ್ಯವೆನಿಸುತ್ತದೆ. ಬಹುಶಃ ಇವರು ಗೋದಾವರಿಯ ದೋಅಬ್ ಪ್ರದೇಶದ ಮೇಲೆ ಹೊಂದಿದ್ದ ಆಸಕ್ತಿ ಹಾಗೂ ಗಂಗ ಮಂಡಲದಲ್ಲಿ ಮುಂದುವರೆಯಲು ಅವಕಾಶ ನೀಡದ ಗಂಗ ಮತ್ತು ರಾಷ್ಟ್ರಕೂಟರ ಸಾಮ್ರಾಜ್ಯಶಾಹಿ ನೀತಿಯು ಕಾರಣವಾಗಿರಬಹುದು. ಆದರೂ ಜಿಲ್ಲೆಯಲ್ಲಿ ಕೇವಲ ೭೦ ವರ್ಷಗಳ ಅತಿ ಕಡಿಮೆ ಅವಧಿ ಆಳ್ವಿಕೆ ನಡೆಸಿದರೂ ಯಾವ ಅರಸು ಮನೆತನಗಳು ಮಾಡಿರದಂತಹ ಕೆಲಸ ಕಾರ್ಯಗಳನ್ನು ಮಾಡಿ ಇಂದಿಗೂ ಜನಮಾನಸದಲ್ಲಿ ಜೀವಂತಿಕೆ ಪಡೆದು ಸ್ಥಾನವನ್ನು ಗಳಿಸಿಕೊಂಡಿದ್ದಾರೆ. ಏಕೆಂದರೆ ಜಿಲ್ಲೆಯಲ್ಲಿ ಇಂದಿಗೂ ಯಾವುದೇ ದೇವಾಲಯ ಬಳಿ ಹೋಗಿ ಇದರ ನಿರ್ಮಾಪಕರಾದರೆಂದು ವಿಚಾರಿಸಿದರೆ ಚೋಳರು ಕಟ್ಟಿಸಿದರು, ಚೋಳರು ಇಲ್ಲಿ ಯುದ್ಧ ಮಾಡಿದ್ದಾರೆ ಎಂದು ಹೇಳುವವರೆ ಹೆಚ್ಚು. ಅಂದರೆ ಇವರು ತಮ್ಮ ಅಲ್ಪ ಅವಧಿಯಲ್ಲಿ ಎಷ್ಟೆಲ್ಲಾ ಕಲ್ಯಾಣ ಕಾರ್ಯಗಳನ್ನು ಮಾಡಿರಬಹುದು ಎಂಬ ಭಾವನೆ ಸಹಜವಾಗಿಯೇ ಮೂಡುತ್ತದೆ. ಇವರ ಆಳ್ವಿಕೆಯ ಮತ್ತೊಂದು ವಿಶೇಷವೆಂದರೆ ಜಿಲ್ಲೆಗೆ ತಮಿಳು ಭಾಷೆಯನ್ನು ಪರಿಚಯಿಸಿದ್ದು. ಇವರ ಉಲ್ಲೇಖ ಸಿಗುವ ಕೇವಲ ಎರಡೇ ಶಾಸನಗಳು ಕೊತ್ತಗೆರೆ ಮತ್ತು ತೆರಿಯೂರುಗಳಲ್ಲಿ ದೊರೆತರೂ ಇವರ ನಂತರ ಹೊಯ್ಸಳರ ಕಾಲದಲ್ಲಿ ತಮಿಳು ಭಾಷೆಯಲ್ಲಿ ೭೦ಕ್ಕೂ ಹೆಚ್ಚು ಶಾಸನಗಳ ರಚನೆಗೆ ಮೂಲ ಪ್ರೇರಣೆಯಾದರು. ಅಗ್ರಹಾರಗಳ ಪರಿಚಯವನ್ನು ಜಿಲ್ಲೆಗೆ ನೀಡಿದವರು ಸಹ ಇವರೇ, ತಮ್ಮ ವ್ಯಾಪ್ತಿಗೆ ಬರುವ ಬಹುತೇಕ ದೇವಾಲಯಗಳಿಗೆ ತಮಿಳು ಬ್ರಾಹ್ಮಣರನ್ನು ನೇಮಿಸಿ ಇಂದಿಗೂ ಅವರ ತಲೆಮಾರಿನವರೇ ಅದೇ ದೇವಾಲಯಗಳಲ್ಲಿ ಅರ್ಚಕರಾಗಿ ಮುಂದುವರೆಯುವಂತೆ ಮಾಡಿದ ಕಾರ್ಯ ಸಾಧನವು ಇವರದೇ ಆಗಿದೆ. ಜೊತೆಗೆ ಶೈವ ಧರ್ಮದ ಅಭಿವೃದ್ಧಿಗಾಗಿ ಅನೇಕ ದಾನ-ದತ್ತಿ ನೀಡಿ ಜಿಲ್ಲೆಯಲ್ಲಿ ಮೊದಲ ಬಾರಿಗೆ ಬೃಹತ್ ಮಟ್ಟದಲ್ಲಿ ಶೈವ ಧರ್ಮದ ಏಳಿಗೆಗಾಗಿ ಶ್ರಮಿಸಿದರು. ಚೋಳರ ಕಾಲದ ಶಾಸನಗಳೆಂದರೆ ಯಾವುದೇ ದೇವಾಲಯದ ಕಂಬದಲ್ಲೋ, ಬಾಗಿಲುವಾಡದಲ್ಲೋ, ಭಿತ್ತಿಯಲ್ಲೋ, ಮೇಲ್ಛಾವಣಿಯಲ್ಲೋ ಇರುತ್ತವೆಂಬ ಕಲ್ಪನೆ ಸಹಜವಾಗಿಯೇ ಮೂಡುತ್ತದೆ. ಆದರೆ ಜಿಲ್ಲೆಯಲ್ಲಿ ಇವರು ಸ್ಥಳೀಯ ಸಂಪ್ರದಾಯಕ್ಕೆ ಹೊಂದಿಕೊಂಡು ದೇವಾಲಯದಿಂದ ಪ್ರತ್ಯೇಕವಾಗಿ ಗುಂಡು ಅಥವಾ ಕಲ್ಲಿನ ಮೇಲೆ ಬರೆದಿರುವುದು ಕಂಡುಬರುತ್ತದೆ. ಇವರ ಆಳ್ವಿಕೆಯ ಕುರುಹಾಗಿಯೇ ನಂತರದಲ್ಲಿ ಅಧಿಕಾರಗಳಲ್ಲೊಬ್ಬರು ನಿಡುಗಲ್ಲು ಪರಿಸರದಲ್ಲಿ ಅಧಿಕಾರವನ್ನು ಸ್ಥಾಪಿಸಿದರು. ಅದು ಅಲ್ಲದೆ ಅವರ ಆಳ್ವಿಕೆಯನ್ನು ನೆನಪಿಸುವ ಅವರೆಸರಿನಲ್ಲೇ ಚೋಳಪುರ, ಚೋಳೂರು ಎಂಬಂತಹ ಹಲವಾರು ಗ್ರಾಮಗಳು ಹುಟ್ಟಿಕೊಂಡವು. ಸಹಜವಾಗಿ ಯಾವುದೇ ಒಂದು ಅರಸು ಮನೆತನ ಎಷ್ಟೇ ವಿಶಾಲವಾಗಿ ಸಾಮ್ರಾಜ್ಯವನ್ನು ವಿಸ್ತರಿಸಿದರೂ ಜನರ ಮೆಚ್ಚುಗೆ ಪಾತ್ರರಾಗಬೇಕೆಂದರೆ ಸಣ್ಣ ಸಂಸ್ಥಾನವಾದರೂ ಸರಿ ಕಲ್ಯಾಣ ಕಾರ್ಯಗಳನ್ನು ಕೈಗೊಂಡಾಗ

ಮಾತ್ರ ಅದು ಸಾಧ್ಯವಾಗುತ್ತದೆ. ಹಾಗಾಗಿ ಚೋಳರು ಜನರ ಮನದಲ್ಲಿ ಇಂದಿಗೂ ಉಳಿದಿದ್ದಾರೆಂದರೆ ಅವರ ಉದಾರ ದಾನ-ಧರ್ಮ, ಕಲ್ಯಾಣ ಕಾರ್ಯಗಳೇ ಕಾರಣ ಎಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ತುಮಕೂರು ಜಿಲ್ಲೆಯ ಕೆಲವು ಭಾಗಗಳು ಒಂದನೆಯ ಪಾರಾಂತಕ, ಒಂದನೆಯ ರಾಜರಾಜ, ಒಂದನೆಯ ರಾಜೇಂದ್ರಚೋಳ, ಒಂದನೆಯ ರಾಜಾಧಿರಾಜ ಚೋಳ, ರಾಜೇಂದ್ರದೇವ ಚೋಳ, ವೀರರಾಜೇಂದ್ರ ಚೋಳ, ಒಂದನೆಯ ಕುಲತ್ತುಂಗ ಚೋಳರ ಕಾಲದವರೆಗೂ ನೇರ ಆಳ್ವಿಕೆಗೆ ಒಳಪಟ್ಟಿದ್ದವು.[೧೨೮]

ಹೀಗೆ ಸಾಂಸ್ಕೃತಿಕ ಶ್ರೀಮಂತಿಕೆ ಕಾರಣವಾದ ಇವರ ಆಳ್ವಿಕೆಯ ಅವಧಿಯಲ್ಲಿ ಕಡಲಾಚೆಯ ದೇಶಗಳೊಂದಿಗಿನ ವ್ಯಾಪಾರ ಸಂಪರ್ಕದಲ್ಲಿ ಜಿಲ್ಲೆಯ ಪಾತ್ರವು ಮಹತ್ವವಾಗಿತ್ತೆಂಬುದು ತೆಂಕಣ ಐಯವೊಳೆ ಎಂಬ ವ್ಯಾಪಾರಿಕೇಂದ್ರಗಳಿಂದ ವೇದ್ಯವಾಗುತ್ತದೆ. ಇಂತಹ ವ್ಯಾಪಾರಿ ಕೇಂದ್ರಗಳ ರಕ್ಷಣೆಗಾಗಿ ಕೋಟೆಗಳ ನಿರ್ಮಾಣಕಾರ್ಯ ಆರಂಭವಾಗಿದ್ದು ಇವರ ಕಾಲದಲ್ಲೇ ಎಂಬುದು ವಿಶೇಷ ಇಡೀ ಗಂಗ ಮಂಡಳದ ನಿರ್ವಹಣೆಗೆ ತುಮಕೂರು ಭಾಗವನ್ನೇ ಮುಖ್ಯ ಕೇಂದ್ರವನ್ನಾಗಿಸಿಕೊಂಡರೆಂದರೆ ಅವರ ಕಾಲದಲ್ಲಿ ಕೋಟೆ-ಕೊತ್ತಲಗಳು ಜಿಲ್ಲೆಯಲ್ಲಿ ನಿರ್ಮಿಸಲ್ಪಟ್ಟವೆಂಬ ಅಂಶವನ್ನು ತಳ್ಳಿಹಾಕಲಾಗದು.

೧. ಒಂದನೆಯ ಪರಾಂತಕ (ಕ್ರಿ.ಶ. ೯೦೭-೯೫೫)

ಕ್ರಿ.ಶ. ೯೪೯ರ ಮಡಕಸಿರಾ ಶಾಸನ ನೊಳಂಬ ಮತ್ತು ರಾಷ್ಟ್ರಕೂಟರ ಮಿತ್ರಸೈನ್ಯ ಇಪಿರಿ ಎಂಬಲ್ಲಿ ಗಜಾಂಕುಶ ಚೋಳನ ಮೇಲೆ ಯುದ್ಧ ಮಾಡಿದ್ದನ್ನು ತಿಳಿಸುತ್ತದೆ. ಇಪಿರಿಯು ಇಂದಿನ ಆಂಧ್ರದ ಪರಿಗಿ ಆಗಿದ್ದು ಕರ್ನಾಟಕದ ಗಡಿಗೆ ಕೇವಲ ೧೦ ಕಿ.ಮೀ. ಅಂತರದಲ್ಲಿ ತುಮಕೂರಿನ ಕೆಲವು ಹಳ್ಳಿಗಳು ಈ ಭಾಗದಲ್ಲಿ ಸೇರ್ಪಡೆಗೊಂಡಿದ್ದಿರಬೇಕು. ಹಾಗಾಗಿ ಬಹುಶಃ ಇಲ್ಲಿ ಉಲ್ಲೇಖಗೊಂಡಿರುವ ಗಜಾಂಕುಶ ಚೋಳನ ಕಾಲಮಾನವು ಒಂದನೆಯ ಪರಾಂತಕನ ಕಾಲಕ್ಕೆ ಸರಿ ಹೊಂದುವುದರಿಂದ ಒಂದನೆಯ ಪರಾಂತಕನೇ ಗಜಾಂಕುಶ ಚೋಳನಿರಬೇಕು. ಆದುದರಿಂದಲೇ ಇಪಿರಿ ಕದನದ ನಂತರ ಕ್ರಿ.ಶ. ೯೪೯ರಲ್ಲಿ ತೆಕ್ಕೊಳಂ ಎಂಬಲ್ಲಿ ರಾಷ್ಟ್ರಕೂಟರ ಒಕ್ಕೂಟ ಸೇನೆ ಒಂದನೇ ಪಾರಂತಕನನ್ನು ಸೋಲಿಸಿದ್ದರಿಂದ[೧೨೯] ಈ ವಾದದಲ್ಲಿ ಸತ್ಯಾಂಶವಿದೆ. ಏಕೆಂದರೆ ಗಜಾಂಕುಶ ಚೋಳ ಯಾವ ಮನೆತನಕ್ಕೆ ಸೇರಿದವನೆಂಬುಕ್ಕೆ ಸ್ಪಷ್ಟ ದಾಖಲೆಗಳಿಲ್ಲ. ಹಾಗಾಗಿ ಒಂದನೆಯ ಪಾರಾಂತಕನೆ ಗಜಾಂಕುಶ ಚೋಳನಾಗಿರುವ ಸಾಧ್ಯತೆಗಳಿವೆ.

೨. ಒಂದನೆಯ ರಾಜಾಧಿರಾಜ ಚೋಳ (ಕ್ರಿ.ಶ. ೧೦೪೪-೧೦೫೪)

ಕುಣಿಗಲ್ ತಾಲೂಕಿನ ಕೊತ್ತಗೆರೆ ಶಾಸನ ತನ್ನ ತಂದೆಯ ಹೆಸರಿನಲಿದ್ದ ವಿಕ್ರಮಚೋಳ ಮಂಡಲದ ಭಾಗವಾದ ಕುಣಿಂಗಿಲ್‌ನಾಡಿಗೆ ರಾಜೇಂದ್ರಚೋಳಪುರ ಎಂಬ ಪ್ರತಿನಾಮ ಮಾಡಿ ರಾಜೇಂದ್ರಚೋಳದೇವರ ಮೆರವಣಿಗೆ ಉತ್ಸವಕ್ಕಾಗಿ ಮೂವತ್ತು ಕೊಳಗ ಗದ್ದೆ ಬಿಟ್ಟಿದ್ದನ್ನು ಸ್ಪಷ್ಟಪಡಿಸುತ್ತದೆ. ಬಹುಶಃ ಕುಣಿಗಲ್ ಪ್ರಾಂತ್ಯವು ಆಯಕಟ್ಟು ಭಾಗದಲ್ಲಿದ್ದು

ಗಂಗರ ದಾಳಿಯನ್ನು ಪಶ್ಚಿಮದಿಂದ ತಡೆಯಲು ಹೆಬ್ಬಾಗಿಲಿನಂತೆ ಇದ್ದುದರಿಂದ ಇಲ್ಲಿಂದಲೇ ಕರ್ನಾಟಕದ ಭಾಗಗಳನ್ನು ನೋಡಿಕೊಳ್ಳುವಂತಹ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡರು. ಅಲ್ಲದೆ ಇಲ್ಲಿಯ ಶಿವ ದೇವಾಲಯಕ್ಕೆ ೧೫೦೦ ನಕರರು/ಶ್ರೇಣಿಕರು ೩೦ ಕೊಳಗ ಗದ್ದೆ ಬಿಟ್ಟಿ[೧೩೦]ದ್ದನ್ನು ತಿಳಿಸುವುದರಿಂದ ಬಹುಶಃ ಇದು ದಕ್ಷಿಣದಲ್ಲಿಯೇ ಪ್ರಮುಖ ವ್ಯಾಪಾರಿ ಕೇಂದ್ರವಾಗಿದ್ದಿರಬೇಕು. ಏಕೆಂದರೆ ಇಲ್ಲಿಗೆ ಸಮೀಪದಲ್ಲಿ ತೆಂಕಣ ಇನ್ನೂರ್ವರ್ ಎಂದು ಪ್ರಸಿದ್ಧಿ ಹೊಂದಿದ ವ್ಯಾಪಾರಿ ಕೇಂದ್ರ ನಿಟ್ಟೂರು ಬಳಿ ಇದ್ದು ಇದಕ್ಕೆ ಪೂರಕವೆಂಬಂತೆ ಬಿ.ಎಲ್.ರೈಸ್ ಶಾಸನದಲ್ಲಿರುವ ಶಾಲೈ ಎಂಬುದನ್ನು ಕೇರಳದ ತ್ರಿವೇಂದ್ರ ಬಳಿ ಇರುವ ಕಂದಲೂರ್ ಶಾಲೈ ಎಂಬ ಪ್ರಸಿದ್ಧ ವ್ಯಾಪಾರಿ ಕೇಂದ್ರ ಎಂಬುದಾಗಿ ಗುರುತಿಸಿದ್ದಾರೆ. ಬಹುಶಃ ಕುಣಿಗಲ್‌ನ ಸುತ್ತಮುತ್ತಲಿನ ವರ್ತಕ ಸಂಸ್ಥೆಗಳ ವಸ್ತುಗಳನ್ನು ಕುಣಿಗಲ್ ಪಟ್ಟಣದ ಮೂಲಕ ಶಾಲೈ ಬಂದರಿಗೆ ಸಾಗಿಸಿ ಅಲ್ಲಿಂದ ಹೊರ ದೇಶಗಳಿಗೆ ರಫ್ತು ಮಾಡುತ್ತಿದ್ದರೆಂದು ಊಹಿಸಲು ಸಾಧ್ಯತೆಗಳಿವೆ. ಏಕೆಂದರೆ ಈ ಕಾಲಘಟ್ಟಕ್ಕಾಗಲೇ ತೆಂಕಣ ಐಯ್ಯಾವೊಳೆ ಎಂಬುದು ದಕ್ಷಿಣ ಕರ್ನಾಟಕಕ್ಕೆ ಪ್ರಸಿದ್ಧಿ ಹೊಂದಿದ ವರ್ತಕ ಸಂಘದಲ್ಲೇ ಕೂಡಿತ್ತು. ಈ ಹಿನ್ನೆಲೆಯಿಂದಲೂ ಚೋಳರು ಕರ್ನಾಟಕದ ಭಾಗಗಳನ್ನು ನೋಡಿಕೊಳ್ಳಲು ಕುಣಿಗಲ್ ಪಟ್ಟಣವನ್ನು ಕೇಂದ್ರ ಸ್ಥಾನವನ್ನಾಗಿ ಮಾಡಿಕೊಂಡಿರಬಹುದು. ಡಿ.ವಿ.ಪರಮಶಿರ್ವಮೂರ್ತಿ[೧೩೧] ಮತ್ತು ಸುಷ್ಮಾ ಎಚ್. ಎಂಬುವವರು ಚೋಳರ ಶಾಸನಗಳನ್ನು ವಿಶ್ಲೇಷಿಸುತ್ತಾ ಈ ಶಾಸನದ ಕಾಲಮಾನ ಕ್ರಿ.ಶ.೧೦೪೮ ಎಂದೂ ಇದರ ಸಮಕಾಲೀನ ಅರಸ ರಾಜರಾಜ ಚೋಳ ಎಂದು ಉಲ್ಲೇಖಿಸಿದ್ದಾರೆ. ಆದರೆ ರಾಜರಾಜಚೋಳನ ಕಾಲ ಕ್ರಿ.ಶ. ೧೦೧೪ರಲ್ಲಿ ಮುಕ್ತಾಯ ಹೊಂದುತ್ತದೆ. ಅದು ಅಲ್ಲದೆ ಶಾಸನದಲ್ಲಿರುವ ರಾಜಾಧಿರಾಜಾ ಚೋಳನನ್ನು ರಾಜರಾಜ ಚೋಳನೆಂದು ಒಪ್ಪುವುದಾದರೆ ಅದರಲ್ಲಿಯೇ ಉಕ್ತವಾಗಿರುವ ಆತನ ತಂದೆ ರಾಜೇಂದ್ರಚೋಳ ಎಂಬುದು ತಪ್ಪಾಗುತ್ತದೆ. ಏಕೆಂದರೆ ರಾಜರಾಜನ ತಂದೆ ಎರಡನೆಯ ಸುಂದರ ಚೋಳನಲ್ಲ ರಾಜಾಧಿರಾಜನ ತಂದೆ ರಾಜೇಂದ್ರಚೋಳ ಅಲ್ಲದೆ ರಾಜಾಧಿರಾಜನು ರಾಜೇಂದ್ರಚೋಳನ ಮಗ ಎನ್ನುವುದಾದರೆ ಶಾಸನದ ಕಾಲಮಾನ ಕ್ರಿ.ಶ. ೧೦೪೪ಕ್ಕೆ ಅಂದರೆ ರಾಜಾಧಿರಾಜನ ಕಾಲಘಟ್ಟಕ್ಕೆ ಸರಿ ಹೊಂದುತ್ತದೆ.

೩. ವೀರ ರಾಜೇಂದ್ರ ಚೋಳ(ಕ್ರಿ.ಶ. ೧೦೬೪–೧೦೬೯)

ರಾಜಾಧಿರಾಜನ ನಂತರ ಅವನ ಮಗ ವೀರರಾಜೇಂದ್ರದೇವ ಕ್ರಿ.ಶ. ೧೦೬೪ರಲ್ಲಿ ಅಧಿಕಾರಕ್ಕೆ ಬಂದನು. ಈತನು ಮಧುಗಿರಿ ಮತ್ತು ಕೋಲಾರ ಪ್ರಾಂತ್ಯಗಳನ್ನು ಸೇರಿಸಿ 'ವಿಜಯ ರಾಜೇಂದ್ರ ಮಂಡಲ' ಎಂದು ನಾಮಕರಣ ಮಾಡಿದನು. ಬಹುಶಃ ಮಧುಗಿರಿಯ ತೆರಿಯೂರಿನ ಶಾಸನದಲ್ಲಿ[೧೩೨] ಉಕ್ತವಾಗಿರುವ ಅಹವಮಲ್ಲ ಎಂಬ ಹೆಸರು ಇರುವುದರಿಂದ ಕಲ್ಯಾಣದಲ್ಲಿ ಆಳ್ವಿಕೆ ಮಾಡುತ್ತಿದ್ದ ಒಂದನೆಯ ಸೋಮೇಶ್ವರನಿಗೆ ಇದ್ದಂತಹ ಎಂಬ

ಬಿರುದೇ ಆಗಿದ್ದರಿಂದ ಅಹವಮಲ್ಲನ ಮೇಲಿನ ವಿಜಯದ ನೆನಪಿಗಾಗಿ ಹೊಸದಾಗಿ ಸೇರ್ಪಡೆಗೊಂಡ ಮಧುಗಿರಿ ಮತ್ತು ಕೋಲಾರ ಪ್ರಾಂತ್ಯವನ್ನು ಸೇರಿಸಿ ವಿಜಯ ರಾಜೇಂದ್ರಮಂಡಲ ಎಂದು ಕರೆದಿರಬಹುದು.

೪. ಒಂದನೆಯ ಕುಲೋತ್ತುಂಗ ಚೋಳ (ಕ್ರಿ.ಶ. ೧೦೭೦-೧೧೧೪)

ಒಂದನೆಯ ಕುಲೋತ್ತುಂಗನು ತನ್ನ ಕೊನೆಯ ದಿನಗಳವರೆಗೂ ತುಮಕೂರಿನ ಭಾಗಗಳನ್ನು ನೇರ ಆಳ್ವಿಕೆಗೆ ಒಳಪಡಿಸಿಕೊಂಡಿದ್ದನು. ನೊಳಂಬವಾಡಿ ಮತ್ತು ಗಂಗವಾಡಿಗಳ ಮೇಲ್ವಿಚಾರಣೆಗಾಗಿ ಆದಿಮ ಎಂಬ ಅಧಿಕಾರಿಯನ್ನು ನೇಮಿಸಿದ್ದ. ಆದರೆ ಹೊಯ್ಸಳರ ವಿಷ್ಣುವರ್ಧನನ ಪ್ರಾಬಲ್ಯ ಚೋಳ ಹಿಮ್ಮೆಟ್ಟುವಂತೆ ಮಾಡಿತು. ಹಾಗಾಗಿ ಗಂಗ ಮತ್ತು ನೊಳಂಬವಾಡಿ ಪ್ರಾಂತ್ಯಗಳಿಂದ ಜಿಲ್ಲೆಯಲ್ಲಿ ಇವರ ಆಳ್ವಿಕೆ ಕೊನೆಗೊಂಡು ಕೇವಲ ತಮಿಳು ಪ್ರಾಂತ್ಯಗಳಿಗೆ ಮಾತ್ರ ಸೀಮಿತಗೊಳ್ಳುವಂತೆ ಮಾಡಿತು.

೨.೪.೧೦. ಕಲ್ಯಾಣದ ಚಾಳುಕ್ಯರು (ಕ್ರಿ.ಶ. ೯೭೩ರಿಂದ ೧೧೮೯)

ರಾಷ್ಟ್ರಕೂಟರ ಅವನತಿಯ ನಂತರ ದಖ್ಖನ್‌ನ ಬಹುಭಾಗವನ್ನು ತಮ್ಮ ಏಕಚಕ್ರಾಧಿಪತ್ಯಕ್ಕೆ ತಂದುಕೊಂಡ ಕಲ್ಯಾಣದ ಚಾಳುಕ್ಯ ಮನೆತನ ಸಾಂಸ್ಕೃತಿಕ ಕ್ಷೇತ್ರಕ್ಕೆ ಅಭೂತಪೂರ್ವ ಕೊಡುಗೆ ನೀಡಿದೆ. ವಿಶೇಷವಾಗಿ ಶೈವ ಧರ್ಮದ ಅಭಿವೃದ್ಧಿಗೆ ಹೆಚ್ಚು ಶ್ರಮಿಸಿದರು. ಆದುದರಿಂದ ತುಮಕೂರು ಜಿಲ್ಲೆಯಲ್ಲಿ ಇವರ ಆಳ್ವಿಕೆಯನ್ನು ಉಲ್ಲೇಖಿಸುವಂತಹ ಶಾಸನಗಳಲ್ಲಿ ನಿಖರತೆಯಿಲ್ಲದಿದ್ದರೂ, ಧಾರ್ಮಿಕ ಹಿನ್ನೆಲೆಯಿಂದ ಇವು ಪ್ರಮುಖ ಎನಿಸಿಕೊಳ್ಳುತ್ತವೆ. ಆರಂಭದ ಕಲ್ಯಾಣ ಚಾಳುಕ್ಯ ಅರಸರು ಹೊಯ್ಸಳರ ಮೇಲೆ ಪ್ರಭುತ್ವವನ್ನು ಸಾಧಿಸಿದ್ದರಿಂದ ಅದು ನಂತರದ ಕಾಲದಲ್ಲೂ ಮುಂದುವರೆದಿರಬೇಕು. ಹೊಯ್ಸಳ ಅರಸರು ಬದಲಾದರೂ ಕಲ್ಯಾಣ ಚಾಳುಕ್ಯ ಅರಸರ ಹೆಸರು ಬದಲಾಗುತ್ತಿರಲಿಲ್ಲ. ಅಲ್ಲದೆ ಚಿಕ್ಕನಾಯಕನಹಳ್ಳಿ, ತಿಪಟೂರು ಭಾಗದಲ್ಲಿ ಹುಲಿಯರೆ ಪ್ರಭುಗಳು ಹಾಗೂ ಪಾವಗಡ, ಸಿರಾ ಭಾಗದಲ್ಲಿ ನಿಡಗಲ್ಲು ಚೋಳರು ಹೊಯ್ಸಳರು ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಅಧಿಪತ್ಯವನ್ನು ಒಪ್ಪಿಕೊಂಡಿದ್ದರಿಂದ ಈ ಭಾಗದ ಶಾಸನಗಳು ಮಾತ್ರ ಕಲ್ಯಾಣ ಚಾಳುಕ್ಯರ ಸಾಮಂತರೆಂದೂ, ಇವರಿಗೆ ಹುಲಿಯರೆಪ್ರಭು ಅಥವಾ ನಿಡುಗಲ್ಲು ಚೋಳರು ಅಧೀನರೆಂದು ಉಲ್ಲೇಖಿಸುತ್ತವೆ. ಆದರೆ ಹೊಯ್ಸಳರ ಯಾವ ಶಾಸನಗಳಲ್ಲೂ ಈ ಉಲ್ಲೇಖಗಳು ಸಿಗುವುದಿಲ್ಲ. ಅಲ್ಲದೆ ಈ ಶಾಸನಗಳಲ್ಲಿ ಅರಸರ ಹೆಸರು ಮತ್ತು ಕಾಲಮಾನ ಒಂದಕ್ಕೊಂದು ಸಂಬಂಧವೇ ಇರುವುದಿಲ್ಲ. ಬಹುಶಃ ಎಲ್ಲಿಯೋ ಕಲ್ಯಾಣದಲ್ಲಿ ಆಳ್ವಿಕೆ ನಡೆಸುವ ಅರಸರ ಕಾರಣ ಅವರ ಬಿರುದಾವಳಿಗಳನ್ನು ಮಾತ್ರ ಹೊಯ್ಸಳ ಹೆಸರೊಂದಿಗೆ ಸೇರಿಸುತ್ತಿದ್ದರು. ಬಹುಶಃ ಹೊಯ್ಸಳರ ನೇರ ಆಳ್ವಿಕೆಗೆ ಒಳಪಟ್ಟಿದ್ದ ಪ್ರಾಂತ್ಯದಲ್ಲಿ ಕಲ್ಯಾಣ ಚಾಳುಕ್ಯರ ಸ್ಪಷ್ಟ ಮಾಹಿತಿ ಸಿಗದ ಶಾಸನ ಲಿಪಿಕಾರರು ಈ ರೀತಿಯ ಅವಾಂತರಗಳಿಗೆ ಎಡೆಮಾಡಿಕೊಟ್ಟಿರುವ ಸಾಧ್ಯತೆಗಳಿವೆ.

ಕಲ್ಯಾಣ ಚಾಳುಕ್ಯರು ಜಿಲ್ಲೆಯನ್ನು ಬಹುತೇಕ ಸಾಮಂತರೊಂದಿಗೆ ಆಳ್ವಿಕೆ ನಡೆಸಿರುವುದಕ್ಕೆ ಅವರ ಕಾಲದ ಶಾಸನಗಳಲ್ಲಿ ಉಕ್ತವಾಗಿರುವ ಸಾಮಂತರ ಬಗೆಗಿನ ಮಾಹಿತಿಯಿಂದ ತಿಳಿಯುತ್ತದೆ. ಇವರ ಶಾಸನಗಳು ತಿಪಟೂರು, ಸಿರಾ, ಗುಬ್ಬಿ, ಚಿಕ್ಕನಾಯಕನಹಳ್ಳಿ, ಪಾವಗಡ ತಾಲೂಕುಗಳಲ್ಲಿ ಮಾತ್ರ ದೊರೆಯುತ್ತವೆ. ಆದುದರಿಂದ ಜಿಲ್ಲೆಯಲ್ಲಿ ಕಲ್ಯಾಣ ಚಾಳುಕ್ಯರಿಂದಲೇ ನೇರವಾಗಿ ನಿರ್ಮಿಸಲ್ಪಟ್ಟವೆಂದು ಹೇಳುವಂತಹ ಕೋಟೆಗಳು ಜಿಲ್ಲೆಯಲ್ಲಿ ಕಂಡುಬರುವುದಿಲ್ಲ. ಆದರೂ ಅವರ ಸಾಮಂತರಾದ ಹುಲಿಯರೆಪ್ರಭು ಮತ್ತು ನಿಡುಗಲ್ಲು ಚೋಳರಿಂದ ನಿರ್ಮಾಣವಾದಂತಹ ಕೋಟೆಗಳನ್ನು ಕಾಣಬಹುದಾಗಿದೆ.

೧. ಇಮ್ಮಡಿ ತೈಲಪ (ಕ್ರಿ.ಶ. ೯೭೩–೯೯೭)

ಬಳ್ಳಾರಿ ಜಿಲ್ಲೆಯ ಅಹಮಲ್ಲ ಬೆಳಗಲ್ಲು ಶಾಸನದಲ್ಲಿ ವೀರನೊಳಂಬಪಲ್ಲವ ಪೆರ್ಮನಡಿಯ[೧೩೪] ಉಲ್ಲೇಖ ಬರುತ್ತದೆ. ಬಹುಶಃ ವೀರನೊಳಂಬನು ಚೋಳರೊಂದಿಗೆ ಹೋರಾಡಲು ತೈಲಪನ ಸಹಾಯ ಪಡೆದಿದ್ದರಿಂದ ಆತನ ಸಾರ್ವಭೌಮತ್ವ ಒಪ್ಪಿಕೊಂಡಿರಬೇಕು. ಹಾಗಾಗಿಯೇ ತನ್ನ ಶಾಸನದಲ್ಲಿ ವೀರ ನೊಳಂಬನ ಉಲ್ಲೇಖ ಸಿಗುತ್ತದೆ. ಹೀಗೆ ತೈಲಪ ನೇರವಾಗಿ ಜಿಲ್ಲೆಯನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಳ್ಳದಿದ್ದರೂ ಸಾಮಂತರ ಮೂಲಕ ಪ್ರಭುತ್ವ ಸಾಧಿಸಿರುವುದು ಸ್ಪಷ್ಟವಾಗುತ್ತದೆ.

೨. ಸತ್ಯಾಶ್ರಯ (ಕ್ರಿ.ಶ. ೯೯೭–೧೦೦೮)

ರನ್ನನು ತನ್ನ ಆಶ್ರಯದಾತನಾದ ಸತ್ಯಾಶ್ರಯನನ್ನು ಗದಾಯುದ್ಧದಲ್ಲಿ ಸಪ್ತಾರ್ಥ ಲಕ್ಷಭೂಮಿಯ ಪ್ರತಿಪಾಳನಂಗೆಯುತ್ತಿದ್ದನೆಂದು ಉಲ್ಲೇಖಿಸಿದ್ದಾನೆ. ಇದು ಚಿಕ್ಕನಾಯಕನ ಹಳ್ಳಿ ಶಾಸನಗಳ ಉಲ್ಲೇಖ ಸಿಗುತ್ತದೆ. ಸಾಹಸ ಕಾರ್ಯಗಳನ್ನು ಸುಮಾರು. ಕ್ರಿ.ಶ.೯೮೨ರ ಸಿರಾ ಶಾಸನ[೧೩೫] ಉಲ್ಲೇಖಿಸುತ್ತದೆ.

೩. ಎರಡನೆಯ ಜಯಸಿಂಹ (ಕ್ರಿ.ಶ. ೧೦೧೫–೪೩)

ಇರುಂಗೋಳನ ಕ್ರಿ.ಶ. ೧೦೪೦ ಹೇಮಾವತಿ ಶಾಸನ[೧೩೬] ಹಾಗೂ

ಬರಗೂರಿನ ಕ್ರಿ.ಶ. ೧೦೪೦ ಶಾಸನವು[೧೩೭] ಸಹ

ಜಗದೇಕಮಲ್ಲ ಮತ್ತು ಇರುಗೋಳನ ಉಲ್ಲೇಕ ಇರುಂಗೋಳ ಸಮಕಾಲೀನನಾಗಿ ಕಲ್ಯಾಣದಲ್ಲಿ ಜಯಸಿಂಹ ಆಳುತ್ತಿದ್ದರಿಂದ ಜಗದೇಕಮಲ್ಲ ಈತನೇ ಆಗಿರುವ ಸಾಧ್ಯತೆಗಳಿವೆ.

೪. ಎರಡನೆಯ ಸೋಮೇಶ್ವರ (ಕ್ರಿ.ಶ. ೧೦೬೮–೧೦೭೬)

ಬೆಳಗೆರೆಯ ಸುಮಾರು ಕ್ರಿ.ಶ. ೧೦೭೬–೭೮ರ ಶಾಸನ[೧೩೮] ಹಾಗೂ ಕ್ರಿ.ಶ. ೧೦೭೮ರ ಕಿಬ್ಬನಹಳ್ಳಿ ಶಾಸನಗಳಲ್ಲಿ ಸೋಮೇಶ್ವರನ ಉಲ್ಲೇಖ ಸಿಗುತ್ತದೆ. ಹಾಗಾಗಿ ಜಿಲ್ಲೆಯ ಪಶ್ಚಿಮ ಭಾಗಗಳಾದ ಚಿಕ್ಕನಾಯಕನಹಳ್ಳಿ ಮತ್ತು ತಿಪಟೂರಿನ ಕೆಲವು ಭಾಗಗಳಲ್ಲಿ ಕಲ್ಯಾಣ ಚಾಳುಕ್ಯರು ತಮ್ಮ ಅಧಿಕಾರವನ್ನು ಸ್ಥಾಪಿಸಿದ್ದರೆಂದು ತಿಳಿಯುತ್ತದೆ.

೫. ಆರನೆಯ ವಿಕ್ರಮಾದಿತ್ಯ (ಕ್ರಿ.ಶ. ೧೦೭೬–೧೧೨೭)

ಈತನ ಕಾಲದಲ್ಲಿ ತುಮಕೂರು ಜಿಲ್ಲೆಯ ಬಹುತೇಕ ಪ್ರದೇಶಗಳು ತನ್ನ ನೇರ ಆಳ್ವಿಕೆಗೆ ಒಳಪಟ್ಟಿದ್ದವು. ಕ್ರಿ.ಶ. ೧೧೧೩ರ ತಿಪಟೂರು ತಾಲೂಕಿನ ಸೂಳೆಕೆರೆ ಶಾಸನ[೧೩೯] ಈತನನ್ನು ಗೊಗ್ಗನೆಂದೂ, ಇದರ ಇನ್ನೊಂದು ತಾಮ್ರಪಟದಲ್ಲಿ ವೀರರಾಜೇಂದ್ರಚೋಳನ ಉಲ್ಲೇಖವಿದೆ. ವೀರರಾಜೇಂದ್ರ ಮತ್ತು ಆರನೆಯ ವಿಕ್ರಮಾದಿತ್ಯರ ಕಾಲಮಾನ ಒಂದೇ ಆಗಿರುವುದರಿಂದ ಈ ಗೊಗ್ಗೆಯರಸನು ಆರನೆಯ ವಿಕ್ರಮಾದಿತ್ಯನಿರಬೇಕು. ಚಿಕ್ಕನಾಯಕನಹಳ್ಳಿಯ ವೊಟು ಕೆರೆಯ ಕ್ರಿ.ಶ. ೧೧೧೭ರ[೧೪೦] ಶಾಸನ ಜಗದೇಕಮಲ್ಲ ಮತ್ತು ವೀರಗಂಗಹೊಯ್ಸಳ ದೇವರ ಹೆಸರುಗಳನ್ನು ಉಲ್ಲೇಖಿಸುತ್ತದೆ. ಕಾಲಮಾನದ ದೃಷ್ಟಿಯಿಂದ ಜಗದೇಕಮಲ್ಲನನ್ನು ಆರನೆಯ ವಿಕ್ರಮಾದಿತ್ಯನೆಂದೂ, ವೀರಗಂಗ ಹೊಯ್ಸಳ ದೇವನನ್ನು ವಿಷ್ಣುವರ್ಧನನೆಂದು ಒಪ್ಪಿಕೊಳ್ಳಬೇಕಾಗುತ್ತದೆ.

೬. ಮೂರನೆಯ ಸೋಮೇಶ್ವರ (ಕ್ರಿ.ಶ. ೧೧೨೭–೧೧೩೮)

ಹುಲಿಕುಂಟೆಯ ಕ್ರಿ.ಶ. ೧೧೨೮ರ ಶಾಸನ, ಕ್ರಿ.ಶ.೧೧೩೪ರ ಇಡಗೂರು ಶಾಸನ, ಬೆಳಗೆರೆಯ ಕ್ರಿ.ಶ. ೧೧೩೦ರ ಶಾಸನ, ಸಿರಾ ತಾಲೂಕಿನ ದೊಡ್ಡ ಬಾಣಗೆರೆಯ ಶಾಸನಗಳು ಈತನನ್ನು ತ್ರೈಲೋಕ್ಯಮಲ್ಲ[೧೪೧] ಎಂಬುದಾಗಿ ಉಲ್ಲೇಖಿಸಿವೆ. ಈ ಶಾಸನಗಳು ದೇವಾಲಯಗಳಿಗೆ ದಾನದತ್ತಿ ನೀಡಿದ ಮಾಹಿತಿಯನ್ನು ಮಾತ್ರ ತಿಳಿಸುತ್ತವೆ.

೭. ಜಗದೇಕ ಮಲ್ಲ (ಕ್ರಿ.ಶ. ೧೧೩೮–೧೧೪೯)

ತಂಡಗದ ಕ್ರಿ.ಶ.೧೧೪೯ರ ಶಾಸನ, ದೊಡ್ಡ ಬಿದರೆಯ ಕ್ರಿ.ಶ. ೧೧೪೯ರ ಶಾಸನ, ಬೋರಸಂದ್ರದ ವೀರಗಲ್ಲುಗಳು ಹೊಯ್ಸಳ ಮತ್ತು ಉಚ್ಚಂಗಿ ಪಾಂಡ್ಯರನ್ನು ಕಲ್ಯಾಣ ಚಾಳುಕ್ಯರ ಸಾಮಂತರೆಂದು, ಈತನನ್ನು 'ಶ್ರೀಮಜ್ಜಗದೇವ ಮಲ್ಲ ಪೆಂರ್ಮಾಡಿದೇವರು[೧೪೨] ಎಂದು ಉಲ್ಲೇಖಿಸಿವೆ. ಈತನ ನಂತರ ಬರುವ ಅರಸರೆಲ್ಲರೂ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳಲ್ಲಿ ಜಗದೇಕಮಲ್ಲನೆಂದೂ ಕರೆಯಲ್ಪಟ್ಟಿದ್ದಾರೆ. ಕ್ರಿ.ಶ.೧೧೫೦ರಿಂದ ೧೧೮೫ರವರೆಗೆ ಕಲ್ಯಾಣ ಚಾಳುಕ್ಯ ರಾಜ್ಯ ಕಲಚೂರಿಗಳ ಬಿಜ್ಜಳನ ಅಧಿಪತ್ಯಕ್ಕೆ ಒಳಪಟ್ಟಿದ್ದರಿಂದ ಭಾಗ ದಖ್ಖನ್ ಹೊಯ್ಸಳರ ಅಧಿಪತ್ಯಕ್ಕೆ ಒಳಪಟ್ಟಿತು. ಆದರೂ ಕಲ್ಯಾಣ ಚಾಳುಕ್ಯರ ಸಾಮಂತರಾದ ನಿಡುಗಲ್ಲು ಚೋಳ ಮತ್ತು ಹುಲಿಯರೆಪ್ರಭುಗಳು ತಮ್ಮ ಪ್ರಭುಗಳಿಗೆ ನಿಷ್ಠೆಯನ್ನು ತೋರ್ಪಡಿಸುತ್ತಿದ್ದರು ಎನ್ನುವುದಕ್ಕೆ ನಿಡುಗಲ್ಲು, ಹೆಗ್ಗೆರೆ, ಸೀಗೆಬಾಗಿ, ತಿಪಟೂರು, ಕಾಮಗೊಂಡನಹಳ್ಳಿ, ನಂದಿಹಳ್ಳಿ, ನೇರ್ಲೆಕೆರೆ, ಕೈನಡು, ಬೋರಸಂದ್ರ, ಬರಗೂರು ಶಾಸನಗಳಿಂದ ಸ್ಪಷ್ಟವಾಗುತ್ತದೆ.

೮. ನಾಲ್ಕನೆಯ ಸೋಮೇಶ್ವರ (ಕ್ರಿ.ಶ. ೧೧೮೪–೧೧೮೯)

ಯಾದಗಟ್ಟಿ ಬರಗೂರಿನ ಕ್ರಿ.ಶ. ೧೧೮೮ರ ಶಾಸನ, ನಿಡುಗಲ್ಲು ಚೋಳರ ಮಲ್ಲದೇವನ ಕಾಲದ ವೀರಗಲ್ಲುಗಳು ನಾಲ್ಕನೆಯ ಸೋಮೇಶ್ವರನನ್ನು ಉಲ್ಲೇಖಿಸುತ್ತವೆ. ಕಳೆದುಕೊಂಡಿದ್ದ ಜಿಲ್ಲೆಯ ಕೆಲವು ಭಾಗಗಳನ್ನು ಪುನಃ ಪಡೆಯಲು ಪ್ರಯತ್ನಿಸರಬೇಕು ಎಂಬ ಅಂಶ ಈ ಶಾಸನದಿಂದ ತಿಳಿಯುತ್ತದೆ. ಈತ ಅಧಿಕಾರವಿಲ್ಲದೆ ಬನವಾಸಿ ಕದಂಬರಲ್ಲಿ ರಕ್ಷಣೆ ಪಡೆದು ಅಲ್ಲಿಯೇ ಮರಣ ಹೊಂದಿದ್ದರೂ ಸಹ ಮದ್ದೆನಹಳ್ಳಿಯ ಕ್ರಿ.ಶ. ೧೨೮೪ರ ಶಾಸನ, ಕ್ರಿ.ಶ. ೧೧೮೪ರ ಕೈನಡು ಶಾಸನಗಳಲ್ಲಿ ಉಲ್ಲೇಖಿಸಲ್ಪಟ್ಟಿದ್ದಾನೆ. ಅಂದರೆ ಅವರು ಸಾಮಂತರೊಂದಿಗೆ ಹೊಂದಿದ್ದ ಸಂಬಂಧ ಹೇಗಿರುತ್ತಿತ್ತು ಎಂಬುದು ಗೋಚರವಾಗುತ್ತದೆ. ಹೀಗೆ ಬಹು ದೀರ್ಘಕಾಲ ಆಳ್ವಿಕೆ ನಡೆಸಿದ ರಾಜಮನೆತನವೊಂದು ಈತನ ಮೂಲಕವೇ ಅಂತ್ಯಗೊಂಡಿತು.

೨.೪.೧೧. ನಿಡುಗಲ್ಲು ಚೋಳರು

ಸಣ್ಣದಾದ ಸಂಸ್ಥಾನ ಅಥವಾ ಸೀಮೆಯೊಂದು ಹೊಯ್ಸಳರಂತಹವರನ್ನು ಆರಂಭದಿಂದ ಕೊನೆಯವರೆಗೂ ಪ್ರತಿರೋಧಿಸಿದ್ದು ಆಶ್ಚರ್ಯವೆನಿಸುತ್ತದೆ. ಏಕೆಂದರೆ ಕೇವಲ ೬೦೦ ಹಳ್ಳಿಗಳಿಂದ ಕೂಡಿದ ವಿಭಾಗವೊಂದು ತುಮಕೂರು, ಚಿತ್ರದುರ್ಗ, ಅನಂತಪುರ ಜಿಲ್ಲೆಯ ಹಲವು ಭಾಗಗಳನ್ನು ತಮ್ಮ ನೇರ ಆಳ್ವಿಕೆಗೆ ಒಳಪಡಿಸಿಕೊಂಡರು ಎಂದರೆ ಅವರ ಆದಾಯದ ಮೂಲ ಏನಾಗಿತ್ತು ಹಾಗೂ ರಕ್ಷಣಾ ತಂತ್ರಗಳೇನಾಗಿದ್ದವು ಎಂಬುದು ಮುಖ್ಯವೆನಿಸಿಕೊಳ್ಳುತ್ತದೆ.

ನಿಡುಗಲ್ಲು ಚೋಳರು ತಮ್ಮನ್ನು ಕಂಚಿಪುರಾವಧೀಶ್ವರನಾದ ಕರಿಕಾಲಚೋಳನೊಂದಿಗೆ ಮೂಲವನ್ನು ಗುರುತಿಸಿಕೊಳ್ಳುವ ಪ್ರಯತ್ನ ಮಾಡಿದ್ದಾರೆ. ಕಡಪ ಜಿಲ್ಲೆಯ 'ಕಲಿಮಳ್ಳ', ಕರ್ನೂಲ, ಕಡಪದ ಶಾಸನಗಳು ಇವರ ಬಗೆಗೆ ಬೆಳಕು ಚೆಲ್ಲುತ್ತವೆ. ಆದರೆ ಇವರಿಗೂ ತಂಜಾವೂರಿನ ಚೋಳ ಅರಸರಿಗೆ ಇರುವ ಸಂಬಂಧ ಏನೆಂಬುದು ತಿಳಿಯದು. ಚೋಳ ಧನಂಜಯ, ಚೋಳ ಮುತ್ತರಸ ಮೊದಲಾದವರ ಉಲ್ಲೇಖಗಳು ಕಲಿಮಳ್ಳ ಮತ್ತು ಮಧುಗಿರಿಯ ಶ್ರವಣಗುಡಿ ವೀರಗಲ್ಲು ಶಾಸನಗಳಿಂದ ತಿಳಿಯುತ್ತದೆ. ಬಹುಶಃ ೮ನೆಯ ಶತಮಾನದ[೧೪೩] ವೇಳೆಗಾಗಲೇ ಈ ಪ್ರದೇಶದಲ್ಲಿ ನಿಡುಗಲ್ಲು ಚೋಳವಂಶಿಕರು ಆಳ್ವಿಕೆ ಮಾಡಿದ್ದರೆಂದು ಇದರಿಂದ ಗೋಚರವಾಗುತ್ತದೆ. ಇವರನ್ನು ರೇನಾಡು, ಆಂಧ್ರ, ಕನ್ನಡ ಚೋಳರೆಂತಲೂ ಕರೆಯಲಾಗುತ್ತದೆ.

ನಿಡುಗಲ್ಲು ಚೋಳರು ಜಿಲ್ಲೆಯಲ್ಲಿ ಕೋಟೆ–ಕೊತ್ತಲಗಳ ಐತಿಹಾಸಿಕತೆಯನ್ನು ಮೊದಲ ಬಾರಿಗೆ ಶಾಸನಗಳಲ್ಲಿ ದಾಖಲಿಸುವುದರ ಮೂಲಕ ಜಿಲ್ಲೆಯ ಕೋಟೆಗಳ ಮಹತ್ವ ವಿಷದಪಡಿಸಿದರು. ಸಣ್ಣಪುಟ್ಟ ಸಂಸ್ಥಾನಗಳು ತಮ್ಮ ರಾಜ್ಯದ ರಕ್ಷಣೆಗಾಗಿ ಕೋಟೆ–ಕೊತ್ತಲಗಳ ನಿರ್ಮಾಣ ಹೇಗೆ ಅನಿವಾರ್ಯವಾಗಿ ರೂಪುಗೊಂಡಿತ್ತು ಎಂಬುದು ಇದರಿಂದ ವೇದ್ಯವಾಗುತ್ತದೆ.

೧. ಧನಂಜಯ ಕ್ರಿಶ. ೭೫೦

ಶಾಸನಗಳು ನಿಡುಗಲ್ಲು ಚೋಳರಸರಿಗೆ ಸಂಬಂಧಿಸಿದಂತೆ ಉಲ್ಲೇಖಿಸಿರುವ ಮೊದಲ ಅರಸನ ಹೆಸರೇ ಧನಂಜಯನದು. ಈತನನ್ನು ಶ್ರವಣಗುಡಿಯ ಸುಡುಗಾಡು ಬೈಲಿನ ೧ನೆಯ ವೀರಗಲ್ಲು[೧೪೪] 'ಸ್ವಸ್ತಿ ಶ್ರೀ ಚೋಳಧನಯನ ಎಜಗಾಲ್ವಾದಿ ಅಱುನೂಱು ಆಳೆಪನ್ನಿರ್ವ್ವರುಂ ಕಟ್ಟವದಿ ಮೇಗದಣ್ಡುವೋದಲ್ಲಿ ಕದಂಬರಾತ್ತವಿ ತಿದು ವೀರಸ್ವರ್ಗಪೊಕ್ಕನ್ ಎಂದು ಉಲ್ಲೇಖಿಸಿದೆ. ಅಂದರೆ ಚೋಳಧನಂಜಯನು ಇರಿಗಲ್ವಾಡಿ ೬೦೦ ಆಳುತ್ತಿರಲು ರಾಷ್ಟ್ರಕೂಟರ ಮೇಲಿನ ಯುದ್ಧದಲ್ಲಿ ಕದಂಬರಾತ್ತ ಎಂಬ ವ್ಯಕ್ತಿ ಕಾದುತ್ತಾ ಮರಣ ಹೊಂದಿದನೆಂದು ಹೇಳುತ್ತದೆ. ನಂತರದ ವೀರಗಲ್ಲುಗಳು ಸಹ ಧನಂಜಯ, ಅವನ ಆಡಳಿತ ವಿಭಾಗ ಮತ್ತು ಕಾದು ಸತ್ತವರನ್ನು ತಿಳಿಸುತ್ತವೆ. ಅದೇ ಸ್ಥಳದ ೨ನೆಯ ವೀರಗಲ್ಲು[೧೪೫] ಸ್ವಸ್ತಿ ಶ್ರೀಚೋಳಧನಞ್ಜಯನ ಎರಿಗಾಲ್ವಾದಿಆಱುನೂಱುಅಳೆಕಂ, ಶ್ರೀರಾಮನ್ ನಗರಜತುರಗಸ ಮೂಹಂಪೊಕ್ಕುದಿತು ವೀರಸ್ವಗಂ ಪೊಕ್ಕನ್ ಎಂದು ಉಲ್ಲೇಖಿಸುತ್ತದೆ. ಈತ ಆಳ್ವಿಕೆ ಮಾಡುವಾಗ ಶ್ರೀರಾಮ, ನರಗಜರು, ತುರುಗಾಳಗದಲ್ಲಿ ಕಾದು ಸತ್ತರೆಂದು ತಿಳಿಸುತ್ತದೆ.

ಅದೇ ಸ್ಥಳದ ೩ನೆಯ ವೀರಗಲ್ಲು[೧೪೬] ಚೋಳಧನಂಜಯನನ್ನು ಮುತ್ತರಸ ಎಂದು ಉಲ್ಲೇಖಿಸಿದೆ. ಬಹುಶಃ ಅವನು ವೃದ್ಧನಾದರೂ ರಣರಂಗಕ್ಕೆ ಬಂದು ಕಾದಿದ್ದರಿಂದ ಮುತ್ತರಸನೆಂಬ ಇದ್ದಿರಬಹುದು. ಅದೇ ಸ್ಥಳದ ೪ ಮತ್ತು ೫, ೮ನೆಯ ವೀರಗಲ್ಲುಗಳು[೧೫೩] ಸ್ವಸ್ತಿಶ್ರೀ ತೊಳೆಱ ಮುತ್ತರಸಪೊ ಎಂದು ೬ನೆಯ ವೀರಗಲ್ಲು[೧೪೭] 'ಸ್ವಸ್ತಿಶ್ರೀ ಚೋಳಧಞ್ಜ ಮತ್ತು ಮುತ್ತರಸ ಎಂಬ ಎರಡು ಹೆಸರುಗಳನ್ನು ಒಂದೇ ಉಲ್ಲೇಖಿಸಿರುವುದರಿಂದ ವೃದ್ಧನಾದರೂ ಕಲಿತನದಿಂದ ಹೋರಾಡಿದ್ದಕ್ಕೆ ಅವನಿಗೆ ಮುತ್ತರಸ ಎಂಬ ಬಿರುದು ಬಂದಿರಬಹುದು. ೯ ಮತ್ತು ೧೦ನೆಯ ವೀರಗಲ್ಲುಗಳು[೧೪೮] ಸಹ ಚೋಳಧನಂಜಯನನ್ನು ಉಲ್ಲೇಖಿಸಿವೆ.

ಹೀಗೆ ಹತ್ತು ವೀರಗಲ್ಲು, ಶಾಸನಗಳಲ್ಲೂ ಧನಂಜಯ ಎರಿಕಲ್ವಾಡಿ–೬೦೦ ಎಂಬ ಉಲ್ಲೇಖ ಸಿಗುವುದರಿಂದ ಈ ಏರಿಕಲ್ವಾಡಿ ಎಂಬುದು ಬೆಟ್ಟವನ್ನು ಏರಲು ಕಡಿದಾಗಿರುವ ನಿಡುಗಲ್ಲಿನಲ್ಲಿ ಕೋಟೆ–ಕಟ್ಟಿಸಿದ್ದರಿಂದ ಬಂದಿರಬಹುದು. ಕ್ರಮೇಣ ಅದು ನಿಡುಗಲ್ಲು ಎಂದು ಪ್ರಸಿದ್ಧಿಗೆ ಬಂದಿದೆ. ಏಕೆಂದರೆ ಈ ವೇಳೆಗೆ ನೊಳಂಬರು ಹೆಂಜೇರಿನಲ್ಲಿ ಅಧಿಕಾರಕ್ಕೆ ಬಂದಿದ್ದರಿಂದ ಅವರ ಸಾಮಂತನಾಗಿ ನಿಡುಗಲ್ಲಿನಲ್ಲಿ ಅಧಿಕಾರಕ್ಕೆ ಬಂದಿರಬಹುದು. ಹಾಗಾಗಿಯೇ ಮತ್ತು ನೊಳಂಬ ಇರಗಲ್ವಾಡಿ ೬೦೦ರಿನ ಪ್ರಾಂತ್ಯಾದಿಪತಿಗಳು ಶ್ರವಣ ಗುಡಿ ಕಾಳಗದಲ್ಲಿ ಗಂಗರ ಪರ ವಹಿಸಿದ್ದರು. ಸಹಜವಾಗಿ ಈ ಕದನದಲ್ಲಿ ಭಾಗವಹಿಸಿದ್ದರು ಎಂದು ತಿಳಿಯಲು ಸಾಧ್ಯವಿದೆ. ಅಲ್ಲದೆ ನೊಳಂಬರು ಗಂಗರಿಂದ ರಾಷ್ಟ್ರಕೂಟರ ಸಾಮಂತರಾದರು. ಆದುದರಿಂದಲೇ ಗಂಗರ ನಿಡುಗಲ್ಲು ಚೋಳರು ಸಹ ರಾಷ್ಟ್ರಕೂಟರಿಗೆ

ತಮ್ಮ ನಿಷ್ಠೆಯನ್ನು ವ್ಯಕ್ತಪಡಿಸಿದರು. ಬಹುಶಃ ಎರೆಯಪ್ಪನ ಕಾಲದಲ್ಲಿ ನೊಳಂಬರ ರಾಜಧಾನಿಯ ಮೇಲೆ ದಾಳಿ ಮಾಡಿದಾಗ ಅವರ ಸಾಮಂತರಾದ ನಿಡುಗಲ್ಲು ಚೋಳರ ಮೇಲೂ ಧಾಳಿ ಮಾಡಿರುವುದನ್ನು ಕೂಡಲೂರು ಶಾಸನದಿಂದ ತಿಳಿಯುತ್ತದೆ.[೧೪೯]

ಈತನ ನಂತರ ಬಿದಿಯಚೋರರಸ ಕ್ರಿ.ಶ. ೮೭೮ರಲ್ಲಿ ನೊಳಂಬ ಮಹೇಂದ್ರನ ಸಾಮಂತನಾಗಿ ನಿಡುಗಲ್ಲಿನಲ್ಲಿ ಆಳ್ವಿಕೆ ಮಾಡುತ್ತಿದ್ದನು. ಆದುದರಿಂದ ಗಂಗರ ಸಾಮಂತತ್ವ ಒಪ್ಪಿಕೊಂಡಿದ್ದ ಚೋಳ ಧನಂಜಯ ಚಾಳುಕ್ಯರ ಸ್ನೇಹ ಬೆಳೆಸಿದನು.[೧೫೦] ಈತನ ನಂತರ ವಿಕ್ರಮಚೋಳನ ನಿಡುಗಲ್ಲು ದುರ್ಗವನ್ನು ಕ್ರಿ.ಶ. ೯ನೆಯ ಶತಮಾನದ ಕೊನೆ ಭಾಗದಲ್ಲಿ ವಶಕ್ಕೆ ತನ್ನ ತೆಗೆದುಕೊಂಡನು. ಆದರೆ ಈತನ ಕಾಲವಾದ ನಂತರ ನಿಡುಗಲ್ಲು ಚೋಳರಿಗೆ ಸಂಬಂಧಿಸಿದ ೨೫ ವರ್ಷಗಳ ಅಧಿಕಾರದ ಯಾವುದೇ ಕುರುಹುಗಳು ಕಂಡುಬರುವುದಿಲ್ಲ.

೨. ಬ್ರಹ್ಮಾಧಿರಾಜ ಕ್ರಿ.ಶ. ೧೦೧೫-೧೦೪೪೩

ನಿಡುಗಲ್ಲಿನ ಶಾಸನ ಬ್ರಹ್ಮದೇವ ಅಥವಾ ಬ್ರಹ್ಮಾಧಿರಾಜನನ್ನು ಕೋರಾ ಗ್ರಾಮದಲ್ಲಿ ಕೋರಾ ಶಾಸನ[೧೫೧] ಶ್ರೀಮಜಗದೇಕಮಲ್ಲ ದೇವರು ರಾಜ್ಯಮಾಳುತ್ತಮಿರೆ ಮಹಾಮಂಡಳೇಶ್ವರ ನೊಜಿಯೂರ ಪುರವಾಧೀಶ್ವರ ಬಂಮದೇವ ಚೋಳಮಹಾರಾಜರು ಗೋವಿಂದವಾಡಿಯ ರಾಜ್ಯಂಗೆಯುತ್ತಮಿರೆ ಕಂಮಟೇಶ್ವರದೇವರ ನಂದಾದೀವಿಗೆಗೆ ಬಿಟ್ಟ ದತ್ತಿ ಎಂದು ಉಲ್ಲೇಖಿಸುತ್ತದೆ. ಈ ಶಾಸನದಲ್ಲಿರುವ ಎಂಬ ಹೆಸರು 'ಜಗದೇಕಮಲ್ಲ ಎಂಬ ಎರಡನೆಯ ಜಯಸಿಂಹನಿಗಿದ್ದ ಬಿರುದಾಗಿದೆ. ಜಯಸಿಂಹ ಮತ್ತು ಬ್ರಹ್ಮದೇವನ ಕಾಲಮಾನ ಒಂದೇ ಆಗಿರುವುದರಿಂದ ಎರಡನೆಯ ಜಯಸಿಂಹನೇ ಜಗದೇಕಮಲ್ಲನಾಗಿದ್ದಾನೆ.

೩. ಮಂಗರಸ ಕ್ರಿ.ಶ. ೧೦೭೯-೧೦೮೩

ಮುಮ್ಮಡಿ ಇರುಂಗೋಳನ ನಿಡುಗಲ್ಲು ಶಾಸನ[೧೫೨] ಬ್ರಹ್ಮಭೋಗೀಂದ್ರನಾತನ ಪುತ್ರಂಕಲಿಮಂಗೆ ಎಂದು ಉಲ್ಲೇಖಿಸಿದೆ. ಕಲಿಮಂಗಿ ಎಂಬ ಅರಸನೇ ಮಂಗರಸನಾಗಿರಬೇಕು. ಕ್ರಿ.ಶ. ೧೦೭೯ರ ಹೌಲಗಿ ಶಾಸನ ಮತ್ತು ಕ್ರಿ.ಶ. ೧೦೮೨ರ ಉದಬಣ್ಣ ಶಾಸನಗಳು ಈತನನ್ನು ಆರನೆಯ ವಿಕ್ರಮಾದಿತ್ಯನ[೧೫೩] ಸಾಮಂತನೆಂದು ತಿಳಿಸುತ್ತವೆ.

೭. ಬೀಚೆ

ಮೂರನೆಯ ಇರುಂಗೋಳನ ನಿಡುಗಲ್ಲು ಶಾಸನ[೧೫೪] ಕಲಿಮಂಗಿಯಾತನ ಸುತಂ ಶ್ರೀಬಚೆ ಎಂದೂ ಗಣೇಶ್ವರ ದೇವನ ನಿಡುಗಲ್ಲು ಶಾಸನ[೧೫೫] ಬಬ್ಬಿ ಎಂದು ಉಲ್ಲೇಖಿಸಿರುವುದನ್ನು ಬಿಟ್ಟರೆ ಈತನ ಆಳ್ವಿಕೆಗೆ ಸಂಬಂಧಿಸಿದ ಯಾವ ಕುರುಹುಗಳು ತುಮಕೂರು ಜಿಲ್ಲೆಯಲ್ಲಿ ಕಂಡುಬರುವುದಿಲ್ಲ.

೫. ಗೋವಿಂದರಸ

ಕ್ರಿ.ಶ. ೧೨೪೯ರ ನಿಡುಗಲ್ಲು ಶಾಸನ[೧೫೬] 'ಶ್ರೀಬೀಚೆ ತನ್ನಂದನ ನಗೋವಿಂದ' ಎಂದೂ,

ಇರುಂಗೋಳದೇವನ ಕ್ರಿ.ಶ. ೧೧೩೫ರ ನಿಡುಗಲ್ಲು ಶಾಸನ[೧೫೭] 'ಗೋವಿಂದರಸಂಗಂ ಮಹದೇವಿಕಾನ್ತೆ' ಎಂದು ಅಂದರೆ ಬೀಚಿಯ ಮಗನಾದ ಗೋವಿಂದನಿಗೆ ಮಹದೇವಿ ಎಂಬ ಪತ್ನಿ ಇದ್ದಳೆಂದು ತಿಳಿಸುತ್ತದೆ.

೬. ಮೊದಲನೆಯ ಇರುಂಗೋಳ (ಕ್ರಿ.ಶ. ೧೧೦೨–೧೧೪೩)

ಗೋವಿಂದ ಮತ್ತು ಮಹಾದೇವಿಯರ ಪುತ್ರನೇ ಮೊದಲನೆಯ ಇರುಂಗೋಳ. ಈತನ ಆಳ್ವಿಕೆಗೆ ಸಂಬಂಧಿಸಿದಂತೆ ಎರಡು ಶಾಸನಗಳು ದೊರೆತಿದ್ದು, ಇವು ನಿಡುಗಲ್ಲು ಚೋಳರನ್ನು ಕಲ್ಯಾಣ ಚಾಳುಕ್ಯ ಅರಸರಾದ ಆರನೆಯ ವಿಕ್ರಮಾದಿತ್ಯ, ಮೂರನೆಯ ಸೋಮೇಶ್ವರ, ಎರಡನೆಯ ಜಗದೇಕಮಲ್ಲರ ಸಾಮಂತರಾಗಿದ್ದರೆಂದು ತಿಳಿಸುತ್ತವೆ. ಕ್ರಿ.ಶ. ೧೧೨೯ರ ದೊಡ್ಡ ಬಾಣಗೆರೆ ಶಾಸನ[೧೫೮] ರೊದ್ದಮುನ್ನೂಱುಂ ಸಿರೆಮುಂಂನ್ನೂಱು ಮಂಹರುವೆ ಮುನ್ನೂಱು ಎಂಬ ಇರುಂಗೋಳನ ಪ್ರಾಂತ್ಯಗಳನ್ನು ಉಲ್ಲೇಖಿಸಿದೆ. ಕ್ರಿ.ಶ. ೧೧೦೧ರ ಮನಕತ್ತೂರು ಶಾಸನ[೧೫೯] ಇರುಂಗೋಳ ದೇವನು ಹೊಯ್ಸಳ ವಿಷ್ಣುವರ್ಧನನಿಂದ ಸೋಲಲ್ಪಟ್ಟನೆಂದು ತಿಳಿಸುತ್ತದೆ. ಆದರೂ ಇರುಂಗೋಳನ ಸಾಹಸವನ್ನು ಶ್ಲಾಘಿಸಲೇಬೇಕು. ಏಕೆಂದರೆ ಸಣ್ಣದಾದ ಸಂಸ್ಥಾನವೊಂದು ವಿಷ್ಣುವರ್ಧನನ ಸೇನೆಯನ್ನು ಎದುರಿಸಿ ಅದನ್ನು ತಡೆಯಲು ಕೋಟೆಯ ರಕ್ಷಣೆಗಾಗಿ ತಲ್ತ್ರನಮಣನನ್ನು ನೇಮಿಸಿದನೆಂದರೆ ಈತನ ಸೈನಿಕ ಸಾಮರ್ಥ್ಯದ ಬಗ್ಗೆ ಯಾರಿಗಾದರೂ ಅರಿವಾದೀತು. ಈ ಅಂಶ ನಿಡುಗಲ್ಲು ಶಾಸನದಿಂದ ಸ್ಪಷ್ಟವಾಗುತ್ತದೆ.

೭. ಮಲ್ಲಿದೇವ

ಮಲ್ಲಿದೇವನನ್ನು ೧೩ ಶಾಸನಗಳು ಉಲ್ಲೇಖಿಸುತ್ತವೆಯಾದರೂ ಅರಸೀಕೆರೆ ಶಾಸನ[೧೬೦] ಮಾತ್ರ ವಿಶೇಷವೆನಿಸುತ್ತದೆ. 'ಅಱುವತ್ತು ನಾಲ್ವರಂಮಣ್ಡಳಿಕರ ತಲೆಗೊಣ್ಡ ಗಣ್ಡಗಂಡಭೆರುಣ್ಡ ಬಂಟರ ಬಾವಟುಱನೊಗೆ ಕಾವಹರ ಎಂದು ಈತನ ಕೆಳಗೆ ೬೪ ಮಾಂಡಳಿಕರಿದ್ದರೆಂದು ಸ್ಪಷ್ಟಪಡಿಸುತ್ತದೆ. ಇವನ ಅಧೀನದಲ್ಲಿ ಸಿರೆನಾಡು, ಹರುಪಿನಾಡು, ರೊದ್ದನಾಡುಗಳಿದ್ದವು ಲಕ್ಷ್ಮೀದೇವಿ,[೧೬೧] ಬಲ್ಲಿದೇವಿ, ಮಲ್ಲಿದೇವನಿಗೆಸೀತಾದೇವಿ ಮತ್ತು ಬಿಜ್ಜಳದೇವಿಯ[೧೬೨]ರೆಂಬ ನಾಲ್ಕು ಜನ ರಾಣಿಯರಿದ್ದರು.

೮. ಇಮ್ಮಡಿ ಇರುಂಗೋಳ ಕ್ರಿ.ಶ. ೧೧೯೬–೧೨೯೬

ಈತನ ಆಳ್ವಿಕೆಯನ್ನು ಉಲ್ಲೇಖಿಸುವ ಯಾವ ಶಾಸನಗಳೂ ಜಿಲ್ಲೆಯಲ್ಲಿ ದೊರೆತಿಲ್ಲ. ಆದರೂ ಸಮಕಾಲೀನ ಅರಸರ ಶಾಸನಗಳಲ್ಲಿ ಉಲ್ಲೇಖಗೊಂಡಿದ್ದಾನೆ. ಇಮ್ಮಡಿ ಬಲ್ಲಾಳನ ಕ್ರಿ.ಶ. ೧೨೧೮ರ ಶಾಸನ.[೧೬೩] 'ಶ್ರೀವೀರ ಬಲ್ಲಾಳ ದೇವದಿಗ್ವಿಜಯ ಪ್ರಸಂಗೇನ ಸೀರೆನಾಡು ಕಾರಭೂತ ನಿಡುಗಲ್ಲು ನಾಡು ಗಿರಿದುರ್ಗಸ್ಥಳೀ' ಎಂದು ಉಲ್ಲೇಖಿಸುತ್ತದೆ. ಇಲ್ಲಿಂದ ಮುಂದೆ ಹೊಯ್ಸಳರಿಗೂ ಮತ್ತು ನಿಡುಗಲ್ಲು ಚೋಳರಿಗೂ ವೈಶಮ್ಯ ಆರಂಭವಾಗಿ ತಮ್ಮ ಪ್ರಾಂತ್ಯದ ಹಲವು ಪ್ರದೇಶಗಳನ್ನು ಕಳೆದುಕೊಂಡನು.

೯. ಇಮ್ಮಡಿ ಬಮ್ಮದೇವ (ಕ್ರಿ.ಶ. ೧೨೧೯–೧೩೩೨)

ಬಮ್ಮದೇವನು ಮಲ್ಲಿದೇವ ಮತ್ತು ಬಿಜ್ಜಳದೇವಿಯರ ಮಗನಾಗಿದ್ದು, ಹೊಯ್ಸಳರು ಇಮ್ಮಡಿ ಇರುಂಗೋಳನ ಕಾಲದಲ್ಲಿ ಹೆಂಜೇರಿನ ಗಡಿಯಂಚಿನವರೆಗೂ ದಾಳಿ ಮಾಡಿದ್ದರಿಂದ ಇಮ್ಮಡಿ ಬಮ್ಮದೇವ ರಾಜಧಾನಿಯನ್ನು ಹೆಂಜೇರಿನಿಂದ ನಿಡುಗಲ್ಲಿಗೆ ಸ್ಥಳಾಂತರಿಸಿದನು. ಈತನಿಗೆ ಬಿಜ್ಜಳದೇವ, ಬೀರದೇವ, ಇರುಂಗೋಳ ಮತ್ತು ಬಾವಂಟಿಗ ದೇವರೆಂಬ ಮಕ್ಕಳಿದ್ದರೆಂದು ಬ್ರಹ್ಮಗಿರಿಯ ಕೊಪ್ಪದ ಶಾಸನ[೧೬೪]ದಿಂದ ತಿಳಿಯುತ್ತದೆ.

೧೦. ಮುಮ್ಮಡಿ ಇರುಂಗೋಳ (ಕ್ರಿ.ಶ. ೧೨೩೭–೧೨೮೦)

ಮುಮ್ಮಡಿ ಇರುಂಗೋಳನು ಬಮ್ಮದೇವನ ಮಗನಾಗಿದ್ದು, ಅಚ್ಚಿನವೊಳೆ, ಕಂಬದೂರು, ನಿಡುಗಲ್ಲು ಮೊದಲಾದ ಹತ್ತು ಶಾಸನಗಳಲ್ಲಿ ಈತನ ಉಲ್ಲೇಖವಿದೆ.

ತುಮಕೂರಿನ ವೀರಗಲ್ಲು ಶಾಸನ ಮೂರನೆಯ ನರಸಿಂಹನ ಸಾಮಂತ ಅಧಿಕಾರಿಯಾದ ಚಿಕ್ಕಕೇತಯ್ಯನು ಆನೆಯಬಿದ್ದ ಸರಿಯಲ್ಲಿ ಆಳ್ವಿಕೆ ಮಾಡುತ್ತಿರುವಾಗ ಇನೆಯ ಇರುಂಗೋಳನು ಗೂಳೆಯನಾಯಕನೊಂದಿಗೆ ಆನೆಯಬಿದ್ದಸರಿಯ ಮೇಲೆ ದಾಳಿ ಮಾಡಿ ಗೋವುಗಳನ್ನು ವಶಪಡಿಸಿಕೊಂಡನೆಂದು ತಿಳಿಸುತ್ತದೆ. ಅದಕ್ಕೆ ಪ್ರತಿರೋಧಪಡಿಸಿದ ಅಪ್ಪೆಯನಾಯಕ ಯುದ್ಧದಲ್ಲಿ ಮಡಿದನು. ಅಮರಾಪುರದ ಶಾಸನ[೧೬೫] 'ಯಿರುಂಗೋಣದೇವ ಚೋಳಮಹಾರಾಜರ ಪ್ರಿಯತನೊಬ್ಬನಪ್ಪ ತ್ರಿಪುರಾಂತಕದೇವ ಹಾನಿಯ ದುರ್ಗ್ಗದಲು ರಾಜ್ಯಂಗೇಯ್ಯುತ್ತಮಿರೆ' ಎಂಬುದಾಗಿ ತನ್ನ ಮಗ ತ್ರಿಪುರಾಂತಕದೇವನು ಹಾನಿಯದುರ್ಗ್ಗದಲ್ಲಿ ಆಳ್ವಿಕೆ ಮಾಡುತ್ತಿದ್ದನೆಂದು ತಿಳಿಸುತ್ತದೆ. ಈ ಶಾಸನದಿಂದ ಈತನ ಆಡಳಿತ ವ್ಯಾಪ್ತಿ ಎಷ್ಟಿತ್ತೆಂದು ಗೋಚರಿಸುತ್ತದೆ.

೧೧. ಪೆರುಮಾಳದೇವ (ಕ್ರಿ.ಶ. ೧೨೮೦–೧೨೮೬)

ಕ್ರಿ.ಶ. ೧೨೮೬ರ ನಿಡುಗಲ್ಲು ಶಾಸನ[೧೬೬] ಪೆರುಮಾಳನು ಹುಲ್ಲಗಲ್ ಬೊಮ್ಮರಸನ ಮೇಲೆ ಯುದ್ಧಕ್ಕೆ ಹೋದಾಗ ಮಹಾಪ್ರಧಾನಿ ಕೇಶವರಾಮಯ್ಯ ಮರಣ ಹೊಂದಿದನೆಂದು ತಿಳಿಸುತ್ತದೆ. ಇದನ್ನು ನಿಡುಗಲ್ಲು, ತಳಲೊರೆ, ಬಸವಾಪಟ್ಟಣ, ಮುದುಡಿ ವೀರಗಲ್ಲುಗಳು ಸ್ಪಷ್ಟಪಡಿಸುತ್ತವೆ. ಕ್ರಿ.ಶ. ೧೨೯೪ರ ಮುದುಡಿ ವೀರಗಲ್ಲು ಶಾಸನ[೧೬೭] ಶ್ರೀವೀರನಾರಸಿಂಹದೇವರಸಲು ನಿಡುಗಲ್ಲು ಕೋಟೆಯ ಕಾಳಗಕ್ಕೆ ನಡೆದಲ್ಲಿ ಕಚಗೌಡಿಯ ಮಗ ಕಚಿನಾಯಕ(ಕ್)ನ ಮಾಯನೆ(ಯ)ರ ಸ್ವರ್ಗ'. ಪೆರುಮಾಳ ದೇವನ ಕಾಲದ ವೀರರನೇಕರು ವೀರನಾರಸಿಂಹನಿಂದ ಮರಣ ಹೊಂದಿದರೆಂದು ಸ್ಪಷ್ಟಪಡಿಸುತ್ತದೆ.

೧೨. ಮುಮ್ಮಡಿ ಬೊಮ್ಮ (ಕ್ರಿ.ಶ. ೧೨೮೦)

ಗಣೇಶ್ವರಚೋಳನ ಕ್ರಿ.ಶ. ೧೨೮೬ರ ನಿಡುಗಲ್ಲು ಶಾಸನದಲ್ಲಿ ಉಲ್ಲೇಖವಿರುವ ವಂಶವೃಕ್ಷದಲ್ಲಿ ಇರುಂಗೋಳ ಚೋಳನ ಮಗನೆಂದೂ ಹಾಗೂ ಬೈಚನೆಂಬ ಸೇನಾಧಿಪತಿಯನ್ನು ಹೊಂದಿದ್ದನೆಂದು ಉಲ್ಲೇಖವಿದೆ.[೧೬೮]

೧೩. ಗಣೇಶ್ವರದೇವ (ಕ್ರಿ.ಶ. ೧೨೯೨)

ನಿಡುಗಲ್ಲಿನ ಕ್ರಿ.ಶ. ೧೨೮೦ರ ಶಾಸನ[೧೬೯] ಶ್ರೀ ಮನ್ಮಹಾಮಂಡಳೇಶ್ವರ ಗಣೇಶ್ವರದೇವ ಚೋಳಮಹಾರಾಯ' ಎಂದು ಉಲ್ಲೇಖಿಸಿದೆ. ಕ್ರಿ.ಶ. ೧೨೯೨ರ[೧೭೦] ಮುದ್ದೇನಹಳ್ಳಿ ವೀರಗಲ್ಲು ಶಾಸನ ಈತನ ಸಾಮಂತ ರಾಮನಾಯಕನು ಹುಲಿಕುಂಟೆ ಮೇಲೆ ದಾಳಿ ಮಾಡಿ ಪೆಮ್ಮನಾಯಕ, ಅಭಯನಾಯಕ, ಬೊಮ್ಮನಾಯಕರನ್ನು ಕೊಂದನೆಂದು ತಿಳಿಸುತ್ತದೆ.

೧೪. ನಾಲ್ಕನೆಯ ಇರುಂಗೋಳ (ಕ್ರಿ.ಶ. ೧೨೯೨-೧೩೨೦)

ನಿಡುಗಲ್ಲು ಪ್ರಾಂತ್ಯದಲ್ಲಿ ಗಣೇಶ್ವರದೇವ ಕಾಲಕ್ಕಾಗಲೇ ಹೊಯ್ಸಳರ ಹಸ್ತಕ್ಷೇಪ ಹೆಚ್ಚಿದ್ದರಿಂದ ನಿಡುಗಲ್ಲನ್ನು ತೊರೆದು ಅಲ್ಲಿಂದ ಪೂರ್ವದಿಕ್ಕಿಗಿರುವ ಗುಡ್ಲನಹಳ್ಳಿ(ಗುಂಡ್ಡಹಳ್ಳಿ)ಗೆ ರಾಜಧಾನಿ ಬದಲಿಸಿದರೆಂದು ಕ್ರಿ.ಶ.೧೩೨೦ರ ಗುಂಡ್ಲುಹಳ್ಳಿ ಶಾಸನದಿಂದ[೧೭೧] ತಿಳಿಯುತ್ತದೆ.

೧೫. ಭೈರರಸ (ಕ್ರಿ.ಶ. ೧೩೩೭)

ಭೈರರಸನ ಕಾಲಘಟ್ಟಕ್ಕಾಗಲೇ ಹೊಯ್ಸಳರ ಸಾಮಂತ ಬೊಮ್ಮನಾಯಕ ನಿಡುಗಲ್ಲು ಅಧಿಕಾರ ನಡೆಸುತ್ತಿದ್ದಕ್ಕೆ ನಿಡುಗಲ್ಲಿನ ಶಾಸನದಿಂದ ಸ್ಪಷ್ಟವಾಗುತ್ತದೆ. ಚೋಳರು ಗುಂಡ್ಲಹಳ್ಳಿಯಿಂದ ಹಾಗಾಗಿ ಸಿರಾ ತಾಲೂಕಿನ ಗುಡಿಯಕುಂಟೆಗೆ ಹೋಗಿ ರಾಜಧಾನಿ ಬದಲಾಯಿಸಿದರು. ಕೇಸರಸ ಮತ್ತು ವಿಜಯರಸರು ಭೈರರಸನ ಮಕ್ಕಳಾದ ಆಳ್ವಿಕೆ ನಡೆಸಿರುವುದಕ್ಕೆ ಯಾವುದೇ ದಾಖಲೆಗಳು ದೊರೆಯದ ಕಾರಣ ನಿಡುಗಲ್ಲು ಚೋಳ ಮನೆತನ ಭೈರರಸನ ಕಾಲಕ್ಕೆ ಅವಸಾನ ಹೊಂದಿತು. ಹೀಗೆ ಎಂಟನೆಯ ಶತಮಾನದಿಂದ ೧೪ನೆಯ ಶತಮಾನದ ಮೊದಲಾರ್ಧದವರೆಗೆ ಸುದೀರ್ಘ ಆಳ್ವಿಕೆ ನಡೆಸಿದ ನಿಡುಗಲ್ಲು ಚೋಳ ಮನೆತನ ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಹಸ್ತಕ್ಷೇಪದ ನಡುವೆಯೂ ಸಂಸ್ಥಾನವನ್ನು ಬಹುಕಾಲ ಆಳ್ವಿಕೆ ನಡೆಸಿದ್ದನ್ನು ಗಮನಿಸಿದರೆ ಅವರ ಚಾಣಾಕ್ಷತೆ, ರಕ್ಷಣೆಗಾಗಿ ವಹಿಸಿದ ತಂತ್ರೋಪಾಯಗಳು ಯಾರಿಗಾದರೂ ಅರಿವಿಗೆ ಬಾರದಿರದು. ಬೆಳಕಿಗೆ ಬರದೇ ಇರದು.

೨.೪.೧೨. ಹೊಯ್ಸಳರು

ಗಂಗರ ಅವಸಾನದ ನಂತರ ಚೋಳರ ಅಧೀನದಲ್ಲಿದ್ದ ಗಂಗಮಂಡಲ ಸುಮಾರು ೩೦೦ ವರ್ಷಗಳ ಕಾಲ ಹೊಯ್ಸಳರ ಸುದೀರ್ಘ ಆಳ್ವಿಕೆಗೆ ಒಳಪಟ್ಟರೂ ಬಹುತೇಕ ರಾಜಕೀಯ ಹಸ್ತಕ್ಷೇಪಗಳಿಂದ ಕೂಡಿತ್ತು. ಆದರೂ ಕಲೆ ಮತ್ತು ವಾಸ್ತುಶಿಲ್ಪ ಕ್ಷೇತ್ರದಲ್ಲಿ ಮಾತ್ರ ಅಭೂತಪೂರ್ವ ಸಾಧನೆ ಮಾಡಿತು. ಹೀಗೆ ಸಾಂಸ್ಕೃತಿಕ ಶ್ರೀಮಂತಿಕೆಗೆ ಕಾರಣರಾದ ಬಿಲ್ಲ ಅಥವಾ ಬೇಡ ಸಮುದಾಯಕ್ಕೆ ಸೇರಿದ ಹೊಯ್ಸಳರನ್ನು ಜಿಲ್ಲೆಯ ೧೭೦ಕ್ಕೂ ಅಧಿಕ ಶಾಸನಗಳು ಬೆಳಕು ಚೆಲ್ಲುತ್ತವೆ. ಪೊಯ್ಸ್ಳನು ಇವರ ಮೂಲ ಪುರುಷನಾದರೂ ಈತನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಯಾವ ಕುರುಹು ದೊರೆತಿಲ್ಲ. ಹೊಯ್ಸಳರಿಂದ ತುಮಕೂರು

ಜಿಲ್ಲೆಯಲ್ಲಿ ನಿರ್ಮಿಸಲ್ಪಟ್ಟದ್ದೆಂದು ಹೇಳುವ ಯಾವ ಕೋಟೆ-ಕೊತ್ತಲಗಳ ಅವಶೇಷ ದೊರೆತಿಲ್ಲವಾದರೂ ಇವರ ಸಾಮಂತರಿಂದ ನಿರ್ಮಾಣಗೊಂಡ ಕೋಟೆಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ.

೧. ಇಮ್ಮಡಿ ವಿನಯಾದಿತ್ಯ (ಕ್ರಿ.ಶ. ೧೦೪೭-೧೧೦೦)

ಕ್ರಿ.ಶ. ೧೦೭೮ರ ಬೆಳಗೆರೆ ಶಾಸನ ಹುಳಿಯಾರು ಪ್ರಾಂತ್ಯದಲ್ಲಿ ವಿನಯಾದಿತ್ಯನ ಸಾಮಂತನಾದ ಸಾಂತಯ್ಯನು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ಬೆಳಕು ಚೆಲ್ಲುವುದರಿಂದ ಹುಳಿಯೂರಿನಲ್ಲಿ ಕೋಟೆಯ ನಿರ್ಮಾಣ ಕಾರ್ಯ ಆರಂಭವಾಗಿತ್ತೆಂದು ಊಹಿಸಲು ಸಾಧ್ಯವಿದೆ.

೨. ಒಂದನೆಯ ಬಲ್ಲಾಳ (ಕ್ರಿ.ಶ. ೧೧೦೦-೧೧೦೮)

ಕ್ರಿ.ಶ. ೧೧೦೨ರ ತಂಡಗ[೧೩] ಶಾಸನ ಬಲ್ಲಾಳನ ಮೇಲೆ ಬೆಳಕು ಚೆಲ್ಲುತ್ತದೆ.

೩. ವಿಷ್ಣುವರ್ಧನ (ಕ್ರಿ.ಶ. ೧೧೦೮-೧೧೫೨)

ಪಿತ್ರಾರ್ಜಿತವಾಗಿ ಪಡೆದ ಸಣ್ಣ ರಾಜ್ಯವನ್ನು ಮಹಾಸಾಮ್ರಾಜ್ಯವಾಗಿ ವಿಸ್ತರಿಸಿದ ಬಿಟ್ಟಿಗ ಅಥವಾ ಬಿಟ್ಟಿದೇವನು ಚೋಳರ ಮತ್ತು ನೊಳಂಬರನ್ನು ಸೋಲಿಸಿ ತುಮಕೂರು ಜಿಲ್ಲೆಯನ್ನು ತನ್ನ ನೇರ ಆಳ್ವಿಕೆಗೆ ಒಳಪಡಿಸಿಕೊಂಡನು. ಆದುದರಿಂದಲೇ ಈತನ ಕಾಲಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಅತಿ ಹೆಚ್ಚು ಕುರುಹುಗಳು ಕಂಡುಬರುತ್ತವೆ. ಕ್ರಿ.ಶ. ೧೧೨೮ರ ಶಾಸನ ವಿಷ್ಣುವರ್ಧನ ಇರುಂಗೋಳದೇವನನ್ನು ಸೋಲಿಸಿ ರೊದ್ದ, ಕಣಿಯಕಲ್, ಹರುವೆ-೩೦೦ ಸೀರೆನಾಡು ಮೊದಲಾದ ಪ್ರದೇಶಗಳನ್ನು ತನ್ನ ಹಿಡಿತಕ್ಕೆ ತೆಗೆದುಕೊಂಡನೆಂದು ತಿಳಿಸುತ್ತದೆ. ಭಟ್ಟರಹಳ್ಳಿ ವೀರಗಲ್ಲು, ಹೀತನೂರು, ಬೆಂಕಿಕೆರೆ ಶಾಸನಗಳು ನಾಡಗೌಡ, ಸಾಮಂತ ಹಾಗೂ ಅಧಿಕಾರಿ ವರ್ಗದವರು ಅಧಿಕಾರ ಪಡೆದದ್ದನ್ನು ತಿಳಿಸುತ್ತವೆ. ಹೀಗೆ ಅಧಿಕಾರದ ಗದ್ದುಗೆ ಪಡೆದ ಗೌಡರು ತಮ್ಮ ಗ್ರಾಮದ ಸುತ್ತಲೂ ಹಾಗೂ ಸಣ್ಣ ಅರಸರು ತಮ್ಮ ರಾಜಧಾನಿ ಸುತ್ತಲೂ ಕೋಟೆಗಳನ್ನು ಕಟ್ಟಿಸಿಕೊಂಡರು.

೪. ಒಂದನೆಯ ನರಸಿಂಹ(ಕ್ರಿ.ಶ. ೧೧೫೨-೧೧೭೩)

ಅಸಮರ್ಥ ದೊರೆಯಾದ ನರಸಿಂಹನನ್ನು ಕಲ್ಯಾಣ ಚಾಳುಕ್ಯರು ಸೋಲಿಸಿ ಹೊಯ್ಸಳರ ಬಹುಭಾಗವನ್ನು ವಶಪಡಿಸಿಕೊಂಡರು. ಆದರೂ ಸಮರ್ಥಗೂಳಿ ಬಾಚಿಯಂತಹ ಸಾಮಂತರು ಇದ್ದಿದ್ದರಿಂದ ತುಮಕೂರು ಜಿಲ್ಲೆಯ ಬಹುಭಾಗ ಹೊಯ್ಸಳರ ಅಧೀನದಲ್ಲೇ ಉಳಿಯಿತು. ಕ್ರಿ.ಶ. ೧೧೪೯ರ ಕೊರಗೆರೆ ಮತ್ತು ೧೯೦ ಕ್ರಿ.ಶ. ೧೧೪೯ರ ಡಿಂಕನಹಳ್ಳಿ[೧೭೪] ಶಾಸನಗಳು ನರಸಿಂಹನನ್ನು ಚಾಳುಕ್ಯರ ಜಗದೇಕಮಲ್ಲನ ಸಾಮಂತನಾಗಿ ಕೊನೆಯವರೆಗೂ ಆಳ್ವಿಕೆ ನಡೆಸಿದ ಎಂದು ತಿಳಿಸುತ್ತವೆ. ನರಸಿಂಹನು ಅಸಮರ್ಥ ದೊರೆಯಾದರೂ ತನ್ನ ಅವಧಿಯಲ್ಲಿ

ದೇವಾಲಯಗಳ ನಿರ್ಮಾಣ, ದಾನ, ಧರ್ಮ ಕೈಗೊಂಡ ಬಗ್ಗೆ ಕೈದಾಳ, ಕೊತ್ತಗೆರೆ, ಹೆಗ್ಗೆರೆ, ಸೊಳೆಕೆರೆ, ನಾಯಿಗೆರೆ, ಹೆಗ್ಗೆರೆ, ಹೊನ್ನುಡಿಕೆ, ಚಿನಗಶಾಸನ, ಕರದಾಳು, ಕಂಪನಹಳ್ಳಿ, ಹಾಗಲೂಡಿ, ನಿರುವಗಲ್ಲು, ಅಲಗದರೆ, ನೇರ್ತಿರ್ಕೆರೆ ಶಾಸನಗಳಿಂದ ಹಟ್ಟ, ಮುಂಡರಗಿ ಹೆಗ್ಗೆರೆ ಬಸದಿಗಳ ನಿರ್ಮಾಣವನ್ನು ಗಮನಿಸಿದರೆ ಸ್ಪಷ್ಟವಾಗುತ್ತದೆ.

೫. ಇಮ್ಮಡಿ ಬಲ್ಲಾಳ (ಕ್ರಿ.ಶ. ೧೧೭೩-೧೨೨೦)

ಈತನ ಆಳ್ವಿಕೆಯ ಮೇಲೆ ೩೦ಕ್ಕೂ ಹೆಚ್ಚು ಶಾಸನ, ದೇವಾಲಯಗಳು ಬೆಳಕು ಚೆಲ್ಲುತ್ತವೆ. ಆದರೂ ಅಷ್ಟು ಮಹತ್ವಪೂರ್ಣವಾದ ಯಾವ ಶಾಸನಗಳು ಇಲ್ಲ. ಎಲ್ಲವೂ ದೇವಾಲಯ, ಗೌಡ, ಬ್ರಾಹ್ಮಣರು ಮೊದಲಾದವರಿಗೆ ದತ್ತಿ ಬಿಟ್ಟ ಮಾಹಿತಿಯನ್ನು ತಿಳಿಸುತ್ತವೆ. ಈತನ ಆಡಳಿತ ವಿಶೇಷತೆ ಎಂದರೆ ಹೊಯ್ಸಳ ಸಾಮ್ರಾಜ್ಯದ ಎಲ್ಲೆಯು ಭೀಮಾ ತೀರದವರೆಗೂ ಹಬ್ಬಿತ್ತೆಂದು ತಿಪಟೂರಿನ ೪೩ನೆಯ ಶಾಸನ ತಿಳಿಸುತ್ತದೆ. ಉಳಿದಂತೆ ಕ್ರಿ.ಶ. ೧೧೭೧ರ ಮೋಟುಕೆರೆ, ಬೋರಸಂದ್ರ, ಸೀಗೆ ಬಾಗೆ, ಹುಳಿಯೂರ, ಮೋಟುಕೆರೆ, ನಾಯಿಗೆರೆ, ರೈನಡು, ಭೂದಿಹಾಳು, ತ್ತಿಟತ ಕಡವಗೆರೆ, ಹೇಚನೂರು, ಸೂಜಿಗಲ್ಲು, ಹುಳಿಯೂರು, ದೊಡ್ಡ ತೇಕಲವಟ್ಟಿ, ನಂದಿಹಳ್ಳಿ, ಶೀತಕಲ್ಲು, ಸೊರಲಹೂವು, ಬೀಗನೇಹಳ್ಳಿ, ಹೊನ್ನವಳ್ಳಿ, ಹಟ್ಲಕರಡಾಲು ಶಾಸನಗಳು ವೀರಬಲ್ಲಾಳ ಕಾಲದ ಗೌಡಿಕೆ ನಡೆಸಿದ ಬಗ್ಗೆ ಸ್ಥಳೀಯ ನಾಯಕರನ್ನು ಉಲ್ಲೇಖಿಸುವುದರಿಂದ ಕೋಟೆ-ಕೊತ್ತಲಗಳ ನಿರ್ಮಾಣ ಆಯಾಯ ಸ್ಥಳೀಯ ನಾಯಕರಿಂದ ಗ್ರಾಮಗಳಲ್ಲಿ ಆರಂಭವಾಗಿದೆಯೆಂದು ಇದರಿಂದ ವೇದ್ಯವಾಗುತ್ತದೆ.

೬. ಇಮ್ಮಡಿ ನರಸಿಂಹ (ಕ್ರಿ.ಶ. ೧೨೨೦-೧೨೩೫)

ಇಮ್ಮಡಿ ಬಲ್ಲಾಳನ ಪಟ್ಟದ ರಾಣಿಯಾದ ಪದ್ಮಲದೇವಿಯ ಮಗನೇ ಇಮ್ಮಡಿ ನರಸಿಂಹ. ಈತನ ಕಾಲದಲ್ಲಿ ಅಂತಹ ಮಹತ್ವಪೂರ್ಣ ಘಟನೆಗಳೇನು ಸಂಭವಿಸಿಲ್ಲ. ಕೇವಲ ದೇವಾಲಯ, ಅಧಿಕಾರಿ, ಬ್ರಾಹ್ಮಣರು ಮೊದಲಾದವರಿಗೆ ದತ್ತಿ-ದಾನ ನೀಡಿದ ಸಂಗತಿಗಳೇ ಕಂಡುಬರುತ್ತವೆ. ಕ್ರಿ.ಶ. ೧೨೩೩ರ ಅರಕೇರಿ ಶಾಸನ ಈತನ ಮಹತ್ವ ನರಸಿಂಹನ ದಂಡನಾಯಕರಾದ ಅಪ್ಪಯ್ಯ ಮತ್ತು ಗೋಪ್ಪಯ್ಯರು ಒಡೆಯನ ಮನಗೆದ್ದು ಅರಕೇರಿಯನ್ನು ಉಂಬಳಿಯಾಗಿ ಪಡೆದ ಸಂಗತಿ ತಿಳಿಸುತ್ತದೆ. ಕ್ರಿ.ಶ. ೧೨೩೮ರ ಸಂಪಿಗೆ ಶಾಸನ[೧೭೭] ನಿಟ್ಟೂರು ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತೆಂದು ಉಲ್ಲೇಖಿಸಿದೆ. ಉಳಿದಂತೆ ಪುರ, ಮಾಚಗಟ್ಟ, ಆಲ್ಲೂರು, ಕರಡಿ, ಅರಕೆರೆ, ಸಂಪಿಗೆ, ಹೆಗ್ಗೆರೆ, ನಿಡುಗಲ್ಲು, ಮಾರುಳೆ, ಹಂದನಕೆರೆ, ದಂಡಿನಸಿವರ ಮೊದಲಾದ ತನ್ನ ಅಧೀನ ಅಧಿಕಾರಿ, ಗೌಡ, ದಂಡನಾಯಕ ಮೊದಲಾದ ಅಧಿಕಾರಿವರ್ಗ, ವಿವಿಧ ದೇವಾಲಯಗಳಿಗೆ ನೀಡಿದ ದಾನ-ದತ್ತಿಗಳನ್ನು ತಿಳಿಸುತ್ತವೆ.

೭. ವೀರ ಸೋಮೇಶ್ವರ (ಕ್ರಿ.ಶ. ೧೨೩೫-೧೨೫೫)

ಈತನ ಆಳ್ವಿಕೆಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ದೊರೆತಿರುವ ಶಾಸನಗಳು ರಾಜಕೀಯವಾಗಿ ಯಾವ ಮಹತ್ವವನ್ನು ಪಡೆದಿಲ್ಲ. ಈತನ ಅವಧಿಯಲ್ಲಿ ರಾಜಕೀಯ ಅಭದ್ರತೆ ಇತ್ತೆನ್ನಲು

ಕ್ರಿ.ಶ. ೧೨೪೫ರ ಭಟ್ಟರಹಳ್ಳಿಯಲ್ಲಿ ವೀರಗಲ್ಲಿನಿಂದ ವೇದ್ಯವಾಗುತ್ತದೆ. ಉಳಿದಂತೆ ಮುದ್ದೇನಹಳ್ಳಿ ತುಂಬೆಪುರ, ಕುಡಚಿ, ವೊಟುಕೇರಿ, ಭಟ್ಟರಹಳ್ಳಿ, ಶಾಸನಗಳು, ಅಲ್ಲಿಯ ಸ್ಥಳೀಯ ಅಧಿಕಾರಿ ಇಲ್ಲವೆ ದೇವಾಲಯಗಳಿಗೆ ದತ್ತಿ ನೀಡಿದ ಬಗ್ಗೆ ಮಾಹಿತಿ ನೀಡುತ್ತವೆ.

೮. ಮುಮ್ಮಡಿ ನರಸಿಂಹ (ಕ್ರಿ.ಶ. ೧೨೫೫-೧೨೯೧)

ವೀರಸೋಮೇಶ್ವರ ತನ್ನ ಇಬ್ಬರು ಮಕ್ಕಳಾದ ಮುಮ್ಮಡಿ ನರಸಿಂಹ ಮತ್ತು ರಾಮನಾಥರಿಗೆ ಕ್ರಮವಾಗಿ ಹೊಯ್ಸಳ ಮಂಡಲ ಮತ್ತು ತಮಿಳು ಪ್ರದೇಶಗಳನ್ನು ಹಂಚಿದ್ದು ಹೊಯ್ಸಳ ಸಾಮ್ರಾಜ್ಯ ಅವಸಾನಕ್ಕೆ ನಾಂದಿಹಾಡಿತು. ಏಕೆಂದರೆ ಸಣ್ಣದೊಂದು ನಿಡುಗಲ್ಲು ಚೋಳ ಮನೆತನ ಹೊಯ್ಸಳರ ಸಾಮಂತ ಚಿಕ್ಕತೇಯ್ಯನನ್ನು ಆನೆಯಬಿದ್ದಸರಿಯಲ್ಲಿ ದಾಳಿ ಮಾಡಿ ಪಶುಗಳನ್ನು ವಶಪಡಿಸಿಕೊಂಡನೆಂದರೆ ಜಿಲ್ಲೆಯ ಉತ್ತರ ಭಾಗ ಇವರ ಅಧಿಪತ್ಯದಿಂದ ಹೊರಗುಳಿದಿತ್ತೆಂದರೆ ಹೊಯ್ಸಳರ ಸಾಮರ್ಥ್ಯ ಅರಿವಿಗೆ ಬಾರದು.

ಕ್ರಿ.ಶ. ೧೨೭೯ರ ತುಮಕೂರಿನ[೧೭೯] ಶಾಸನೊಕ್ತ ವೀರಗಲ್ಲಿನಿಂದ ಸ್ಪಷ್ಟವಾಗುತ್ತದೆ. ಜಿಲ್ಲೆಯಲ್ಲಿ ರಾಜಕೀಯ ಅನ್ಯೈಕ್ಯತೆ ಇತ್ತೆಂದು, ಕ್ರಿ.ಶ. ೧೨೬೬ರ ಬೆನಕನಕೆರೆ ಶಾಸನ[೧೮೦] ತಿಳಿಯುತ್ತದೆ. ಕ್ರಿ.ಶ. ೧೨೬೧ರ ಶೆಟ್ಟಿಕೆರಿಯ ಶಾಸನ[೧೮೧] ಅಸಂದಿನಾಡಿನ ಸೆಟ್ಟಿಕೆರೆ ಮತ್ತು ಸಣ್ಣಹಳ್ಳಿಗಳನ್ನು ಸೇರಿಸಿ, ಶ್ರೀಭರಿತಪ್ರಕಾಶಪುರ ಎಂದೂ ಕ್ರಿ.ಶ. ೧೨೬೩ರ ತುರುವೇಕೆರೆ ಶಾಸನ[೧೮೨] ಸೋಮೇಶ್ವರ ದಂಡನಾಯಕ ೯೬ ವಿಭಾಗಗಳನ್ನು ಹೊಂದಿದ್ದ ತುರುವೇಕೆರೆ "ಸರ್ವಜ್ಞ ವಿಜಯ ನರಸಿಂಹಪುರ" ಎಂಬುದಾಗಿ ಪ್ರತಿನಾಮವನ್ನಿಟ್ಟು ಅಗ್ರಹಾರವನ್ನಾಗಿ ಮಾರ್ಪಡಿಸಿದ್ದು ವಿಶೇಷವೆನಿಸುತ್ತವೆ. ಉಳಿದಂತೆ ಜಿಡಿ, ಕಸಬೆ, ಶೀತಕಲ್ಲು, ತುರುವೇಕೆರೆ, ಬಿದರೆ, ಅರಳಗುಪ್ಪೆ, ವಿಘ್ನಸಂತೆ, ಮಂಗವಾಡ, ಹೊನ್ನುಡಿಕೆ, ಬ್ಯಾಲಕೆರೆ ಮೊದಲಾದ ಶಾಸನ ಮತ್ತು ದೇವಾಲಯಗಳು ಈತನ ಆಳ್ವಿಕೆಯ ಮೇಲೆ ಬೆಳಕು ಚೆಲ್ಲುತ್ತವೆ.

೯. ವೀರರಾಮನಾಥ (ಕ್ರಿ.ಶ. ೧೨೫೫-೧೨೯೫)

ಸೋಮೇಶ್ವರನ ಎರಡನೆಯ ಮಗನಾದ ವೀರರಾಮನಾಥ ಕುಂದಾಣೆಯನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಕುಣಿಗಲ್‌ವರೆಗೂ ತನ್ನ ರಾಜ್ಯವನ್ನು ವಿಸ್ತರಿಸಲು ಪದೇ ಪದೇ ಪ್ರಯತ್ನಿಸಿದರೂ ೩ನೆಯ ನರಸಿಂಹನಿಂದ ಹಿಮ್ಮೆಟ್ಟಲ್ಪಡುತ್ತಿದ್ದನು. ಆದುದರಿಂದ ಈತನ ಆಳ್ವಿಕೆಗೆ ಸಂಬಂಧಿಸಿದಂತೆ ಹೆಚ್ಚಿನ ಕುರುಹುಗಳು ಜಿಲ್ಲೆಯಲ್ಲಿ ಕಂಡು ಬರುವುದಿಲ್ಲ, ಆದರೂ ಕ್ರಿ.ಶ. ೧೨೮೬ರ ಕೊಡ್ಲಾಪುರದ ಶಾಸನ ಇಂದಿನ ತುಮಕೂರ ಜಿಲ್ಲೆಯನ್ನೊಳಗೊಂಡ ಹೊಯ್ಸಳ ಮಂಡಳ ಸಣ್ಣಪುಟ್ಟ ಸಂಸ್ಥಾನಗಳ ದಾಹಕ್ಕೆ ಒಳಗಾಗುವ ಸ್ಥಿತಿಯಲ್ಲಿತ್ತೆಂದು ತಿಳಿಸುತ್ತದೆ.

೧೦. ಮುಮ್ಮಡಿ ಬಲ್ಲಾಳ (ಕ್ರಿ.ಶ. ೧೨೯೨-೧೩೪೨)

ಹೊಯ್ಸಳರಲ್ಲೇ ಅಸಮರ್ಥನಾದ ಮುಮ್ಮಡಿ ಬಲ್ಲಾಳನಿಗೆ ಯಶಸ್ವಿ ನಾಯಕನಾಗುವಲ್ಲಿ ಹಲವಾರು ಸಮಸ್ಯೆಗಳು ಎದುರಾದದ್ದು ದುರದೃಷ್ಟಕರ ಸಂಗತಿ. ಆದರೂ ಒಬ್ಬೊಂಟಿಗನಾಗಿ ಬೃಹತ್ ಸಾಮ್ರಾಜ್ಯದ ಸ್ಥಾಪನೆಗೆ ಪ್ರಯತ್ನಿಸಿದ ಈತನ ವ್ಯಕ್ತಿತ್ವ ಕರ್ನಾಟಕ ಚರಿತ್ರೆಯಲ್ಲಿ ಬಹುಮುಖ್ಯವೆನಿಸುತ್ತದೆ. ಈತನ ಮುಂದಾಲೋಚನೆಯ ಫಲವೇ ಭವ್ಯ ವಿಜಯನಗರ ಸಾಮ್ರಾಜ್ಯ ಸ್ಥಾಪನೆಗೆ ಕಾರಣವಾಯಿತು. ಈತನ ಆಳ್ವಿಕೆ ನಿರಂತರ ರಾಜಕೀಯ ಸಂಘರ್ಷದ ಕಾಲವಾದರೂ ಜಿಲ್ಲೆಯಲ್ಲಿ ಬಲ್ಲಾಳನಿಗೆ ಸಂಬಂಧಿಸಿದಂತೆ ಅತಿ ಹೆಚ್ಚು ಕುರುಹುಗಳು ಕಂಡುಬರುತ್ತವೆ. ಬಲ್ಲಾಳನ ಅವಧಿ ರಾಜಕೀಯ ಸಂಘರ್ಷದಿಂದ ಕೂಡಿದ್ದರೂ ದೇವಾಲಯಗಳ ನಿರ್ಮಾಣ, ದಾನ-ದತ್ತಿಗಳ ನೀಡಿರುವಂತಹದ್ದು ಸಾಂಸ್ಕೃತಿಕ ಚರಿತ್ರೆಯ ರಚನೆಗೆ ಮಹತ್ವದ ಆಕರಗಳಾಗಿವೆ.

ತುಮಕೂರು ಜಿಲ್ಲೆಯಲ್ಲಿನ ಆನೆಯಬಿದ್ದಸರಗು, ಆನೆಯಹೊಂಡ, ಆನೆಯಹೊಳೆ, ಆನೆಯಜರಗು ಸ್ಥಳನಾಮಗಳು ಹೊಯ್ಸಳರೊಂದಿಗೆ ಐತಿಹಾಸಿಕತೆಯನ್ನು ಗುರುತಿಸಿಕೊಂಡಿರುವುದು ಗೋಚರವಾಗುತ್ತದೆ. ಇಂತಹ ಸ್ಥಳಗಳಿರುವ ದೇವರಾಯನದುರ್ಗ, ಬೆನಕನಕೆರೆ, ನಿಡುಗಲ್ಲು, ಬ್ರಹ್ಮಗಿರಿ, (ಚಿತ್ರದುರ್ಗ)ಗಳಲ್ಲಿ ಹೊಯ್ಸಳರ ಶಾಸನಗಳು ಕಂಡುಬರುತ್ತವೆ. ಈ ಪ್ರದೇಶಗಳು ಗಂಗರ ಕಾಲದಲ್ಲಿ ಪ್ರಮುಖ ಕೇಂದ್ರಗಳಾಗಿದ್ದರಿಂದ ಪಡೆದ ಹೊಯ್ಸಳರು ಈ ಪ್ರದೇಶಗಳಲ್ಲಿ ಗಂಗರ ಮೇಲಿನ ವಿಜಯದ ನೆನಪಿಗಾಗಿ ಆನೆಯ ಶಿಲ್ಪದ ಕೆಳಗೆ ಶಾಸನವನ್ನು ಹಾಕಿಸಿ ತಮ್ಮ ಪಾರಮ್ಯ ಮೆರೆದಿರಬೇಕು. ಇಲ್ಲವೇ ಸ್ಥಳೀಯ ಐತಿಹ್ಯಗಳ ಪ್ರಕಾರ ಈ ಪ್ರದೇಶಗಳಲ್ಲಿ ಆನೆಗಳನ್ನು ಪಳಗಿಸಿ ದ್ವಾರಸಮುದ್ರಕ್ಕೆ ಕಳುಹಿಸುತ್ತಿದ್ದರು ಎಂಬ ಸಂಗತಿಯನ್ನು ಒಪ್ಪಬೇಕಾಗುತ್ತದೆ. ಆದರೆ ಈ ಪ್ರದೇಶಗಳನ್ನು ಹೊಯ್ಸಳರು ದಾಳಿ ಮಾಡಿ ವಶಪಡಿಸಿಕೊಂಡಿದ್ದಕ್ಕೆ ಶಾಸನೋಕ್ತ ದಾಖಲೆಗಳು ಇರುವುದರಿಂದ ಹೊಯ್ಸಳರು ಆನೆಗಳನ್ನು ಈ ಕೇಂದ್ರಗಳಲ್ಲಿ ಪಳಗಿಸುವ ಕೇಂದ್ರಗಳನ್ನು ಇಲ್ಲಿ ತೆರೆದಿರಬೇಕು.

ಇವರ ಕಾಲದ ಮತ್ತೊಂದು ಮಹತ್ವದ ಅಂಶವೆಂದರೆ ಹೊಯ್ಸಳ ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದರೆಂದು ಚಿಕ್ಕನಾಯಕನಹಳ್ಳಿಯ ಬಹುತೇಕ ಶಾಸನಗಳು ಉಲ್ಲೇಖಿಸುತ್ತವೆ. ಆದರೆ ಅದೇ ಕಾಲಘಟ್ಟಕ್ಕೆ ಸೇರಿದ ಜಿಲ್ಲೆಯ ಇತರೆಡೆ ದೊರೆತ ಶಾಸನಗಳು ಹೊಯ್ಸಳರು ಸ್ವತಂತ್ರ ಅರಸರೆಂದು ಉಲ್ಲೇಖಿಸುತ್ತವೆ. ಬಹುಶಃ ಚಿಕ್ಕನಾಯಕನಹಳ್ಳಿ ಪರಿಸರದ ಹುಲಿಯಕೆರೆ ಪ್ರಭುಗಳು ಮತ್ತು ಪಾವಗಡ ಪರಿಸರದ ನಿಡಗಲ್ಲು ಚೋಳರು ಎರಡು ಬೃಹತ್ ಸಾಮ್ರಾಜ್ಯಗಳ ಶತ್ರುತ್ವ ಸಾಧಿಸುವುದು ಸಣ್ಣ ಮನೆತನಗಳಿಗೆ ಹಿತಕರವಲ್ಲವೆಂದು ಚಾಳುಕ್ಯ ಮತ್ತು ಹೊಯ್ಸಳ ಇಬ್ಬರನ್ನು ತಮ್ಮ ಪ್ರಭುಗಳೆಂದು ಉಲ್ಲೇಖಿಸಿಕೊಂಡಿರಬೇಕು. ಇಲ್ಲವೆ ಕಲ್ಯಾಣ ಚಾಳುಕ್ಯರ ದಕ್ಷಿಣ ಗಡಿಗೆ ಇಂದಿನ ಚಿಕ್ಕನಾಯಕನಹಳ್ಳಿ ಹಾಗೂ ಪಾವಗಡ ತಾಲೂಕುಗಳು

ಹೊಂದಿಕೊಂಡಿದ್ದರಿಂದ ಹೊಯ್ಸಳರಿಗಿಂತ ಚಾಳುಕ್ಯರ ಪ್ರಭಾವವೇ ಹೆಚ್ಚಾಗಿದ್ದರಿಂದ ಹೊಯ್ಸಳರನ್ನು ಕಲ್ಯಾಣ ಚಾಳುಕ್ಯರ ಸಾಮಂತರೆಂದು ಉಲ್ಲೇಖಿಸಲ್ಪಟ್ಟಿರಬಹುದು. ಹೀಗೆ ಸುಮಾರು ೩೦೦ ವರ್ಷಗಳವರೆಗೆ ಸಾಂಸ್ಕೃತಿಕ ವಲಯಕ್ಕೆ ಅಭೂತಪೂರ್ವ ಕೊಡುಗೆ ನೀಡಿದ ಹೊಯ್ಸಳರು ಮುಸ್ಲಿಮರ ಆಗಮನದಿಂದ ಅವಸಾನದ ಹಾದಿಹಿಡಿದರು.

೨.೪.೧೩. ಹೊಯ್ಸಳರ ಸಾಮಂತರು

ಹೊಯ್ಸಳರ ಅಧೀನದಲ್ಲಿ ಹುಳಿಯರೆ, ಅದಳ ಸಾಮಂತರು, ಮಾಚಯ್ಯ, ಗೋಪಾಲ ದಂಡನಾಯಕ, ಕಳಕಟ್ಟಿ ಸಾಮಂತರು, ವಾಜಿವಂಶದ ಮಾಂಡಳೀಕರು ವಿವಿಧ ಕಾಲಘಟ್ಟಗಳಲ್ಲಿ ಅಧಿಕಾರವನ್ನು ಚಲಾಯಿಸಿ ಕೋಟೆ-ಕೊತ್ತಲಗಳನ್ನು ನಿರ್ಮಿಸಿಕೊಂಡು ಹೊಯ್ಸಳರಿಗೆ ಗಡಿಪ್ರಾಂತ್ಯದಲ್ಲೇ ತಡೆಗೋಡೆಯನ್ನು ರೂಪಿಸಿ ಶತ್ರುಗಳ ದಾಳಿಯನ್ನು ತಡೆಗಟ್ಟುವ ಕಾರ್ಯ ಮಾಡುತ್ತಿದ್ದರು.

೧) ಹುಳಿಯರೆ ಸಾಮಂತರು

ಹುಳಿಯರೆ ಪ್ರಭುಗಳು ತುಮಕೂರು ಜಿಲ್ಲೆಯಲ್ಲಿ ಹೊಯ್ಸಳರ ಸಾಮಂತರಾಗಿ ಇಂದಿನ ಚಿಕ್ಕನಾಯಕನಹಳ್ಳಿ, ತಿಪಟೂರು ತಾಲೂಕುಗಳನ್ನು ಒಳಗೊಂಡ ಮಗರೆ ೩೦೦ನ್ನು ಆಳ್ವಿಕೆ ಮಾಡುತ್ತಿದ್ದರು. ಮುದ್ದೇನಹಳ್ಳಿ, ಹೆಗ್ಗೆರೆ, ಕಂಪನಹಳ್ಳಿ, ಬ್ಯಾಲಕೆರೆ, ಹುಳಿಯಾರು, ತಂಡಗ, ದೊಡ್ಡಬಿದರಹಳ್ಳಿ, ಕೋರಗೆರೆ, ಡಿಂಕನಹಳ್ಳಿ, ನೇರ್ಲಕೆರೆ, ಮೊರಳೆ, ಮೋಟೆಹಳ್ಳಿ, ಬೂದಿಹಾಳು ಶಾಸನಗಳಲ್ಲಿ ಮಾಚಿದೇವನ ಮಾಂಡಲಿಕತನ ಕಂಡುಬರುತ್ತದೆ. ಹುಳಿಯೂರು ಮಗರೆ ನಾಡಿನ ನೆಲೆವೀಡಾಗಿ ಹೆಸರು ಪಡೆದಿತ್ತು[೧೮೩] ಈ ಮನೆತನದಲ್ಲಿ ಕ್ರಮವಾಗಿ ಕರಿಬೊಮ್ಮ, ಅವಹಮಲ್ಲ, ಭೀಮ, ಮಾಚ, ಮಲ್ಲ, ‐ದೋವಿದೇವ, ಚಟ್ಟಮ, ಬಲ್ಲ, ಕಪ್ಪಯ್ಯ, ನಾರಸಿಂಗ, ಚಿಕ್ಕಕಲ್ಲಯ್ಯ, ಲಕುಮಯ್ಯರು ಆಳ್ವಿಕೆ ನಡೆಸಿದ್ದಾರೆ.

೨. **ಅದಳನಾಡಿನ ಸಾಮಂತರು:** ಕೈದಾಳದಲ್ಲಿ ದೊರೆತ ಕ್ರಿ.ಶ. ೧೧೫೧ರ ಶಾಸನದಿಂದ[೧೮೪] ಅದಳನಾಡಿನ ಸಾಮಂತರು ಹೊಯ್ಸಳರ ಸಾಮಂತರಾಗಿ ಮಗರೆ-೩೦೦ ಪ್ರದೇಶವನ್ನು, ಅಂದರೆ ಇಂದಿನ ತುಮಕೂರಿನ, ಹರಳೂರು, ದಿಬ್ಬೂರು, ಸೀತಕಲ್ಲು, ಕೈದಾಳ, ಮೆಳೆಯಕೋಟೆ, ಭೀಮಸಮುದ್ರ, ಕಿತ್ತವಳ್ಳಿ, ಕನ್ನೆಗೆರೆ ಮೊದಲಾದ ಗ್ರಾಮಗಳನ್ನು ಆರಂಭದ ಹೊಯ್ಸಳ ಅರಸರ ಕಾಲದಿಂದಲೂ ಆಳ್ವಿಕೆ ಮಾಡುತ್ತಿದ್ದರೆಂದು ತಿಳಿಯುತ್ತದೆ. ಆದರೆ ಐತಿಹಾಸಿಕ ದಾಖಲೆಗಳ ಕೊರತೆಯಿಂದ ಸ್ಪಷ್ಟ ಚಿತ್ರಣ ತಿಳಿದು ಬರುವುದಿಲ್ಲ. ಸಾಮಂತ ಗೂಳಿಬಾಚಿ ವಿಷ್ಣುವರ್ಧನನ ಕಾಲದಿಂದ ಅಂದರೆ ೧ನೆಯ ನರಸಿಂಹನ ಕಾಲದಲ್ಲಿ ಕೈದಾಳ ಪಟ್ಟಣವನ್ನು ರಾಜಧಾನಿಯನ್ನಾಗಿ ಮಾಡಿಕೊಂಡು ಇಂದಿನ ತುಮಕೂರು ಕುಣಿಗಲ್, ಗುಬ್ಬಿ[೧೮೫] ತಾಲೂಕುಗಳವರೆಗೆ ವಿಸ್ತರಿಸಿದ್ದನು. ರಾಜ್ಯವನ್ನು ಕೈದಾಳಿನ ಹುಲಿಬೇಟೆ ಶಿಲ್ಪ ಬಾಚಿಯ

ಬಂಟನಾದ ಚಂದನದ್ದೆಂದು ತಿಳಿಸುತ್ತದೆ. ಸೇನಬೋವ ಮಾರಮ್ಮನು ಬಾಚಿಯ ಅಧಿಕಾರಿಯಾಗಿದ್ದನು. ಬಾಚಿಯ ಕೈದಾಳ ಶಾಸನದಲ್ಲಿ ಕ್ರಮವಾಗಿ ಬಾಸಯ, ಗುಡ್ಡದಗಂಗ, ನಾಯಕಬಸವ, ಗಂಗ, ಬಸವೆಯ ಚಲವರಿವ, ಇಮ್ಮಡಿಗಂಗ, ಬಾಚಿ, ಚೆನ್ನವ್ವ ನಾಯಕಿಯರು ಅದಳನಾಡಿನ ವಂಶಜರೆಂಬ ಉಲ್ಲೇಖವಿದೆ.

೩. ಬಿಳಿಗೆರೆ ಸಾಮಂತರು

ಹೊಯ್ಸಳ ಪ್ರಭುತ್ವವು ಹಲವು ಸಾಮಂತ ಮನೆತನಗಳ ಮೂಲಕ ವಿಶಾಲ ಪ್ರಾಂತ್ಯವನ್ನು ಆಳ್ವಿಕೆ ನಡೆಸಿದ್ದು ಇಂದಿಗೂ ಅದೆಷ್ಟೊ ಮನೆತನಗಳ ಸಂಗತಿಗಳು ಅಜ್ಞಾತವಾಗಿಯೇ ಉಳಿದಿವೆ. ಅಂತಹವುಗಳಲ್ಲಿ ಇಂದಿನ ತಿಪಟೂರು ತಾಲೂಕಿನ ಬಿಳಿಗೆರೆಯನ್ನು ರಾಜಧಾನಿಯಾಗಿ ಆಳಿದ ಸಾಮಂತ ಮಾಚಯ್ಯನ ವಂಶಜರ ಚರಿತ್ರೆಯೂ ಒಂದಾಗಿದೆ.

ಬಿಳಿಗೆರೆಯಲ್ಲಿ ಆಳ್ವಿಕೆ ನಡೆಸಿದ ಹೊಯ್ಸಳರ ಸಾಮಂತರಲ್ಲಿ ಮಾಚಯ್ಯನು ಮೊದಲ ವ್ಯಕ್ತಿಯಾಗಿದ್ದಾನೆ. ಈತನ ಉಲ್ಲೇಖ ಕ್ರಿ.ಶ. ೧೦೭೯ರ ಬಿಳಿಗೆರೆ ಶಾಸನ, ಕ್ರಿ.ಶ. ೧೦೭೯ರ ಹಟ್ಲ ಶಾಸನ, ಕ್ರಿ.ಶ. ೧೧೩೯ರ ಬಿಳಿಗೆರೆ ಶಾಸನಗಳಲ್ಲಿ ದೊರೆಯುತ್ತವೆ. ಕ್ರಿ.ಶ. ೧೦೭೯ರ ಬಿಳಿಗೆರೆ ಶಾಸನ[೧೮೬] ಅರಕೆರೆ, ಕರಿವಿಡಿ, ಬೆಳುಗೆರೆ, ಕುಂದೂರು, ಬಾಳಸಮುದ್ರ, ಆವಾಳು ಮೊದಲಾದ ಗ್ರಾಮಗಳನ್ನು ಮಾಚಯ್ಯನ ಸಂಬಂಧಿ ಗಂಡರಾಧಿತ್ಯ ಆಳ್ವಿಕೆ ಮಾಡುತ್ತಿದ್ದನೆಂದು ಉಲ್ಲೇಖಿಸಿದೆ. ಈತನ ನಂತರ ಸುಬ್ಬಯ್ಯ ಸಾಂತಯ್ಯರು ಅಧಿಕಾರ ನಡೆಸಿದರು. ಈತನ ನಂತರ ಬುವಯ್ಯ, ಮಾರಯ್ಯರು, ಅಧಿಕಾರ ಚಲಾಯಿಸಿದರು. ಹೀಗೆ ಸುಮಾರು ಒಂದು ಶತಮಾನಕ್ಕೂ ಹೆಚ್ಚು ಕಾಲ ಹೊಯ್ಸಳರ ಸಾಮಂತರಾಗಿ ಅರಕೆರೆ, ಕಾಳಿಗುಂಡು, ಕರಿವಿಡಿ, ಬೆಲುಗೆರೆ, ಕುಂದೂರು, ಬಾಳಸಮುದ್ರ, ಕಿಬ್ಬನಹಳ್ಳಿ, ಬೆಳುವರಿ, ಹಿಂಚನೂರು, ಮನಂಬಾರು, ಕರಡಿಹಾಳು, ಅರಳಗುಪ್ಪೆ, ಈಡಗೂರು, ಹಟ್ಲ ಮೊದಲಾದ ಗ್ರಾಮಗಳನ್ನು ತಮ್ಮ ನಿಯಂತ್ರದಲ್ಲಿಟ್ಟುಕೊಂಡು ಗ್ರಾಮ ಮಟ್ಟದಲ್ಲಿ ಕೋಟೆಗಳ ನಿರ್ಮಾಣಕ್ಕೆ ನಾಂದಿಹಾಡಿದರು.

೪. ಶೆಟ್ಟಿಕೆರೆಯ–ಗೋಪಾಲದಂಡ ನಾಯಕ

ಹೊಯ್ಸಳರು ತನ್ನ ಮಂತ್ರಿಗಳಿಗೂ ಹಲವು ಪ್ರದೇಶಗಳನ್ನು ಉಂಬಳಿ ನೀಡಿ ಅವುಗಳ ಮೇಲ್ವಿಚಾರಣೆ ನೋಡಿಕೊಳ್ಳಲು ಸೂಚಿಸುತ್ತಿದ್ದರೆಂಬುದು ಗೋಪಾಲದಂಡ ನಾಯಕನ ಉಲ್ಲೇಖದಿಂದ ತಿಳಿಯುತ್ತದೆ. ನಾಚರಸ ಮತ್ತು ಸೋಮಲಾದೇವಿಯ ಮಗನಾಗಿ ಮಾದವಿ ಎಂಬಾಕೆಯನ್ನು ವರಿಸಿದ್ದನು. ಈತನ ಆಳ್ವಿಕೆಯ ಮೇಲೆ ಅಲ್ಬೂರು ಮತ್ತು ಶೆಟ್ಟಿಕೆರೆ ಶಾಸನಗಳು ಬೆಳಕು ಚೆಲ್ಲುತ್ತವೆ. ಕ್ರಿ.ಶ. ೧೨೭೨ರ ಶೆಟ್ಟಿಕೆರೆ ಶಾಸನ[೧೮೭] ದೊರೆಯಿಂದ ಪಡೆದ ಶೆಟ್ಟಿಕೆರೆ ಮತ್ತು ಅದರ ಸುತ್ತಲಿನ ಹಳ್ಳಿಗಳನ್ನು ಸೇರಿಸಿ ಶ್ರೀಭರಿತಪ್ರಕಾಶಪುರವೆಂಬ ಅಗ್ರಹಾರವನ್ನು ನಿರ್ಮಿಸಿದನು. ಅಲ್ಲದೆ ಶೆಟ್ಟಿಕೆರೆಯಲ್ಲಿ ಯೋಗಮಾಧವ ದೇವಾಲಯ ಮತ್ತು ಮಠವನ್ನು ಕಟ್ಟಿಸಿ ಜನಸಾಮಾನ್ಯರಿಗೆ ಧಾರ್ಮಿಕ ಮತ್ತು ಸಾಂಸ್ಕೃತಿಕ ಮೌಲ್ಯಗಳ ಅರಿವನ್ನು ಮೂಡಿಸಲು ಪ್ರಯತ್ನಿಸಿದನು.

೫. ಬಲ್ಲಪ್ಪ ದಂಡ ನಾಯಕ ವಂಶೀಯರು (ಕ್ರಿ.ಶ.೧೨೯೧–೧೩೭೭)

ಮುಮ್ಮಡಿ ಬಲ್ಲಾಳನಿಂದ ಹಿಡಿದು ವಿಜಯನಗರದ ಒಂದನೆಯ ಬುಕ್ಕರಾಯನವರೆಗೂ, ತುಮಕೂರು, ಬೆಂಗಳೂರು, ಕೋಲಾರ, ರಾಮನಗರ ಮೊದಲಾದ ಕೆಲವು ಜಿಲ್ಲೆಗಳಲ್ಲಿ ಇವರ ವಂಶೀಯರ ಶಾಸನಗಳು ದೊರೆಯುವುದರಿಂದ ಅಲ್ಲಲ್ಲಿ ಸ್ಥಳೀಯವಾಗಿ ಆಳ್ವಿಗೆ ನಡೆಸಿದ್ದಿರುವ ಸಾಧ್ಯತೆಗಳಿವೆ.

೧. ಸೋಮೆಯ ದಂಡನಾಯಕ: (ಕ್ರಿ.ಶ. ೧೨೫೮–೧೩೦೩)

ಸೋಮೆಯ ದಂಡನಾಯಕನ ತುರುವೇಕೆರೆಯ ಕ್ರಿ.ಶ. ೧೨೫೮ರ ಶಾಸನ[೧೮೮] ತುರುವೇಕೆರೆಯನ್ನು ವಿಜಯನಾರಸಿಂಹಪುರವೆಂದು ಪ್ರತಿನಾಮ ಮಾಡಿದ್ದನ್ನು, ಕ್ರಿ.ಶ. ೧೨೬೩ರ ಶಾಸನ[೧೮೯] ತುರುವೇಕೆರೆಯನ್ನು ೯೫ ವೃತ್ತಿಗಳನ್ನಾಗಿ ವಿಭಜಿಸಿದ್ದನ್ನು ತಿಳಿಸುತ್ತವೆ.

೨. ಬಲ್ಲಪ್ಪ ದಂಡ ನಾಯಕ (ಕ್ರಿ.ಶ. ೧೨೯೧–೧೩೪೩)

ಈತನ ಹೆಸರಿನಲ್ಲೇ ಈ ವಂಶೀಯರು ಗುರುತಿಸಿಕೊಂಡರೂ ಆತನಿಗೆ ಸಂಬಂಧಿಸಿದಂತೆ ಹಾಗೂ ಈತನ ಸಮಕಾಲೀನನಾದ ಸಿಂಗೆಯ ದಂಡನಾಯಕನ ಅವಶೇಷಗಳೇನು ತುಮಕೂರು ಜಿಲ್ಲೆಯಲ್ಲಿ ದೊರೆತಿಲ್ಲ.

ಶೀಬಿಯ ಶಾಸನ ಇರುಗಿ ಶೆಟ್ಟಿ ಶಿವೈಕ್ಯನಾದ ಸಂಗತಿಯನ್ನು ಬೆಳವಾಡಿ ಶಾಸನ ಮಲ್ಲಿ ದೇವನನ್ನು ಉಲ್ಲೇಖಿಸುತ್ತವೆ.

೬. ಚಿಕ್ಕ ಕೇತಯ್ಯ

ಹೊಯ್ಸಳರ ಮೂರನೆಯ ನರಸಿಂಹನ ಸಮಕಾಲೀನನಾದ ಈತ ಆನೆಬಿದ್ದಸರಿಯಲ್ಲಿ ಆಳ್ವಿಕೆ ನಡೆಸುತ್ತಿದ್ದನೆಂದು ತುಮಕೂರು ಮತ್ತು ತುರುವೇಕೆರೆ, ಕಸಬಾ ಶಾಸನಗಳಿಂದ ತಿಳಿಯುತ್ತದೆ. ಈತನ ನಂತರ ಚಕ್ಕರೆ ದಂಡ ನಾಯಕನನ್ನು ಹಲ್ಲೂರಿನ ಶಾಸನ ಉಲ್ಲೇಖಿಸುತ್ತದೆ. ಇದೇ ಮನೆತನದವರು ಸುಮಾರು ಒಂದು ಶತಮಾನದ ಕಾಲ ತಮ್ಮ ಸೇವೆಯನ್ನು ಹೊಯ್ಸಳ ಮತ್ತು ವಿಜಯನಗರದ ಅರಸರಿಗೆ ಸಲ್ಲಿಸಿದ್ದಾರೆ.

೭. ಕಳಕಟ್ಟೆ ಸಾಮಂತರು

ಮಗರೆ ಮುನ್ನೂರು ಪ್ರಾಂತ್ಯದಲ್ಲಿ ಬರುವ ಕಳಕಟ್ಟೆಯು ಇಂದಿನ ಹೊಸದುರ್ಗ ತಾಲೂಕಿನಲ್ಲಿದ್ದರೂ ಇದರ ಆಡಳಿತ ಕೇಂದ್ರ ಇಂದಿನ ಹುಳಿಯಾರು ಪಟ್ಟಣ ಆಗಿತ್ತು. ಅಲ್ಲದೆ ಚಿಕ್ಕನಾಯಕನಹಳ್ಳಿಯ ಹಲವು ಗ್ರಾಮಗಳು ಇದರ ಅಧೀನದಲ್ಲಿದ್ದವು. ಈ ಮನೆತನದವರಲ್ಲಿ ಸಾಮಂತ ಗೋವಿದೇವ ಕಳಕಟ್ಟೆಯಿಂದ ಹುಳಿಯೂರಿಗೆ ಆಡಳಿತ ಕೇಂದ್ರವನ್ನು ಬದಲಾಯಿಸಿದನೆಂದು ಕ್ರಿ.ಶ. ೧೧೫೦ರ ತಂಡಗ ಶಾಸನದಿಂದ[೧೯೦] ತಿಳಿಯುತ್ತದೆ. ಅಲ್ಲದೆ ತನ್ನ ಅಣ್ಣ ಚಟ್ಟನ ಮಗನ ಸಹಾಯದಿಂದ ೧೧೬೧ರಲ್ಲಿ ಚನ್ನಪಾರ್ಶ್ವ ಹಾಗೂ ಹಗೆರೆಯ

ಬಸದಿಗಳನ್ನು ನಿರ್ಮಿಸಿದನು. ಈತನ ನಂತರ ಆಳ್ವಿಕೆ ನಡೆಸಿದ ಮಾಚೆಯನಾಯಕನನ್ನು ಚಿಕ್ಕನಾಯಕನಹಳ್ಳಿಯ ಎಂಟು ಶಾಸನಗಳು ಉಲ್ಲೇಖಿಸುತ್ತವೆ.

೮. ವಾಜಿವಂಶದ ಮಾಂಡಳಿಕರು

ಚಾಳುಕ್ಯರ ಒಂದನೆಯ ಸೊಮೇಶ್ವರನ ಮಹರಾಷ್ಟ್ರದ ತಡಬೇಲ ಶಾಸನದಲ್ಲಿ ವಾಜಿ ಮನೆತನದ ನಾಗವರ್ಮ ಮತ್ತು ಅವನ ತಮ್ಮ ಮಾದಿರಾಜರು ಚಾಳುಕ್ಯರ ದಂಡನಾಯಕರಾಗಿದ್ದರೆಂದು ಉಲ್ಲೇಖವಿದೆ. ಹೊಯ್ಸಳರು ಪದೇ ಪದೇ ಸೇವುಣ ಮತ್ತು ಚಾಳುಕ್ಯರ ಮೇಲೆ ದಾಳಿ ಮಾಡುತ್ತಿದ್ದರಿಂದ ಈ ಮನೆತನ ದಕ್ಷಿಣಕ್ಕೆ ಬಂದಿರುವ ಸಾಧ್ಯತೆಗಳಿವೆ. ಆದುದರಿಂದಲೇ ಗುಬ್ಬಿಯ ಬಳಿಯ ಕ್ರಿ.ಶ. ೧೧೬೩ರ ಆಲಧಗೆರೆ ಶಾಸನ[೧೧] ನಾಗವರ್ಮ ಮತ್ತು ಅವನ ಮಕ್ಕಳಾದ ಹುಳ್ಳಮ, ಲಕ್ಷ್ಮಣ, ಅಮರೇಶ್ವರ ಎಂಬುವವರನ್ನು ಉಲ್ಲೇಖಿಸಿದ್ದು ಅವರಲ್ಲಿ ಒಬ್ಬ ತ್ಯಾಗಟೂರು-೧೨ ಎಂಬ ವಿಭಾಗವನ್ನು ನೋಡಿಕೊಳ್ಳುತ್ತಿದ್ದನೆಂದು ತಿಳಿಸುತ್ತದೆ. ಈ ಮನೆತನವನ್ನು ತಿಳಿಸುವ ಶಾಸನಗಳು ಜಿಲ್ಲೆಯಲ್ಲಿ ಹೆಚ್ಚಾಗಿ ದೊರೆಯದಿರುವ ಕಾರಣ ಇವರ ಬಗೆಗೆ ಸ್ಪಷ್ಟತೆ ನೀಡಲು ಸಾಧ್ಯವಾಗುತ್ತಿಲ್ಲ.

೨.೪.೧೪. ಕಾಕತೀಯರು

ಕಾಕತೀಯರಿಗೆ ಸಂಬಂಧಿಸಿದಂತೆ ತುಮಕೂರು ಜಿಲ್ಲೆಯಲ್ಲಿ ಮುಳುಕುಂಟೆ ಎಂಬಲ್ಲಿ ಮಾತ್ರ ಶಾಸನ ಒಂದು ದೊರೆತಿದ್ದು, ಅದೂ ಸಹ ಮೂಲ ಶಾಸನದ ನಕಲು ಪ್ರತಿ ಆಗಿರುವುದರಿಂದ ಅಸ್ಪಷ್ಟ ಮಾಹಿತಿಯೇ ಹೆಚ್ಚಾಗಿದೆ. ಪ್ರತಾಪರುದ್ರನು ಕುಕುದ್ದಿಗಿ(ಶಿವಗಂಗೆ)[೧೨]ಗೆ ಭೇಟಿ ನೀಡಿ ಹೊನ್ನುಡಿಕೆ ಮತ್ತು ಅಲ್ಲಿಯ ಸುತ್ತಲಿನ ಪ್ರದೇಶಗಳನ್ನು ಸೇರಿಸಿ ಅಗ್ರಹಾರವನ್ನು ಮಾಡಿದನೆಂದು ತಿಳಿಸುತ್ತದೆ. ಈ ಶಾಸನವನ್ನು ಗಮನಿಸಿದರೆ ಕಾಕತೀಯರೇ ೭೭ ಪಾಳೇಯಗಾರರ ಹುಟ್ಟಿಗೆ ಕಾರಣೀಭೂತರೆಂದು ತಿಳಿಯುತ್ತದೆ. ಅಂದರೆ ಸಾಮ್ರಾಜ್ಯದ ಅಧಿಕಾರವನ್ನು ವಿಕೇಂದ್ರೀಕರಿಸಿ ವಿದೇಶಾಂಗ ನೀತಿಯನ್ನು ಬಿಟ್ಟು ಉಳಿದೆಲ್ಲ ಸ್ವಾತಂತ್ರ್ಯವನ್ನು ಅವರಿಗೆ ನೀಡಿ ಆಪತ್ಕಾಲದಲ್ಲಿ ಕೇಂದ್ರಕ್ಕೆ ಸೈನಿಕ ನೆರವನ್ನು ಒದಗಿಸುವಂತಹ ವ್ಯವಸ್ಥೆಯನ್ನು ಹುಟ್ಟುಹಾಕಿದರು. ಇದೇ ವ್ಯವಸ್ಥೆಯನ್ನು ಮುಂದೆ ವಿಜಯನಗರದ ಅರಸರ ಕಾಲದಲ್ಲಿ ಅಮರನಾಯಕನಲ್ಲಿ ಕಾಣಬಹುದಾಗಿದೆ.

೨.೪.೧೫. ವಿಜಯನಗರ ಸಾಮ್ರಾಜ್ಯ

ತುಮಕೂರು ಜಿಲ್ಲೆಯಲ್ಲಿ ವಿಜಯನಗರದ ಆರಂಭದ ಅರಸರ ಕಾಲದಿಂದಲೂ ಮೂರನೆಯ ಶ್ರೀರಂಗನವರೆಗಿನ ಶಾಸನಗಳಲ್ಲಿನ ಸಾಂಸ್ಕೃತಿಕ, ಧಾರ್ಮಿಕ, ಸಾಮಾಜಿಕ ಹಾಗೂ ಐತಿಹಾಸಿಕ ಸಂಗತಿಗಳನ್ನು ಕ್ಷೇತ್ರಕಾರ್ಯ ಹಾಗೂ ವಿಜಯನಗರ ಸಾಮ್ರಾಜ್ಯದ ಏಳಿಗೆಯಲ್ಲಿ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಯಪಟ್ಟುಗಳ ಪಾತ್ರವನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ಕ್ರಿ.ಶ. ೧೩೪೬ರಲ್ಲಿ[೧೯೩] ಉದಯವಾದ ವಿಜಯನಗರ ಸಾಮ್ರಾಜ್ಯ ದಕ್ಷಿಣ ಭಾರತದ ರಾಜಕೀಯ ಪ್ರತಿಭೆಯ ಉಚ್ಛ್ರಾಯ ಕಾಲವಾಗಿದೆ. ಹರಿಹರ, ಬುಕ್ಕ, ಕಂಪಣ, ಮಾರಪ್ಪ, ಮುದ್ದಪ್ಪ ಎಂಬ ಐವರು ಸೋದರರಿಂದ ಸ್ಥಾಪಿಸಲ್ಪಟ್ಟು, ಸುಮಾರು ಕ್ರಿ.ಶ. ೧೬೭೪ರವರೆಗೆ ಸಂಗಮ, ಸಾಳ್ವ, ತುಳು, ಅರವೀಡು ಎಂಬ ನಾಲ್ಕು ಮನೆತನಗಳು ವಿಶಾಲ ರಾಜ್ಯವನ್ನು ಆಳ್ವಿಕೆ ಮಾಡಿ ಸಾಂಸ್ಕೃತಿಕವಾಗಿ ಶ್ರೀಮಂತಿಕೆಗೆ ಕಾರಣರಾಗಿದ್ದಾರೆ. ಹೀಗೆ ಆಳ್ವಿಕೆ ನಡೆಸಿದ ವಿಜಯನಗರ ಅರಸರ ಸಾಮಂತರಾಗಿ ಜಿಲ್ಲೆಯಲ್ಲಿ ಮಹಾನಾಡಪ್ರಭುಗಳು, ಹಾಗಲವಾಡಿ ನಾಯಕರು, ನಿಡುಗಲ್ಲು ನಾಯಕರು, ಸಿರಾ ಪಾಳೆಯಗಾರರು, ಕುಂದುರ್ಪಿ ವಂಶಸ್ಥರು, ಅಧಿಕಾರಿಗಳು, ದಂಡನಾಯಕರು ಕೊನೆಯವರೆಗೂ ತಮ್ಮ ನಿಷ್ಠೆಯನ್ನು ತೋರಿಸಿ ಅವರ ಹೆಸರಿನಲ್ಲೇ ಕೆರೆ-ಕಟ್ಟೆ, ಬಾವಿ, ದೇವಾಲಯ, ಕೋಟೆ-ಕೊತ್ತಲ ಕಟ್ಟಿಸಿರುವುದು ಶಾಸನಗಳಿಂದ ತಿಳಿಯುತ್ತದೆ. ವಿಜಯನಗರದ ನಿರಂತರ ರಾಜಕೀಯ ಸಂಘರ್ಷಗಳಿಗೆ ಬೇಕಾಗುವ ಸೈನ್ಯ, ಆಯುಧೋಪಕರಣ, ಉತ್ತಮ ತಳಿಯ ರಾಸುಗಳು, ಆಹಾರ ಧಾನ್ಯ, ವಿಶೇಷವಾಗಿ ಕೃಷ್ಣದೇವರಾಯನ ಅಮುಕ್ತಮಾಲ್ಯದ ಕೃತಿ ಉಲ್ಲೇಖಿಸುವ ಕೋಟೆ ಕಾಳಗಕ್ಕೆ ಬೇಕಾದ ತರಬೇತಿ ಪಡೆದ ಬೇಡ ಪಡೆಯನ್ನು ಜಿಲ್ಲೆಯ ಪಾಳೆಯಪಟ್ಟುಗಳಿಂದಲೂ ನೀಡಲಾಗುತ್ತಿತ್ತೆಂಬುದು ಜಿಲ್ಲೆಯಲ್ಲಿ ನಿರ್ಮಾಣಗೊಂಡಿರುವ ಪಾಳೆಯಗಾರರ ಕಾಲದ ಸುಮಾರು ೨೦೦ಕ್ಕೂ ಹೆಚ್ಚು ಕೋಟೆ ಕೊತ್ತಲಗಳಿಂದ ತಿಳಿಯುತ್ತದೆ.

ಹೊಯ್ಸಳ ಸಾಮ್ರಾಜ್ಯದ ಅವಸಾನದ ನಂತರ ಅವರ ಮುಂದುವರಿಕೆಯ ಭಾಗವಾಗಿ ವಿಜಯನಗರ ಸಾಮ್ರಾಜ್ಯ ಅಧಿಕಾರಕ್ಕೆ ಬಂದಿತ್ತು. ಆದುದರಿಂದ ಸಹಜವಾಗಿಯೇ ಹೊಯ್ಸಳ ಮಂಡಲದ ಭಾಗವಾಗಿದ್ದ ತುಮಕೂರು ಜಿಲ್ಲೆಯು ಸಹ ವಿಜಯನಗರದ ಅರಸರ ಸಾರ್ವಭೌಮತ್ವದಡಿಯಲ್ಲಿ ವೇಂಠೆ, ನಾಡು, ಸೀಮೆ, ಗ್ರಾಮಗಳ ಸಮೂಹ, ಗ್ರಾಮಗೌಡಿಕೆಗಳಲ್ಲಿ ಅಧಿಕಾರ ವಿಭಜನೆಯಾಗಿದ್ದದ್ದು ಜಿಲ್ಲೆಯಲ್ಲಿ ದೊರೆತ ಅವರ ಕಾಲದ ೨೫೬ಕ್ಕೂ ಹೆಚ್ಚು ಶಾಸನಗಳಿಂದ ಗೋಚರವಾಗುತ್ತದೆ. ಇಷ್ಟೂ ಶಾಸನಗಳನ್ನು ಅಧ್ಯಯನಕ್ಕೆ ಒಳಪಡಿಸಿದಾಗ ವಿಜಯನಗರ ಕಾಲಘಟ್ಟಕ್ಕಾಗಲೇ ಜಿಲ್ಲೆಯಲ್ಲಿ ಗ್ರಾಮಮಟ್ಟದಲ್ಲೆಲ್ಲಾ ಕೋಟೆಗಳ ನಿರ್ಮಾಣ ಆರಂಭವಾಗಿದ್ದಂತೆ ಕಾಣುತ್ತದೆ. ಏಕೆಂದರೆ ಇವರ ಕಾಲದ ಶಾಸನಗಳಲ್ಲಿ ಉಕ್ತವಿರುವ ಆಡಳಿತ ಕೇಂದ್ರಗಳಾದ ಗ್ರಾಮ, ಪಟ್ಟಣ, ನಗರಗಳನ್ನು ಸೂಕ್ಷ್ಮವಾಗಿ ವಿಶ್ಲೇಷಣೆಗೊಳಪಡಿಸಿದಾಗ ನೈಜ ಅಂಶ ಬೆಳಕಿಗೆ ಬರುತ್ತದೆ. ಅಂದರೆ ಸ್ಥಳನಾಮ, ಸ್ಥಳಪುರಾಣ, ಶಾಸನಗಳಲ್ಲಿ ಉಲ್ಲೇಖವಿರುವ ವ್ಯಾಪಾರಿ ಕೇಂದ್ರಗಳನ್ನು ಗಮನಿಸಿದರೆ ವಿಜಯನಗರ ಕಾಲದ ಜಿಲ್ಲೆಯ ಬಹುತೇಕ ಪಾಳೆಯಪಟ್ಟುಗಳು, ವ್ಯಾಪಾರಸ್ಥರು ಚಿನ್ನದ ಗಣಿಗಾರಿಕೆ ಅಥವಾ ಉದ್ಯಮವನ್ನು ನಡೆಸುತ್ತಿದ್ದರು ಎಂಬುದು ಗೋಚರಿಸುತ್ತದೆ. ಏಕೆಂದರೆ ಇವರ ಆಳ್ವಕೆಗೆ ಒಳಪಟ್ಟ ಜಿಲ್ಲೆಯ ಹೊನ್ನೆನಹಳ್ಳಿ, ಹೊನ್ನವಳ್ಳಿ, ಪೊನ್ನಸಮುದ್ರ, ರತ್ನಗಿರಿ, ಬೆನಕವಜ್ರ, ಬಂಗಾರನಾಯಕನದುರ್ಗ,

ಬಂಗಾರುಕೊಂಡ, ಕಾಳಾಂಜನಗಿರಿ, ಕನಕಗಿರಿ, ಸುವರ್ಣಗಿರಿ, ಕನಕಾದ್ರಿ, ಬೆಳ್ಳಿಬೆಟ್ಟಲು ಎಂಬಂತಹ ಹಲವು ಹಳ್ಳಿ, ಪಟ್ಟಣಗಳ ಸ್ಥಳನಾಮಗಳನ್ನು ವಿಶ್ಲೇಷಿಸಿದರೆ ಇವು ಚಿನ್ನದ ವ್ಯಾಪಾರಿ ಕೇಂದ್ರಗಳಾಗಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ಜಿಲ್ಲೆಯ ಕನ್ನಮೇಡಿಯ ರೈತರು ಹಿಂದೆ ಚಿನ್ನದಮೇಡಿ ಹೊಂದಿದ ನೇಗಿಲಿನಿಂದ ಉಳುಮೆ ಮಾಡುತ್ತಿದ್ದರೆಂಬ, ಬಂಗಾರನಾಯಕನು ನಿಡುಗಲ್ಲು ಪಾಳೆಯಗಾರರಿಂದ ೧೨ ಪಡಿ ಚಿನ್ನವನ್ನು ಉಂಬಳಿಯಾಗಿ ಪಡೆದು ಅದರ ರಕ್ಷಣೆಗಾಗಿ ಅತ್ಯಾಧುನಿಕ ಕೋಣೆಯನ್ನು ನಿರ್ಮಿಸಿದ್ದರೆಂದು, ಕಡಗತ್ತೂರಿನ ಜನರು ಒಮ್ಮೆ ಶತ್ರುಗಳಿಂದ ರಕ್ಷಣೆ ಪಡೆಯಲು ತಮ್ಮ ಚಿನ್ನದ ಕೈಗಡಗಳನ್ನೆಲ್ಲಾ ಶತೃಗಳ ಮೇಲೆ ಎಸೆದರೆಂಬ, ಚಿಕ್ಕ ಮತ್ತು ದೊಡ್ಡ ಮಾಲೂರಿನ ಹೊಲೆಯ ಜನಾಂಗದಿಂದ ರತ್ನಗಿರಿ ಅರಸರು ಮೋಸದಿಂದ ಮುತ್ತು, ರತ್ನ, ವಜ್ರ, ವೈಡೂರ್ಯಗಳನ್ನು ಪಡೆದರೆಂಬಂತಹ ಹಲವು ಗ್ರಾಮಗಳಲ್ಲಿನ ಚಿನ್ನದ ಮೂಲವನ್ನು ತೋರ್ಪಡಿಸುವ ಐತಿಹ್ಯಗಳನ್ನು ಜಿಲ್ಲೆಯ ಹಲವು ಗ್ರಾಮಗಳಲ್ಲಿ ಕಾಣಬಹುದು.

ಸಂಗಮ ಮನೆತನ : (ಕ್ರಿ.ಶ. ೧೩೪೬–೧೪೮೫)

ಸಂಗಮನ ಐದು ಮಕ್ಕಳಲ್ಲಿ ಹರಿಹರನು ಹೋಯ್ಸಳ ಮಂಡಲವನ್ನು ನೋಡಿಕೊಳ್ಳುತ್ತಿದ್ದರೂ ಆತನಿಗೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ಯಾವುದೇ ಕುರುಹುಗಳು ದೊರೆಯುವುದಿಲ್ಲ. ಮೊದಲನೆಯ ಬುಕ್ಕನೇ ತುಮಕೂರು ಜಿಲ್ಲೆಯಲ್ಲಿ ಉಲ್ಲೇಖಿಸಲ್ಪಟ್ಟ ಮೊದಲ ಅರಸನಾಗಿದ್ದಾನೆ. ಈತನನ್ನು ಶ್ರಾವಂಡನಹಳ್ಳಿ, ನಾಗಲಮಡಿಕೆ, ನಾಗಲಾಪುರ, ರಾಜವಂತಿ, ವಿರುಪಸಮುದ್ರ, ನಾದೂರು, ಹುಂಜನಾಳು ಶಾಸನಗಳು ಉಲ್ಲೇಖಿಸಿವೆಯಾದರೂ ಅಸ್ಪಷ್ಟ ಮಾಹಿತಿಗಳೇ ಹೆಚ್ಚಾಗಿವೆ. ಈತನ ನಂತರ ಬಂದ ವಿರುಪಣ್ಣನ ಮೇಲೆ ಸಂಪಿಗೆ ಶಾಸನ ಬೆಳಕು ಚೆಲ್ಲುತ್ತದೆ.

೧) **ಇಮ್ಮಡಿ ಹರಿಹರ** : ಈತನಿಗೆ ಸಂಬಂಧಿಸಿದಂತೆ ೧೨ ಶಾಸನಗಳು ದೊರೆತಿದ್ದು, ಅವುಗಳಲ್ಲಿ ಬಹುತೇಕವು ದೇವಾಲಯ, ಸಾಮಂತರು, ಮಾಂಡಳಿಕರು, ಪಾಳೆಯಗಾರರು, ಬ್ರಾಹ್ಮಣರು ಮೊದಲಾದವರಿಗೆ ದಾನ–ದತ್ತಿ ಬಿಟ್ಟ ಬಗೆಗೆ ಮಾಹಿತಿ ನೀಡುತ್ತವೆ. ಕ್ರಿ.ಶ. ೧೩೮೦ರ ನಾಗಸಂದ್ರ ಶಾಸನ[೧೪] ಹರಿಹರರಾಯರು ವಿಜಯನಗರದಲ್ಲಿ ಆಳ್ವಿಕೆ ಮಾಡುತ್ತಿರಲು ಆದವಾನಿದುರ್ಗದ ಮೇಲೆ ದಾಳಿ ಮಾಡಿದ ತುರುಕರನ್ನು ಅವರ ಮಗನಾದ ಮಲ್ಲಪ್ಪವೊಡೆಯರು ಧೈರ್ಯದಿಂದ ಹಿಮ್ಮೆಟ್ಟಿಸಿ ರಾಜ್ಯವನ್ನು ರಕ್ಷಿಸಿ ತನ್ನ ತಂದೆಯಾದ ಹರಿಹರರಿಗೆ ಮರಳಿಸಿದನೆಂದು ತಿಳಿಸುವ ಮಾಹಿತಿ ಐತಿಹಾಸಿಕವಾಗಿ ಮಹತ್ವವೆನಿಸಿಕೊಳ್ಳುತ್ತದೆ. ಏಕೆಂದರೆ ಪಾಳೆಯಪಟ್ಟುಗಳು ತಮ್ಮ ಸಾರ್ವಭೌಮನಿಗೆ ಸಲ್ಲಿಸುತ್ತಿದ್ದ ಸೇವೆಯ ಪರಿ ಹೇಗಿತ್ತೆಂಬುದು ಇದರಿಂದ ತಿಳಿಯುತ್ತದೆ. ಜೊತೆಗೆ ವಿಜಯನಗರದ ಅರಸರು ಸಾಮಂತರನ್ನು ತಮ್ಮ ಮಕ್ಕಳ ಸಮಾನರಂತೆ ಕಾಣುತ್ತಿದ್ದರೆಂಬುದು ಸಹ ಈ ಶಾಸನದಿಂದ ತಿಳಿಯುತ್ತದೆ.

೨) **ಇಮ್ಮಡಿ ಬುಕ್ಕರಾಯ** : ಜಿಲ್ಲೆಯಲ್ಲಿ ಬುಕ್ಕರಾಯನನ್ನು ತಿಳಿಸುವ ೩ ಶಾಸನಗಳಿದ್ದು, ಅವುಗಳಲ್ಲಿ ದೊಡ್ಡತೇಕಲವಟ್ಟಿಯ[೧೯೫] ಶಾಸನ ಬುಕ್ಕರಾಯನ ಒರುಗಲ್ಲು (ಒರಂಗಲ್) ಮುತ್ತಿಗೆ ಸಂದರ್ಭದಲ್ಲಿ ಆತನ ಅಮರನಾಯಕನಾದ ಬಾಚೆಯನಾಯಕನ ಮಗ ಕಂಪಣ್ಣನ ಬಂಟನಾದ ಸಾಳುವ ರಾಮದೇವನು ಕೊಂಡಪಲ್ಲಿಯಲ್ಲಿ ಕಾದುತ್ತಾ ಸತ್ತನೆಂದು ತಿಳಿಸುತ್ತದೆ. ಈ ಶಾಸನದಿಂದ ವಿಜಯನಗರ ಮತ್ತು ಬಹುಮನಿಗಳ ನಡುವೆ ತುಂಗಭದ್ರ ಮತ್ತು ಕೃಷ್ಣ ನದಿಗಳ ನಡುವೆ ದೋಆಬ್ ಪ್ರಾಂತ್ಯಕ್ಕಾಗಿ ಕಾದಾಟ ಆಗಲೇ ಆರಂಭವಾಗಿತ್ತೆಂಬುದು ಸ್ಪಷ್ಟವಾಗುತ್ತದೆ.

೩) **ಮೊದಲನೆಯ ದೇವರಾಯ** : ಈತನ ಸಾಧನೆಗಳನ್ನು ಕ್ರಿ.ಶ. ೧೪೦೫ರ ತುಂಡೋಣಿ ಶಾಸನ[೧೯೬] ವರ್ಣಿಸಿದೆ. ಕ್ರಿ.ಶ. ೧೪೦೫ರ ಪಾವಗಡ ಶಾಸನ ದೇವರಾಯನು ಗಡಿಗಳ ರಕ್ಷಣೆಗಾಗಿ ಅಮರನಾಯಕತನವನ್ನು ನೀಡಿ ಅಭೇದ್ಯ ಸ್ಥಳಗಳಲ್ಲಿ ಕೋಟೆ ನಿರ್ಮಿಸಲು ಅನುಮತಿ ನೀಡುತ್ತಿದ್ದನೆಂದು ತಿಳಿಸುತ್ತದೆ. ಈತನ ನಂತರ ಅಧಿಕಾರಕ್ಕೆ ಬಂದ ರಾಮಚಂದ್ರನನ್ನು ಕ್ಯಾತಗಾನಚರ್ಲು ಶಾಸನ ಉಲ್ಲೇಖಿಸಿದರೂ ಕೂಟ ಮಾಹಿತಿಯನ್ನು ಒಳಗೊಂಡಿದೆ.

೪) **ಪ್ರೌಢದೇವರಾಯ** : ಕ್ರಿ.ಶ. ೧೪೪೫ರ ಮೈದಾಳ ಶಾಸನ[೧೯೭] ದೇವರಾಯನ ಸಾಧನೆ, ಪರಾಕ್ರಮವನ್ನು ವರ್ಣಿಸಿದರೆ, ಉಳಿದ ೨ ಶಾಸನಗಳು ಕೆರೆ-ಕಟ್ಟೆ, ದೇವಾಲಯ ನಿರ್ಮಾಣ, ಇಲ್ಲವೆ ಅವುಗಳಿಗಾಗಿ ಅಥವಾ ಬ್ರಾಹ್ಮಣರಿಗೆ ದತ್ತಿ ಬಿಟ್ಟ ಹಾಗೂ ಹಳ್ಳಿಗಳನ್ನು ಗೌಡಿಕೆ ಬಿಟ್ಟ ವಿಷಯ ತಿಳಿಸುತ್ತವೆ. ಕೊಳಾಲದ ಶಾಸನ ಮಾತ್ರ ಪ್ರೌಢದೇವರಾಯನ ಕಾಲದ ಜಿಲ್ಲೆಯ ಮಹತ್ವದ ಶಾಸನವಾಗಿದೆ. ಏಕೆಂದರೆ ಕುದುರೆಗಳ ನಿರ್ವಹಣೆಗಾಗಿಯೇ ಪ್ರತ್ಯೇಕ ರೆಡ್ಡಿ ಸಮುದಾಯವೊಂದು ಆಂಧ್ರ ಭಾಗದಲ್ಲಿ ಇತ್ತೆಂದು, ದೇವರಾಯನು ರಾಜ್ಯದಲ್ಲಿ ಅಶ್ವಪಡೆಯನ್ನು ಹೆಚ್ಚಿಸುವುದಕ್ಕಾಗಿ ಪೆದ್ದಚೆನ್ನಪ್ಪರೆಡ್ಡಿ ಮೂಲಕ ಅವರ ರೆಡ್ಡಿ ವಂಶಜರ ಮೇಲಿದ್ದ ಅಧಿಕ ತೆರಿಗೆಯನ್ನು ರದ್ದುಪಡಿಸಿ ಅವರ ಒಲವನ್ನು ಗಳಿಸಿಕೊಳ್ಳಲು ಪ್ರಯತ್ನಿಸಿದ್ದನೆಂದು ಈ ಶಾಸನದಿಂದ ತಿಳಿಯುತ್ತದೆ.

ಸಾಳುವ ಮನೆತನ : (ಕ್ರಿ.ಶ. ೧೪೬೬-೧೫೦೫)

ಸಂಗಮ ಮನೆತನದ ಅಧೀನದಲ್ಲಿ ಆಳ್ವಿಕೆ ನಡೆಸುತ್ತಿದ್ದ ಸಾಳ್ವ ವಂಶಸ್ಥರು ವೀರ ಕಲಿಗಳಾಗಿ ಹಲವು ಯುದ್ಧಗಳಲ್ಲಿ ಜಯವನ್ನು ತಂದುಕೊಟ್ಟಿದ್ದರು. ಬಹುಶಃ ಈ ಕಾರಣಕ್ಕಾಗಿಯೇ ಸಂಗಮ ಮನೆತನದ ಅಸಮರ್ಥ ಕೊನೆಯ ಅರಸರನ್ನು ಮೂಲೆಗುಂಪು ಮಾಡಿ ಅಧಿಕಾರವನ್ನು ಕಸಿದುಕೊಂಡರು. ಸಾಳ್ವ ಮನೆತನದವರನ್ನು ಯಾವ ಮಾಂಡಳೀಕರು ಸಹ ಪ್ರತಿಭಟಿಸಲಿಲ್ಲ. ಈ ಮನೆತನದ ಮೊದಲ ಅರಸನಾದ ಸಾಳುವ ನರಸಿಂಹನ ಬಗ್ಗೆ ಶೀತಕಲ್ಲು ಶಾಸನ ತಿಳಿಸುತ್ತದೆ. ಈತನ ನಂತರ ಅಧಿಕಾರಕ್ಕೆ ಬಂದ ಇಮ್ಮಡಿ ನರಸಿಂಹನನ್ನು

ಉಲ್ಲೇಖಿಸುವ ೧೦ ಶಾಸನಗಳು ದೊರೆತಿದ್ದರೂ, ಅವು ಐತಿಹಾಸಿಕವಾಗಿ ಮಹತ್ವ ಪಡೆದಿಲ್ಲ. ಕೇವಲ ದೇವಾಲಯ ಇಲ್ಲವೆ ಅಮರನಾಯಕರಿಗೆ ದಾನ-ದತ್ತಿ ನೀಡಿದ ಮಾಹಿತಿಯನ್ನಷ್ಟೇ ತಿಳಿಸುತ್ತವೆ.

ತುಳುವ ಮನೆತನ : (ಕ್ರಿ.ಶ. ೧೪೯೧-೧೫೭೬)

ವೀರನರಸಿಂಹನಿಂದ ತುಳು ಮನೆತನದ ಆಳ್ವಿಕೆ ಆರಂಭವಾದರೂ ಈ ಮನೆತನದ ಕುರುಹುಗಳು ತುಮಕೂರು ಜಿಲ್ಲೆಯಲ್ಲಿ ಕೃಷ್ಣದೇವರಾಯನ ಕಾಲಘಟ್ಟದಿಂದ ಮಾತ್ರ ದೊರೆಯುತ್ತವೆ.

೧) **ಕೃಷ್ಣದೇವರಾಯ** : ಜಿಲ್ಲೆಯಲ್ಲಿ ಕೃಷ್ಣದೇವರಾಯನಿಗೆ ಸಂಬಂಧಿಸಿದ ೧೮ ಶಾಸನಗಳು ದೊರೆಯುತ್ತವೆ. ಅವು ಕೃಷ್ಣದೇವರಾಯನಿಗೆ ಧರ್ಮವಾಗಲೆಂದು ಇಲ್ಲವೆ ಸ್ಥಳೀಯ ನಾಯಕರು ತಮ್ಮ ತಂದೆ ತಾಯಿಗಳಿಗೆ ಪುಣ್ಯವಾಗಲೆಂದೋ ಅಥವಾ ಅಮರನಾಯಕತನ ಅಥವಾ ಗೌಡಿಕೆಯನ್ನು ದಯಪಾಲಿಸಿದ ಕುರಿತು ಮಾಹಿತಿ ನೀಡುತ್ತವೆ. ಆದರೆ ದೊಡ್ಡ ಮಾಲೂರಿನ ಶಾಸನ[೨೦೦] ಮಾತ್ರ ಕೃಷ್ಣದೇವರಾಯ ಸ್ಥಳೀಯನಾಯಕರ ಕೋರಿಕೆ ಮೇರೆಗೆ ಮದುವೆ ಮೇಲಿನ ಸುಂಕವನ್ನು ರದ್ದುಪಡಿಸಿದ್ದು ವಿಶೇಷವೆನಿಸುತ್ತದೆ. ಏಕೆಂದರೆ ಸಾಮಾನ್ಯರ ಬದುಕಿನ ಒಂದು ಭಾಗವಾದ ಮದುವೆ ಮುಂಜಿಗಳಂತಹವುಗಳ ಮೇಲೂ ಶ್ರೀಮಂತಿಕೆಯಿಂದ ಕೂಡಿದ ಸಾಮ್ರಾಜ್ಯಗಳೇ ತೆರಿಗೆ ವಿಧಿಸುತ್ತಿದ್ದವೆಂದರೆ ಸಾಮಾನ್ಯರ ಬದುಕು ಹೇಗಿದ್ದಿರಬಹುದೆಂಬುದು ಯೋಚನೆಗೂ ನಿಲುಕದ್ದಾಗಿದೆ. ಇಂತಹ ತೆರಿಗೆಗಳು ಅವರ ಬದುಕಿಗೆ ಹೊರೆಯಾದಾಗ ಅದನ್ನು ರಾಜನಿಗೆ ನೇರವಾಗಿ ಮನವಿ ಮಾಡಿಕೊಂಡು ರದ್ದುಪಡಿಸಿಕೊಂಡಿರುವುದಕ್ಕೆ ಈ ಶಾಸನ ಉದಾಹರಣೆಯಾಗಿದೆ.

೨) **ಅಚ್ಯುತರಾಯ** ಈತನನ್ನು ಜಿಲ್ಲೆಯ ೨೧ ಶಾಸನಗಳು ಉಲ್ಲೇಖಿಸಿದ್ದು, ಅವು ಅಚ್ಯುತರಾಯನ ಇಲ್ಲವೆ, ಸ್ಥಳೀಯ ನಾಯಕರ ಹೆಸರಿನಲ್ಲಿ ದೇವಾಲಯ ನಿರ್ಮಾಣ ಅಥವಾ ಸ್ಥಳೀಯ ನಾಯಕರಿಗೆ ದಾನ ದತ್ತಿ ನೀಡಿರುವುದನ್ನು ತಿಳಿಸುತ್ತವೆ. ಆದರೆ ಹೆಬ್ಬೂರು, ಬೂದಿಹಾಳು, ಕಂದಿಕೆರೆ ಶಾಸನಗಳು ಮಾತ್ರ ಆ ಪ್ರಾಂತ್ಯದಲ್ಲಿದ್ದ ಮದುವೆ ಮೇಲಿನ ಸುಂಕವನ್ನು ರದ್ದುಪಡಿಸಿದ ಸಂಗತಿಯನ್ನು ಪ್ರಸ್ತುತಪಡಿಸಿರುವುದು ವಿಶೇಷವೆನಿಸುತ್ತದೆ. ಈತನ ನಂತರ ಅಧಿಕಾರ ವಹಿಸಿಕೊಂಡ ಮೊದಲನೆಯ ವೆಂಕಟನನ್ನು ಕ್ರಿ.ಶ. ೧೫೪೯ರ ತುರುವೇಕೆರೆ ಶಾಸನ ತಿಳಿಸುತ್ತದೆ.

೩) **ಸದಾಶಿವರಾಯ** : ವಿಜಯನಗರ ಸಾಮ್ರಾಜ್ಯದ ಅರಸರು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿರುವುದಕ್ಕೆ ಸಂಬಂಧಿಸಿದಂತೆ ದೊರೆಯುವ ಕುರುಹುಗಳಲ್ಲಿ ಸದಾಶಿವರಾಯನ ಕಾಲದ ಕುರುಹುಗಳೇ ಹೆಚ್ಚಾಗಿರುವುದು ಕಂಡುಬರುತ್ತದೆ. ಜಿಲ್ಲೆಯ ಸುಮಾರು ೨೭ ಶಾಸನಗಳು

ಸದಾಶಿವರಾಯನನ್ನು ಉಲ್ಲೇಖಿಸಿವೆ. ಈತನ ಮೇಲಿನ ನಿಷ್ಠೆಯಿಂದಾಗಿಯೇ ನಿಡುಗಲ್ಲು, ಸಿರಾ, ಹಾಗಲವಾಡಿ, ಚಿಕ್ಕನಾಯಕನಹಳ್ಳಿ, ದೊಡ್ಡೇರಿ, ಪಾವಗಡ, ಶಿವರ, ಪುರುವರ, ಮಿಡಿಗೇಶಿ, ಹೊಸಕೋಟೆ, ಹುಳಿಯಾರು, ಕೊರಟಗೆರೆ, ಕುಣಿಗಲ್ಲು, ಗುಬ್ಬಿ, ಬಾಗೂರು ಮೊದಲಾದ ಸಂಸ್ಥಾನಿಕರು ರಕ್ಕಸಗಿ ತಂಗಡಗಿ ಯುದ್ಧದಲ್ಲಿ ಭಾಗವಹಿಸಲು ಸಾಧ್ಯವಾಗಿರುವುದು. ಬರಗೂರು ಮತ್ತು ಚೌಡನಹಳ್ಳಿ ಶಾಸನಗಳು ಸದಾಶಿವರಾಯನ ಮಹಾಮಾಂಡಲಿಕನಾದ ಅಳಿಯ ರಾಮರಾಯನಿಂದ ಜಿಲ್ಲೆಯ ನಾಯಿಂದರು ಮೆಚ್ಚುಗೆಗೆ ಪಾತ್ರರಾಗಿ ಇಡೀ ಸಾಮ್ರಾಜ್ಯದ ನಾಯಿಂದರ ಮೇಲಿನ ತೆರಿಗೆಯನ್ನು ರದ್ದುಗೊಳಿಸಿದ್ದನ್ನು ತಿಳಿಸುವುದು ಐತಿಹಾಸಿಕವಾಗಿ ಮಹತ್ವವೆನಿಸಿಕೊಳ್ಳುತ್ತದೆ.

ಅರವೀಡು ಮನೆತನ : (ಕ್ರಿ.ಶ. ೧೫೭೧- ೧೬೭೨)

ಅರವೀಡು ಮನೆತನದ ಅರಸರ ಅತಿರೇಕತನದ ರಾಜಕೀಯ ಚಟುವಟಿಕೆಗಳು ದಖ್ಖನ್‌ನ ಚರಿತ್ರೆಯನ್ನೇ ಬದಲಿಸಿತಲ್ಲದೆ, ವೈಭವಯುತವಾಗಿ ಮೆರೆದ ಸಾಮ್ರಾಜ್ಯವನ್ನು ರಕ್ಕಸಗಿ ತಂಗಡಗಿ ಯುದ್ಧದಿಂದ ಜಗತ್ತಿನಲ್ಲಿ ಏಕೈಕ ರಾಜ್ಯವಿಲ್ಲದ ರಾಜನೆಂಬ ಪಟ್ಟವನ್ನು ಧರಿಸುವಂತೆ ಮಾಡಿತು. ಏಕೆಂದರೆ ಮೂರನೆಯ ಶ್ರೀರಂಗನು ಕ್ರಿ.ಶ. ೧೬೬೪ರ ವೇಳೆಗೆ ಅಧಿಕಾರ ಕಳೆದುಕೊಂಡು ಮೈಸೂರು ಒಡೆಯರು ಹಾಗೂ ಕೆಳದಿ ನಾಯಕರ ಆಶ್ರಯದಲ್ಲಿದ್ದರೂ ಜಿಲ್ಲೆಯಲ್ಲಿ ನಿಷ್ಠೆಯಿಂದ ಇದ್ದ ಮಹಾನಾಡಪ್ರಭುಗಳು, ನಿಡುಗಲ್ಲು, ಹಾಗಲವಾಡಿ ಮೊದಲಾದ ಪಾಳೆಯಪಟ್ಟುಗಳು ಆತನ ಹೆಸರಿನಲ್ಲೇ ಶಾಸನ ಹಾಕಿಸಿರುವುದು ಕಂಡುಬರುತ್ತದೆ.

ಅರವೀಡು ಮನೆತನದ ಅಳಿಯ ರಾಮರಾಯ ವಿಜಯನಗರ ಸಾಮ್ರಾಜ್ಯದ ಸಾರ್ವಭೌಮನಾಗಲು ಪ್ರಯತ್ನಿಸಿದ್ದನೆಂದು ಕ್ರಿ.ಶ. ೧೫೬೨ರ ದೇವರಾಯನದುರ್ಗದ ಶಾಸನದಿಂದ ತಿಳಿಯುತ್ತದೆ. ಆದರೆ ಅದು ರಕ್ಕಸಗಿ ತಂಗಡಗಿ ಯುದ್ಧದಿಂದ ಅದು ಕೈಗೂಡಲಿಲ್ಲ. ಆದರೂ ಈತನ ನಂತರ ಅಧಿಕಾರಕ್ಕೆ ಬಂದ ತಿರುಮಲ, ಮೊದಲನೆಯ ಶ್ರೀರಂಗ, ಇಮ್ಮಡಿ ವೆಂಕಟಪತಿ, ಇಮ್ಮಡಿ ಶ್ರೀರಂಗ, ರಾಮದೇವರಾಯ, ಮುಮ್ಮಡಿ ವೆಂಕಟಪತಿದೇವ, ಮುಮ್ಮಡಿ ಶ್ರೀರಂಗರನ್ನು ಉಲ್ಲೇಖಿಸುವ ೨೯ ಶಾಸನಗಳು ತುಮಕೂರು ಜಿಲ್ಲೆಯಲ್ಲಿ ಕಂಡುಬಂದಿವೆ.

ವಿಜಯನಗರ ಸಾಮ್ರಾಜ್ಯಕ್ಕೆ ಸಂಬಂಧಿಸಿದಂತೆ ಜಿಲ್ಲೆಯಲ್ಲಿ ದೊರೆತಿರುವ ಒಟ್ಟು ಶಾಸನಗಳನ್ನು ಅನುಲಕ್ಷಿಸಿದಾಗ ಇದುವರೆಗೂ ಅಸಮರ್ಥ ದೊರೆಗಳೆಂದು ಹಾಗೂ ಅಳಿಯ ರಾಮರಾಯನ ಗೃಹಬಂಧನದಲ್ಲಿದ್ದವರೆಂದು ಗುರುತಿಸಿಕೊಂಡ ಅಚ್ಯುತರಾಯ ಮತ್ತು ಸದಾಶಿವರಾಯರಿಗೆ ಸಂಬಂದಿಸಿದಂತೆ ಅತಿ ಹೆಚ್ಚು ಶಾಸನಗಳಿರುವುದು ಗೋಚರವಾಗುತ್ತದೆ. ಒಂದುವೇಳೆ ಅಸಮರ್ಥ ದೊರೆಗಳೇ ಅಥವಾ ಗೃಹಬಂಧನದಲ್ಲಿದ್ದವರೇ ಆಗಿದ್ದ ಪಕ್ಷದಲ್ಲಿ ಕೇವಲ ಒಂದು ಜಿಲ್ಲೆಯಲ್ಲಿ ಅಚ್ಯುತರಾಯನನ್ನು-೨೧ ಶಾಸನಗಳು ಹಾಗೂ ಸದಾಶಿವರಾಯನನ್ನು-

೨೭ ಶಾಸನಗಳು ಇಷ್ಟೊಂದು ಸಂಖ್ಯೆಯಲ್ಲಿ ಉಲ್ಲೇಖಿಸುತ್ತವೆಂದರೆ ಅತಿಶಯೋಕ್ತಿ ಎನಿಸುತ್ತದೆ. ಸ್ವತಂತ್ರವಾಗಿ ಆಳ್ವಿಕೆ ಮಾಡಿದಾಗ ಮಾತ್ರ ಇಷ್ಟೊಂದು ಶಾಸನಗಳಲ್ಲಿ ಉಲ್ಲೇಖಿತರಾಗಲು ಸಾಧ್ಯ. ಅಳಿಯ ರಾಮರಾಯ ಆಡಳಿತದ ವಿಷಯಗಳಲ್ಲಿ ರಾಜನೈಪುಣ್ಯತೆ ಗಳಿಸಿಕೊಂಡಿದ್ದರಿಂದ ಅಚ್ಯುತರಾಯ ಮತ್ತು ಸದಾಶಿವರಾಯರು ಇಲ್ಲಿ ನಗಣ್ಯರಾಗಿ ಕಾಣಲ್ಪಡುತ್ತಿದ್ದರೆ ಹೊರತು ಅಸಮರ್ಥ ರಾಜರೆಂದಲ್ಲ.

ವಿಜಯನಗರದ ಸಾರ್ವಭೌಮತ್ವವನ್ನು ಒಪ್ಪಿಕೊಂಡ ತುಮಕೂರು ಜಿಲ್ಲೆಯ ಬಹುತೇಕ ಪಾಳೆಯಪಟ್ಟುಗಳು ಪಶುಪಾಲಕ ಮತ್ತು ಬೇಟೆ ಸಂಸ್ಕೃತಿಯ ಹಿನ್ನೆಲೆಯುಳ್ಳವರೆಂದು ಜಿಲ್ಲೆಯಾದ್ಯಂತ ದೊರೆತ ಶಾಸನ, ಐತಿಹ್ಯ, ಕಥೆ, ಕಾವ್ಯ, ಸ್ಥಳನಾಮ, ಸ್ಥಳಪುರಾಣಗಳಿಂದ ತಿಳಿಯುತ್ತದೆ. ಬಹುಶಃ ಈ ಪಶುಪಾಲಕ ಪಾಳೆಯಪಟ್ಟುಗಳಿಂದಲೇ ವಿವಿಧ ತಳಿಯ ರಾಸುಗಳನ್ನು ವಿಜಯನಗರ ಸಾಮ್ರಾಜ್ಯ ಪಡೆದುಕೊಂಡು ರಾಜಧಾನಿ ಹಂಪಿಯಿಂದ ಕಡಲ ತೀರಗಳಿಗೆ ಎತ್ತಿನ ಬಂಡಿಯಲ್ಲಿ ಸರಕು ಸರಂಜಾಮುಗಳನ್ನು ರವಾನಿಸುತ್ತಿದ್ದರೆಂಬ ವಿದೇಶಿ ಪ್ರವಾಸಿಗರ ಉಲ್ಲೇಖಗಳು ಇದರಿಂದ ಖಚಿತಗೊಳ್ಳುತ್ತವೆ. ಹೀಗೆ ವಿಜಯನಗರ ಸಾಮ್ರಾಜ್ಯಕ್ಕೆ ಜಿಲ್ಲೆಯು ಪ್ರತಿಯೊಂದು ಕ್ಷೇತ್ರದಲ್ಲೂ ಅಪಾರ ಕೊಡುಗೆ ನೀಡಿರುವುದು ಜಿಲ್ಲೆಯಲ್ಲಿ ದೊರೆಯುವ ಶಾಸನ, ಐತಿಹ್ಯ, ಕಥೆ, ಕಾವ್ಯ, ಲಾವಣಿ, ಕೋಟೆ-ಕೊತ್ತಲ, ದೇವಾಲಯ, ಕೆರೆ-ಕಟ್ಟೆ, ಬಾವಿ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಸ್ಪಷ್ಟವಾಗುತ್ತದೆ.

೨.೪.೧೫. ಮಹಾನಾಡ ಪ್ರಭುಗಳು

ಸಾಮಾನ್ಯವಾಗಿ ಯಾವುದೇ ರಾಜಮನೆತನಗಳ ಮೂಲದ ಬಗ್ಗೆ ಇತಿಹಾಸಕಾರರಲ್ಲಿ ಒಮ್ಮತದ ಅಭಿಪ್ರಾಯವಿರುವುದು ಬಹು ಅಪರೂಪ. ಹಾಗಾಗಿ ಮಹಾನಾಡ ಪ್ರಭುಗಳ ಕುರಿತಾದ ಸಂಗ್ರಹಗಳಲ್ಲಿ ಸಹ ಭಿನ್ನಾಭಿಪ್ರಾಯ ಉಂಟಾಗಿರುವುದು ಸಹಜ. ಆದರೂ ನಾಡಿನ ಹೆಸರಾಂತ ವಿದ್ವಾಂಸರೂ ಮಹಾನಾಡ ಪ್ರಭುಗಳನ್ನು ವೀರಶೈವ ಧರ್ಮದೊಂದಿಗೆ ಗುರುತಿಸ ಹೊರಟಿರುವುದು ಸತ್ಯಕ್ಕೆ ದೂರವಾದ ಸಂಗತಿ. ಏಕೆಂದರೆ ಮಹಾನಾಡ ಪ್ರಭುಗಳು ನೊಳಂಬ ಪಲ್ಲವ ಶಾಖೆಯ ಮುಂದುವರೆದ ಭಾಗವೆಂದು ಪ್ರತಿಪಾದಿಸಲಾಗುತ್ತಿದೆ. ಆದರೆ ನೊಳಂಬ ಪಲ್ಲವ ಶಾಖೆಯ ವಂಶಜರು ೧೦-೧೧ನೆಯ ಶತಮಾನದ ವೇಳೆಗೆ ಕಂಪಿಲಿ, ಉಚ್ಚಂಗಿ, ಬಾಗಳಿ ಭಾಗದಲ್ಲಿ ಅಧಿಕಾರ ಚಲಾಯಿಸುತ್ತಿದ್ದರೆಂಬುದಕ್ಕೆ ಶಾಸನಗಳಲ್ಲಿ ಉಲ್ಲೇಖ ಸಿಗುತ್ತವೆ. ಈ ಕಾರಣಕ್ಕಾಗಿ ನೊಳಂಬ ಶಾಖೆಯು ತುಮಕೂರು ಭಾಗದಲ್ಲಿ ನಾಡಗೌಡರಾಗಿ ಹೇಗೆ ಮುಂದುವರೆಯಲು ಸಾಧ್ಯ ಎಂಬ ಸಂದೇಹ ಉಂಟಾಗುತ್ತದೆ. ಏಕೆಂದರೆ ಹೊಯ್ಸಳರ ವಿಷ್ಣುವರ್ಧನ ಮತ್ತು ಎರಡನೆಯ ಬಲ್ಲಾಳ ಹಾಗೂ ವೀರರಾಮನಾಥರ ಅವಧಿಯಲ್ಲಿ ಗೌಡಿಕೆ ಆರಂಭವಾಗಿತ್ತು ಎಂಬುದಕ್ಕೆ ಬ್ಯಾಲಕಟ್ಟೆ, ನಿರುವಗಲ್ಲು, ಹೀಚನೂರು, ವೋಟುಕೆರೆ, ಶೀತಕಲ್ಲು, ಸೂಜಿಗಲ್ಲು, ಆಸ್ಸೂದು, ಪುರ, ಆನೆಬಿದ್ದಸರಿ, ಕೊಡ್ಲಾಪುರ, ಭೈರಸಂದ್ರ, ಬಿಜವರ,

ಸೀಬಿ ಮತ್ತಿಗಟ್ಟ, ಎರಕಟ್ಟೆ, ದಡ್ಡಿಗಟ್ಟದ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇದರ ಮೂಲ ಉದ್ದೇಶ ಹೊಯ್ಸಳರ ರಾಜಧಾನಿ ದ್ವಾರಸಮುದ್ರಕ್ಕೆ ಹೊಂದಿಕೊಂಡಿರುವ ತುಮಕೂರು ಜಿಲ್ಲೆಯ ಪಶ್ಚಿಮ ಭಾಗ ವಿಶಾಲಬಯಲು ನಾಡಾಗಿದ್ದರಿಂದ ಶತ್ರುಗಳು ಬಹುಬೇಗ ಪ್ರವೇಶಿಸಬಹುದೆಂದು ಗ್ರಾಮ ಮಟ್ಟಗಳಲ್ಲಿಯೇ ಗೌಡಿಕೆಯನ್ನು ಹಟ್ಟಿಹಾಕಿ ಆ ಮೂಲಕ ಸೈನಿಕರನ್ನು ತರಬೇತಿಗೊಳಿಸಿ ಅವರ ಸೇವೆಯನ್ನು ಪಡೆದುಕೊಳ್ಳುತ್ತಿದ್ದರು. ಗ್ರಾಮಮಟ್ಟದಲ್ಲಿಯೇ ಆಡಳಿತ ಆರಂಭಗೊಂಡಿದ್ದರಿಂದ ಆ ಗ್ರಾಮದ ರಕ್ಷಣೆ ಅವರಿಗೆ ವಹಿಸಲಾಗುತ್ತಿತ್ತು. ಏಕೆಂದರೆ ಗಡಿ ಪ್ರಾಂತ್ಯಗಳಲ್ಲಿ ಶತ್ರುಗಳನ್ನು ತಡೆಯಬಹುದೆಂಬ ಉದ್ದೇಶದಿಂದ ಗ್ರಾಮ ಆಡಳಿತಕ್ಕೆ ಹೆಚ್ಚು ಆದ್ಯತೆ ನೀಡಿದ್ದರು. ಅಲ್ಲದೆ ಇವರಿಗೆ ಕೋಟೆಯನ್ನು ಕಟ್ಟಿಕೊಳ್ಳಲು ಅನುಮತಿ ನೀಡುತ್ತಿದ್ದರಿಂದಲೇ ಮಧುಗಿರಿ ಪ್ರಾಂತ್ಯ ಒಂದರಲ್ಲೇ ೨೭ ಕೋಡಿ[೨೦೧] ಗಳಿದ್ದವೆಂದು ಮೆಕೆಂಜಿ ಕೈಫಿಯತ್ತಿನಲ್ಲಿ ಉಲ್ಲೇಖಿಸಲಾಗಿದೆ. ಹೊಯ್ಸಳರು ತಮ್ಮ ರಾಜಧಾನಿಗೆ ಗಡಿಗಳ ಸುತ್ತಲೂ ಕೋಟೆಗಳ ನಿರ್ಮಾಣಕ್ಕೆ ಅಡಿಪಾಯ ಹಾಕಿದ್ದರಿಂದಲೇ ವಿಜಯನಗರದ ಅರಸರ ಕಾಲಕ್ಕೆ ಕೋಟೆಗಳ ನಿರ್ಮಾಣ ಕಾರ್ಯ ಅಗಾಧ ಪ್ರಮಾಣದಲ್ಲಿ ಆಗಿರುವುದು ಕಂಡುಬರುತ್ತದೆ.

ಈ ಹಿನ್ನೆಲೆಯಲ್ಲಿ ವಿಶ್ಲೇಷಿಸಿದರೆ ೧೯ ಮತ್ತು ೨೦ನೆಯ ಶತಮಾನಗಳಲ್ಲಿ ರಚನೆಗೊಂಡ "ಮುತ್ತಿನ ಮುಮ್ಮಡಿ" ಏಳುನಾಡ ಪ್ರಭುಗಳ ಜಯರೇಖ ಮಿಡಿಗೇಶಿ ಕೈಫಿಯತ್ತು, ಮಧುಗಿರಿ, ಮಿಡಿಗೇಶಿ, ಚನ್ನರಾಯದುರ್ಗದ ಪಾಳೆಯಗಾರರ ವಂಶಾವಳಿ, ಮಧುಗಿರಿ ಪಾಳೆಯಗಾರರ ಕೈಫಿಯತ್ತು ಮೊದಲಾದ ಕೋರಿಕಾಗದದ ಸುರುಳಿಗಳನ್ನು ಅನುಮಾನದಿಂದಲೇ ನೋಡಬೇಕಾಗುತ್ತದೆ. ಏಕೆಂದರೆ ಮಹಾನಾಡ ಪ್ರಭುಗಳ ಕಾಲದ ಯಾವುದೇ ಶಾಸನ, ಸಾಹಿತ್ಯ ಕೃತಿಗಳು ತಾವು ಸೊನ್ನಾಲಿಗೆಯಿಂದ ಬಂದವರೆಂದೂ ಹಾಗೂ ವೀರಶೈವದವರೆಂದೂ ಎಲ್ಲಿಯೂ ತಮ್ಮನ್ನು ಉಲ್ಲೇಖಿಸಿಕೊಂಡಿಲ್ಲ. ಆದುದರಿಂದ ನಂತರದಲ್ಲಿ ರಚನೆಗೊಂಡ ದಾಖಲೆಗಳನ್ನು ಪರಿಗಣಿಸಿ ಅವರನ್ನು ವೀರಶೈವರೆಂದು ಗುರುತಿಸುವುದು ಸಮಂಜಸವಲ್ಲ. ಕೋರಿಕಾಗದಗಳಲ್ಲಿ ಉಲ್ಲೇಖವಿರುವಂತೆ ವೀರಪ್ಪಗೌಡ ಮತ್ತು ಆತನ ಆರು ಜನ ಸಹೋದರರು ಸೊನ್ನಾಲಿಗೆಯಿಂದ ಯತಿ ಸಿದ್ಧರಾಮೇಶ್ವರರ ಕೃಪಾಕಟಾಕ್ಷ ಪಡೆದು ದಕ್ಷಿಣದ ಬಿದಿರೆಗೆ ಬಂದು ನೆಲೆಸಿದರು ಎಂದು ಹೇಳುತ್ತದೆ. ಅಲ್ಲಿ ಶಾನುಭೋಗ ಮಲ್ಲರಸಯ್ಯನ ಪುತ್ರರಾದ ಹರಿನರಸಯ್ಯ ಮತ್ತು ತಿಮ್ಮರಸಯ್ಯರೊಂದಿಗೆ ದೆಹಲಿಯಿಂದ ಬಂದ ಮಲ್ಲಿಖಾನನೆಂಬ ಸೇನಾನಿಯು ದಾಳಿಯನ್ನು ಸಮರ್ಥವಾಗಿ ಎದುರಿಸಿ, ಅರಸನ ಕೃಪೆಗೆ ಪಾತ್ರರಾದರೆಂದೂ, ಆ ಮೂಲಕ ದಕ್ಷಿಣದಲ್ಲಿ ರಾಜ್ಯ ಸ್ಥಾಪನೆಗೆ ಅನುಮತಿ ಪಡೆದರೆಂದೂ, ಇದೇ ಸಂದರ್ಭದಲ್ಲಿ ನೊಣಂಬೇಶ್ವರನು ಕನಸಿನಲ್ಲಿ ಬಂದು ನೊಣಂಬೇಶ್ವರ ದೇವಾಲಯ ನಿರ್ಮಿಸಿ ತಮ್ಮ ಸಹೋದರರೆಲ್ಲ ಲಿಂಗವನ್ನು ಧರಿಸಿ ತಮ್ಮ ಕುಲದೇವ ಕನ್ವಾಗೆ ಸ್ವೀಕರಿಸಿ ತನ್ನ ವಂಶಜರೆಲ್ಲ ನೊಣಂಬರೆಂದು ಕರೆದುಕೊಂಡರೆಂದು ತಿಳಿಸುತ್ತದೆ. ಆದರೆ ವೀರಪ್ಪಗೌಡ ಮತ್ತು ಆತನ

ಸಹೋದರರನ್ನು ಕ್ರಿ.ಶ. ೧೩೪೦ರ ಎರಕಟ್ಟೆ, ಕ್ರಿ.ಶ. ೧೨೯೧ರ ಮತ್ತಿಗಟ್ಟೆ, ಕ್ರಿ.ಶ. ೧೩೧೪ರ ವೇಳೆಕೋಟೆ ಕ್ರಿ.ಶ. ೧೨೯೨ರ ದಬ್ಬೆಗಟ್ಟೆ ಶಾಸನಗಳನ್ನು ಉಲ್ಲೇಖಿಸಿರುವುದರಿಂದ ಮೂರನೆಯ ಬಲ್ಲಾಳನ ಕಾಲದ ವೀರಪ್ಪಗೌಡ ಮತ್ತು ಆತನ ಸಹೋದರರ ಕಾಲಕ್ಕೂ ಆರ್.ನರಸಿಂಹಾಚಾರ್ಯರ ಕರ್ನಾಟಕ ಕವಿಚರಿತೆಯಲ್ಲಿ ಉಲ್ಲೇಖವಿರುವ ಯತಿಸಿದ್ಧರಾಮನ ಕ್ರಿ.ಶ. ೧೧೫೬-೧೧೬೭ರ ಕಾಲಮಾನಕ್ಕೂ ಸುಮಾರು ೧೫೦-೨೦೦ ವರ್ಷಗಳ ಅಂತರವಿದೆ. ಅಲ್ಲದ ವೀರಪ್ಪಗೌಡ ಮತ್ತು ಆತನ ಸಹೋದರರು ನಿರ್ಮಿಸಿದ್ಧರೆನ್ನಲಾದ ನೊಣಂಬೇಶ್ವರ ದೇವಾಲಯ ನೊಳಂಬ ಪಲ್ಲವಶೈಲಿಯಲ್ಲಿರುವುದರಿಂದ ಕ್ರಿ.ಶ. ೮-೧೦ನೆಯ ಶತಮಾನದಲ್ಲಿ ನಿರ್ಮಾಣಗೊಂಡ ದೇವಾಲಯವೆಂದು ಆದೇವಾಲಯದ ಲಕ್ಷಣಗಳಿಂದ ತಿಳಿಯುತ್ತದೆ. ಆದುದರಿಂದ ಮಹಾನಾಡ ಪ್ರಭುಗಳು ಗುಬ್ಬಿ ಪರಿಸರದ ಶಾಸನಗಳಲ್ಲೇ ಹೆಚ್ಚಾಗಿ ಉಲ್ಲೇಖಿಸಿರುವುದರಿಂದ ಬಹುಶಃ ನೊಳಂಬರ ಕಾಲದಲ್ಲಿ ನಿರ್ಮಿಸಲ್ಪಟ್ಟಿದ್ದ ನೋಣಂಬೇಶ್ವರನನ್ನು ಹೆಚ್ಚು ಆರಾಧಿಸುತ್ತಿದ್ದಿರಬಹುದು. ಈ ಕಾರಣಕ್ಕಾಗಿಯೇ ನಂತರದಲ್ಲಿ ನೋಣಂಬೇಶ್ವರ ದೇವಾಲಯದ ಜೀರ್ಣೋದ್ಧಾರ ಮಾಡಿರಬೇಕು. ಮಹಾನಾಡ ಪ್ರಭುಗಳು ಪಶುಗಳ ಪಾಲನೆಗಾಗಿ ದತ್ತಿ ಬಿಟ್ಟ ಕಸಾಂಪುರ ಕಾವಲು ಕಾವಲಿ ಭಸ್ಮಾಂಗಿ ಕಾವಲಿ ಎಂಬ ಉಲ್ಲೇಖಗಳನ್ನು ಮಹಾನಾಡ ಪ್ರಭುಗಳ ಕೊನೆಯ ಅರಸ ಚೆನ್ನಪ್ಪ ಗೌಡ ಟಿಪ್ಪುವಿನ ವಿರುದ್ಧ ಹೋರಾಡಲಿ ಬಿಜವರ ಮಠಕ್ಕೆ ಬಿಟ್ಟಿದ್ದ ೨೦೦೦ ರಾಸುಗಳನ್ನು ಮರಳಿ ಪಡೆದನೆಂಬ ರಾಯರೇಖೆಯಲ್ಲಿನ ಪ್ರಸ್ತಾಪವನ್ನು ಗಮನಿಸಿದರೆ ಮೂಲತಃ ಇವರು ಬುಡಕಟ್ಟು ಮೂಲದವರೆಂದು ಗೋಚರಿಸುತ್ತದೆ. ಜೊತೆಗೆ ಇಮ್ಮಡಿ ಚಿಕ್ಕಭೂಪಾಲನ ಮಗನಾದ ತೋಂಟಪ್ಪಯ್ಯನು ವೀರಶೈವ ಧರ್ಮಕ್ಕೆ ವಿರುದ್ಧವಾದ ಬೇಹುಗಾರಿಕೆಯಲ್ಲಿ ಅತಿ ನಿಸ್ಸೀಮನಾಗಿದ್ದನೆಂದೂ, ಅವನೊಂದಿಗೆ ಸದಾ ಬೇಡಪಡೆ ವಿರುತ್ತಿತ್ತೆಂದು ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ ಉಲ್ಲೇಖಿಸುತ್ತದೆ. ವಿಶೇಷವಾಗಿ ವೀರಶೈವ ಧರ್ಮಕ್ಕೆ ವಿರುದ್ಧವಾದ ಮಹಾಸತಿ ಆಚರಣೆಯನ್ನು ಈ ವಂಶಿಕರು ಆಚರಿಸಿದರೆಂದು ತಿಳಿಸುತ್ತದೆ. ಇಮ್ಮಡಿ ಚಿಕ್ಕಭೂಪಾಲನ ಮಗ ತೋಲವೇಂದ್ರ ಹರವೆ ಕಾಳಗದಲ್ಲಿ ಸತ್ತನು. ಅವನೊಂದಿಗೆ ಅವನ ಪತ್ನಿಯಾದ ಚೆನ್ನಲಸಮ್ಮ ಸತಿಯಾದಳೆಂದೂ ಇದನ್ನು ನೋಡಿ ಇಮ್ಮಡಿ ಚಿಕ್ಕಭೋಪಾಲ ಪುತ್ರಶೋಕದಿಂದ ಸತ್ತಾಗ ಇವನ ರಾಣಿಯರಾದ ಸೋಮಯಾಜಿ, ಚೆನ್ನಾಜಮ್ಮನವರು ಸಹ ಚಿತೆಗೆ ಏರಿದರು; ಸತಿಯಾದರು. ಆದರೆ ವೀರಶೈವ ಧರ್ಮದಲ್ಲಿ ಇದಕ್ಕೆ ಅವಕಾಶವಿಲ್ಲ; ಆದುದರಿಂದ ಇಲ್ಲಿ ಸೂಕ್ಷ್ಮವಾಗಿ ಗಮನಿಸಿದರೆ ಮಹಾನಾಡ ಪ್ರಭುಗಳು ವೀರಶೈವ ಧರ್ಮದ ಕೆಲವು ತತ್ವಗಳನ್ನು ಒಪ್ಪಿಕೊಂಡಿದ್ದರೇ ವಿನಾಃ ಸಂಪೂರ್ಣವಾಗಿ ಪರಿವರ್ತಿತರಾಗಲಿಲ್ಲ. ಆದುದರಿಂದಲೇ ತುಂಗೋರೆ ಮತ್ತು ಮೀನಗೊಂಡಿಯ ರಂಗನಾಥ ದೇವಾಲಯಗಳ ನಿರ್ಮಾಣ ಮತ್ತು ಆ ದೇವರ ಆರಾಧನೆಯನ್ನು ಮಾಡುತ್ತಿದ್ದರು. ಹಾಗಾಗಿ ಎಂ.ಎಂ.ಕಲ್ಬುರ್ಗಿ, ಕಾವಲಯ್ಯ ಅವರು ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯದಲ್ಲಿ

ಮಹಾನಾಡ ಪ್ರಭುಗಳು ಗುರುಲಿಂಗ, ಜಂಗಮ, ದಾಸೋಹ, ಹರಿಕಥಾ ಪ್ರಸಂಗ ಮೊದಲಾದ ಆಚರಣೆಗಳನ್ನು ಪಾಲಿಸುತ್ತಿದ್ದರೆಂಬ ಒಂದೇ ಒಂದು ಉಲ್ಲೇಖದ ಹಿನ್ನೆಲೆಯಲ್ಲಿ ಅವರನ್ನು ವೀರಶೈವರೆಂದು ಗುರುತಿಸಿರುವುದು ಸಮಂಜಸವಲ್ಲ. ಅಲ್ಲದೆ ಇವರು ವೀರಶೈವರಾಗಿದ್ದರೆ ಸಿರಾದ ತುರುಕರಿಂದ ದಾಳಿಗೊಳಗಾದ ರತ್ನಗಿರಿ ಪಾಳೆಯಗಾರ ಮನೆತನವನ್ನು ರಕ್ಷಿಸಿ ಕಸ್ತೂರಿ ರಂಗಪ್ಪ ನಾಯಕನಿಗೆ ಬೇಕಾದ ಸಕಲ ವಿದ್ಯೆಗಳ ಪಠಣೆಗೆ ಅವಕಾಶ ನೀಡುವ ಪ್ರಮೇಯವೇ ಇರುತ್ತಿರಲಿಲ್ಲ. ಇವರು ಬೇಡ ಬುಡಕಟ್ಟಿಗೆ ಸೇರಿದ್ದರಿಂದಲೇ ಕಸ್ತೂರಿ ರಂಗಪ್ಪ ನಾಯಕನಿಗೆ ಆಶ್ರಯ ನೀಡಿರಲು ಸಾಧ್ಯವಾಗಿದ್ದಿಲ್ಲ.

ರಾಯರೇಖೆಯು ಇಮ್ಮಡಿ ಚಿಕ್ಕಭೂಪಾಲ ಒಮ್ಮೆ ಮಿಡಿಗೇಶಿ ಪಾಳೆಯಗಾರನಾದ ನಾಗಿರೆಡ್ಡಿಯೊಂದಿಗೆ ಸಂಧಿಯಾಗಿ ಕೈಕುಲಿಕಿದಾಗ ನಾಗಿರೆಡ್ಡಿ ತನ್ನ ಪತ್ನಿಗೆ ನೋಣಬ ಕೈಕುಲಿಕಿದ್ದರಿಂದ ಮಡಿಯಾಗಿದೆ ನೀಗಿರುತ್ತಾರೆಂದು ಹೇಳಿದ್ದನ್ನು ಗಮನಿಸಿದರೆ ತಳ ಸಮುದಾಯಕ್ಕೆ ಸೇರಿದ್ದಾಗ ಮಾತ್ತವೆಂಬುದು ಸ್ಪಷ್ಟವಾಗುತ್ತದೆ. ಅವರನ್ನು ಹಾಗೆ ಕರೆಯಲು ಸಾಧ್ಯ.

ಅಲ್ಲದೆ ಮಧುಗಿರಿ ಮಹಾನಾಡ ಪ್ರಭುಗಳು ಮೂಲತಃ ಬಿಜ್ಜಾದೇವಿಯ ಆರಾಧಕರಾಗಿದ್ದರು. ಸಾಮಾನ್ಯವಾಗಿ ಮಾತೃದೇವತೆಯನ್ನು ಆರಾಧಿಸುವವರು ಅವೈದಿಕ ಸಮುದಾಯದವರೇ ಹೊರತು ವೈದಿಕರಲ್ಲ. ಹಾಗಾಗಿ ಮಹಾನಾಡ ಪ್ರಭುಗಳ ವಂಶಸ್ಥರು ಇಂದು ವೀರಶೈವರಾಗಿರಬಹುದು; ಆದರೆ ಅವರಾರು ಮೂಲತಃ ವೀರಶೈವರಲ್ಲ, ಬದಲಾಗಿ ಬೇಡ ಬುಡಕಟ್ಟು ಸಮುದಾಯಕ್ಕೆ ಸೇರಿದವರು.

ಹೀಗೆ ಹಂತಹಂತವಾಗಿ ಏಳಿಗೆ ಹೊಂದಿದ ನಾಡಗೌಡರು ಕ್ರಮೇಣ ಮಹಾನಾಡ ಪ್ರಭುಗಳಾಗಿ ಪ್ರಸಿದ್ಧಿ ಹೊಂದಿದ್ದಾರೆ. ಇವರ ಏಳು ಜನ ಸಹೋದರರಾದ ಕಾಳಣ್ಣಗೌಡ-ಕೋರಾ, ಸಂಗಪ್ಪ ಗೌಡ-ಚೇಳೂರು, ಕಾಳ-ಚಿಕ್ಕಪ್ಪ ಗೌಡ-ಗುಬ್ಬಿ ಹೊಸಳ್ಳಿ ರಾಮಪ್ಪ ಗೌಡ-ಎಣ್ಣೆಗೆರೆ, ಚಿಕ್ಕಪ್ಪ ಗೌಡ-ಬಿದರೆ, ಮಾರೇ ಗೌಡ-ತುಂಗವರೆ ಮತ್ತು ಮುಮ್ಮಡಿ ಪಟ್ಟಣ, ಚೆನ್ನಪ್ಪ ಗೌಡ-ತೆರೆಯೂರು[೨೦೩]ಗಳಲ್ಲಿ ಕ್ರಮವಾಗಿ ಏಳಿಗೆ ಹೊಂದಿದರು. ಕ್ರಿ.ಶ. ೧೩೪೭ರಲ್ಲಿ[೨೦೪] ಕೋರಾ ಗ್ರಾಮದಲ್ಲಿ ಕೋಟೆ ನಿರ್ಮಾಣ ಮಾಡುವುದರ ಮೂಲಕ ಮಹಾನಾಡು ಪ್ರಭುಗಳ ಅಧಿಕಾರ ಆರಂಭವಾಯಿತು.

೧. ಬಿಜವರ ಮಹಾನಾಡ ಪ್ರಭುಗಳು

ಇವರು ಗ್ರಾಮ ಗೌಡಿಕೆಯಿಂದ ಸಂಸ್ಥಾನದ ಆಡಳಿತದವರೆಗೆ ಅಭಿವೃದ್ಧಿ ಹೊಂದಿದರು. ಆರಂಭದಲ್ಲಿ ಗುಬ್ಬಿ ಪರಿಸರದಲ್ಲಿದ್ದ ಮಹಾನಾಡ ಪ್ರಭುಗಳು ಸುರಕ್ಷಿತವಲ್ಲದ ಬಯಲು ನಾಡಿನಲ್ಲಿ ಆಳ್ವಿಕೆ ಮಾಡುವುದು ಬೇಡ ಎಂಬುದನ್ನು ಅರಿತು ಬೆಟ್ಟ-ಗುಡ್ಡಗಳಿಂದ ಸುತ್ತುವರಿದ

ಅಭೇದ್ಯ ಪ್ರದೇಶಗಳಿಗೆ ವಲಸೆಹೋದರು. ಹೀಗೆ ವಲಸೆ ಬಂದವರಲ್ಲಿ ಮಾರೇ ಗೌಡನು ತುಂಗವಟಿಯಲ್ಲಿ ಜಯಮಂಗಲಿ ನದಿ ತೀರದಲ್ಲಿ ಮೊದಲಿಗೆ ನೆಲೆನಿಂತನು. ನಂತರ ಹೊಸದಾಗಿ ಮುಮ್ಮಡಿ ಪಟ್ಟಣಕ್ಕೆ ಬಲವಾದ ಕೋಟೆಯನ್ನು ಕಟ್ಟಿಸಿ ೧೮ ಮೈಲಿ ವಿಸ್ತಾರವಾದ ಪ್ರದೇಶದಲ್ಲಿ ಆಳ್ವಿಕೆ ಮಾಡಿದನು.[೨೦೫]. ಈತನ ನಂತರ ವೀರೇ ಗೌಡನು ಮುಮ್ಮಡಿ ಪಟ್ಟಣವನ್ನು ಮತ್ತಷ್ಟು ವಿಸ್ತರಿಸಿದನು. ಆದರೆ ಮುಮ್ಮಡಿ ದೊಡ್ಡೇಗೌಡನ ಕಾಲದಲ್ಲಿ ಬಿಜಾಪುರದ ದಾಳಿಗೆ ತುತ್ತಾದ ಮುಮ್ಮಡಿ ಪಟ್ಟಣ ನಾಶಹೊಂದಿತು. ಹಾಗಾಗಿ ದೊಡ್ಡೆಗೌಡನ ಮಗ ಹಿರೇಚಿಕ್ಕಪ್ಪ ಗೌಡ ಆಶ್ರಯ ಅರಸಿ ತುಂಗೋಟಿಗೆ ಹೋಗಿ[೨೦೬] ದೊಡ್ಡನಂಜಪ್ಪನವರ ನೆರವಿನಿಂದ ಮುಮ್ಮಡಿ ಪಟ್ಟಣವನ್ನು ಪುನರ್‌ನಿರ್ಮಿಸಲು ಪ್ರಯತ್ನಿಸಿದನಾದರೂ ಅದರ ಹಿಂದಿನ ವೈಭವವನ್ನು ಮರುಸೃಷ್ಟಿಸಲಾಗಲಿಲ್ಲ. ಹಾಗಾಗಿ ಕ್ರಿ.ಶ. ೧೫೨೫ರಲ್ಲಿ ಬಿಜವರದಲ್ಲಿ ಹೊಸದಾಗಿ ಕೋಟೆ-ಕೊತ್ತಲವನ್ನು ಕಟ್ಟಿಸಿ ರಾಜಧಾನಿಯನ್ನಾಗಿ ಮಾಡಿಕೊಂಡನು. ಈತನ ನಂತರ ಮುಮ್ಮಡಿ ಕರಿತಿಮ್ಮ ಚಿಕ್ಕಪ್ಪ ಗೌಡ ಕೊಡಗದಾಲದ ಕೋಟೆಯನ್ನು ೧೫೩೫ರಲ್ಲಿ ನಿರ್ಮಿಸಿದನು. ಹಿರೇಚಿಕ್ಕಪ್ಪ ಗೌಡನ ಮಗನಾದ ಇಮ್ಮಡಿ ಚಿಕ್ಕಭೂಪಾಲ ಅಧಿಕಾರ ವಹಿಸಿಕೊಂಡ ಕೂಡಲೇ ಸಂಸ್ಥಾನದ ಗಡಿದುರ್ಗಗಳನ್ನು ಬಲಪಡಿಸಿ ೧೫೪೯ರಲ್ಲಿ ಸಿದ್ಧಾಪೂರ ಕೋಟೆಯನ್ನು, ೧೬೦೧ರಲ್ಲಿ ಮಧುಗಿರಿ ಕೋಟೆಯನ್ನು, ೧೬೧೩ರಲ್ಲಿ ತನ್ನ ಮೊಮ್ಮಗ ಚೆನ್ನಪ್ಪಗೌಡನ ಹೆಸರಿನಲ್ಲಿ ಚನರಾಯನದುರ್ಗವನ್ನು ನಿರ್ಮಿಸಿದನು[೨೦೭]. ಇಮ್ಮಡಿ ಚಿಕ್ಕಭೂಪಾಲನ ಮಗನಾದ ಸಪ್ಪೇಂದ್ರ ಮಧುಗಿರಿ ಕೋಟೆಯನ್ನು ನವೀಕರಿಸಿ ಬೆಟ್ಟದ ಮೇಲೆ ೧೬೪೬ರಲ್ಲಿ ಕಣಜ, ಆಂಜನೇಯನ ದೋಣೆಯನ್ನು ನಿರ್ಮಿಸಿ ತನ್ನ ಮೂರು ಜನ ಮಕ್ಕಳಾದ ಸಂಗಪ್ಪ ಗೌಡನಿಗೆ-ಮಧುಗಿರಿ, ಹಿರೇತೊಂಟಪ್ಪ ಗೌಡನಿಗೆ-ಚನ್ನರಾಯನದುರ್ಗ, ಕಾಳಚಕ್ಕಪ್ಪ ಗೌಡನಿಗೆ-ಮಿಡಿಗೇಶಿ ಮತ್ತು ಮಧುಗಿರಿಯ ಆಡಳಿತವನ್ನು ವಹಿಸಿದನು.[೨೦೮] ಕಾಳಚಿಕ್ಕಪ್ಪ ಗೌಡನ ಕಾಲಕ್ಕೆ ವಿಜಯನಗರದ ಮೂರನೆಯ ಶ್ರೀರಂಗ ರಾಜ್ಯವಿಲ್ಲದ ರಾಜನಾಗಿದ್ದರಿಂದ ಮಹಾನಾಡಪ್ರಭುತ್ವವೂ ಸಹ ಉಳಿಯಲಾರದೆಂದೂ ನಾಡಿನ ರಕ್ಷಣೆಗೆ ಬಲವಾದ ವ್ಯವಸ್ಥೆಮಾಡಿದನು. ಮಧುಗಿರಿ ಮತ್ತು ಕಮ್ಮನಕೋಟೆಗಳ ಗೌಡಿಕೆಯನ್ನು ರಂಗೇ ಗೌಡರಿಗೆ ನೀಡಿ ತನ್ನ ಇಬ್ಬರು ಮಕ್ಕಳಾದ ರಾಮಪ್ಪ ಗೌಡನಿಗೆ ಮಧುಗಿರಿ, ತಿಮ್ಮಪ್ಪ ಗೌಡನಿಗೆ ಚನ್ನರಾಯದುರ್ಗದ ಅಧಿಕಾರವನ್ನು ವಹಿಸಿದನು. ಆದರೆ ಚಿಕ್ಕದೇವರಾಜ ಒಡೆಯರ ದಳವಾಯಿ ಕಳಲೆಯ ದೇವರಾಜಯ್ಯ ಮಧುಗಿರಿಯ ಮೇಲೆ ದಾಳಿ ಮಾಡಿದ್ದರಿಂದ ಮಧುಗಿರಿಯ ಗಡಿದುರ್ಗಗಳಾದ ಮಿಡಿಗೇಶಿ, ಚೆನ್ನರಾಯದುರ್ಗ, ಗುಂಡುಮಲೆ, ಸಿದ್ಧಗಿರಿ, ಮಣ್ಣೆ, ವೀರಣ್ಣೇಶ್ವರ, ಬಿಜವರ, ಕೋಳಾಲ ಮೊದಲಾದವುಗಳನ್ನು ಕಳೆದುಕೊಂಡನಲ್ಲದೆ ೩೦ ವರ್ಷಗಳ ಕಾಲ ಸೆರೆಮನೆ ಅನುಭವಿಸಬೇಕಾಯಿತು. ಕೊನೆಗೆ ಕಾಳಪ್ಪ ಗೌಡನ ಮಗ ರಾಮಪ್ಪ ಗೌಡನು ಚಿಕ್ಕದೇವರಾಜ ಒಡೆಯರಲ್ಲಿ ವಿನಂತಿಸಿಕೊಂಡಿದ್ದರಿಂದ ಇಬ್ಬರನ್ನು ಸೆರೆಯಿಂದ ಬಿಡುಗಡೆಗೊಳಿಸಿ ಮಿಡಿಗೇಶಿಯ ಆಡಳಿತವನ್ನು ನೋಡಿಕೊಳ್ಳಲು ನೇಮಿಸಿದನು[೨೦೯].

ಕಾಳಪ್ಪ ಗೌಡನ ತರುವಾಯ ತೊಂಟಪ್ಪ ಗೌಡ ಕೆಲವು ಕಾಲ ಮಿಡಿಗೇಶಿಯಲ್ಲಿ ಆಳ್ವಿಕೆ ಮಾಡಿದರೂ ಸಹ ಮೈಸೂರು ರಾಜ್ಯಕ್ಕೆ ಈ ಸಂಸ್ಥಾನ ಸೇರ್ಪಡೆಗೊಂಡಿತು. ಆಗ ಹೈದರಾಲಿಯಿಂದ ತೊಂಟಪ್ಪ ಗೌಡನ ಮಗ ದೊಡ್ಡ ಕಣ್ಣಯ್ಯ ಗೌಡ ತೆರೆಯೂರು ಹೋಬಳಿಯ ೨೨೦೦೦ ವರಹದ ಸೀಮೆಯನ್ನು ಪಡೆದುಕೊಂಡನು. ಆದರೆ ಈತನ ಮಗ ಚೆನ್ನಬಸಪ್ಪ ಗೌಡನು ಟಿಪ್ಪುವಿನ ಅವಕೃಪೆಗೆ ಒಳಗಾಗಿ ರಾಜ್ಯ ಕಳೆದುಕೊಂಡು ಬ್ರಿಟೀಷರ ನೆರವನ್ನು ಕೋರಿದನು. ಆದರೂ ಯಾವುದೇ ಪ್ರಯೋಜನವಾಗದೆ ಬೇಡತ್ತೂರಿನಲ್ಲಿ ನೆಲೆ ನಿಂತನು. ನಂತರ ಈತನ ಅಣ್ಣನ ಮಗ ತೋಟದ ರಾಮಪ್ಪ ಗೌಡ ಶಂಭೋನಹಳ್ಳಿಯಲ್ಲಿ[೨೧೧] ಯಾವ ಅಧಿಕಾರವನ್ನು ಪಡೆಯಲಾಗದೆ ಸಾಮಾನ್ಯನಂತೆ ಬದುಕಬೇಕಾಗಿದ್ದು ವಿಪರ್ಯಾಸವೇ ಸರಿ. ಮಹಾನಾಡ ಪ್ರಭುಗಳು ಚೌಳೂರು ಅಮಸಂದ್ರ, ಹಂಪಸಂದ್ರ, ಇಡಗೂರು, ಕೊಂಡವಾಡಿ, ಕರಕಲ್ಲುತಿಪ್ಪೆ, ಹುಣಸುವಾಡಿ, ಕೊಡಗದಾಲ, ತುಂಬಾಡಿ, ಕೊರಟಗೆರೆ, ಬೆಳೆದರ, ಬೊಮ್ಮನಹಳ್ಳಿ, ನರಸೀಪುರ, ತೋಪುಹುಣಸೆ, ಕಲ್ಲಹಳ್ಳಿ, ಕುಂಬಾರಹಳ್ಳಿ, ಭಟ್ಟನಕೆರೆ, ರಾಮನಹಳ್ಳಿ, ಗೊಲ್ಲಹಳ್ಳಿ, ಕುರುಡಿಹಳ್ಳಿ, ಹತ್ತಿಕುಂಟೆ, ಕೊಡಿಗೆನಹಳ್ಳಿ, ಮಣ್ಣೂರು, ಕಲ್ಲುಮುರಿಗೆ, ಅಗ್ರಹಾರ, ಮಾದಪಿ, ತೆರೆಯೂರು ಮೊದಲಾದ ಗ್ರಾಮಗಳನ್ನು ತಮ್ಮ ಸುಪರ್ದಿಗೆ ಸೇರ್ಪಡೆಗೊಳಿಸಿಕೊಂಡಿದ್ದರು.

೨. ಗುಬ್ಬಿ ಹೊಸಹಳ್ಳಿ ಪಾಳೆಯಗಾರರು

ಮಹಾನಾಡ ಪ್ರಭುಗಳ ಏಳು ಜನ ಸಹೋದರರಲ್ಲಿ ಕಾಳಚಿಕ್ಕಪ್ಪ ಗೌಡನು ಗುಬ್ಬಿ ಹೊಸಹಳ್ಳಿಯಲ್ಲಿ ಏಳಿಗೆ ಹೊಂದಿ ತನ್ನ ಮನೆತನದ ಆಳ್ವಿಕೆಯನ್ನು ಮುಂದುವರೆಸಿದನು. ಈ ಮನೆತನದವರು ವಿಜಯನಗರ, ಮೈಸೂರು ಒಡೆಯರು, ಹೈದರ್, ಟಿಪ್ಪುವಿನವರೆಗೂ ಸುದೀರ್ಘವಾಗಿ ಅಧಿಕಾರವನ್ನು ಚಲಾಯಿಸಿದರೂ ದಾಖಲೆಗಳ ಕೊರತೆಯಿಂದ ಇವರ ಸ್ಪಷ್ಟ ಚಿತ್ರಣವನ್ನು ನೀಡಲಾಗುತ್ತಿಲ್ಲ. ಗುಬ್ಬಿಹೊಸಹಳ್ಳಿ ಪಾಳೆಯಗಾರರ ಕುಲದೇವತೆ ಆಲದ ಕೊಂಬೆಮ್ಮ(ಅಂದರೆ ವೃಕ್ಷದೇವತೆ) ಆಗಿದ್ದು, ಯಾವ ವೈದಿಕ ಪಂಗಡಗಳೂ ಪ್ರಾಣಿ ಅಥವಾ ವೃಕ್ಷವನ್ನೂ ಚಿನ್ಹೆ ಅಥವಾ ದೇವತೆಯನ್ನಾಗಿ ಆರಾಧಿಸುವುದಿಲ್ಲ. ಆದುದರಿಂದ ಈ ಮನೆತನ ಮೂಲತಃ ವೈದಿಕ ಪಂಗಡ ಅಥವಾ ಬುಡಕಟ್ಟು ಸಮುದಾಯಕ್ಕೆ ಸೇರಿದವರಾಗಿದ್ದಾರೆ(ವಸು ಎಂ.ವಿ., ೨೦೦೧, ಪೂರ್ವೋಕ್ತ, ಪು.ಸಂ.೨೧೯).

ಈ ಸಂಸ್ಥಾನ ಕೋಡಿಪಾಳ್ಯ, ಪ್ರಭುವನಹಳ್ಳಿ, ಗುರುಗುಂಜಿನಹಳ್ಳಿ, ಅರವೆಸಂದ್ರ, ಬೇಡಗೆರೆ ನಡುವಿನಪಾಳ್ಯ, ಸುರುಗೇನಹಳ್ಳಿ, ಮರಾಠಿಪಾಳ್ಯ, ಓಬಳ, ಬಿಳಿಗೆರೆ, ಬಿಕ್ಕೆಗುಡ್ಡ, ದೊಡ್ಡೇರಿ, ಕಡೇಪಾಳ್ಯ, ಕಕ್ಕೇನಹಳ್ಳಿ, ತೊಂಗನಹಳ್ಳಿ ಮೊದಲಾದ ೩೩ ಹಳ್ಳಿಗಳ ಮೇಲೆ[೨೧೧] ಅಧಿಕಾರ ಹೊಂದಿತ್ತು. ಕ್ರಿ.ಶ. ೧೧೭೭ರ ವೋಟುಕೆರೆ ಶಾಸನ, ಕ್ರಿ.ಶ. ೧೧೨೭ರ ಪುರ ಶಾಸನ, ಕ್ರಿ.ಶ. ೧೧೨೭ರ ಪುರಶಾಸನ ಕ್ರಿ.ಶ.೧೩೧೪ರ ಮೆಳೆಕೋಟೆ ಶಾಸನಗಳು ಕಾಳೇಗೌಡನನ್ನು ಉಲ್ಲೇಖಿಸುತ್ತವೆ. ಈತನ ಆರು ಜನ ಸಹೋದರರಿಗೆ ಸರಿಹೊಂದುವ ಮೂರನೆ ಬಲ್ಲಾಳನ

ಅಧಿಕಾರದ ಅವಧಿಯಲ್ಲಿ ಗುಬ್ಬಿಯಕೋಟೆ ನಿರ್ಮಾಣ ಆಗಿರಬಹುದು. ಬೀರಪ್ಪ ಗೌಡನಿಂದ ಪ್ರಭುವನಹಳ್ಳಿಯಲ್ಲಿ ಕೋಟೆ ನಿರ್ಮಾಣವಾಯಿತು. ವೀರಪ್ಪ ಗೌಡನ ನಂತರ ಕ್ರಮವಾಗಿ, ಹೊನ್ನಪ್ಪಗೌಡ, ತೋಟಪ್ಪ ಗೌಡ, ಮುಮ್ಮಡಿ ತೋಟಪ್ಪಗೌಡ, ಹಿರೇಹೊನ್ನಪ್ಪ ಗೌಡ, ಮುಮ್ಮಡಿ ಹೊನ್ನಪ್ಪ ಗೌಡರು[೨೧೨] ಆಳ್ವಿಕೆ ನಡೆಸಿದ್ದಾರೆ.

ಹೀಗೆ ಮಹಾನಾಡ ಪ್ರಭುಗಳು ಸುಮಾರು ೪೦೦ ವರ್ಷಗಳ ಸುದೀರ್ಘ ಆಡಳಿತವನ್ನು ನೀಡಿದ್ದರೆನ್ನಲು ಅವರು ರಕ್ಷಣಾವಲಯದಲ್ಲಿ ವಹಿಸಿದ ವೈಜ್ಞಾನಿಕ ತಂತ್ರೋಪಾಯಗಳು ಸಹ ಕಾರಣವಾಗಿದ್ದವು. ಇವರ ಕಾಲದಲ್ಲಿ ಕೋಟೆಗಳ ನಿರ್ಮಾಣದಲ್ಲಿ ಸಾಮಾನ್ಯ ಜನರ ಭಾಗವಹಿಸುವಿಕೆ ಇತ್ತು ಎಂಬುದು ಕಡೂತಿ ಶಾಸನದಿಂದ ಸ್ಪಷ್ಟವಾಗುತ್ತದೆ. ಕಡೂತಿ ಕೋದಳೆಂದರೆ ನಿರ್ಮಾಣಕ್ಕಾಗಿ ವ್ಯಯಿಸಿದ ೨೪೦೦ ವರಹಗಳ ಸಾಲವನ್ನು ಜಿರಳೆಮಲ್ಲಮ್ಮ ಎಂಬಾಕೆ ಬೆಣ್ಣೆಯನ್ನು ಮಾರಿ ತೀರಿಸಿದಳೆಂದರೆ ಈ ಭಾಗದಲ್ಲಿ ರಾಜಕೀಯ ಅನೈಕ್ಯತೆ ಹೆಚ್ಚಾದದ್ದು ಸ್ಪಷ್ಟವಾಗುತ್ತದೆ. ಹೀಗೆ ಪದೇ ಪದೇ ದಾಳಿಗಳಿಗೆ ತುತ್ತಾಗುತ್ತಿದ್ದ ಗ್ರಾಮಗಳ ಕೋಟೆ ಅಥವಾ ಬುರುಜುಗಳನ್ನು ನಿರ್ಮಿಸಲು ಸಾಮಾನ್ಯ ಜನರು ಸಹ ಆಸಕ್ತಿ ವಹಿಸುತ್ತಿದ್ದರು ಎಂಬಂತಹ ಅಂಶ ಇದರಿಂದ ವೇದ್ಯವಾಗುತ್ತದೆ.

೨.೪.೧೬. ಹಾಗಲವಾಡಿ ನಾಯಕರು

ವಿಜಯನಗರ ಸ್ಥಾಪನೆಯ ಕಾಲಕ್ಕೆ ದಖ್ಖನ್ ಪ್ರಾಂತ್ಯದಲ್ಲಿ ಹಲವು ಪಾಳೆಯಪಟ್ಟುಗಳು ಕೋಟೆ–ಕೊತ್ತಲಗಳನ್ನು ಕಟ್ಟಿಕೊಂಡು ದಕ್ಷ ಆಡಳಿತಗಾರರಾಗಿ ಬದುಕಿದರು. ಅಂತಹವರಲ್ಲಿ ಹಾಗಲವಾಡಿ ನಾಯಕರು ಒಬ್ಬರಾಗಿದ್ದಾರೆ. ಇವರು ಎರೆಕಟ್ಟೆ, ಚಿಕ್ಕನಾಯಕನಹಳ್ಳಿ, ಹಾಗಲವಾಡಿಗಳಲ್ಲಿ ಕ್ರಮವಾಗಿ ಕೋಟೆಗಳನ್ನು ಕಟ್ಟಿಸಿ ಸುಮಾರು ಮುನ್ನೂರು ವರ್ಷಗಳ ಕಾಲ ಸುದೀರ್ಘ ಆಳ್ವಿಕೆ ನಡೆಸಿದ್ದರೆ ಎಂದರೆ ಇವರ ರಕ್ಷಣಾ ತಂತ್ರಗಳು ಹೇಗಿದ್ದವು ಎಂಬುದು ಯೋಚನೆಗೆ ನಿಲುಕದ್ದಾಗಿದೆ.

ಸಾಮಾನ್ಯವಾಗಿ ವೈದಿಕ ಪರಂಪರೆಯಲ್ಲಿ ಅವೈದಿಕ ಪಂಗಡಗಳು ಉತ್ತುಂಗಕ್ಕೆ ಬಂದರೆ ಆ ಪಂಗಡವನ್ನು ವೈದಿಕಗೊಳಿಸುವ ಹುನ್ನಾರ ಸದಾ ಕಾಲ ನಡೆಯುತ್ತಲೇ ಇರುತ್ತದೆ. ಇದರಿಂದ ಹಾಗಲವಾಡಿ ಮನೆತನವೇನೂ ಹೊರತೇನಲ್ಲ. ಹಾಗಲವಾಡಿ ನಾಯಕರು ಮೂಲತಃ ಬೇಡರಾಗಿದ್ದರೆಂದು ಹಲವು ವಿದ್ವಾಂಸರು ಒಪ್ಪಿಕೊಂಡರೂ, ವೀರಶೈವ ಧರ್ಮಕ್ಕೆ ಭೈರನಾಯಕನ ಕಾಲದಲ್ಲಿ ಮತಾಂತರ ಹೊಂದಿದರೆಂದು ಹೇಳುತ್ತಾರೆ. ಆದರೆ ಹಾಗಲವಾಡಿ ವಂಶಜರನ್ನು ಹಾಗಲವಾಡಿಯಲ್ಲಿ ಭೇಟಿಯಾದಾಗ ಅವರು ಬೇಡ ಕುಲದಲ್ಲಿಯೇ ಮುಂದುವರೆಯುತ್ತಿದ್ದಾರೆ ಎಂಬುದನ್ನು ತಿಳಿಯಲಾಗಿದೆ. ಹಾಗಲವಾಡಿ ಪಾಳೆಯಗಾರರ ಆರಂಭ ಕಾಲದಿಂದಲೂ ಆಚರಿಸಲ್ಪಡುತ್ತಿರುವ ರಾಂಪುರದ ಜಾತ್ರೆಯಲಿವಿಂದಿಗೂ ಇವರ ಮನೆತನದವರು ಪಟ್ಟದ ಆರತಿ, ಪಟ್ಟದ ಕೋಣ, ಪಟ್ಟದ ಕಲಶವನ್ನು ಇಟ್ಟು ಪೂಜಿಸಿದ

ನಂತರವೇ ಕೈಂಕರ್ಯಗಳು ನೆರವೇರುತ್ತವೆ. ಹಾಗಲವಾಡಿ ವಂಶಜರಾದ ಕೃಷ್ಣಪ್ಪನಾಯಕರನ್ನು ಸಂದರ್ಶಿಸಿದಾಗ ಮುದಿಯಪ್ಪನ ಕಾಲದಲ್ಲಿ ಶಿವನ ಪೂಜೆಗಾಗಿ ಆತನ ತಂಗಿಯ ಮಗನಿಗೆ ಮಾತ್ರ ಲಿಂಗಧಾರಣೆ ಮಾಡಿದರೇ ಹೊರತು ಎಲ್ಲರೂ ವೀರಶೈವ ಧರ್ಮಕ್ಕೆ ಮತಾಂತರ ಹೊಂದಲಿಲ್ಲ ಎಂದೂ, ಹಾಗಾಗಿಯೇ ಇಂದಿಗೂ ನಾವು ಬೇಡ ಕುಲದಲ್ಲಿಯೇ ವಾಸವಾಗಿದ್ದೇವೆ ಎಂದು ತಿಳಿಸಿದರು. ಹೀಗೆ ತಳ ಸಮುದಾಯಗಳನ್ನು ವೈದೀಕರಿಸಿರುವುದನ್ನು ಗಮನಿಸಿದರೆ ಇದುವರೆಗೂ ಅವೈದಿಕ ಪಂಗಡಗಳ ಕುರಿತಾಗಿ ಆಗಿರುವಂತಹ ಅಧ್ಯಯನಗಳನ್ನು ಅನುಮಾನದಿಂದಲೇ ನೋಡಬೇಕಾಗುತ್ತದೆ. ಏಕೆಂದರೆ ಹಾಗಲವಾಡಿ ನಾಯಕರನ್ನು ಉಲ್ಲೇಖಿಸುವ ಕ್ರಿ.ಶ.೧೫೮೯ರ ಬೆಳವಾಡಿ ಶಾಸನ, ಕ್ರಿ.ಶ. ೧೬೨೩ರ ಜೋಗಿಹಳ್ಳಿ ಶಾಸನ, ಕ್ರಿ.ಶ. ೧೬೩೯ರ ಚಿಕ್ಕನಾಯಕನಹಳ್ಳಿ ಶಾಸನ, ಕ್ರಿ.ಶ. ೧೭೮೯ರ ಜೋಡಿತಿರುಮಲಾಪುರ ಶಾಸನ, ಕ್ರಿ.ಶ. ೧೭೩೯ರ ಮೂಗನಾಯಕನಹಳ್ಳಿ ಶಾಸನ ಮೊದಲಾದವು ಎಲ್ಲಿಯೂ ಅವರನ್ನು ವೀರಶೈವರೆಂದು ಕರೆದಿಲ್ಲ.[೨೧೩]

ಕ್ರಿ.ಶ. ೧೪೭೮ರಲ್ಲಿ[೨೧೪] ಏರಿಮಾದನಾಯಕನು ಎರೆಕಟ್ಟೆ ಎಂಬಲ್ಲಿ ಕೋಟೆಯನ್ನು ಕಟ್ಟಿ ಹಾಗಲವಾಡಿ ಮನೆತನವನ್ನು ಆರಂಭಿಸಿದನು. ಈತ ಮೂಲತಃ ಆಂಧ್ರದ "ತುಮ್ಮಳ" ಪ್ರಾಂತ್ಯದಿಂದ ವನವಾಸದುರ್ಗಕ್ಕೆ ಬಂದಾಗ ಆಳ್ವಿಕೆಗಾಗಿ ದ್ರವ್ಯ ಸಿಕ್ಕಿದ್ದು ಸಂಸ್ಥಾನ ಕಟ್ಟುವಂತೆ ಮಾಡಿತು. ಈತನ ತರುವಾಯ ಸಾಲಿನಾಯಕ(೧೫೩೪-೧೫೮೦) ಎರೆಕಟ್ಟೆಯಲ್ಲಿ ಕೋಟೆಯನ್ನು ಬಲಪಡಿಸಿ ತನ್ನ ತಮ್ಮ ಚಿಕ್ಕನಾಯಕನ ಹೆಸರಿನಲ್ಲಿ ಚಿಕ್ಕನಾಯಕನಹಳ್ಳಿ ಎಂಬ ಗ್ರಾಮವನ್ನು ನಿರ್ಮಿಸಿ ಹೊನ್ನವಳ್ಳಿ, ತುರುವೇಕೆರೆ, ನೊಣದಿನಕೇರಿಗಳನ್ನು ಸಂಸ್ಥಾನಕ್ಕೆ ಸೇರ್ಪಡೆ ಮಾಡಿಕೊಂಡನು. ೧೫೪೪[೨೧೫]ರಲ್ಲಿ ಸಾಲಿನಾಯಕ ಮರಣ ಹೊಂದಿದ್ದರಿಂದ ಅವನ ಮಗ ಭೈರನಾಯಕ(೧೫೮೦-೧೬೦೧) ಅಧಿಕಾರ ವಹಿಸಿಕೊಂಡು ಸುಗ್ಗೇನಹಳ್ಳಿ ಹೊನ್ನವಳ್ಳಿ, ಶೆಟ್ಟಿಕೆರೆಯ ಮೇಲೆ ದಾಳಿ ಮಾಡಿ ಕಂದಿಕೆರೆ ಮತ್ತು ಚಿಕ್ಕಸಾಮಕನಹಳ್ಳಿಯಲ್ಲಿ ಕೋಟೆಯನ್ನು ಕಟ್ಟಿ ಚಿಕ್ಕನಾಯಕನಹಳ್ಳಿಗೆ ರಾಜಧಾನಿಯನ್ನು ವರ್ಗಾಯಿಸಿದನು.[೨೧೬] ಭೈರನಾಯಕನ ನಂತರ ಹಿರಿಮುದಿಯಪ್ಪನಾಯಕ(೧೬೧೦-೧೬೩೦) ಹಾಗಲವಾಡಿ, ಹೊಸಕೆರೆ, ಅಳಗಟ್ಟೆ, ನಿಟ್ಟೂರು, ತ್ಯಾಗಮಾರು, ಆದಲಕೆರೆ, ನೊಣಬನಕೆರೆ ಮೊದಲಾದವುಗಳನ್ನು ವಶಪಡಿಸಿಕೊಂಡು, ಕ್ರಿ.ಶ. ೧೬೧೮ರಲ್ಲಿ ಹಾಗಲವಾಡಿಯಲ್ಲಿ ಹೊಸದಾಗಿ ಕೋಟೆ ನಿರ್ಮಿಸಿ ಅಲ್ಲಿ ಶಸ್ತ್ರಾಸ್ತ್ರ ಸಂಗ್ರಹಗಾರ ಮತ್ತು ಹುಚ್ಚ ರಾಮೇಲಿಂಗ ಎಂಬ ದೊಡ್ಡದೊಂದು ಫಿರಂಗಿಯನ್ನು ಮಾಡಿಸಿದನು[೨೧೭]. ಈತನ ತರುವಾಯ ಇಮ್ಮಡಿ ಭೈರಪ್ಪನಾಯಕನ ಚಾಮರಾಜ ಒಡೆಯರು ಮತ್ತು ಬಿಜಾಪುರದ ಸೇನಾನಿ ರಣದುಲ್ಲಾಖಾನ ದಾಳಿ ಮಾಡಿ ಹಾಗಲವಾಡಿ ಸಂಸ್ಥಾನ ೧/೩ ಭಾಗವನ್ನು ಪಡೆದುಕೊಂಡರು. ಕೆಲವೇ ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡ ನಾಯಕರು ತುರುವೇಕೆರೆ ಕೋಟೆಯನ್ನು ಸಹ ಒಡೆಯರಿಗೆ ಗೆದ್ದುಕೊಡಬೇಕಾಯಿತು[೨೧೮] ಏರ್ಪಟ್ಟಿತು. ಇಮ್ಮಡಿ

ಭೈರಪ್ಪನಾಯಕನ ನಂತರ ಮೊದಲನೆಯ ಚೆನ್ನಬಸಪ್ಪ ನಾಯಕ, ರಾಮಪ್ಪ ನಾಯಕರು ಆಳ್ವಿಕೆ ನಡೆಸಿದರು. ಇಮ್ಮಡಿ ಚೆನ್ನಬಸಪ್ಪ ನಾಯಕ (ಕ್ರಿ.ಶ. ೧೭೪೦-೧೭೫೩) ಮೇಲೆ ಕ್ರಿ.ಶ. ೧೭೪೭ರಲ್ಲಿ ಮೊಘಲರ ದಂಡನಾಯಕ ಸಲಾಬತ್‌ಜಂಗ್‌ನ ದಾಳಿಮಾಡಿ ಹಾಗಲವಾಡಿ ಕೋಟೆಯನ್ನು ನಾಶಪಡಿಸಿದ್ದರಿಂದ ಮೊಗನಾಯಕನ ಕೋಟೆಗೆ ಓಡಿಹೋದನು. ಅಲ್ಲಿಯೇ ಸೈನ್ಯವನ್ನು ಸಜ್ಜುಗೊಳಿಸಿ ಸಿರಾದ ಸುಬೇದಾರ ದಿಲಾವಾರ್‌ಖಾನನ ನೆರವಿನಿಂದ ಮಂಚಲದೊರೆ[೩೦೭] ಮತ್ತು ಅದಕ್ಕೆ ಸೇರಿದ ಹನ್ನೆರಡು ಹಳ್ಳಿಗಳನ್ನು ಉಂಬಳಿಯಾಗಿ ಪಡೆದನು. ಈತನ ನಂತರ ಪ್ರಸನ್ನರಾಮಪ್ಪನಾಯಕ (ಕ್ರಿ.ಶ. ೧೮೫೩-೧೭೫೬), ಮುದಿಯಪ್ಪನಾಯಕ(೧೭೭೫-೧೭೭೬) ಅಧಿಕಾರ ನಡೆಸಿದರಾದರೂ ಈ ವೇಳೆಗೆ ಹೈದರ್ ಈ ಭಾಗದಲ್ಲಿ ಪ್ರಬಲನಾಗಿದ್ದರಿಂದ ಹಲವು ಪಾಳೆಪಟ್ಟುಗಳಂತೆ ಹಾಗಲವಾಡಿ ಮನೆತನವು ಹೈದರನ ರಾಜ್ಯದಲ್ಲಿ ಸೇರ್ಪಡೆಗೊಳ್ಳುವಂತೆ ಮಾಡಿತು(ಪು.೧೧೮). ಮುದಿಯಪ್ಪನಾಯಕ ಅಪ್ರಾಪ್ತನಾಗಿದ್ದರಿಂದ ಬೋಗಸಂದ್ರ, ಶಿವಪುರ, ಯಕ್ಕಲಕಟ್ಟೆ[೨೨೦] ಗ್ರಾಮಗಳ ಜಾಗೀರನ್ನು ನೀಡಿದನು. ಮುದಿಯಪ್ಪನಾಯಕ ಸನ್ಯಾಸ ಸ್ವೀಕರಿಸಿ ದೇಶಾಂತರ ಸಂಚರಿಸುತ್ತಾ ಸಾಗಿದ್ದರಿಂದ ಹಾಗಲವಾಡಿ ಮನೆತನದ ಸುಮಾರು ೩೦೦ ವರ್ಷಗಳ ಸುದೀರ್ಘ ಆಳ್ವಿಕೆ ಅಂತ್ಯಗೊಂಡಿತು.

೨.೪.೧೭. ನಿಡುಗಲ್ಲು ನಾಯಕರು

ಸಾಮಾನ್ಯವಾಗಿ ಕರ್ನಾಟಕದ ಹಲವು ರಾಜಮನೆತನದ ಮೂಲಪುರುಷರನ್ನು ಗಮನಿಸಿದರೆ ಅವರು ಸ್ವಾರಸ್ಯಕರ ದಂತಕತೆಗಳೊಂದಿಗೆ ಗುರುತಿಸಿಕೊಂಡಿರುವುದು ಕಂಡುಬರುತ್ತದೆ. ಅಂತಹವರಲ್ಲಿ ನಿಡಗಲ್ಲು ನಾಯಕರೇನು ಹೊರತಲ್ಲ. ಆದರೂ ನಿಡುಗಲ್ಲಿನ ಮಳೆಮಲ್ಲಿಕಾರ್ಜುನ ಮತ್ತು ಮಾಟನೂರು ಬಾಗಿಲಿನ ಕ್ರಿ.ಶ. ೧೪೮೭ರ ಶಾಸನಗಳು ಇವರಿಗೆ ಸಂಬಂಧಿಸಿದ ಮೊದಲ ಚಾರಿತ್ರಿಕ ದಾಖಲೆಗಳಾಗಿವೆ. ಕ್ರಿ.ಶ. ೧೪೮೭ರ ಮಾಟನೂರು ಶಾಸನ[೨೨೧] ಚಿಕ್ಕತಿಪ್ಪನೃಪನನ್ನು "ದುರ್ಘಟ ವೀಕರ್ನಾಟಕದುರ್ಗಂಗಳಿಗದಿಕವೆನಿಪ ನಿಡುಗಲ್ಲೆಂ ಬೀದುರ್ಗವ ನೊಲಿದಾಳು ತದಿಹುದುರ್ಗ ಕಧಿಪನೆಂಬಾದಾಲ ಚಿಕ್ಕತಿಪ್ಪ ನೃಪಂ" ಎಂದು ಉಲ್ಲೇಖಿಸಿದೆ. ಅಂದರೆ ಕರ್ನಾಟಕದ ಅತಿದೊಡ್ಡ ಕೋಟೆಗಳಲ್ಲಿ ಒಂದಾದ ನಿಡುಗಲ್ಲನ್ನು ಚಿಕ್ಕತಿಪ್ಪನೃಪನು ಆಳುತ್ತಿದ್ದನೆಂದು ತಿಳಿಸುವುದರಿಂದ ಬಹುಶಃ ಈತನಿಂದಲೇ ಈ ಮನೆತನದ ಆಳ್ವಿಕೆ ಆರಂಭವಾಗಿರಬೇಕು. ಆದರೆ ಇದೇ ಶಾಸನದಲ್ಲಿ ಉಲ್ಲೇಖವಿರುವ ಹೊಯ್ಸಳರ ದಂಡಾಧಿಕಾರಿ ಹೊಳಕಲ್ಲಬೊಮ್ಮನ ತಲೆಯನ್ನು ಕಡಿದನೆಂಬ ಪ್ರಸ್ತಾಪ ಇರುವುದರಿಂದ ಹೊಳಕಲ್ಲಬೊಮ್ಮ ಯಾರು ಎಂಬ ಸಂದೇಹ ಉಂಟಾಗುತ್ತದೆ. ಏಕೆಂದರೆ ಕ್ರಿ.ಶ. ೧೩೩೮ರ ಹಿರೇಗುಂಡಕಲ್‌ನ ಶಾಸನದಲ್ಲಿ ಉಲ್ಲೇಖವಿರುವ ಹೊಳಕಲ್ಲ್‌ಬೊಮ್ಮನ ಕಾಲಕ್ಕೂ ಚಿಕ್ಕತಿಪ್ಪನೃಪನ ೧೪೮೭ರ ಕಾಲಕ್ಕೂ ೧೫೦ ವರ್ಷಗಳ ಅಂತರವಿದೆ. ಹಾಗಾಗಿ ಕ್ರಿ.ಶ.೧೪೮೭ರ ಶಾಸನದಲ್ಲಿರುವ ಹೊಳಕಲ್ಲಬೊಮ್ಮನು ಮೊಮ್ಮಗನಿರಬಹುದು. ನಂತರದಲ್ಲಿ ಆತನ ಶಿರಶ್ಛೇದ ಮಾಡಿರುವ

ಸಾಧ್ಯತೆಗಳಿವೆ. ಚಿಕ್ಕತಿಪ್ಪನ ನಂತರ ಕಾಮಾನಾಯಕ, ಅಬ್ಬಿನಾಯಕ, ಬೊಮ್ಮನಾಯಕರು ಕ್ರಮವಾಗಿ ಆಳ್ವಿಕೆ ನಡೆಸಿದರು. ಬೊಮ್ಮನಾಯಕನು ಕ್ರಮವಾಗಿ ಕೃಷ್ಣದೇವರಾಯನಿಂದ ಮಾಚಸಮುದ್ರ, ಗೋಸಿಕೆರೆ, ಚಳ್ಳಕೆರೆ, ದೊಡ್ಡೇರಿ, ಹರತಿಯಿಂದ ಪೂರ್ವದಲ್ಲಿ ಪಾವಗಡದವರೆಗೆ, ಉತ್ತರದಲ್ಲಿ ಮೊಣಕಾಲ್ಮೂರುವರೆಗೆ, ದಕ್ಷಿಣದಲ್ಲಿ ಸಿರಾದವರೆಗಿನ ಪ್ರದೇಶವನ್ನು ಅಮರಮಾಗಣಿಯಾಗಿ ಪಡೆದುಕೊಂಡನು. ಬೊಮ್ಮನಾಯಕ ತನ್ನ ಹಿರಿಯ ಮಗನಾದ ಈಶ್ವರ ನಾಯಕನಿಗೆ ದೊಡ್ಡೇರಿ, ನಿಡುಗಲ್ಲು ಪರಿಸರವನ್ನು ವಹಿಸಿದನು. ಈತನ ನಂತರ ಚಿಕ್ಕಣ್ಣ ನಾಯಕ, ಹೊಟ್ಟಣ್ಣ ನಾಯಕರು ಆಳ್ವಿಕೆ ನಡೆಸಿದರು, ಹೊಟ್ಟಣ್ಣ ನಾಯಕನ ಉತ್ತರಾಧಿಕಾರಿಯಾದ ತಿಮ್ಮಣ್ಣನಾಯಕನಿಗೆ ಸಂಬಂಧಿಸಿದಂತೆ ಕ್ರಿ.ಶ. ೧೫೬೪ರ ಶಾಸನವೇ ಕೊನೆಯ ಶಾಸನವಾಗಿದೆ. ಈತನ ನಂತರ ೧೫೬೪ ರಿಂದ ೧೬೫೪[೨೨೩]ರವರೆಗಿನ ನಿಡುಗಲ್ಲಿನ ಚರಿತ್ರೆಯನ್ನು ಉಲ್ಲೇಖಿಸುವ ಯಾವ ದಾಖಲೆಗಳು ದೊರೆಯದಿರುವ ಕಾರಣ ಹರತಿ ನಿಡುಗಲ್ಲು ನಾಯಕರೇ ಆಳ್ವಿಕೆಯನ್ನು ನಡೆಸಿದ್ದಿರಬಹುದು.

೨.೪.೧೮. ಸಿರಾ ಪಾಳೆಯಗಾರರು

ಶಾಸನಗಳ ಆಧಾರದಿಂದ ಸಿರಾವನ್ನು ಹೊಳಕಲ್ಲಬೊಮ್ಮ ಕೋಟಗೆರೆಯ ಕೋಟನಾಯಕನ ಮಗ ಮಲ್ಲಯ್ಯ ಮೊದಲಾದ ಪಾಳೆಯಗಾರರು ಆಳ್ವಿಕೆ ನಡೆಸುತ್ತಿದ್ದರು. ಆದರೆ ದುಂಡಪ್ಪನಾಯಕನ ಮಗನಾದ ಲಕ್ಷ್ಮಿಪತಿನಾಯಕ ಕ್ರಿ.ಶ. ೧೫೬೦ರಲ್ಲಿ ಸಿರಾ, ಅಗಳಿ, ದೊಡ್ಡೇರಿಗಳನ್ನು ವಿಜಯನಗರದ ಅರಸರಿಂದ ಅಮರಮಾಗಣಿಯಾಗಿ ಪಡೆದನೆಂದು ಗೊಲ್ಲಹಳ್ಳಿಯ ಕ್ರಿ.ಶ. ೧೫೬೦ರ ಶಾಸನ[೨೨೪] ಉಲ್ಲೇಖಿಸುತ್ತದೆ. ಅಧಿಕೃತವಾಗಿ ಹರತಿ ಪಾಳೆಯಗಾರರ ವಂಶ ಸಿರಾದಲ್ಲಿ ಈತನಿಂದಲೇ ಆರಂಭವಾಗುತ್ತದೆ. ಈತನ ಮಗ ರಂಗಪ್ಪನಾಯಕನು(೧೫೮೦) ಸಿರಾ ಪಟ್ಟಣದಲ್ಲಿ ಸಿರಿಯಣ್ಣ ಮತ್ತು ದೇವಣ್ಣ ಎಂಬುವವರ ನೆರವಿನಿಂದ ಮಣ್ಣಿನ ಕೋಟೆಯನ್ನು ನಿರ್ಮಿಸಿದನು[೨೨೫]. ಈತನ ನಂತರ ಇಮ್ಮಡಿ ರಂಗಪ್ಪನಾಯಕರು(ಕ್ರಿ.ಶ.೧೬೧೨), ಮುಮ್ಮಡಿ ರಂಗಪ್ಪನಾಯಕ (ಕ್ರಿ.ಶ. ೧೬೨೬) ಆಳ್ವಿಕೆ ನಡೆಸಿದರು. ಲಕ್ಷ್ಮಿಪತಿನಾಯಕನ ಮತ್ತೊಬ್ಬ ಮಗ ಚಿಕ್ಕರಂಗಪ್ಪನಾಯಕ ಹರತಿ ಸೀಮೆಯಲ್ಲಿ ಏಳಿಗೆ ಹೊಂದಿದನಾದರೂ ವಂಶಿಕರ ಬಗೆಗೆ ಯಾವ ಆಕರಗಳು ದೊರೆಯುವುದಿಲ್ಲ. ಇದೇ ಹರತಿ ವಂಶಕ್ಕೆ ಸೇರಿದ ಕೆಂಚಣ್ಣ ಮತ್ತು ಆತನ ಮಗ ಇಮ್ಮಡಿ ಕೆಂಚಣ್ಣನಾಯಕರು ಬುಕ್ಕಾಪಟ್ಟಣ, ಹುಯಿಲದೊರೆ, ಹೊನ್ನೇನಹಳ್ಳಿ, ಗಾಣದಹುಣಸೆಯಲ್ಲಿ ಆಳ್ವಿಕೆ ನಡೆಸಿದರು. ಸಿರಾಪಾಳೆಯಗಾರರ ಮತ್ತೊಂದು ಶಾಖೆ ರತ್ನಗಿರಿ ಮಿಡಗೇಶಿಯಲ್ಲಿ ಆಳ್ವಿಕೆ ನಡೆಸಿದರು. ಇವರಲ್ಲಿ ಸಮ್ಮೋಟ ಸರಜಕೃಷ್ಣಪ್ಪನಾಯಕ, ರಂಗಪ್ಪರಾಜ, ಕಸ್ತೂರಿ ರಂಗಪ್ಪರಾಜ(೧೬೨೧)[೨೨೬]ರು ಆಳ್ವಿಕೆ ನಡೆಸಿದರು. ಹೀಗೆ ರಾಜಕೀಯ ಅನ್ಯೆಕ್ಯತೆಯ ಹಿನ್ನೆಲೆಯಲ್ಲಿ ಸಿರಾ, ರತ್ನಗಿರಿ, ಮಿಡಿಗೇಶಿಗಳಲ್ಲಿ ಆಳ್ವಿಕೆ ನಡೆಸಿದ ಇವರು ಅಲ್ಲಿಯ ಕೋಟೆ-ಕೊತ್ತಲಗಳನ್ನು

ನಿರ್ಮಿಸಿ ಗಡಿ ಪ್ರಾಂತ್ಯಗಳನ್ನು ಭದ್ರಪಡಿಸಿಕೊಂಡಿದ್ದರೆಂಬ ಅಂಶ ಅವರ ಕಾಲದ ಕೋಟೆಗಳ ರಚನಾ ಶೈಲಿಯಿಂದ ತಿಳಿಯುತ್ತದೆ.

೨.೪.೧೯. ರತ್ನಗಿರಿ ಪಾಳೆಯಗಾರರು

ರತ್ನಗಿರಿ ಕೋಟೆಯು ಇಂದು ಆಂಧ್ರಪ್ರದೇಶಲ್ಲಿದ್ದರೂ ಅದರ ಆಳ್ವಿಕೆ ಪ್ರದೇಶ ಮಾತ್ರ ಇಂದಿನ ಮಧುಗಿರಿ, ಸಿರಾ ತಾಲೂಕುಗಳ ಹಲವು ಪ್ರದೇಶಗಳನ್ನು ಒಳಗೊಂಡಿತ್ತು. ಆದುದರಿಂದ ಈ ಪರಿಸರದಲ್ಲಿ ಹಲವು ಕೋಟೆಗಳ ನಿರ್ಮಾಣ ಕಾರ್ಯ ಇವರಿಂದ ನಡೆದಿತ್ತು. ಹಾಗಾಗಿ ಇವರ ಅಧ್ಯಯನ ಪ್ರಸ್ತುತ ಸಂದರ್ಭದಲ್ಲಿ ಅವಶ್ಯಕವೆನಿಸುತ್ತದೆ. ಮೂಲತಃ ಇವರು ಹರತಿ ಪಾಳೆಯಗಾರರ ವಂಶಕ್ಕೆ ಸೇರಿದ್ದರಿಂದ ಸಿರಾ ಪಾಳೆಯಗಾರರೊಂದಿಗೆ ಅನ್ಯೋನ್ಯ ಸಂಬಂಧ ಹೊಂದಿದ್ದರು. ಈ ಮನೆತನದ ಆಳ್ವಿಕೆ ರಾಮರಾಜನಿಂದ ಆರಂಭವಾಗಿ ಕಾಮರಾಜ, ಅಂಬಯ್ಯರಾಜ, ಈಶ್ವರಪ್ಪರಾಜ, ಹಿರೇಒಡೆಯ, ದುಂಡಿರಾಜ, ನಾರಾಯಣರಾಜ, ಧೂಳಿರಾಜ, ಪದ್ಮರಾಜ, ಲಕ್ಷ್ಮಣರಾಜ, ಕರೆ ರಂಗಪ್ಪರಾಜ, ದೊಡ್ಡ ಕಸ್ತೂರಿರಂಗರಾಜ, ಸರ್ಜಪ್ಪರಾಜ, ಕೃಷ್ಣರಾಜ, ರಾಯಪ್ಪರಾಜ, ೨ನೆಯ ರಾಮಪ್ಪರಾಜ, ೨ನೆಯ ರಂಗಪ್ಪರಾಜ, ೪ನೆಯ ರಾಯಪ್ಪರಾಜ, ನಂದರಾಜ, ವೀರರಾಯಪ್ಪರಾಜ, ಇಮ್ಮಡಿ ನಂದರಾಜ ಮೊದಲಾದವರು ಕ್ರಮವಾಗಿ ಆಳ್ವಿಕೆ ನಡೆಸಿದರು. ಇವರಲ್ಲಿ ಕ್ರಿ.ಶ. ೧೬೭೪ರಲ್ಲಿ ರಾಯಪ್ಪರಾಜ ಹರತಿ, ಐಮಂಗಲ ತೆರೂರು, ಬ್ರಹ್ಮಸಮುದ್ರ, ಕವಣದಾಲ, ದಬ್ಬೆಗಟ್ಟ, ಭಸ್ಮಾಂಗಿ, ಹಿರೇಸಮುದ್ರ ದ್ಯಾವರಕೊಂಡ ಮೊದಲಾದ ಪ್ರಾಂತ್ಯಗಳನ್ನು ಸೇರ್ಪಡೆಗೊಳಿಸಿದನು. ಆದರೆ ಕ್ರಿ.ಶ. ೧೭೬೮ರ ಮೂರನೆಯ ರಾಯಪ್ಪರಾಜನ ಕಾಲಕ್ಕೆ ರತ್ನಗಿರಿಯ ಆಡಳಿತ ನಿಡುಗಲ್ಲು, ಶಂಕರಗಲ್ಲು, ಮುನಿಯಡುಗು, ತಿಪ್ಪೇನಹಳ್ಳಿ, ಜಂಬೂರು[೨೨] ಹೊಸಕೋಟೆ ಪ್ರದೇಶಗಳಿಗೆ ಮಾತ್ರ ಸೀಮಿತಗೊಂಡಿತ್ತು. ಆದರೂ ಇವರ ಬಹುಮುಖ್ಯ ಕೊಡುಗೆ ಎಂದರೆ ಕ್ರಿ.ಶ. ೧೬೧೦ರಲ್ಲಿ ಸಿರಾ ಕೋಟೆಯನ್ನು ನಿರ್ಮಿಸಿದ್ದಾಗಿದೆ.

೨.೪.೨೦. ಪಾವಗಡ ಪಾಳೆಯಗಾರರು

ಕ್ರಿ.ಶ.೧೬ನೆಯ ಶತಮಾನದಲ್ಲಿ ವಿಜಯನಗರದ ಅರಸರ ಕೃಪೆಗೆ ಪಾತ್ರರಾಗಿ ಏಳಿಗೆಗೆ ಬಂದ ಪಾಳೆಯಗಾರರಲ್ಲಿ ಪಾವಗಡ ಪಾಳೆಯಗಾರರು ಸಹ ಒಬ್ಬರಾಗಿದ್ದಾರೆ. ಗೋಪಾಲರಾಜನು ಈ ಪಾಳೆಯಗಾರರಲ್ಲಿ ಮೊದಲನೇ ಅರಸನಾಗಿದ್ದಾನೆ. ಕ್ರಿ.ಶ. ೧೪೦೫ರಲ್ಲಿ ಪಾವಗಡ ಕೋಟೆಗೆ ಅಡಿಪಾಯ ಹಾಕಿದನಾದರೂ ದೇವರಾಯನಿಂದ ಸ್ಥಗಿತಗೊಂಡಿತು. ನಂತರ ರಕ್ಕಸಗಿ ತಂಗಡಿ ಕದನದಲ್ಲಿ ವಿಜಯನಗರ ಸಾಮ್ರಾಜ್ಯ ಸೋಲನ್ನನುಭವಿಸಿದಾಗ ಪೆನಗೊಂಡಗೆ ಬಂದ ವೆಂಕಟಪತಿ ಮಹಾರಾಜರು ಪಾವಗಡ ಪರಿಸರದಲ್ಲಿ ಪಂಜುಗಳ್ಳರು ಹಳ್ಳಿಗಳನ್ನು ಕೊಳ್ಳೆಹೊಡೆಯವುದನ್ನು ತಪ್ಪಿಸಲು ಕ್ರಿ.ಶ. ೧೬೮೫ರಲ್ಲಿ ಬಲ್ಲಪ್ಪನಾಯಕನಿಗೆ ಅರ್ಧಕ್ಕೆ ನಿಂತಿದ್ದ ಪಾವಗಡ ಕೋಟೆಯ ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಲು ಆದೇಶಿಸಿದನು.

ಅಲ್ಲದೆ ವೆಂಕಟಪತಿ ಮಹಾರಾಜರಿಂದ ಪಾವಗಡ ಮತ್ತು ಪಳವಳ್ಳಿಗಳ ಅಧಿಕಾರವನ್ನು ಪಡೆದು ಪಾವಗಡ ಸಂಸ್ಥಾನವನ್ನು ಪೂರ್ವ ದಿಕ್ಕಿನಲ್ಲಿ ಕಲ್ಯಾಣದುರ್ಗ, ಪಶ್ಚಿಮಕ್ಕೆ ಸಿರಾ ಮತ್ತು ನಿಡಗಲ್ಲು, ದಕ್ಷಿಣಕ್ಕೆ ಚಿನ್ನೇನಹಳ್ಳಿ, ಕುಂದುರ್ಪಿ ಉತ್ತರದವರೆಗೂ ವಿಸ್ತರಿಸಿದನು. ಈತನ ನಂತರ ತಿಮ್ಮಭೂಪಾಲ ಅಧಿಕಾರಕ್ಕೆ ಬಂದನು. ತಿಮ್ಮಭೂಪಾಲನ ಉತ್ತರಾಧಿಕಾರಿಯಾಗಿ ತಿಮ್ಮಪ್ಪನಾಯಕ ಅಧಿಕಾರ ವಹಿಸಿಕೊಂಡು ರಾಯಚೆರ್ಲು ಕೋಟೆಯ ಮೇಲೆ ದಾಳಿ ಮಾಡಿ ಯರ್ರಜನ್ನನಾಯಕನನ್ನು ಸೋಲಿಸಿ[೨೨೮]ದನು. ಆದರೂ ಹೈದರ್-ಟಿಪ್ಪು, ಮರಾಠ ಮತ್ತು ಬ್ರಿಟಿಷರ ನಿರಂತರ ದಾಳಿಗಳಿಂದ ಅಧಿಕಾರ ಕಳೆದುಕೊಂಡು ಪಾವಗಡದ ಕೊನೆಯ ಪಾಳೆಯಗಾರನಾದನು.

೨.೪.೨೧. ಹರತಿ ನಿಡುಗಲ್ಲು ನಾಯಕರು

ಪೆನುಗೊಂಡೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ಇಮ್ಮಡಿ ವೆಂಕಟಪತಿಯು ರಾಜಧಾನಿಗೆ ಹೊಂದಿಕೊಂಡ ಗಡಿಪ್ರಾಂತ್ಯಗಳಾದ ನಿಡುಗಲ್ಲು, ದೊಡ್ಡೇರಿ, ಸಿರಾ, ತಾವರೆಕೆರೆ, ಹಿರಿಯೂರು, ಐಮಂಗಲ ಪ್ರದೇಶಗಳನ್ನು ಹರತಿ ನಿಡುಗಲ್ಲು ನಾಯಕರಾದ ಹರತಿವೀರ ಹೊಟ್ಟಣ್ಣನಾಯಕನಿಗೆ ಅಮರಮಾಗಣಿಯಾಗಿ[೨೨೯] ನೀಡಿ ಈ ಪ್ರದೇಶಗಳಲ್ಲಿ ಕೋಟೆ ಕೊತ್ತಲಗಳನ್ನು ಬಲಪಡಿಸಲು ಅನುಮತಿ ನೀಡಿದನು. ಈ ಪ್ರದೇಶಗಳ ಮೂಲಕವೇ ಬಿಜಾಪುರ ಸುಲ್ತಾನ ದಾಳಿ ತಡೆಯಲು ಗಡಿ ಪ್ರಾಂತ್ಯಗಳಲ್ಲಿ ಸ್ಥಳೀಯ ನಾಯಕರಿಗೆ ಕೋಟೆ-ಕೊತ್ತಲ ನಿರ್ಮಿಸಿಕೊಳ್ಳಲು ಆದ್ಯತೆ ನೀಡಿದನು. ಹರತಿವೀರ ಹೊಟ್ಟಣ್ಣನಾಯಕನಿಗಿಂತಲೂ ಪೂರ್ವದಲ್ಲಿ ಈತನ ವಂಶಿಕರು ನಿಡುಗಲ್ಲಿನಲ್ಲಿ ಆಳ್ವಿಕೆ ಮಾಡಿದರಾದರೂ ಐತಿಹಾಸಿಕ ದಾಖಲೆಗಳಿಲ್ಲದ ಕಾರಣ ಅವರ ಕುರಿತಾದ ಸ್ಪಷ್ಟ ಚಿತ್ರಣ ಸಿಗುತ್ತಿಲ್ಲ. ಈತನ ನಂತರ ಹರತಿ ತಿಮ್ಮಣ್ಣನಾಯಕನ(೧೬೬೨-೧೭೦೦) ಕಾಲಕ್ಕೆ ಬಿಜಾಪುರದ ಸೇನಾಧಿಕಾರಿಗಳಾದ ಬೂದಿಬಸಪ್ಪ ಮತ್ತು ಸಿದ್ದಪ್ಪ ಎಂಬುವವರು ನಿಡುಗಲ್ಲಿನ ಮೇಲೆ ದಾಳಿಮಾಡಿ ಹಲವು ವರ್ಷಗಳ ಕಾಲ ತಮ್ಮ ನಿಯಂತ್ರಣದಲ್ಲಿ ಇಟ್ಟುಕೊಂಡಿದ್ದರು. ಹಾಗಾಗಿ ಹರತಿತಿಮ್ಮಣ್ಣನಾಯಕ ಕಾಮನದುರ್ಗದಲ್ಲಿ ಆಶ್ರಯ ಪಡೆದುಕೊಂಡಿದ್ದನು. ಬೂದಿಬಸಪ್ಪನ ಮರಣದ ನಂತರ ನಿಡುಗಲ್ಲುದುರ್ಗದಲ್ಲಿ ಕ್ರಿ.ಶ. ೧೭೦೦ರಲ್ಲಿ ಮುಮ್ಮಡಿ ಹೊಟ್ಟಣ್ಣನಾಯಕ(೧೭೦೦-೧೭೫೧) ಅಧಿಕಾರವನ್ನು ಸ್ಥಾಪಿಸಿದನಾದರೂ ದುರ್ಗದ ಪಾಳೆಯಗಾರರ ದಾಳಿಯಿಂದ ದೊಡ್ಡೇರಿ, ತಳುಕು, ಗೌರಸಮುದ್ರ, ಸಿದ್ಧಪ್ಪನಹಳ್ಳಿ, ಧವಮ್ಮನಹಳ್ಳಿ[೨೩೧]ಗಳನ್ನು ಕಳೆದುಕೊಳ್ಳಬೇಕಾಯಿತು. ಈತನ ಮೊಮ್ಮಗನಾದ ವೀರ ಮುಮ್ಮಡಿ ಹೊಟ್ಟಣ್ಣನಾಯಕ(೧೭೫೧-೧೭೫೮)ನ ಅವಧಿಯಲ್ಲಿ ಸಿರಾನವಾಬರ ದಾಳಿಯನ್ನು ಎದುರಿಸಿದನು. ನಂತರ ವೀರ ತಿಮ್ಮಣ್ಣನಾಯಕ ಅಧಿಕಾರಕ್ಕೆ ಬಂದರೂ ಹೈದರ್, ಟಿಪ್ಪುವಿನಿಂದ ಸೆರೆಮನೆಯಲ್ಲಿ ಬಂಧಿಯಾದನು. ಈತನ ಇಬ್ಬರು ಮಕ್ಕಳಾದ ಹೊಟ್ಟಣ್ಣನಾಯಕ ಮತ್ತು ಇಮ್ಮಡಿ ಹೊಟ್ಟಣ್ಣನಾಯಕರನ್ನೂ ಸೆರೆಮನೆಗೆ ತಳ್ಳಿ ಕೊನೆಗೆ

ಅವರಿಗೆ ಹಿರಿಯ ಚೆಲ್ಲೂರು, ಚಿಕ್ಕಚೆಲ್ಲೂರು ಓಬನಹಳ್ಳಿಗಳ ಜಾಗೀರನ್ನು ನೀಡಿದನು. ಟಿಪ್ಪುವಿನ ಮರಣದಿಂದ ಈ ಸಂಸ್ಥಾನ ೧೭೯೯ರಲ್ಲಿ ಒಡೆಯರ ಅಧೀನಕ್ಕೆ ಒಳಪಟ್ಟಿತು[೨೩೨]. ಹೀಗೆ ಸುಮಾರು ಇನ್ನೂರು ವರ್ಷಗಳ ಸುದೀರ್ಘ ಆಳ್ವಿಕೆ ನೀಡಿದ ಹರತಿ ನಿಡುಗಲ್ಲು ನಾಯಕರು ಬಿಜಾಪುರದ ಸೇನೆಗೂ ಸಹ ಮೂರು ವರ್ಷಗಳವರೆಗೆ ಕೋಟೆಯ ಬಾಗಿಲನ್ನು ತೆಗೆಯದೆ ರಾಜಧಾನಿಯನ್ನು ರಕ್ಷಿಸಿಕೊಂಡಿದ್ದರು ಎಂದರೆ ಕೋಟೆಯ ಅಬೇಧ್ಯತೆ ಹೇಗಿದ್ದಿರಬಹುದು ಎಂಬ ಅಂಶ ಯಾರಿಗಾದರೂ ಅರಿವಿಗೆ ಬಾರದಿರದು.

೨.೪.೨೨. ಯಲಹಂಕ ನಾಡಪ್ರಭುಗಳು

ಇಂದಿನ ಬೆಂಗಳೂರು ನಗರದ ನಿರ್ಮಾಪಕರಾದ ಅವತಿನಾಡ ಪ್ರಭುಗಳ(ಯಲಹಂಕನಾಡ ಪ್ರಭು) ಉಲ್ಲೇಖ ಕುಣಿಗಲ್, ತುಮಕೂರು, ಕೊರಟಗೆರೆ, ಮಧುಗಿರಿ ಪರಿಸರದ ಶಾಸನಗಳಲ್ಲಿ ದೊರೆಯುತ್ತದೆ. ಈ ಮನೆತನದ ಕುಲದೇವತೆ ಕೆಂಪಮ್ಮ ಆಗಿದ್ದು, ಸಾಮಾನ್ಯವಾಗಿ ಮಾತೃ ಪರಿಕಲ್ಪನೆಯ ಹಿನ್ನೆಲೆಯಲ್ಲಿರುವ ಯಾವ ಅರಸು ಮನೆತನವು ಶಿಷ್ಟ ಸಂಪ್ರದಾಯಕ್ಕೆ ಸೇರದೆ ಅವೈದಿಕ ಪಂಗಡಕ್ಕೆ ಸೇರಿರುತ್ತಾರೆ. ಯಲಹಂಕದ ಮೊದಲ ಅರಸನಾದ ದೇವರಸಗೌಡ ಪ್ರಾರಂಭದಲ್ಲಿ ತುಮಕೂರು ಜಿಲ್ಲೆಯ ಕುರುಬಗೆರೆಯನ್ನು ತನ್ನ ಆಡಳಿತ ಕೇಂದ್ರವನ್ನಾಗಿ ಮಾಡಿಕೊಂಡಿದ್ದನು. ಆದರೆ ವಿಸ್ತಾರವಾದ ರಾಜ್ಯಕ್ಕೆ ರಾಜಧಾನಿ ಕೇಂದ್ರ ಸ್ಥಾನದಲ್ಲಿರಬೇಕೆಂದು ಅವತಿಗೆ ಬದಲಾಯಿಸಿದನು[೨೩೩]. ಈ ಮನೆತನದವರು ಅವತಿ, ಯಲಹಂಕ, ಬೆಂಗಳೂರು, ಮಾಗಡಿಗಳನ್ನು[೨೩೪] ಕ್ರಮವಾಗಿ ರಾಜಧಾನಿಗಳನ್ನಾಗಿ ಮಾಡಿಕೊಂಡಿದ್ದರು. ತುಮಕೂರು ಜಿಲ್ಲೆಯ ಹುತ್ರಿದುರ್ಗ, ಹುಲಿಯೂರುದುರ್ಗ, ಕುಣಿಗಲ್ ಮೊದಲಾದವು ಅವರ ರಾಜಧಾನಿಗೆ ಹೊಂದಿಕೊಂಡಿದ್ದರಿಂದ ಗಡಿದುರ್ಗಗಳನ್ನಾಗಿ ಮಾಡಿಕೊಂಡು ಪ್ರದೇಶಗಳಲ್ಲಿ ಕೋಟೆ ಕಟ್ಟಿಸಿ, ಅಲ್ಲಿ ಸೈನಿಕ ತರಬೇತಿ, ಶಸ್ತ್ರಾಸ್ತ್ರ ತಯಾರಿಕೆಯಂತಹ ಕೆಲಸ ಕಾರ್ಯಗಳನ್ನು ನೋಡಿಕೊಳ್ಳಲು ಅಧಿಕಾರಿಗಳನ್ನು ನೇಮಿಸಿದ್ದನು. ದೇವರಸಗೌಡನ ನಂತರ ಭೈರದೇವ ತನ್ನ ಸೋದರರಾದ ಭದ್ರೇಗೌಡನಿಗೆ– ಮಿಡಗೇಶಿ, ವೀರಣ್ಣಗೌಡನಿಗೆ–ಮಧುಗಿರಿ ತಮ್ಮೇಗೌಡನಿಗೆ–ಕುಣಿಗಲ್ ಪ್ರಾಂತ್ಯವನ್ನು ನೀಡಿ[೨೩೫] ಹುತ್ತರಿದುರ್ಗದಲ್ಲಿ ಕೋಟೆಯನ್ನು ನಿರ್ಮಿಸಿದ. ತಾನು ಈತನ ನಂತರ ಕೆಂಪನಂಜೇಗೌಡ ಹುತ್ತರಿದುರ್ಗದಲ್ಲಿ ಸೇನಾ ತರಬೇತಿ ಕೇಂದ್ರ ತೆರೆದು ಅದಕ್ಕಾಗಿ ಕೋಟೆ ಕೊತ್ತಲವನ್ನು ಬಲಪಡಿಸಿ ರಾಜ ಮತ್ತು ಉನ್ನತ ಅಧಿಕಾರಿಗಳಿಗೆ ಸೌಧಗಳನ್ನು ನಿರ್ಮಿಸಿ ನಂತರ ಒಂದನೆಯ ಕೆಂಪೇಗೌಡ(೧೫೭೦–೧೫೭೮) ಹುತ್ತರಿದುರ್ಗದಲ್ಲಿ ಏಳು ಸುತ್ತಿನ ಕೋಟೆಯನ್ನು ಕಟ್ಟಿಸಿ ಯಲಹಂಕ ನಾಡಿನ ಧ್ವಜ ಸದಾ ಹರಿಯುವಂತೆ ಮಾಡಿದ.[೨೩೬] ಕ್ರಿ.ಶ. ೧೫೬೬ರ ಕುಣಿಗಲ್ ಶಾಸನ[೨೩೭] ಕಸಪಯ್ಯನಾಯಕ ಎಂಬ ದಂಡನಾಯಕ ಯಲಹಂಕ ರಾಜ್ಯದ ಪಶ್ಚಿಮ ಗಡಿಯ ರಕ್ಷಣೆಯ ಜವಾಬ್ದಾರಿಯನ್ನು ಕುಣಿಗಲ್ಲಿನಿಂದ ನೋಡಿಕೊಳ್ಳುತ್ತಿದ್ದನೆಂದು ತಿಳಿಸುತ್ತದೆ. ಈತನನ್ನು ಹೊಸೂರು ಶಾಸನವು ಸಹ ಉಲ್ಲೇಖಿಸುತ್ತದೆ. ಕ್ರಮೇಣ ಹೊಳವನಹಳ್ಳಿ, ಕುಣಿಗಲ್ ಮತ್ತು ಹುಲಿಯೂರುದುರ್ಗಗಳ ಅಧಿಕಾರಿಗಳು ಈತನ

ವಿರುದ್ಧ ಪಿತೂರಿ ನಡೆಸಿದರಾದರೂ, ಈ ಎರಡೂ ಪ್ರದೇಶಗಳ ಮೇಲೆ ದಾಳಿಮಾಡಿ ಹುಲಿಯೂರುದುರ್ಗದ ಗಿರಿಯಪ್ಪ ಗೌಡನನ್ನು ತನ್ನ ಸಾಮಂತನನ್ನಾಗಿ ಮಾಡಿಕೊಂಡನು. ಇಮ್ಮಡಿ ಕೆಂಪೇಗೌಡನ ಮಣ್ಣೆ ಶಾಸನ ಹುಲಿಯೂರುದುರ್ಗ, ಹುತ್ತರಿದುರ್ಗ, ಕುಣಿಗಲ್ ಪಾಳೆಯಗಾರರ ಮೇಲೆ ದಾಳಿ ಮಾಡಿ ಅವುಗಳನ್ನು ತನ್ನ ಅಂಕೆಯಲ್ಲಿ ಇಟ್ಟುಕೊಂಡಿದ್ದನು. ಕ್ರಿ.ಶ. ೧೫೯೯ರ ಕೃಷ್ಣರಾಜಸಾಗರ ಶಾಸನ[೨೩೮]ವು ಸಹ ಈತನನ್ನು ಉಲ್ಲೇಖಿಸುತ್ತದೆ. ಇಮ್ಮಡಿ ಕೆಂಪೇಗೌಡನ ನಂತರ ಮುಮ್ಮಡಿ ದೊಡ್ಡವೀರಪ್ಪಗೌಡನನ್ನು ಕುಕ್ಕೆ ಸುಬ್ರಹ್ಮಣ್ಯ ಶಾಸನ, ಮುಮ್ಮಡಿ ಕೆಂಪೇಗೌಡ(ವೀರಪ್ಪಗೌಡ)ನನ್ನು ಬೇಷ್ಟದಹಳ್ಳಿ ಮಠದ ೨, ೩ನೆಯ ಶಾಸನ, ಮುಮ್ಮಡಿ ಕೆಂಪೇಗೌಡನನ್ನು ಸಂಕೀಷ್ಟಟ್ಟದ ಶಾಸನಗಳು[೨೩೯] ತುಮಕೂರು ಜಿಲ್ಲೆಯಲ್ಲಿ ಕೆಲವೊಂದು ಪ್ರದೇಶಗಳನ್ನು ತಮ್ಮ ನಿಯಂತ್ರಣದಲ್ಲಿ ಇದ್ದವೆಂದು ತಿಳಿಸುತ್ತದೆ. ಮೈಸೂರು ಅರಸರ ಪ್ರಾಬಲ್ಯವು ಯಲಹಂಕನಾಡ ಪ್ರಭುಗಳನ್ನು ಕ್ರಮೇಣ ಮೂಲೆಗುಂಪನ್ನಾಗಿಸಿತು.

೨.೪.೨೩. ಹೊಳವನಹಳ್ಳಿ-ಕೊರಟಗೆರೆ ಸ್ಥಾನಿಕ ಪ್ರಭುಗಳು

ಅವತಿನಾಡ ಪ್ರಭುಗಳ ಶಾಖೆಯ ಹೊಳವೆಗೌಡ[೨೪೦] ಕ್ರಿ.ಶ. ೧೬ನೆಯ ಶತಮಾನದಲ್ಲಿ ಕೊರಮಪುರದಲ್ಲಿ(ಇಂದಿನ ಹೊಳವನಹಳ್ಳಿ) ಕೋಟೆಯನ್ನು ಕಟ್ಟಿ ಅಧಿಕಾರ ಚಲಾಯಿಸಿದನು. ಈತನ ಮಗನಾದ ಭೈರೇಗೌಡನು ವಿಜಯನಗರದ ಅರಸರಿಂದ ಕೂಲಹಳ್ಳಿ ಪರಿಸರದ ೩೩ ಹಳ್ಳಿಗಳ ಜಹಗಿರನ್ನು ಪಡೆದು ರಣಭೈರೆಗೌಡ ಎಂಬ ಹೆಸರಿನಿಂದ ಪ್ರಸಿದ್ಧಿ ಹೊಂದಿದನು. ಇಮ್ಮಡಿ ರಣ ಬೈರೇಗೌಡನನ್ನು ಕ್ರಿ.ಶ. ೧೭೪೭ರ ಶಾಸನ[೨೪೧] ಉಲ್ಲೇಖಿಸಿದ್ದು. ಕೊರಟಗೆರೆ ಪಟ್ಟಣವನ್ನು ನಿರ್ಮಾಣ ಮಾಡಿ ಬೆಟ್ಟದ ಮೇಲೆ ಕೋಟೆಯನ್ನು ಕಟ್ಟಿಸಿದ್ದು ಗುಂಡಕಲ್, ಇರಕಸಂದ್ರ, ಸಾಣ್ಗೆರೆ, ಕೋಳಾಲ, ದಾಸರಹಳ್ಳಿ[೨೪೨] ಗ್ರಾಮಗಳನ್ನು ರಾಜ್ಯಕ್ಕೆ ಸೇರ್ಪಡೆಗೊಳಿಸಿದನು. ನಂತರ ದೊಡ್ಡ ಬೈಚೇಗೌಡ ಸಿರಾದ ನವಾಬರ ನೆರವಿನಿಂದ ಅಧಿಕಾರ ಚಲಾಯಿಸಿದನು. ಇವನ ನಂತರ ಮುಮ್ಮಡಿ ರಣಭೈರೇಗೌಡ ದೊಡ್ಡ ರಣಭೈರೇಗೌಡರು ಮತ್ತು ಹೈದರ್-ಟಿಪ್ಪು ಮತ್ತು ಮೈಸೂರು ಒಡೆಯರ ದಾಳಿಗಳ ಅಭದ್ರತೆಯಲ್ಲೇ ಅಧಿಕಾರವನ್ನು ನಡೆಸಿದರು. ದೊಡ್ಡರಣಭೈರೇಗೌಡನಿಗೆ ಸಂಬಂಧಿಸಿದಂತೆ ಕ್ರಿ.ಶ. ೧೭೭೨ರ ಕೊರಟಗೆರೆ ಶಾಸನವೇ[೨೪೩] ಕೊನೆಯ ಶಾಸನವಾಗಿದೆ. ೧೭೯೨ರಲ್ಲಿ ಟಿಪ್ಪುವಿನಿಂದ ಕಳೆದುಕೊಂಡ ಸಂಸ್ಥಾನವನ್ನು ಕಾರನ್‌ವಾಲಿಸ್‌ನಿಂದ ಪಡೆದುಕೊಂಡನಾದರೂ ಅದನ್ನು ಉಳಿಸಿಕೊಳ್ಳಲಾಗಲಿಲ್ಲ. ದೊಡ್ಡರಣಭೈರೇಗೌಡನ ನಂತರ ಕರಿಯಪ್ಪಗೌಡ ಮತ್ತು ಆತನ ಮಕ್ಕಳಾದ ಚಿಕ್ಕಪ್ಪಯ್ಯ. ಹಿರಿಚಿಕ್ಕಪ್ಪಯ್ಯ, ಭೈರೇಗೌಡ, ವೆಂಕಟನಾರಾಯಣರು, ಹುಲಿಕಲ್ಲು ಮತ್ತು ಇಂಚೇನಹಳ್ಳಿಗಳಲ್ಲಿ[೨೪೪] ನೆಲೆ ಕಂಡುಕೊಂಡರು. ಕೊನೆಗೆ ಮೈಸೂರು ಸಂಸ್ಥಾನದಲ್ಲಿ ಈ ಪ್ರಾಂತ್ಯ ವಿಲೀನಗೊಳ್ಳುವುದರ ಮೂಲಕ ಹೊಳವನಹಳ್ಳಿ ಸಂಸ್ಥಾನಿಕ ಪ್ರಭುಗಳ ಆಳ್ವಿಕೆ ಅಂತ್ಯಗೊಂಡಿತು.

೨.೪.೨೪. ಕುಂದುರ್ಪಿ ಪಾಳೆಯಗಾರರು

ಹೊಸಕೋಟೆ ಪಾಳೆಪಟ್ಟನ್ನು ಸ್ಥಾಪಿಸಿದಂತಹ ಯಲ್ಲಪ್ಪನಾಯಕನ ತಂದೆ ಕಸ್ತೂರಿ ಬೊಬ್ಬಳಿ ತಿಮ್ಮನಾಯಕ ಕುಂದುರ್ಪಿಯಲ್ಲಿ ಆಳ್ವಿಕೆ ನಡೆಸಿದ್ದರಿಂದ ಕುಂದುರ್ಪಿ ಪಾಳೆಯಗಾರರೆಂದೇ

ಪ್ರಸಿದ್ಧಿಯಾಗಿದ್ದಾರೆ. ಕಸ್ತೂರಿ ಬೊಬ್ಬಳಿ ತಿಮ್ಮನಾಯಕನನ್ನು ನಲ್ಲ ಬೊಮ್ಮನಾಯಕನೆಂತಲೂ ಕರೆಯಲಾಗುತ್ತದೆ. ಈ ಮಧ್ಯೆ ಹೈದರಾಲಿ ತಿಮ್ಮನಾಯಕನನ್ನು ಕೊಲೆಗೈದಿದ್ದು, ಬಿಜಾಪುರದ ರಣದುಲ್ಲಾಖಾನನು ಪೆನುಗೊಂಡೆಯಲ್ಲಿದ್ದ ಪೆದ್ದಕೊನೆಟಿನಾಯಕನನ್ನು ಕುಂದುರ್ಪಿದ್ದು ಕುಂದುರ್ಪಿ ಪಾಳೆಯಗಾರರು ಅಧಿಕಾರ ಕಳೆದುಕೊಳ್ಳುವಂತೆ ಮಾಡಿತು. ಬಹುಶಃ ಇದರಿಂದಲೇ ವರ್ಗಾಯಿಸಿ[೨೪೫]. ಹೊಸಕೋಟೆ ಪರಿಸರದ ಯರ್‍ರಮ್ಮನಹಳ್ಳಿ ಎಂಬಲ್ಲಿ ಏಳು ಬೆಟ್ಟಗಳ ತುದಿಯಲ್ಲಿ ಆಂಧ್ರದಿಂದ ಬಂದ ರೆಡ್ಡಿ ಜನಾಂಗವೊಂದು ಕೋಟೆಯನ್ನು ಕಟ್ಟಿಕೊಂಡು ಆಳ್ವಿಕೆ ಮಾಡಿದರೆಂದು ಸ್ಥಳೀಯರು ಹೇಳುತ್ತಿರಬಹುದು[೨೪೬]. ಪೆನುಗೊಂಡೆಯಿಂದ ಕುಂದುರ್ಪಿಗೆ ವರ್ಗವಾದ ಪೆದ್ದಕೋನೆಯನ್ನು ನಾಯಕನು ಈ ತೆಲುಗಲಕೊಂಡದಲ್ಲಿ ಕೋಟೆಯನ್ನು ಕಟ್ಟಿ ಗಡಿದುರ್ಗವನ್ನಾಗಿ ಮಾಡಿಕೊಂಡು ಒಬ್ಬ ಅಧಿಕಾರಿಯನ್ನು ನೇಮಿಸಿದ್ದಿರಬೇಕು. ಈ ಕಾರಣಕ್ಕಾಗಿಯೇ ಈ ಬೆಟ್ಟವು ತೆಲುಗಲಕೊಂಡ ಎಂದು ಕರೆಯಲ್ಪಡುತ್ತಿದೆ. ತಿಮ್ಮನಾಯಕನ ಮಗ ಯಲ್ಲಪ್ಪನಾಯಕ ಪ್ರಾಪ್ತವಯಸ್ಸಿಗೆ ಬಂದ ಮೇಲೆ ಮರಳಿ ಸಂಸ್ಥಾನವನ್ನು ಪಡೆಯಲು ಹೊಸಕೋಟೆ ಮೇಲೆ ದಾಳಿ ಮಾಡಿ ಪುನಃ ಅದನ್ನು ವಶಪಡಿಸಿಕೊಂಡನು. ಆದರೆ ಗಡಿರಾಜ್ಯಗಳ ನಾಯಕರಾದ ಪೆದ್ದಕೊನೆಟನಾಯಕ ಮತ್ತು ಹುಸೇನ್‌ಖಾನರನ್ನು ಎದುರಿಸಿ ಗಡಿ ಪ್ರಾಂತ್ಯಗಳಲ್ಲಿ ಕೋಟೆ ನಿರ್ಮಾಣ ಮಾಡುವುದು ಸಾಧ್ಯವಿರಲಿಲ್ಲ. ಹಾಗಾಗಿ ಸಣ್ಣ ಲಿಂಗಣ್ಣನಾಯಕ ಮತ್ತು ದೊಡ್ಡ ಲಿಂಗಣ್ಣನಾಯಕರೆಂಬ ದಳವಾಯಿಗಳ ಸಹಾಯದಿಂದ ಹುಸೇನ್‌ಖಾನ್‌ನ ಅನುಮತಿ ಮೇರೆಗೆ ಹೊಸಕೋಟೆ (೧೦೫೦), ಹೊಸದುರ್ಗ, ಇಂದ್ರಬೆಟ್ಟ, ರಾಂಪುರ, ಕಾಮನದುರ್ಗ, ಪಳವಳ್ಳಿ ತಾಂಡಗಳಲ್ಲಿ ಹೊಸದಾಗಿ ಕೋಟೆ ಕಟ್ಟಿಸಿದನು. ಹೊಸಕೋಟೆಯಲ್ಲಿ ಬಲವಾದ ಕಲ್ಲಿನಕೋಟೆ, ನಾಲ್ಕು ದ್ವಾರ ಬಾಗಿಲು, ಮಂಟಪ ಧ್ಯಾನದ ಕಣಜ, ಮದ್ದಿನಮನೆ, ಸಿದ್ಧರ ಜಲಾಶಯ, ದೋಣೆಗಳನ್ನು ನಿರ್ಮಿಸಿದನು. ಹೀಗೆ ಹೊಸಕೋಟೆಯು ಒಂದು ಸಣ್ಣಪಾಳೆಯಪಟ್ಟಾದರೂ ಕೊನೆಯವರೆಗೂ ಪೆನುಗೊಂಡೆ ನವಾಬಗೆ ಮತ್ತು ಹೈದರ್‌ಗೆ ಕಪ್ಪ ಕೊಡುತ್ತಾ ಸ್ವತಂತ್ರ ಪಾಳೆಯಗಾರರಂತೆ ಆಳ್ವಿಕೆ ನಡೆಸಿದರು. ಆದರೆ ಪೆದ್ದಕೊನೆಟೆನಾಯಕನ ಕುತಂತ್ರ, ಪೆನುಗೊಂಡೆ ಸುಲ್ತಾನನ ನಿರಂತರ ದಾಳಿಯಿಂದ ಕಳೆದುಕೊಂಡು ಕಾಮನದುರ್ಗದಲ್ಲಿ ರಕ್ಷಣೆ ಪಡೆದುಕೊಂಡನು. ಈತನ ನಂತರ ಹಿರಿಯ ಬಡತಿಮ್ಮನಾಯಕ, ಹಿರಿಯರಾಮಪ್ಪನಾಯಕ, ಚಿಕ್ಕೊಡತಿಮ್ಮನಾಯಕ, ನಲ್ಲಜಲ್ಯನಾಯಕ, ರಾಯಪ್ಪನಾಯಕ ಮೊದಲಾದ ಪಾಳೆಯಗಾರರು ಆಳ್ವಿಕೆ ನಡೆಸಿದರಾದರೂ ಅವರ ಕುರಿತಾದ ಐತಿಹಾಸಿಕ ದಾಖಲೆಗಳ ಕೊರತೆಯಿಂದ ಸ್ಪಷ್ಟ ಚಿತ್ರಣ ನೀಡಲು ಸಾಧ್ಯವಾಗುತ್ತಿಲ್ಲ.

೨.೪.೨೫. ಮಿಡಿಗೇಶಿ ಪಾಳೆಯಗಾರರು

ಬುಕಾನನ್ ವರದಿ, ಮಿಡಿಗೇಶಿ ಕೈಫಿಯತ್ತು ರಾಯರೇಖೆ, ಎಂ.ಎ.ಆರ್. ವರದಿ ಹಾಗೂ ಇಮ್ಮಡಿ ಚಿಕ್ಕಭೂಪಾಲ ಸಾಂಗತ್ಯ ನಾಗರೆಡ್ಡಿಯೆಂಬ ಪಾಳೆಯಗಾರ ಮಿಡಿಗೇಶಿಯಲ್ಲಿ

ಆಳ್ವಿಕೆ ಮಾಡುತ್ತಿದ್ದನೆಂದು ಉಲ್ಲೇಖಿಸುತ್ತದೆ. ಆದರೆ ಇದೇ ಕೃತಿಯಲ್ಲಿ ಹಾವಳಿಭೈರೇಗೌಡನ ಸಾಮಂತನಾದ ಚನ್ನಪ್ಪನಾಯಕನನ್ನು ಇಮ್ಮಡಿ ಚಿಕ್ಕಪ್ಪಗೌಡ ಸೋಲಿಸಿ ಪುನಃ ಆತನಿಗೆ ಮಿಡಿಗೇಶಿಯನ್ನು ಮರಳಿಸಿದ[೨೪೭] ಉಲ್ಲೇಖವಿರುವುದರಿಂದ ನಾಗಿರೆಡ್ಡಿ ಆಳ್ವಿಕೆ ನಡೆಸುತ್ತಿರುವುದಾದರೆ ಚೆನ್ನಪ್ಪನಾಯಕ ಯಾವ ಕಾಲಘಟ್ಟದಲ್ಲಿ ಮಿಡಿಗೇಶಿಯಲ್ಲಿ ಆಳ್ವಿಕೆ ನಡೆಸಿದನೆಂದು ಸಂದೇಹ ಏರ್ಪಡುತ್ತದೆ. ಬಹುಶಃ ನಾಗಿರೆಡ್ಡಿ ಕೊಲೆಯಾದ ನಂತರ ಹಾವಳಿ ಭೈರೇಗೌಡನ ಅಧಿಕಾರಿ ಚನ್ನಪ್ಪನಾಯಕ ಅಧಿಕಾರ ವಹಿಸಿಕೊಂಡಿದ್ದಿರಬೇಕು. ಹರುವೆ ಕಾಳಗದ ನಂತರ ಮಿಡಿಗೇಶಿಯನ್ನು ಪುನಃ ಪಡೆದ ಇಮ್ಮಡಿ ಚಿಕ್ಕಪ್ಪಗೌಡ ಚನ್ನಪ್ಪನಾಯಕನನ್ನು ಅದೇ ಸ್ಥಾನದಲ್ಲಿ ಮುಂದುವರೆಯುವಂತೆ ಆದೇಶಿಸಿರಬೇಕು.

ನಾಗಿರೆಡ್ಡಿ ಮಿಡಿಗೇಶಿಯಲ್ಲಿ ಕೋಟೆಯನ್ನು ಜೀರ್ಣೋದ್ಧಾರ ಮಾಡಿ ಅರಮನೆ, ಮದ್ದಿನಮನೆ, ಕಣಜ ಮೊದಲಾದವುಗಳನ್ನು ನಿರ್ಮಿಸಿದನು. ಈತನ ಸಂಸ್ಥಾನದಲ್ಲಿ ನಾಗಲಾಪುರ, ಛತ್ರಪಾಳ್ಯ ಬೇಡಂತ್ತೂರು, ಪೋತುಗುಂಡ್ಲು, ಜಿರಿಗೆಹಳ್ಳಿ, ನಲ್ಲೇಕಾಮನಹಳ್ಳಿ, ಕಸಾಪುರ, ಸತ್ತಿಗೇನಹಳ್ಳಿ, ಮಲ್ಲನಾಯಕನಹಳ್ಳಿ, ಗುಂಡುಮಲೆ ಮೊದಲಾದ ಗ್ರಾಮಗಳು ಸೇರಿದ್ದವು. ಉತ್ತರದಲ್ಲಿ ಗುರುಪುಕೊಂಡ, ಪೂರ್ವದಲ್ಲಿ ಅವರಲ್ಲು ಎಲ್ಲೆಗಳಾಗಿದ್ದವು. ಬೇಡತ್ತೂರಿನ ನಿರ್ಮಾಣವು ಸಹ ಈತನ ಕಾಲದಲ್ಲಿಯೇ ಆಗಿತ್ತು. ನಾಗಿರೆಡ್ಡಿಗೆ ನಾಗಲಾದೇವಿ, ತಿರುಮಲದೇವಿ, ಎಂಬ ಇಬ್ಬರು ಹೆಣ್ಣು ಮಕ್ಕಳಿದ್ದು, ನಾಗಲಾದೇವಿಯು ಬಾಬಿರೆಡ್ಡಿಯನ್ನು ವಿವಾಹವಾಗಿ ಪತಿಯೊಂದಿಗೆ ಆಳ್ವಿಕೆ ನಡೆಸಿದ ಬಗ್ಗೆ ರಾಯರೇಖೆ ಉಲ್ಲೇಖಿಸಿದೆ. ಈಕೆಯ ನಂತರ ನಾಗಿರೆಡ್ಡಿಯ ಮೊಮ್ಮಗ ನಾಗಯ್ಯ ಆಳ್ವಿಕೆ ಮಾಡಿದನು. ನಾಗಯ್ಯನ ನಂತರ ಆತನ ವಂಶಸ್ಥರ ಚರಿತ್ರೆ ಕುರಿತು ಸ್ಪಷ್ಟ ಚಿತ್ರಣವಿಲ್ಲ. ಇಮ್ಮಡಿ ಚಿಕ್ಕ ಭೂಪಾಲ ಸಾಂಗತ್ಯ ಹಿರೆಕಾಳೇಗೌಡ ಎಂಬ ಅಧಿಕಾರಿ ಮಿಡಿಗೇಶಿ ದುರ್ಗವನ್ನು ನೋಡಿಕೊಳ್ಳುತ್ತಿದ್ದ ಎಂಬುದನ್ನು ಉಲ್ಲೇಖಿಸುತ್ತದೆ.[೨೪೮].

೨.೪.೨೬. ಸಿರಾದ ಸುಬೇದಾರರು

ಸಿರಾ ಪ್ರಾಂತ್ಯ ಮೈಸೂರು ಮತ್ತು ವಿಜಾಪುರ ರಾಜ್ಯಗಳ ನಡುವೆ ಫಲವತ್ತತೆಯಿಂದ ಕೂಡಿದ ಆಯಕಟ್ಟಿನ ಬಯಲು ಪ್ರದೇಶವಾಗಿತ್ತು. ವಿಶೇಷವಾಗಿ ಎಣ್ಣೆ ಕಾಳುಗಳನ್ನು ಅತಿ ಹೆಚ್ಚಾಗಿ ಬೆಳೆಯುತ್ತಿದ್ದರು. ಇದರಿಂದಲೇ ಮೊಘಲರು, ಬಿಜಾಪುರದ ಸುಲ್ತಾನ, ಮರಾಠ, ಮೈಸೂರು ಒಡೆಯರು ಹಾಗೂ ಹೈದರ್-ಟಿಪ್ಪು ಈ ಪ್ರದೇಶಕ್ಕಾಗಿ ನಿರಂತರ ಕಲಹದಲ್ಲಿ ತೊಡಗಿದ್ದರು. ಔರಂಗಜೇಬನು ಬಿಜಾಪುರ, ಗೋಲ್ಕೊಂಡ, ಆರ್ಕಾಟ್ ಪ್ರಾಂತ್ಯಗಳಿಗಿಂತಲೂ ಸಿರಾ ಪ್ರಾಂತ್ಯಕ್ಕೆ ಹೆಚ್ಚು ಪ್ರಧಾನ್ಯತೆ ನೀಡಿ ಅದನ್ನು ದಕ್ಷಿಣದ ಪ್ರಮುಖ ಮಿಲಿಟರಿ ಕೇಂದ್ರವನ್ನಾಗಿ ಮಾಡಲು ಪ್ರಯತ್ನಿಸಿದ್ದನು.

ಬಿಜಾಪುರದ ಮಹಮ್ಮದ್ ಆದಿಲ್‌ಶಾಹಿ, ಆಫಜಲ್‌ಖಾನ್, ರಣದುಲ್ಲಾಖಾನ್ ಎಂಬ ದಂಡನಾಯಕರನ್ನು ದಕ್ಷಿಣ ಕರ್ನಾಟಕದ ದಾಳಿಗೆ ಕಳುಹಿಸಿದಾಗ ಸಿರಾ ಪ್ರಾಂತ್ಯದಲ್ಲಿ

ಮಲ್ಲಿಕ್‌ರಿಹಾನ್‌ನನ್ನು ಅದರ ಸುಬೇದಾರನನ್ನಾಗಿ ನೇಮಿಸಲಾಯಿತು. ಈತ ತುಮಕೂರು, ಚಿಕ್ಕನಾಯಕನಹಳ್ಳಿ, ಕುಣಿಗಲ್ ಪ್ರದೇಶಗಳನ್ನು ತನ್ನ ಸುಪರ್ದಿಗೆ ಸೇರಿಸಿಕೊಂಡನು. ಆದರೆ ಕ್ರಿ.ಶ. ೧೬೮೬ರಲ್ಲಿ ಸಿರಾ ಮೊಘಲರ ವಶವಾಗಿದ್ದರಿಂದ ಅವರಿಂದ ನೇಮಿಸಲ್ಪಟ್ಟ ಸುಬೇದಾರನ ಅಧೀನಕ್ಕೆ ಒಳಪಟ್ಟಿತು.[೨೪೯] ಖಾಸಿಂಖಾನ್ ಇವರ ಮೊದಲ ಸುಭೇದಾರನಾಗಿದ್ದು, ಸಿರಾವನ್ನು ಮೊಘಲರ ಪ್ರಮುಖ ಕೇಂದ್ರ ಮತ್ತು ಮಿಲಿಟರಿ ನೆಲೆಯನ್ನಾಗಿ ಪರಿವರ್ತಿಸಲು ಪ್ರಯತ್ನಿಸಿದ ನಂತರ ಜುಲ್ಫೀಕರ್‌ಖಾನ್, ಸಿರಾದಲ್ಲಿರು. ಸ್ತುಂಖಾದ್ ಎಂಬ ಹೊಸಕೋಟೆಯನ್ನು ಕಟ್ಟಿಸಿದನು. ಈತನ ನಂತರ ಹಲವು ಸುಭೇದಾರರು ಸಿರಾದಲ್ಲಿ ಆಳ್ವಿಕೆ ಮಾಡಿದರಾದರೂ ಕೊನೆಯ ಸುಭೇದಾರನಾದ ದಿಲಾವರ್‌ಖಾನ್‌ನು ಸಿರಾವನ್ನು ವೈಭವಯುತವಾಗಿ ಆಳ್ವಿಕೆ ನಡೆಸಿ ಇಂದಿನ ಲಾತಖಾನ್ ಉದ್ಯಾನವನಕ್ಕೆ ಪ್ರೇರಕವಾದಂತಹ ಖಾನ್‌ಭಾಗ್ ಅನ್ನು ಸಿರಾದಲ್ಲಿ ನಿರ್ಮಿಸಿ ಅದರ ನಿರ್ವಹಣೆಯ ಜವಾಬ್ದಾರಿಯನ್ನು ಹೈದರನಿಗೆ ವಹಿಸಿದನು[೩೪೦]. ಹೀಗೆ ಸಿರಾ ಸುಬೇದಾರರು ಈ ಭಾಗದಲ್ಲಿ ಹಲವು ಸಣ್ಣಪುಟ್ಟ ಪಾಳೆಯಗಾರರು ಅನಿವಾರ್ಯವಾಗಿ ತಮ್ಮನ್ನು ಆಶ್ರಯಿಸುವಂತೆ ಮಾಡಿ ಆ ಭಾಗದಲ್ಲಿದ್ದ ಕೋಟೆಗಳ ದುರಸ್ತಿಗೆ ಆಸಕ್ತಿ ವಹಿಸಿರುವುದು ಇವರ ರಾಜಧಾನಿ ಸಿರಾ ಮತ್ತು ಗಡಿದುರ್ಗಗಳಾದ ಭಸ್ಮಾಂಗಿ, ಚಂದ್ರಗಿರಿ ಕೋಟೆಗಳ ಶೈಲಿಯಿಂದ ತಿಳಿಯುತ್ತದೆ. ಅಲ್ಲದೆ ಕರ್ನಾಟಕದ ಸಾಂಸ್ಕೃತಿಕ ವಲಯಕ್ಕೆ ಶ್ರೀಮಂತಿಕೆಯಿಂದ ಕೂಡಿದ ಸ್ಮಾರಕಗಳ ನಿರ್ಮಾಣಕ್ಕೆ ಆಸಕ್ತಿ ವಹಿಸಿರುವುದು ಖಾನ್‌ಬಾಗ್ ಉದ್ಯಾನವನದಿಂದ ತಿಳಿಯುತ್ತದೆ.

೨.೪.೨೭. ಬಿಜಾಪುರದ ಸುಲ್ತಾನರು

ವಿಜಯನಗರದ ಸಾಮ್ರಾಜ್ಯ ರಕ್ಕಸ ತಂಗಡಗಿ ಯುದ್ಧದ ನಂತರ ತಮ್ಮ ವೈಭವದ ಆಡಳಿತವನ್ನು ಕಳೆದುಕೊಂಡಿದ್ದರಿಂದ ತುಮಕೂರು ಜಿಲ್ಲೆಯು ಸೇರಿದಂತೆ ದಕ್ಷಿಣ ಕರ್ನಾಟಕದಲ್ಲಿ ಹಲವು ಸಣ್ಣಪುಟ್ಟ ಮನೆತನಗಳು ಏಳಿಗೆ ಹೊಂದಿ ರಾಜಕೀಯ ಅನೈಕ್ಯತೆಯನ್ನು ಸೃಷ್ಟಿಸಲು ಕಾರಣವಾಯಿತು. ಇಂತಹ ಸನ್ನಿವೇಶವನ್ನು ಬಳಸಿಕೊಂಡ ಬಿಜಾಪುರದ ದಂಡನಾಯಕರಾದ ಅಫಜಲ್‌ಖಾನ್, ರಣದುಲ್ಲಾಖಾನ್ ಮತ್ತು ಶಹಜೀನ್ಸಲೇಭೋಂಸ್ಲೆ ದಖ್ಖನ್ ದಂಡಯಾತ್ರೆ ಕೈಗೊಂಡು ತುಮಕೂರು, ಚಿಕ್ಕನಾಯ್ಕನಹಳ್ಳಿ, ಕುಣಿಗಲ್ ತುರುವೇಕೆರೆ, ನಿಡಗಲ್ಲು, ಮಧುಗಿರಿ, ಸಿರಾ ಪ್ರಾಂತ್ಯಗಳನ್ನು ವಶಪಡಿಸಿಕೊಂಡು ಅವುಗಳ ಮೇಲ್ವಿಚಾರಣೆಗೆ ಸಿರಾದಲ್ಲಿ ಸುಭೇದಾರನನ್ನು ನೇಮಿಸಿದರು.[೨೫೦] ತುಮಕೂರು ಜಿಲ್ಲೆಯಲ್ಲಿ ರಣದುಲ್ಲಾಖಾನನ ದಂಡಯಾತ್ರೆಯಿಂದ ಹಾಗಲವಾಡಿ, ಚಿಕ್ಕನಾಯಕನಹಳ್ಳಿ ಕೋಟೆಗಳು ನಾಶ ಹೊಂದಿದವು. ಮೈಸೂರು ಒಡೆಯರು ಮತ್ತು ಹೈದರ್-ಟಿಪ್ಪುವಿನ ಏಳಿಗೆ ತುಮಕೂರು ಜಿಲ್ಲೆಯಲ್ಲಿ ಬಿಜಾಪುರದ ಶಾಹಿ ಸುಲ್ತಾನರ ಪ್ರಾಬಲ್ಯವನ್ನು ಕಡಿಮೆಗೊಳಿಸಿತು.

೨.೪.೨೮. ಮೊಗಲರು (೧೬೮೬ರಿಂದ ೧೭೫೬)

ಜಿಲ್ಲೆಯಲ್ಲಿ ಕ್ರಿ.ಶ. ೧೬೮೬ರಿಂದ ಮೊಗಲ ಚಕ್ರವರ್ತಿ ಔರಂಗಜೇಬನಿಂದ ಆರಂಭವಾದ

ಆಳ್ವಿಕೆಯು ಆತನ ನಂತರ ಸುಮಾರು ೭೦ ವರ್ಷಗಳವರೆಗೂ ಅವರ ನಿಯಂತ್ರಣಕ್ಕೆ ಒಳಪಟ್ಟಿತು. ಕರ್ನಾಟಕದಲ್ಲಿ ಸಿರಾ ಆಯಕಟ್ಟಿನ ಭಾಗ ಮತ್ತು ದಖ್ಖನ್ ಭಾಗಕ್ಕೆ ಅಂದರೆ ಇಂದಿನ ಕರ್ನಾಟಕ, ಆಂಧ್ರ, ತಮಿಳುನಾಡುಗಳಿಗೆ ಕೇಂದ್ರ ಸ್ಥಾನದಲ್ಲಿದ್ದಿದ್ದರಿಂದ ಇದರ ಬಗ್ಗೆ ಅತೀವ ಆಸಕ್ತಿ ಹೊಂದಿ ಅದನ್ನು ಒಂದು ಪ್ರಮುಖ ಮಿಲಿಟರಿ ನೆಲೆಯನ್ನಾಗಿಸಲು ಪ್ರಯತ್ನಿಸಿದ, ಈ ಕಾರಣಕ್ಕಾಗಿಯೇ ಬಿಜಾಪುರದಲ್ಲಿ ಶಾಹಿಗಳು, ಗೊಲ್ಕೊಂಡದಲ್ಲಿ ನಿಜಾಮರು, ಆರ್ಕಾಟ್‌ನಲ್ಲಿ ನವಾಬರು ಸ್ವತಂತ್ರ್ಯಗೊಳ್ಳಲು ಸದಾ ಹವಣಿಸುತ್ತಿದ್ದರಿಂದ ಈ ಮೂರು ಪ್ರದೇಶಗಳನ್ನು ನಿಯಂತ್ರಿಸುವ ಉದ್ದೇಶಕ್ಕಾಗಿ ಕೇಂದ್ರ ಭಾಗದಲ್ಲಿರುವ ಆಯಕಟ್ಟಿನ ಸಿರಾ ಪ್ರಾಂತ್ಯವನ್ನು ಆಯ್ಕೆ ಮಾಡಿರುವುದರಲ್ಲಿ ಆಶ್ಚರ್ಯವಿಲ್ಲ. ಬಹುಶಃ ಇದರಿಂದಲೇ ಸಿರಾವನ್ನು ದಕ್ಷಿಣ ಭಾರತ ಪ್ರಾಂತ್ಯದ ಮೊಘಲ್ ಸಾಮ್ರಾಜ್ಯಕ್ಕೆ ರಾಜಧಾನಿಯನ್ನಾಗಿಸುವುದರಲ್ಲಿ ಪ್ರಯತ್ನಿಸಿದ್ದನು. ಅಲ್ಲದೆ ದಖ್ಖನ್‌ನ ಬಹುತೇಕ ಎಲ್ಲಾ ಮುಸ್ಲಿಂ ಅರಸು ಮನೆತನಗಳು ಶಿಯಾ ಪಂಥಕ್ಕೆ ಸೇರಿದ್ದು, ಉತ್ತರದ ಸುನ್ನಿ ಪಂತಕ್ಕೆ ಸೇರಿದ್ದ ಮನೆತನವನಖ್ಖು ಈ ಮೂರು ರಾಜ್ಯಗಳ ಕಿರುಕುಳದಿಂದ ದೂರವಿರುವಂತಹ ಆಯಕಟ್ಟಿನ ಭಾಗದಲ್ಲಿ ಸ್ಥಾಪಿಸಲು ಮುಂದಾದನು. ಹಾಗಾಗಿಯೇ ಈ ರಾಜ್ಯಗಳಿಗೆ ಕೇಂದ್ರಸ್ಥಾನದಲ್ಲಿದ್ದ ಸಿರಾವನ್ನು ಪ್ರಮುಖ ಕೇಂದ್ರವನ್ನಾಗಿ ಮಾಡಲು ಪ್ರಯತ್ನಿಸಿದನು. ಆದರೆ ಯೋಜನೆ ಯಶಸ್ವಿಯುತವಾಗಲಿಲ್ಲ ಅಲ್ಲದೆ ಸಿರಾ ಪ್ರಾಂತ್ಯದಲ್ಲಿ ಅತಿಹೆಚ್ಚು ಪ್ರಮಾಣದಲ್ಲಿ ಎಣ್ಣೆಕಾಳುಗಳನ್ನು ಬೆಳೆಯುತ್ತಿದ್ದರಿಂದ ಸೈನಿಕರಿಗೆ, ಆಯುಧೋಪಕರಣಗಳಿಗೆ ಬೇಕಾದ ಎಣ್ಣೆಯನ್ನು ಉತ್ತರಕ್ಕೆ ರವಾನಿಸುವ ಉದ್ದೇಶವು ಇದರ ಹಿಂದೆ ಇದ್ದಿರಬಹುದು. ಮುಂದೆ ಮುಕ್ತಗೊಳಿಸಿ ಅಮೀರ್‌ಖಾನ್ ಎಂಬ ಸುಭೇದಾರನನ್ನು ನೇಮಿಸಲಾಯಿತು. ಆದರೆ ಔರಂಗಜೇಬನ ಪತನ ಹಾಗೂ ಮೈಸೂರು ಒಡೆಯರ ಪ್ರಾಬಲ್ಯವು ಸಿರಾ ಸುಭೇದಾರರನ್ನು ಅಸಮರ್ಥರನ್ನಾಗಿಸಿತು. ಮೊಘಲರ ಕಾಲದಲ್ಲಿ ಸಿರಾ ಟಂಕಸಾಲೆ ಹೊಂದಿತ್ತು ಎನ್ನುವುದಕ್ಕೆ ಅಕ್ಬರನಿಂದ ಮೂರನೆಯ ಷಹಜಹಾನನವರೆಗಿನ ೩೨ ನಾಣ್ಯಗಳು ಸಿರಾ ಪ್ರಾಂತ್ಯದ ಮುದಿಗೆರೆ ಮತ್ತು ಅಮೃತಮಹಲ್ ಕಾವಲ್ ಎಂಬಲ್ಲಿ ದೊರೆತಿವೆ.

೨.೪.೨೯. ಮೈಸೂರು ಒಡೆಯರು

ವಿಜಯನಗರ ಸಾಮ್ರಾಜ್ಯ ಕ್ರಿ.ಶ. ೧೫೬೪ರಲ್ಲಿ ತನ್ನ ವೈಭವವನ್ನು ಕಳೆದುಕೊಂಡು ಪೆನುಗೊಂಡೆಗೆ ರಾಜಧಾನಿಯನ್ನು ಬದಲಾಯಿಸಿದರೂ ತುಮಕೂರು ಜಿಲ್ಲೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ಸಣ್ಣ ಪಾಳೆಪಟ್ಟುಗಳು ತಮ್ಮ ಸ್ವಾಮಿನಿಷ್ಠೆಯನ್ನು ಹಾಗೆಯೇ ಮುಂದುವರೆಸಿದವು. ಆದುದರಿಂದಲೇ ಆರಂಭದ ಮೈಸೂರು ಒಡೆಯರು ತುಮಕೂರು ಜಿಲ್ಲೆಯ ಪೂರ್ವಭಾಗವನ್ನು ವಶಪಡಿಸಿಕೊಳ್ಳಲು ಪ್ರಯತ್ನಿಸಲಿಲ್ಲ. ಆದರೆ ಮೈಸೂರು ಗಡಿ ಪ್ರಾಂತ್ಯಕ್ಕೆ ಹೊಂದಿಕೊಂಡ ತುರುವೇಕೆರೆ, ತಿಪಟೂರು, ಚಿಕ್ಕನಾಯಕನಹಳ್ಳಿ ತಾಲೂಕುಗಳಲ್ಲಿ ಮಾತ್ರ ಆಳ್ವಿಕೆ ಮಾಡುತ್ತಿದ್ದ

ಹಾಗಲವಾಡಿ ಪಾಳೆಯಗಾರರೊಂದಿಗೆ ನಿರಂತರ ಘರ್ಷಣೆಗಿಳಿದರು. ಅಲ್ಲದೆ ಬಿಜಾಪುರದ ರಣದುಲ್ಲಾಖಾನನು ಮೈಸೂರು ಸಂಸ್ಥಾನವನ್ನು ಪಡೆಯಲು ಹವಣಿಸುತ್ತಿದ್ದರಿಂದ ಜಿಲ್ಲೆಯಲ್ಲಿ ತಮ್ಮ ಅಧಿಕಾರವನ್ನು ವಿಸ್ತರಿಸಿ ಹಲವು ಕೋಟೆಗಳನ್ನು ಬಲಪಡಿಸಿದನು. ಬಹುಶಃ ಇದರಿಂದಲೇ ಕ್ರಿ.ಶ. ೧೬೩೧ರಲ್ಲಿ ಜಯಚಾಮರಾಜ ಒಡೆಯರು ಬೆಳ್ಳೂರು ಮತ್ತು ಚಿಕ್ಕನಾಯಕನಹಳ್ಳಿಗಳನ್ನು[೨೫೨] ಕಂಠೀರವ ನರಸರಾಜ ಒಡೆಯರು (ಕ್ರಿ.ಶ. ೧೬೩೮–೧೬೫೯) ಕ್ರಿ.ಶ. ೧೬೪೭ರಲ್ಲಿ ತುರುವೇಕೆರೆ, ಬಾಗೂರು ಹುಲಿಯೂರುದುರ್ಗ, ಕಡಬ, ಕಲ್ಲೂರು, ಮಾಯಸಂದ್ರಗಳನ್ನು ಹಾಗೂ ದೊಡ್ಡದೇವರಾಜ ಒಡೆಯರು ತನ್ನ ರಾಜ್ಯವನ್ನು ಚಿಕ್ಕನಾಯಕನಹಳ್ಳಿಯವರೆಗೆ ವಿಸ್ತರಿಸಿದನು. ಈತನ ಸೋದರಳಿಯನಾದ ಚಿಕ್ಕದೇವರಾಜ ಒಡೆಯರು ಅಧಿಕಾರ ವಹಿಸಿಕೊಂಡ ಮೇಲೆ ಕಪ್ಪ ಕೊಡುವುದನ್ನು ನಿಲ್ಲಿಸಿದ ಹೊಳವನಹಳ್ಳಿ ಪಾಳೆಯಗಾರ ಹಾಗೂ ಇತರೆ ತುಮಕೂರಿನ ಸಣ್ಣಪುಟ್ಟ ಅಧಿಕಾರಿಗಳನ್ನು ನಿಯಂತ್ರಣಕ್ಕೆ ತೆಗೆದುಕೊಂಡು ೧೬೭೫ರಲ್ಲಿ ಚಿಕ್ಕನಾಯಕನ ಹಳ್ಳಿಗೆ ಸೇರಿದ ಕಂದಿಕೆರೆ, ಹೊನ್ನವಳ್ಳಿ, ಕೇತಸಮುದ್ರ[೨೫೩]ಗಳನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡನು. ಕ್ರಿ.ಶ. ೧೬೭೮ರಲ್ಲಿ ಮಧುಗಿರಿಯ ಕಾಳಚಿಕ್ಕಪ್ಪಗೌಡನನ್ನು ಸೋಲಿಸಿ ಅದರ ಗಡಿದುರ್ಗಗಳಾದ ಚನ್ನರಾಯನದುರ್ಗ, ಮಿಡಗೇಶಿ, ಕೊರಟಗೆರೆ, ಕೋಲಾಳಗಳನ್ನು[೨೫೪] ತನ್ನ ಅಧೀನಕ್ಕೆ ತೆಗೆದುಕೊಂಡು ಅಲ್ಲಿಯ ದುರ್ಗಗಳ ನಿರ್ವಹಣೆಗಾಗಿ ಅಧಿಕಾರಿಗಳನ್ನು ನೇಮಿಸಿದನು. ಜೊತೆಗೆ ಮಧುಗಿರಿಗೆ ಹೊಂದಿಕೊಂಡಿದ್ದ ಪಾವಗಡ, ನಿಡಗಲಿಲ್ಲ, ಮೊದಲಾದ ಸಂಸ್ಥಾನಗಳ ಮೇಲೂ ದಾಳಿ ಮಾಡಿ ತನ್ನ ನಿಯಂತ್ರಣಕ್ಕೊಳಪಡಿಸಿಕೊಂಡನು. ಮಿಡಗೇಶಿಯ ಕಾಳಪ್ಪಗೌಡನಿಗೆ[೨೫೫] ಚನ್ನರಾಯದುರ್ಗದಲ್ಲಿ ದೊಡ್ಡರಸು ಎಂಬ ಅಧಿಕಾರಿಯನ್ನು ನೇಮಿಸಿ ಚನ್ನರಾಯದುರ್ಗಕ್ಕೆ "ಪ್ರಸನ್ನಗಿರಿ"[೨೫೬] ಎಂದು ನಾಮಕರಣ ಮಾಡಿದನು. ಪುನಃ ೧೬೮೭ರಲ್ಲಿ ಮರಾಠರು ಏಕೋಜಿಯಿಂದ ಕಂಡಿ ಕೆರೆಯನ್ನು ಮರಳಿ ಪಡೆದನು. ಅಲ್ಲದೆ ಸೀಬಿ ಮತ್ತು ಸಿರಾದ ಮೇಲೆ ದಾಳಿ ಮಾಡಿ ಖಜಾನೆಯನ್ನು ಲೂಟಿಮಾಡಿ ಸೀಬಿಯ ಲಕ್ಷ್ಮೀನರಸಿಂಹ ದೇವಾಲಯಕ್ಕೆ ಬಲವಾದ ಕೋಟೆಯನ್ನು ನಿರ್ಮಿಸಿದನು. ಕೋಟೆಯ ರಕ್ಷಣಾ ತಂತ್ರಗಳನ್ನು ಗಮನಿಸಿದರೆ ಸಿರಾ ಪಾಳೆಯಗಾರರು ಮತ್ತು ಒಡೆಯರಿಗೆ ತಮ್ಮ ಆರಾಧ್ಯ ದೈವವಾಗಿ ಇದು ರೂಪುಗೊಂಡಿರಬೇಕು. ಆದುದರಿಂದಲೇ ದೇವಾಲಯದ ಪ್ರಕಾರ ಗೋಡೆಯಲ್ಲಿ ಕೈಫಿಡಿಗೋಡೆ, ಕೋಟೆಯ ತೆನೆ, ಅಂಬುಗೆಂಡಿಗಳಿರುವುದು ಕಂಡುಬರುತ್ತದೆ. ಚಿಕ್ಕ ದೇವರಾಜ ಇಮ್ಮಡಿ ಕಂಠೀರವ ನರಸರಾಜ ಒಡೆಯನ ಕಾಲದಲ್ಲಿ ಮಧುಗಿರಿ ದುರ್ಗವನ್ನು ಮಲ್ಲರಾಜಯ್ಯನೆಂಬ ಅಧಿಕಾರಿ ನೋಡಿಕೊಳ್ಳುತ್ತಿದ್ದನು. ಮಿಡಿಗೇಶಿದುರ್ಗದ ಮೇಲೆ ಪುನಃ ದಾಳಿ ಮಾಡಿ ೧೭೧೦–೧೧ರಲ್ಲಿ ಮೊಘಲರನ್ನು ಸಿರಾದ ಬಳಿ ಎದುರಿಸಿ[೨೫೭] ರಾಜ್ಯದ ಉತ್ತರದ ಗಡಿಯನ್ನು ಸಿರಾದವರೆಗೆ ವಿಸ್ತರಿಸಿದನು. ಈತನ ನಂತರ ಮೊದಲನೆಯ ದೊಡ್ಡಕೃಷ್ಣರಾಜ ಒಡೆಯರ್ ಏಳನೆಯ

ಚಾಮರಾಜ ಒಡೆಯರ್, ಚಿಕ್ಕ ಕೃಷ್ಣರಾಜ ಒಡೆಯರ್ ಆಳ್ವಿಕೆ ನಡೆಸಿದರೂ ಹೈದರ್-ಟಿಪ್ಪುವಿನ ಏಳಿಗೆಯಿಂದ ಗೃಹಬಂಧನದಲ್ಲಿ ಇರಬೇಕಾಯಿತು. ಕೊನೆಗೆ ೧೭೯೯ರಲ್ಲಿ ಟಿಪ್ಪು ನಾಲ್ಕನೇ ಆಂಗ್ಲೋ ಮೈಸೂರು ಕದನದಲ್ಲಿ ಮರಣ ಹೊಂದಿದ ನಂತರ ಬ್ರಿಟೀಷರ ಸಹಾಯಕ ಸೇನಾ ಪದ್ಧತಿಗೊಳಪಟ್ಟ ಮೈಸೂರು ಒಡೆಯರಿಗೆ ಪುನಃ ಅಧಿಕಾರವನ್ನು ನೀಡಲಾಯಿತು. ಮುಮ್ಮಡಿ ಕೃಷ್ಣರಾಜ ಒಡೆಯರಿಂದ ಸೈಯದ್ ಯಾಕೊಬಿ ಬುಕಾರಿ ಎಂಬ ಮುಸ್ಲಿಂ ವರ್ತಕ ಕಂದಿಕೆರೆ ಬಳಿಯ ಬೆಳವಾಡಿ ಗ್ರಾಮವನ್ನು ೬೦೮ ಗದ್ಯಾಣದಲ್ಲಿ ೧/೪ನೆಯ ಭಾಗಕ್ಕೆ ದತ್ತಿ ನೀಡಿದ್ದು[೨೫೮] ದೇಶದಲ್ಲಿ ಮುಸ್ಲಿಮರು ಸಹ ಅಗ್ರಹಾರಗಳಿಗೆ ದತ್ತಿ ನೀಡಿದ್ದಾರೆ ಎಂಬುದನ್ನು ತಿಳಿಸುವ ಸಂಗತಿ ಈತನ ಆಳ್ವಿಕೆಯ ಮಹತ್ವಪೂರ್ಣ ಅಂಶವಾಗಿದೆ. ಈತ ಆಡಳಿತದ ಅನುಕೂಲಕ್ಕಾಗಿ ಸಂಸ್ಥಾನವನ್ನು ೬ ಫೌಜುಗಳನ್ನಾಗಿ ವಿಭಾಗಿಸಿ ಅವುಗಳಲ್ಲಿ ಮಧುಗಿರಿ, ಫೌಜುಲದಾರಿಯು ಸಹ ಒಂದಾಗಿತ್ತು. ಈ ಫೌಜಿನಲ್ಲಿ ಇಂದಿನ ಹತ್ತು ತಾಲೂಕುಗಳನ್ನು ಸೇರ್ಪಡೆ ಮಾಡಲಾಗಿತ್ತು. ಆದರೆ ೧೮೩೦-೩೧ರಲ್ಲಿ ನಡೆದ ಬಿದನೂರು ದಂಗೆಯಿಂದ ಈತ ಅಧಿಕಾರವನ್ನು ಕಳೆದುಕೊಂಡನು. ಈತನ ನಂತರ ಅಧಿಕಾರಕ್ಕೆ ಬಂದ ೧೦ನೆಯ ಚಾಮರಾಜ ಒಡೆಯರು ೧೮೩೪ರಲ್ಲಿ ರಾಜ್ಯವನ್ನು ನಾಲ್ಕು ವಿಭಾಗವನ್ನಾಗಿ ಮಾಡಿ ಗುಬ್ಬಿ, ಸಿರಾ, ಮಧುಗಿರಿ, ಪಾವಗಡ, ಕೊರಟಗೆರೆಗಳನ್ನು ಚಿತ್ರದುರ್ಗ ವಿಭಾಗಕ್ಕೆ ಮತ್ತು ಉಳಿದವುಗಳನ್ನು ಬೆಂಗಳೂರು ವಿಭಾಗಕ್ಕೆ ಸೇರಿಸಿದರು. ೧೮೭೦-೧೮೮೨ರಲ್ಲಿ ತುಮಕೂರನ್ನು ಜಿಲ್ಲೆಯನ್ನಾಗಿಸಿ ೧೦ ತಾಲೂಕುಗಳನ್ನು ಸೇರ್ಪಡೆಗೊಳಿಸಲಾಯಿತು. ೧೮೮೬ರಲ್ಲಿ ಪಾವಗಡ ತಾಲೂಕನ್ನು ಚಿತ್ರದುರ್ಗ ಜಿಲ್ಲೆಯಿಂದ ಪುನಃ ತುಮಕೂರು ಜಿಲ್ಲೆಗೆ ಸೇರ್ಪಡೆಗೊಳಿಸಿದರು. ಹತ್ತನೆಯ ಚಾಮರಾಜ ಒಡೆಯರ ನಂತರ ನಾಲ್ವಡಿ ಕೃಷ್ಣರಾಜ ಒಡೆಯರು ೧೯೩೫ರಲ್ಲಿ ತುಮಕೂರು ಜಿಲ್ಲೆಯ ಗುಬ್ಬಿ, ತಿಪಟೂರು, ಚಿಕ್ಕನಾಯಕನಹಳ್ಳಿ, ತುರುವೇಕೆರೆ ತಾಲ್ಲೂಕುಗಳನ್ನು ಒಟ್ಟುಗೂಡಿಸಿ ಗುಬ್ಬಿಸಬ್ ಡಿವಿಜನ್‌ಗೆ ಸೇರಿಸಲಾಯಿತು.[೨೫೯] ತುಮಕೂರು ಮಧುಗಿರಿ, ತಿಪಟೂರು ಸಬ್ ಡಿವಿಜನ್‌ಗಳನ್ನು ಘೋಷಿಸಿ ಗುಬ್ಬಿ ಸಬೇಡಿವಿಜನ್ ಅನ್ನು ರದ್ದುಪಡಿಸಿದನು[೨೬೦] ನಾಲ್ವಡಿ ಕೃಷ್ಣರಾಜ ಒಡೆಯರ ನಂತರ ಜಿಲ್ಲೆಯ ಬಹುಭಾಗ ಜಯಚಾಮರಾಜ ಒಡೆಯರ ಆಳ್ವಿಕೆಗೆ ಒಳಪಟ್ಟಿತು. ಒಟ್ಟಾರೆ ಒಡೆಯರ ಕಾಲದಲ್ಲಿ ತುಮಕೂರು ಜಿಲ್ಲೆಯಲ್ಲಿದ್ದ ಸಣ್ಣಪುಟ್ಟ ಪಾಳೆಪಟ್ಟುಗಳನ್ನು ಒಟ್ಟುಗೂಡಿಸಿ ಪ್ರಮುಖವಾದ ಕೋಟೆಗಳ ಅಧೀನಕ್ಕೆ ಸೇರ್ಪಡೆಗೊಳಿಸಲಾಯಿತು. ಇವರ ಕಾಲದಲ್ಲಿ ಸಿರಾ ತಾಲೂಕಿನ ಚಿನ್ನಪ್ಪನಹಳ್ಳಿ, ಮಧುಗಿರಿ ತಾಲೂಕಿನ ಗರಣಿಯಲ್ಲಿ ಕೋಟೆ ಮತ್ತು ಬುರುಜ ಗ್ರಾಮರಕ್ಷಣೆಗಾಗಿ ನಿರ್ಮಾಣಗೊಂಡವು.

೨.೪.೩೦. ಮರಾಠರು

ಯುದ್ಧೋತ್ಸಾಹಿಗಳಾದ ಮರಾಠರನ್ನು ಬಿಜಾಪುರದ ಶಾಹಿಗಳು ದಖ್ಖನ್ ದಂಡಯಾತ್ರೆಗೆ ಬಳಸಿಕೊಂಡಿದ್ದರಿಂದ ಕರ್ನಾಟಕದ ಬಹುಭಾಗ ಮರಾಠರಿಗೆ ಪರಿಚಯವಾಯಿತು. ಷಹಜಿಯ

ನಾಯಕತ್ವದಲ್ಲಿ ದಕ್ಷಿಣ ಕರ್ನಾಟಕಕ್ಕೆ ಬಂದ ಬಿಜಾಪುರದ ದಂಡು ಬೆಂಗಳೂರನ್ನು ಕೇಂದ್ರವಾಗಿರಿಸಿಕೊಂಡು ಸಿರಾ, ತುಮಕೂರು, ಮಧುಗಿರಿ, ತುರುವೇಕೆರೆ, ಚಿಕ್ಕನಾಯಕನಹಳ್ಳಿಗಳಲ್ಲಿ ಚೌತ್ ಮತ್ತು ಸರ್ದೇಶ್‌ಮುಖ್ ತೆರಿಗೆಗಳನ್ನು ವಸೂಲಿ ಮಾಡಿದರು. ಜೊತೆಗೆ ಸಣ್ಣಪುಟ್ಟ ಪಾಳೆಪಟ್ಟುಗಳಿಗೆ ಕಿರುಕುಳ ನೀಡುತ್ತಾ ಹಲವು ಕೋಟೆಗಳ ನಾಶಕ್ಕೂ ಕಾರಣರಾದರು. ಪರಶುರಾಮ್‌ಬಾವೊ ಚಿಕ್ಕನಾಯಕನಹಳ್ಳಿ ಕೋಟೆಯನ್ನು ನಾಶಪಡಿಸಿದ್ದು[೨೬೧] ಪ್ರಮುಖವೆನಿಸುತ್ತದೆ.

ಷಹಜಿಯ ಮಗ ಶಿವಾಜಿ ಚೌತ್ ವಸೂಲಿ ಮಾಡಲು ಕೈಗೊಂಡ ೧೬೭೭ರಲ್ಲಿ ದಖನ್ ದಂಡಯಾತ್ರೆ ಸಂದರ್ಭದಲ್ಲಿ ಸಿರಾವನ್ನು ಗೆದ್ದು ತನ್ನ ತಮ್ಮನ ಪತ್ನಿ ದೀಪಾಬಾಯಿಗೆ ಉಡುಗೊರೆಯಾಗಿ ನೀಡಿದನು. ಇಲ್ಲಿ ೧೬೩೭ರಿಂದ ೧೭೬೧[೨೬೨]ರವರೆಗೂ ಮರಾಟರ ಅಧಿಕಾರಗಳನ್ನು ಚೌತ್ ಅನ್ನು ವಸೂಲಿ ಮಾಡಿದರು. ಶಾಹು ಮಹಾರಾಜನ ದಂಡನಾಯಕನಾದ ಫತೇಸಿಂಗ್ ಹಾಗೂ ೧೭೪೪ರ ಕೊನೆಯಲ್ಲಿ ಬಾಬೂಜಿನಾಯಕರು ಸಿರಾವನ್ನು ೧೭೪೫ರಲ್ಲಿ ಮುರಾರ್‌ರಾವ್ ಘೋರ್ಪಡೆಯು ಸಹೋದರನಾದ ಸುಬ್ಬರಾವ್‌ಘೋರ್ಪಡೆಯು ಕನ್ನಮೇಡಿ ಕೋಟೆಯನ್ನು ಮುತ್ತಿದನು.[೨೬೩] ಕ್ರಿ.ಶ. ೧೭೬೫ರಲ್ಲಿ ಮಾದವರಾಯನು ಮತ್ತು ಸಿರಾವನ್ನು ೧೭೬೫ರಲ್ಲಿ ಮಧುಗಿರಿಯನ್ನು[೨೬೪] ೧೭೬೭ರಲ್ಲಿ ಮಿಡಿಗೇಶಿಗಳನ್ನು[೨೬೫] ವಶಪಡಿಸಿಕೊಂಡು ಆನಂದರಾವ್‌ನಿಗೆ ಮಧುಗಿರಿ ಗಣೇಶ್‌ರಾವ್ ನಾರಾಯಣನಿಗೆ ಚೆನ್ನರಾಯನದುರ್ಗ ಚಾಮಾಜಿಸಿಂದರಿಗೆ ಸಿರಾ[೨೬೬] ಪ್ರದೇಶದ ಮೇಲ್ವಿಚಾರಣೆ ವಹಿಸಿದರು. ಕೊನೆಗೆ ೧೭೭೨ರಲ್ಲಿ ಹೈದರ್‌ನೊಂದಿಗೆ ಮರಾಠರ ತ್ರಯಂಬಕರಾಯನು ಒಪ್ಪಂದ ಮಾಡಿಕೊಂಡು ಚನ್ನರಾಯನದುರ್ಗ, ಸಿರಾ, ಮಧುಗಿರಿಗಳನ್ನು ಹಿಂದಿರುಗಿಸಿದನು. (ನಂಜುಂಡಸ್ವಾಮಿ ಎ.ಎಸ್. ೨೦೧೨, ಪಾಳೆಯಗಾರರು ೪ ಒಡೆಯರ ಇತಿಹಾಸ, ೮-೧೫೭,೧೫೮) ನಂತರ ಮೂರನೆಯ ಆಂಗ್ಲೋ ಮೈಸೂರು ಯುದ್ಧದಲ್ಲಿ ೧೭೯೧ರಲ್ಲಿ ಕಾರನ್‌ವಾಲಿಸನಿಗೆ ನೆರವು ನೀಡಲು ದಖ್ಖನ್‌ಗೆ ಬಂದ ಮರಾಠರ ಸೇನೆ ಬಲವಂತರಾಯನ ಮುಖಂಡತ್ವದಲ್ಲಿ ಪುನಃ ಮಧುಗಿರಿಯನ್ನು ವಶಪಡಿಸಿಕೊಂಡನು. ಸೆರೆಯಲ್ಲಿದ್ದ ಪಾವಗಡ ಪಾಳೆಯಗಾರರ ತಿಮ್ಮಪ್ಪನಾಯಕನನ್ನು ಬಿಡುಗಡೆ ಮಾಡಿ ಮಿಡಿಗೇಶಿಯಲ್ಲಿದ್ದ ಚೆನ್ನಪ್ಪಗೌಡನಿಗೆ ನೆರವು ಟಿಪ್ಪುವಿನ ಸೇನಾಧಿಕಾರಿ ಕಮನುದ್ಧೀನ್‌ನೊಂದಿಗೆ ಮಧುಗಿರಿ ಬಳಿ ಕಾದಾಡಿ ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೆ ಹಿಂದಿರುಗಿದನು.[೨೬೭] ತುಮಕೂರು ಜಿಲ್ಲೆಯಲ್ಲಿ ಮರಾಠರು ಕೇವಲ ಚೌತ್ ವಸೂಲಿ ಮಾಡುವುದಕ್ಕಾಗಿ ಮಾತ್ರ ದಾಳಿ ಮಾಡಿದರೆ ಹೊರತು ಇಲ್ಲಿಯೇ ಅಧಿಕಾರ ಚಲಾಯಿಸಲು ಬಯಸಲಿಲ್ಲ. ಬಹುಶಃ ಹೈದರ್-ಟಿಪ್ಪುವಿನ ಏಳಿಗೆ ಹಾಗೂ ಮರಾಠ ಪೇಶ್ವೆಗಳು ಉತ್ತರದ ಬಗೆಗೆ ವಹಿಸಿದ ಅತೀವ ಆಸಕ್ತಿಯೂ ಸಹ ದಖ್ಖನ್‌ನತ್ತ ಸಾಮ್ರಾಜ್ಯ ವಿಸ್ತರಿಸಲು ಸಾಧ್ಯವಾಗದಂತೆ ಮಾಡಿದೆ.

೨.೪.೩೧. ಹೈದರ್-ಟಿಪ್ಪು (ಕ್ರಿ.ಶ. ೧೭೬೧-೧೭೯೯)

ಹೈದರ್ ಮತ್ತು ಟಿಪ್ಪು ದಖ್ಖನ್‌ನಲ್ಲಿ ಪ್ರಾಬಲ್ಯ ಹೊಂದಿದ್ದು, ಬ್ರಿಟೀಷರಿಗೆ ಸಹಿಸಲಾರದ ಸಂಗತಿಯಾಗಿತ್ತು. ಹೈದರ್-ಟಿಪ್ಪುವಿನ ಕಾಲದಲ್ಲಿ ಜಿಲ್ಲೆಯ ಕೋಟೆಗಳು ಮಹತ್ವದ ಸ್ಥಾನ ಪಡೆದಿದ್ದವು ಎಂಬ ಅಂಶ ಅವುಗಳ ಪ್ರೆಂಚ್ ವಾಸ್ತು ರಚನಾ ಶೈಲಿಯಿಂದ ತಿಳಿಯುತ್ತದೆ. ಸದಾ ಕಾಲ ಬ್ರಿಟೀಷರೊಂದಿಗೆ ರಾಜಕೀಯ ಸಂಘರ್ಷದಲ್ಲಿ ತೊಡಗಿದ್ದರೂ ಸಹ ಮಧುಗಿರಿ, ಮಿಡಿಗೇಶಿ, ಪಾವಗಡ, ಭಸ್ಮಾಂಗಿ, ಸಿರಾ, ಹತ್ತಿದುರ್ಗ, ಹುಲಿಯೂರುದುರ್ಗ, ದೇವರಾಮನದುರ್ಗ, ಚೆನ್ನರಾಯನದುರ್ಗ ಮೊದಲಾದ ಕೋಟೆಗಳಲ್ಲಿನ ಕುಸುರಿ ಕೆಲಸ ಪ್ರೆಂಚ್ ರಕ್ಷಣಾ ತಂತ್ರಗಳನ್ನೊಳಗೊಂಡ ಲಕ್ಷಣಗಳನ್ನು ಗಮನಿಸಿದರೆ ಇವುಗಳ ಜೀರ್ಣೋದ್ಧಾರಕ್ಕಾಗಿ ಯಾವಾಗ ತಮ್ಮ ಸಮಯವನ್ನು ಮೀಸಲಿಟ್ಟಿದ್ದರು ಎಂಬ ಅಂಶ ಸೋಜಿಗ ಎನಿಸುತ್ತದೆ. ಆದುದರಿಂದ ಇವರು ಪುರಗಳ ನಿರ್ಮೂಲನಕಾರರಲ್ಲ ಬದಲಾಗಿ ಅವುಗಳ ನಿರ್ಮಾಣ ಮತ್ತು ದುರಸ್ತಿಗೆ ಹೆಚ್ಚು ಆದ್ಯತೆ ನೀಡಿದ್ದರು ಎಂಬುದು ಸ್ಪಷ್ಟವಾಗುತ್ತದೆ.

೧. ಹೈದರ್‌ಆಲಿ (ಕ್ರಿ.ಶ. ೧೭೨೧-೧೭೮೨)

ಕ್ರಿ.ಶ. ೧೭೨೧ರಲ್ಲಿ ಕೋಲಾರದ ಬೂದಿಕೋಟೆಯಲ್ಲಿ ಈತ ಜನಿಸಿದರೂ ತನ್ನ ತಂದೆ ಮಹಮ್ಮದ್ ಸಿರಾ ನವಾಬನ ಸೇನೆಯಲ್ಲಿ ಸೇವೆ ಮಾಡುತ್ತಿದ್ದರಿಂದ ಬಾಲ್ಯವನ್ನು ಮಧುಗಿರಿಯ ಮಲ್ಲರಾಜಯ್ಯ ಮತ್ತು ರಾಂಪುರದ (ಮಧುಗಿರಿ ಹತ್ತಿರ) ವೆಂಕಪ್ಪಯ್ಯನವರ ಮನೆಯಲ್ಲೇ ಕಳೆದನು.[೨೬೮] ಕ್ರಮೇಣ ಮೈಸೂರಿನ ದಳವಾಯಿ ನಂಜರಾಜರ ಮೆಚ್ಚುಗೆಗೆ ಪಾತ್ರನಾಗಿ ಮೈಸೂರಿನ ದಳವಾಯಿ ಆದನು. ಕ್ರಿ.ಶ. ೧೭೬೧ರಲ್ಲಿ ಹೈದರಾಬಾದ್ ನಿಜಾಮನ ಸೋದರ ಆದೋನಿಯ ಬಸಲತ್‌ಜಂಗ್‌ನಿಂದ ಮೂರು ಲಕ್ಷ ರೂಪಾಯಿಗೆ ಸಿರಾ ಪ್ರಾಂತ್ಯವನ್ನು ಪಡೆದುಕೊಂಡು ನಲ್ಲಪ್ಪನನ್ನು ದಳವಾಯಿಯಾಗಿ ನೇಮಕ ಮಾಡಿಕೊಂಡನು.[೨೬೯]. ತುಮಕೂರು ಜಿಲ್ಲೆಯಲ್ಲಿ (೧೭೭೪ರಲ್ಲಿ) ಆಳ್ವಿಕೆ ಮಾಡುತ್ತಿದ್ದ ಪಾಳೆಯಗಾರರಾದ ಕಾಳಪ್ಪಗೌಡನಿಂದ-ಮಧುಗಿರಿ, ರಂಗಪ್ಪರಾಜನಿಂದ-ರತ್ನಗಿರಿ, ಇಮ್ಮಡಿಹೊನ್ನಪ್ಪಗೌಡನಿಂದ-ಗುಬ್ಬಿ-ಹೊಸಹಳ್ಳಿ ೧೭೭೬ರಲ್ಲಿ[೨೭೦] ಮುಮ್ಮಡಿ ಮುದಿಯಪ್ಪ ನಾಯಕನಿಂದ-ಹಾಗಲವಾಡಿ ಸಂಸ್ಥಾನ,[೨೭೧], ಕ್ರಿ.ಶ. ೧೭೭೭ರಲ್ಲಿ ತಿಮ್ಮಪ್ಪನಿಂದ ಪಾವಗಡ, ತಿಮ್ಮಣ್ಣನಾಯಕನಿಂದ-ನಿಡುಗಲ್ಲು[೨೭೨]ನ್ನು ದೊಡ್ಡರಸನಿಂದ-ಚೆನ್ನರಾಯನದುರ್ಗ[೨೭೩] ಇಮ್ಮಡಿ ರಣಭೈರೇಗೌಡನಿಂದ-ಹೊಳವನಹಳ್ಳಿ ಸಂಸ್ಥಾನ[೨೭೪]ಗಳನ್ನು ಬಲವಂತವಾಗಿ ಪಡೆದುಕೊಂಡನು. ೧೭೪೪ರಲ್ಲಿ ಮಿಡಗೇಶಿಯನ್ನು ವಶಪಡಿಸಿಕೊಂಡು ಅದನ್ನು ಮುಮ್ಮಡಿ ದೊಡ್ಡ ಕಣಪ್ಪಗೌಡನಿಗೆ ನೀಡಿದನು,[೨೭೫]. ಹೀಗೆ ಸಣ್ಣಪುಟ್ಟ ಪಾಳೆಪಟ್ಟುಗಳಿಗೆ ಆರಂಭದಲ್ಲಿ ಸಹಾಯಹಸ್ತ ನೀಡಿದ ಮೇಲೆ ಯಾವುದೋ ಕಾರಣ ಅವರನ್ನು ತನ್ನ ನೇರ ಆಡಳಿತಕ್ಕೆ ಸೇರ್ಪಡೆ ಮಾಡಿಕೊಳ್ಳುತ್ತಿದ್ದನು. ಈತನ ಕಿರುಕುಳ ಕೆಲವೊಮ್ಮೆ ವೈಭವಯುತವಾಗಿ ಆಳ್ವಿಕೆ ಮಾಡಿದ ಪಾಳೆಯಗಾರರು ಜೀವನವನ್ನು ನಡೆಸಲು ಆಗದಂತಹ ಕಡುಬಡತನಕ್ಕೆ

ಹೋದಂತಹ ಸನ್ನಿವೇಶಗಳುಂಟು. ಇವರ ಹೀನ ಸ್ಥಿತಿಗತಿ ಗಮನಿಸಿದರೆ ಹೈದರನು ರತ್ನಗಿರಿ ರಂಗಪ್ಪರಾಜನಿಗೆ-ಬೆಳಗುಂದಿ ಗ್ರಾಮವನ್ನು[೨೭೬], ಮುಮ್ಮಡಿ ಮುದಿಯಪ್ಪನಾಯಕನಿಗೆ-ಭೋಗಸಂದ್ರ, ಶಿವಪುರ, ಯಕ್ಕಲಕಟ್ಟೆ ಗ್ರಾಮಗಳನ್ನು ಅವರ ಜೀವನ ನಿರ್ವಹಣೆಗಾಗಿ ದತ್ತಿ ನೀಡಿದನು[೨೭೭]. ತುಮಕೂರು ಜಿಲ್ಲೆಯ ಮಧುಗಿರಿ ಮತ್ತು ಸಿರಾ ಪ್ರಾಂತ್ಯಗಳಿಗೆ ಸೇರ್ಪಡೆಗೊಳಿಸಿ ಅಧಿಕಾರವನ್ನು ಕೇಂದ್ರೀಕರಿಸಿದನು. ಮಧುಗಿರಿ ಪ್ರಾಂತ್ಯಕ್ಕೆ ವೆಂಕಪ್ಪಯ್ಯ ಸುಲ್ತಾನ್‌ಖಾನ್‌ನನ್ನು ಸಿರಾಕ್ಕೆ[೨೭೮] ಪ್ರಧಾನ ಅಧಿಕಾರಿಗಳನ್ನಾಗಿಸಿದನು. ಆದರೂ ಮರಾಠರ ನಿರಂತರ ದಾಳಿಗಳಿಂದ ಈ ಪ್ರದೇಶಗಳಿಗೆ ಶಾಶ್ವತ ಭದ್ರತೆಯನ್ನು ಕಲ್ಪಿಸುವಲ್ಲಿ ಎಡವಿದನೆಂದೇ ಹೇಳಬೇಕು. ಏಕೆಂದರೆ ಮರಾಠರು ಗಡಿ ಪ್ರದೇಶಗಳಲ್ಲಿ ಚೌತ್‌ಗಾಗಿ ಪದೇ ಪದೇ ಕಿರುಕುಳ ನೀಡುತ್ತಿದ್ದಾಗ ಅವರನ್ನು ತಾತ್ಕಾಲಿಕವಾಗಿ ಹೊರಹಾಕಲು ಪ್ರಯತ್ನಿಸಿದನೇ ಹೊರತು ಗಡಿ ಭಾಗದ ಈ ದುರ್ಗಗಳನ್ನು ಕಾಲಕಾಲಕ್ಕೆ ದುರಸ್ತಿಗೊಳಿಸಿ ಅವುಗಳ ರಕ್ಷಣೆಗಾಗಿ ಸೈನ್ಯವನ್ನು ಮೀಸಲಿಟ್ಟಿದ್ದರೆ ಯಾವ ಶತ್ರುವು ಈ ಭಾಗದಿಂದ ಶ್ರೀರಂಗಪಟ್ಟಣವನ್ನು ಪ್ರವೇಶಿಸುತ್ತಿರಲಿಲ್ಲ. ಏಕೆಂದರೆ ಈ ಭಾಗದಲ್ಲಿ ಅಂದು ಸುಮಾರು ೨೭೨ಕ್ಕೂ ಅಧಿಕ ಕೋಟೆ-ಕೊತ್ತಲಗಳಿದ್ದವು[೨೭೯]. ಹಾಗಾಗಿ ಇವುಗಳನ್ನು ಸರಿಯಾಗಿ ಬಳಸಿಕೊಂಡಿದ್ದ ಪಕ್ಷದಲ್ಲಿ ಬ್ರಿಟೀಷರ ಸೈನ್ಯ ಶ್ರೀರಂಗಪಟ್ಟಣದ ಮೇಲೆ ಸುಲಭವಾಗಿ ದಾಳಿ ಮಾಡಲು ಸಾಧ್ಯವಾಗುತ್ತಿರಲಿಲ್ಲ.

೨. ಟಿಪ್ಪು (೧೭೫೩-೧೭೯೯)

ಹೈದರಾಲಿಯ ಮಗನಾದ ಫತೇಆಲಿಖಾನ್ ಟಿಪ್ಪು ಎಂಬ ನಾಮಧೇಯದಿಂದ ಪ್ರಸಿದ್ಧಿಗೆ ಬಂದರೂ ಸಹ ತನ್ನ ತಂದೆಯ ರಾಜತಾಂತ್ರಿಕತೆಯನ್ನು ಮೈಗೂಡಿಸಿಕೊಳ್ಳಲಿಲ್ಲ. ೧೭೭೪ರಲ್ಲಿ ದೊಡ್ಡಕಣ್ಣಪ್ಪಗೌಡನಿಂದ ಮಧುಗಿರಿಯನ್ನು, ಗುಬ್ಬಿ-ಹೊಸಹಳ್ಳಿ ಪಾಳೆಯಗಾರರಿಂದ ಗುಬ್ಬಿಹೊಸಹಳ್ಳಿ ಸಂಸ್ಥಾನವನ್ನು, ಚೆನ್ನಬಸಪ್ಪಗೌಡನಿಂದ ಮಿಡಿಗೇಶಿಯನ್ನು,[೨೮೦] ತಿಮ್ಮನಾಯಕನಿಂದ ನಿಡುಗಲ್ಲನ್ನು, ೧೭೭೪ರಲ್ಲಿ ಸಿರಾ ತನ್ನ ಸುಪರ್ದಿಗೆ ಸೇರ್ಪಡೆಗೊಳಿಸಿಕೊಂಡನು. ಸಿರಾದಲ್ಲಿ-ರಘುಪತಯ್ಯನನ್ನು, ಮಧುಗಿರಿಯಲ್ಲಿ- ಸೈಯ್ಯದ್ ಫಕ್ರುದ್ದೀನ್[೨೮೧], ಮಿಡಿಗೇಶಿಯಲ್ಲಿ-ಹಜರತ್‌ವಾಲಿಯನ್ನು[೨೮೨], ಪಾವಗಡದಲ್ಲಿ-ಸುಬ್ಬರಾಯಪ್ಪನನ್ನು ಆಯಾಯ ಪ್ರದೇಶಗಳ ಮೇಲ್ವಿಚಾರಣೆಗಾಗಿ ನೇಮಿಸಿದನು. ಆದುದರಿಂದ ಈ ಸಂಸ್ಥಾನಗಳ ಪಾಳೆಯಗಾರರಾದ ಚೆನ್ನಬಸಪ್ಪಗೌಡ, ಇಮ್ಮಡಿ ರಣಭೈರೇಗೌಡ, ದೊಡ್ಡಕಣ್ಣಪ್ಪಗೌಡ ಮೊದಲಾದವರು ಟಿಪ್ಪುವಿನ ವಿರುದ್ಧ ಬ್ರಿಟೀಷರ ನೆರವನ್ನು ಕೋರಿದರು. ಆದರೆ ತಿಮ್ಮಣ್ಣನಾಯಕ, ಇಮ್ಮಡಿ ರಂಗಪ್ಪರಾಜ, ಮುಮ್ಮಡಿ ಮುದ್ವೀರಪ್ಪನಾಯಕ ಮೊದಲಾದ ಪಾಳೆಯಗಾರರು ಮಾತ್ರ ಅನಿವಾರ್ಯವಾಗಿ ಟಿಪ್ಪುವಿನ ಪಕ್ಷವಹಿಸಿ ಬ್ರಿಟಿಷರ ವಿರುದ್ಧ ಹೋರಾಡಬೇಕಾಯಿತು. ಈ ವೈರುಧ್ಯಗಳಿಂದ ನೊಂದ ಪಾಳೆಯಗಾರರು ಮಧುಗಿರಿ ಬಳಿ ಮಾಲೂರಿನಲ್ಲಿ ಕಾರನ್‌ವಾಲಿಸನ ದಂಡನ್ನು ಸೇರಿ ಟಿಪ್ಪುವಿನ ವಿರುದ್ಧ ಠಾಣ್ಯವನ್ನು ಹೂಡಿದರಾದರೂ ಬ್ರಿಟೀಷರಿಂದ ಯಾವ ನೆರವು ಇವರಿಗೆ ದೊರೆಯಲಿಲ್ಲ. ಏಕೆಂದರೆ

೧೭೯೯ರಲ್ಲಿ ಟಿಪ್ಪು ಹತನಾದ ಮೇಲೆ ಈ ಪ್ರಾಂತ್ಯವೆಲ್ಲಾ ಮೈಸೂರು ಒಡೆಯರ ಅಧಿಪತ್ಯಕ್ಕೆ ಒಳಪಟ್ಟಿತು. ಫಕ್ರುದ್ದೀನನು ಟಿಪ್ಪುವಿನ ಹೆಸರಿನಲ್ಲಿ ಮಧುಗಿರಿಯನ್ನು ಫತೇಹಾಬಾದ್ ಎಂಬ ಪ್ರತಿನಾಮವನ್ನು ಇಟ್ಟು, ಕಪ್ಪೆಗುಂಡು ಬಳಿ ಹೊಸದಾಗಿ ಕೋಟೆ ಬಾಗಿಲನ್ನು ಕಟ್ಟಿಸಿ ಅದಕ್ಕೆ ಮೈಸೂರು ಬಾಗಿಲು[೨೮೩] ಎಂದು ಕರೆದನು. ಟಿಪ್ಪು ಗಡಿ ದುರ್ಗಗಳ ಅಭೇದ್ಯತೆಗಾಗಿ ಆಗಾಗ ಜೀರ್ಣೋದ್ಧಾರ ಮಾಡಿಸುತ್ತಿದ್ದನೆಂದು ಇದರಿಂದ ಸ್ಪಷ್ಟವಾಗುತ್ತದೆ.

ಹೈದರ್-ಟಿಪ್ಪುವಿನ ಕಾಲದಲ್ಲಿ ಜಿಲ್ಲೆಯ ಬಹುತೇಕ ಕೋಟೆಗಳು ಜೀರ್ಣೋದ್ಧಾರ ಹೊಂದಿದ್ದವು ಎಂಬ ಅಂಶ ಅವುಗಳ ರಚನಾ ಶೈಲಿಯಿಂದ ತಿಳಿಯುತ್ತದೆ. ವಿಶೇಷವಾಗಿ ಹೈದರ್-ಟಿಪ್ಪುರನ್ನು ಧಾರ್ಮಿಕ ಅಸಹಿಷ್ಣುಗಳೆಂದು ಗುರುತಿಸುವವರಿಗೆ ಜಿಲ್ಲೆಯಲ್ಲಿ ವೈದಿಕ ದೇವಾಲಯಗಳ ನಿರ್ಮಾಣ ಮತ್ತು ದಾನ-ದತ್ತಿಯನ್ನು ನೀಡಿರುವುದು ಅವರ ವಾದವನ್ನು ಬದಲಿಸಿಕೊಳ್ಳುವಂತೆ ಮಾಡುತ್ತದೆ. ಏಕೆಂದರೆ ಸೀಬಿಯ ಲಕ್ಷ್ಮಿನರಸಿಂಹ ದೇವಾಲಯದ ಮುಖಮಂಟಪ ಮತ್ತು ಗೋಪುರದ ಮೇಲ್ಭಾವಣಿಯಲ್ಲಿ ಹೈದರ್ ಮತ್ತು ಟಿಪ್ಪುವಿನ ಭಿತ್ತಿಚಿತ್ರಗಳಿವೆ. ಅದೇ ರೀತಿ ಬೆಳ್ಳಾವೆಯ-ಸೋಮೇಶ್ವರ, ಮುದಿಗೆರೆಯ-ಸೋಮೇಶ್ವರ, ತುಮಕೂರಿನ-ಲಕ್ಷ್ಮಿನರಸಿಂಹ, ಕೊಟ್ಟನಹಳ್ಳಿಯ-ಆಂಜನೇಯ ದೇವಾಲಯಗಳ ನಿರ್ಮಾಣ[೨೮೪] ಹಾಗೂ ಟಿಪ್ಪುವಿನ ಅಮೀಲರಾದ ಜಾಫರ್‌ಖಾನ್ ಮತ್ತು ಬೊಮ್ಮಣ್ಣವೊಡೆಯರು ಸಿದ್ಧಲಿಂಗೇಶ್ವರ ದೇವಾಲಯಕ್ಕೆ ಗಂಟೆ ದಾನ[೨೮೫] ಮಾಡಿದ್ದನ್ನು ಗಮನಿಸಿದರೆ ಇವರ ಧಾರ್ಮಿಕ ವೈಶಾಲ್ಯತೆ ಗೋಚರವಾಗುತ್ತದೆ. ಸಾಮಾನ್ಯವಾಗಿ ಯಾವ ಅರಸನಿಗೂ ಯಾವುದೇ ಧರ್ಮ ಎಂಬುದು ಇರುವುದಿಲ್ಲ. ಅವರಿಗೆ ಕ್ಷಾತ್ರ ಧರ್ಮವೇ ಮುಖ್ಯವೆನಿಸುತ್ತದೆ. ತಮ್ಮ ಅಧಿಪತ್ಯಕ್ಕೆ ಯಾರು ತೊಂದರೆ ಎಸೆಗುವವರೆಂದು ಭಾಸವಾಗುತ್ತದೆಯೋ ಅವರನ್ನು ನಿರ್ಮೂಲನೆಗೊಳಿಸಲು ಪ್ರಯತ್ನಿಸುವುದು ಧಾರ್ಮಿಕ ಅಸಹಿಷ್ಣುತೆ ಎನಿಸಿಕೊಳ್ಳುವುದಿಲ್ಲ. ಏಕೆಂದರೆ ಆ ದೃಷ್ಟಿಕೋನದಲ್ಲಿ ಟಿಪ್ಪು ನೋಡಿದ್ದ ಪಕ್ಷದಲ್ಲಿ ವೈದಿಕರಿಂದ ಕೂಡಿದ ಈ ರಾಜ್ಯದ ರಕ್ಷಣೆಗಾಗಿ ತನ್ನ ಇಬ್ಬರು ಮಕ್ಕಳನ್ನು ಒತ್ತೆ ಇಡುವ ಅನಿವಾರ್ಯತೆ ಇರುತ್ತಿರಲಿಲ್ಲ. ಅಲ್ಲದೆ ತುಮಕೂರು ಜಿಲ್ಲೆಯಲ್ಲಿ ಬರುವ ವಿವಿಧ ತರಫ್‌ಗಳಿಗೆ ನಲ್ಲಪ್ಪ, ವೆಂಕಪ್ಪಯ್ಯ, ರಘೋಬಯ್ಯ, ಸುಬ್ಬರಾಯಪ್ಪ ಎಂಬ ವೈದಿಕ ಅಧಿಕಾರಿಗಳನ್ನು ನೇಮಿಸುತ್ತಿರಲಿಲ್ಲ. ಹಾಗಾಗಿ ಟಿಪ್ಪು ಧಾರ್ಮಿಕ ಸಹಿಷ್ಣುತಾ ಭಾವನೆಯಿಂದ ಜೀವಿಸಿದ್ದನೆಂಬ ಅಂಶವನ್ನು ಒಪ್ಪಿಕೊಳ್ಳಬೇಕಾಗುತ್ತದೆ.

೨.೪.೩.೨. ಬ್ರಿಟೀಷರು

ಜಿಲ್ಲೆಯಲ್ಲಿ ಟಿಪ್ಪು ಪತನ ಹೊಂದಿದ ನಂತರ ಕೆಲವು ಕಾಲ ಬ್ರಿಟೀಷರ ನೇರ ಆಳ್ವಿಕೆಯನ್ನು ಕಾಣಬಹುದಾದರೂ, ಮೈಸೂರು ಒಡೆಯರ ಸುಪರ್ದಿಗೆ ಈ ಪ್ರಾಂತ್ಯವೆಲ್ಲ ಒಳಪಟ್ಟ ಬ್ರಿಟೀಷ್ ಸಾರ್ವಭೌಮತ್ವದ ಅಡಿಯಲ್ಲಿ ಈ ಪ್ರಾಂತ್ಯವನ್ನು ಮೈಸೂರು ಒಡೆಯರು ಆಳ್ವಿಕೆ ನಡೆಸಿದರು. ಟಿಪ್ಪುವಿನ ವಿರುದ್ಧ ನೊಂದ ಜಿಲ್ಲೆಯ ಪಾಳೆಯಗಾರರು ಕಾರನ್‌ವಾಲಿಸನ

ಮುಂದಾಳತ್ವದಲ್ಲಿ ಮಾಲೂರಿನ ಬಳಿ ಠಾಣ್ಯ ಹೂಡಿದರೂ ಸಹ ಚೆನ್ನಪ್ಪಗೌಡನನ್ನು ಹೊರತುಪಡಿಸಿ ಮತ್ತಾರಿಗೂ ಅದರಿಂದ ಯಾವ ಪ್ರಯೋಜನವು ದೊರೆಯಲಿಲ್ಲ. ಆತನಿಗೆ ಮಾತ್ರ ಮಿಡಿಗೇಶಿಯ[೨೮೬] ಮೇಲ್ವಿಚಾರಣೆಯನ್ನು ಅಧಿಕಾರನ್ನು ನೀಡಿದರು. ಟಿಪ್ಪುವಿನ ಮರಣದ ನಂತರ ಜಿಲ್ಲೆಯಲ್ಲಿ ಮೈಸೂರು ಒಡೆಯರ ಅಧೀನದಲ್ಲಿ ಕಮೀಷನರ್ ಮತ್ತು ದಿವಾನರು ಹಲವು ಸುಧಾರಣೆಗಳನ್ನು ಕೈಗೊಂಡರು.

ಬ್ರಿಟೀಷರ ಏಳಿಗೆ ಜಿಲ್ಲೆಯಲ್ಲಿ ಪರೋಕ್ಷವಾಗಿ ಕೋಟೆ-ಕೊತ್ತಲಗಳ ಅವಸಾನಕ್ಕೆ ಕಾರಣವಾಯಿತು. ಏಕೆಂದರೆ ಬ್ರಿಟೀಷ್ ಪ್ರಭುತ್ವಕ್ಕೆ ಸ್ಥಳೀಯ ಪಾಳೆಪಟ್ಟುಗಳು ಅಡ್ಡಿಪಡಿಸಬಹುದೆಂದು ಬಹುತೇಕ ಪ್ರಭುತ್ವ ಕೇಂದ್ರಿತ ಕೋಟೆಗಳನ್ನು ಹಾಳುಗೆಡವಿದರು. ಆದರೆ ಗ್ರಾಮಮಟ್ಟದಲ್ಲಿ ಮಾತ್ರ ಇವರ ಅವಧಿಯಲ್ಲಿ ಜಿಲ್ಲೆಯ ಬಹುತೇಕ ಕಡೆ ಕೋಟೆಗಳು ನಿರ್ಮಾಣವಾದದ್ದು ವಿಶೇಷವೆನಿಸುತ್ತದೆ. ರಾಜಕಿಯ ಅಭದ್ರತೆ ಮತ್ತು ಕಳ್ಳಕಾಕರು, ಅಧಿಕಾರಿ ವರ್ಗದವರ ನಿರಂತರ ದಾಳಿಗಳಿಂದ ರಕ್ಷಣೆ ಪಡೆಯಲು ಗ್ರಾಮಗಳ ಸುತ್ತಲೂ ಕಾಪುಗೋಡೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು ಎಂಬ ಅಂಶ ಕ್ಷೇತ್ರ ಅಧ್ಯಯನದ ಸಂದರ್ಭದಲ್ಲಿ ಕಂಡುಬಂದಿದೆ.

೨.೪.೩೩. ಸ್ವಾತಂತ್ರ್ಯ ಸಂಗ್ರಾಮ

ಭಾರತದ ಸ್ವಾತಂತ್ರ್ಯ ಚಳುವಳಿಯಲ್ಲಿ ಜಿಲ್ಲೆಯು ವಹಿಸಿದ ಪಾತ್ರ ಚಿರಸ್ಮರಣೀಯವಾಗಿದೆ. ೧೯೨೧-೨೨ರಲ್ಲಿ ಜಿಲ್ಲೆಯ ಹಲವೆಡೆ ಆರಂಭವಾದ ಸ್ಥಳೀಯ ರಾಷ್ಟ್ರೀಯ ಕಾಂಗ್ರೆಸ್ ಶಾಖೆಗಳು ಜನತೆಯಲ್ಲಿ ರಾಷ್ಟ್ರೀಯ ಜಾಗೃತಿಯನ್ನು ಜಾಗೃತಗೊಳಿಸಿತು. ೧೯೨೭ರಲ್ಲಿ ಗಾಂಧೀಜಿ ತುಮಕೂರು, ಮಧುಗಿರಿ, ಕೊರಟಗೆರೆಗಳಿಗೆ ಭೇಟಿ ನೀಡಿದ್ದು[೨೮೭]ಯುವಕರನ್ನು ಆಕರ್ಷಿಸುವಂತೆ ಮಾಡಿತು. ಆದುದರಿಂದಲೇ ಮೈಸೂರು ಸಂಸ್ಥಾನದಲ್ಲೇ ಮೊದಲ ಬಾರಿಗೆ ಪಾನ ನಿರೋದ ಚಳುವಳಿಗೆ ಚಾಲನೆ ದೊರೆತ ತುಮಕೂರು ಜಿಲ್ಲೆಗೆ ಎಂಬುದು ವಿಶೇಷ. ಸಂದ ಗೌರವವೇ ಸರಿ. ಈ ಚಳುವಳಿಯಲ್ಲಿ ಮಾಲಿಮುರಿಯಪ್ಪ, ತಾಳೆಗೆರೆ ಸುಬ್ರಮಣ್ಯ, ಕೆ.ರಂಗೈಯ್ಯಾಂಗಾರ್ ಮೊದಲಾದವರು ಸೇರಿದಂತೆ ದಿನಕ್ಕೆ ನಾಲ್ವರಂತೆ ೧೨೦ ಜನರು ಭಾಗವಹಿಸಿದ್ದರು.[೨೮೮] ೧೯೨೯ರಲ್ಲಿ ತುಮಕೂರಿನಲ್ಲಿ ಆರಂಭವಾದ ಚರಕ ಸಂಘವು ಮಿಡಿಗೇಶಿ, ಪಾವಗಡ, ಐಡಿಹಳ್ಳಿಗಳಲ್ಲೂ ಚರಕ ಉತ್ಪಾದನಾ ಕೇಂದ್ರಗಳನ್ನು ತೆರೆಯಿತು.[೨೮೯] ಮುಂದೆ ಇವುಗಳನ್ನೇ ಹೋರಾಟದ ಕೇಂದ್ರಗಳನ್ನಾಗಿ ಮಾಡಿಕೊಳ್ಳಲಾಯಿತು. ೧೯೩೨ರಲ್ಲಿ ಕರ ನಿರಾಕರಣೆ ಚಳುವಳಿಯಲ್ಲಿ ಜಿಲ್ಲೆಯಿಂದ ಕೆ.ರಂಗೈಯ್ಯಂಗಾರ್, ಟಿ.ಎಲ್.ಸಂಗಣ್ಣ, ಜಿ,ಆರ್.ಚೆಂಗಾರಾಧ್ಯ[೨೯೦] ಮೊದಲಾದವರು ಭಾಗವಹಿಸಿದ್ದರು. ಈ ಚಳುವಳಿಯಲ್ಲಿ ಬೇಕಾಗುತ್ತಿದ್ದ ಬುಲೆಟಿನ್‌ಗಳನ್ನು ಜಿಲ್ಲೆಯಿಂದಲೇ ಕಳುಹಿಸಿಕೊಡಲಾಗುತ್ತಿತ್ತು. ೧೯೩೭ ಜನವರಿಯಲ್ಲಿ ತುಮಕೂರು ಪಟ್ಟಣದಲ್ಲಿ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸಲು ಮುಂದಾದಾಗ ಸರ್ಕಾರ ಅದನ್ನು

ನಿಷೇಧಿಸಿತು.[೨೯೧] ೧೯೩೮ರಲ್ಲಿ ಶಿವಪುರ ಕಾಂಗ್ರೆಸ್ ಅಧಿವೇಶನದಲ್ಲಿ ಜಿಲ್ಲೆಯಿಂದ ಕೆ.ರಂಗಯ್ಯಂಗಾರ್, ನೀಲಕಂಠರಾವ್, ವಿಠೋಬರಾವ್, ಮೂಡಲಗಿರಿಗೌಡ ಮೊದಲಾದ ೨೦೦ ಜನ[೨೯೨] ಕಾರ್ಯಕರ್ತರು ಭಾಗವಹಿಸಿದ್ದರು. ೧೯೩೯ರಲ್ಲಿ ಅರಣ್ಯ ಸತ್ಯಾಗ್ರಹ ಅಥವಾ ಜಂಗಲ್ ಸತ್ಯಾಗ್ರಹವನ್ನು ಮಾಲಿಮುರಿಯಪ್ಪ, ಎ.ಗುಂಡುರಾವ್, ಸಿದ್ದಲಿಂಗಪ್ಪ, ಸಿದ್ದಪ್ಪ, ಕೆ.ಎಲ್.ನರಸಿಂಹಯ್ಯ, ಮಾರ್ಕಂಡಪ್ಪ[೨೯೩] ಮೊದಲಾದ ಚಳುವಳಿಕಾರರು ಜಿಲ್ಲೆಯಲ್ಲಿ ಪ್ರಚಾರ ಪಡಿಸಿ ಎಲಿಯೂರು, ವಡ್ಡನಹಳ್ಳಿ, ತಾವರೆಕೆರೆ ಮೊದಲಾದೆಡೆ ಈಚಲು ಗಿಡಗಳನ್ನು ಕಡಿಯುವುದರ ಮೂಲಕ ಅದನ್ನು ಕಾರ್ಯರೂಪಕ್ಕೆ ತಂದರು. ಈ ಚಳುವಳಿ ಹೂಡಿದ ಐದು ತಿಂಗಳಲ್ಲೇ ೪೭೦ ಜನ[೨೯೪] ಬಂಧನಕ್ಕೆ ಒಳಗಾದರು. ೧೯೪೨ರ ಕ್ವಿಟ್ ಇಂಡಿಯಾ ಚಳುವಳಿ ಸಂದರ್ಭದಲ್ಲಿ ಜಿಲ್ಲೆಯ ಬಹುತೇಕ ಸ್ಥಳಗಳಲ್ಲಿ ಹರತಾಳ, ಮೆರವಣಿಗೆ, ಸಭೆ ಸಮಾರಂಭ, ಸರ್ಕಾರಿ ಕಛೇರಿಗಳ ಮುಂದೆ ಪಿಕೆಟಿಂಗ್, ಟೆಲಿಫೋನ್ ತಂತಿಗಳನ್ನು ಕತ್ತರಿಸುವುದು, ಅಂಚೆ ಕಛೇರಿಗಳನ್ನು ನಾಶಪಡಿಸುವುದು, ರಸ್ತೆ ತಡೆ, ಟಿಕೇಟ್ ರಹಿತ ಪ್ರಯಾಣ, ಮದ್ಯದ ಅಂಗಡಿ[೨೯೫]ಗಳನ್ನು ನಾಶಪಡಿಸುವಂತಹ ಹಲವು ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಪಾಲ್ಗೊಂಡರು. ಜೊತೆಗೆ ಬ್ರಿಟೀಷರ ವಿರುದ್ಧ 'ಗಂಟುಮೂಟೆ ಕಟ್ಟಿ' ಎಂಬ ಘೋಷಣೆಗಳನ್ನು ಕೂಗುತ್ತಾ ಜನರನ್ನು ಚಳುವಳಿಯಲ್ಲಿ ಭಾಗವಹಿಸುವಂತೆ ಕರೆ ನೀಡಿದರು. ಇದೇ ಸಂದರ್ಭವನ್ನು ಬಳಸಿಕೊಂಡ ಆರ್.ಎಸ್.ಆರಾಧ್ಯ, ತಿಪಟೂರಿನ ಎಲ್.ಸಿದ್ದಪ್ಪ, ಎಚನೂರಿನ ಗಂಗಪ್ಪ ಮೊದಲಾದ ಕ್ರಾಂತಿಕಾರಿಗಳು ತುಮಕೂರು ರೈಲು ನಿಲ್ದಾಣದಲ್ಲಿ ಬಾಂಬನ್ನು ಸ್ಫೋಟಗೊಳಿಸಿದರು. ೧೯೪೭ ಆಗಸ್ಟ್ ೧೫ರಂದು ಬ್ರಿಟೀಷರು ಭಾರತವನ್ನು ಬಿಟ್ಟುಹೋದರೂ ಸಹ ಮೈಸೂರು ಸಂಸ್ಥಾನದಲ್ಲಿ ಪ್ರಜಾತಂತ್ರ ಸರ್ಕಾರ ರೂಪುಗೊಂಡಿರಲಿಲ್ಲ. ಹಾಗಾಗಿ ಮೈಸೂರು ಸಂಸ್ಥಾನದ ವಿರುದ್ಧ ತುಮಕೂರು, ಗುಬ್ಬಿ, ಕುಣಿಗಲ್, ಮಧುಗಿರಿ, ಚಿಕ್ಕನಾಯಕನಹಳ್ಳಿ, ಕೊರಟಗೆರೆ, ತಿಪಟೂರುಗಳಲ್ಲಿ ಮೈಸೂರು ಚಲೋ ಚಳುವಳಿಗೆ ಪೂರ್ಣ ಬೆಂಬಲ ದೊರೆಯಿತು. ಈ ಕಾರಣಕ್ಕಾಗಿಯೇ ೧೯೪೭ ಸೆಪ್ಟಂಬರ್ ೧೪ರಂದು ಗೊರೂರು ರಾಮಸ್ವಾಮಿ ಐಯ್ಯಂಗಾರ್ ಅವರ ಪುತ್ರ ರಾಮಚಂದ್ರ ಐಯ್ಯಂಗಾರ್, ಮಂಡಿಪೇಟೆಯ ಗಂಗಪ್ಪ, ಮಧುಗಿರಿಯ ನಂಜುಂಡಯ್ಯ, ಸಂತೇಪೇಟೆಯ ನಂಜುಂಡಪ್ಪ ಅವರ ಮೇಲೆ ಗೋಲಿಬಾರ್ ನಡೆಸಿ ಹತ್ಯೆಗೈದರು. ಈ ಘಟನೆಯಿಂದ ಜಿಲ್ಲೆಯಲ್ಲಿ ಹೋರಾಟದ ಕಾವು ಮತ್ತಷ್ಟು ಹೆಚ್ಚಿತು. ಕೊನೆಗೆ ಚಳುವಳಿಕಾರರ ಹೋರಾಟಕ್ಕೆ ಮಣಿದ ಸರ್ಕಾರ ರಾಜ ಪ್ರಭುತ್ವವನ್ನು ೧೯೪೭ ಅಕ್ಟೋಬರ್ ೨೪ರಂದು ಕೊನೆಗೊಳಿಸಿ ಕೆ.ಸಿ.ರೆಡ್ಡಿಯನ್ನು ಪ್ರಜಾತಂತ್ರ ಸರ್ಕಾರದ ಮೊದಲ ಮುಖ್ಯಮಂತ್ರಿಯನ್ನಾಗಿ ಮಾಡಿದರು.[೩೯೬]

ಸಾಮಾನ್ಯವಾಗಿ ಜಿಲ್ಲೆಯ ಸ್ವಾತಂತ್ರ್ಯ ಹೋರಾಟದ ಹಾದಿಯನ್ನು ಗಮನಿಸಿದರೆ ಅದು ಬ್ರಿಟೀಷರ ವಿರುದ್ಧವೋ ಇಲ್ಲವೆ ಮೈಸೂರು ಪ್ರಭುತ್ವದ ವಿರುದ್ಧವೋ ಎಂಬ ಸಂದೇಹ

ಏರ್ಪಡುತ್ತದೆ. ಏಕೆಂದರೆ ಈ ಪ್ರದೇಶವನ್ನು ಬ್ರಿಟೀಷ್ ಸಾರ್ವಭೌಮತ್ವದ ಅಡಿಯಲ್ಲಿ ಮೈಸೂರು ಸಂಸ್ಥಾನ ಅಧಿಕಾರ ಚಲಾಯಿಸುತ್ತಿತ್ತೇ ಹೊರತು ಬ್ರಿಟೀಷ್ ಪ್ರಭುತ್ವದ ನೇರ ಆಳ್ವಿಕೆ ಇರಲಿಲ್ಲ. ಹಾಗಾಗಿ ಸಂಸ್ಥಾನದಲ್ಲಿ ಯಾವುದೇ ಅಹಿತಕರ ಘಟನೆ ಸಂಭವಿಸಿದರೂ ಅದಕ್ಕೆ ಸಂಸ್ಥಾನವೇ ಹೊಣೆಯಾಗಿರುತ್ತಿತ್ತು. ಹಾಗಾಗಿಯೇ ಇಲ್ಲಿ ಬ್ರಿಟೀಷರ ವಿರುದ್ಧ ಹೋರಾಟ ಎಲ್ಲಿ ನಡೆಯಿತು ಎಂಬ ಸಂದೇಹ ಏರ್ಪಡುತ್ತದೆ. ೧೯೪೭ ಆಗಸ್ಟ್ ೧೫ರ ನಂತರವೂ ಸಂಸ್ಥಾನದ ವಿರುದ್ಧ ಮೈಸೂರು ಭಾಗದಲ್ಲಿ ನಡೆದ ಮೈಸೂರು ಚಲೋ ಚಳುವಳಿಯು ಜಿಲ್ಲೆಯಲ್ಲೂ ನಡೆದಿದ್ದನ್ನು ಗಮನಿಸಿದರೆ ನೈಜವಾಗಿ ಮೈಸೂರು ಸಂಸ್ಥಾನದ ವಿರುದ್ಧವೇ ಹೋರಾಟ ನಡೆದಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ. ಏಕೆಂದರೆ ಸ್ವಾತಂತ್ರ್ಯ ನಂತರವೂ ಜಿಲ್ಲೆಯ ಎಮ್ಮೆತಿಮ್ಮನಹಳ್ಳಿ, ಜಟ್ಟಿ ಅಗ್ರಹಾರ, ಹಳೆಬಿಜ್ಜನಬೆಳ್ಳ, ಹೊಸಬಿಜ್ಜಳಬೆಳ್ಳ ಮೊದಲಾದ ಹಲವು ಗ್ರಾಮಗಳ ಸಾಮಾನ್ಯ ಜನರು ತಮ್ಮ ರಕ್ಷಣೆಗಾಗಿ ಗ್ರಾಮಗಳ ಸುತ್ತಲೂ ಕಾಪುಗೋಡೆಗಳನ್ನು ನಿರ್ಮಿಸಿಕೊಂಡು ಸರತಿಯಂತೆ ಪ್ರತಿನಿತ್ಯವೂ ಪಹರೆ ಕಾಯುತ್ತಿದುದ್ದಾಗಿ ಇಂದಿಗೂ ಅಲ್ಲಿನ ಹಿರಿಯ ತಲೆಮಾರಿನವರು ಹೇಳುವುದನ್ನು ಗಮನಿಸಿದರೆ ಮೈಸೂರು ಸಂಸ್ಥಾನದ ಅಧಿಕಾರಿವರ್ಗ ಸಾಮಾನ್ಯ ಜನರ ಮೇಲೆ ನಡೆಸುತ್ತಿದ್ದ ದಮನ ರೀತಿಯ ಕಾರ್ಯ ಚಟುವಟಿಕೆಗಳನ್ನು ನೆನಪಿಗೆ ತರುತ್ತವೆ.

ಕೊನೆ ಟಿಪ್ಪಣಿಗಳು

೧. ಇರ್ಫಾನ್ ಹಬೀಬ್(ಮೂಲ), ಪ್ರದೀಪ ಬೆಳಗಲ್(ಅನು.)., ೨೦೦೮, ಪೂರ್ವೇತಿಹಾಸ, ಪುಟ.೧೭.

೨. ಶ್ರೀನಿವಾಸ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಪುಟ.೧.

೩. ರವೀಶ ಜಿ.ಎನ್., ೨೦೧೦, ನಿಡುಗಲ್ಲು ಪರಿಸರದ ರಕ್ಷಣಾ ವಾಸ್ತುಶಿಲ್ಪ, ಪುಟ.೧೧.

೪. ಅನಂತರಾಮರಾವ್ ಕೆ., ೨೦೦೬, ಸುವರ್ಣ ಕರ್ನಾಟಕ ದರ್ಶನ, ಪುಟ.೨೪.

೫. EC.Vol.XVI, ಶಾಸನ ಸಂಖ್ಯೆ-೧೧೭, ಮಿಡಿಗೇಶಿ, ಪುಟ.೫೦.

೬. ಅನಂತರಾಮರಾವ್ ಕೆ., ೨೦೦೬, ಪೂರ್ವೋಕ್ತ, ಪುಟ.೧೮೯.

೭. ಕವಿತಾಕೃಷ್ಣ, ೨೦೦೨., ಜಯಮಂಗಲಿ, ಪುಟ.೩೯

೮. ಗೋಪಾಲ್ ಆರ್., ೨೦೦೯, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ.೪೯೨-೪೯೪

೯. ಶೇಷಗಿರಿರಾವ್ ಎಲ್.ಎಸ್., ೧೯೯೪, ಕಿರಿಯರ ಕರ್ನಾಟಕ, ಪುಟ.೨೪೬

೧೦. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪುಟ.೪೯೬.

೧೧. ರಾಜಶೇಖರಪ್ಪ ಹೆಚ್.ಇ., ೨೦೧೨, ತುಮಕೂರು ಜಿಲ್ಲೆಯ ಅಂಕಿ-ಅಂಶಗಳ ನೋಟ, ಪುಟ.೪೩.

೧೨. ಬಾಸ್ಕರಪ್ಪ, ತುಮಕೂರು ಜಿಲ್ಲಾ ದರ್ಶನ, ಪುಟ.೧೪-೧೫.

೧೩. ಕವಿತಾಕೃಷ್ಣ, ೨೦೦೨, ಪೂರ್ವೋಕ್ತ, ಪುಟ.೪.

೧೪. ಅಶ್ವತಪ್ಪ ಕೆ.ಎನ್., ೨೦೧೪, ಸಮಗ್ರ ಭಾರತದ ಇತಿಹಾಸ, ಪುಟ.೧೧೩೬.

೧೫. ಕವಿತಾಕೃಷ್ಣ, ೨೦೦೨, ಪೂರ್ವೋಕ್ತ, ಪುಟ.೧.

೧೬. ಭಾಸ್ಕರಪ್ಪ, ಪೂರ್ವೋಕ್ತ, ಪುಟ.೧೭-೨೨.

೧೭. ನರಸಿಂಹಮೂರ್ತಿ ಎ.ವಿ., ೨೦೧೦, ಕರ್ನಾಟಕ ಪುರಾತತ್ವ ಕೆಲವು ಅಧ್ಯಯನಗಳು, ಪುಟ.೨೫-೨೬.

೧೮. ಕವಿತಾಕೃಷ್ಣ, ೨೦೦೨, ಪೂರ್ವೋಕ್ತ, ಪುಟ.೨.

೧೯. ಶೇಷಗಿರಿರಾವ್ ಎಲ್.ಎಸ್., ೧೯೯೪, ಪೂರ್ವೋಕ್ತ, ಪುಟ.೨೪೬.

೨೦. ಕವಿತಾಕೃಷ್ಣ, ೨೦೦೨, ಪೂರ್ವೋಕ್ತ, ಪುಟ.೩.

೨೧. ಭಾಸ್ಕರಪ್ಪ, ಪೂರ್ವೋಕ್ತ, ಪುಟ.೩-೪.

೨೨. ರವೀಶ ಜಿ.ಎನ್., ಪೂರ್ವೋಕ್ತ, ಪುಟ.೧೩.

೨೩. ಬರ್ನಾಲ್ ಜೆ.ಡಿ(ಮೂಲ), ಗಾಯಿತ್ರಿಮೂರ್ತಿ(ಅನು)., ೨೦೧೨, ಇತಿಹಾಸದಲ್ಲಿ ವಿಜ್ಞಾನ ಸಂಪುಟ-೧, ಪುಟ.೪೫.

೨೪. ಷೇಕ್ ಅಲಿ ಬಿ., ೧೯೯೭, ಕರ್ನಾಟಕ ಚರಿತ್ರೆ ಸಂಪುಟ-೧, ಪುಟ.೧೦೭.

೨೫. ಶಿವತಾರಕ್ ಕೆ.ಬಿ(ಲೇಖಕ)., ೧೯೯೬, ಇತಿಹಾಸ ದರ್ಶನ ಸಂಪುಟ-೧೧, ಪುಟ.೩-೪.

೨೬. ನಂಜುಂಡಸ್ವಾಮಿ ಬಿ., ೨೦೦೨, ಕಲ್ಪಸಿರಿ, ಪುಟ.೪೪-೪೫.

೨೭. ಸುಂದರ ಅ., ಕರ್ನಾಟಕದ ಪ್ರಾಗಿತಿಹಾಸ, ಪುಟ.೪೧-೪೨.

೨೮. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪುಟ.೧೨-೧೩.

೨೯ ಶಿವತಾರಕ್ ಕೆ.ಬಿ,(ಲೇಖಕ)., ೧೯೯೬, ಪೂರ್ವೋಕ್ತ, ಪುಟ.೫.

೩೦. ಸುಂದರ ಅ., ಪೂರ್ವೋಕ್ತ, ಪುಟ.೪೩-೪೬.

೩೧. ನಂಜುಂಡಸ್ವಾಮಿ ಬಿ., ೨೦೦೨, ಪೂರ್ವೋಕ್ತ, ಪುಟ.೪೮.

೩೨. ಶಿವತಾರಕ್ ಕೆ.ಬಿ,(ಲೇಖಕ)., ೧೯೯೬, ಪೂರ್ವೋಕ್ತ, ಪುಟ.೭.

೩೩. ಸುಂದರ ಅ., ಪೂರ್ವೋಕ್ತ, ಪುಟ.೪೯-೫೧.

೩೪. ನಂಜುಂಡಸ್ವಾಮಿ ಬಿ., ೨೦೦೨, ಪೂರ್ವೋಕ್ತ, ಪುಟ.೫೦-೫೧.

೩೫. ಶಿವಣ್ಣ ಡಿ.ಕೆ., ಮಾನವಶಾಸ್ತ್ರ, ಪುಟ.೨೧-೨೨.

೩೬. ಸುಂದರ ಅ., ಪೂರ್ವೋಕ್ತ, ಪುಟ.೫೬-೬೮.

೩೭. ಷೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಪುಟ.೧೫೦.

೩೮. ಶಿವತಾರಕ್ ಕೆ.ಬಿ,(ಲೇಖಕ)., ೨೦೦೧, ಪೂರ್ವೋಕ್ತ, ಪುಟ.೧೮-೧೯.

೩೯. ಸುಂದರ ಅ., ಪೂರ್ವೋಕ್ತ, ಪುಟ.೭೧-೯೫.

೪೦. ನಂಜುಂಡಸ್ವಾಮಿ ಬಿ., ಪೂರ್ವೋಕ್ತ, ಪುಟ.೫೪.

೪೧. ನಾದರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ಪಿ(ಸಂ), ೨೦೦೩, ಇತಿಹಾಸ ದರ್ಶನ, ಸಂಪುಟ-೧೮, ಪುಟ.೫-೬.

೪೨. ಶಿವತಾರಕ್ ಕೆ.ಬಿ., ೨೦೦೧, ಪೂರ್ವೋಕ್ತ, ಪುಟ.೨೧.

೪೩. ಕೊಸಾಂಬಿ ಡಿ.ಡಿ., ೨೦೧೧, ಪ್ರಾಚೀನ ಭಾರತದ ಸಂಸ್ಕೃತಿ ಮತ್ತು ನಾಗರಿಕತೆ ಚಾರಿತ್ರಿಕ ರೂಪುರೇಷೆ, ಪುಟ.೫೪.

೪೪. ಷೇಕ್ ಅಲಿ ಬಿ., ೧೯೯೭, ಪೂರ್ವೋಕ್ತ, ಪುಟ.೨೪೪.

೪೫. ನಂಜುಂಡಸ್ವಾಮಿ ಬಿ., ಪೂರ್ವೋಕ್ತ, ಪುಟ.೧೨೭.

೪೬. ಚನ್ನಬಸಪ್ಪಗೌಡ., ೧೯೭೭., ಶಾಲಿವಾಹನ ಚರಿತ್ರೆ, ಪುಟ.೧-೪೩.

೪೭. EC.Vol. xvi, 1958., Inscription No.119, p-511.

೪೮. ಲಕ್ಷ್ಮಣ್ ತೆಲಗಾವಿ, ೨೦೦೯, ಮೌರ್ಯ ಶಾತವಾಹನ ಯುಗ, ಪುಟ.೮೫.

೪೯. ದಯಾನಂದ ಕೆ.ಎಸ್., ಕರ್ನಾಟಕದ ಪರಂಪರೆ ಸಂಪುಟ-೧, ಪುಟ.೧೨೪.

೫೦. ಅಶ್ವತ್ಥಪ್ಪ ಕೆ.ಎನ್., ೨೦೧೫, ಸಮಗ್ರ ಕರ್ನಾಟಕದ ಇತಿಹಾಸ, ಪುಟ.೪೮.

೫೧. ಸಾಲೆತೊರೆ ಬಿ.ಎ., ದೇಸಾಯಿ ಪಾಂಡುರಂಗರಾಯರು, ೨೦೦೫, ಕನ್ನಡ ನಾಡಿನ ಚರಿತ್ರೆ, ಭಾಗ-೧, ಪುಟ.೧೬.

೫೨. ಲಕ್ಷ್ಮಣ್ ತೆಲಗಾವಿ, ೨೦೦೯, ಪೂರ್ವೋಕ್ತ, ಪುಟ.೧೭-೧೯.

೫೩. EC.Vol. xvi, 1958., ಪೂರ್ವೋಕ್ತ, Inscription No.78, p-77.

೫೪. EC.Vol. xxiv, No-19, p-26, 27.

೫೫. ಲಕ್ಷ್ಮಿನಾರಾಯಣರಾಯ, ಪಂಚಮುಖಿ, ೨೦೦೮, ಕರ್ನಾಟಕದ ಅರಸುಮನೆತನಗಳು, ಪುಟ.೨೭, ೨೮.

೫೬. ನಾಯಕ ಹಾ.ಮಾ., (ಪ್ರ.ಸಂ.), ೨೦೦೫, ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಪರಿಷ್ಕೃತ ಸಂಪುಟ-೧, ಪುಟ.೨೦೭-೨೦೮.

೫೭. ಸತೀಶ ಎಂ., ೨೦೧೦, ಕನ್ನಡ ಕೈಫಿಯತ್ತುಗಳಲ್ಲಿ ಸ್ಥಳೀಯ ಸಂಸ್ಕೃತಿ, ಪುಟ.೪೪.

೫೮. EC.Vol. xvi, 1958, ಪೂರ್ವೋಕ್ತ, ದಂಡಿನ ಶಿವರ, ಶಾಸನ ಸಂಖ್ಯೆ-೭೫, ಪುಟ.೩೯.

೫೯. ಅದೇ ಕೆರೆಗೋಡಿ ರಂಗಾಪುರ ಶಾಸನ ಸಂಖ್ಯೆ. ೧೪೦, ಪುಟ.೬೭.

೬೦. ಲಕ್ಷ್ಮಿನಾರಾಯಣ., ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೧೧.

೬೧. EC.Vol. xvi, 1958, ಪೂರ್ವೋಕ್ತ, ಮೆಳೆಕೋಟೆ, ಶಾ.ಸಂ.೭೮, ಪುಟ.೭೭.

೬೨. EC.Vol. sk, 52.

೬೩. ಗೋಪಾಲ್ ಆರ್., ೨೦೦೯, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪುಟ.೩೧.

೬೪. EC.Vol. xxiv, ಹೆಬ್ಬೂರು, ಶಾಸನ ಸಂಖ್ಯೆ ೧೧೭, ಪುಟ.೧೬೯.

೬೫. EC.Vol. ix, ದೊಡ್ಡಬಳ್ಳಾಪುರ, ಶಾಸನ ಸಂಖ್ಯೆ, ೬೭ ಮತ್ತು ೬೮.

೬೬. ನಾಯಕ ಹಾ.ಮಾ.(ಪ್ರ.ಸಂ)., ೨೦೦೫, ಕನ್ನಡ ವಿಷಯ ವಿಶ್ವಕೋಶ, ಸಂಪುಟ.೧, ಪುಟ.೭೧೪.

೬೭. EC.Vol. viii, ಶಾಸನ ಸಂಖ್ಯೆ ೩೫.

೬೮. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪುಟ.೩೧-೩೨.

೬೯. MAR, ೧೯೧೬, ಕಡಗತ್ತೂರು ಶಾಸನ.

೭೦. EC.Vol. xxiv, ೨೦೦೯, ಹಿರೀಗುಂಡಕಲ್ ಶಾಸನ ಸಂಖ್ಯೆ ೧೦೫, ಪುಟ.೧೬೫.

೭೧. EC.Vol. xxiv, ೨೦೦೯, ಹೆಬ್ಬೂರು ಶಾಸನ ಸಂಖ್ಯೆ ೧೧೭ ಪುಟ.೧೭೧.

೭೨. EC.Vol. xxiv, ೨೦೦೯, ಹಿರೀಗುಂಡಕಲ್ ಶಾಸನ ಸಂಖ್ಯೆ, ೯೫ರಿಂದ ೧೧೫, ಪುಟ.೧೬೦-೧೬೮.

೭೩. EC.Vol. xvi, ೧೯೫೮, ಹಿರೀಗುಂಡಕಲ್ ಶಾಸನ ಸಂಖ್ಯೆ ೯೪, ಪುಟ.೮೧.

೭೪. EC.Vol. xvi, ೧೯೫೮, ಹಿರೀಗುಂಡಕಲ್ ಶಾಸನ ಸಂಖ್ಯೆ ೯೯, ಪುಟ.೮೨.

೭೫. ನಂಜುಂಡಸ್ವಾಮಿ ಎ.ಎಸ್., ೨೦೦೯, ಕದಂಬ-ಗಂಗರ ಇತಿಹಾಸ, ಪುಟ.೮೦.

೭೬. EC.Vol. xvi, ೧೯೫೮, ಹಿರೀಗುಂಡಕಲ್ ಶಾಸನ ಸಂಖ್ಯೆ ೮೬, ಪುಟ.೮೦.

೭೭. EC.Vol. xvi, ೧೯೫೮, ಕೆರೆಗೋಡು ರಂಗಾಪುರ ಶಾಸನ ಸಂಖ್ಯೆ ೧೪೦, ಪುಟ.೬೯.
೭೮. ಎಂ.ಎ.ಆರ್. ೧೯೧೧.
೭೯. ಲಕ್ಷ್ಮಿನಾರಾಯಣಸ್ವಾಮಿ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೫೫.
೮೦. EC.Vol. xvi, ೧೯೫೮, ಕೆರೆಗೋಡು ರಂಗಾಪುರ ಶಾಸನ ಸಂಖ್ಯೆ೧೪೦, ಪುಟ.೬೯.
೮೧. ಲಕ್ಷ್ಮಿನಾರಾಯಣರಾಯ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೬೫.
೮೨. EC.Vol. xvi, ಬುರಗನಹಳ್ಳಿ ಶಾಸನ ಸಂಖ್ಯೆ೧೩೩, ಪುಟ.೫೬
೮೩. ನಂಜುಂಡಸ್ವಾಮಿ ಎ.ಎಸ್., ೨೦೦೯, ಪೂರ್ವೋಕ್ತ, ಪುಟ.೯೮.
೮೪. EC.Vol. xvi, ೧೯೫೮, ಪ್ರಭುವನಹಳ್ಳಿ ಶಾಸನ ಸಂಖ್ಯೆ೬೪, ಪುಟ.೩೧.
೮೫. EC.Vol. xvi, ೧೯೫೮, ದೊಡ್ಡಾಘಟ್ಟ, ಶಾಸನ ಸಂಖ್ಯೆ ೧೫೫, ಪುಟ.೭೨.
೮೬. EC.Vol. xvi, ೧೯೫೮, ತಿಪಟೂರು ಶಾಸನ ಸಂಖ್ಯೆ೧೦೩.
೮೭. ನಂಜುಂಡಸ್ವಾಮಿ ಎ.ಎಸ್., ೨೦೦೯, ಪೂರ್ವೋಕ್ತ, ಪುಟ.೧೦೫.
೮೮. EC.Vol. ix, Kolar District srinivasapura esh, 1999, Edited by Vasudevan C.S. ಶಾಸನ ಸಂಖ್ಯೆ ೬೬ ಮತ್ತು ೨೪೬, ಪುಟ.೬೪ ಮತ್ತು ೬೯.
೮೯. ದಯಾನಂದ ಕೆ.ಎಸ್., ೨೦೧೪, ಪೂರ್ವೋಕ್ತ, ಪುಟ.೧೬೦.
೯೦. EC.Vol. xxvi, ೨೦೦೯, ಹಿರೇಗುಂಡಗಲ್ ಶಾಸನ ಸಂಖ್ಯೆ ೧೦೫, ಪುಟ.೧೬೫.
೯೧. Kannada Inscriptions of Andhrapradesha, 1999, Edited by Vasudevan C.S. ಶಾಸನ ಸಂಖ್ಯೆ ೬೬ ಮತ್ತು ೨೪೬ ಪುಟ.೬೪ ಮತ್ತು ೬೯.
೯೨. ಲಕ್ಷ್ಮಿನಾರಾಯಣರಾಯ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೩೧, ೧೩೨.
೯೩. ರವೀಶ ಜಿ.ಎನ್., ೨೦೧೦, ಪೂರ್ವೋಕ್ತ, ಪುಟ.೧೭.
೯೪. ಕವಿತಾಕೃಷ್ಣ(ಪ್ರಸಂ.)., ೨೦೦೨, ಪೂರ್ವೋಕ್ತ, ಪುಟ.೧೯.
೯೫. ನಂಜುಂಡಸ್ವಾಮಿ ಎ.ಎಸ್., ೨೦೦೯, ಪೂರ್ವೋಕ್ತ, ಪುಟ.೮೫.
೯೬. ಕವಿತಾಕೃಷ್ಣ(ಪ್ರಸಂ.), ೨೦೦೨, ಪೂರ್ವೋಕ್ತ, ಪುಟ.೧೯.
೯೭. ಬಸವರಾಜ ಕೆ.ಆರ್., ೨೦೦೫, ನೊಳಂಬ ಇತಿಹಾಸ ದರ್ಶನ, ಪುಟ.೩೩.
೯೮. ನಂಜುಂಡಸ್ವಾಮಿ ಎ.ಎಸ್, ೨೦೦೯, ಪೂರ್ವೋಕ್ತ, ಪುಟ.೯೩, ೯೭, ೯೮.
೯೯. EC.Vol. xxvi, ೨೦೧೪, ಹಿರೀಗುಂಡಗಲ್ ಶಾಸನ ಸಂಖ್ಯೆ ೯೫, ಪುಟ.೧೬೦.
೧೦೦. EC.Vol. xi, ಚಳ್ಳಕೆರೆ ದೊಡ್ಡ ಉಳವ ೩೫, ಶಾಸನ ಸಂಖ್ಯೆ ೩೩–೩೪.
೧೦೧. EC.Vol. xxvi, ೨೦೧೪, ಕಡಬ, ಶಾಸನ ಸಂಖ್ಯೆ ೧೬, ಪುಟ.೨೭೨.
೧೦೨. ಲಕ್ಷ್ಮಿನಾರಾಯಣರಾಯ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೫೦.
೧೦೩. ಪಂಚಮುಖಿ, ೨೦೦೮, ಕರ್ನಾಟಕದ ಇತಿಹಾಸ ಸಂಪುಟ–೧, ಪುಟ.೨೫೮.
೧೦೪. Ep.Ind. vol.III, p.105.
೧೦೫. EC.Vol. xxvi, ೨೦೧೪, ಕಡಬ, ಶಾಸನ ಸಂಖ್ಯೆ ೧೬, ಪುಟ.೨೭೪.
೧೦೬. Ep.Ind. vol.vi, ಕೆನ್ನೂರು ಶಿಲಾಶಾಸನ, ಶಾಸನ ಸಂಖ್ಯೆ೫೦.
೧೦೭. ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೨೭೨–೨೭೩.
೧೦೮. ಅದೇ, ೨೦೦೮, ಪುಟ.೨೦೨.

೧೦೯. EC.Vol. xxvi, ಚಿಕ್ಕಸಾರಂಗಿ, ಶಾಸನ ಸಂಖ್ಯೆ ೨೬, ಪುಟ.೪೩.

೧೧೦. EC.Vol. xii, ಹೇಮಾವತಿ, ಶಾಸನ ಸಂಖ್ಯೆ ೨೮, ಪುಟ.೨೬೮.

೧೧೧. ಬಸವರಾಜು ಕೆ.ಆರ್., ೧೯೭೬, ನೊಳಂಬ ಇತಿಹಾಸ ದರ್ಶನ, ಪುಟ.೨೧.

೧೧೨. EC.Vol. xii, ಪೂರ್ವೋಕ್ತ, ಶಾಸನ ಸಂಖ್ಯೆ ೨೮, ಪುಟ.೨೬೮.

೧೧೩. ವಸು ಎಂ.ವಿ., ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪುಟ.೭.

೧೧೪. ಜಯಮ್ಮ, ಕರಿಯಣ್ಣ ಎಚ್., ೨೦೦೮, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಪುಟ.೨೦–೨.

೧೧೫. ಲಕ್ಷ್ಮಿನಾರಾಯಣ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೩೬.

೧೧೬. ಜಯಮ್ಮ, ಕರಿಯಣ್ಣ ಎಚ್., ೨೦೦೮, ಪೂರ್ವೋಕ್ತ, ಪುಟ.೧೩೬

೧೧೭. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೨೪–೨೬

೧೧೮. ಲಕ್ಷ್ಮಿನಾರಾಯಣ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೧೯೯.

೧೧೯. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೨೭–೩೧.

೧೨೦. ಜಯಮ್ಮ, ಕರಿಯಣ್ಣ ಎಚ್., ೨೦೦೮, ಪೂರ್ವೋಕ್ತ, ಪುಟ.೨೯–೩೦.

೧೨೧. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೩೨.

೧೨೨. ಲಕ್ಷ್ಮಿನಾರಾಯಣ, ಪಂಚಮುಖಿ, ೨೦೦೮, ಪೂರ್ವೋಕ್ತ, ಪುಟ.೨೦೧

೧೨೩. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೩೪.

೧೨೪. EC.Vol. xii, ಶಾಸನ ಸಂಖ್ಯೆ, ೨೮, ಪುಟ.೨೬೮.

೧೨೫. ಜಯಮ್ಮ, ಕರಿಯಣ್ಣ ಎಚ್., ೨೦೦೮, ಪೂರ್ವೋಕ್ತ, ಪುಟ.೩೮–೪೦.

೧೨೬. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೭.

೧೨೭. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೫೧.

೧೨೮. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪುಟ.೧೧೨.

೧೨೯. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೩೯.

೧೩೦. EC.Vol. xxvi, ಕೊತ್ತಗೆರೆ ಶಾಸನ ಸಂಖ್ಯೆ.೨೭, ಪುಟ.೨೦೪.

೧೩೧. ನಂಜುಂಡಸ್ವಾಮಿ ಬಿ., ೨೦೦೨, ಕಲ್ಪಸಿರಿ, ಪುಟ.೧೦೨.

೧೩೨. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪುಟ.೧೧೨.

೧೩೩. EC.Vol. xii, ಮದ್ದಗಿರಿ, ಶಾಸನ ಸಂಖ್ಯೆ ೭೬.

೧೩೪. ಬಸವರಾಜು ಕೆ.ಆರ್., ೧೯೭೬, ಪೂರ್ವೋಕ್ತ, ಪುಟ.೪೮.

೧೩೫. ಗಂಗಾನಾಯಕ್ ಕೆ.ಎನ್(ಪ್ರ.ಸಂ), ನಾಗಯ್ಯ ಜೆ.ಎಂ(ಸಂ), ೨೦೧೧, ಕಲ್ಯಾಣ ಚಾಳುಕ್ಯರ ಶಾಸನಗಳು, ಪುಟ.೭೩.

೧೩೬. ಅದೇ, ಹೇಮಾವತಿ, ಶಾ.ಸಂ.೧೨೭, ಪುಟ.೩೭೫.

೧೩೭. ಅದೇ, ಬರಗೂರು, ಶಾಸನ ಸಂಖ್ಯೆ.೧೨೯, ಪುಟ.೩೭೭

೧೩೮. EC.Vol.xii, ಬೆಳಗೆರೆ, ಶಾಸನ ಸಂಖ್ಯೆ.೧೦೪, ಪುಟ.೧೭೩.

೧೩೯. EC.Vol.xvi, ೧೯೫೮, ಸೂಳೆಕೆರೆ, ಶಾಸನ ಸಂಖ್ಯೆ.೧೧೩, ಪುಟ.೭೩.

೧೪೦. EC.Vol.xxiv, ೨೦೧೪, ವೋಟುಕೆರೆ, ಶಾಸನ ಸಂಖ್ಯೆ.೭೯, ಪುಟ.೪೮೧.

೧೪೧. EC.Vol.xii, ಸಿರಾ, ಶಾಸನ ಸಂಖ್ಯೆ.೭, ಪುಟ.೧೫೦

೧೪೨. EC.Vol.xxiv, ೨೦೧೪, ತಂಡಗ, ಶಾಸನ ಸಂಖ್ಯೆ.೩೨, ಪುಟ.೪೧೦-೪೧೧.
೧೪೩. ರಾಜೇಂದ್ರಗೌಡ(ಪ್ರ.ಸಂ)., ೨೦೦೭, ಕನ್ನಡ ವಿಶ್ವಕೋಶ ಕರ್ನಾಟಕ, ಸಂ.೨, ಪು.೧೬೧.
೧೪೪. EC.Vol.xii, ಶ್ರವಣಗುಡಿ, ಶಾಸನ ಸಂ.೯೨, ಪು.೩೩೮.
೧೪೫. EC.Vol.xii, ಶ್ರವಣಗುಡಿ, ಶಾಸನ ಸಂಖ್ಯೆ.೯೩, ಪುಟ.೩೩೯.
೧೪೬. EC.Vol.xii, ಅದೇ, ಶಾಸನ ಸಂಖ್ಯೆ.೯೪, ೯೫, ೯೯, ಪುಟ.೩೩೯-೩೪೦.
೧೪೭. EC.Vol.xii, ಅದೇ, ಶಾಸನ ಸಂಖ್ಯೆ ೯೩, ಪುಟ.೩೩೯.
೧೪೮. EC.Vol.xii, ಅದೇ, ಶಾಸನ ಸಂಖ್ಯೆ.೯೭, ಪುಟ.೩೩೯.
೧೪೯. ಲಕ್ಷ್ಮಿನಾರಾಯಣರಾಯ, ಪಂಚಮುಖಿ, ೨೦೦೮, ಪುಟ.೧೯೪, ೧೯೯.
೧೫೦. ಪುಷ್ಪ, ೧೯೮೫, ನಿಡುಗಲ್ ವೈಭವ, ಪುಟ.೯೭.
೧೫೧. EC.Vol.xii, ಸಿರಾ ಶಾಸನ ಸಂಖ್ಯೆ.೩೭, ಪುಟ.೨೭೪.
೧೫೨. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ ೫೦, ಪುಟ.೩೭೧.
೧೫೩. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೧೭.
೧೫೪. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ.೫೦, ಪುಟ.೩೭೧.
೧೫೫. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ.೫೩, ಪುಟ.೩೭೫.
೧೫೬. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ ೫೦, ಪುಟ.೩೭೧.
೧೫೭. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ ೪೩, ಪುಟ.೩೬೬.
೧೫೮. EC.Vol.x, ಮನಕತ್ತೂರು ಶಾಸನ ಸಂಖ್ಯೆ.೫೭, ಪುಟ.೮೨.
೧೫೯. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ.೪೩, ಪುಟ.೩೬೭.
೧೬೦. EC.Vol.xii, ಅರಸೀಕೆರೆ ಶಾಸನ ಸಂಖ್ಯೆ.೩೫, ಪುಟ.೩೬೧.
೧೬೧. EC.Vol.xii, ಅದೇ.೩೬೧
೧೬೨. EC.Vol.xii, ಬ್ರಹ್ಮಗಿರಿ ಶಾಸನ ಸಂಖ್ಯೆ.೨೦, ಪುಟ.೨೫೧.
೧೬೩. EC.Vol.xii, ಹೆರಗು ಶಾಸನ ಸಂಖ್ಯೆ.೧೪೫, ಪುಟ.೩೭೧.
೧೬೪ EC.Vol.xii, ಬ್ರಹ್ಮಗಿರಿರೊಪ್ಪ ಶಾಸನ ಸಂಖ್ಯೆ.೨೪, ಪುಟ.೨೭೪.
೧೬೫. EC.Vol.xii, ಅಮರಾಪುರ ಶಾಸನ ಸಂಖ್ಯೆ ೩೪, ಪುಟ.೨೭೨.
೧೬೬. EC.Vol.xii, ನಿಡುಗಲ್ಲು ಶಾಸನ ಸಂಖ್ಯೆ.೪೭, ಪುಟ.೩೭೦.
೧೬೭. EC.Vol.xii, ಮುದಡಿ ಶಾಸನ ಸಂಖ್ಯೆ.೨೧೫, ಪುಟ.೨೬೫.
೧೬೮. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೨೨.
೧೬೯. ಬಸವರಾಜ್ ಡಿ.ಆರ್., ೨೦೦೬, ನಿಡುಗಲ್ಲುದುರ್ಗ, ಪುಟ.೨೨.
೧೭೦. EC.Vol.xii, ಮುದ್ದೇನಹಳ್ಳಿ, ಶಾಸನ ಸಂಖ್ಯೆ.೬೦, ಪುಟ.೨೯೧.
೧೭೧. EC.Vol.xii, ಗುಂಡ್ಲಹಳ್ಳಿ, ಶಾಸನ ಸಂಖ್ಯೆ.೧೪, ಪುಟ.೩೫೨.
೧೭೨. EC.Vol.xii, ಸೂರ್ಯನಾಥ ಕಾಮತ್, ೨೦೦೬, ಪೂರ್ವೋಕ್ತ, ಪುಟ.೪೩.
೧೭೩. EC.Vol.xii, ತಂಡಗ, ಶಾಸನ ಸಂಖ್ಯೆ.೩೦, ಪುಟ.೧೩೩.
೧೭೪. EC.Vol.xxiv, C.H.ಕೋರಗೆರೆ ಶಾಸನ ಸಂಖ್ಯೆ.೧೭, ಪುಟ.೩೭೩-೩೭೪.
೧೭೫. EC.Vol.xxiv, C.H.ಡಿಂಕನಹಳ್ಳಿ ಶಾಸನ ಸಂಖ್ಯೆ.೩೦, ಪುಟ.೪೦೮.
೧೭೬. ನಂಜುಂಡಸ್ವಾಮಿ ಬಿ(ಸಂ)., ೨೦೦೨, ಪೂರ್ವೋಕ್ತ, ಪುಟ.೧೮೬-೧೯೫.

೧೭೭. EC.Vol.XXIV, ಅರಕೆರೆ ಜಿ.ವಿ., ಶಾಸನ ಸಂ.೦೨, ಪುಟ.೨೫೮-೨೬೦.

೧೭೮. EC.Vol.XXIV, ಸಂಪಿಗೆ ಜಿವಿ., ಶಾಸನ ಸಂ.೭೯, ಪುಟ.೩೪೨-೩೪೩.

೧೭೯. EC.Vol.XXIV, ತುಮಕೂರು ಶಾ.ಸಂ.೪೧, ಪುಟ.೮೩-೮೪.

೧೮೦. EC.Vol.XXIV, ಬೆನಕನಕೆರೆ, ಶಾ.ಸಂ.೧೬೦, ಪುಟ.೭೪.

೧೮೧. EC.Vol.XXIV, ಸಿಎಚ್, ಶೆಟ್ಟಿಕೆರೆ, ಶಾಸನ ಸಂ.೦೨, ಪುಟ.೧.

೧೮೨. EC.Vol.XXIV, ಕವಿತಾಕೃಷ್ಣ(ಸಂ), ೨೦೦೨, ಪೂರ್ವೋಕ್ತ, ಪುಟ.೨೨.

೧೮೩. ಗೋಪಾಲ್ ಆರ್ (ಸಂ)., ೨೦೦೯, ಪೂರ್ವೋಕ್ತ, ಪುಟ.೪೧೫.

೧೮೪. EC.Vol.XXIV, ಕೈದಾಳ ಟಿಯು., ಶಾಸನ ಸಂ.೧೧, ಪುಟ.೭-೧೫.

೧೮೫. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೪, ಇತಿಹಾಸ ದರ್ಶನ, ಸಂಪುಟ-೧೯, ಪುಟ.೧೮೮.

೧೮೬. EC.Vol.XXIV, ಬೆಳಗೆರೆ ಟಿಪಿ., ಶಾಸನ ಸಂ.೧೦೫, ಪುಟ.೧೭೪, ೧೭೫.

೧೮೭. ಯೋಗೀಶ್ವರಪ್ಪ ಡಿ.ಎನ್., ೨೦೧೨, ಕಲ್ಪಶೋಧ, ಪುಟ.೪೦.

೧೮೮. EC.Vol.XXIV, ಶೆಟ್ಟಿಕೆರೆ ಸಿಎಚ್., ಶಾಸನ ಸಂ.೨, ಪುಟ.೪೯-೫೦.

೧೮೯. Radha Patel M, 2001, Life and Times of hoyasala Narashimha III, P.30,

೧೯೦. EC.Vol.XXIV, ಟಿಪಿ., ತುರುವೇಕೆರೆ, ಶಾ.ಸಂ.೨, ಪುಟ.೧೧೭-೧೧೮.

೧೯೧. EC.Vol.XXIV, ಸಿಎಚ್., ತಂಡಗ, ಶಾಸನ ಸಂ.೧೮, ಪುಟ.೨೧೫-೨೧೬.

೧೯೨. EC.Vol.XXIV, ಜಿ.ವಿ., ಆಲದಗೆರೆ, ಶಾಸನ ಸಂ.೫, ಪುಟ.೨೬೨-೨೬೩.

೧೯೩. EC.Vol.XXIV, ಟಿವಿ., ಮುಳುಕುಂಟೆ ಅಗ್ರಹಾರ, ಶಾ.ಸಂ.೭೮, ಪುಟ.೧೩೬-೧೩೯.

೧೯೪. ಸಾಲತ್ತೂರೆ ಬಿ.ಎ., ದೇಸಾಯಿ ಪಿ., ೨೦೦೫, ಪೂರ್ವೋಕ್ತ, ಭಾಗ-೧, ಪುಟ.೬೨.

೧೯೫. EC.Vol.XXIV, ನಾಗಸಂದ್ರ, ಶಾ.ಸಂ.೩೮, ಪುಟ.೨೧೨-೨೧೫.

೧೯೬. EC.Vol.XXIV, ದೊಡ್ಡ ತೇಕಲವಟ್ಟಿ, ಶಾ.ಸಂ. ಪುಟ.೪೧೭-೪೧೮.

೧೯೭. EC.Vol.XXIV, ಎಂ.ಡಿ., ಕೊಂಡೇಟಿ, ಶಾ.ಸಂ.೮೩, ಪುಟ.೩೨೬-೩೨೭.

೧೯೮. EC.Vol.XXIV, ಪಿ.ವಿ.ಜಿ., ಪಾವಗಡ, ಶಾ.ಸಂ.೯೭, ಪುಟ.೫೮.

೧೯೯. EC.Vol.XXIV, ಶಾ.ಸಂ.೮೩, ಮೈದಾಳ, ಪುಟ.೧೪೭.

೨೦೦. EC.Vol.XXIV, ಕೊಳಾಲ, ಶಾಸನ ಸಂ.೨೨, ಪುಟ.೩೯.

೨೦೧. EC.Vol.XXIV, ಎಂ.ಡಿ., ಶಾಸನ ಸಂ.೬೪, ಪುಟ.೩೨೭-೩೨೮, ದೊಡ್ಡಮಾಲೂರು.

೨೦೨. ನರಸಿಂಹಾಚಾರ್ ಆರ್., ೨೦೧೧, ಕರ್ನಾಟಕ ಕವಿಚರಿತೆ ಸಂಪುಟ-೧, ಪುಟ.೧೮೯.

೨೦೩. ಕಾವಲಮ್ಮ ಆರ್., ೨೦೦೫, ಮಧುಗಿರಿ ಮಹಾನಾಡ ಪ್ರಭುಗಳು, ಪುಟ.೧೬೩.

೨೦೪. ಶ್ಯಾಮಲ ಸಿ.ಆರ್., ೨೦೦೮, ಪೂರ್ವ ಕರ್ನಾಟಕ ಪಾಳೆಯಗಾರರು, ಪುಟ.೧೦೯.

೨೦೫. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೧೬೯.

೨೦೬. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೨೨೬.

೨೦೭. ನಂಜುಂಡಸ್ವಾಮಿ, ೨೦೦೨, ಪೂರ್ವೋಕ್ತ, ಪುಟ.೩೩೨-೩೩೩.

೨೦೮. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೧೭೫-೧೮೩.

೨೦೯. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೧೧೪-೧೧೫.

೨೧೦. ಶ್ರೀನಿವಾಸ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಪುಟ.೪೭-೫೪.

೨೧೧. ನಂಜುಂಡಸ್ವಾಮಿ, ೨೦೦೨, ಪೂರ್ವೋಕ್ತ, ಪುಟ.೩೩೬-೩೩೭.

೨೧೨. ಕವಿತಾಕೃಷ್ಣ(ಸಂ.), ೨೦೦೨, ಪೂರ್ವೋಕ್ತ, ಪುಟ.೨೬.

೨೧೩. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೫, ಇತಿಹಾಸ ದರ್ಶನ ಸಂಪುಟ-೨೦, ಪುಟ.೪೦೩-೪೦೭.

೨೧೪. ವಕ್ತೃ ವಿವರ-ಹಾಗಲವಾಡಿ ನಾಯಕ ಮನೆತನದವರಾದ ಕೃಷ್ಣಪ್ಪನಾಯಕ, ತಂರ್ದ-ಪುಟ್ಟಣ್ಣ, ವಯಸ್ಸು-೬೦.

೨೧೫. ಗಂಗಾನಾಯಕ್(ಪ್ರಸಂ.)., ಶೈಲಜ ಬಿ.ಎಂ.(ಸಂ)., ೨೦೧೨, ಪಾಳೆಯಗಾರರ ಶಾಸನಗಳು ವಾಲ್ಯೂಂ-೧.

೨೧೬. ಮಹಾದೇವಯ್ಯ ಟಿ.ಆರ್., ೧೯೮೫, ಗುಬ್ಬಿ ತಾಲೂಕು ದರ್ಶನ, ಪುಟ.೧೭.

೨೧೭. ವೀರಣ್ಣ ರಾಜೂರ(ಸಂ)., ೧೯೮೬, ಹಾಗಲವಾಡಿ ಮುರ್ವಿವಸ್ವಾಮಿಯ ಸ್ವರವಚನಗಳು, ಪುಟ.... ಪ್ರಸ್ತಾವನೆ.Vi-Vii.

೨೧೮. ಯೋಗೀಶ್ವರಪ್ಪ ಡಿ.ಎನ್., ೨೦೧೨, ಕಲ್ಪಶೋಧ, ಪುಟ.೧೧೦.

೨೧೯. ಕಮಲೇಶ್ ಕೆ.ಆರ್., ೨೦೦೯, ಚಿಕ್ಕನಾಯಕನಹಳ್ಳಿ ತಾಲೂಕು ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನ, ೧೭೨೦-೧೯೦೦, ಪುಟ.೬೩.

೨೨೦. ಯೋಗೀಶ್ವರಪ್ಪ ಡಿ.ಎನ್., ೧೯೯೯, ಹಾಗಲವಾಡಿ ನಾಯಕರು, ಪುಟ.೩೭-೩೮.

೨೨೧. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೧೨೪.

೨೨೨. ಕಮಲೇಶ್ ಕೆ.ಆರ್., ೨೦೦೯, ಪೂರ್ವೋಕ್ತ, ಪುಟ.೭೨.

೨೨೩. EC.Vol.XXIV, ನಿಡಗಲ್ಲು ಶಾಸನ ಸಂ.೫೪, ಪುಟ.೩೭೬-೩೭೭.

೨೨೪. EC.Vol.XXIV, ಹಿರೀಗುಂಡಗಲ್ ಶಾಸನ ಸಂ.೧೦೬ ಪುಟ.೮೩.

೨೨೫. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೧೪೪-೧೪೬.

೨೨೬. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೧೦೭.

೨೨೭. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೧೮೪-೧೮೯.

೨೨೮. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೯೯-೧೦೩.

೨೨೯. ವಸು ಎಂ.ವಿ., ೨೩೦೦೧, ಪೂರ್ವೋಕ್ತ, ಪುಟ.೬೯-೭೧.

೨೩೦. ಕರ್ನಾಟಕ ಚರಿತ್ರೆ ಸಂಪುಟ-೩, ಪುಟ.೩೫.

೨೩೧. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೧೪೮-೧೪೯.

೨೩೨. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೫೯.

೨೩೩. ಯೋಗೀಶ್ವರಪಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೧೫೧-೧೫೩.

೨೩೪. ರಾಜೇಗೌಡ ಹ.ಕ., ೨೦೦೫, ಬೆಂಗಳೂರು ಕೆಂಪೇಗೌಡ ಮತ್ತು ಅವನ ವಂಶಸ್ಥರು, ಪುಟ.೧೨ ರಿಂದ ೩೫.

೨೩೫. ಪುಟ್ಟಸ್ವಾಮಿ ಬಿ.ಎಸ್., ೨೦೧೧, ಯಲಹಂಕ ನಾಡಪ್ರಭು ಕೆಂಪೇಗೌಡ ಮತ್ತು ಆತನ ವಂಶಸ್ಥರು, ಪುಟ.೧೮-೧೯.

೨೩೬. ರಾಜೇಗೌಡ ಹ.ಕ., ೨೦೦೫, ಪೂರ್ವೋಕ್ತ, ಪುಟ.೬೪.

೨೩೭. ಪುಟ್ಟಸ್ವಾಮಿ ಬಿ.ಎಸ್., ೨೦೧೧, ಪೂರ್ವೋಕ್ತ, ಪುಟ.೨೫.

೨೩೮. EC.Vol.XXIV, ಕುಣಿಗಲ್ಲು, ಶಾಸನ ಸಂ.೧೧, ಪುಟ.೯೦.
೨೩೯. ಜಮುನ ಎಂ(ಪ್ರಸಂ)., ಮಂಜುನಾಥ ಎಂ.ಜಿ.(ಸಂ), ೨೦೦೬, ಯಲಹಂಕನಾಡ ಪ್ರಭುಗಳ ಶಾಸನ ಸಂಪುಟ, ಪುಟ.೧೪೮, ೧೭೨, ೧೮೦, ೧೯೬.
೨೪೦. EC.Vol.XXIV, ತೊಗರಿಗಟ್ಟ, ಶಾಸನ ಸಂ.೪೫, ಪುಟ.೩೨೨.
೨೪೧. EC.Vol.XXIV, ಕೊರಟಗೆರೆ ಶಾಸನ ಸಂ.೩೨, ಪುಟ.೩೧೭.
೨೪೨. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೨೮೦.
೨೪೩. EC.Vol.XXIV, ಕೊರಟಗೆರೆ, ಶಾಸನ ಸಂ.೩೧, ಪುಟ.೩೧೫–೩೧೬.
೨೪೪. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೨೮೨–೨೮೪.
೨೪೫. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪುಟ.೪೦೪–೪೦೯.
೨೪೬. ವಕ್ತೃವಿವರ ರಾಮಾಂಜಿನಪ್ಪ ಎನ್., ವಯಸ್ಸು–೪೩, ಯರ್ರಮ್ಮನಹಳ್ಳಿ.
೨೪೭. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪುಟ.೪೦೪–೪೦೯.
೨೪೮. ವಸು ಎಂ.ವಿ., ೨೦೦೧, ಪೂರ್ವೋಕ್ತ, ಪುಟ.೨೪೮–೨೫೧.
೨೪೯. ಶ್ರೀನಿವಾಸ್ ಎಂ.ಡಿ., ೨೦೦೯, ಮಿಡಿಗೇಶಿ, ಪುಟ.೨೦–೨೨.
೨೫೦. ವಸು ಎಂ.ವಿ(ಸಂ.)., ೨೦೦೧, ಪೂರ್ವೋಕ್ತ, ಪುಟ.೧೯೧–೧೯೮.
೨೫೧. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೧೯೯೮, ಇತಿಹಾಸ ದರ್ಶನ ಸಂಪುಟ–೧೩, ಪುಟ.೨೭೩–೨೭೬.
೨೫೨. ವಸು ಎಂ.ವಿ(ಸಂ.)., ೨೦೦೧, ಪೂರ್ವೋಕ್ತ, ಪುಟ.೧೯೧–೧೯೮.
೨೫೩. ಕಮಲೇಶ್ ಕೆ.ಆರ್., ೨೦೦೯, ಪೂರ್ವೋಕ್ತ, ಪುಟ.೬೪.
೨೫೪. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೨೮೧.
೨೫೫. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೧೦೬.
೨೫೬. ನಾಯಕ ಹಾ.ಮಾ(ಪ್ರಸಂ)., ಕನ್ನಡ ವಿಷಯ ವಿಶ್ವಕೋಶ, ಸಂಪುಟ–೧, ಪುಟ.೮೭೫.
೨೫೭. ಕಮಲೇಶ್ ಕೆ.ಆರ್., ೨೦೦೯, ಚಿಕ್ಕನಾಯಕನಹಳ್ಳಿ ತಾಲ್ಲೂಕು ಇತಿಹಾಸ ಮತ್ತು ಸಾಂಸ್ಕೃತಿಕ ಅಧ್ಯಯನ, ೧೭೨೦–೧೯೦೦, ಪುಟ.೬೫.
೨೫೮. ಮುದ್ದಾಚಾರಿ ಬಿ., ಮರಾಠರ ಅತಿಕ್ರಮಣ ಮೈಸೂರಿನ ಪ್ರತಿಭಟನೆ, ಪುಟ.೩.
೨೫೯. ಕಮಲೇಶ್ ಕೆ.ಆರ್., ೨೦೦೯, ಪೂರ್ವೋಕ್ತ, ಪುಟ.೭೫
೨೬೦. ನಾಗಭೂಷಣ ಸಿ., ೧೯೯೧, ಗುಬ್ಬಿ ಒಂದು ಸಾಂಸ್ಕೃತಿಕ ದರ್ಶನ, ಪುಟ.೨೪
೨೬೧. ಶ್ರೀನಿವಾಸ್ ಎಂ.ಡಿ., ೨೦೦೯, ಪೂರ್ವೋಕ್ತ, ಪುಟ.೨೪–೨೫
೨೬೨. ಕಮಲೇಶ್ ಕೆ.ಆರ್., ೨೦೦೯, ಪೂರ್ವೋಕ್ತ, ಪುಟ.೭೬.
೨೬೩. ಚಿಕ್ಕಣ್ಣ ಯಣ್ಣೆಕಟ್ಟೆ., ೨೦೦೮, ಸಿರಾ ಸೀಮೆಯ ಇತಿಹಾಸ ಮತ್ತು ಸಂಸ್ಕೃತಿ, ಪುಟ.೧೪.
೨೬೪. ಮುದ್ದಾಚಾರಿ ಚ., ಪೂರ್ವೋಕ್ತ, ಪುಟ.೧–೫೧.
೨೬೫. ಸಾಮಶೇಷನ್ ನೀ.ಕೃ., ೧೯೮೪, ಮಧುಗಿರಿ, ಪುಟ.೧೭.
೨೬೬. ವಸು ಎಂ.ವಿ(ಸಂ.)., ೨೦೦೧, ಪೂರ್ವೋಕ್ತ, ಪುಟ.೨೫೨.
೨೬೭. ಶ್ರೀನಿವಾಸ್ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಪುಟ.೫೪–೫೫.
೨೬೮. ಅದೇ, ಪುಟ.೫೯.
೨೬೯. ಅದೇ, ಪುಟ.೫೩.

೨೭೦. ಚಿಕ್ಕಣ್ಣ, ೨೦೦೮, ಪೂರ್ವೋಕ್ತ, ಪುಟ.೧೫-೧೬.

೨೭೧. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೮೩, ೧೧೬, ೧೧೭.

೨೭೨. ಕಮಲೇಶ್ ಕೆ.ಆರ್., ೨೦೦೯, ಪೂರ್ವೋಕ್ತ, ಪುಟ.೭೭.

೨೭೩. ರಂಗಲಕ್ಷ್ಮಿ ಪಿ.ವಿ., ೨೦೦೫, ಪಾವಗಡ ತಾಲೂಕಿನ ಜಾನಪದ ವೀರನಾಯಕರು, ಪುಟ.೨೨.

೨೭೪. ನಾಯಕ ಹಾ.ಮಾ(ಪ್ರ.ಸಂ)., ೨೦೦೫, ಕನ್ನಡ ವಿಷಯ ವಿಶ್ವಕೋಶ, ಸಂಪುಟ-೧, ಪುಟ.೮೯೫.

೨೭೫. ಯೋಗೀಶ್ವರಪ್ಪ ಡಿ.ಎನ್., ೨೦೧೨, ಕಲ್ಪಶೋಧ, ಪುಟ.೨೮೨.

೨೭೬ ವಸು ಎಂ.ವಿ(ಸಂ)., ೨೦೦೧, ಪೂರ್ವೋಕ್ತ, ಪುಟ.೨೫೨.

೨೭೭. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೮೩.

೨೭೮. ಚೆಲುವರಾಜನ್ ವೈ., ೧೯೮೭, ಪಾವಗಡ ತಾಲೂಕು ದರ್ಶನ, ಪುಟ.೨೧.

೨೭೯. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೦, ಪೂರ್ವೋಕ್ತ, ಪುಟ.೧೨೬.

೨೮೦. ಶ್ಯಾಮಲ ಸಿ.ಆರ್., ೨೦೦೮, ಪೂರ್ವೋಕ್ತ, ಪುಟ.೧೦೬, ೧೧೭, ೧೧೮.

೨೮೧. ಶ್ರೀನಿವಾಸ್ ಎಂ.ಡಿ., ೧೯೮೭, ಪೂರ್ವೋಕ್ತ, ಪುಟ.೫೬.

೨೮೨. ಶ್ರೀನಿವಾಸ ಎಂ.ಡಿ., ೨೦೦೯, ಪೂರ್ವೋಕ್ತ, ಪುಟ.೨೪.

೨೮೩. ಶ್ರೀನಿವಾಸ ಎಂ.ಡಿ., ೧೯೮೭, ಪೂರ್ವೋಕ್ತ, ಪುಟ.೫೭.

೨೮೪. ಚಿಕ್ಕಣ್ಣ ಯಣ್ಣೆಕಟ್ಟೆ., ೨೦೦೮, ಪೂರ್ವೋಕ್ತ, ಪುಟ.೧೬.

೨೮೫. ECVOlXXIV, ಎಡೆಯೂರು ಶಾ.ಸಂ.೮೨, ೮೩, ಪುಟ.೪೭.

೨೮೬. ಶ್ರೀನಿವಾಸ ಎಂ.ಡಿ., ೧೯೮೭, ಪೂರ್ವಕ್ತ, ಪುಟ.೫೮-೫೯.

೨೮೭. ಕವಿತಾಕೃಷ್ಣ(ಪ್ರ.ಸಂ.)., ೨೦೦೨, ಪೂರ್ವೋಕ್ತ, ಪುಟ.೨೮.

೨೮೮. ಸೂರ್ಯನಾಥ ಕಾಮತ್(ಸಂ.)., ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ದ್ವಿತೀಯ ಸಂಪುಟ, ಪುಟ.೪೨೭.

೨೮೯. ಕವಿತಾಕೃಷ್ಣ(ಪ್ರ.ಸಂ.)., ೨೦೦೨, ಪೂರ್ವೋಕ್ತ, ಪುಟ.೨೮-೨೯.

೨೯೦. ಸೂರ್ಯನಾಥ್ ಕಾಮತ್(ಸಂ.)., ಪೂರ್ವೋಕ್ತ, ಪುಟ.೪೨೮.

೨೯೧. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪುಟ.೪೨೭.

೨೯೨. ಲಿಂಗಯ್ಯ ಡಿ., ೧೯೯೮, ಸತ್ಯಾಗ್ರಹಿಗಳ ನೆನಪುಗಳು, ಪುಟ.೧೭೯.

೨೯೩. ಕವಿತಾಕೃಷ್ಣ(ಪ್ರ.ಸಂ.)., ೨೦೦೨, ಪೂರ್ವೋಕ್ತ, ಪುಟ.೨೯-೩೦.

೨೯೪. ಅದೇ, ಪುಟ.೨೮-೩೦.

೨೯೫. ಸೂರ್ಯನಾಥ್ ಕಾಮತ್(ಸಂ.)., ಪೂರ್ವೋಕ್ತ, ಪುಟ.೪೨೮.

೨೯೬ ಕಮಲೇಶ್ ಕೆ.ಆರ್., ೨೦೦೯, ಪೂರ್ವೋಕ್ತ, ಪುಟ.೭೯-೮೦.

೨೯೭. ಕವಿತಾಕೃಷ್ಣ(ಪ್ರ.ಸಂ.)., ೨೦೦೨, ಪೂರ್ವೋಕ್ತ, ಪುಟ.೩೦-೩೨.

ಅಧ್ಯಾಯ ೩

ರಕ್ಷಣಾ ವಾಸ್ತುಶಿಲ್ಪದ ಹುಟ್ಟು ಮತ್ತು ಬೆಳವಣಿಗೆ

ಪ್ರಸ್ತಾವನೆ

ಮನುಷ್ಯರು ಆರಂಭದಲ್ಲಿ ಕಾಡುಪ್ರಾಣಿ, ಶತ್ರುಗಳಿಂದ ರಕ್ಷಣೆ ಪಡೆದುಕೊಳ್ಳಲು ಮರದ ಪೊಟರೆ, ಕಲ್ಲಾಸರೆ, ಗುಹೆಗಳಲ್ಲಿ ಆಶ್ರಯ ಪಡೆದುಕೊಳ್ಳಲು ಆರಂಭಿಸಿದರು. ಕ್ರಮೇಣ ಒಂದೆಡೆ ನೆಲೆನಿಂತು ಗ್ರಾಮ ಸಮುದಾಯ ಜೀವನ ನಡೆಸಲು ಮುಂದಾದರು. ಹಾಗೆ ಗ್ರಾಮದ ಸುತ್ತಲೂ ಕಾಪುಗೋಡೆಗಳನ್ನು ಕಟ್ಟಿಕೊಂಡು ತನ್ನ ಸಮುದಾಯ ಮತ್ತು ಸಂಪತ್ತನ್ನು ರಕ್ಷಿಸಲು ಪ್ರಯತ್ನಿಸಿದರು. ಆದರೆ ನಗರ ರಾಜ್ಯಗಳ ಉಗಮ ಮತ್ತು ಶಸ್ತ್ರಾಸ್ತ್ರಗಳಲ್ಲಿ ಆದ ಬದಲಾವಣೆ ಹಲವು ವಿಧದಲ್ಲಿ ಕೋಟೆಗಳ ಉಗಮಕ್ಕೆ ನಾಂದಿ ಹಾಡಿತು. ಹೀಗೆ ನಿರ್ಮಾಣಗೊಂಡ ಕೋಟೆ ಕೊತ್ತಲಗಳನ್ನು ಶಾಸ್ತ್ರಗಳು ಹಲವು ವಿಧವಾಗಿ ಉಲ್ಲೇಖಿಸುತ್ತವೆ. ಋಗ್ವೇದ 'ಪುರ' ಮತ್ತು ದುರ್ಗಗಳನ್ನು ಗೋಡೆಯಿಂದ ಆವೃತವಾದ ಪ್ರದೇಶ[೧] ಎಂದು ಕರೆದರೆ, ಯಜುರ್ವೇದ ಮಹಾಪುರ ಎಂದೂ ಅದನ್ನು 'ವಪ್ರ'[೨] ಎಂತಲೂ ಉಲ್ಲೇಖಿಸಿವೆ. ಮಹಾಕಾವ್ಯ, ಕೌಟಿಲ್ಯನ–ಅರ್ಥಶಾಸ್ತ್ರ, ಕಾಮಾಂದನ–ನೀತಿಸಾರ, ಶುಕ್ರನ–ನೀತಿಸಾರ, ಪಾಣಿನಿಯ–ಅಷ್ಟಾಧ್ಯಾಯಿ, ಮನುವಿನ–ಮನುಸ್ಮೃತಿ, ದುರ್ಗಸಿಂಹನ–ಪಂಚತಂತ್ರ, ತಿರುವಳ್ಳುವರ್‌ನ–ತಿರುಕ್ಕುರುಳ್, ಸೊಮೇಶ್ವರನ–ಮಾನಸೋಲ್ಲಾಸ ಮೊದಲಾದ ಕೃತಿಗಳು ಕೋಟೆ, ದುರ್ಗಗಳ ಬಗೆಗೆ ಹಲವು ವಿಧದಲ್ಲಿ ವರ್ಣಿಸಿವೆ.

ಸಂಸ್ಕೃತದಲ್ಲಿ ಕೋಟೆಯನ್ನು 'ದುರ್ಗ' ಎಂದೂ, ಕ್ರಿ.ಶ. ೫೪೩ರ ಮೊದಲನೆ ಪುಲಕೇಶಿಯ ಬಾದಾಮಿ ಶಾಸನ ಮತ್ತು ಕ್ರಿ.ಶ. ೧೧೧೦೫ರ ಇರುಂಗೋಳನ ನಿಡುಗಲ್ಲು ಶಾಸನ ಕೋಟೆಯನ್ನು 'ದುರ್ಗ' ಎಂದು ಉಲ್ಲೇಖಿಸಿವೆ. ಆದರೆ ಹಳಗನ್ನಡದ ಸಾಹಿತ್ಯ ಕೃತಿಗಳು ಕೋಟೆಗೆ ಪರ್ಯಾಯವಾಗಿ 'ಕೋಂಟೆ', 'ಗೋಂಟೆ'[೩] ಎಂಬ ಪದಗಳನ್ನು ಉಲ್ಲೇಖಿಸಿವೆ. ಕೆಲವೊಮ್ಮೆ ಯುದ್ಧಭೂಮಿಯಲ್ಲಿ ಸೈನಿಕರನ್ನೂ ಕೋಟೆ ಗೋಡೆಯಂತೆ ಬಳಸಿಕೊಂಡಿರುವುದಕ್ಕೆ ಉದಾಹರಣೆಗಳುಂಟು. ಆದುದರಿಂದ ಕೋಟೆಯನ್ನು ಕೇವಲ ಕೋಟೆಗೋಡೆ ಎಂಬ ಸೀಮಿತ ಅರ್ಥದಲ್ಲಿ ನೋಡುವುದಕ್ಕಿಂತಲೂ

ಬೆಟ್ಟ, ಗುಡ್ಡ. ಸೈನಿಕರ ಬಿಡಾರಗಳನ್ನು ರಕ್ಷಣೆಯ ದೃಷ್ಟಿಯಿಂದ ಕೋಟೆಗಾಯ(ತಾತ್ಕಾಲಿಕ ಕೋಟೆ) ಪರಿಧಿಯಲ್ಲಿ ನೋಡಬೇಕಾಗುತ್ತದೆ. ಸಾಮಾನ್ಯವಾಗಿ ಕೋಟೆಯನ್ನು ಎತ್ತರವು, ಬಲತ್ತರವೂ ಆದ ಗ್ರಾಮ, ಪಟ್ಟಣ ಆವರಣದ ಸುತ್ತ ಸುತ್ತುವರಿಯಲ್ಪಟ್ಟ ಗೋಡೆಯೆಂದೂ, ಇದನ್ನು ಕಿಲ್ಲೆ, ದುರ್ಗ, ವಾಡೆ, ಪುರ ಎಂದು ಕರೆಯಲಾಗುತ್ತದೆ. ಅದೇ ರೀತಿ ಆಂಗ್ಲ ಭಾಷೆಯಲ್ಲಿ ಕೋಟೆಯನ್ನು Fort ಎಂದು ಕರೆಯುತ್ತಾರೆ, ಈ ಪದವು F-Formidable(ದಿಗಿಲು ಹುಟ್ಟಿಸುವ, ಗಾಬರಿಗೊಳಿಸುವ, ಎದುರಿಸಲು ಕಷ್ಟವಾದ). O-Obstruct(ತಡೆಯೊಡ್ಡು, ಹಾದು ಹೋಗಲು ಕಷ್ಟವಾಗುವಂತೆ ಮಾಡು). R-Rampart(ಕಲ್ಲಿನ ಪಾಗಾರವಿರುವ ಮೇಲ್ಭಾಗದಲ್ಲಿ ಓಡಾಡುವಷ್ಟು ಅಗಲವಾಗಿರುವ ರಕ್ಷಣೆಯ ಮಣ್ಣಿನ ದಿಬ್ಬ, ಆಳುವೇರಿ ಕಟ್ಟಿ ರಕ್ಷಿಸು). T-Tactics-(ಯುದ್ಧ ತಂತ್ರ, ವ್ಯವಹಾರವಾಗಿ ನಿಲ್ಲಿಸುವ ಕಲೆ)[1] ಎಂಬ ಅರ್ಥ ನೀಡುತ್ತದೆ. ಕೋಟೆ ಎಂದರೆ ಶತ್ರುಗಳಿಗೆ ಭೀಕರತೆಯನ್ನು ಉಂಟು ಮಾಡುವಂತಹದ್ದಾಗಿದೆ. ಭೀಕರವಾದ ತಡೆಗೋಡೆಯನ್ನು ನಿರ್ಮಿಸು ಪ್ರಾಚೀನ ಕಾಲದಿಂದಲೂ ಕೇಂದ್ರೀಕೃತ ಆಡಳಿತದ ಬದಲಿಗೆ ಜಗತ್ತಿನಾದ್ಯಂತ ವಿಕೇಂದ್ರೀಕರಣಕ್ಕೆ ಹೆಚ್ಚು ಒಲವಿರುವುದನ್ನು ಕಾಣಬಹುದು. ಹಾಗಾಗಿ ಸಣ್ಣಪುಟ್ಟ ಆಡಳಿತ ವಿಭಾಗ ಹಾಗೂ ಪಾಳೆಯ ಪಟ್ಟುಗಳು ಸಹ ತಮ್ಮ ಆಡಳಿತದ ಚೌಕಟ್ಟು, ಆದಾಯದ ಮೂಲವನ್ನು ಗಮನದಲ್ಲಿ ಇಟ್ಟುಕೊಂಡು, ಭೌಗೋಳಿಕವಾಗಿ ಸುರಕ್ಷಿತ ಪ್ರದೇಶಗಳಲ್ಲಿ ಇಲ್ಲವೆ, ಕೆಲವೊಮ್ಮೆ ಕೋಟೆ ಕಟ್ಟಿಕೊಂಡ ನಂತರ ಅದಕ್ಕೆ ಅಭೇದ್ಯತೆಯನ್ನು ನೀಡಿ ತಮ್ಮದೇ ಆದ ಸ್ಥಳೀಯ ವಾಸ್ತು ವೈವಿಧ್ಯತೆಯನ್ನು ಪ್ರದರ್ಶಿಸಿರುವುದು ಕೋಟೆಗಳ ಅಧ್ಯಯನದಿಂದ ಕಂಡುಬರುತ್ತದೆ.

೩.೨. ಕೋಟೆಯ ಅರ್ಥ ಮತ್ತು ಮಹತ್ವ

ಅನಾಗರಿಕನಾಗಿದ್ದ ಮನುಷ್ಯ ನಾಗರಿಕನಾದಂತೆಲ್ಲ ತನ್ನನ್ನು ತಾನು ವನ್ಯಮೃಗಗಳಿಂದ ರಕ್ಷಿಸಿಕೊಳ್ಳಲು ಆಯುಧೋಪಕರಣಗಳ ಮೊರೆಹೋದನು. ಕ್ರಮೇಣ ಒಂದೆಡೆ ನೆಲೆ ನಿಲ್ಲಲು ಆರಂಭಿಸಿದ್ದರಿಂದ ತನ್ನವರು ವಾಸಿಸುವ ಗ್ರಾಮದ ಸುತ್ತಲೂ ಆಳವಾದ ಕಂದಕ, ಮಣ್ಣಿನ ದಿಬ್ಬ ಇಲ್ಲವೆ ಮರದ ದಿಂಬುಗಳಿಂದ ಕೋಟೆಯನ್ನು ಕಟ್ಟಿಕೊಳ್ಳಲು ಮುಂದಾದ ನಂತರದ ಕಾಲದಲ್ಲಿ ನಗರ ರಾಜ್ಯಗಳ ಏಳಿಗೆ ಹೊಂದಿದ್ದು ಅವುಗಳ ಬಲಾಬಲವು ಕೋಟೆಗಳ ಅಳಿವು ಉಳಿವಿನ ಪ್ರಶ್ನೆಯ ಮೇಲೆ ನಿಲ್ಲುತ್ತಿತ್ತು. ಹಾಗಾಗಿ ಕೋಟೆಗಳು ಕ್ರಮೇಣ ಪ್ರಾಮುಖ್ಯತೆ ಗಳಿಸಿಕೊಂಡು ಅಭೇದ್ಯವಾಗಿ ನಿರ್ಮಿಸಲ್ಪಟ್ಟವು. ಆರಂಭದಲ್ಲಿ ಯಾವುದೇ ಒಂದು ರಾಜ್ಯ ತಾನು ಸೈನ್ಯ ಹೊಂದಿಲ್ಲದಿದ್ದರೂ ಬಲಾಢ್ಯ ಕೋಟೆ ಹೊಂದಿದ್ದರೆ ಅದರ ಮೇಲೆ ಯಾವ ಶತ್ರು ರಾಜ್ಯವು ದಾಳಿ ಮಾಡುತ್ತಿರಲಿಲ್ಲ. ಈ ಕಾರಣಕ್ಕಾಗಿಯೇ ಪ್ರಾಚೀನ ರಾಜನೀತಿಜ್ಞರು ಸಪ್ತಾಂಗ ಸಿದ್ಧಾಂತವನ್ನು ಸೃಷ್ಟಿಸಿ ಕೋಟೆಯ ವಾಸ್ತು ರಚನೆಯನ್ನು ಪರಿಚಯಿಸಿದರು. ಈ ಸಿದ್ಧಾಂತಗಳಿಗೆ ಅನುಗುಣವಾಗಿ ಜಲದುರ್ಗ ಮತ್ತು ಗಿರಿದುರ್ಗಗಳು ಹೆಚ್ಚು ಪ್ರಾಮುಖ್ಯತೆಗಳಿಸಿಕೊಂಡವು. ಮುಸ್ಲಿಂ ಆಗಮನದಿಂದ ಕೋಟೆಗಳ

ರಚನಾ ಶೈಲಿಯೇ ಬದಲಾಯಿತು. ಇಡೀ ಹಿಂದುಸ್ತಾನದಾದ್ಯಂತ ತಮ್ಮ ದಾಳಿಗಳನ್ನು ಯಶಸ್ವಿಯಾಗಿ ನಡೆಸಿದ ದೆಹಲಿ ಮತ್ತು ಮೊಘಲರಿಗೆ ಸಣ್ಣದಾದ ರಜಪೂತರನ್ನು ಸೋಲಿಸಲು ಸಾಕಷ್ಟು ಶ್ರಮವಹಿಸಿದರು. ಮೆವಾರವನ್ನು ಯಾವ ಮುಸ್ಲಿಂ ಅರಸರು ಸಹ ಏನು ಮಾಡಲಾರದ ವಾತಾವರಣ ಸೃಷ್ಟಿಯಾಯಿತೆಂದರೆ ಅಪಾರ ಸಂಪನ್ಮೂಲಗಳಿಂದ ಕೂಡಿದ ಅವರ ಅಭೇದ್ಯ ದುರ್ಗಗಳೇ ಕಾರಣ ಎಂಬುದು ಕೋಟೆಗಳ ಬಗೆಗಿನ ಮಹತ್ವವನ್ನು ತೋರ್ಪಡಿಸುತ್ತವೆ.

ಶಿವಾಜಿಯೂ ಸಹ ಇಡೀ ಹಿಂದೂಸ್ತಾನವನ್ನು ಏಕಚಕ್ರಾಧಿಪತ್ಯಕ್ಕೆ ತರಲು ಪ್ರಯತ್ನಿಸಿದ್ದ ಔರಂಗಜೇಬನನ್ನು ಎದುರು ಹಾಕಿಕೊಳ್ಳಲು ತನ್ನಲ್ಲಿದ್ದ ಅಪಾರ ಸಂಖ್ಯೆಯ ಕೋಟೆ-ಕೊತ್ತಲ ಮತ್ತು ಗೆರಿಲ್ಲಾ ಮಾದರಿಯ ಯುದ್ಧ ನೀತಿಯೇ ಕಾರಣ. ಇಂದಿಗೂ ಯುದ್ಧನೀತಿ ಮತ್ತು ಆಯುಧಗಳಲ್ಲಿ ವೈಜ್ಞಾನಿಕತೆ ಕಂಡುಕೊಂಡರೂ ದೇಶದ ರಕ್ಷಣೆಯಲ್ಲಿ ಕೋಟೆಗಳು ಮಹತ್ವದ ಸ್ಥಾನವನ್ನು ಪಡೆದಿವೆ. ಏಕೆಂದರೆ ಹಿಂದೆ ಮಣ್ಣಿನ ಇಲ್ಲವೆ ಕಲ್ಲು ಮತ್ತು ಇಟ್ಟಿಗೆಯಿಂದ ಗೋಡೆಯನ್ನು ಯಾವುದೋ ರಾಜಧಾನಿ ಇಲ್ಲವೆ ತಮ್ಮ ಗಡಿಗಳಲ್ಲಿ ರಾಜ್ಯ, ರಾಜ, ಸಂಪತ್ತು, ಸಾಮಾನ್ಯ ಜನರ ರಕ್ಷಣೆಗಾಗಿ ಕಟ್ಟಲ್ಪಡುತ್ತಿದ್ದವು. ಆದರೆ ಇಂದು ಕಲ್ಲು ಇಟ್ಟಿಗೆಯ ಬದಲಿಗೆ ಕಬ್ಬಿಣದ ಬೇಲಿ ಮತ್ತು ಲೇಸರ್ ಕಿರಣಗಳ ಮೂಲಕ ದೇಶ ಗಡಿ ಪ್ರಾಂತ್ಯಗಳಲ್ಲಿ ಹಾಕಲಾಗುತ್ತಿದೆ. ಎತ್ತರದ ಗಡಿ ಪ್ರಾಂತ್ಯದಲ್ಲಿ ಕಾವಲು ಗೋಪುರಗಳನ್ನು ಇಂದಿಗೂ ನಿರ್ಮಿಸುತ್ತಿದ್ದಾರೆ. ಒಟ್ಟಾರೆ ಕೋಟೆಯ ನಿರ್ಮಾಣ ಶೈಲಿ ಬದಲಾಯಿತೇ ಹೊರತು ಕೋಟೆಗಳೇ ತನ್ನ ಮಹತ್ವವನ್ನು ಕಳೆದುಕೊಂಡವೆಂದು ಹೇಳಲಾಗದು. ಇವೆರಡರ ನಡುವಿನ ವಿಶೇಷವೆಂದರೆ ಅಂದು ರಾಜಧಾನಿ ಮತ್ತು ಗಡಿ ಪ್ರಾಂತ್ಯಗಳಲ್ಲಿ ಮಾತ್ರ ಕೋಟೆ ನಿರ್ಮಿಸಲ್ಪಡುತ್ತಿತ್ತು. ಇಂದು ದೇಶದ ಗಡಿ ಪ್ರಾಂತ್ಯಗಳಲ್ಲಿ ಮಾತ್ರ ಕೋಟೆ ನಿರ್ಮಾಣವಾಗುತ್ತಿದೆ.

ಈ ಹಿನ್ನೆಲೆಯಿಂದಲೇ ಕೌಟಿಲ್ಯನ-ಅರ್ಥಶಾಸ್ತ್ರ, ಕಾಮಾಂದಕನ-ನೀತಿಸಾರ, ಶುಕ್ರನ-ನೀತಿಸಾರ, ವಿಷ್ಣುಶರ್ಮನ-ಪಂಚತಂತ್ರ, ಮನುವಿನ-ಮನುಸ್ಮೃತಿ, ತಿರುವಳ್ಳವರ್‌ನ-ತಿರುಕ್ಕುರುಳ್, ಮೂರನೆಯ ಸೋಮೇಶ್ವರನ-ಮಾನಸೋಲ್ಲಾಸ, ಕೆಳದಿಬಸವ ರಾಜನ-ಶಿವತತ್ವರತ್ನಾಕರ, ಲಿಂಗಣ್ಣಕವಿಯ-ಕೆಳದಿನೃಪವಿಜಯ ಮೊದಲಾದ ರಾಜನೀತಿ ಮತ್ತು ಸಾಹಿತ್ಯ ಕೃತಿಗಳು ಕೋಟೆಗಳ ಮಹತ್ವವನ್ನು ವರ್ಣಿಸಿವೆ. ಉದಾಹರಣೆಗೆ ಪಂಚತಂತ್ರವು 'ಭದ್ರವಾದ ಕೋಟೆ ಇಲ್ಲದ ರಾಜನು ಬಿರುಗಾಳಿಗೆ ಸಿಕ್ಕ ಮೋಡಕ್ಕೆ ಸಮಾನ' ಎಂದೂ[೫], ದುರ್ಗವಿಲ್ಲದ ರಾಜನು ಕಡಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿ ಹೇಗೋ ಹಾಗೆ' ಎಂದು[೬] ಸಾಹಿತ್ಯ ಕೃತಿಗಳು ಕೋಟೆಗಳ ಮಹತ್ವವನ್ನು ತಿಳಿಸುತ್ತವೆ. ಕೋಟೆ-ಕೊತ್ತಲುಗಳು ಕೇವಲ ಅಧಿಕಾರ ವರ್ಗದ ಸಂಕೇತ ಎಂದು ಪರಿಗಣಿಸದೆ ಅವುಗಳ ಹಿಂದೆ ಸಾಮಾನ್ಯ ಜನರ ಶ್ರಮವೂ ಅಡಗಿದೆ ಎಂಬುದನ್ನು ಗುರುತಿಸಬೇಕಾಗುತ್ತದೆ. ಏಕೆಂದರೆ ಪ್ರತಿ ಕೋಟೆಯ ನಿರ್ಮಾಣ ಕಾರ್ಯದಲ್ಲಿ ಅಪಾರ ಸಾವು ನೋವುಗಳಿರುತ್ತವೆ.

ಅಂದರೆ ರಾಜನಾದವನು ಯಾವ ಅಡತಡೆಗಳು ಇಲ್ಲದಂತೆ ಆಳ್ವಿಕೆ ನಡೆಸಲು ಬೇಕಾದ ಕೋಟೆ–ಕೊತ್ತಲಗಳು ಸಾಮಾನ್ಯನ ಬೆವರಿನ ಕಥೆಯೇ ಆಗಿದ್ದು ಅದರ ಹಿಂದೆ ದುಃಖ, ದುಗುಡ, ಬದುಕು–ಬವಣೆ, ಸುಖ–ಸಂತೃಪ್ತಿಯ ಕಥನವೇ ಅಡಗಿದೆ ಎಂದರೆ ತಪ್ಪಾಗಲಾರದು.

ಕೋಟೆ ಎಂಬುದನ್ನು ನಿರ್ದಿಷ್ಟವಾಗಿ ಹೀಗೆ ಎಂದು ಅರ್ಥೈಸಲು ಸಾಧ್ಯವಿಲ್ಲ. ಪ್ರಾಚೀನ ಕಾಲದಿಂದಲೂ ಅವುಗಳನ್ನು ಶಾಸ್ತ್ರಗ್ರಂಥಗಳು, ವಿದ್ವಾಂಸರು ವಿಶ್ಲೇಷಿಸುವ ಪ್ರಯತ್ನ ಮಾಡುತ್ತಿದ್ದಾರೆ. ಏಕೆಂದರೆ ಅತ್ಯಾಧುನಿಕ ಶಸ್ತ್ರಾಸ್ತ್ರಗಳು ಇಲ್ಲದ ಆ ಕಾಲದಲ್ಲಿ ಕೌಟಿಲ್ಯನಂತಹ ರಾಜನೀತಿಜ್ಞನಿಗೆ ರಾಜ್ಯವನ್ನು ರಕ್ಷಿಸುವ ದೃಷ್ಟಿಯಿಂದ ಈ ದಿಕ್ಕಿಗೆ ಇದೇ ಮಾದರಿಯ ಕಟ್ಟಡಗಳಿರಬೇಕು, ಕೋಟೆ ಎಂದರೆ ಹೀಗೆ ಇರಬೇಕೆಂಬ ಅನಿವಾರ್ಯತೆಯನ್ನು ಉಂಟುಮಾಡಿತ್ತು. ಆದರೆ ವಿವಿಧ ಕಾಲಘಟ್ಟಗಳಲ್ಲಾದ ಆಯುಧೋಪಕರಣ ಮತ್ತು ಯುದ್ಧ ನೀತಿಗಳ ಬದಲಾವಣೆಯ ಹಿನ್ನೆಲೆಯಿಂದ ಕೋಟೆಗಳ ರಚನಾ ಶೈಲಿಯು ಬದಲಾಗಿ ಅವುಗಳ ಮೂಲ ಸ್ವರೂಪವೇ ಬದಲಾಯಿತು. ಹಾಗಾಗಿ ಕೆಲವು ವಿದ್ವಾಂಸರಲ್ಲಿ ಕೋಟೆಗಳೆಂದರೆ ಅವುಗಳ ಲಕ್ಷಣಗಳೇನೋ ಎನ್ನುವಂತೆ ಗೊಂದಲವನ್ನು ಉಂಟುಮಾಡಿಕೊಂಡರು.

೧. **ಕೌಟಿಲ್ಯ:** ಬಲಿಷ್ಠ ಕೋಟೆಯಿಲ್ಲದ ರಾಜನು ಸದಾ ಅಪಾಯದ ಬೆನ್ನು ಹತ್ತಿದಂತೆ, ಜೊತೆಗೆ ತನ್ನ ರಾಜ್ಯದ ಬೊಕ್ಕಸ ಮತ್ತು ಸೈನ್ಯ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ[೭] ಎಂದಿದ್ದಾನೆ.

೨. **ಮಸಗ:** ಒಂದು ರಾಜ್ಯ ಕೋಟೆಯನ್ನು ಹೊಂದಿದ್ದರೆ ಅದು ೩೮೦೦೦ ಸೈನಿಕರಿಗೆ ಸಮವಿದ್ದಂತೆ ಎಂದು ಅಭಿಪ್ರಾಯಪಟ್ಟಿದ್ದಾನೆ.

೩. **ಒಜಿರ ಮತ್ತು ಆರ್ಯನ್:** ಯಾವುದೇ ಒಂದು ರಾಜಧಾನಿಗೆ ಬಲಿಷ್ಠವಾದ ಕೋಟೆ ಇದ್ದಾಗ ಮಾತ್ರ ಅದರ ಅಳಿವು ಉಳಿವಿನ ನಿರ್ಧಾರ ನಿಂತಿರುತ್ತದೆ.

೪. **ಮನು:** ಕೋಟೆಯಲ್ಲಿದ್ದ ಒಬ್ಬ ಬಿಲ್ಲುಗಾರ ಹೊರಗಿನ ನೂರು ಯೋಧರೊಂದಿಗೆ, ಅದೇ ರೀತಿ ನೂರು ಮಂದಿ ಧನುರ್ಧಾರಿಗಳು ಹತ್ತು ಸಾವಿರ ಮಂದಿ ಯೋಧರೊಂದಿಗೆ ಯುದ್ಧ ಮಾಡಬಲ್ಲರು. ಆದ್ದರಿಂದ ರಾಜನಿಗೆ ರಕ್ಷಣೆ ದೃಷ್ಟಿಯಿಂದ ಕೋಟೆಯು ಅತ್ಯಗತ್ಯ.[೮]

೫. **ವಿಷ್ಣುಶರ್ಮ:** ಯುದ್ಧದಲ್ಲಿ ಸಾವಿರಾರು ಆನೆಗಳಿಂದ ಮತ್ತು ಲಕ್ಷಾಂತರ ಕುದುರೆಗಳಿಂದ ನಿರ್ವಹಿಸಲಾಗದ ಕಾರ್ಯವನ್ನು ಒಬ್ಬ ರಾಜ ಕೋಟೆಯ ಸಹಾಯದಿಂದ ನಿರ್ವಹಿಸಬಲ್ಲನು.[೯]

೬. **ಅಗ್ನಿಪುರಾಣ:** ಯಾವುದೇ ರಾಜ್ಯಕ್ಕೆ ಸಪ್ತಾಂಗಗಳು ದೇಹದ ಮುಖ್ಯ ಏಳು ಅಂಗಗಳಿಗೆ ಸಮನಿದ್ದಂತೆ. ಅದರಲ್ಲಿ ದುರ್ಗವು ಸಹ ಒಂದು.[೧೦]

೭. **ಮೂರನೆಯ ಸೋಮೇಶ್ವರ:** ದುರ್ಗಗಳಿಲ್ಲದ ರಾಜನು ಬಿರುಗಾಳಿಗೆ ಸಿಲುಕಿದ ಮೋಡವಾಗಿ ಚದುರಿಸಲ್ಪಡುತ್ತಾನೆ.[೧೧]

೮. **ಆಚಾರ್ಯ ಸೋಮದೇವ:** ದುರ್ಗವಿಲ್ಲದ ರಾಜನು ಕಡಲ ನಡುವೆ ಹಡಗಿನಿಂದ ಹೊರಗೆ ಬಿದ್ದ ಪಕ್ಷಿ ಹೇಗೋ ಹಾಗೆ ಆಪತ್ತಿನಲ್ಲಿ ಆಶ್ರಯವಿರುವುದಿಲ್ಲ.[೧೨]

೯. **ಕೆಳದಿ ಬಸವರಾಜ:** ಕೋಟೆಯಿಲ್ಲದ ರಾಜನು ವಿಷವಿಲ್ಲದ ಹಾವಿನಂತೆ, ಮದವಿಲ್ಲದ ಆನೆಯಂತೆ ಎಲ್ಲರಿಗೂ ಸುಲಭವಾಗಿ ವಶವಾಗಿಬಿಡುವನು.[೧೩]

ಹೀಗೆ ಪ್ರಾಚೀನ ರಾಜನೀತಜ್ಞರ ಸಾಹಿತ್ಯ ಗ್ರಂಥಗಳು ಉಲ್ಲೇಖಿಸುವ ಕೋಟೆಯ ಮಹತ್ವವನ್ನು ಆಧರಿಸಿ ಕೋಟೆ ಎಂದರೇನು ಎಂಬುದಕ್ಕೆ ನಿಖರವಾದ ಅರ್ಥ ನೀಡಲಾಗದು. ಏಕೆಂದರೆ ಇಂದು ಕೋಟೆಗಳ ಸ್ಥಾನವನ್ನು ಆತ್ಯಾಧುನಿಕ ಮಾರಕಾಸ್ತ್ರಗಳು ಪಡೆದುಕೊಂಡಿವೆ. ಹಾಗಾಗಿ ಇಂದು ಕೋಟೆಗಳು ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿವೆ. ಆದರೆ ಆಕಾಶ ಮಾರ್ಗದಲ್ಲಿ ಮನುಷ್ಯ ಹಾರಾಡುವುದಕ್ಕಿಂತ ಮುನ್ನ ಕೋಟೆಗಳು ರಾಜ್ಯದ ಉಳಿವು ಮತ್ತು ಅಳಿವಿನ ಸಂಕೇತಗಳಾಗಿ ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿದ್ದವು.

೩.೨. ಕೋಟೆಯ ಉಗಮ ಮತ್ತು ಬೆಳವಣಿಗೆ

ಇತಿಹಾಸಪೂರ್ವ ಕಾಲದಿಂದಲೂ ಮನುಷ್ಯ ತನ್ನ ಸಮುದಾಯ ಅಥವಾ ಪಶುಸಂಪತ್ತನ್ನು ರಕ್ಷಿಸಿಕೊಳ್ಳಲು ಒಂದಲ್ಲಾ ಒಂದು ರೀತಿಯಲ್ಲಿ ಪ್ರಯತ್ನಿಸುತ್ತಿದ್ದಾನೆ. ಏಕೆಂದರೆ ಆರಂಭದಲ್ಲಿ ಶತ್ರುಗಳಿಗಿಂತ ಕಾಡುಪ್ರಾಣಿಗಳಿಂದ ರಕ್ಷಣೆ ಪಡೆಯುವುದೇ ತ್ರಾಸದಾಯಕವಾಗಿತ್ತು. ಕ್ರಮೇಣ ಪಶುಗಳು ಸಂಪತ್ತಿನ ಸಂಕೇತವಾಗಿದ್ದರಿಂದ ಅವುಗಳ ರಕ್ಷಣೆಗಾಗಿಯೂ ಕೋಟೆಗಳ ನಿರ್ಮಾಣ ಶೈಲಿಯಲ್ಲಿ ಮಾರ್ಪಾಡು ಮಾಡಿಕೊಂಡನು. ಯಾವಾಗ ಜನಸಾಂಧ್ರತೆ ಹೆಚ್ಚಿ ಗ್ರಾಮ ಸಮುದಾಯ ಆರಂಭವಾಯಿತೋ ಅಂದಿನಿಂದ ಕೋಟೆಯ ರಕ್ಷಣಾ ತಂತ್ರಗಳು ಕಾರ್ಯರೂಪಕ್ಕೆ ಬಂದು ನಗರ, ರಾಜ್ಯಗಳ ಹುಟ್ಟಿಗೆ ನಾಂದಿಹಾಡಿತು. ನಗರ ರಾಜ್ಯಗಳ ಹುಟ್ಟು ಕೋಟೆಗಳು ಹೆಚ್ಚು ಪ್ರಾಮುಖ್ಯತೆ ಗಳಿಸಿಕೊಳ್ಳುವಂತೆ ಮಾಡಿತು. ಕಾಲಕಾಲಕ್ಕೆ ಯುದ್ಧ ನೀತಿಗಳಲ್ಲಾದ ಬದಲಾವಣೆ ಕೋಟೆಗಳ ವಾಸ್ತು ರಚನೆಯ ಕುರಿತು ಹಲವು ವಾಸ್ತು ಗ್ರಂಥಗಳನ್ನು ರಚನೆಯಗುವಂತೆ ಮಾಡಿತು. ಹಾಗಾಗಿಯೇ ಸಪ್ತಾಂಗಗಳು ಪ್ರಾಮುಖ್ಯತೆಗಳಿಸಿಕೊಂಡು ಅವುಗಳಲ್ಲಿ ದುರ್ಗ ಅತ್ಯಂತ ಮುಖ್ಯ ಅಸ್ತ್ರವಾಗಿ ರೂಪುಗೊಂಡಿತು.

೩.೨.೧. ವಿಶ್ವದ ಪ್ರಾಚೀನ ಕೋಟೆಗಳು

ಜಗತ್ತಿನ ಬಹುತೇಕ ಕೋಟೆಗಳ ನಿರ್ಮಾಣದ ಹಿಂದಿನ ಉದ್ದೇಶ ಯುದ್ಧ, ದಾಳಿ ಮೊದಲಾದವುಗಳಿಂದ ರಕ್ಷಣೆ ಪಡೆದುಕೊಳ್ಳುವುದೇ ಆಗಿತ್ತು. ಇತ್ತೀಚಿನ ಪುರಾತತ್ವೀಯ ಅಧ್ಯಯನಗಳು ಸೂಕ್ಷ್ಮಶಿಲಾಯುಗ ಕಾಲಕ್ಕಾಗಲೇ ಕೋಟೆಗಳ ನಿರ್ಮಾಣ ಕಾರ್ಯ ಆರಂಭವಾಗಿತ್ತೆಂದು ಖಚಿತಪಡಿಸುತ್ತವೆ. ಹಾಗಾಗಿ ಕೋಟೆಗಳು ಕೇವಲ ಯುದ್ಧಗಳಿಗಾಗಿಯೇ ನಿರ್ಮಾಣವಾಗಿರದೆ ಸಾಮಾನ್ಯರ ಬದುಕನ್ನು ಸಹ ಅವು ಪ್ರತಿನಿಧಿಸುತ್ತಿದ್ದವು ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಏಷ್ಯಾ ಮತ್ತು ಆಫ್ರಿಕಾ ಖಂಡಗಳನ್ನು ಹೊರತುಪಡಿಸಿದರೆ ಪ್ರಪಂಚದಲ್ಲಿನ ಕೋಟೆಗಳ ನಿರ್ಮಾಣದ ಹಿಂದಿನ ಉದ್ದೇಶವೇ ಬೇರೆಯಾಗಿತ್ತು. ಏಕೆಂದರೆ ಯೂರೋಪ್‌ನಂತಹ ಖಂಡಗಳು ಆರಂಭದಲ್ಲಿ ನಾಗರಿಕತೆಯ ವಿಚಾರದಲ್ಲಿ ಏಷ್ಯಾ ಮತ್ತು ಆಫ್ರಿಕಾ ಖಂಡಗಳಿಗಿಂತ ಬಹಳ ಹಿಂದೆ ಇದ್ದವು. ಏಷ್ಯಾ ಮೈನಾರ್, ಸಿಂದು ನದಿ ಹಳದಿ ನದಿ ಬಯಲಲ್ಲಿ ಮೆಸಪಟೋಮಿಯಾ(೩೩೦೦-೨೦೦೦), ಈಜಿಪ್ಪಿಯನ್(೩೨೦೦-೧೦೦೦), ಹರಪ್ಪನ್(೩೨೦೦-೧೩೦೦) ಚೀನಾ ನಾಗರಿಕತೆಗಳ(೨೦೦೦-೨೦೦) ಬೆಳವಣಿಗೆ[೧೪] ಕೋಟೆಗಳ ರಚನೆಗೆ ಮಹತ್ವದ ಕೊಡುಗೆ ನೀಡಿ ಜಗತ್ತಿನ ಇತರ ರಾಷ್ಟ್ರಗಳಿಗೆ ಮಾದರಿಯಾದವು. ಯೂರೋಪಿನಲ್ಲಿ ರೋಮ್ ನಾಗರಿಕತೆ ಮಾತ್ರ ಕೋಟೆಗಳ ವಾಸ್ತು ರಚನೆಗೆ ಪ್ರಾಮುಖ್ಯತೆ ನೀಡಿತ್ತು. ಆದುದರಿಂದ ಹಲವು ಶತಮಾನಗಳವರೆಗೆ ರೋಮ್‌ನಗರ ಅಭೇದ್ಯವಾಗಿಯೇ ಉಳಿದಿತ್ತು. ಆದರೆ ಮಧ್ಯಕಾಲೀನ ಪ್ರಪಂಚದಲ್ಲಿ ಕೋಟೆಗಳ ನಿರ್ಮಾಣದ ಹಿಂದಿನ ಉದ್ದೇಶ ವ್ಯಾಪಾರ, ವ್ಯವಹಾರದ ಮೇಲೆ ಏಕಸ್ವಾಮ್ಯ ಸಾಧಿಸುವುದಾಗಿತ್ತು. ಏಕೆಂದರೆ ಯೂರೋಪ್ ರಾಷ್ಟ್ರಗಳಿಗೆ ಆದಾಯದ ಮೂಲ ಕೇವಲ-ವ್ಯಾಪಾರ ವ್ಯವಹಾರವೇ ಆಗಿತ್ತು. ಅಮೇರಿಕಾ, ಏಷ್ಯಾ, ಆಫ್ರಿಕಾ ರಾಷ್ಟ್ರಗಳ ಮೇಲೆ ವ್ಯಾಪಾರದ ಏಕಸ್ವಾಮ್ಯ ಸಾಧಿಸಲು ನಡೆಸಿದ ಆರಂಭದ ಹೋರಾಟಗಳು ೧೪೫೩ರಲ್ಲಿ ಕಾನ್‌ಸ್ಟಾಂಟಿನೋಪಲ್ ಕೋಟೆಯನ್ನು ಆಟೋಮನ್ ಟರ್ಕ್‌ರು ವಶಪಡಿಸಿಕೊಂಡಿದ್ದು[೧೫] ಇಡೀ ವಿಶ್ವದ ಕೋಟೆಗಳ ವಾಸ್ತುರಚನೆಯೇ ಬದಲಾಗುವಂತೆ ಮಾಡಿತು. ಏಕೆಂದರೆ ಯುರೋಪಿನಲ್ಲಾದ ಧಾರ್ಮಿಕ ಸುಧಾರಣೆ ಮತ್ತು ಕೈಗಾರಿಕಾ ಕ್ರಾಂತಿಗಳು ಯುರೋಪಿಯನ್ ರಾಷ್ಟ್ರಗಳು ಜಗತ್ತಿನಾದ್ಯಂತ ನೌಕಾ ಯಾನವನ್ನು ಕೈಗೊಳ್ಳುವಂತೆ ಮಾಡಿತು. ಪ್ರಪಂಚದ ಎಲ್ಲ ಭೂಭಾಗವನ್ನು ಕಂಡುಹಿಡಿದು ಅಲ್ಲಿನ ನೈಸರ್ಗಿಕ ಸಂಪನ್ಮೂಲಗಳನ್ನು ತಮ್ಮ ರಾಷ್ಟ್ರಗಳಿಗೆ ಕೊಂಡೊಯ್ಯುವ ದೃಷ್ಟಿಯಿಂದ ಅಲ್ಲಿಯ ಸ್ಥಳೀಯರೊಂದಿಗೆ ಕಾದಾಟಕ್ಕಿಳಿದರು. ಆದರೆ ಪಾಶ್ಚಾತ್ಯ ಮದ್ದುಗುಂಡುಗಳ ಮುಂದೆ ಸ್ಥಳೀಯರು ನಿಲ್ಲದಾದರು. ಕ್ರಮೇಣ ಪಾಶ್ಚಾತ್ಯ ಆಯುಧೋಪಕರಣಗಳಿಂದ ರಕ್ಷಣೆ ಪಡೆದುಕೊಳ್ಳಲು ನೆರವಾಗುವ ವಾಸ್ತು ರಚನೆಗೆ ಆ ಮೂಲಕ ಕಾರಣರಾದರು. ಅಲ್ಲದೆ ಸಮುದ್ರದ ಅಂಚಿನಲ್ಲಿದ್ದಂತಹ ರಾಷ್ಟ್ರಗಳಿಗೆ ತಮ್ಮ ಬಂದರುಗಳ ಸುತ್ತಲೂ ಕೋಟೆಗಳನ್ನು ನಿರ್ಮಿಸಲು ಪಾಶ್ಚಾತ್ಯರ ಆಕ್ರಮಣದ ಹಿನ್ನೆಲೆಯು ಸಹ ಕಾರಣವಾಗಿತ್ತು.

ಹೀಗೆ ಪ್ರಪಂಚದಲ್ಲಿ ಪ್ರಾಚೀನ ಕಾಲದಿಂದ ಆಧುನಿಕದವರೆಗೆ ಕೋಟೆಗಳ ನಿರ್ಮಾಣದ ಹಿಂದೆ ಹಲವಾರು ಉದ್ದೇಶಗಳಿದ್ದು, ವಿಶೇಷವಾಗಿ ಯುರೋಪಿಯನ್ ವಾಸ್ತು ರಚನೆಯನ್ನು ಪ್ರಪಂಚದ ಎಲ್ಲಾ ರಾಷ್ಟ್ರಗಳಲ್ಲೂ ಕಾಣಬಹುದು.

ದಕ್ಷಿಣ ಮೆಸಪಟೋಮಿಯಾದ ಆದಿವಾಸಿಗಳು ಜೌಗಿನ ನೀರನ್ನು ಹೊರಹಾಕಿ ಹೊಲಗಳಿಗೆ ಕಾಲುವೆಗಳ ಮೂಲಕ ನೀರನ್ನು ತಮ್ಮ ವಸತಿ ಮತ್ತು ಕೃಷಿ ಭೂಮಿಯನ್ನು ಒದಗಿಸಿ ರಕ್ಷಿಸಲು ಕ್ರಿ.ಪೂ.೭೦೦೦–೬೦೦೦ರ[೧೬] ಅವಧಿಯಲ್ಲಿ ಪ್ರಯತ್ನಿಸಿರುವುದು ಉತ್ಖನನ ಸಂದರ್ಭದಲ್ಲಿ ಪತ್ತೆಯಾಗಿದೆ. ಬಹುಶಃ ಇದೇ ಉಲ್ಲೇಖ ಪ್ರಪಂಚದ ಪ್ರಾಚೀನ ಕೋಟೆಯ ಮೊದಲ ಉಲ್ಲೇಖ ಎಂದರೆ ಅತಿಶಯೋಕ್ತಿಯಾಗದು. ಕ್ರಿ.ಪೂ.೬೮೦೦ರಲ್ಲಿ ಗ್ರೀಕ್‌ನ ಉರುಕ್ ನಗರವು[೧೭] ಪ್ರಪಂಚದ ಮೊದಲ ಕೋಟೆಯನ್ನು ಹೊಂದಿದ ನಗರವಾಗಿದೆ. ಕ್ರಿ.ಪೂ.೫೦೦೦ ವರ್ಷಗಳಷ್ಟು ಹಿಂದೆಯೇ ಯುಫ್ರಿಟೀಸ್ ಮತ್ತು ಟೈಗ್ರೀಸ್ ನದಿ ದಂಡೆಗಳಲ್ಲಿ ಬ್ಯಾಬಿಲಾನ್, ನಿನೇವಾ, ಕಿಶ್, ಅಶುರ್, ಕಫ್‌ಜಾ, ನಿಪ್ಪುರ್, ಉರ್, ಲಾಗಾಷ್ ಮೊದಲಾದ ನಗರಗಳು ತಮ್ಮ ನಗರಗಳ ಸುತ್ತ ಭದ್ರವಾದ ಕೋಟೆ ಕೊತ್ತಲಗಳನ್ನು ಕಟ್ಟಿಕೊಂಡಿದ್ದವು.[೧೮] ಬ್ಯಾಬಿಲಾನ್ ನಗರದ ಸುತ್ತಲೂ ಹಮುರಬಿಯ ಕಾಲಕ್ಕೆ ಕೋಟೆ ೧೧ ಮೈಲುಗಳಷ್ಟು ವಿಸ್ತಾರ[೧೯] ನಿನೇವಾ ನಗರ ನಿರ್ಮಿಸಲ್ಪಟ್ಟಿತ್ತು. ಸೆನ್ನಾಚೆರಿಬ್(sennacherib)ನ ಕಾಲಕ್ಕೆ ೧೮,೦೦೦ ಎಕರೆ ಪ್ರದೇಶದಲ್ಲಿ ೧೫ ಮಹಾದ್ವಾರಗಳಿಂದ ಕೂಡಿದ ಕೋಟೆಯನ್ನು ಹೊಂದಿತ್ತು. ೧೮ ಕಾಲುವೆಗಳ ಮೂಲಕ ಈ ನಗರಕ್ಕೆ ನೀರನ್ನು ಸರಬರಾಜು ಮಾಡುತ್ತಿದ್ದರು.[೨೦] ಈ ಕೋಟೆ ೧೮೦ ಅಡಿ ಎತ್ತರವಿದ್ದು. ಸಾರ್ಗಾನ್ ದೊರೆಯ ಅರಮನೆ ೭೦೦ ಕೋಣೆಗಳಿಂದ ಕೂಡಿತ್ತು. ಒಂದು ಕೋಣೆಯ ಉದ್ದವೇ ೧೭೦ ಅಡಿಗಳಷ್ಟಿತ್ತು.[೨೧] ಕ್ರಿ.ಪೂ.೪೭೦೦ ವರ್ಷಗಳ ಹಿಂದೆ ಬಲ್ಗೇರಿಯಾ, ಪ್ರೊವಾಡಿಯಾ ಮೊದಲಾದ ಕಡೆ ೧೦೦ ಮೀಟರ್ ಸುತ್ತಳತೆಯ ಗೋಡೆಗೆ ೧.೫. ಮೀ.ನಿಂದ ೨ ಮೀ. ವರೆಗಿನ ದಪ್ಪದ ಕಲ್ಲುಗಳನ್ನು ಬಳಸಿದ್ದಾರೆ. ಕ್ರಿ.ಪೂ. ೩೨೦೦ರ ಶಿಲಾಯುಗಕ್ಕೆ ಸೇರಿದ ಸ್ಕಾಟ್‌ಲ್ಯಾಂಡಿನ ಬ್ರಾಡ್‌ಗರ್ ದೇವಾಲಯದ ಬಳಿ ಗೋಡೆಯೊಂದು ೪ ಮೀ.ದಪ್ಪ ೪. ಮೀ. ಎತ್ತರವಿರುವುದು ಪತ್ತೆಯಾಗಿದೆ.[೨೨]

ಕೈರೊ ನಗರದ ಮೆಂಫಿಸ್ ಬಳಿ ಸಾಮಾನ್ಯ ಜನರ ರಕ್ಷಣೆಗಾಗಿ ಹಾಗೂ ಮೆಂಫಿಸ್ ಎಂಬ ರಾಜನಿಂದ ನಿರ್ಮಿಸಲ್ಪಟ್ಟ ಜೆರಿಕೆ ನಗರ ಮತ್ತು ಟಯರ್, ಸಿಡಾನ್, ಬೈಬ್ಲೋಸ್[೨೩] ನಗರಗಳಲ್ಲಿ ಕ್ರಿ.ಪೂ.೨೦೦೦ ವೇಳೆಗೆ ಹಾಗೂ ಇದೇ ಕಾಲಕ್ಕೆ ಬಲಿಷ್ಟವಾದ ಕೋಟೆಗಳನ್ನು ಹೊಂದಿದ್ದವು. ಕ್ರಿ.ಪೂ. ೧೫೦೦ರಲ್ಲಿ ಶಿಲಾತಾಮ್ರಯುಗದ ಮಾಲ್ವ ನೆಲೆಯಲ್ಲಿ ಕೋಟೆಯ ಅವಶೇಷಗಳು ಪತ್ತೆಯಾಗಿವೆ.[೨೪] ಕ್ರಿ.ಪೂ. ೧೦೦೦ದ ವೇಳೆಗೆ ಟಿಯಾಹುವಾನಕೊ ನಗರ ೧೩೦೦೦ ಅಡಿ ಎತ್ತರದೊಂದು ಪೀಠ ಭೂಮಿಯ ಮೇಲೆ ೨೦ ಅಡಿ ಉದ್ದ ೧೬ ಅಡಿ ಎತ್ತರದ ಬೃಹತ್ ಕಲ್ಲಿನಲ್ಲಿ ೧೦ ಅಡಿ ಎತ್ತರದ ಬಾಗಿಲನ್ನು ಕೊರೆಯಲಾಗಿದೆ.[೨೫] ಕ್ರಿ.ಪೂ.೬೦೦ ವೇಳೆಗೆ ಜರ್ಮನಿಯ

ಹೆನ್ಸ್‌ಬರ್ಗ್ ನಗರ ಬೃಹದಾದ ಕೋಟೆಗಳ ನಿರ್ಮಾಣ ಕಲೆಯನ್ನು ಮಧ್ಯ ಯುರೋಪ್‌ನಿಂದ ಪಡೆದುಕೊಂಡಿತ್ತು. ಕ್ರಿಪೂ. ೨೨೦-೨೦೬ರಲ್ಲಿ ಷಿಹುವಾಂಗ್‌ಟಿ ಎಂಬ ಮಿಂಗ್ ದೊರೆಯು ೮೮೫೦ ಕಿ.ಮೀ. ಉದ್ದದ ಗೋಡೆಯನ್ನು ನಿರ್ಮಿಸಿದನು. ಆದರೆ ಅದರಲ್ಲಿ ೬,೨೫೯ ಕಿ.ಮೀ. ಮಾನವ ನಿರ್ಮಿತ ಗೋಡೆ, ೩೫೯ ಕಿ.ಮೀ. ಕಂದಕ ಹಾಗೂ ೨೨೩೨ ಕಿ.ಮೀ. ನೈಸರ್ಗಿಕ ಅಡತಡೆ, ಬೆಟ್ಟಗುಡ್ಡ, ನದಿ ಕಣಿವೆ ಪ್ರದೇಶ ಹಾದುಹೋಗಿದೆ.[೨೬]

ಕ್ರಿಪೂ. ೨ನೆಯ ಶತಮಾನಕ್ಕಗಲೇ ಬವೇರಿಯಾ ನಗರದಲ್ಲಿ ೭.೨. ಕಿ.ಮೀ. ವಿಶಾಲವಾದ ಕೋಟೆಯಿತ್ತು[೨೭] ಕ್ರಿಶ.೨೭೧-೨೭೫ರಲ್ಲಿ ರೋಮ್ ನಗರವನ್ನು ಸುತ್ತುವರಿದ ೧೯ ಕಿ.ಮೀ. ವಿಶಾಲವಾದ ಗೋಡೆಯು ೩.೫ ಮೀ. ದಪ್ಪ, ೬ಮೀ.ಎತ್ತರವಾಗಿ ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟಿತ್ತು. ಕೋಟೆಗೆ ಹೊಂದಿಕೊಂಡಂತೆ ೧೦೦ ಅಡಿ ಸುತ್ತಳತೆಯ ೩೮೩ ಕೊತ್ತಲ, ೭೦೨೦ ಕೋವಿಕಿಂಡಿ, ೧೮ ಮಹಾದ್ವಾರ ೫ ದಿಡ್ಡಿ ಬಾಗಿಲು, ೨೦೬೬ ಬೃಹತ್ ವೀಕ್ಷಣಾಕಿಂಡಿ[೨೮]ಗಳನ್ನು ಹೊಂದಿತ್ತು. ಆರಂಭದ ಮಧ್ಯಕಾಲೀನ ಬಹುತೇಕ ನಗರಗಳು ಸಾಮಾನ್ಯ ಕಲ್ಲಿನಿಂದಲೇ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಳ್ಳುತ್ತಿದ್ದವು. ೧೪ನೆಯ ಶತಮಾನದ ವೇಳೆಗೆ ಫಿರಂಗಿಗಳ ಬಳಕೆ ಹೆಚ್ಚಾಗಿದ್ದರಿಂದ ವೃತ್ತ ಮಾದರಿಯ ಗೋಡೆ, ಅಗಲ ಮತ್ತು ಆಳವಾದ ಕಂದಕಗಳ ನಿರ್ಮಾಣ ಹುಟ್ಟಿಕೊಂಡಿತು. ೧೯ನೆಯ ಶತಮಾನದ ವೇಳೆಗೆ ಮಾರಕವಾದ ಬಾಂಬರ್, ಶೆಲ್‌ಗಳನ್ನು ಬಳಸಲು ಆರಂಭಿಸಿದ್ದರಿಂದ ನಕ್ಷತ್ರಾಕಾರದ ಕೋಟೆ ಮತ್ತು ಬಂಕರ್‌ಗಳು ಹೆಚ್ಚು ಮಾನ್ಯತೆ ಪಡೆದುಕೊಂಡವು. ೨೦ರಿಂದ ೨೧ನೆಯ ಶತಮಾನಗಳಲ್ಲಿ ಕಬ್ಬಿಣ ಮತ್ತು ಸಿಮೆಂಟ್‌ಗಳಿಂದ ಆಧುನಿಕ ಯುದ್ಧ ಮಾದರಿಗೆ ಅನುಗುಣವಾಗಿ ಕೋಟೆಗಳು ನಿರ್ಮಾಣಗೊಂಡವು. ಈ ಕಾಲಘಟ್ಟದಲ್ಲಿ ವೈಮಾನಿಕ ಕಾಳಗಕ್ಕೆ ಹೆಚ್ಚು ಮಾನ್ಯತೆಗಳಿದ್ದರಿಂದ ಭೂಮಿಯ ಒಳಗೆ ನಿರ್ಮಾಣವಾಗುವ ಬಂಕರ್‌ಗಳು ಪ್ರಾಮುಖ್ಯತೆಗೆ ಬಂದವು.[೨೯]

ಹೀಗೆ ಪ್ರಪಂಚದ ಎಲ್ಲೆಡೆ ಆದಿಮ ಕಾಲಘಟ್ಟದಿಂದಲೂ ಬದಲಾದ ಯುದ್ಧ ತಂತ್ರಗಳಿಗೆ ಅನುಗುಣವಾಗಿ ಕೋಟೆಗಳ ರಚನಾ ಶೈಲಿಯು ಬೇರೆ ಬೇರೆಯಾಗಿ ರೂಪುಗೊಂಡರೂ ಇಂದಿಗೂ ಅವು ತನ್ನ ಮಹತ್ವವನ್ನು ಉಳಿಸಿಕೊಂಡಿವೆ.

೩.೨.೨. ಭಾರತದ ಕೋಟೆಗಳು

ಭಾರತದಲ್ಲಿ ಕೋಟೆಗಳ ಪ್ರಾಚೀನತೆಯನ್ನು ಸಿಂಧೂ ನಾಗರಿಕತೆಯ ಆರಂಭದಿಂದ ಗುರುತಿಸಲಾಗುತ್ತದೆ. ಇವರ ಕಾಲದ ಪ್ರತಿ ನಗರವೂ ಸುರಕ್ಷಿತ ಕೋಟೆಯನ್ನು ಹೊಂದಿತ್ತು. ಆದರೆ ಅವು ಧಾರ್ಮಿಕ ಮತ್ತು ಸರ್ಕಾರಿ ಉದ್ದೇಶಗಳೆರಡಕ್ಕೂ ಬಳಸಲ್ಪಟ್ಟಂತೆ ಕಂಡುಬರುತ್ತವೆ. ಹರಪ್ಪ ಮತ್ತು ಮೆಹೆಂಜೊದಾರೊ ನಗರಗಳಲ್ಲಿ ೩೦ರಿಂದ ೪೦ ಅಡಿ ಎತ್ತರ, ೪೦೦x೨೦೦

ಗಜ ವಿಸ್ತಾರವಿರುವ ಆಯತಾಕಾರದ ವೇದಿಕೆಯಿದೆ. ಅದರ ರಕ್ಷಣೆಗಾಗಿ ಕೋವಿಕಿಂಡಿಗಳನ್ನು ಗೋಡೆಗಳಲ್ಲಿ ಬಿಡಲಾಗಿತ್ತು.[೩೦] ಇದೇ ಕಾಲಘಟ್ಟದಲ್ಲಿ ದಕ್ಷಿಣದಲ್ಲಿ ಪಶುಪಾಲಕ ನವಶಿಲಾಯುಗ ಸಂಸ್ಕೃತಿಯಿತ್ತು; ಆಲ್ಚಿನ್ ಅವರು ದಕ್ಷಿಣದಲ್ಲಿ ನವಶಿಲಾಯುಗದ ಸಂಸ್ಕೃತಿ ಎತ್ತರದ ಬೆಟ್ಟದ ಮೇಲೆ ಗುಹೆ, ಕಲ್ಲಾಸರೆ ಬೆಟ್ಟದ ಎತ್ತರದ ಪ್ರದೇಶದಲ್ಲಿ ಕಟ್ಟಡ ರಚನೆ ಮಾಡಿಕೊಂಡು ನೆಲೆಗೊಂಡಿತ್ತೆಂದೂ ಅಭಿಪ್ರಾಯಪಟ್ಟಿದ್ದಾರೆ. ಇದು ಸಂಗನಕಲ್ಲು, ತೆಕ್ಕಲಕೋಟೆ, ಹಳ್ಳೂರು ಮೊದಲಾದ ಪ್ರದೇಶಗಳ ಉತ್ಖನನದಿಂದ ಖಚಿತಗೊಂಡಿದೆ. ಕೋಟ್‌ದಿಜಿ, ಕೋಟ್ರಾಸ್‌ಗಳಲ್ಲಿ ಹರಪ್ಪ ಪೂರ್ವ ಸಂಸ್ಕೃತಿಗೆ ಸಂಬಂಧಿಸಿದ ಬಲಿಷ್ಠವಾದ ಕಲ್ಲು ಮತ್ತು ಮಣ್ಣಿನ ಇಟ್ಟಿಗೆಯಿಂದ ನಿರ್ಮಿಸಲ್ಪಟ್ಟ ಕೋಟೆ ಗೋಡೆ ಮತ್ತು ಆಯತಾಕಾರದ ಗೋಪುರಗಳು[೩೧] ಉತ್ಖನನದ ಸಂದರ್ಭದಲ್ಲಿ ಪತ್ತೆಯಾಗಿದ್ದು ಹರಪ್ಪಕ್ಕಿಂತಲೂ ಪೂರ್ವದಲ್ಲೇ ಕೋಟೆಗಳಿದ್ದವೆಂದು ಸ್ಪಷ್ಟವಾಗುತ್ತದೆ. ಸಿಂದು ನಾಗರಿಕತೆಯ ಅವಸಾನದ ನಂತರ 'ದಾಸರು' ಪುರ ಎಂದು ಕರೆಯಲ್ಪಡುತ್ತಿದ್ದ ಗೋಡೆಗಳಿಂದ ರಕ್ಷಿಸಲ್ಪಟ್ಟ ಮನೆಗಳಲ್ಲಿ ವಾಸಿಸುತ್ತಿದ್ದರು. ಗ್ರಾಮ ಸಂಸ್ಕೃತಿ ಈ ಅವಧಿಯಲ್ಲಿ ಗಣನೀಯವಾಗಿ ಪ್ರಗತಿ ಕಂಡು ಪ್ರತಿ ಹಳ್ಳಿಯು ಕಾಪುಗೋಡೆಗಳನ್ನು ನಿರ್ಮಿಸಿಕೊಳ್ಳಲು ಆಸಕ್ತಿ ವಹಿಸಿದವು.[೩೧] ಕ್ರಮೇಣ ನಗರ ರಾಜ್ಯಗಳು ಹುಟ್ಟಿಕೊಂಡಂತೆಲ್ಲ ಕೋಟೆಗಳು ರಾಜ್ಯವನ್ನು ರಕ್ಷಿಸುವಲ್ಲಿ ಅನಿವಾರ್ಯವಾದ ಅಂಗವಾಗಿ ರಾಜನೀತಿಜ್ಞರಿಂದ ಸಪ್ತಾಂಗ ಸಿದ್ಧಾಂತ ರೂಪುಗೊಂಡಿತು. ಅದರಲ್ಲಿ ದುರ್ಗಕ್ಕೆ ನಾಲ್ಕನೆಯ ಸ್ಥಾನವನ್ನು ನೀಡಲಾಯಿತು. ಉತ್ತರ ವೈದಿಕ ಕಾಲಘಟ್ಟದಲ್ಲಿ ವೈಶಾಲಿ, ಮಿಥಿಲಾ ನಗರಗಳಿಗೆ ಸುಭದ್ರವಾದ ಗೋಡೆ, ಕಾವಲು ಗೋಪುರ, ಮಹಾದ್ವಾರ ಇದ್ದವೆಂದು ಜಾತಕಕಥೆಗಳು ಹೇಳುತ್ತವೆ. ಕ್ರಿ.ಪೂ. ೬ರಿಂದ ೭ನೆಯ ಶತಮಾನದ ವೇಳೆಗೆ ಗಿರಿವ್ರಜ(ರಾಜಗೃಹ) ಪ್ರಾಮುಖ್ಯತೆ ಗಳಿಸಿಕೊಂಡು ಅದರ ಸುತ್ತಲೂ ಬಿಂಬಸಾರನಿಂದ ಎರಡರಿಂದ ಮೂರು ಮೈಲಿ ಉದ್ದದ ಕೋಟೆ ನಿರ್ಮಿಸಲ್ಪಟ್ಟಿತು. ಈ ಪಟ್ಟಣಕ್ಕೆ ಬೆಟ್ಟ ಗುಡ್ಡಗಳೇ ರಕ್ಷಣೆ ನೀಡುವಂತಹ ನಿವೇಶನವನ್ನು ಆಯ್ಕೆ ಮಾಡಿದ್ದನು. ಕ್ರಿ.ಪೂ.೪ನೆಯ ಶತಮಾನದ ವೇಳೆಗೆ ವೈದಿಕ ಅರಸರು ತಮ್ಮ ರಾಜಧಾನಿಯ ರಕ್ಷಣೆಗಾಗಿ ಬಲಯುತ ಗೋಡೆಗಳನ್ನು ನಿರ್ಮಿಸಿದ್ದರೆಂದೂ, ಅವುಗಳ ತಳಪಾಯದಲ್ಲಿ ಕಲ್ಲಿನ ಜೋಡಣೆ, ಮೇಲ್ಭಾಗ ಹಸಿ ಮಣ್ಣಿನ ಇಟ್ಟಿಗೆಗಳನ್ನು, ಮರದಿಂದ ಮಾಡಿದ ಕಾವಲು ಗೋಪುರ ಹಾಗು ಮನೆಗಳು ಗೋಡೆಗೆ ಹೊಂದಿಕೊಂಡಿದ್ದವೆಂದು[೩೩] ಗ್ರೀಕ್ ಇತಿಹಾಸಜ್ಞರು ಸ್ಪಷ್ಟಪಡಿಸಿದ್ದಾರೆ. ಮಗಧ ಸಾಮ್ರಾಜ್ಯದ ಏಳಿಗೆಯಿಂದ ಪಾಟಲಿಪುತ್ರ ನಗರ ಮಾನ್ಯತೆ ಪಡೆದುಕೊಂಡಿತು. ಮೆಗಸ್ತಾನಿಸ್ ಈ ನಗರಕ್ಕೆ ಬಲವಾದ ಕಟ್ಟಿಗೆ ಗೋಡೆ, ೫೭೦ ಗೋಪುರ, ೬೪ ಬಾಗಿಲು ಇದ್ದವೆಂದು ಉಲ್ಲೇಖಿಸಿದ್ದಾನೆ. ಈ ಹಿನ್ನೆಲೆಯಿಂದಲೇ ಕೌಟಿಲ್ಯ ಕಟ್ಟಿಗೆಗೆ ಬಹುಬೇಗ ಬೆಂಕಿ ಹತ್ತುವ ಇಲ್ಲವೆ ಕೊಳೆಯುವ ಸಂಭವ ಇರುವುದರಿಂದ ಕೋಟೆ ಕೊತ್ತಲಗಳಿಗೆ ಮರವನ್ನು ಬಳಸದಂತೆ ಸಲಹೆ ನೀಡಿದ್ದಾನೆ[೩೪] ಹಾಗಾಗಿ ಗುಪ್ತರ ಕಾಲಕ್ಕೆ

ಕೋಟೆಗಳ ರಚನಾಶೈಲಿಯೇ ಬದಲಾಗಿ ಎತ್ತರವಾದ ಬಲಯುತವು ಆದಂತಹ ಬರುಜುಗಳು, ಅಗಲ ಮತ್ತು ಆಳವಾದ ಕಂದಕಗಳಿಂದ ಕೋಟೆ ಕೊತ್ತಲಗಳು ನಿರ್ಮಿಸಲ್ಪಟ್ಟವು. ಅದರಲ್ಲೂ ಗಿರಿ ದುರ್ಗಗಳು ಮಾತ್ರ ಹೆಚ್ಚು ಮಾನ್ಯತೆಗಳಿಸಿಕೊಂಡವು. ಕಾಲಿಂಜರ್, ಗ್ವಾಲಿಯರ್ ಚಿತ್ತೂರ್‌ಗಡ್, ರಣತಂಬೂರ್, ಬಿಕನೇರ್, ರಜಪುಟಾಣ್, ಕಾಂಗ್ರಾ, ಬನಸಾಲ, ಕಾಶ್ಮೀರ್[೩೫] ಮೊದಲಾದ ಕೋಟೆಗಳು ಮುಸ್ಲಿಂ ದಾಳಿಯಿಂದ ಅಭೇದ್ಯವಾಗಿ ಮಾರ್ಪಟ್ಟವು. ವಿಶೇಷವಾಗಿ ಮುಸ್ಲಿಮರ ಆಗಮನ ಹಿಂದೂಸ್ತಾನಕ್ಕೆ ಫಿರಂಗಿಯನ್ನು ಪರಿಚಯಿಸಿ ಕೋಟೆಗಳ ನಿರ್ಮಾಣ ಶೈಲಿಯೇ ಬದಲಾಗುವಂತೆ ಮಾಡಿತು. ಈ ಅವಧಿಯಲ್ಲಿ ಎತ್ತರವಾದ ಕಲ್ಲಿನಗೋಡೆ, ಆಳ ಮತ್ತು ಅಗಲವಾದ ಕಂದಕ, ಎಲ್ಲಾ ದಿಕ್ಕುಗಳಿಗೂ ಕೊತ್ತಲಗಳ ನಿರ್ಮಾಣ, ಕೋಟೆಗಳ ಸುತ್ತುಗಳ ಸಂಖ್ಯೆ ಹೆಚ್ಚಾಯಿತು. ಪ್ರಮುಖವಾಗಿ ಈ ಮಾದರಿಯಲ್ಲಿ ದೆಹಲಿ, ಆಗ್ರಾ, ಫತೇಪುರ್‌ಸಿಕ್ರಿ, ದೇವಗಿರಿ, ಬಿರಾರ್, ಗೋಲ್ಕೊಂಡ, ಪುರಂದರಗಡ ಮೊದಲಾದೆಡೆ ನಿರ್ಮಾಣವಾದವು. ದಕ್ಷಿಣದಲ್ಲಿ ಮೊಗಲರ ವಿರುದ್ಧ ಕಾದಾಡಲು ಶಿವಾಜಿ ಸುಮಾರು ೨೦೦ಕ್ಕೂ ಹೆಚ್ಚು ಕೋಟೆ–ಕೊತ್ತಲಗಳನ್ನು ನಿರ್ಮಿಸಿ ಗಡಿ ರಕ್ಷಣೆಗೆ ಹೆಚ್ಚು ಒತ್ತು ನೀಡಿದನು. ಬ್ರಿಟೀಷರ ಆಗಮನ ಭಾರತಕ್ಕೆ ಅಭೇದ್ಯ ಜಲದುರ್ಗಗಳನ್ನು ಪರಿಚಯಿಸುವ ಮೂಲಕ ಕೋಟೆಗಳು ಕ್ರಮೇಣ ತಮ್ಮ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುವಂತೆ ಮಾಡಿತು. ಏಕೆಂದರೆ ಇವರು ಪರಿಚಯಿಸಿದ ಯುದ್ಧ ನೀತಿ, ಮಾರಕಾಸ್ತ್ರಗಳ ಮುಂದೆ ಕೋಟೆಗಳು ತನ್ನ ಮಹತ್ವ ಕಳೆದುಕೊಂಡವು. ಈ ಕಾರಣಕ್ಕಾಗಿಯೇ ಬ್ರಿಟೀಷರ ಭಾರತದಲ್ಲಿದ್ದ ಸಾವಿರಾರು ಸಣ್ಣಪುಟ್ಟ ಪಾಳೆಪಟ್ಟುಗಳಿಂದ ಹಿಡಿದು ಮಹಾನ್ ಸಾಮ್ರಾಜ್ಯಗಳವರೆಗೂ ತಮ್ಮ ಚಾಣಾಕ್ಷ ನೀತಿಯನ್ನು ತೋರಿಸಲು ಸಾಧ್ಯವಾಗಿರುವುದು. ಇವರ ಕಾಲದಲ್ಲಿ ಪೋರ್ಟ್ ವಿಲಿಯಂ (ಕೋಲ್ಕತ್ತ) ಸೆಂಟ್‌ಜಾರ್ಜ್ ಕೋಟೆ (ಮದ್ರಾಸ್) ಮೊದಲಾದೆಡೆ ನಿರ್ಮಾಣಗೊಂಡಿವೆ.[೩೬]

ಬ್ರಿಟೀಷರು ಭಾರತವನ್ನು ಬಿಟ್ಟುಹೋದ ನಂತರ ಸ್ವತಂತ್ರ ಭಾರತವು ಯಾವ ಮಾದರಿಯ ಕೋಟೆಗಳ ನಿರ್ಮಾಣಕ್ಕೂ ಮುಂದಾಗದೆ ಕೇವಲ ಮಿಲಿಟರಿ ಶಕ್ತಿಯನ್ನು ಬಲಪಡಿಸುವತ್ತ ಮಾತ್ರ ಮುಂದಾಗಿದ್ದರಿಂದ ಕೋಟೆಗಳು ತಮ್ಮ ಮಹತ್ವವನ್ನು ಕಳೆದುಕೊಂಡವು.

೩.೨.೩. ಕರ್ನಾಟಕದ ಕೋಟೆಗಳು

ಕರ್ನಾಟಕದಲ್ಲಿ ಹಳ್ಳಿಗಳು ಹುಟ್ಟಿಕೊಂಡಂದಿನಿಂದ ೧೯ನೆಯ ಶತಮಾನದವರೆಗೂ ಅವುಗಳ ಸುತ್ತಲೂ ಮಣ್ಣಿನ ದಿಬ್ಬ, ಆಳವಾದ ಕಂದಕ, ಇಟ್ಟಿಗೆ ಇಲ್ಲವೆ ಕಲ್ಲಿನಿಂದ ಕೋಟೆ–ಕೊತ್ತಲಗಳ ನಿರ್ಮಾಣ ಇತ್ತೆಂದು ಇತ್ತೀಚಿನ ಅಧ್ಯಯನಗಳಿಂದ ತಿಳಿಯುತ್ತದೆ. ಕರ್ನಾಟಕದ ರಾಜಕೀಯ ಇತಿಹಾಸ ಬ್ರಹ್ಮಗಿರಿಯ ಶಾಸನದಿಂದಲೇ ಆರಂಭವಾಗುವುದರಿಂದ ಇದರಲ್ಲಿ ಉಲ್ಲೇಖವಿರುವ 'ಇಸಿಲ' ಎಂಬ ಪಟ್ಟಣ ಮೌರ್ಯರ ದಕ್ಷಿಣದ ಆಡಳಿತದ ಕೇಂದ್ರವಾಗಿತ್ತು. ಹಾಗಾಗಿ ಇದು ಕೋಟೆಯನ್ನು ಹೊಂದಿರುವ ಸಾಧ್ಯತೆಯಿದ್ದು ಕರ್ನಾಟಕದ ಮಟ್ಟಿಗೆ ಮೊದಲ ಕೋಟೆ ಎಂಬ

ಹೆಗ್ಗಳಿಕೆಗೆ ಪಾತ್ರವಾಗಿದೆ. ಕ್ರಿ.ಶ. ೧-೩ನೆಯ ಶತಮಾನದಲ್ಲಿ ಆಳ್ವಿಕೆ ನಡೆಸಿದ ಶಾತವಾಹನರು ಸನ್ನತಿ ಮತ್ತು ಚಂದ್ರವಳ್ಳಿ ಬಳಿ ಇಟ್ಟಿಗೆಗಳಿಂದ ನಿರ್ಮಿಸಲ್ಪಟ್ಟ ಕೋಟೆಯ ಅವಶೇಷಗಳು ಅತ್ಯಂತ ಪ್ರಾಚೀನವಾದವುಗಳಾಗಿವೆ. ನಂತರ ಕದಂಬರು ವರದಾ ನದಿ ಬಳಿ ಬನವಾಸಿಯ ಎಂಬಲ್ಲಿ ಕೋಟೆಯನ್ನು[೩೭] ಕಟ್ಟಿಸಿದರು. ಈ ಕೋಟೆಯು ಉತ್ತರ ದಕ್ಷಿಣವಾಗಿ ೮೫೦ಮೀ., ಪೂರ್ವ ಪಶ್ಚಿಮವಾಗಿ ೬೦೦ ಮೀ. ವಿಸ್ತೀರ್ಣ ಹಾಗೂ ಒಟ್ಟು ೨೧೪೦ ಮೀ ಉದ್ದವಿದೆ. ಪೂರ್ವದ ಗೋಡೆ ಹೆಚ್ಚು ಅಗಲ ಮತ್ತು ಬಲಿಷ್ಠವಾಗಿದ್ದು, ಬುಡದಲ್ಲಿ ೩೦ ಮೀ. ಸ್ವಲ್ಪಮಟ್ಟಿಗೆ ಮೇಲ್ಭಾಗ ೧೦ ಮೀ. ಅಗಲವಾಗಿ ಜಂಬಿಟ್ಟಿಗೆ ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಪಶ್ಚಿಮದ ದಿಡ್ಡಿ ಬಾಗಿಲು ೧೭ಮೀ. ಅಗಲ ೧೦ಮೀ ಎತ್ತರ; ಕೋಟೆ ಸುತ್ತಲೂ ಆಳವಾದ ಕಂದಕವನ್ನು ಹೊಂದಿದೆ(ಶ್ರೀಧರ ಹೆಚ್.ಜಿ, ೨೦೦೨, ಪೂರ್ವೋಕ್ತ, ಪುಟ.೧೫೩). ಇವರ ಕಾಲದ ಕೋಟೆಗಳನ್ನು ಉಚ್ಚಂಗಿದುರ್ಗ, ಹಾನಗಲ್ಲು, ಹಲಸಿ ಮತ್ತು ಅಣಜಿ ಮೊದಲಾದೆಡೆ ಕಾಣಬಹುದು. ತಲಕಾಡಿನಲ್ಲಿ ಗಂಗರಿಗಿಂತ ಪೂರ್ವದ ಜನವಸತಿ ಕೇಂದ್ರವಿದ್ದು, ಅದರ ಸುತ್ತ ದಿಬ್ಬ ಮತ್ತು ಕದಂಕ[೩೮] ಪತ್ತೆಯಾಗಿದೆ. ಕ್ರಿ.ಶ. ೫೪೩ರಲ್ಲಿ ಮೊದಲನೆಯ ಪುಲಕೇಶಿ ಬಾದಾಮಿಯಲ್ಲಿ ೧೫೦ಮೀ. ಎತ್ತರದ ಗುಡ್ಡದ ಮೇಲೆ ೫೦೦ಮೀ. ಉದ್ದದ ಆಂಡಾಕಾರದ ಕೋಟೆಯನ್ನು ನಿರ್ಮಿಸಿದನು. ಇದು ನಿರ್ದಿಷ್ಟವಾಗಿ ರಚನೆಯಾಗಿರದೆ ಗೋಡೆಯು ೨೦ರಿಂದ ೬ ಮೀ. ಎತ್ತರವಿದ್ದು. ಗೋಡೆಯು ಬುಡದಲ್ಲಿ ೬ ಮೀ. ಮೇಲ್ಭಾಗ ೨ ಮೀ. ಎತ್ತರವಿದೆ. (ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೫೩).

ರಾಷ್ಟ್ರಕೂಟರು ರಾಜಧಾನಿ ಮಾನ್ಯಖೇಟದ ಸುತ್ತಲೂ ೨೦ ಮೀ. ಅಗಲ, ೭.೫. ಮೀ. ಆಳದ ಕಂದಕವನ್ನು ನಿರ್ಮಿಸಿ ಅದಕ್ಕೆ ಸಣ್ಣ ಹೊಳೆಯಂತೆ ಭೀಮಾ ನದಿಯಿಂದ ನೀರನ್ನು ಹರಿಸುತ್ತಿದ್ದರಿಂದ ಅದು ಜಲದುರ್ಗವಾಗಿ ರೂಪುಗೊಂಡಿತ್ತು.[೩೯] ಇವರ ನಂತರ ಆಳ್ವಿಕೆ ನಡೆಸಿದ ಕಲ್ಯಾಣ ಚಾಳುಕ್ಯ ಮತ್ತು ಹೊಯ್ಸಳರ ಕಾಲದಲ್ಲಿ ಕೋಟೆ-ಕೊತ್ತಲಗಳು ನಿರ್ಮಿಸಲ್ಪಟ್ಟರೂ ಅವುಗಳಿಗೆ ಸಂಬಂಧಿಸಿದ ಯಾವು ಅವಶೇಷವು ದೊರೆಯುವುದಿಲ್ಲ. ಆದರೆ ವಿಜಯನಗರ ಸಾಮ್ರಾಜ್ಯ ಮತ್ತು ಬಹುಮನಿ ಸುಲ್ತಾನರ ಏಳಿಗೆ ಕರ್ನಾಟಕದಲ್ಲಿ ಕೋಟೆ-ಕೊತ್ತಲಗಳು ಮಹತ್ವದ ಸ್ಥಾನಗಳಿಸಿಕೊಳ್ಳುವಂತೆ ಮಾಡಿತು. ಇವರು ದೋಆಬ್ ಪ್ರದೇಶಗಳ ಮೇಲೆ ಹಕ್ಕು ಸಾಧಿಸಲು ತಮ್ಮ ಗಡಿ ಪ್ರಾಂತ್ಯಗಳ ಸುತ್ತಲೂ ಕೋಟೆ-ಕೊತ್ತಲಗಳನ್ನು ನಿರ್ಮಿಸಿದರು. ವಿಶೇಷವಾಗಿ ಇವರ ಕಾಲದಲ್ಲಿ ಫಿರಂಗಿಯ ಬಳಕೆಯು ಯುದ್ಧದ ಗತಿಯನ್ನೇ ಬದಲಾಗುವಂತೆ ಮಾಡಿತು. ಇವೆರಡೂ ಸಾಮ್ರಾಜ್ಯಗಳ ಅವಧಿಯಲ್ಲೇ ಪೋರ್ಚುಗೀಸ್ ಮತ್ತು ಬ್ರಿಟಿಷರ ಆಗಮನವು ಅತ್ಯಾಧುನಿಕ ಮಾರಕಾಸ್ತ್ರಗಳನ್ನು ಪರಿಚಯಿಸುವಂತೆ ಮಾಡಿತು. ಈ ಕಾರಣಕ್ಕಾಗಿಯೇ ಹೈದರ್-ಟಿಪ್ಪುವಿನ ಕಾಲದ ಕೋಟೆಗಳಲ್ಲಿ ಫ್ರೆಂಚ್ ವಾಸ್ತುವನ್ನು ಗುರುತಿಸಬಹುದಾಗಿದೆ. ಮಂಜರಾಬಾದ್‌ನಲ್ಲಿ ಟಿಪ್ಪು

ನಕ್ಷತ್ರಾಕಾರದ ಕೋಟೆಯನ್ನು ನಿರ್ಮಿಸಿ ಭಾರತಕ್ಕೆ ಫ್ರೆಂಚ್‌ವಾಸ್ತು ರಚನೆಯಿಂದಾಗುವ ಅನುಕೂಲಗಳನ್ನು ತೋರಿಸಿಕೊಟ್ಟನು. ಆದರೂ ಬ್ರಿಟಿಷರ ಕುಟೀಲ ನೀತಿಗಳಿಂದ ಇಷ್ಟೊಂದು ಅಭೇದ್ಯ ದುರ್ಗಗಳನ್ನು ಹೊಂದಿದ್ದರೂ ಆತ ಅವಸಾನ ಹೊಂದಿದ್ದು ವಿಪರ್ಯಾಸವೇ ಸರಿ. ಬ್ರಿಟಿಷರು ಕರ್ನಾಟಕದ ಬಹುತೇಕ ಕೋಟೆಗಳ ಅವಸಾನಕ್ಕೆ ಪರೋಕ್ಷವಾಗಿ ಕಾರಣಕರ್ತರಾಗಿದ್ದಾರೆ. ಏಕೆಂದರೆ ಸಣ್ಣಪುಟ್ಟ ಪಾಳೆಪಟ್ಟುಗಳಿಂದ ಹಿಡಿದು ಬೃಹತ್ ಸಾಮ್ರಾಜ್ಯಗಳವರೆಗೆ ಕೋಟೆಗಳನ್ನು ನಿರ್ಮಿಸಿಕೊಳ್ಳಲು ಇಲ್ಲವೆ ಇರುವ ಕೋಟೆಯನ್ನು ಬಲಿಷ್ಠಗೊಳಿಸಿಕೊಳ್ಳಲು ಅವಕಾಶ ನೀಡಿದರೆ ಬ್ರಿಟೀಷ್ ಸಾಮ್ರಾಜ್ಯಕ್ಕೆ ತೊಡಕಾಗಬಹುದೆಂದು ಬಹುತೇಕ ಕೋಟೆಗಳನ್ನು ಹಾಳುಗೆಡವಿದರು.[೮೦] ಇಷ್ಟೆಲ್ಲ ಅತಂತ್ರದ ಪರಿಸ್ಥಿತಿ ಇದ್ದರೂ ಬ್ರಿಟೀಷರ ಅವಧಿಯಲ್ಲೇ ಅತಿ ಹೆಚ್ಚು ಕೋಟೆ-ಕೊತ್ತಲಗಳೂ ಗ್ರಾಮ ಮಟ್ಟದಲ್ಲಿ ನಿರ್ಮಾಣವಾಗಿರುವುದು ವಿಶೇಷ ಎನಿಸುತ್ತದೆ. ಸ್ವಾತಂತ್ರ್ಯ ಬಂದ ನಂತರವೂ ಕೋಟೆ-ಕೊತ್ತಲಗಳ ನಿರ್ಮಾಣ ಹಳ್ಳಿಗಳಲ್ಲಿ ಇತ್ತೆಂದರೆ ಆಡಳಿತವರ್ಗ ಮತ್ತು ಸಾಮಾನ್ಯ ಜನರ ನಡುವಿನ ಸಂಬಂಧ ಹೇಗಿತ್ತು ಎಂಬುದು ಗೋಚರವಾಗುತ್ತದೆ.

೩.೨.೪. ತುಮಕೂರು ಜಿಲ್ಲೆಯ ಕೋಟೆಗಳು

ಜಿಲ್ಲೆಯಲ್ಲಿ ಕೋಟೆಗಳ ಇತಿಹಾಸ ಪ್ರಾಗಿತಿಹಾಸ ಕಾಲದಿಂದಲೇ ಆರಂಭವಾಗಿರುವುದಕ್ಕೆ ಸೂಕ್ಷ್ಮ ಒಳಹರಿವುಗಳು ಕಾಣಸಿಗುತ್ತವೆ. ಆದರೆ ಅದಕ್ಕೆ ಪೂರಕವಾದ ಪುರಾತತ್ವೀಯ ಕುರುಹುಗಳು ದೊರೆಯದಿದ್ದ ಕಾರಣ ಅವುಗಳನ್ನು ಖಚಿತಪಡಿಸಲು ಸಾಧ್ಯವಾಗುತ್ತಿಲ್ಲ. ಐಡಿಹಳ್ಳಿ[೮೧]ಯ ೧೪ನೆಯ ಶತಮಾನದ ಶಾಸನವೊಂದು ಪಾಂಡು ರಾಜಕುಮಾರರು ಆಳ್ವಿಕೆ ಮಾಡಿದ್ದರೆಂದು ಉಲ್ಲೇಖಿಸಿರುವ ಪ್ರದೇಶದಲ್ಲಿಯೇ ಬೃಹತ್‌ಶಿಲಾಯುಗಕ್ಕೆ ಸಂಬಂಧಿಸಿದ ಅವಶೇಷಗಳು ದೊರೆಯುತ್ತವೆ. ಜೊತೆಗೆ ಸ್ಥಳೀಯರು ಸಹ ಆ ಕೋಟೆಯನ್ನು ಪಾಂಡವರಿಗೆ ಕಟ್ಟಿಸಿದ್ದಾರೆಂದು ಹೇಳುತ್ತಾರೆ. ಬಹುಶಃ ಮೌರ್ಯ, ಶಾತವಾಹನರ ಕಾಲಕ್ಕಿನ್ನೂ ದಕ್ಷಿಣದಲ್ಲಿ ಬೃಹತ್ ಶಿಲಾಯುಗದ ಸಂಸ್ಕೃತಿ ಜೀವಂತ ಇತ್ತೆಂದು ಇವುಗಳಿಂದ ಭಾಸವಾಗುತ್ತದೆ. ಕಬ್ಬಿಣ ತಯಾರಿಕೆಯ ಬಗೆಗೆ ಅಪಾರ ಜ್ಞಾನವಿದ್ದ ಬೃಹತ್ ಶಿಲಾಯುಗದ ಜನರನ್ನು ಮೌರ್ಯ, ಶಾತವಾಹನ ಸಾಮ್ರಾಜ್ಯಗಳು ಓಲೈಸಿಕೊಳ್ಳಲು ಪ್ರಯತ್ನಿಸಿದರ ಫಲವೇ ಅವರ ಹಟ್ಟಿಗಳ ಸುತ್ತಲೂ ಕೋಟೆ-ಕೊತ್ತಲಗಳು ನಿರ್ಮಾಣವಾಗಿರುವುದು. ಈ ಹಿನ್ನೆಲೆಯಲ್ಲಿ ಜಿಲ್ಲೆಯಲ್ಲಿ ಪಾಂಡು ರಾಜಕುಮಾರರು ಕೋಟೆ ಕಟ್ಟಿ ಆಳ್ವಿಕೆ ಮಾಡಿದರೆಂಬ ಐತಿಹ್ಯಗಳು ಶಾಸನಗಳಲ್ಲೂ ಸಹ ದಾಖಲಿಸಲ್ಪಟ್ಟಿವೆ.

ಜಿಲ್ಲೆಯಲ್ಲಿ ಯಾವುದೇ ನದಿ ಸಂಚಯಗಳಿಲ್ಲದ ಕಾರಣ ಹರಿಯುವ ಹಳ್ಳ-ಕೊಳ್ಳಗಳಿಗೆ ಅಡ್ಡಲಾಗಿ ಕೆರೆ-ಕಟ್ಟೆಗಳನ್ನು ಕಟ್ಟಿಕೊಂಡು ಅದರ ಕೆಳಗೆ ಸ್ಥಳದುರ್ಗಗಳನ್ನು ನಿರ್ಮಿಸಿಕೊಂಡಿದ್ದಾರೆ. ಅದೇ ರೀತಿ ಜಿಲ್ಲೆಯಾದ್ಯಂತ ಬಹು ಎತ್ತರದ ಬೆಟ್ಟ ಗುಡ್ಡಗಳಿದ್ದು ಪಾಳೆಯಪಟ್ಟುಗಳಿಗೆ ಬೇಕಾದ ಭದ್ರತೆಯನ್ನು ಗಿರಿದುರ್ಗಗಳು ಒದಗಿಸಿದ್ದವು. ಇಲ್ಲಿಯ ಕೋಟೆಗಳ ವಿಶೇಷತೆಯೆಂದರೆ ಸಾಮಂತರು,

ಪಾಳೆಪಟ್ಟುಗಳು, ಅಧಿಕಾರಿ ವರ್ಗ ಹಾಗೂ ಸಾಮಾನ್ಯ ಜನರಿಂದಲೂ ನಿರ್ಮಿಸಲ್ಪಟ್ಟಿವೆ. ಇಲ್ಲಿಯ ಬಹುತೇಕ ಕೋಟೆಗಳು ಯಾವುದೋ ಸಾಮ್ರಾಜ್ಯ ಅಥವಾ ಪಾಳೆಪಟ್ಟುಗಳಿಗೆ ರಕ್ಷಣೆ ನೀಡುವ ಕಾರಣಕ್ಕಾಗಿ ನಿರ್ಮಾಣಗೊಂಡಂತಹವುಗಳಾಗಿವೆ. ಆದುದರಿಂದ ಇವು ಕರ್ನಾಟಕದ ಚರಿತ್ರೆಯಲ್ಲಿ ಮಹತ್ವದ ಸ್ಥಾನವನ್ನೇನು ಪಡೆದಿಲ್ಲ. ಏಕೆಂದರೆ ಇವರ ಆದಾಯದ ಮೂಲವೂ ಅಲ್ಪ ಪ್ರಮಾಣದಲ್ಲಿತ್ತು. ತಮಗೆ ಸಿಗುವ ಸೀಮಿತ ಸಂಪನ್ಮೂಲಗಳಿಂದ ಸ್ಥಳೀಯ ಮಾಧ್ಯಮವನ್ನು ಬಳಸಿಕೊಂಡೇ ಕೋಟೆ-ಕೊತ್ತಲ ನಿರ್ಮಿಸಿಕೊಂಡಿರುವುದು ಕಂಡುಬರುತ್ತದೆ.

ವಿಜಯನಗರ ಕಾಲಘಟ್ಟಕ್ಕೆ ಜಿಲ್ಲೆಯಲ್ಲಿ ೨೦೦ಕ್ಕೂ ಹೆಚ್ಚು ಕೋಟೆ-ಕೊತ್ತಲಗಳು ನಿರ್ಮಾಣವಾಗಲು ಈ ಅಂಶವೇ ಕಾರಣವಾಗಿತ್ತು. ಇವುಗಳಲ್ಲಿ ಬಹುತೇಕವು ಹೈದರ್-ಟಿಪ್ಪುವಿನ ಕಾಲಘಟ್ಟದಲ್ಲಿ ಹಾಳುಗೆಡವಲ್ಪಟ್ಟರೇ ಅಭೇದ್ಯವಾದಂತಹವುಗಳನ್ನು ಫ್ರೆಂಚ್ ವಾಸ್ತುವಿನ ಮೂಲಕ ನವೀಕರಿಸಿ ಮತ್ತಷ್ಟು ಬಲಿಷ್ಠಪಡಿಸಲಾಯಿತು. ಆದರೆ ಟಿಪ್ಪುವಿನ ಅಂತ್ಯವು ಜಿಲ್ಲೆಯಲ್ಲಿ ಬಲಿಷ್ಠ ಕೋಟೆಗಳು ಸಹ ಅವಸಾನ ಹೊಂದುವಂತೆ ಮಾಡಿತು. ವಿಶೇಷವಾಗಿ ಕಳ್ಳಕಾಕಕರು, ಅಧಿಕಾರಿ ವರ್ಗದವರ ದರ್ಪದಿಂದ ರಕ್ಷಣೆ ಪಡೆಯಲು ಗ್ರಾಮ ರಕ್ಷಣಾವಾಸ್ತು ಜಿಲ್ಲೆಯಾದ್ಯಂತ ಏಳಿಗೆ ಹೊಂದಿತು.

೩.೩. ಕೋಟೆಯ ಲಕ್ಷಣಗಳು

ಕೋಟೆ ಎಂದರೆ ಕೇವಲ ಗೋಡೆಯೊಂದನ್ನು ಮಾತ್ರ ಹೊಂದಿರುವುದಿಲ್ಲ. ಅದು ಕಾಲಕಾಲಕ್ಕೆ ಯುದ್ಧ ನೀತಿ, ಆಯುಧೋಪಕರಣಗಳಿಗೆ ಅನುಗುಣವಾಗಿ ಹಲವಾರು ರಕ್ಷಣಾ ತಂತ್ರಗಳನ್ನು ಹೊಂದಿದ್ದಾಗ ಮಾತ್ರ ಅದು ಕೋಟೆ ಎಂದು ಕರೆಸಿಕೊಳ್ಳಲು ಸಾಧ್ಯವಾಗುತ್ತದೆ. ಆದುದರಿಂದ ಕೌಟಿಲ್ಯ, ಮನು, ಶುಕ್ರ, ಕಾಮಾಂದಕ ಮೊದಲಾದ ರಾಜನೀತಿಜ್ಞರು ಕೋಟೆ ಎಂದರೆ ಹೇಗಿರಬೇಕು ಎಂಬುದನ್ನು ವಿಸ್ತಾರವಾಗಿ ವಿಷದಪಡಿಸಿದ್ದಾರೆ. ಆರಂಭದಲ್ಲಿ ಮಣ್ಣಿನ ದಿಬ್ಬವನ್ನು ಏರಿಸುವುದೋ, ಇಲ್ಲವೋ ಆಳವಾದ ಕಂದಕವನ್ನು ತೋಡುವುದೋ ಇಲ್ಲವೇ ಮರದ ಬೊಂಬುಗಳನ್ನು ನೆಟ್ಟು ತಮ್ಮ ಮೇಲೆ ಶತ್ರುಗಳು ನುಗ್ಗಿ ಬರದಂತೆ ತಡೆಯಲು ಮತ್ತು ತಾವು ಸುಭದ್ರವಾದ ಸ್ಥಿತಿಯಲ್ಲಿ ನಿಂತು ಅವರ ವಿರುದ್ಧ ಹೋರಾಡಲು ಅನುಕೂಲಗಳಿರುವ ಕೋಟೆ ಕೊತ್ತಲಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು.

೩.೩.೧. ನಿವೇಶನದ ಆಯ್ಕೆ

ಕೋಟೆಗಳ ರಚನೆಯಲ್ಲಿ ನಿವೇಶನದ ಆಯ್ಕೆ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಏಕೆಂದರೆ ಶತ್ರುಗಳು ಕೋಟೆಗೆ ಮುತ್ತಿಗೆ ಹಾಕಿದಾಗ ಬಹುಕಾಲದವರೆಗೂ ಅವರಿಗೆ ವಶವಾಗದಿರುವಂತೆ ನೋಡಿಕೊಳ್ಳಲು ಒಳಗಿನವರಿಗೆ ಕೋಟೆ ಅತ್ಯಂತ ಅವಶ್ಯಕವಾದ ನೀರು, ಆಹಾರಧಾನ್ಯ, ಪಶುಗಳಿಗೆ ಹುಲ್ಲು ನೈಸರ್ಗಿಕವಾಗಿಯೇ ಹೆಚ್ಚಾಗಿ ಸಿಗುವಂತಹ ಪ್ರದೇಶಗಳಲ್ಲಿ ಅಭೇದ್ಯ ವಾತಾವರಣ ಇರುವಲ್ಲಿ ಕಟ್ಟಿಕೊಳ್ಳಬೇಕಾಗುತ್ತದೆ. ಇಲ್ಲವೆಂದರೆ ಬಹುಬೇಗ ಶತ್ರುಗಳಿಗೆ ವಶವಾಗಬೇಕಾಗುತ್ತದೆ.

ತುಮಕೂರು ಜಿಲ್ಲೆಯಲ್ಲಿ ಗಿರಿದುರ್ಗ ಮತ್ತು ಸ್ಥಳದುರ್ಗಗಳು ಮಾತ್ರ ಇರುವುದರಿಂದ ಗಿರಿಗಳಲ್ಲಿ ಕಂಡುಬರುವ ನೈಸರ್ಗಿಕ ಕುಳಿ, ಕಂದಕಗಳಿಗೆ ತಡೆಗೋಡೆಯನ್ನು ಕಟ್ಟಿ ನೀರಿನ ಸಂಗ್ರಹಣೆ ಮಾಡಿಕೊಂಡಿದ್ದಾರೆ. ಆದರೆ ಬಹುತೇಕ ಸ್ಥಳದುರ್ಗಗಳು ಕೆರೆಗಳ ಕೆಳಗೆ ನಿರ್ಮಾಣವಾಗಿದ್ದು, ಕೆರೆಯ ನೀರನ್ನೇ ದಿನನಿತ್ಯದ ಕಾರ್ಯಗಳಿಗೆ ಬಳಸಿಕೊಳ್ಳುತ್ತಿದ್ದರು. ವಿಶೇಷವಾಗಿ ಜಿಲ್ಲೆಯಲ್ಲಿ ಬಹುತೇಕ ಕೋಟೆಗಳು ಬೆಟ್ಟಗುಡ್ಡಗಳ ಮೇಲೆ ಇಲ್ಲವೆ ಅದರ ಸಮೀಪವೇ ನಿರ್ಮಾಣ ಆಗಿರುವುದರಿಂದ ಶತ್ರುಗಳಿಗೆ ಕೋಟೆ-ಕೊತ್ತಲಗಳು ವಶವಾದರೂ, ಬೆಟ್ಟದಲ್ಲಿರುವ ಗುಪ್ತಮಾರ್ಗಗಳ ಮೂಲಕ ತಪ್ಪಿಸಿಕೊಳ್ಳುವ ಅಥವಾ ಅವುಗಳಲ್ಲಿಯೇ ರಕ್ಷಣೆ ಪಡೆದುಕೊಳ್ಳಲು ಅವಕಾಶವಿರುತ್ತಿತ್ತು. ಹಾಗಾಗಿ ಜಿಲ್ಲೆಯ ಬಹುತೇಕ ಪಾಳೆಪಟ್ಟುಗಳು ಕೋಟೆ-ಕೊತ್ತಲಗಳ ನಿರ್ಮಾಣದ ವಿಷಯದಲ್ಲಿ ನಿವೇಶನದ ಆಯ್ಕೆಗೆ ಹೆಚ್ಚು ಮಹತ್ವ ನೀಡಿದ್ದಾರೆ. ಬಹುಶಃ ಜಿಲ್ಲೆಯಲ್ಲಿ ಒಮ್ಮೆ ರಾಜಧಾನಿ ಕೇಂದ್ರವು ಶತ್ರುಗಳಿಂದ ನಾಶವಾದರೆ ಅದನ್ನು ಜೀರ್ಣೋದ್ಧಾರ ಮಾಡುವ ಗೋಜಿಗೆ ಹೋಗದೆ ಬೇರೊಂದೆಡೆ ಸುರಕ್ಷಿತ ನಿವೇಶನವನ್ನು ಆಯ್ಕೆ ಮಾಡಿ ಹೊಸದಾಗಿ ಕೋಟೆಯನ್ನು ನಿರ್ಮಿಸಿ ಕೊಂಡಿರುವುದು ಈ ಉದ್ದೇಶಕ್ಕೆ ಇರಬೇಕು. ಉದಾಹರಣೆಗೆ ನಿಡುಗಲ್ಲು ಚೋಳರು-ಗೋವಿಂದವಾಡಿ, ಹೆಂಜೇರು, ನಿಡುಗಲ್ಲು, ಗುಂಡ್ಲಹಳ್ಳಿಗಳಿಗೆ ಅದೇ ರೀತಿ ಮಹಾನಾಡ ಪ್ರಭುಗಳು-ಮುಮ್ಮಡಿ ಪಟ್ಟಣ, ಬಿಜವರ, ಸಿದ್ಧಾಪುರ, ಮಧುಗಿರಿ, ಮಿಡಿಗೇಶಿಗಳಿಗೆ ತಮ್ಮ ರಾಜಧಾನಿ ಕೇಂದ್ರಗಳನ್ನು ಬದಲಾಯಿಸಿದ್ದಾರೆ.

೩.೩.೨. ಕೋಟೆಗಳ ವಿನ್ಯಾಸ

ಕೌಟಿಲ್ಯ, ಮನು, ಶುಕ್ರ, ಕಮಾಂದಕ ಮೊದಲಾದ ರಾಜನೀತಿಜ್ಞರು ಜಲದುರ್ಗ, ಗಿರಿದುರ್ಗ, ವನದುರ್ಗ ಮೊದಲಾದ ಕೋಟೆ-ಕೊತ್ತಲಗಳ ವಿನ್ಯಾಸವನ್ನು ವಿವರಿಸಿದ್ದಾರೆ. ಸಾಮಾನ್ಯವಾಗಿ ಇವರು ತಮ್ಮ ಕೃತಿಗಳಲ್ಲಿ ರಾಜ್ಯದ ನಾಲ್ಕು ದಿಕ್ಕುಗಳಲ್ಲಿ ಯುದ್ಧೋಚಿತವೂ, ದೈವಿಕವೂ ಆದ ದುರ್ಗವನ್ನು ರಚಿಸಬೇಕು ಎಂದಿದ್ದಾರೆ. ದೇಶದ ಮಧ್ಯಪ್ರದೇಶದಲ್ಲಿ ನದಿಸಂಗಮ ಇಲ್ಲವೇ ಎಂದಿಗೂ ಬತ್ತಿಹೋಗದ ಮಡುವು, ಸರೋವರ ಅಥವಾ ಕೆರೆಗಳ ಸಮೀಪದಲ್ಲಿ ವೃತ್ತ, ಚೌಕ, ಆಯತ, ಅಂಡಾಕಾರ, ಗಜಪುಷ್ಪಾಕಾರ ಮೊದಲಾದ ಶೈಲಿಗಳಲ್ಲಿ ಕೋಟೆಯನ್ನು ನಿರ್ಮಿಸಿಕೊಳ್ಳಬೇಕೆಂದು ಹೇಳಿವೆ.[೬೨]

ಜಿಲ್ಲೆಯಲ್ಲಿ ವಾಸ್ತು ನಿಪುಣರ ಸಲಹೆಯಂತೆ ಕೋಟೆಗಳು ರಚನೆಯಾದರೂ ಅವುಗಳಲ್ಲಿ ಸ್ಥಳೀಯ ಪರಿಸರಕ್ಕೆ ಅನುಕೂಲವಾದ ಲಕ್ಷಣಗಳನ್ನೇ ಹೆಚ್ಚಾಗಿ ಕಾಣಬಹುದು. ವಾಸ್ತುಶಾಸ್ತ್ರ ಗ್ರಂಥಗಳು ಕೋಟೆಗೆ ಮೂರು ಸುತ್ತುಗಳಲ್ಲಿ ಕಂದಕ ಇರಬೇಕೆಂದು ಹೇಳಿವೆ. ಆದರೆ ಜಿಲ್ಲೆಯ ಯಾವ ಕೋಟೆಯಲ್ಲೂ ಈ ವಿಧಾನ ಬಳಕೆಯಾಗಿಲ್ಲ ಅಲ್ಲದೆ ಇಲ್ಲಿಯ ಬಹುತೇಕ ಕೋಟೆಗಳಿಗೆ ವಿನ್ಯಾಸವೇ ತಮಗೆ ಅನುಕೂಲವಿರುವ ಕಡೆ ಮಾತ್ರ ಕೋಟೆಗೋಡೆಯನ್ನು ಕಟ್ಟಿಕೊಂಡಿದ್ದಾರೆ.

ಇಲ್ಲಿಯ ಸ್ವಾಭಾವಿಕ ಸಂಪತ್ತೇ ಕೋಟೆಗೋಡೆಯಂತೆ ಅಭೇದ್ಯವಾಗಿ ರೂಪುಗೊಂಡಿರುವುದರಿಂದ ಬಹುತೇಕ ಕಡೆ ಕೋಟೆ ಗೋಡೆಯ ಅನಿವಾರ್ಯತೆಯೇ ಬಿದ್ದಿಲ್ಲ. ಆದರೂ ಕೋಟೆ ರಚಿಸುವಲ್ಲಿ ಇವರು ಅನುಸರಿಸುವ ಕೆಲವೊಮ್ಮೆ ನಿಯಮ ಆಧುನಿಕ ಎನಿಸುತ್ತದೆ. ಏಕೆಂದರೆ ಬೆಟ್ಟಗುಡ್ಡಗಳಲ್ಲಿ ಯಾವ ಋತುಮಾನದಲ್ಲಿ ಯಾವ ದಿಕ್ಕಿಗೆ ರಭಸವಾದ ಗಾಳಿ ಬೀಸುತ್ತದೆ ಅದಕ್ಕೆ ತಡೆಯಾಗಿ ಗೋಡೆಯಾಗಿ ಹೇಗೆ ಕೋಟೆ ಕಟ್ಟಬೇಕೆಂಬ ತಂತ್ರ ಜಿಲ್ಲೆಯ ಬಹುತೇಕ ಕೋಟೆಗಳಲ್ಲಿ ಕಂಡುಬರುತ್ತದೆ. ಜಿಲ್ಲೆಯ ರಕ್ಷಣಾ ಕೇಂದ್ರಿತ ಕೋಟೆಗಳು ಚೌಕ ಮಾದರಿಯಲ್ಲಿ (ಸಿರಾ ಕೋಟೆ ಚೌಕ ಮಾದರಿಯಲ್ಲಿದ್ದರೆ) ಗಿರಿದುರ್ಗಗಳಲ್ಲಿ ಬೆಟ್ಟದ ಎರಡು ಬದಿಗೆ ಹೊಂದಿಕೊಂಡಂತೆ ಅರ್ಧಚಂದ್ರಾಕಾರವಾಗಿದ್ದು, ತುದಿ ಭಾಗದಲ್ಲಿ ಮಾತ್ರ ವೃತ್ತ ವಿನ್ಯಾಸವನ್ನು ಹೊಂದಿವೆ. ಗ್ರಾಮಗಳಲ್ಲಿ ಮಾತ್ರ ಚೌಕ, ಆಯತ, ವೃತ್ತ ಮಾದರಿಯ ವಿನ್ಯಾಸ ಕಂಡುಬರುತ್ತದೆ. ಕೋಟೆಗಳ ವಿನ್ಯಾಸವು ಜಿಲ್ಲೆಯಲ್ಲಿ ಬದಲಾದ ಯುದ್ಧನೀತಿ, ಮಾರಕಾಸ್ತ್ರಗಳ ಆವಿಷ್ಕಾರಗಳಿಗೆ ಅನುಗುಣವಾಗಿ ನಿರಂತರ ಮಾರ್ಪಾಡಾಗುತ್ತಿದ್ದದ್ದು ವಿಸ್ತರಿಸಲ್ಪಟ್ಟ ಕೋಟೆ ಗೋಡೆಗಳಿಂದ ತಿಳಿಯುತ್ತದೆ.

೩.೩.೩. ಕೋಟೆಯ ರಚನಾ ಕ್ರಮ

ಸಾಮಾನ್ಯವಾಗಿ ಕೋಟೆಯ ರಚನೆಯ ಹಿಂದಿನ ಆಯಾಯ ಪರಿಸರದಲ್ಲಿನ ಭಿನ್ನತೆ, ಹವಾಗುಣ, ರಾಜಕೀಯ ಭದ್ರತೆ, ಆರ್ಥಿಕ ಸಂಪನ್ಮೂಲ, ನೈಸರ್ಗಿಕ ರಕ್ಷಣೆಯ ಅಂಶಗಳನ್ನು ಗಮನಿಸಬೇಕಾಗುತ್ತದೆ. ಕಾಲಕಾಲಕ್ಕೆ ಯುದ್ಧತಂತ್ರಗಳಲ್ಲಾದ ಬದಲಾವಣೆ ಹಾಗೂ ಹೊಸ ಮಾದರಿಯ ಆಯುಧೋಪಕರಣಗಳ ಆವಿಷ್ಕಾರವು ಕೋಟೆಗಳ ರಚನಾ ಕ್ರಮವನ್ನೇ ಬದಲಾಯಿಸುತ್ತದೆ. ಜಿಲ್ಲೆಯಲ್ಲಿ ಅವೈಜ್ಞಾನಿಕ ರಚನಾ ಕ್ರಮವಿರುವುದೇ ಸ್ಥಳೀಯವಾಗಿ ಸಿಗುವಂತಹ ಕಾಡುಗಲ್ಲುಗಳನ್ನು ನಯಗೊಳಿಸದಂತೆ, ಕೆಲವೆಡೆ ಉಳಿಯಿಂದ ಕತ್ತರಿಸಲ್ಪಟ್ಟ ಗುರುತುಗಳು ಸಹ ಕಾಣುವಂತೆ ಅವೈಜ್ಞಾನಿಕ ರಚನಾಕ್ರಮ ಬಳಕೆಯಾಗಿದೆ. ಗೋಡೆಯ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಕಡಿತಗೊಳಿಸುವತ್ತ ಗಮನಿಸಿದರೇ ಹೊರತು ಕೋಟೆಯನ್ನು ಅಭೇದ್ಯವನ್ನಾಗಿಸುವತ್ತ ಗಮನಕೊಟ್ಟಂತೆ ಕಾಣುವುದಿಲ್ಲ. ಏಕೆಂದರೆ ಅಭೇದ್ಯತೆಯಿಂದ ಕೂಡಿದ ಬೆಟ್ಟಗಳೇ ಕೋಟೆಗಳಂತೆ ರಕ್ಷಣೆ ನೀಡುವುದರಿಂದ ಸ್ಥಳೀಯವಾಗಿ ಸಿಗುವ ಸಂಪನ್ಮೂಲಗಳನ್ನು ಯತಾವತ್ತಾಗಿ ಬಳಸಿಕೊಂಡಿದ್ದಾರೆ. ಆದರೆ ವಿಜಯನಗರ ಕಾಲಘಟ್ಟಕ್ಕೆ ಯುದ್ಧ ಮಾದರಿ ಬದಲಾದ್ದರಿಂದ ಗೋಡೆಗಳ ರಚನಾ ಮಾದರಿಯು ಬದಲಾಯಿತು. ಮದ್ದುಗುಂಡು, ಫಿರಂಗಿಗಳಿಂದ ಹಾಳಾಗದಂತೆ ಗೋಡೆ ಹಿಂಚಾಚಿದ, ಮುಂಚಾಚಿದ ಮಾದರಿಯಲ್ಲಿ ಗೋಡೆಯ ಅಗಲವನ್ನು ವಿಸ್ತರಿಸಲಾಯಿತು. ಹೈದರ್–ಟಿಪ್ಪುವಿನ ಅವಧಿಯಲ್ಲಿ ಮಧುಗಿರಿ, ಪಾವಗಡ, ಮಿಡಿಗೇಶಿ, ಚೆನ್ನರಾಯನದುರ್ಗ ಮೊದಲಾದ ಕೋಟೆಗಳಿಗೆ ಫ್ರೆಂಚ್ ಮಾದರಿಯ ರಚನಾ ಕ್ರಮವನ್ನು ಬಳಸಿದ್ದಾರೆ. ಆದರೆ ಜಿಲ್ಲೆಯಾದ್ಯಂತ ಇರುವ ರಕ್ಷಣಾಕೇಂದ್ರ ಮತ್ತು ಗ್ರಾಮ ರಕ್ಷಣಾ ವಾಸ್ತುವಿನಲ್ಲಿ ಹಳೆಯ

ಮಾದರಿಯ ರಚನಾ ಕ್ರಮವೇ ಕಂಡುಬರುತ್ತದೆ. ಈ ಕೋಟೆಗಳಲ್ಲಿ ಒಂದು ಸುತ್ತಿನ ಕೋಟೆಗೋಡೆ ನಿರ್ಮಾಣಗೊಂಡಿದೆ. ಯಾವ ಯುದ್ಧ ತಂತ್ರಗಳು ಬದಲಾದರೂ ಇವುಗಳ ರಚನಾ ಶೈಲಿಯಲ್ಲಿ ಯಾವುದೇ ಬದಲಾವಣೆಗಳಾಗಿಲ್ಲ. ಶತ್ರು ರಾಜ್ಯಗಳ ದಾಳಿಯ ಮುಖ್ಯ ಉದ್ದೇಶ ರಾಜ್ಯ ವಿಸ್ತರಣೆಯಾದರೂ ಸಂಪತ್ತಿನಿಂದ ಕೂಡಿದ ಪ್ರದೇಶಗಳನ್ನು ಕೊಳ್ಳೆ ಹೊಡೆಯುವುದು ಸಹ ಆಗಿತ್ತು. ಆದುದರಿಂದ ಸಂಪತ್ತಿನಿಂದ ಕೂಡಿರದ ಗ್ರಾಮವಾಸ್ತು ಹಾಗೂ ರಕ್ಷಣಾ ಕೇಂದ್ರಗಳ ಒಂದೇ ಮಾದರಿಯ ಚೌಕ ರಚನಾ ಕ್ರಮ ಕಂಡುಬಂದರೆ ಸ್ಥಳೀಯ ಆಡಳಿತ ಅಥವಾ ಪಾಳೆಯಪಟ್ಟುಗಳ ಕೇಂದ್ರಸ್ಥಾನಗಳಲ್ಲಿ ಬದಲಾದ ಯುದ್ಧನೀತಿ ಮತ್ತು ರಕ್ಷಣಾ ತಂತ್ರಗಳಿಗೆ ಅನುಗುಣವಾಗಿ ರಚನಾ ಕ್ರಮದಲ್ಲೂ ಬದಲಾವಣೆ ಆಗಿರುವುದು ನಿಡುಗಲ್ಲು, ಪಾವಗಡ, ಮಧುಗಿರಿ, ದೇವರಾಯನದುರ್ಗ, ಸಿರಾ, ಚೆನ್ನರಾಯನದುರ್ಗ, ಹುತ್ರಿದುರ್ಗ, ಮಿಡಿಗೇಶಿ ಮೊದಲಾದ ಕೋಟೆಗಳಿಂದ ತಿಳಿಯುತ್ತದೆ.

೩.೩.೩.೧. ಕೋಟೆಯ ಗೋಡೆ

ಆರಂಭದಲ್ಲಿ ಕೋಟೆಗೋಡೆಯನ್ನು ಕೇವಲ ವನ್ಯಮೃಗ, ಕಳ್ಳಕಾಕರಿಂದ ರಕ್ಷಣೆ ಪಡೆಯಲು ಮಣ್ಣಿನ ದಿಬ್ಬ, ಮರದ ಬೇಲಿ, ಕಲ್ಲಿನ ಕೋಟೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಆದರೆ ಶತ್ರುಗಳ ಹಾವಳಿ ಹಾಗೂ ರಾಜಪ್ರಭುತ್ವಗಳ ಏಳಿಗೆಯು ಕೋಟೆಗೋಡೆ ಹೇಗೆ ನಿರ್ಮಾಣಗೊಳ್ಳಬೇಕೆಂದೇ ಹಲವು ಶಾಸ್ತ್ರ ಗ್ರಂಥಗಳು ರಚನೆಯಾಗುವಂತೆ ಮಾಡಿತು. ಕೌಟಿಲ್ಯನ ಅರ್ಥಶಾಸ್ತ್ರ ವಪ್ರವನ್ನು ವಪ್ಪದ ಮೇಲೆ ಅದರ ಎರಡರಷ್ಟು ಎತ್ತರವಿರುವಂತೆ ಇಟ್ಟಿಗೆಗಳನ್ನು ಹನ್ನೆರಡು ಮೊಳ ಪ್ರಮಾಣಗಳಿಂದ ಹಿಡಿದು ಇಪ್ಪತ್ತಾಲ್ಕು ಮೊಳ ಪ್ರಮಾಣಗಳವರೆಗೆ ಸಮಸಂಖ್ಯೆಯಲ್ಲಾಗಲೀ, ವಿಷಮ ಸಂಖ್ಯೆಯಲ್ಲಾಗಲೀ ಕೋಟೆಯನ್ನು ಕಟ್ಟಿಸಬೇಕು. ಅದರ ಮೇಲೆ ರಥಗಳು ಹೋಗಲಿಕ್ಕೂ ಬರಲಿಕ್ಕೂ ಅನುಕೂಲವಿರುವಂತೆ ರಸ್ತೆಗಳಿರಬೇಕು. ಅದರ ಅಂಚಿನಲ್ಲಿ ತಾಳೆಯ ಗಿಡದ ಬುಡ, ವೃಪ್ರ, ಕಪಿಯ ತಲೆಯಲ್ಲಿ ಯಾವುದಾದರೂ ಒಂದನ್ನು ಇಟ್ಟಿಗೆ ಚೂರು ಅಥವಾ ಕಲ್ಲಿನ ಪ್ರತಿಮೆಗಳನ್ನು ಮಾಡಿಸಬೇಕು. ಎಂದಿಗೂ ಮರಗಳಿಂದ ಮಾತ್ರ ಗೋಡೆಯನ್ನು ನಿರ್ಮಿಸಬಾರದು. ಏಕೆಂದರೆ ಅದು ಅಗ್ನಿಗೆ ಬಹುಬೇಗ ಆಹುತಿಯಾಗುವ ಸಂಭವವಿರುತ್ತದೆ.[೪೩] ಅದೇ ರೀತಿ ವ್ಯೂಹಾತ್ಮಕ ಮತ್ತು ತಾಂತ್ರಿಕ ದೃಷ್ಟಿಯಿಂದ ವಿಶ್ವಕರ್ಮ ಒಂದಕ್ಕಿಂತ ನಾಲ್ಕನೆಯ ಒಂದು ಭಾಗದಷ್ಟು ಹೊರಭಾಗದ ಗೋಡೆಯ ಎತ್ತರವಾಗಿ ಹಾಗೂ ಕನಿಷ್ಠ ೧೮ ಅಡಿ ಎತ್ತರವನ್ನು ಹಾಗೂ ದಪ್ಪನಾಗಿರುವಂತೆ ನೋಡಿಕೊಳ್ಳಬೇಕು ಎಂದಿದ್ದಾರೆ.[೪೪] ಹೀಗೆ ನಿರ್ಮಾಣಗೊಂಡ ಕೋಟೆಗಳ ಮೇಲೆ ದಾಳಿ ಮಾಡಲು ವಿಶೇಷ ಪಡೆಯನ್ನು ಹೊಂದಿದ್ದರೆ ಮಾತ್ರವೇ ವಶಪಡಿಸಿಕೊಳ್ಳಲು ಸಾಧ್ಯ. ಕೃಷ್ಣದೇವರಾಯ ತನ್ನ ದಿನಚರಿಯಲ್ಲಿ ಕೋಟೆ ಕಾಳಗಕ್ಕೆ ತರಬೇತಿಗೊಳಿಸಿದ ಬೇಡ ಪಡೆಯನ್ನು[೪೫] ಬಳಸಿಕೊಂಡಿದ್ದಾಗಿ ಉಲ್ಲೇಖಿಸಿದ್ದಾನೆ. ಜಿಲ್ಲೆಯ ಸಿದ್ಧಾಪುರ, ಸಿರಾ ಸ್ಥಳದುರ್ಗಗಳನ್ನು

ಹೊರತುಪಡಿಸಿದರೆ ಈ ಪ್ರಕಾರದಲ್ಲಿ ನಿರ್ಮಾಣಗೊಂಡ ಗೋಡೆಗಳು ಕಂಡುಬರುವುದಿಲ್ಲ. ಏಕೆಂದರೆ ಜಿಲ್ಲೆಯಾದ್ಯಂತ ಗಿರಿದುರ್ಗಗಳೇ ಹೆಚ್ಚಾಗಿದ್ದು ವಾಸ್ತುಶಾಸ್ತ್ರಗಳ ಅನ್ವಯ ಕೆಲವೊಮ್ಮೆ ಸ್ಥಳೀಯ ವಾಸ್ತು ವೈವಿಧ್ಯತೆಗೆ ಅನುಗುಣವಾಗಿ ಕೋಟೆಗಳ ರಚನಾ ಶೈಲಿ ಮೂಡಿಬಂದಿದೆ. ಬೆಟ್ಟಗಳಲ್ಲಿ ಅನಾವಶ್ಯಕವಾಗಿ ಕೋಟೆಗೋಡೆ ವಿಸ್ತರಿಸುವ ಅಗತ್ಯವಿರುವುದಿಲ್ಲ. ಪ್ರಪಾತ ಇಲ್ಲವೆ ಬೃಹತ್ ಹೆಬ್ಬಂಡೆಗಳೇ ಗೋಡೆಗಳಾಗಿ ಮಾರ್ಪಟ್ಟಿರುತ್ತದೆ. ಕೆಲವೊಮ್ಮೆ ಬೃಹತ್ ಕಲ್ಲುಗುಂಡುಗಳನ್ನು ಆನೆಗಳ ಮೂಲಕ ತಳ್ಳಿ ಇಲ್ಲವೆ ಅವುಗಳ ಮಧ್ಯವೇ ಗೋಡೆಯನ್ನು ಕಟ್ಟಿ ಬಲಿಷ್ಠಗೊಳಿಸುವ ಪ್ರಯತ್ನ ಮಾಡಿದ್ದಾರೆ. ನಿಡುಗಲ್ಲು, ಕಾಮನದುರ್ಗ, ತೆಲುಗಲುಕೊಂಡ ಮೊದಲಾದ ಗಿರಿದುರ್ಗಗಳ ಸುತ್ತಲೂ ಬೆಟ್ಟಗಳೇ ಆವರಿಸಲ್ಪಟ್ಟಿದರಿಂದ ಅವುಗಳನ್ನೇ ಕೋಟೆಗೋಡೆಗಳಂತೆ ಬಳಸಿಕೊಳ್ಳಲಾಗಿದೆ. ನಿರಂತರ ದಾಳಿಗಳಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಪಾಳೆಪಟ್ಟುಗಳು ಗೋಡೆಯ ರಚನೆಯಲ್ಲಿ ನಿರಂತರ ಬದಲಾವಣೆ ಮಾಡಿಕೊಳ್ಳುತ್ತಿದ್ದರು. ಹಾಗಾಗಿಯೇ ಗೋಡೆಯ ತಳಪಾಯವು ಅಗಲವಾಗಿ ಮೇಲೇರಿದಂತೆ ಕಿರಿದಾಗುತ್ತಾ ಕೆಲವೊಮ್ಮೆ ಗೋಡೆಯಲ್ಲಿ ಹಿಂಚಾಚು, ಮುಂಚಾಚುಗಳು ವಿಸ್ತರಣೆಗೊಂಡಿರುವುದು ಕಂಡುಬರುತ್ತದೆ.

ಸಾಮಾನ್ಯವಾಗಿ ಕೋಟೆಗೋಡೆಯನ್ನು ಕೇವಲ ಎತ್ತರವಾಗಿ ನಿರ್ಮಿಸಿದರೆ ಅದು ಅಭೇದ್ಯವಾಗಿದೆ ಎಂದಲ್ಲ. ಅದು ಕಾಲಕಾಲಕ್ಕೆ ಯುದ್ಧ ನೀತಿ, ತಂತ್ರಗಳಲ್ಲಾಗುವ ಬದಲಾವಣೆಗಳಿಗೆ ಅನುಗುಣವಾಗಿ ಗೋಡೆಯಲ್ಲಿ ಅಂಬುಕಿಂಡಿ, ಫಿರಂಗಿ ಕಿಂಡಿ, ಕೋಟೆ ತೆನೆ, ಕೊತ್ತಲ, ದ್ವಾರ, ಮದ್ದಿನಮನೆ, ಕಾವಲುಗೋಪುರಗಳಿದ್ದಾಗ ಮಾತ್ರ ದಾಳಿಯ ಮುನ್ನವೇ ಶತ್ರುಗಳಿಗೆ ಭಯಾನಕತೆಯನ್ನು ಮೂಡಿಸಲು ಸಾಧ್ಯವಾಗುತ್ತದೆ.

೩.೩.೩.೨. ವಪ್ರ

ಶತ್ರುಗಳು ಗೋಡೆಯನ್ನು ಏರದಂತೆ ಅವರ ಮೇಲೆ ಒಳಭಾಗದಿಂದ ಗೋಡೆಗಳ ಮೇಲಕ್ಕೆ ಕಾದ ಎಣ್ಣೆ, ಮದ್ದು, ಗುಂಡುಗಳನ್ನು ಸಾಗಿಸಲು ಕಂದಕದಿಂದ ಅಗೆದ ಮಣ್ಣನ್ನು ಗೋಡೆಯ ಒಳಮುಖಕ್ಕೆ ಇಳಿಜಾರಾಗಿ ಹಾಕಲಾಗುತ್ತಿತ್ತು. ವಿಶೇಷವಾಗಿ ಮಧ್ಯಕಾಲೀನ ಸಂದರ್ಭದಲ್ಲಿ ಕವಣೆಯಂತ್ರ ಮತ್ತು ಫಿರಂಗಿಗಳ ಗೋಡೆ ಹೊಡೆತಕ್ಕೆ ಹಾನಿಯಾಗಬಾರದೆಂದು ಗೋಡೆಯ ಒಳಭಾಗದಲ್ಲಿ ಮಣ್ಣಿನ ಇಳಿವೊರೆಯನ್ನು ಹಾಕುತ್ತಿದ್ದರು. ಕೌಟಿಲ್ಯನು ಕಂದಕದಲ್ಲಿನ ಮಣ್ಣನ್ನು ಬಳಸಿಕೊಂಡು ಅದಕ್ಕಿಂತ(೪ ದಂಡ) ದೂರದಲ್ಲಿ ಆರು ದಂಡ ಎತ್ತರ, ೧೨ ದಂಡಗಳಷ್ಟು ಅಗಲವಾಗಿಯೂ ಮಣ್ಣು ಉದುರಿಹೋಗದಂತೆ ಗಟ್ಟಿಯಾಗಿಯೂ ಇರಬೇಕೆಂದು ಹೇಳಿದ್ದಾನೆ. ಹಾಗೆಯೇ ಕೆಳಗೆ ವಿಸ್ತಾರದ ಮೇಲೆ ಸಣ್ಣ ಒಂದೇ ಸಮವಾಗಿರುವಂತೆ ಕೆಳಗೆ ಮತ್ತು ಮೇಲೆ ಸಣ್ಣದಾಗಿ, ಮಧ್ಯೆ ಮಾತ್ರ ದಪ್ಪನಾಗಿರುವಂತೆ ನೋಡಿಕೊಳ್ಳಬೇಕೆಂದು, ಅದನ್ನು ಆನೆ ಮತ್ತು ಎತ್ತುಗಳ ತುಳಿತದಿಂದ ಗಟ್ಟಿಗೊಳಿಸಿ, ಮುಳ್ಳುಗಿಡ, ಪೊದರು, ವಿಷಬಳ್ಳಿಗಳನ್ನು ಬೆಳೆಸಬೇಕೆಂದು ಅರ್ಥಶಾಸ್ತ್ರದಲ್ಲಿ ಉಲ್ಲೇಖಿಸಿದ್ದಾನೆ

ವಾಸ್ತು ಗ್ರಂಥಗಳಲ್ಲಿ ಉಲ್ಲೇಖವಿರುವಂತೆ ಜಿಲ್ಲೆಯ ಸ್ಥಳದುರ್ಗಗಳಲ್ಲಿ ಒಳ ಮತ್ತು ಹೊರ ಭಾಗ ವಪ್ರ ನಿರ್ಮಿಸಲ್ಪಟ್ಟಿದೆ. ಪ್ರಮುಖವಾಗಿ ನಿಡುಗಲ್ಲಿನ ನೆಲಗೋಟೆ, ಸಿದ್ದಾಪುರದ ಕೋಟೆಯ ಸುತ್ತಲೂ ಹೊರ ಬದಿಯಲ್ಲಿ ಕೋಟೆ ಗೋಡೆಯಷ್ಟೇ ಎತ್ತರವಾದ ಮಣ್ಣಿನ ದಿಬ್ಬ ಹಾಗೂ ಅದೇ ಗೋಡೆಗೆ ಒಳಬದಿ ಇಳಿಜಾರಾಗಿ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಮಿಶ್ರಣ ಮಾಡಿ ಇಳಿವೊರೆ ಅಥವಾ ವಪ್ರವನ್ನು ನಿರ್ಮಿಸಲಾಗಿದೆ. ಸಿರಾ, ಹುತ್ರಿದುರ್ಗ ಮತ್ತು ಹುಲಿಯೂರುದುರ್ಗ, ದೇವರಾಯನದುರ್ಗದ ಚನ್ನರಾಯದುರ್ಗ, ಪಾವಗಡ ಮೊದಲಾದ ನೆಲಕೋಟೆಗಳಿಗೆ ಇಳಿವೊರೆಯನ್ನು ಕೈಪಿಡಿ ಗೋಡೆಯವರೆಗೂ ಎತ್ತರವಾಗಿ ನಿರ್ಮಿಸಿ ಅದು ಬೀಳದಂತೆ ಕಲ್ಲಿನ ಜೋಡಣೆ ಮಾಡಿದ್ದಾರೆ. ಅದನ್ನೇ ಸೈನಿಕರು ಓಡಾಡಲು ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿದ್ದರು. ನಿಡುಗಲ್ಲಿನ ನೆಲಗೋಟೆಯ ಮೇಲೆ ಎತ್ತಿನ ಬಂಡಿ ಹೋಗುವಷ್ಟು ವಿಶಾಲ ವೇದಿಕೆಯಿದೆ. ಇಂದಿಗೂ ಅದರ ಮೇಲೆ ಸ್ಥಳೀಯರು ವ್ಯವಸಾಯ ಮಾಡುತ್ತಿದ್ದಾರೆ ಎಂದರೆ ಆಶ್ಚರ್ಯವಾಗುತ್ತದೆ. ಅಂದರೆ ವಪ್ರಗಳನ್ನು ಹೇಗೆಲ್ಲಾ ಬಳಸಿಕೊಳ್ಳಲು ಅವಕಾಶವಿದೆ ಎಂಬುದು ಇದರಿಂದ ವೇದ್ಯವಾಗುತ್ತದೆ. ಜಿಲ್ಲೆಯಲ್ಲಿ ಬಹುತೇಕ ಗಿರಿದುರ್ಗಗಳೇ ಹೆಚ್ಚಿರುವುದರಿಂದ ಹೆಬ್ಬಂಡೆಗಳ ಮೇಲೆ ಮಳೆಯ ನೀರಿಗೆ ಗೋಡೆ ಸಡಿಲಗೊಳ್ಳದಂತೆ ಒಳಬದಿಯಲ್ಲಿ ಇಳಿವೊರೆಯನ್ನು ಇಟ್ಟಿಗೆ, ಕಲ್ಲು ಮತ್ತು ಗಾರೆಯಿಂದ ಭದ್ರಪಡಿಸಿದ್ದಾರೆ. ಹೆಚ್ಚು ಇಳಿಜಾರಿರುವಲ್ಲಿ ಮಾತ್ರ ಕಡೆಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ತ್ರಿಭುಜ ಮಾದರಿಯಲ್ಲಿ ಗೋಡೆಯನ್ನು ನಿರ್ಮಿಸಲಾಗಿದೆ. ಸಾಮಾನ್ಯವಾಗಿ ವಾಸ್ತುಶಾಸ್ತ್ರಗಳಂತೆ ವಪ್ರವನ್ನು ಗಿರಿದುರ್ಗಗಳಲ್ಲಿ ನಿರ್ಮಿಸಲು ಸಾಧ್ಯವಿಲ್ಲದೇ ಇರುವುದರಿಂದ ಸ್ಥಳೀಯವಾಗಿ ತಮಗೆ ಅನುಕೂಲವಿರುವಂತೆ ನಿರ್ಮಿಸಿಕೊಂಡಿದ್ದಾರೆ.

೩.೩.೩.೩. ಕಂದಕ

ಆರಂಭದಲ್ಲಿ ಕೋಟೆ ಎಂದರೆ ಕೇವಲ ನೇರವಾದ ಗೋಡೆಗಳು ಮಾತ್ರ ಇರುತ್ತಿದ್ದವು. ಆದುದರಿಂದ ಗೋಡೆಯನ್ನು ಏಣಿ, ಉಡಗಳ ಮೂಲಕ ಸುಲಭವಾಗಿ ಏರುತ್ತಿದ್ದರು. ಹಾಗಾಗಿ ಗೋಡೆಯ ಬಳಿ ಶತ್ರುಗಳು ನುಸುಳದಂತೆ ಆಳವಾದ ಕಂದಕಗಳನ್ನು ನಿರ್ಮಿಸಲು ಮುಂದಾದರು. ಕೌಟಿಲ್ಯನ ಅರ್ಥಶಾಸ್ತ್ರವು ಸ್ಥಳದುರ್ಗ ಮೂರು ಸುತ್ತಿನ ಕಂದಕ ಹೊಂದಿರಬೇಕು. ಪ್ರತಿ ಕಂದಕವೂ ಕ್ರಮವಾಗಿ ೧೪, ೧೨, ೧೦ಕ್ಕಿಂತಲೂ ಕಡಿಮೆ ಆಳವಿಲ್ಲದಂತೆ ಮೂರನೆಯ ಒಂದು ಭಾಗ ಆಳವಿರಬೇಕು. ಜೊತೆಗೆ ಹರಿಯುವ ನೀರಿನ ಕೊರೆತದಿಂದ ಕಂದಕ ಹಾಳಾಗಬಾರದೆಂದು ಎರಡೂ ಬದಿಯಲ್ಲಿ ಕಲ್ಲು ಇಲ್ಲವೇ ಇಟ್ಟಿಗೆಯ ಗೋಡೆಯನ್ನು ನಿರ್ಮಿಸಿ ನೀರನ್ನು ಹರಿಸಬೇಕು. ಶತ್ರುಗಳನ್ನು ಮೋಸ ಹೋಗುವಂತೆ ಮಾಡಲು ಅದರಲ್ಲಿ ತಾವರೆಗಿಡ, ವಿಷಪೂರಿತ ಹಾವು, ಮೊಸಳೆ ಮೊದಲಾದ ಜಲಚರಗಳನ್ನು ಬಿಡಬೇಕು. ಇದರಿಂದ ಕೋಟೆಯ ಸೌಂದರ್ಯವು ಹೆಚ್ಚುತ್ತದೆ[೪೭] ಎಂದು ಉಲ್ಲೇಖಿಸುತ್ತದೆ.

ಜಿಲ್ಲೆಯ ಸಿದ್ಧಾಪುರ, ಕಂದಿಕೆರೆ, ಹಂದನಕೆರೆ, ಹೊನ್ನವಳ್ಳಿ, ಹೊಳವನಹಳ್ಳಿ ಮೊದಲಾದ ಸ್ಥಳದುರ್ಗಗಳು ಕೋಟೆ ಗೋಡೆಗಿಂತಲೂ ಆಳ, ಅಗಲವಾಗಿ ಕಂದಕವನ್ನು ಹೊಂದಿದ್ದರೂ ಸಿರಾ ಕೋಟೆಯಂತೆ ನೀರಿನ ಕೊರೆತಕ್ಕೆ ಕಂದಕ ಹಾಳಾಗಬಾರದೆಂದು ಒಳಭಾಗದಿಂದ ಮೇಲ್ಮಟ್ಟದವರೆಗೂ ಎರಡೂ ಬದಿಯಲ್ಲಿ ಕಲ್ಲಿನ ಹೊದಿಕೆ ಮಾಡಲಾಗಿದೆ. ಆದರೆ ಉಳಿದ ಯಾವ ಕಂದಕಗಳಿಗೂ ಈ ರೀತಿಯ ರಕ್ಷಣಾ ಹೊದಿಕೆಯನ್ನು ನಿರ್ಮಿಸಿಲ್ಲ. ಗಿರಿದುರ್ಗಗಳಾದ ಪಾವಗಡ, ಮಧುಗಿರಿ, ಮಿಡಿಗೇಶಿ ಮೊದಲಾದ ಕೋಟೆಗಳು ವಿಸ್ತಾರಗೊಂಡಂತೆ ನೆಲಗೋಟೆಯ ಸುತ್ತಲೂ ಆಳವಾದ ಕಂದಕವನ್ನು ಒಳ ಮತ್ತು ಹೊರಬದಿಯಲ್ಲಿ ನಿರ್ಮಿಸಲಾಗಿತ್ತೆನ್ನಲು ಕಂದಕದ ಅವಶೇಷಗಳು ಕಂಡುಬರುತ್ತವೆ.

ಕೋಟೆಯ ಒಳಬದಿ ಕಂದಕಕ್ಕೆ ಮಳೆಯ ನೀರನ್ನು ಬಿಟ್ಟು ಅದೇ ನೀರು ದಿನನಿತ್ಯದ ಬಳಕೆಗೆ ಯೋಗ್ಯವಿರುವಂತೆ ನೋಡಿಕೊಳ್ಳುವ ಉದ್ದೇಶದಿಂದಲೇ ಕೋಟೆಯ ಒಳಬದಿಯಲ್ಲಿ ಕಂದಕಗಳಿರುವುದು ಜಿಲ್ಲೆಯಲ್ಲಿ ಕಂಡುಬರುತ್ತವೆ. ಆದರೆ ಹೊರ ಭಾಗದಲ್ಲಿ ಕಂದಕಕ್ಕೆ ನೀರು ಬಿಟ್ಟರೆ ಗೋಡೆಗೆ ಶತ್ರುಗಳಿಂದ ರಕ್ಷಣೆಯಿರುತ್ತಿತ್ತು. ಆದರೆ ನೆಲಗೋಟೆಗೆ ಸುತ್ತಲೂ ಕಂದಕ ಅವಶ್ಯವಿರುವಲ್ಲಿ ಇರಬೇಕೆಂಬ ನಿಯಮವೇನು ಇಲ್ಲ. ಅವಶ್ಯವಿದ್ದರೆ ಮಾತ್ರ ನಿರ್ಮಿಸಬಹುದಿತ್ತು.

೩.೩.೩.೪. ಬುರುಜು (ಕೊತ್ತಲ)

ಬುರುಜು, ಕೊತ್ತಲ ಅಥವಾ ಬತೇರಿಗಳು ಬೇರೆ ಬೇರೆ ಪದಗಳಾದರೂ ಒಂದೇ ಅರ್ಥವನ್ನು ಕೊಡುತ್ತವೆ. ಆದರೂ ನಿರ್ದಿಷ್ಟವಾಗಿ ಇವುಗಳನ್ನು ಹೀಗೆ ಎಂದು ಅರ್ಥೈಸಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಕೋಟೆ ಗೋಡೆಗೆ ಹೊಂದಿಕೊಂಡು ವೃತ್ತ, ಆಯತ, ಚೌಕ, ಗಜಪುಷ್ಪಾಕಾರದಲ್ಲಿ ರೂಪುಗೊಂಡ ಕಟ್ಟಡವೇ ಕೊತ್ತಲ ಅಥವಾ ಬುರುಜು. ಬತೇರಿಗಳೂ ಸಹ ಇದೇ ವಾಸ್ತು ರಚನೆ ಹೊಂದಿದ್ದರೂ ಕೋಟೆಗೋಡೆಗೆ ಹೊಂದಿಕೊಂಡಿರದೆ ಎತ್ತರವಾದ ಪ್ರದೇಶದಲ್ಲಿ ನಿರ್ಮಾಣವಾಗಿರುತ್ತಿದ್ದವು. ಆದರೆ ಈ ಮೂರು ಕಟ್ಟಡಗಳ ಕಾರ್ಯ ವೈಖರಿ ಒಂದೇಯಾಗಿರುತ್ತದೆ. ಅಂದರೆ ಬುರುಜು ಕೋಟೆ ಗೋಡೆಯ ಅಗಲವನ್ನು ಹೆಚ್ಚಿಸುತ್ತಿತ್ತಲ್ಲದೆ ಕೋಟೆಯ ಒಳಗಿರುವವರಿಗೆ ರಕ್ಷಣೆ ನೀಡಲು ಇದರ ಎಲ್ಲಾ ದಿಕ್ಕುಗಳಿಗೂ ಫಿರಂಗಿಕಿಂಡಿ, ಅಂಬುಕಿಂಡಿ, ಬಂದೂಕು ಕಿಂಡಿಗಳನ್ನು ಹಾಗೂ ಮದ್ದಿನ ಮನೆ ಮತ್ತು ಬುರುಜಿನ ಕೈಪಿಡಿ ಗೋಡೆಯಲ್ಲಿ ಸೈನಿಕರು ರಹಸ್ಯವಾಗಿ ತಂಗಲು ಅಥವಾ ಶಸ್ತ್ರಾಸ್ತ್ರಗಳನ್ನು ಇಡಲು ಹೊಂದಿರುತ್ತಿದದವು. ಬಂಕರ್‌ಗಳನ್ನು[೪೮] ಜೊತೆಗೆ ಇದು ಗೋಡೆಗಿಂತ ಎತ್ತರ ಇರುತ್ತಿದ್ದರಿಂದ ಶತ್ರುಗಳ ಚಲನವಲನವನ್ನು ಮೊದಲೇ ಗಮನಿಸಲು ಮತ್ತು ಕೋಟೆಗೋಡೆ ಬಳಿ ಅವರು ಸಮೀಪಿಸದಂತೆ ತಡೆಯಲು[೪೯] ಎಲ್ಲಾ ದಿಕ್ಕುಗಳಲ್ಲೂ ನಿರ್ಮಿಸಲ್ಪಡುತ್ತಿತ್ತು. ಬತೇರಿಗಳೂ ಎತ್ತರದ ಪ್ರದೇಶದಲ್ಲಿ ಇದ್ದರೂ ವಿಶೇಷವಾಗಿ ಅವುಗಳನ್ನು ಸೈನಿಕರು ಮತ್ತು ಸಾಮಾನ್ಯ ಜನರಿಗೆ ಆಜ್ಞೆಗಳನ್ನು ಹೊರಡಿಸಲು ವೇದಿಕೆಗಳನ್ನಾಗಿ ಬಳಸಿಕೊಳ್ಳುತ್ತಿದ್ದರು.

ಕೆಲವೊಮ್ಮೆ ಹಳ್ಳಿಗಳಲ್ಲಿ ಗ್ರಾಮದ ಸುತ್ತಲೂ ಕೋಟೆ-ಕೊತ್ತಲ ನಿರ್ಮಿಸಲಾಗದೇ ಇದ್ದ ಪಕ್ಷದಲ್ಲಿ ಶತ್ರುಗಳ ದಾಳಿಯಿಂದ ಹಳ್ಳಿಯ ಜನರನ್ನು ರಕ್ಷಿಸಲು ಸುಮಾರು ೧೦೦ರಿಂದ ೧೫೦ ಅಡಿಗೂ ಎತ್ತರವಾದ ಬುರುಜುಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಈ ಬುರುಜುಗಳ ಮೇಲೆ ಏಣಿಗಳ ಮೂಲಕ ಸ್ತ್ರೀಯರು, ಸಂಪತ್ತು ಹಾಗೂ ಮುದುಕರನ್ನು ಸಾಗಿಸಿ ಪುರುಷರು ಮಾತ್ರ ಶತ್ರುಗಳೊಂದಿಗೆ ಹೋರಾಡುತ್ತ ತಮ್ಮ ಸಮುದಾಯಗಳನ್ನು ಕಾಪಾಡಿಕೊಳ್ಳುತ್ತಾ ಕೆಲವೊಮ್ಮೆ ವೀರಮರಣ ಹೊಂದುತ್ತಿದ್ದರು. ಹೀಗೆ ಮೂರು ಮಾದರಿಯ ಕಟ್ಟಡಗಳ ರಚನಾ ಶೈಲಿಯನ್ನು ಗಮನಿಸಿದ್ದು ಇವುಗಳ ಕಾರ್ಯವೈಖರಿ ಒಂದೇ ಆಗಿ ಈ ಮೂರು ಪದಗಳನ್ನು ಒಂದೇ ಅರ್ಥದಲ್ಲಿ ನೋಡುವಂತೆ ಮಾಡಿದೆ.

ಜಿಲ್ಲೆಯಲ್ಲಿ ಕಂಡುಬರುವ ಗ್ರಾಮ ಮಟ್ಟದ ಕೋಟೆಗಳನ್ನು ಹೊರತುಪಡಿಸಿದರೆ ಉಳಿದ ಎಲ್ಲಾ ಕೋಟೆಗಳು ಕೊತ್ತಲಗಳನ್ನು ಹೊಂದಿವೆ. ವಿಶೇಷವಾಗಿ ಕನ್ನಮೇಡಿ, ಪಾವಗಡ, ಮಧುಗಿರಿ, ಮಿಡಿಗೇಶಿ, ದೇವರಾಯನದುರ್ಗ, ಹುತ್ರಿದುರ್ಗ, ಹುಲಿಯೂರುದುರ್ಗ, ಸಿರಾ, ಚೆನ್ನರಾಯನದುರ್ಗ ಮೊದಲಾದ ಕೋಟೆಗಳಲ್ಲಿ ಕೋಟೆಗೋಡೆಗೆ ಹೊಂದಿಕೊಂಡ ಬೃಹತ್ ಗುಂಡುಗಳ ಮೇಲೆಯೇ ಕೊತ್ತಲಗಳು ನಿರ್ಮಿಸಲ್ಪಟ್ಟಿವೆ. ಕೆಲವೆಡೆ ವಿಶಾಲವಾದ ಹೆಬ್ಬಂಡೆಯನ್ನೇ ಕೊತ್ತಲಗಳನ್ನಾಗಿ ಬಳಸಿಕೊಂಡಿದ್ದಾರೆ. ಪಾವಗಡ, ನಿಡುಗಲ್ಲು, ಮಧುಗಿರಿ, ದೇವರಾಯನದುರ್ಗಗಳಲ್ಲಿ ಮಾತ್ರ ಬತೇರಿಗಳನ್ನು ಪ್ರತ್ಯೇಕವಾಗಿ ಎತ್ತರದಲ್ಲಿ ನಿರ್ಮಿಸಲಾಗಿದೆ. ಅವುಗಳು ಹಲವು ಪ್ರತ್ಯೇಕ ಹೆಸರುಗಳಿಂದ ಇಂದಿಗೂ ಸ್ಥಳೀಯರಿಂದ ಕರೆಯಲ್ಪಡುತ್ತಿವೆ. ಪಾವಗಡದಲ್ಲಿ ಸುಬ್ಬರಾಯಪ್ಪ ಮತ್ತು ಟಿಪ್ಪು ಬತೇರಿ, ಮಧುಗಿರಿಯಲ್ಲಿ ಕಪ್ಪಗುಂಡು ಬತೇರಿಗಳು ೧೦೦ರಿಂದ ೧೫೦ ಮೀ. ಎತ್ತರದ ನಿಲುವುಗಲ್ಲುಗಳ ಮೇಲೆ ನಿರ್ಮಾಣಗೊಂಡಿವೆ. ಅವುಗಳ ಮೇಲೇರಲು ಮೆಟ್ಟಿಲನ್ನು ಬಿಡಲಾಗಿದೆ. ಬತೇರಿಯ ತುದಿಯಲ್ಲಿ ಎತ್ತರದ ವೇದಿಕೆ ಇದ್ದು ಇಲ್ಲಿ ಗೌಪ್ಯ ವಿಚಾರಗಳನ್ನು ಚರ್ಚಿಸುತ್ತಿದ್ದರು ಎನ್ನಿಸುತ್ತದೆ. ಜೊತೆಗೆ ಬತೇರಿಯ ಕೈಪಿಡಿ ಗೋಡೆಯಲ್ಲಿ ಆರ್ಚ್ ಮಾದರಿಯ ಕಿಂಡಿ ಇದ್ದು ಅದರಲ್ಲಿ ಬೆಟ್ಟದ ತುದಿ ಭಾಗವೆಲ್ಲಾ ಕಾಣುತ್ತಿತ್ತು. ಹಾಗಾಗಿ ಅದನ್ನು ಹೊರಡಿಸಲು ಬಳಸುತ್ತಿದ್ದರು. ರಾಜನ ಆಜ್ಞೆಗಳನ್ನು ಜಿಲ್ಲೆಯಾದ್ಯಂತ ಇರುವ ರಕ್ಷಣಾ ಕೇಂದ್ರಗಳ ಕೋಟೆಗಳಲ್ಲಿ ನಾಲ್ಕು ದಿಕ್ಕಿಗೂ ನಾಲ್ಕು ಚೌಕ ಮಾದರಿಯ ೪x೪ ಅಥವಾ ೫x೫ ವಿಸ್ತೀರ್ಣ ಹೊಂದಿರುವ ಕೊತ್ತಲ ಕಂಡುಬರುತ್ತವೆ.

೩.೩.೩.೫. ದ್ವಾರಗಳು

ಆರಂಭ ಕಾಲದಲ್ಲಿ ಕೋಟೆಗಳಿಗೆ ಬಾಗಿಲುಗಳು ನೇರವಾಗಿರುತ್ತಿದ್ದವು. ಈ ಬಾಗಿಲನ್ನು ಪ್ರವೇಶಿಸಿದರೆ ಕೋಟೆ ವಶವಾಗುತ್ತಿತ್ತು. ಸಾಮಾನ್ಯವಾಗಿ ದ್ವಾರ ಬಾಗಿಲುಗಳನ್ನು ಮುಚ್ಚಿದರೂ ಆನೆ ಅಥವಾ ಕೋಣ, ಟಗರುಗಳ ಮೂಲಕ ಮರದ ದಿಮ್ಮಿಗಳಿಂದ ಗುದ್ದಿಸುತ್ತಿದ್ದರು. ಹಾಗಾಗಿ

ದ್ವಾರಗಳನ್ನು ಜಿಗ್‌ಜಾಗ್, ಎಲ್ ಮಾದರಿಯಲ್ಲಿ ಹಲವು ತಿರುವುಗಳಿಂದ ಕಿರಿದಾದ ಹಾದಿಯ ಮೂಲಕ ಕ್ರಮಿಸಿ ಎತ್ತರವಾದ ಮುಖ್ಯದ್ವಾರವನ್ನು ಪ್ರವೇಶಿಸುವಂತೆ ನಿರ್ಮಿಸುತ್ತಿದ್ದರು. ಅಲ್ಲದೆ ದ್ವಾರ ಬಾಗಿಲಿಗೆ ಆನೆಗಳಿಂದ ಗುದ್ದಿಸದಂತೆ ಹೊರ ಭಾಗದಲ್ಲಿ ಕಬ್ಬಿಣದ ಮೊಳೆಗಳನ್ನು ಹೊಡೆಯುತ್ತಿದ್ದರು. ಮುಖ್ಯ ದ್ವಾರವನ್ನು ಮಾತ್ರ ಅವಶ್ಯಕ ಸಂದರ್ಭಗಳನ್ನು ಹೊರತುಪಡಿಸಿ ಸದಾ ಕಾಲವೂ ಮುಚ್ಚಿರುತ್ತಿದ್ದರು. ಏಕೆಂದರೆ ಅವುಗಳನ್ನು ಆನೆಗಳಿಂದ ಎಳೆಸಬೇಕಾಗುತ್ತಿತ್ತು. ಹಾಗಾಗಿ ದ್ವಾರದ ಎರಡೂ ಬದಿ ಕಾವಲು ಮಂಟಪಗಳನ್ನು ನಿರ್ಮಿಸಿ ಅದರಲ್ಲಿ ಕಾವಲು ಪಡೆಯನ್ನು ಎಲ್ಲಾ ಸಮಯದಲ್ಲೂ ಇರುವಂತೆ ನೇಮಕ ಮಾಡುತ್ತಿದ್ದರು. ಕೋಟೆಯ ಒಳಗಿನವರು ಹೊರ ಜಗತ್ತಿನೊಂದಿಗೆ ದಿನನಿತ್ಯ ವ್ಯವಹಾರ ನಡೆಸಲು ದಿಡ್ಡಿ ಬಾಗಿಲನ್ನು ಬಿಟ್ಟಿದ್ದಾರೆ. ಕ್ರಮೇಣ ದ್ವಾರಗಳನ್ನು ಬಲಿಷ್ಠಗೊಳಿಸುವ ಉದ್ದೇಶದಿಂದ ದ್ವಾರದ ಎರಡೂ ಬದಿ ಎತ್ತರವಾದ ಬುರುಜುಗಳನ್ನು ನಿರ್ಮಿಸಿ ಅದರ ಮೂಲಕ ಪ್ರವೇಶಿಸುವಂತೆ ದ್ವಾರವನ್ನು ಹಲವು ತಿರುವುಗಳಿಂದ ನಿರ್ಮಿಸಲಾಗಿದೆ. ಅಲ್ಲದೆ ದ್ವಾರಗಳ ಮೇಲೆ ಗೋಪುರ ಮತ್ತು ಚಜ್ಜಾಗಳನ್ನು ನೋಡಿದ ತಕ್ಷಣ ಭಯಾನಕ ವಾತಾವರಣ ಸೃಷ್ಟಿಯಾಗುವಂತೆ ಮಾಡುತ್ತಿದ್ದರು. ಬಹುಶಃ ಇದನ್ನು ಗಮನಿಸಿಯೇ ಕನಕದಾಸರು–ಮೋಹನತರಂಗಿಣಿ, ಹರಿಹರದಲ್ಲಿ–ಗಿರಿಜಾ ಕಲ್ಯಾಣ ದ್ವಾರಗಳನ್ನು 'ಹುಲಿಮೊಗ'[೫೦] ಎಂಬುದಾಗಿ ವರ್ಣಿಸಿದ್ದಾರೆ. ಅಂದರೆ ದ್ವಾರಗಳು ಶತ್ರುಗಳಿಗೆ ಹುಲಿಯ ಮುಖದಂತೆ ಭಯಾನಕವಾಗಿ ಕಾಣುತ್ತವೆ ಎಂಬ ಅರ್ಥ ನೀಡುತ್ತವೆ.

ಕೌಟಿಲ್ಯನ ಅರ್ಥಶಾಸ್ತ್ರದಲ್ಲಿ ಕೋಟೆಗೆ ೧೨ ಬಾಗಿಲುಗಳಿರಬೇಕೆಂದೂ ಅವುಗಳಲ್ಲಿ ೩ ದಿಡ್ಡಿ ಬಾಗಿಲುಗಳು[೫೧] ೪ ೧/೨ ಅಡಿ ಅಗಲ, ೯ ಅಡಿ ಎತ್ತರ ಮತ್ತು ೩ ೧/೨ಯಿಂದ ೪ ೧/೨ ಅಡಿ ಅಗಲ, ೭ ೧/೨ ಅಡಿ ಎತ್ತರ ಹಾಗೂ ೩ ೧/೨ ಅಡಿ ಅಗಲ ೬ ಅಡಿ ಎತ್ತರ ಇರಬೇಕೆಂದೂ, ಬಾಗಿಲ ಎರಡೂ ಬದಿ ಮಂಟಪ ೧ ೧/೨ದಂಡ, ಮಹಾದ್ವಾರ ರಸ್ತೆಯ ಅಗಲ ೧/೬ ಭಾಗ[೫೨] ಮಹಾದ್ವಾರದ ನಾಲ್ಕು ಚೌಕಟ್ಟುಗಳು ಐದು ದಂಡಗಳಿಂದ ಹಿಡಿದು ಒಂದಕ್ಕಿಂತ ಮತ್ತೊಂದು ದಂಡ ವಿಸ್ತಾರವಾದ ಎಂಟು ದಂಡಗಳವರೆಗೆ ಚಚ್ಚೌಕವಾಗಿರಬೇಕು ಎಂದು ಹೇಳಲಾಗಿದೆ.

ಶಾಸ್ತ್ರ ಗ್ರಂಥಗಳಲ್ಲಿರುವಂತೆ ಜಿಲ್ಲೆಯಲ್ಲಿ ಹಲವು ಕೋಟೆಗಳ ದ್ವಾರಗಳು ನಿರ್ಮಾಣಗೊಂಡರೂ ಬಹುತೇಕವು ಸ್ಥಳೀಯ ದಾಳಿಗಳನ್ನು ಸಮರ್ಥವಾಗಿ ಎದುರಿಸಲು ಸಾಧ್ಯವಾಗುವಂತೆ ರಚನೆಯಾಗಿವೆ. ಏಕೆಂದರೆ ಕನ್ನಮೇಡಿ, ಯಲ್ಲಪ್ಪನಾಯಕನ ಹೊಸಕೋಟೆ, ಕೋಟಗುಡ್ಡ, ಚೆನ್ನರಾಯನದುರ್ಗ, ದೇವರಾಯನದುರ್ಗ, ಹುತ್ರಿದುರ್ಗ, ಹುಲಿಯೂರುದುರ್ಗ ಮೊದಲಾದ ಕೋಟೆಗಳ ದ್ವಾರಗಳು ನೈಸರ್ಗಿಕ ಹೆಬ್ಬಂಡೆಗಳ ಒಳಗೆ ಇರುವುದರಿಂದ ಇಲ್ಲಿ ವಾಸ್ತು ರಚನೆಯೇ ಇರುವುದಿಲ್ಲ. ಆದರೂ ಮಹಾದ್ವಾರಗಳಂತೂ ಬಹುತೇಕ ಕೋಟೆಗಳಲ್ಲಿ ಅಭೇದ್ಯವಾಗಿ ಜಿಗ್‌ಜಾಗ್ ಇಲ್ಲವೆ

ಎಲ್ ಮಾದರಿಗಳಲ್ಲಿ ನಿರ್ಮಾಣಗೊಂಡಿವೆ. ಉಳಿದಂತಹವು ಮಾತ್ರ ಸರಳವಾಗಿ ನಿರ್ಮಾಣವಾಗಿವೆ. ಜಿಲ್ಲೆಯು ನಿರಂತರ ರಾಜಕೀಯ ಸಂಘರ್ಷಗಳಿಂದ ಕೂಡಿರುತ್ತಿದ್ದು ಹೆಚ್ಚಿನ ಸಂಖ್ಯೆಯಲ್ಲಿ ದಿಡ್ಡಿ ಬಾಗಿಲು ಅಥವಾ ರಹಸ್ಯ ದ್ವಾರಗಳು ನಿರ್ಮಾಣಗೊಳ್ಳುವಂತೆ ಮಾಡಿದೆ. ಮಧುಗಿರಿ, ದೇವರಾಯನದುರ್ಗ, ಚೆನ್ನರಾಯನದುರ್ಗ, ನಿಡುಗಲ್ಲು ಮೊದಲಾದ ಕಡೆ ೧೫ರಿಂದ ೨೫ ದ್ವಾರಗಳು ನಿರ್ಮಾಣಗೊಂಡಿರುವುದು ಶತ್ರುಗಳಿಗೆ ಯಾವ ದ್ವಾರದಿಂದ ಎಲ್ಲಿಗೆ ಪ್ರವೇಶ ಮಾಡಬೇಕೆಂಬ ಗೊಂದಲ ಏರ್ಪಡುವಂತೆ ಮಾಡಿದೆ. ಹೀಗೆ ಅಭೇದ್ಯತೆಯಿಂದ ಕೂಡಿದ ಕೋಟೆಯ ದ್ವಾರಗಳ ಮೂಲಕ ಪ್ರವೇಶಿಸದೆ ಗೋಡೆಗಳನ್ನು ಒಡೆದು ಒಳ ಪ್ರವೇಶಿಸುತ್ತಿದ್ದರು ಎಂಬುದಕ್ಕೆ ಜಿಲ್ಲೆಯಾದ್ಯಂತ ಮೂರು ನಾಲ್ಕು ಬಾರಿ ದುರಸ್ತಿಗೊಂಡ ಕೋಟೆ ಗೋಡೆಗಳಿಂದ ತಿಳಿಯುತ್ತದೆ. ಬಹು ಅಪರೂಪಕ್ಕೆ ಚೆನ್ನರಾಯನದುರ್ಗದಂತಹ ಮುಖ್ಯದ್ವಾರ ಮಾತ್ರ ದುರಸ್ತಿಗೊಂಡಿರುವುದನ್ನು ಬಿಟ್ಟರೆ ಉಳಿದೆಲ್ಲಾ ಕೋಟೆಯ ದ್ವಾರಗಳು ಬಹುತೇಕ ಸುರಕ್ಷಿತವಾಗಿವೆ. ಚೆನ್ನರಾಯನದುರ್ಗದ ಮುಖ್ಯದ್ವಾರ ಎರಡು ಹೆಬ್ಬಂಡೆಗಳ ಮಧ್ಯೆ ನಿರ್ಮಿಸಲ್ಪಟ್ಟಿರುವುದೇ ಕುಸಿಯಲು ಕಾರಣವಿರಬಹುದು.

೩.೩.೩.೬. ಕೋಟೆಯ ತೆನೆ

ಯುದ್ಧ ತಂತ್ರಗಳಲ್ಲಾದ ಬದಲಾವಣೆಯಿಂದ ಕೋಟೆಯ ರಚನೆಯಲ್ಲಿ ಹಲವಾರು ಬದಲಾವಣೆಗಳಾದವು. ಅವುಗಳಲ್ಲಿ ಕೋಟೆಗೋಡೆಯ ಮೇಲೆ ಮರೆಯಿಂದ ಶತ್ರುಗಳ ಚಲನವಲನ ವೀಕ್ಷಿಸಿ ಅವರ ಮೇಲೆ ಬಾಣ ಪ್ರಯೋಗಿಸಲು ಇಲ್ಲವೆ ಬಂದೂಕಿನಿಂದ ಗುಂಡುಗಳನ್ನು ಹಾರಿಸಲು ಕೋಟೆಯ ತೆನೆಯನ್ನು ನಿರ್ಮಿಸಲಾಯಿತು. ಇವುಗಳಿಂದ ಶತ್ರುಗಳು ಗೋಡೆಯ ಸಮೀಪ ಬರದಂತೆ ತಡೆಯಬಹುದಿತ್ತು. ಆದರೆ ಕೆಲವೊಮ್ಮೆ ಈ ತೆನೆಗಳೇ ಶತ್ರುಗಳಿಗೆ ಕೋಟೆ ಏರಲು ಅನುವು ಮಾಡಿಕೊಡುತ್ತಿದ್ದವು. ಈ ಮಣ್ಣಿನ ತೆನೆಗಳು ಬಹುಕಾಲ ಉಳಿಯುತ್ತಿರಲಿಲ್ಲ. ಪ್ರತಿ ವರ್ಷವೂ ಅವುಗಳನ್ನು ನವೀಕರಿಸಿದರೆ ಮಾತ್ರ ಉಳಿಯುತ್ತಿದ್ದವು. ಕೆಲವೊಮ್ಮೆ ಕವಣೆ ಯಂತ್ರಗಳಿಂದ ಗುಂಡುಗಳನ್ನು ತೆನೆಗಳ ಮೇಲೆ ಪ್ರಯೋಗಿಸಿದರೆ ಅವು ಬಿದ್ದುಹೋಗುವ ಅವಕಾಶವಿರುತ್ತಿತ್ತು. ಇದರಿಂದ ಕೋಟೆ ಒಳಗಿನ ಸೈನಿಕರ ಚಲನವಲನಗಳು ಬಹುಬೇಗ ಶತ್ರುಗಳಿಗೆ ಕಾಣುವಂತೆ ಮಾಡುತ್ತಿತ್ತು. ಹಾಗಾಗಿ ಇವುಗಳಿಂದ ಅನುಕೂಲಗಳೆಷ್ಟಿತ್ತೋ, ಅಷ್ಟೇ ಅನಾನುಕೂಲಗಳೂ ಸಹ ಇರುತ್ತಿದ್ದವು.

ಇಂತಹ ತೆನೆಗಳನ್ನು ಜನ್ನನ–ಅನಂತನಾಥ ಪುರಾಣ, ವಿರುಪಾಕ್ಷಪಂಡಿತನ ಚೆನ್ನಬಸವ ಪುರಾಣ, ನರಹರಿಯ–ತೊರವೆ ರಾಮಾಯಣ, ಕನಕದಾಸನ–ಮೋಹನ ತರಂಗಿಣಿ ಮೊದಲಾದ ಸಾಹಿತ್ಯ ಕೃತಿಗಳು ವರ್ಣಿಸಿದ್ದು. ಬಂದಳಿಕೆ, ಹಾನಗಲ್, ಎಲೆಬೇತೂರು, ಲಕ್ಷ್ಮೇಶ್ವರ ಮೊದಲಾದೆಡೆ ಕಂಡುಬರುವ ವೀರಗಲ್ಲುಗಳು ಕೋಟೆಯ ಒಳಗಿನ ಸೈನಿಕರು ತೆನೆಗಳ ಹಿಂಬದಿಯಲ್ಲಿ ನಿಂತು ಯುದ್ಧ ಮಾಡುತ್ತಿರುವುದನ್ನು[illegible] ಉಲ್ಲೇಖಿಸುತ್ತವೆ.

ಹೀಗೆ ವರ್ಣಿಸಲ್ಪಟ್ಟ ಕೋಟೆಯ ತೆನೆಗಳು ಜಿಲ್ಲೆಯ ನಿಡುಗಲ್ಲು, ಪಾವಗಡ, ಮಿಡಿಗೇಶಿ, ಮಧುಗಿರಿ, ಹುತ್ರಿದುರ್ಗ, ಸಿರಾ ಮೊದಲಾದ ಕೋಟೆಗಳಲ್ಲಿ ಕಂಡುಬರುತ್ತವೆ. ಜಿಲ್ಲೆಯಲ್ಲಿ ಗಿರಿದುರ್ಗಗಳೇ ಹೆಚ್ಚಾಗಿ ಇರುವುದರಿಂದ ಬೆಟ್ಟದ ಮೇಲಿನ ಚಿತ್ರಣ ಕೆಳಗಿನಿಂದಲೇ ಸ್ಪಷ್ಟವಾಗಿ ಕಾಣಿಸುವುದರಿಂದ ಕೋಟೆಯ ತೆನೆಗಳು ಪ್ರಾಮುಖ್ಯತೆ ಗಳಿಸಿಕೊಂಡಿಲ್ಲ. ಬದಲಿಗೆ ಬೆಟ್ಟದ ತುಂಬಾ ಕಲ್ಲಾಸರೆ, ದಟ್ಟಡವಿ ಇರುವುದರಿಂದ ಅವುಗಳೇ ನೈಸರ್ಗಿಕ ರಕ್ಷಣೆಗಳಾಗಿ ರೂಪುಗೊಂಡಿವೆ. ನಿಡುಗಲ್ಲು, ದೇವರಾಯನದುರ್ಗ, ಹುತ್ರಿದುರ್ಗ, ದೊಡ್ಡೇರಿಗಳಲ್ಲಿ ಮಾತ್ರ ಹಸಿಮಣ್ಣಿನ ಬೃಹತ್ ಇಟ್ಟಿಗೆಗಳಿಂದ ನಿರ್ಮಾಣಗೊಂಡ ಕೋಟೆ ತೆನೆ ಕಂಡುಬರುತ್ತದೆ. ಉಳಿದಂತೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣಗೊಂಡ ತೆನೆಗಳು ಹೈದರ್-ಟಿಪ್ಪುವಿನ ಕಾಲದವು ಎಂಬುದಕ್ಕೆ ಅವುಗಳಲ್ಲಿರುವ ಫ್ರೆಂಚ್ ವಾಸ್ತು ರಚನೆಯಿಂದ ತಿಳಿಯುತ್ತದೆ. ಹೈದರ್, ಟಿಪ್ಪು ನಿರಂತರ ಯುದ್ಧದ ನಡುವೆಯೂ ಪಾವಗಡ, ಮಿಡಿಗೇಶಿ, ಮಧುಗಿರಿ, ಚೆನ್ನರಾಯನದುರ್ಗ, ಸಿರಾ, ದೇವರಾಯನದುರ್ಗ, ಹುತ್ರಿದುರ್ಗ ಕೋಟೆಗಳಲ್ಲಿ ಮೊದಲಾದ ತೆನೆಗಳಿಗೆ ಹೆಚ್ಚು ಆದ್ಯತೆ ನೀಡಿದ್ದಾರೆಂದರೆ ಬದಲಾದ ಯುದ್ಧ ನೀತಿಗಳಿಗೆ ಅನುಗುಣವಾಗಿ ಕೋಟೆಯ ರಚನಾ ಕ್ರಮದಲ್ಲೂ ತಂತ್ರಜ್ಞಾನವನ್ನು ಅಳವಡಿಸಿಕೊಳ್ಳುತ್ತಿದ್ದರೆಂದು ತೆನೆಗಳಲ್ಲಿರುವ ಬಂಕರ್‌ಗಳಿಂದ ತಿಳಿಯುತ್ತದೆ. ಆದರೂ ನಿರಂತರ ರಾಜಕೀಯ ಸಂಘರ್ಷದ ನಡುವೆಯೂ ಇವರು ಜಿಲ್ಲೆಯಲ್ಲಿ ಬಲಯುತವಾಗಿ ಕೋಟೆಗಳನ್ನು ಜೀರ್ಣೋದ್ಧಾರ ಮಾಡಿದರೆಂದರೆ ಸೋಜಿಗವೆನಿಸುತ್ತದೆ.

೩.೩.೩.೭. ಬಂದೂಕು ಅಥವಾ ಅಂಬುಗಿಂಡಿ

ಸಾಮಾನ್ಯವಾಗಿ ಅಂಬು ಅಥವಾ ಬಂದೂಕು ಕಿಂಡಿಗಳನ್ನು ಇದೇ ಕಾರಣಕ್ಕೆ ಬಳಸುತ್ತಿದ್ದರೆಂದು ಹೇಳಲಾಗದು. ಏಕೆಂದರೆ ಬೆಟ್ಟದ ತುದಿಯಲ್ಲಿ ನಿರ್ಮಾಣಗೊಂಡ ಕೋಟೆ ಗೋಡೆಯಲ್ಲೂ ಬಂದೂಕು ಅಥವಾ ಅಂಬುಗಿಂಡಿ ಎಂದು ಕರೆಯಲ್ಪಡುವ ಕಿಂಡಿಗಳಿಂದ ಸುತ್ತಲಿನ ಪರಿಸರ ವೀಕ್ಷಿಸಿದರೆ ಬೆಟ್ಟದ ತಳಭಾಗವು ಸುಮಾರು ೧ರಿಂದ ೫ ಕಿ.ಮೀ ದೂರದಲ್ಲಿರುವುದು ಗೋಚರಿಸುತ್ತದೆ. ಹೀಗಿರುವಾಗ ಶತ್ರುವಿನ ಮೇಲೆ ಪ್ರಯೋಗಿಸುವ ಬಾಣ ಅಥವಾ ಬಂದೂಕು ೬೦೦ ಮೀ.ಗಿಂತ ಹೆಚ್ಚು ದೂರ ಕ್ರಮಿಸಿದಂತೆಲ್ಲಾ ಕ್ರಮೇಣ ವೇಗ ಕುಂಠಿತವಾಗಿ ಗುರಿಯೇ ತಲುಪುವುದಿಲ್ಲ. ಆದುದರಿಂದ ಅವುಗಳನ್ನು ಅಂಬು ಅಥವಾ ಬಂದೂಕು ಕಿಂಡಿಗಳೆಂದು ಕರೆಯಲಾಗದು. ಹಾಗಾಗಿ ಕೋಟೆ ಗೋಡೆಲ್ಲಿರುವ ಕಿಂಡಿಗೂ ಕೆಳಗಿನ ಪ್ರದೇಶಕ್ಕೂ ಇರುವ ಅಂತರವನ್ನು ನೋಡಿ ಯಾವುದು ಅಂಬುಕಿಂಡಿ, ಬಂದೂಕು ಕಿಂಡಿ ಅಥವಾ ಯಾವುದು ವೀಕ್ಷಣಾ ಕಿಂಡಿ ಎಂಬುದನ್ನು ಗುರುತಿಸಬೇಕಾಗುತ್ತದೆ. ೬೦೦ ಮೀ.ಗಿಂತ ಕಡಿಮೆ ದೂರದಲ್ಲಿ ಶತ್ರುಗಳನ್ನು ಕಾಣಲು ಸಾಧ್ಯವಿದ್ದರೆ ಮಾತ್ರ ಅವುಗಳನ್ನು ಅಂಬು ಅಥವಾ ಬಂದೂಕು ಕಿಂಡಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ೬೦೦ ಮೀ.ಗಿಂತ ಹೆಚ್ಚಿನ ದೂರದಲ್ಲಿ ಶತ್ರು ಕಂಡನೆಂದರೆ ಅಂತಹವುಗಳನ್ನು

ವೀಕ್ಷಣಾ ಕಿಂಡಿ ಎಂದು ಪರಿಗಣಿಸಬೇಕಾಗಿದೆ. ಏಕೆಂದರೆ ಅಂಬು ಕಿಂಡಿಗಳನ್ನು ಬೇಕಾದರೆ ವೀಕ್ಷಣಾ ಕಿಂಡಿಗಳನ್ನಾಗಿ ಬಳಸಿಕೊಳ್ಳಬಹುದು. ಆದರೆ ವೀಕ್ಷಣಾ ಕಿಂಡಿಗಳನ್ನು ಅಂಬು ಅಥವಾ ಬಂದೂಕು ಕಿಂಡಿಗಳನ್ನಾಗಿ ಬಳಸಿಕೊಳ್ಳಲು ಸಾಧ್ಯವಿಲ್ಲ. ಇದನ್ನು ಗಮನಿಸಿಯೇ ನಂಜುಂಡ ಕವಿ ರಾಮನಾಥಚರಿತೆ, ನಾಗಚಂದ್ರನ–ಪಂಪರಾಮಾಯಣ, ಅಗ್ಗಳನ–ಚಂದ್ರಪ್ರಭಪುರಾಣ ಮೊದಲಾದ ಕೃತಿಗಳು 'ಅಂಬುಗಂಡಿಗಳೊಳು ಗುರಿಯೇರಿಗಿ ಮೆರೆವ ಕೈಗೋವಿ'[೨೪] ಎಂಬ ವರ್ಣನೆಗಳನ್ನು ಅಂದರೆ ಅಂಬು ಕಿಂಡಿಗಳ ಮೂಲಕ ಬಾಣ ಪ್ರಯೋಗ ಮಾಡುತ್ತಿದ್ದರೆಂಬ ಉಲ್ಲೇಖವನ್ನು ನೆಲದುರ್ಗಗಳಲ್ಲಿದ್ದ ಅಂಬುಗಂಡಿಗಳನ್ನು ಗಮನಿಸಿಯೇ ಹೇಳಿರಬಹುದು. ಸಾಮಾನ್ಯವಾಗಿ ಗಿರಿದುರ್ಗಗಳಲ್ಲಿ ಹೆಚ್ಚಾಗಿ ವೀಕ್ಷಣಾ ಕಿಂಡಿಗಳೇ ಇರುತ್ತವೆ. ಅವುಗಳನ್ನು ಅಂಬುಕಿಂಡಿ ಎಂಬುದಾಗಿ ಕರೆಯಲಾಗದು.

ಜಿಲ್ಲೆಯ ಅದೆಷ್ಟೋ ಕೋಟೆಗಳಿಗೆ ಕೋಟೆ ತೆನೆ ಎಂಬುದೇ ಇಲ್ಲ. ಗೋಡೆಯ ಮಧ್ಯದಲ್ಲೇ ಕಿಂಡಿಗಳನ್ನು ಬಿಟ್ಟು ಗೋಡೆಯ ಎತ್ತರ ವಿಸ್ತರಿಸಲ್ಪಟ್ಟಂತೆ ಕಿಂಡಿಗಳಿಗೆ ಮಣ್ಣನ್ನು ಸುರಿದು ಮುಚ್ಚಿದ್ದಾರೆ. ಕೆಲವು ಕೋಟೆಗಳಲ್ಲಿ ಮಾತ್ರ ಅವುಗಳನ್ನು ಹಾಗೆಯೇ ಬಿಡಲಾಗಿದೆ. ಅದರಲ್ಲೂ ಟಿಪ್ಪುವಿನಿಂದ ಜೀರ್ಣೋದ್ಧಾರವಾದ ಕೋಟೆಗಳಲ್ಲಿ ಒಂದೇ ಕಿಂಡಿಯಲ್ಲಿ ಆರು ಮಾತ್ರ ವಿವಿಧ ಪ್ರದೇಶಗಳ ಚಲನವಲನ ವೀಕ್ಷಿಸಬಹುದಾಗಿದೆ. ಆದರೆ ಟಿಪ್ಪುವಿನಿಂದ ನಿರ್ಲಕ್ಷಿಸಲ್ಪಟ್ಟ ಯಾವ ಕೋಟೆಯಲ್ಲೂ ಒಂದಕ್ಕಿಂತ ಹೆಚ್ಚು ಪ್ರದೇಶಗಳ ಚಲನವಲನ ವೀಕ್ಷಿಸಲು ಅವಕಾಶವಿಲ್ಲ. ಅಲ್ಲದೇ ಈ ಕೋಟೆಗಳಲ್ಲಿ ಹಳೆಯ ಯುದ್ಧ ತಂತ್ರಗಳೇ ಬಳಕೆಯಾಗುತ್ತಿದ್ದವು ಎಂಬುದಕ್ಕೆ ಈ ಮಾದರಿಯ ಕಿಂಡಿಗಳಿರುವಲ್ಲಿ ಕಬ್ಬಿಣದ ಮೊಳೆಗಳು ಹೆಚ್ಚಾಗಿ ಸಿಗುತ್ತವೆ. ಟಿಪ್ಪುವಿನ ಕಾಲದಲ್ಲೂ ಇವರು ಕತ್ತಿ, ಗುರಾಣಿಗಳಿಂದಲೇ ಹೋರಾಡುತ್ತಿದ್ದರೆಂಬುದಕ್ಕೆ ಇದು ನಿದರ್ಶನವಾಗಿದೆ. ಆದರೆ ಟಿಪ್ಪುವಿನ ಎಲ್ಲಾ ಕೋಟೆಗಳಲ್ಲಿ ಅಂಬು ಕಿಂಡಿಗಳಿಗಿಂತಲೂ ಬಂದೂಕು ಕಿಂಡಿಗಳೇ ಹೆಚ್ಚಾಗಿ ಬಳಸಲ್ಪಡುತ್ತಿದ್ದವು ಎನ್ನಲು ಅವುಗಳ ರಚನಾ ಶೈಲಿಯಿಂದ ತಿಳಿಯಬಹುದಾಗಿದೆ.

೩.೩.೩.೮. ಮುಗಿಲಟ್ಟಣೆ

ಆರಂಭದಲ್ಲಿ ಕೋಟೆ ಗೋಡೆಯ ಮೇಲ್ಭಾಗದಲ್ಲಿ ಇಲ್ಲವೆ ಎತ್ತರದ ಪ್ರದೇಶದಲ್ಲಿ ಮೂರು ಜನ ಸೈನಿಕರು ಮತ್ತು ಶಸ್ತ್ರಾಸ್ತ್ರಗಳನ್ನು ಇಡಲು ಮಾತ್ರ ಅವಕಾಶವಿರುವಂತೆ ಮರದಿಂದ ಅಟ್ಟಾಲಕವನ್ನು ನಿರ್ಮಿಸುತ್ತಿದ್ದರು. ಕೆಲವೊಮ್ಮೆ ಇದು ಶತ್ರುಗಳಿಂದ ಹಾಳಾಗುವ ಸಂಭವವೂ ಇರುತ್ತಿತ್ತು. ಆದುದರಿಂದ ನಂತರದಲ್ಲಿ ಕೋಟೆ ಗೋಡೆಗೆ ಹೊಂದಿಕೊಂಡಂತೆ ಇಟ್ಟಿಗೆ ಮತ್ತು ಗಾರೆಯಿಂದ ಅಟ್ಟಾಲಕವನ್ನು ೧ರಿಂದ ೬ ಮೀ.ವರೆಗೂ ಅಗಲವಾಗಿ ನಿರ್ಮಿಸಲಾರಂಭಿಸಿದರು. ಶಸ್ತ್ರಾಸ್ತ್ರಗಳನ್ನು ಇಡಲು ಇಲ್ಲವೇ ಸೈನಿಕರು ಶತ್ರುಗಳ ದಾಳಿಯಿಂದ ತಮ್ಮನ್ನು ರಕ್ಷಿಸಿಕೊಳ್ಳಲು ಬಂಕರ್‌ಗಳು ನಿರ್ಮಿಸಲ್ಪಟ್ಟವು. ಹೀಗೆ ಕಾಲಕಾಲಕ್ಕೆ ಬದಲಾವಣೆಗೆ ಒಳಪಡುತ್ತಿದ್ದ ಇವುಗಳ

ರಚನಾ ಶೈಲಿಯನ್ನು ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ಗೋಡೆಯ ಮೇಲೆ ಅದರ ಎತ್ತರಕ್ಕೆ ಅನುಗುಣವಾಗಿ ಅಟ್ಟಾಲಕದ ಸೋಪಾನವನ್ನು ೩೦ ದಂಡದಷ್ಟು ಅಂತರದಲ್ಲಿ ನಿರ್ಮಿಸಿ ಎರಡು ಅಟ್ಟಾಲಕಗಳ ನಡುವೆ ಎರಡು ಅಂತಸ್ತಿನ ೨ ೧/೨ಯಷ್ಟು ಉದ್ದದ ಇಟ್ಟಿಗೆ ಮನೆ, ಮೂರು ಜನ ಸೈನಿಕರು ತಂಗಲು ರಂಧ್ರಗಳಿಂದ ಕೂಡಿದ ಹಲಗೆಯ ಗೃಹ, ಇವುಗಳ ಮಧ್ಯೆ ೨ ಮೊಳ ಅಗಲ, ೮ ಮೊಳ ಉದ್ದದ ರಹಸ್ಯ ಮಾರ್ಗ ಹಾಗೂ ೮ ಮೊಳ ವಿಸ್ತಾರದ ಮೇಲಕ್ಕೇರಲು ಮಾರ್ಗ, ಶತ್ರುಗಳ ಆಯುಧಗಳಿಂದ ತಪ್ಪಿಸಿಕೊಳ್ಳಲು ಆವರಣ, ಅದರ ಪಕ್ಕದಲ್ಲಿ ಶತ್ರುಗಳ ಚಲನವಲನ ಅರಿಯಲು ವೀಕ್ಷಣಾ ಕಿಂಡಿ[೫೫] ಇರಬೇಕೆಂದು ತಿಳಿಸಿದ್ದಾನೆ. ಅದೇ ರೀತಿ ಕನಕದಾಸರ–ಮೋಹನ ತರಂಗಿಣಿ, ನಾಗಚಂದ್ರನ–ಪಂಪರಾಮಾಯಣ, ಜನ್ನನ–ಅನಂತನಾಥಪುರಾಣ, ಹರಿಹರನ–ಗಿರಿಜಾ ಕಲ್ಯಾಣ, ಅಗ್ಗನ–ಚಂದ್ರಪ್ರಭಪುರಾಣ ಮೊದಲಾದ ಸಾಹಿತ್ಯ ಕೃತಿಗಳು ಅಟ್ಟಾಲಕದ ಮಹತ್ವವನ್ನು[೫೬] ಉಲ್ಲೇಖಿಸಿವೆ.

ಜಿಲ್ಲೆಯಲ್ಲಿ ಮರದ ಅಟ್ಟಾಲಕ ಇದ್ದಿರಬಹುದೆಂದು ಹೇಳುವಂತಹ ಕುರುಹುಗಳು ಕಾಲಗರ್ಭದಲ್ಲಿ ಸೇರಿವೆ. ಆದರೆ ಗೋಡೆಯ ಮೇಲೆ ಇಟ್ಟಿಗೆ, ಕಲ್ಲು ಮತ್ತು ಗಾರೆಯಿಂದ ನಯಗೊಳಿಸಿದ ಅಟ್ಟಾಲಕ ಹಾಗೂ ಗೋಡೆಯಲ್ಲೇ ನಿರ್ಮಾಣಗೊಂಡ ರಕ್ಷಣಾ ಗೃಹಗಳನ್ನು ಕಾಣಬಹುದಾಗಿದೆ. ಅಟ್ಟಾಲಕವನ್ನು ಏರಲು ಮೆಟ್ಟಿಲುಗಳನ್ನು ಗೋಡೆಗೆ ಹೊಂದಿಕೊಂಡಂತೆ ನಿರ್ಮಿಸಲಾಗಿದೆ. ಟಿಪ್ಪುವಿನನಿಂದ ನವೀಕರಿಸಿಕಲ್ಪಟ್ಟ ಪಾವಗಡ, ಮಿಡಿಗೇಶಿ, ಮಧುಗಿರಿ, ಸಿರಾ, ಚೆನ್ನರಾಯನದುರ್ಗ, ದೇವರಾಯನದುರ್ಗ ಮೊದಲಾದ ಪ್ರತಿ ಕೋಟೆಯಲ್ಲೂ ಅಟ್ಟಾಲಕ ಕಂಡುಬರುತ್ತದೆ. ಆದರೆ ಟಿಪ್ಪುವಿನಿಂದ ನಿರ್ಲಕ್ಷಿಸಲ್ಪಟ್ಟ ಕೋಟೆಗಳು ಮೂಲ ರೂಪದಲ್ಲಿಯೇ ಇರುವುದರಿಂದ ಅವುಗಳಲ್ಲಿ ಇಟ್ಟಿಗೆ ಮತ್ತು ಗಾರೆಯ ಅಟ್ಟಾಲಕ ಕಂಡುಬರುವುದಿಲ್ಲ. ಆದುದರಿಂದ ಕಾರಣ ಇಲ್ಲಿ ಬಹುಶಃ ಮರದಿಂದ ಮಾಡಿದ ಅಟ್ಟಾಲಕ ಇದ್ದಿರಬಹುದಾದ ಸಾಧ್ಯತೆಗಳಿವೆ. ಆದರೂ ಬಹುತೇಕ ಕೋಟೆಗಳು ಅಭೇದ್ಯವಾದ ಬೆಟ್ಟಗುಡ್ಡಗಳಲ್ಲೇ ಇರುವುದರಿಂದ ಅಟ್ಟಾಲಕ ಇಲ್ಲದಿದ್ದರೂ ಶತ್ರುಗಳ ದಾಳಿಯ ಸಂದರ್ಭದಲ್ಲಿ ಕಲ್ಲಾಸರೆ, ಮರದ ಪೊಟರೆ, ಗುಹೆ, ಗುಂಡುಕಲ್ಲುಗಳಲ್ಲಿ ಅಡಗಿಕೊಂಡು ಅವರ ಮೇಲೆ ಬಿಲ್ಲು ಬಾಣ ಮತ್ತು ಬಂದೂಕುಗಳಂತಹ ಆಯುಧಗಳಿಂದ ಪ್ರತಿಧಾಳಿ ಮಾಡಲು ಅವಕಾಶಗಳಿರುತ್ತಿತ್ತು. ಹಾಗಾಗಿ ಅನಿವಾರ್ಯತೆ ಇರುವ ಕಡೆ ಮಾತ್ರ ಅಟ್ಟಾಲಕ ನಿರ್ಮಾಣವಾಗಿರಬಹುದು.

೩.೩.೪. ರಕ್ಷಣಾ ಸಂಬಂಧಿ ಕಟ್ಟಡಗಳ ವಾಸ್ತು ವಿನ್ಯಾಸ

ಕೇವಲ ಗೋಡೆ ಮತ್ತು ಅದಕ್ಕೆ ಸಂಬಂಧಿಸಿದ ಕೊತ್ತಲ, ದ್ವಾರ, ವಪ್ರ, ಕಂದಕ, ಅಂಬು ಕಿಂಡಿ, ಅಟ್ಟಾಲಕ ಮೊದಲಾದವುಗಳು ಇದ್ದರೆ ಮಾತ್ರ ಅದು ಪರಿಪೂರ್ಣ ಕೋಟೆ ಎಂದಲ್ಲ. ಕೋಟೆಯ ಒಳಗೆ ಪ್ರತಿ ಕಟ್ಟಡವೂ ವಾಸ್ತು ರಚನೆಯಲ್ಲಿ ಹೇಳಿದ ದಿಕ್ಕಿಗೆ ನಿರ್ಮಾಣವಾದಾಗ

ಮಾತ್ರ ಅದು ಅಭೇದ್ಯ ಕೋಟೆ ಎನಿಸಿಕೊಳ್ಳುತ್ತದೆ. ಕೌಟಿಲ್ಯನ ಅರ್ಥಶಾಸ್ತ್ರವು ಕೋಟೆಯ ಮಧ್ಯಭಾಗದಲ್ಲಿ ಪೂರ್ವ ಇಲ್ಲವೆ ಉತ್ತರಾಭಿಮುಖವಾಗಿ ಅರಮನೆಯನ್ನು ನಿರ್ಮಿಸಬೇಕು. ಅದರ ಈಶಾನ್ಯ ಭಾಗದಲ್ಲಿ ಪುರೋಹಿತರ ಯಜ್ಞಭೂಮಿ, ನೀರಿನ ಬಾವಿ, ಕಲ್ಯಾಣಿ, ದೊಣೆ ಹಾಗೂ ಮಂತ್ರಿಗಳ ವಾಸಸ್ಥಾನವನ್ನು ಏರ್ಪಡಿಸಬೇಕು. ಅಡಿಗೆ ಮನೆ, ಗಜಪುಷ್ಪಾಕಾರದ ಸಭಾ ಭವನ, ಉಗ್ರಾಣ, ಅಂತರ್ಗೃಹಗಳು ಅದರ ಆಗ್ನೇಯ ಭಾಗದಲ್ಲಿರಬೇಕು.[೫೭] ರಾಜಭವನದ ಹೊರಭಾಗ ಗಂಧ, ಹೂವು, ಧಾನ್ಯ, ರಸಗಳ ಅಂಗಡಿಗಳಿರಬೇಕು. ಶಿಲ್ಪಕಾರ ಮತ್ತು ಕ್ಷತ್ರಿಯರು ಪೂರ್ವ ದಿಕ್ಕಿನಲ್ಲಿ ವಾಸಿಸಬೇಕು. ಖಜಾನೆ ಮತ್ತು ಅದರ ಕಾರ್ಯಾಲಯ, ಶಿಲ್ಪ ಮೊದಲಾದ ತಯಾರಿಕಾ ಕಾರ್ಖಾನೆಗಳು ಆಗ್ನೇಯ ದಿಕ್ಕಿನಲ್ಲಿರಬೇಕು. ದಕ್ಷಿಣದಲ್ಲಿ–ನಗರ ಮತ್ತು ಧಾನ್ಯ, ವ್ಯವಹಾರ, ಗಣಿ ಅಧಿಕಾರಿ, ಅನ್ನ, ಮಾಂಸ, ಮದ್ಯಗಳನ್ನು ಮಾರುವವ, ಗಣಿಕೆಯರು, ನಟರು, ವೈಶ್ಯರು ನೆಲೆಸಬೇಕು. ನೈರುತ್ಯದಲ್ಲಿ ಕತ್ತೆ ಮತ್ತು ಒಂಟೆಗಳ ರಕ್ಷಣಾಗೃಹ ಮತ್ತು ಅವುಗಳ ದೊಡ್ಡಿ ಮತ್ತು ಕರ್ಮಗೃಹ, ಕಪ್ಯಗೃಹ, ಆಯುಧ ಶಾಲೆಗಳಿರಬೇಕು. ವಾಯುವ್ಯದಲ್ಲಿ ಮೇನಾಪಲ್ಲಕ್ಕಿ, ರಥಶಾಲೆ, ಅದರ ಪಶ್ಚಿಮದಲ್ಲಿ ನೆಯ್ಗೆಯವ, ಚಮ್ಮಾರ, ಬಿದಿರುಚಾಪೆ ಹೆಣೆಯುವವ, ಶೂದ್ರರು ನೆಲೆಸಬೇಕು. ಅದರ ವಾಯುವ್ಯದಲ್ಲಿ ಮೂರು ಮಳಿಗೆ, ಔಷಧಾಲಯವಿದ್ದು, ಧಾನ್ಯದ ಕಣಜ ಮತ್ತು ಗಜಾಶ್ವ ಶಾಲೆ ಈಶಾನ್ಯ ದಿಕ್ಕಿನಲ್ಲಿರಬೇಕು. ನಗರ ದೇವತಾಗೃಹ, ಕಮ್ಮಾರ, ಮನೆಗೆಲಸ ಮಾಡುವವ, ಬ್ರಾಹ್ಮಣರು, ಉತ್ತರ ದಿಕ್ಕಿನಲ್ಲಿರಬೇಕು. ಅದೇ ರೀತಿ ಅನುಕೂಲವಿರುವೆಡೆ ಅಗಸ, ನೆಯ್ಗೆಕಾರ, ಚಿಪ್ಪಿಗರ ತಂಡ, ವ್ಯಾಪಾರಕ್ಕೆ ಬಂದ ವಿದೇಶಿಯರ ಸಮೂಹ ವಾಸಿಸಲು ಅವಕಾಶವಿರಬೇಕು.[೫೮] ಹೀಗೆ ವಿವಿಧ ದಿಕ್ಕುಗಳಲ್ಲಿ ವಿವಿಧ ಸಮುದಾಯ, ಆಡಳಿತ ವರ್ಗ ವಾಸಿಸಬೇಕೆಂದು ಹೇಳುವ ವಾಸ್ತುಗ್ರಂಥಗಳನ್ನು ಆಧಾರವಾಗಿ ಜಿಲ್ಲೆಯಾದ್ಯಂತ ಇರುವ ಕೋಟೆಗಳನ್ನು ಗಮನಿಸಿದಾಗ ಯಾವ ಕಟ್ಟಡ ಎಲ್ಲಿ ರಚನೆಯಾಗಿದೆ ಎಂಬುದನ್ನು ಗುರುತಿಸುವುದು ಕಷ್ಟಸಾಧ್ಯ. ಏಕೆಂದರೆ ಕೋಟೆಯಲ್ಲಿ ಉಳಿದಿರುವ ಕಟ್ಟಡದ ಅವಶೇಷಗಳನ್ನು ಯಾವ ಕಟ್ಟಡದ್ದಿರಬಹುದೆಂದು ಗುರುತಿಸಲು ಸಾಧ್ಯವಾಗದಿರುವಷ್ಟು ಹಾಳಾಗಿರುವುದರಿಂದ ಕೋಟೆಯಲ್ಲಿರುವ ಇತರ ಕಟ್ಟಡಗಳ ವಾಸ್ತುವನ್ನು ಗುರುತಿಸುವುದು ಕಷ್ಟಸಾಧ್ಯ. ಅವುಗಳಲ್ಲಿ ಮದ್ದಿನಮನೆ, ದೇವಾಲಯ, ತುಪ್ಪದಕೊಳ, ಧಾನ್ಯದ ಕಣಜ, ನೀರಿನ ಸಂಗ್ರಹಣ ತಾಣ, ಅಲ್ಪಸ್ವಲ್ಪ ಉಳಿದಿರುವ ಅರಮನೆಯ ಅವಶೇಷಗಳನ್ನು ನಿಡುಗಲ್ಲು, ಪಾವಗಡ, ಮಧುಗಿರಿ, ಹುತ್ರಿದುರ್ಗ, ಚೆನ್ನರಾಯನದುರ್ಗ ಮೊದಲಾದ ಕಡೆ ಕಾಣಲು ಸಾಧ್ಯವಿದೆ. ಸಾಮಾನ್ಯವಾಗಿ ಜಿಲ್ಲೆಯಲ್ಲಿ ಗಿರಿದುರ್ಗಗಳು ಹೆಚ್ಚಾಗಿರುವುದರಿಂದ ಅವುಗಳಲ್ಲಿ ಕಟ್ಟಡಗಳನ್ನು ಆಯಾಯ ಪರಿಸರಕ್ಕೆ ಅನುಕೂಲವಾಗಿ ನಿರ್ಮಿಸಿದ್ದಾರೆ ಹೊರತು ಶಾಸ್ತ್ರಗ್ರಂಥಗಳನ್ನು ಆಧರಿಸಿ ನಿರ್ಮಾಣ ಮಾಡುತ್ತಿರಲಿಲ್ಲ. ರಕ್ಷಣಾ ಕೇಂದ್ರಗಳಲ್ಲಿ ಮಾತ್ರ ಕೇವಲ ಕಾವಲುಗಾರನಿಗಾಗಿ ಚೌಕ ಮಾದರಿಯ ಕಟ್ಟಡದ ಒಳಗೆ ವಾಸಿಸಲು ಕಟ್ಟಡ ಅದರ ಹೊರಗೆ ನೀರನ್ನು ಸಂಗ್ರಹಿಸಲು

ನೀರಿನ ಕಟ್ಟೆಯನ್ನಷ್ಟೇ ಕಾಣಲು ಸಾಧ್ಯವಿದೆ. ಹಾಗಾಗಿ ಜಿಲ್ಲೆಯಲ್ಲಿರುವ ಎಲ್ಲಾ ಕೋಟೆಗಳು ವಾಸ್ತುಬದ್ಧವಾಗಿ ನಿರ್ಮಿಸಲ್ಪಡದೆ ಸ್ಥಳೀಯ ಪರಿಸರದ ವಾಯುಗುಣ, ನೈಸರ್ಗಿಕ ಸಂಪನ್ಮೂಲಗಳಿಗೆ ಅನುಗುಣವಾಗಿ ಸ್ಥಳೀಯ ವಾಸ್ತುವೈವಿಧ್ಯತೆಯಿಂದ ಕೂಡಿವೆ.

೩.೪. ಸಾಹಿತ್ಯದಲ್ಲಿ ಕೋಟೆಗಳ ವರ್ಣನೆ

ಕೋಟೆ-ಕೊತ್ತಲಗಳ ವಾಸ್ತು ರಚನೆ ಶಾಸನಗಳಲ್ಲಿ ಉಲ್ಲೇಖಗೊಳ್ಳದಿದ್ದರೂ ರಾಜನೀತಿಗೆ ಸಂಬಂಧಿಸಿದ ಮತ್ತು ಸಾಹಿತ್ಯ ಕೃತಿಗಳಿಂದ ದೊರೆಯುತ್ತದೆ. ಅವುಗಳನ್ನು ಆಧರಿಸಿ ಕೋಟೆಗಳು ಕಾಲಕಾಲಕ್ಕೆ ಹೇಗೆ ಬದಲಾವಣೆ ಹೊಂದುತ್ತಿದ್ದವು, ಅವುಗಳಿಂದ ಆಗುವ ಪ್ರಯೋಜನ, ನಿರ್ಮಿತಗೊಂಡ ಕೋಟೆಗಳ ಮೇಲೆ ಪ್ರತಿ ದಾಳಿಯನ್ನು ಹೇಗೆ ಮಾಡುತ್ತಿದ್ದರೆಂದು ವಿಶ್ಲೇಷಿಸಬೇಕಾಗುತ್ತದೆ. ಈ ತಂತ್ರಗಳನ್ನು ಆಧರಿಸಿ ಕೋಟೆಗಳನ್ನು ಶತ್ರುಗಳ ಮುತ್ತಿಗೆಯಿಂದ ತಡೆಯಲು ಹೊಸದಾದ ರಕ್ಷಣಾ ತಂತ್ರಗಳಿಂದ ಜೀರ್ಣೋದ್ಧಾರ ಮಾಡಿಕೊಳ್ಳುತ್ತಿದ್ದರು ಎಂಬುದು ಕೋಟೆಗಳ ಅಧ್ಯಯನದಿಂದ ತಿಳಿಯುತ್ತದೆ.

ಹೀಗೆ ಕೋಟೆ-ಕೊತ್ತಲಗಳ ಬಗ್ಗೆ ವಿವರವಾದ ವರ್ಣನೆ ವೇದ, ಪುರಾಣ, ಮಹಾಕಾವ್ಯ, ಕೌಟಿಲ್ಯನ-ಅರ್ಥಶಾಸ್ತ್ರ, ಮನುವಿನ-ಮನುಸ್ಮೃತಿ, ವಿಷ್ಣುಶರ್ಮನ-ಪಂಚತಂತ್ರ, ಕಾಮಾಂದಕನ-ನೀತಿಸಾರ, ಶುಕ್ರನ-ನೀತಿಸಾರ, ಜನ್ನನ ಅನಂತನಾಥ ಪುರಾಣ, ಅಗ್ಗಳನ-ಚಂದ್ರಪ್ರಭ ಪುರಾಣ, ಹರಿಹರನ-ಗಿರಿಜಾ ಕಲ್ಯಾಣ, ಕನಕದಾಸನ-ಮೋಹನ ತರಂಗಿಣಿ, ಮೂರನೆಯ ಸೋಮೇಶ್ವರನ-ಮಾನಸೋಲ್ಲಾಸ, ನಂಜುಂಡಕವಿಯ-ರಾಮನಾಥ ಚರಿತ, ವಿರೂಪಾಕ್ಷ ಪಂಡಿತನ-ಚೆನ್ನಬಸವ ಪುರಾಣ, ದೇವಪ್ಪಕವಿಯ-ರಾಮನಾಥವಿಜಯ ಕಾವ್ಯ, ಆಚಾರ್ಯ ಸೋಮದೇವರ-ನೀತಿವಾಕ್ಯಾಮೃತಂ, ಶ್ರೀಕೃಷ್ಣದೇವರಾಯನ-ದಿನಚರಿ ಮೊದಲಾದ ಸಾಹಿತ್ಯ ಕೃತಿಗಳಲ್ಲಿ ಕಂಡುಬರುತ್ತದೆ.

ಕೌಟಿಲ್ಯನ ಅರ್ಥಶಾಸ್ತ್ರ ದೇಶದ ನಾಲ್ಕು ದಿಕ್ಕುಗಳಲ್ಲೂ ಅಭೇದ್ಯವಾದ ಹಾಗೂ ನಿತ್ಯವಸರದ ಸಾಮಗ್ರಿಗಳು ಹೇರಳವಾಗಿ ದೊರೆಯುವಂತಹ ಪ್ರದೇಶಗಳಲ್ಲಿ ನಾಲ್ಕು ವಿಧದಲ್ಲಿ ನಿರ್ಮಿಸಬೇಕೆಂದೂ, ಅದರಲ್ಲೂ ಗಿರಿದುರ್ಗ ಮತ್ತು ಜಲದುರ್ಗಗಳು ಎಲ್ಲಾ ಕಾಲಕ್ಕೂ ಎಲ್ಲಾ ಪ್ರದೇಶಗಳಿಗೂ ಆಗಿರಬೇಕೆಂದು ಅನುಕೂಲಕರವಾಗಿರಬಲ್ಲವು[೫೯] ಹೇಳಿದ್ದಾನೆ.

ಮನು ಸ್ಮೃತಿಯಲ್ಲಿ ಕೋಟೆಗಳನ್ನು ಕುರಿತು
ಸರ್ವೇಣ ತು ಪ್ರಯತ್ನೇನ ಗಿರಿದುರ್ಗಂ ಸಮಾಶ್ರಯೇತ್
ಏಷ್ಯಾಂ ಹಿ ಬಾಹುಗಣ್ಯೇನ ಗುರಿದುರ್ಗಂ ವಿಶಿಷ್ಯತೇ
ಏಕಂ ಶತಂ ಯೋಧ ಮತಿ ಪ್ರಾಕಾರಸ್ಥೊ ಧನುರ್ಧರಃ
ಶತಂದಶ ಸಹಸ್ರಾಣಿ ತಸ್ಮಾದ್ದುರ್ಗಂ ವಿಧೀಯತೇ[೬೦]

ಎಂಬುದಾಗಿ ಉಲ್ಲೇಖಿಸಿದ್ದಾನೆ. ಅಂದರೆ ಎಲ್ಲಾ ದುರ್ಗಗಳಿಗಿಂತ ಗಿರಿದುರ್ಗವನ್ನು ಏರಲು ಶ್ರಮದಾಯಕ ಆಗಿರುವುದರಿಂದ ಗಿರಿದುರ್ಗವೇ ಉತ್ತಮವಾದದ್ದು ಎಂದಿದ್ದಾನೆ. ನಾಗಚಂದ್ರನು ಪಂಪರಾಮಾಯಣದಲ್ಲಿ ಕೋಟೆಯ ಪ್ರಸ್ತಾಪವನ್ನು ಮಾಡಿದ್ದಾನೆ.

ನೀರ್ಗಾದಿಗೆ ಪೆಡೆಯುತ್ತುಂ ಪೊನ್ನ ಕೋಂಟಿಯಂ ಒಳಸಿಕುಂ
ಚೆಂಬೊನ್ನ ಕೋಂಟಿ ಪರಿವೇ
ಷಂಬೆತ್ತಳನೇಸ ಬಂತೆ ನೀರ್ಗಾದಿಗೆಯಂ
ಮುಗಿಲಟ್ಟಳೆಗಳ ಕೆಲದಂ
ಬುಗಂಡಿಯಿಂ ನುಸುಳ್ದು ನಡೆವ ದಿನಕರನ ಹಯಂ[೬೧]

ಇಲ್ಲಿ ಹೊನ್ನಿನ ಕೋಟೆಯನ್ನು ನೀರ್ಗಾದಿಗೆ ಉಲ್ಲೇಖಿಸಲಾಗಿದೆ. ಮುಗಿಲೆತ್ತರದ ಅಟ್ಟಳೆ, ಪಕ್ಕದಲ್ಲಿರುವ ಅಂಬುಗಂಡಿ, ಗಾಳಿಗೆ ಹಾರಾಡುವ ಧ್ವಜ, ಕೋಟೆಯ ಮೇಲೆ ಕಂಡುಬರುತ್ತಿದ್ದವೆಂದು ಕವಿ ವರ್ಣಿಸಿದ್ದಾನೆ.

ಹರಿಹರ ಗಿರಿಜಾ ಕಲ್ಯಾಣ ಕೋಟೆಯನ್ನು ಸೊಗಸಾಗಿ ವರ್ಣಿಸಿದ್ದಾನೆ. ಪಳುಕಿನ ಕೋಂಟೆ, ಒಟ್ಟದೆನೆ ಬೇವಿನದಂಡೆ ನಭಕ್ಕೆಮೀಟುವಟ್ಟಳೆ

ನಿಮಿರ್ದೆಲರೆ ಹಾಱುವ ಪತಾಕೆ ವಿರಾಜಿಪಗೋಂಟು ಗೋಂಟಿನೊಳ್
ಬಳಸಿದ ಕೊತ್ತಳ ಸೊಗಯಿಪಾಳ್ವೇರಿ ಡೆಂಕಣಿ ಸಾರಮಾರಿಯಗಙ್ಗಳಿಸುವ
ಗೋಪುರದಿಂ ಪುಲಿಮೊಗಂ ಮೇಗುಂ ಪುರದೊಳ್ ನಿರಂತರಂ[೬೨] ಎಂಬುದಾಗಿ ಕೋಟೆಗೆ ಸಂಬಂಧಿಸಿದ ರಕ್ಷಣಾ ತಂತ್ರಗಳ ಉಲ್ಲೇಖವಿದೆ.

ಆಚಾರ್ಯ ಸೋಮದೇವ ನೀತಿವಾಕ್ಯಾಮೃತಂ ಕೃತಿಯಲ್ಲಿ ಕೋಟೆಗಳಿಂದ ಆಗುವಂತಹ ಪ್ರಯೋಜನ, ಅದರ ಮಹತ್ವವನ್ನು ವರ್ಣಿಸಿದ್ದಾನೆ.

ಯಸ್ಯಾಭಿಯೋಗಾತ್‌ಪರೆ ದುಃಖಗಚ್ಛಂತಿ ದುರ್ಜನೋದ್ಯೋಗವಿಷಯೋ
ವಾಸ್ವಸ್ಯ ವಿಜಿಗಿಷೋ ರಾಪ್‌ದೋ ಗಮಯತೀತಿ ದುರ್ಗಂ[೬೩]

ಅಂದರೆ ಆಕ್ರಮಿಸಿಕೊಳ್ಳಲು ಬರುವ ಶತ್ರುಗಳಿಗೆ ದುಃಖವನ್ನು ಉಂಟುಮಾಡುವ, ದುರ್ಜನರ ಕಾರ್ಯಾಚರಣೆಯನ್ನು ಗೆಲ್ಲಲು ಬಂದವರನ್ನು ವಿಪತ್ತಿಗೆ ಗುರಿಪಡಿಸುವಂತಹದ್ದೇ ದುರ್ಗ ಎಂದು ಹೇಳಿದ್ದಾನೆ.

ದೇವಪ್ಪ ಕವಿಯು ರಾಮವಿಜಯ ಕಾವ್ಯದಲ್ಲಿ ಪುರವರ್ಣನೆ ಮಾಡುವಾಗ ಕೋಟೆಯ ಅಂಗಗಳನ್ನು ವರ್ಣಿಸಿದ್ದಾನೆ.

ಅಱುವುದು ನಾಲಗೆ ಲವಣಾಬ್ಧಿಯಗಳೆಂಬ। ತೆಱನ ನಯನ ಚಿತ್ತಗಳಿಗೆ ॥
ಕಿಯಬಾರದು ಅಗಲಾಳದಿಂ ನಗರದ। ಹೊಱಗಳ ನೀರಗಳಿರಲು
ಚೋರಗಂಡಿಗಳೊಪ್ಪಿದವಾಪುರಕತಿ
ಆಪುರದೊಳಗೆಸೆದಿಹ ನೀಲರನ್ನದ ಗೋಪುರ ನೆಲೆಯೊಳಗೆ
ಆ ಪೊತ್ತೆಸೆವ ಪತಾಕಾಪವನನಿಂದ। ತಾಪವ ಕಳೆಯವನಾ ತರಣಿ

ಅಂದರೆ ಕೋಟೆಯ ಕಂದಕವನ್ನು ಸಮುದ್ರದಂತೆ ಆಳವಾಗಿದ್ದು, ತೆನೆಗಳನ್ನು ಬ್ರಹ್ಮನು ಸಂಧ್ಯಾಕಾಲದ ಮೋಡಗಳ ಕಾಂತಿಯನ್ನು ಅಲ್ಲಿಗೆ ತಂದು ಇರಿಸಿದನೋ ಎಂಬಂತೆ, ಆ ಪಟ್ಟಣಕ್ಕೆ ಅಧೀನವಾಗದೆ ಇರುವ ಅರಸನನ್ನು ಸೇರುವಂತೆ ನುಂಗಿ ಬಿಡುವುನೆಂದು ರೆಪ್ಪೆ ಬಡಿಯದೆ ನೋಡುತ್ತಿರುವ ಮಾರಿ ದೇವತೆಯ ಕಣ್ಣುಗಳೋ ಎಂಬಂತೆ ಚೋರಗಂಡಿಗಳಿವೆಯೆಂದೂ,[೬೯] ವರ್ಣಿಸಿದ್ದಾನೆ.

ಸಾಹಿತ್ಯದ ಜೊತೆಗೆ ಕೆಲವು ಶಾಸನಗಳು ಸಹ ಕೋಟೆಯನ್ನು ವರ್ಣಿಸಿರುವುದು ಕಂಡುಬರುತ್ತದೆ. ಉದಾಹರಣೆಗೆ

ಕ್ರಿ.ಶ.೫೪೩ರ ಬಾದಾಮಿ ಶಾಸನವು ಕೋಟೆಯನ್ನು ಹೀಗೆ ಉಲ್ಲೇಖಿಸಿದೆ.

ಧರಾಧರೇಂದ್ರ ವಾತಾಪಿಮಜೇಯಂ ಭೂತಯೇ ಭುವಃ
ಅಧಸ್ತಾವು ಪರಿಸ್ತಾಚ್ಛ ದುರ್ಗಮೇತದ ಚೇ ಕೆರತ್[೭೫]

ಅಂದರೆ ವಾತಾಪಿಯ ಬೆಟ್ಟದ ಮೇಲೆ ದಾಳಿ ಮಾಡಿ ಜಯಿಸಲಾಧ್ಯವಾದ ಕೋಟೆಯನ್ನು ಭೂಮಿಯ ಮೇಲೆ ನಿರ್ಮಿಸಿದನು ಎಂದು ವರ್ಣಿಸಲ್ಪಟ್ಟಿದೆ.

ಕ್ರಿ.ಶ. ೬೩೪-೩೫ರ ಐಹೊಳೆಯ ರವಿಕೀರ್ತಿಯ ಶಾಸನ ಬನವಾಸಿ ಕೋಟೆಯನ್ನು ಹೀಗೆ ವರ್ಣಿಸಿದೆ.

ವರದಾ ತುಙ್ಗರಙ್ಗ ವಿಲಸದ್ಧಲಸಾವಳೀ ಮೇಜಲಾಂ
ವನವಾಸೀ ಮವಮ-ದ್ನತಸ್ಸುರಪುರ ಪ್ರಸ್ಪರ್ಧಿ ನೀಂ ಸಮದಾ
ಮಹತಾಯಸ್ಸು ಬಲಾರ್ಣ್ಣವೇನ ಪರಿತಸ್ಸ ಇ್ಛಾದಿಕೋ ರ್ವ್ವಿತಲಂ
ಸ್ಥಲದುರ್ಗ ಜ್ಜಲದುರ್ಗ್ಗ ತಾಮಿವಗತಂ ತತ್ತತ್ಕಣೆ ಪಶ್ಯತಾಮ್॥[೭೬]

ಅಂದರೆ ವರದಾ ನದಿಯ ದಡದಲ್ಲಿರುವ ಬನವಾಸಿ ಸ್ಥಳದುರ್ಗವನ್ನು ಜಲದುರ್ಗವನ್ನಾಗಿಸಿದ ಪರಿಯನ್ನು ವರ್ಣಿಸಿದೆ.

ಕ್ರಿ.ಶ. ೧೨೩೨ರ ಇಮ್ಮಡಿ ಇರುಂಗೋಳನ ನಿಡುಗಲ್ಲು ಶಾಸನ ಕೋಟೆಯ ಮಹತ್ವವನ್ನು ವರ್ಣಿಸಿದೆ.

ಕಾಳಾಂಜನವೆಂಬುದಿರುಂ

ಗೋಳನ ಗಿರಿದುರ್ಗ್ಗ ವನ್ತದ ಭ್ರಂಕಷತಾ

ಭೀಳತರ ಚೂಳವದಱು

ತ್ತಾಳತೆಯನೆ ನೋಡಿ ಧಾತ್ರಿ ನಿಡುಗಲ್ಲೆನ್ಗಂ[೬]

ಇರುಂಗೋಳನು ಆಳ್ವಿಕೆ ಮಾಡುತ್ತಿದ್ದ ನಿಡುಗಲ್ಲು ಗಿರಿದುರ್ಗವು ಕರ್ನಾಟಕದ ಗಿರುದುರ್ಗಗಳಲ್ಲೇ ಹೆಸರು ಪಡೆದುಕೊಂಡಿದೆ ಎಂದು ಉಲ್ಲೇಖಿಸಿದೆ.

ಹೀಗೆ ಸಾಹಿತ್ಯ ಕೃತಿ ಮತ್ತು ಶಾಸನಗಳು ಕೋಟೆಗಳನ್ನು ಹಲವು ವಿಧದಲ್ಲಿ ವರ್ಣಿಸಿದ್ದು, ಕೋಟೆಗಳ ಮಹತ್ವವನ್ನು ತಿಳಿಸುತ್ತದೆ.

೩.೧೧. ಕೋಟೆಯ ಪ್ರಕಾರಗಳು

ಕ್ರಿ.ಶ. ೧೬ರಿಂದ ೧೮ನೆಯ ಶತಮಾನಗಳಲ್ಲಿ ಕಂಡುಹಿಡಿಯಲ್ಪಟ್ಟ ಮದ್ದುಗುಂಡು, ಫಿರಂಗಿ, ವೈಮಾನಿಕ ದಾಳಿಗಳಂತಹವು ಆವಿಷ್ಕಾರಗೊಂಡಿರದ ಆ ಕಾಲಘಟ್ಟದಲ್ಲಿ ಅಂದರೆ ಪ್ರಾಚೀನ ಕಾಲದಿಂದ ೧೮ನೆಯ ಶತಮಾನದವರೆಗೂ ಕೋಟೆಗಳು ಅತ್ಯಂತ ಮಹತ್ವದ ಪಾತ್ರವನ್ನು ವಹಿಸುತ್ತಿದ್ದವು. ಹಾಗಾಗಿಯೇ ಕಾಲಕಾಲಕ್ಕೆ ಯುದ್ಧತಂತ್ರ ಹಾಗೂ ಆಯುಧಗಳನ್ನು ಆವಿಷ್ಕಾರಗೊಂಡಂತೆಲ್ಲ ಕೋಟೆ ನಿರ್ಮಾಣ ಶೈಲಿಯು ಬದಲಾವಣೆಗೊಳಪಡುತ್ತಿತ್ತು. ಕೌಟಿಲ್ಯ, ಮನು, ಶುಕ್ರ, ಕಾಮಾದಕ, ತಿರುವಳ್ಳುವರ್ ಮೊದಲಾದ ರಾಜನೀತಿಜ್ಞರು ಹಲವು ಪ್ರಕಾರದ ಕೋಟೆಗಳನ್ನು ಆಯಾಯ ಪರಿಸರಗಳಿಗೆ ಅನುಗುಣವಾಗಿ ಶತ್ರುಗಳಿಂದ ರಕ್ಷಣೆ ಪಡೆಯಲು ಸೂಚನೆ ನೀಡಿದ್ದಾರೆ. ಅವುಗಳಲ್ಲಿ ಸ್ಥಳದುರ್ಗ, ಗಿರಿದುರ್ಗ, ಜಲದುರ್ಗಗಳು ಮಾತ್ರ ಹೆಚ್ಚು ಪ್ರಸಿದ್ಧಿಗೆ ಬಂದವು.

ಕೌಟಿಲ್ಯ ಅರ್ಥಶಾಸ್ತ್ರದಲ್ಲಿ ಸೂಕ್ತವಾದ ಸ್ಥಳದಲ್ಲಿ ಸದಾ ನೀರಿನ ಸೆಳೆತ, ದಿನಿತ್ಯದ ಅವಸರಗಳನ್ನು ಪೂರೈಸಲು ಅನುವಾಗಿರುವಂತಹ, ನೈಸರ್ಗಿಕವಾಗಿ ಅಭೇದ್ಯತೆಯಿಂದ ಕೂಡಿದ ಪ್ರದೇಶದಲ್ಲಿ ರಾಜ್ಯದ ನಾಲ್ಕು ದಿಕ್ಕೂಗಳಲ್ಲೂ ಕೋಟೆ ಕಟ್ಟಿಸಬೇಕೆಂದು ಉಲ್ಲೇಖಿಸಿದ್ದಾನೆ. ಪ್ರಮುಖವಾಗಿ

೧. **ಔದಕ:** ಆಳವಾದ ನದಿ, ಸಮುದ್ರ, ಸರೋವರಗಳಿಂದ ಸುತ್ತುವರೆದು ನಡುಗಡ್ಡೆಯಂತಿರುವ ಅಥವಾ ಮಾನವ ನಿರ್ಮಿತ ಆಳವಾದ ಕಂದಕಕ್ಕೆ ಜಲಾಶಯಗಳಿಂದ ಸುತ್ತಲೂ ನೀರು ಬಿಟ್ಟು, ದ್ವೀಪದಂತಹ ಪ್ರದೇಶವನ್ನು ನಿರ್ಮಿಸಿ ಅಲ್ಲಿ ಕೋಟೆ ಕಟ್ಟುವಂತಹದ್ದಾಗಿದೆ.

೨. ಪರ್ವತ: ಎತ್ತರದ ಬೆಟ್ಟಗುಡ್ಡಗಳ ಮೇಲೆ ಅಲ್ಲಿಯೇ ಸಿಗುವ ಬೃಹತ್ತಾದ ಕಲ್ಲುಗುಂಡುಗಳನ್ನು ಬಳಸಿಕೊಂಡು ನಿರ್ಮಿಸಲ್ಪಟ್ಟಿರುವುದು. ಅದು ನೋಡುಗರಿಗೆ ಭಯದ ವಾತಾವರಣ ಮೂಡಿಸುವಂತಹ ಗುಹೆಯ ಮಾದರಿಯಲ್ಲಿ ಇರಬೇಕಾಗುತ್ತದೆ.

೩. ಧಾನ್ವನ: ಒಯಸಿಸ್ ಇರುವಂತಹ ಪ್ರದೇಶಗಳಲ್ಲಿ ಸುತ್ತಲೂ ಮರಳುಗಾಡಿರಬೇಕು. ನೀರಿನ ಸುತ್ತಲೂ ಅದರ ಒಳಭಾಗದಲ್ಲಿ ಕೋಟೆಯನ್ನು ಕಟ್ಟಿಸಬೇಕು ಇಲ್ಲವೆ ಒಣಮಣ್ಣಿನಿಂದ ಕೂಡಿದ ಪ್ರದೇಶದಲ್ಲಿ ಕೋಟೆ ನಿರ್ಮಿಸಬೇಕು.

೪. ವನದುರ್ಗ: ಕುರುಚಲುಗಿಡ, ಮುಳ್ಳಿನ ಪೊದೆಗಳಿಂದ ಕೂಡಿದ ಪ್ರದೇಶದಲ್ಲಿ ಕೋಟೆ ಗೋಡೆ ಕಾಣಿಸದಂತೆ ಅಥವಾ ಅತಿಯಾದ ಕೆಸರಿನಿಂದ ಕೂಡಿದ, ಇಲ್ಲವೇ ದಟ್ಟ ಅಡವಿಯಿಂದ ಕೂಡಿದ ಪ್ರದೇಶದಲ್ಲಿ ನಿರ್ಮಾಣವಾಗುವಂತಹ ಕೋಟೆಯಾಗಿದೆ.

ಈ ನಾಲ್ಕು ಮಾದರಿಯ ಕೋಟೆಗಳನ್ನಲ್ಲದೇ ಸ್ಥಳದುರ್ಗವನ್ನು ಸಹ ಅಭೇದ್ಯವಾದ ಸದಾ ನೀರಿನಿಂದ ಕೂಡಿದ ಪ್ರದೇಶದಲ್ಲಿ ನಿರ್ಮಿಸಿಕೊಳ್ಳಬಹುದೆಂದು ಸೂಚಿಸಿದ್ದಾನೆ. ಆದರೆ ಈ ನಾಲ್ಕು ಕೋಟೆಗಳಲ್ಲಿ ಶತ್ರು ದಾಳಿಗಳಿಂದ ರಕ್ಷಣೆ ಪಡೆಯಲು ಜಲದುರ್ಗ ಮತ್ತು ಗಿರಿದುರ್ಗ ಅತ್ಯುತ್ತಮ ಮಾದರಿಗಳೆಂದು ಹೇಳಿದ್ದಾನೆ.[೬೮]

ಶುಕ್ರನು ನೀತಿಸಾರದಲ್ಲಿ ಶತ್ರುಗಳಿಂದ ರಕ್ಷಣೆ ಪಡೆದುಕೊಳ್ಳಲು ಆಯಾಯ ಭೌಗೋಳಿಕ ಪರಿಸರಕ್ಕನುಗುಣವಾಗಿ ಅಭೇದ್ಯವಾದ ಒಂಭತ್ತು ಮಾದರಿಯ ಕೋಟೆಗಳಲ್ಲಿ ಯಾವುದಾದರೂ ಒಂದು ಕೋಟೆಯನ್ನು ನಿರ್ಮಿಸಿಕೊಳ್ಳಲು ಸೂಚಿಸಿದ್ದಾನೆ.

೧. ಐರಿಣ: ಹಳ್ಳಕೊಳ್ಳ, ಕಲ್ಲು ಹಾಗೂ ಮುಳ್ಳುಗಳಿಂದ ಸುತ್ತುವರೆಯಲ್ಪಟ್ಟಿರುವ ಪ್ರದೇಶದಲ್ಲಿ ನಿರ್ಮಾಣವಾದಂತಹ ಕೋಟೆಯಾಗಿದೆ.

೨. ಪರಿಖ: ಆಳ ಮತ್ತು ಅಗಲವಾದ ಕಂದಕಗಳಿಂದ ಸುತ್ತುವರಿಯಲ್ಪಟ್ಟ ಕೋಟೆಯಾಗಿದೆ.

೩. ಪರಿಷ: ಇಟ್ಟಿಗೆ ಮತ್ತು ಕಲ್ಲಿನ ಚೂರು ಹಾಗೂ ಮಣ್ಣಿನಿಂದ ತುಂಬಲ್ಪಟ್ಟ ಕೋಟೆಗೋಡೆ.

೪. ವನ: ದಟ್ಟಡವಿಯಲ್ಲಿ ಮುಳ್ಳಿನ ಮರ ಮತ್ತು ಪೊದೆಗಳಿಂದ ಸುತ್ತುವರಿಯಲ್ಪಟ್ಟಿರುವ ಸ್ವಾಭಾವಿಕ ಗೋಡೆಯಾಗಿದೆ.

೫. ಧನ್ವ: ಕೋಟೆಯ ಒಳಗೆ ಮಾತ್ರ ನೀರಿದ್ದು, ಕೋಟೆಯ ಹೊರಗೆಲ್ಲ ಬಹುದೂರದವರೆಗೆ ಒಣಮಣ್ಣು ಆವರಿಸಿಕೊಂಡು ನೀರಿನ ಮೂಲಗಳಿರಬಾರದು.

೬. ಜಲ: ಸುತ್ತಲೂ ನೀರಿದ್ದು, ಮಧ್ಯದಲ್ಲಿ ಭೂಮಿಯಿರುವಂತಹ ಕಡೆ ನಿರ್ಮಿಸಲ್ಪಟ್ಟ ಕೋಟೆ.

೭. ಗಿರಿ: ಕೆಳಭಾಗದಲ್ಲಿ ನೀರಿಲ್ಲದಂತಹ ಎತ್ತರವಾದ ಬೆಟ್ಟದ ಮೇಲೆ ಗೋಡೆ ನಿರ್ಮಿಸಿ ಮಳೆಯ ನೀರನ್ನು ಒಳಗಡೆ ಸಂಗ್ರಹಿಸುವಂಥದ್ದಾಗಿದೆ.

೮. ಸೈನ್ಯ: ಆಪತ್ಕಾಲದಲ್ಲಿ ಅಥವಾ ಯುದ್ಧದಂತಹ ಸಂದರ್ಭದಲ್ಲಿ ಶಸ್ತ್ರಸನ್ನದ್ಧರಾಗಿ ಯುದ್ಧ ಕವಚಗಳನ್ನು ಧರಿಸಿದ ಸದೃಢ ಸೈನಿಕರಿಂದ ಸುತ್ತವರಿಯಲ್ಪಟ್ಟ ಆವರಣ.

೯. ಸಹಾಯ: ಗ್ರಾಮ, ಪಟ್ಟಣ ಅಥವಾ ರಾಜಧಾನಿಯ ಸುತ್ತ ಕೋಟೆಯಿರದೆ ಕೇವಲ ತಮ್ಮ ಬಂಧುಗಳು, ಸ್ನೇಹಿತರ ಮನೆಗಳ ಸುತ್ತ ಸುತ್ತುವರೆದ ಕೋಟೆಯಾಗಿದೆ.

ಹೀಗೆ ಒಂಭತ್ತು ಪ್ರಕಾರದ ಕೋಟೆಗಳನ್ನು ಸೂಚಿಸಿದರೂ ಅವುಗಳಲ್ಲಿ ಸೈನಿಕ ಮತ್ತು ಸಹಾಯ ಕೋಟೆಗಳು ಬೇರೆಲ್ಲಾ ಮಾದರಿಗಳಿಗಿಂತಲೂ ಉತ್ತಮವಾಗಿವೆ ಎಂದೂ, ಸಾಮಾನ್ಯವಾಗಿ ಯಾವುದೇ ಒಂದು ಕೋಟೆ ಉಳಿಯಬೇಕೆಂದರೆ ಅದರಲ್ಲಿ ಆಹಾರ ಮತ್ತು ಶಸ್ತ್ರಸಂಗ್ರಹ ಹೇರಳವಾಗಿರಬೇಕು[೬] ಎಂದಿದ್ದಾನೆ.

ಸ್ಮೃತಿಕಾರನಾದ ಮನು ಆರು ಮಾದರಿಯ ಕೋಟೆಗಳನ್ನು ಉಲ್ಲೇಖಿಸಿದ್ದಾನೆ.

೧. ಧನುದುರ್ಗ: ಒಣಮಣ್ಣಿನಿಂದ ಕೂಡಿದ ಇಲ್ಲವೇ ಕಾಡು ಮತ್ತು ನೀರಿಲ್ಲದ ಪ್ರದೇಶದಿಂದ ಸುತ್ತುವರೆದಿರುವ ಮರುಭೂಮಿಯಲ್ಲಿ ನಿರ್ಮಾಣವಾದದ್ದು.

೨. ಮಹೀ: ಕಲ್ಲು ಮತ್ತು ಇಟ್ಟಿಗೆಯಿಂದ ನಿರ್ಮಾಣವಾದ ಇದು ಸುತ್ತಲೂ ಸುರಂಗ ಮಾರ್ಗಗಳಿಂದ ಸುತ್ತುವರೆದಿರುತ್ತದೆ.

೩. ಜಲ: ಆಳವಾದ ನೀರಿನಿಂದ ಸುತ್ತುವರಿಯಲ್ಪಟ್ಟ ಪ್ರದೇಶದಲ್ಲಿ ನಿರ್ಮಾಣವಾದ ಕೋಟೆ.

೪. ನರ: ಗಜಪಡೆ, ಅಶ್ವಪಡೆ, ರಥ ಮತ್ತು ಕಾಲ್ದಳಗಳಿಂದ ಕೂಡಿದ ಕೋಟೆ.

೫. ವೃಕ್ಷ: ಎತ್ತರದ ಮರಗಿಡ, ಮುಳ್ಳಿನ ಪೊದೆ, ಬಳ್ಳಿಗಳಿಂದ ಕೂಡಿದ ದಟ್ಟ ಅಡವಿಯಲ್ಲಿ ನಿರ್ಮಿಸಲ್ಪಟ್ಟಿರುವುದು.

೬. ಗಿರಿ: ಕಡಿದಾದ ಬೆಟ್ಟದಲ್ಲಿ ಹಣ್ಣು ಹಂಪಲುಗಳ ಗಿಡಗಳನ್ನು ಹೊಂದಿರುವ ಕೋಟೆಯಾಗಿದೆ.

ಆರು ಪ್ರಕಾರದ ಕೋಟೆಗಳನ್ನು ಸೂಚಿಸಿರುವ ಮನು ಕಡಿದಾದ ಬೆಟ್ಟದಲ್ಲಿ ನಿರ್ಮಾಣಗೊಂಡ ಗಿರಿದುರ್ಗ ಉತ್ತಮವಾದದ್ದೆಂದು ಹೇಳಿದ್ದಾನೆ.[೭೦]

ದುರ್ಗಸಿಂಹನು ಪಂಚತಂತ್ರ ಕೃತಿಯಲ್ಲಿ ಎಂಟು ಪ್ರಕಾರದ ಕೋಟೆಗಳನ್ನು ವಿವರಿಸಿದ್ದಾನೆ.

೧. ಜಲದುರ್ಗ: ೧. ಅಂತರ್ದ್ವೀಪ: ಎರಡು ನದಿಗಳು ಹರಿಯುವ ಅಥವಾ ಒಂದೇ ನದಿ ಎರಡು ಕವಲಾಗಿ ಮತ್ತೆ ಸೇರುವಾಗ ಮಧ್ಯದಲ್ಲಿ ಉಂಟಾಗುವ ಪ್ರದೇಶ.

೨. ಮಹಾಸ್ಥಳ: ದೊಡ್ಡದಾದ ಕೆರೆ, ಸರೋವರ ಹಾಗೂ ಅವುಗಳಲ್ಲಿ ಮುಳ್ಳಿನ ಪೊದೆಗಳಿಂದ ಸುತ್ತುವರೆದಿರುವುದು.

೨. ಗಿರಿದುರ್ಗ: ೧. ಗುಹ್ಯ: ಎತ್ತರದ ಬೆಟ್ಟದ ಮೇಲೆ ನಾಲ್ಕು ದಿಕ್ಕುಗಳನ್ನು ನೋಡಲು ಅವಕಾಶವಿರುವಲ್ಲಿ ಒಂದೇ ಬಾಗಿಲಿನಿಂದ ನಿರ್ಮಿಸಿದಂತಹವುಗಳಾಗಿವೆ.

೨. ಪ್ರಸ್ತರ: ಬೆಟ್ಟದಲ್ಲಿ ಬೀಳುವ ಮಳೆಯ ನೀರು ಹರಿದುಹೋಗುವ ಕಡೆ ಮಾತ್ರ ಕಿರಿದಾದ ದ್ವಾರವನ್ನು ನಿರ್ಮಿಸಲ್ಪಟ್ಟಿರುವಂತಹದ್ದಾಗಿದೆ.

೩. ಸ್ಥಳದುರ್ಗ: ೧. ಉದಕಸ್ತಂಭ: ಗೋಡೆಯ ಹೊರಭಾಗದಲ್ಲಿ ಶತ್ರುಗಳಿಗೆ ಅವಶ್ಯಕವಾದ ನೀರು, ಆಹಾರ, ಹುಲ್ಲು ಮೊದಲಾದವುಗಳು ಇರದೇ ಒಳಭಾಗ ಮಾತ್ರ ಇವೆಲ್ಲವೂ ಒಳಗೊಂಡಿರುವಂತಹದ್ದಾಗಿದೆ.

೪. ವನದುರ್ಗ: ೧. ಕರ್ದಮೋದಕ: ಕೋಟೆಯ ಸುತ್ತಲೂ ನೀರು ತುಂಬಿದ ವಿಶಾಲವಾದ ಜಲಾಶಯ, ಕೊಳೆತು ನಾರುವ ಕೆಸರು ಮಣ್ಣನ್ನು ಹೊಂದಿರುವುದಾಗಿದೆ.

೨. ಸ್ತಂಭಗಹನ: ಅನೇಕ ಗಿಡಗಂಟಿಗಳೇ ಗೋಡೆಯಂತೆ ಬೆಳೆದಿದ್ದು, ಸುತ್ತಲೂ ಹೇರಳವಾದ ಹುಲ್ಲುಗಾವಲಿನಿಂದ ಕೂಡಿರಬೇಕು.[೭೧]

ಕಲ್ಯಾಣ ಚಾಳುಕ್ಯ ಅರಸ ಮೂರನೆಯ ಸೋಮೇಶ್ವರ ಒಂಭತ್ತು ಪ್ರಕಾರದ ಕೋಟೆ – ಕೊತ್ತಲಗಳನ್ನು ಉಲ್ಲೇಖಿಸಿದ್ದಾನೆ.

೧. ಜಲದುರ್ಗ: ಕೋಟೆಯ ಸುತ್ತಲು ಆಳವಾದ ನೀರಿನಿಂದ ಕೂಡಿರುವುದು.

೨. ಗಿರಿದುರ್ಗ: ಏರಲು ಕಡಿದಾದ ಬೆಟ್ಟದ ಮೇಲೆ ನಿರ್ಮಾಣವಾಗಿರುವುದು.

೩. ಪಾಷಾಣದುರ್ಗ: ಬೃಹತ್ತಾದ ಹೆಬ್ಬಂಡೆಗಳಿಂದ ನಿರ್ಮಾಣವಾಗಿರುವಂತಹದ್ದು.

೪. ಇಷ್ಟಕದುರ್ಗ: ಇಟ್ಟಿಗೆಗಳಿಂದ ನಿರ್ಮಾಣವಾಗಿರುವುದಾಗಿದೆ.

೫. ಮೃತ್ತಿಕಾಮಯಮ್: ಮಣ್ಣಿನ ಕೋಟೆಯಾಗಿದೆ.

೬. ವನದುರ್ಗ: ದಟ್ಟವಾದ ಅಡವಿಯ ಮಧ್ಯೆ ಮುಳ್ಳುಗಳಿಂದ ಸುತ್ತುವರೆದಿರುವುದು.

೭. ಮರದುರ್ಗ: ಒಯಸಿಸ್‌ಗಳ ಸುತ್ತಲೂ ಕೋಟೆ ಕಟ್ಟಿ ಹೊರಭಾಗ ಸುತ್ತಲೂ ಮರುಭೂಮಿ ಸುತ್ತುವರೆಯಲ್ಪಟ್ಟಿರುವಂತೆ ಮಾಡುವಂತಹದ್ದು.

೮. ದಾರುಮಯದುರ್ಗ: ನೈಸರ್ಗಿಕವಾದ ಮರಗಳನ್ನೇ ಅಥವಾ ಕತ್ತರಿಸಲ್ಪಟ್ಟ ಮರದ ತುಂಡುಗಳಿಂದ ಬೇಲಿಯಂತೆ ನಿರ್ಮಿಸುವುದು.

೯. ನರದುರ್ಗ: ಕೋಟೆಯ ಸುತ್ತಲೂ ಶಸ್ತ್ರಸಜ್ಜಿತರಾದ ಯೋಧರನ್ನು ನಿಲ್ಲಿಸಿ ತಯಾರಿಸಿರುವುದು.[೭೨]

ಆಕಾಶ ಭೈರವ ಕಲ್ಪವು ಕೋಟೆಯಿಂದ ಸುರಕ್ಷಿತವಿಲ್ಲದ ಪಟ್ಟಣವನ್ನು ಶತ್ರುಗಳು ಸುಲಭವಾಗಿ ಸ್ವಾಧೀನಪಡಿಸಿಕೊಳ್ಳಬಲ್ಲರು. ಆದುದರಿಂದ ಅತ್ಯವಶ್ಯಕವಾಗಿ ತಮಗನುಕೂಲವಾದ ಸ್ಥಳಾವಕಾಶಗಳಲ್ಲಿ ಎಂಟು ಪ್ರಕಾರದ ಕೋಟೆಗಳಲ್ಲಿ ಒಂದನ್ನಾದರೂ ನಿರ್ಮಿಸಿಕೊಳ್ಳಬೇಕೆಂದು ಸಲಹೆ ನೀಡುತ್ತಾನೆ.

೧. **ಭದ್ರಮ್:** ಏಕಶಿಲಾ ಬೆಟ್ಟದ ಮೇಲೆ ವೃತ್ತಾಕಾರದ ಗೋಡೆಯನ್ನು ಎತ್ತರವಾಗಿ ನಿರ್ಮಿಸುವುದಾಗಿದೆ. ಹೊರಭಾಗದಲ್ಲಿ ಅದು ನುಣುಪಿನಿಂದ ಕೂಡಿ ಹಲವು ಗುಹೆ, ಪಥಿಕಾಶ್ರಮ, ನೀರಿನ ಆಶ್ರಯ ಹೊಂದಿರುವುದಾಗಿದೆ.

೨. **ಚಂದ್ರ:** ತಳಭಾಗದಲ್ಲಿ ಅಗಲವಾಗಿ ಮತ್ತು ತುದಿಯ ಭಾಗ ಅರ್ಧಚಂದ್ರಾಕಾರವಾಗಿ ಹೊಂದಿದ ಗೋಡೆ ಅಲ್ಲದೆ ಅಪಾರ ನೀರಿನ ಸಂಗ್ರಹಣೆಯಾಗುವ ಪ್ರದೇಶದಲ್ಲಿ ನಿರ್ಮಾಣವಾಗಿರುವುದಾಗಿದೆ.

೩. **ಅತಿಭದ್ರಮ್:** ನೆಲಮಟ್ಟದಿಂದ ತುದಿಯ ಮಟ್ಟದವರೆಗೂ ವರ್ತುಲಾಕಾರದಲ್ಲಿದ್ದು ಎತ್ತರದ ಗುಹೆ ಮತ್ತು ನೀರಿನ ಕಟ್ಟೆಗಳಿರುವುದು.

೪. **ಅರ್ಧಚಂದ್ರ:** ಅರ್ಧಚಂದ್ರಾಕಾರವಾಗಿರುವ ಕೋಟೆಯಲ್ಲಿ ಮಧ್ಯಮ ಗಾತ್ರದ ಗುಹೆ, ಪಥಿಕಾಶ್ರಮ, ನೀರಿನ ಸಂಗ್ರಹಣೆಗಳಿರುವಂತಹದ್ದು.

೫. **ನಾಭ:** ತಳಭಾಗ ಸಂಕೀರ್ಣತೆಯಿಂದ ಕೂಡಿದ್ದು ತುದಿ ಅಗಲವಾಗುತ್ತಾ ಕ್ರಮೇಣ ಕಮಲದ ಬೀಜದ ಸಿಂಬಿಯಾಕಾರದಲ್ಲಿ ಹೆಚ್ಚುತ್ತಿರುವಂತಹದ್ದಾಗಿದೆ.

೬. **ಸುನಾಭ:** ತಳಭಾಗ ಅಗಲವಾಗಿದ್ದು ಮೇಲೇರುತ್ತಿದ್ದಂತೆ ಕಿರಿದಾಗುತ್ತಾ ಹೋಗಿರುವುದಾಗಿದೆ.

೭. **ರುಚಿರಮ್:** ಸೋಪಾನ ಮಾರ್ಗದಲ್ಲಿರುವ ಮೆಟ್ಟಿಲು ಉಪ್ಪರಿಗೆಯಂತೆ ಕ್ರಮವಾಗಿ ಉದ್ದ, ಅಗಲಗಳು ಹೆಚ್ಚುತ್ತಾ, ಹೆಚ್ಚಿನ ನೀರಿನ ಮೂಲ ಹೊಂದಿರುವುದಾಗಿದೆ.

೮. **ವರ್ಧಮಾನಮ್:** ಮೃದಂಗ ಅಥವಾ ಮದ್ದಲೆಯ ರೂಪದಲ್ಲಿರುವುದಾಗಿದೆ.[೭೩]

ಹೀಗೆ ಹಲವು ಶಾಸ್ತ್ರಗ್ರಂಥಗಳ ಜೊತೆಗೆ ಕಾಮಾಂದಕನ ನೀತಿಸಾರ–ಜಲದುರ್ಗ, ಗಿರಿದುರ್ಗ, ವನದುರ್ಗಗಳನ್ನು, ಸೂಕ್ತಿಸುಧಾರ್ಣವ ಕೃತಿಯಲ್ಲಿ ಗಿರಿದುರ್ಗ, ಜಲದುರ್ಗ, ವನದುರ್ಗ,[೭೪] ಮಾನಸಾರ ಕೃತಿಯು–ಶಿಬಿರ, ವಾಹಿನೀಮುಖ, ಸ್ಥಾನೀಯ, ದ್ರೋಣಕ, ಸಂವಿದ್ಧ, ಕೊಲಕ, ನಿಗಮ, ಸ್ಕಂಧಾವಾರ[೭೫] ಎಂದೂ, ಭೋಜರಾಜನ–ಸಮರಾಂಗ ಸೂದ್ರಧಾರ ಕೃತಿ–ಗಿರಿದುರ್ಗ, ಮೂಲದುರ್ಗ, ಜಲದುರ್ಗ, ಮರುದುರ್ಗ[೭೬] ಎಂಬುದಾಗಿ ಹಲವು ವಿಧದ ಕೋಟೆ–ಕೊತ್ತಲಗಳನ್ನು ನಿರ್ಮಿಸಿಕೊಳ್ಳಲು ಸೂಚಿಸಿದ್ದಾರೆ. ಶತ್ರುಗಳಿಂದ ರಕ್ಷಣೆ ಪಡೆದುಕೊಳ್ಳುವುದಕ್ಕಾಗಿ ಕಾಲಕಾಲಕ್ಕೆ

ಹಲವು ಮಾದರಿಗಳಲ್ಲಿ ಕೋಟೆ-ಕೊತ್ತಲು ನಿರ್ಮಿಲ್ಪಟ್ಟರೂ ಹೆಚ್ಚು ಮಹತ್ವಗಳಿಸಿಕೊಂಡದ್ದು ಗಿರಿದುರ್ಗ, ಸ್ಥಳದುರ್ಗ, ಜಲದುರ್ಗಗಳು ಮಾತ್ರ ತುಮಕೂರು ಜಿಲ್ಲೆಯಲ್ಲೂ ಸಹ ಈ ಮೂರು ಮಾದರಿಯ ದುರ್ಗಗಳೇ ಹೆಚ್ಚಾಗಿ ಕಂಡುಬರುತ್ತವೆ.

ಒಟ್ಟಾರೆ ಹಲವು ಶಾಸ್ತ್ರಗ್ರಂಥಗಳಲ್ಲಿರುವ ಕೋಟೆ ಕೊತ್ತಲಗಳ ಉಲ್ಲೇಖ, ಅವುಗಳ ಲಕ್ಷಣಗಳನ್ನು ಅಭ್ಯಸಿಸಿದಾಗ ತುಮಕೂರು ಜಿಲ್ಲೆಯಲ್ಲಿ ಅಂತಹ ಯಾವ ವಾಸ್ತು ವೈವಿಧ್ಯತೆಯನ್ನು ಕಾಣಲಾಗದು. ಆದರೂ ಸ್ಥಳೀಯ ಮಟ್ಟಕ್ಕೆ ಅವರ ಅವಶ್ಯಕತೆಗೆ ಸಾಕಾಗುವಷ್ಟು ತಂತ್ರಜ್ಞಾನವನ್ನು ಬಳಸಿಕೊಂಡಿರುವುದು ಕಂಡುಬರುತ್ತದೆ. ಏಕೆಂದರೆ ಜಿಲ್ಲೆಯ ಕಡಿದಾದ ಬೆಟ್ಟಗಳ ಪ್ರಾಕೃತಿಕ ರಚನೆಯೇ ಸಹಜವಾಗಿ ಶತ್ರುಗಳಿಗಿಂತ ಹೆಚ್ಚಿನದಾಗಿ ಮೃತ್ಯುವಿಗೆ ಎಡೆಮಾಡಿಕೊಡುತ್ತದೆ. ಆಷಾಡ ಮಾಸದಲ್ಲಿ ಆಯತಪ್ಪಿದರೆ ಬೆಟ್ಟ ಹತ್ತುವಾಗ ಎಂತಹವರನ್ನೂ ಗಾಳಿಯ ರಭಸಕ್ಕೆ ಕೆಳಗೆ ಬೀಳುವಂತೆ ಮಾಡುತ್ತದೆ. ಕೇವಲ ಬೆಟ್ಟ ಏರುವಾಗಲೇ ಅಪಾಯ ಇರುವಾಗ ಕಡಿದಾದ ಪ್ರದೇಶದಲ್ಲಿ ಕೋಟೆಯ ಗೋಡೆಯನ್ನು ಹೇಗೆ ರಚಿಸುತ್ತಿದ್ದರು ಎಂಬುದು ಅವರ ವಾಸ್ತು ವೈವಿಧ್ಯತೆಗೆ ಸಾಕ್ಷಿಯಾಗಿದೆ. ಜಿಲ್ಲೆಯಾದ್ಯಂತ ಬಹುತೇಕ ಕೋಟೆಗಳಿಗೆ ಅಲ್ಲಿಯೇ ಸಿಗುವ ಶಿಲಾ ಮಾಧ್ಯಮವನ್ನು ಬಳಸಿಕೊಂಡಿದ್ದರಿಂದ ಅವೈಜ್ಞಾನಿಕ ಲಕ್ಷಣಗಳು ಕೋಟೆಯಲ್ಲಿ ಕಂಡುಬಂದರೂ ಸೀಮಿತ ಆದಾಯದ ಮೂಲವಿರುವ ಪಾಳೆಪಟ್ಟುಗಳಿಗೆ ಅದು ಅನಿವಾರ್ಯವೇ ಆಗಿತ್ತು. ಹಾಗಾಗಿ ಕೇವಲ ವಾಸ್ತುಶಾಸ್ತ್ರಗಳಿಗೆ ಅನುಗುಣವಾಗಿ ರಚನೆಗೊಂಡವು ಎಂದ ಮಾತ್ರಕ್ಕೆ ಅವು ಕೋಟೆಗಳೆಂದೂ ಉಳಿದವು ಕೋಟೆಗಳಲ್ಲ ಎಂದು ಹೇಳಲಾಗದು. ಏಕೆಂದರೆ ಸ್ಥಳೀಯವಾಗಿ ಸಿಗುವಂತಹ ಮಾಧ್ಯಮವನ್ನು ಬಳಸಿಕೊಂಡು ತಮ್ಮದೇ ವಾಸ್ತು ವೈವಿಧ್ಯತೆಯಲ್ಲಿ ಕೋಟೆ-ಕೊತ್ತಲ ನಿರ್ಮಿಸಿಕೊಂಡ ನಿಡುಗಲ್ಲಿನಂತಹ ಸಣ್ಣ ಸಂಸ್ಥಾನಗಳು ಹೊಯ್ಸಳ, ವಿಜಯನಗರ, ಮೊಘಲ್, ಬಿಜಾಪುರ ಸುಲ್ತಾನರು, ಹೈದರ್ ಟಿಪ್ಪುವಿನಂತಹ ಬೃಹತ್ ಸಾಮ್ರಾಜ್ಯಗಳ ವಿರುದ್ಧವೇ ಸೆಟೆದು ನಿಂತರೆಂದರೆ ಅವರ ಸೇನಾಬಲ ಅಥವಾ ಆಯುಧೋಪಕರಣಗಳಿಂದಲ್ಲ, ಅವರು ಹೊಂದಿದ ಅಭೇದ್ಯವಾದ ಗಿರಿದುರ್ಗಗಳಿಂದ ಮಾತ್ರ ಎಂಬುದನ್ನು ಗಮನಿಸಿದರೆ ಸ್ಥಳೀಯ ವಾಸ್ತು ರಚನೆಗಿರುವ ಮಹತ್ವ ಯಾರ ಅರಿವಿಗಾದರೂ ಬರುತ್ತದೆ. ಸಾಮಾನ್ಯವಾಗಿ ಇವು ಜಿಲ್ಲೆಯಲ್ಲಿ ಯಾವುದೇ ನದಿ ಸಂಚಯನಗಳಿಂದ ಕೂಡಿರದಿರುವುದೇ ಪ್ರಸಿದ್ಧಿಗೆ ಬರದಿರಲು ಕಾರಣ ಎಂದರೆ ತಪ್ಪಾಗಲಾರದು.

ಕೊನೆ ಟಿಪ್ಪಣಿಗಳು

೧. Ramachdramurthy N.S., 1995, Forts of Andrapradesh, p.59-60.

೨. ಶ್ರೀಧರ ಎಚ್.ಜಿ., ೨೦೦೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ(ಕ್ರಿ.ಶ. ೪೫೦ರಿಂದ ೧೩೫೦), ಪುಟ.೩೧.

೩. ಅದೇ, ಪುಟ.೧೪೦, ೧೪೨, ೧೪೪.

೪. ವೆಂಕಟನಾರಾಯಣಪ್ಪ ಬಿ., ಶ್ರೀನಿವಾಸಮೂರ್ತಿ ಎಂ.ಆರ್.(ಪ್ರಸಂ.), ೨೦೦೭, ಪುಟ.೫೧೮, ೮೯೯, ೧೦೮೫, ೧೩೭೨.

೫. ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೪೧.

೬ ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ಶ್ರೀನಿವಾಸ ರಿತ್ತಿ, ೨೦೦೦, ಪೂರ್ವೋಕ್ತ, ಪುಟ.೨೧೯.

೭ Ramachdramurthy N.S, 1995, Forts of Andrapradesh, p.63.

೮. ಶ್ರೀಧರ ಎಚ್.ಜಿ., ೨೦೦೨, ಪೂರ್ವೋಕ್ತ, ಪುಟ.೩೨.

೯. ತಳವಾರ ಎನ್.ಎಂ., ೨೦೦೨, ನಂಜುಂಡ ಕವಿಯ ರಾಮನಾಥ ಚರಿತೆ: ಸಾಂಸ್ಕೃತಿಕ ಅಧ್ಯಯನ, ಪುಟ.೧೩೨.

೧೦. ಜೋಶಿ ಎಸ್.ಕೆ., ೨೦೦೮, ಕರ್ನಾಟಕದ ಕೋಟೆ ಕೊತ್ತಲಗಳು, ಪುಟ.೧.

೧೧. www. Mentorials.com/22/cot/2010-Ancient River civilizations.

೧೨. Rajkumar, 2004, Military System in Ancient India, p-270.

೧೩. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ಶ್ರೀನಿವಾಸ ರಿತ್ತಿ, ೨೦೦೦, ಆಚಾರ್ಯ ಸೋಮದೇವವಿರಚಿತಂ ನೀತಿವಾಕ್ಯಾಮೃತಂ, ಪುಟ.೨೧೯.

೧೪. Naravane, 1995, Forts of Maharastra, p-19.

೧೫. www.military history, about.com/Byzantine-ottoman warsFall.

೧೬. ಕರೋವ್ಕಿನ್ ಎಫ್., ೧೯೮೧, ಪುರಾತನ ಜಗತ್ತಿನ ಇತಿಹಾಸ, ಪುಟ.೮೨.

೧೭. http://en.wikipedia.org/wiki/fortification.

೧೮. ಶಿವರಾಮ ಕಾರಂತ, ೧೯೬೯, ಪೂರ್ವೋಕ್ತ, ಪುಟ.೩೩.

೧೯. www.britannica.com/Babylon-Ancient-city-mesopotamia-Asia.

೨೦. www.britannica.com/place/nineveh-Ancientt city-Irav.

೨೧. ಶಿವರಾಮ ಕಾರಂತ, ೧೯೬೯, ನಾಗರಿಕತೆಯ ಹೊಸ್ತಿಲಲ್ಲಿ, ಪುಟ.೩೫.

೨೨. http://in.wikipedia.org/wiki/portification.

೨೩. ಶಿವರಾಮ ಕಾರಂತ, ೧೯೬೯, ಪೂರ್ವೋಕ್ತ, ಪುಟ.೪೯, ೫೪, ೫೮.

೨೪. http://en.wikipedia.org/wiki/fortification.

೨೫. ಶಿವರಾಮಕಾರಂತ, ೧೯೬೯, ಪೂರ್ವೋಕ್ತ, ಪುಟ.೧೦೩–೧೦೪.

೨೬. News.bbc.co.vk/2hi/Asia-pacific, Manopday, 20.04.2009.

೨೭. http://en.wikipedia.org/wiki/fortification.

೨೮. Claridge Amanda., 1998, Rome: An oxford Archaeologycal Guide First, oxford VK, p.332-335.

೨೯. http://en.wikipedia.org/wiki/fortification.

೩೦. ಬಾಶಮ್ ಎ.ಎಲ್., (ಮೂಲ), ಮಿರ್ಜಿ ಡಿ.ಆರ್.,(ಅನು.) ೨೦೧೨, ಪ್ರಾಚೀನ ಭಾರತವೆಂಬ ಅದ್ಭುತ, ಪುಟ.೨೩, ೨೪.

೩೧. Ramachdramurthy N.S, 1995, Forts of Andrapradesh, p.58-59.

೩೨. ಬಾಶಮ್ ಎ.ಎಲ್., (ಮೂಲ), ಮಿರ್ಜಿ ಡಿ.ಆರ್.(ಅನು.), ೨೦೧೨, ಪೂರ್ವೋಕ್ತ, ಪುಟ.೪೮, ೨೭೪.

೩೩. Rajkumar, 2004, Military System in Ancient India, p-267, 271.

೩೪. ಬಾಶಮ್ ಎ.ಎಲ್., (ಮೂಲ), ಮಿರ್ಜಿ ಡಿ.ಆರ್.,(ಅನು.) ೨೦೧೨, ಪೂರ್ವೋಕ್ತ, ಪುಟ.೪೮, ೧೯೨.

೩೫. Rajkumar, 2004, Military System in Ancient India, p-276, 277.

೩೬. http://en.wikipedia.org/wiki/forts-in-India.

೩೭. ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪುಟ,೧೪೧–೧೪೨.

೩೮. ನಾಯಕ ಹಾ.ಮಾ. (ಪ್ರ.ಸಂ.)., ೨೦೦೫, ಕನ್ನಡ ವಿಷಯ ವಿಶ್ವಕೋಶ, ಸಂಪುಟ–೧, ಪುಟ.೨೨.

೩೯. ಶ್ರೀಧರ್ ಎಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೪೨–೧೪೩.

೪೦. ನಾಯಕ ಹಾ.ಮಾ. (ಪ್ರ.ಸಂ.)., ೨೦೦೫, ಪೂರ್ವೋಕ್ತ, ಪುಟ.೬೭೫.

೪೧. ECVOL XVI, ಐಡಿಹಳ್ಳಿ, ಶಾ.ಸಂ.೧೧೯, ಪುಟ.೫೧.

೪೨. ಸಚ್ಚಿದಾನಂದ ಶಂಕರ ಭಾರತೀಸ್ವಾಮಿ, ೨೦೦೫, ಪೂರ್ವೋಕ್ತ, ಪುಟ.೯೦–೯೧.

೪೩. ಅದೇ, ಪುಟ.೯೨.

೪೪. Jagadish Ayyar P.V., 1921-22, Construction of Fort, QJMS, VOL-XII, p.370.

೪೫. ಸೀತಾರಾಮಯ್ಯ ಎಂ.ವಿ. (ಪ್ರ.ಸಂ.), ಆಚಾರ್ಯ ವಿ.ಎಸ್.ಎಸ್. (ಸಂ.), ೧೯೮೩, ಶ್ರೀ ಕೃಷ್ಣದೇವರಾಯನ ದಿನಚರಿ, ಪುಟ.೨೬.

೪೬. Chekravarhi P.C., 1987, The art of war in ancient India, p.136-137.

೪೭. Shamashatry R., 1916, Kautilya's Arthasastra, p-50.

೪೮. Naravane M.S., 1995, Forts of Maharastra, p-20-21.

೪೯. Steven Lowe, 1990, Adictionares of militaray Architecture, p-28-29.

೫೦. ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೫೪.

೫೧. Ramachdramurthy N.S, 1995, Forts of Andrapradesh, p.64.

೫೨. ಲಕ್ಷ್ಮಣ್ ತೆಲಗಾವಿ(ಸಂ.), ೨೦೦೬, ಚರಿತ್ರೆ ಅಧ್ಯಯನ ಸಂಪುಟ-೧, ಸಂಚಿಕೆ-೨, ಪುಟ.೧೬೨.

೫೩. ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೫೦-೧೫೧.

೫೪. ಅದೇ, ಪುಟ.೧೫೧.

೫೫. ಸಚ್ಚಿದಾನಂದ ಶಂಕರ ಭಾರತೀಸ್ವಾಮಿ, ೨೦೦೫, ಪೂರ್ವೋಕ್ತ, ಪುಟ.೯೨.

೫೬. ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೪೮-೧೪೯.

೫೭. Shamashatry R., 1916, Kautilya's Arthasastra, p-53.

೫೮. ಸಚ್ಚಿದಾನಂದ ಶಂಕರ ಭಾರತೀಸ್ವಾಮಿ, ೨೦೦೫, ಪೂರ್ವೋಕ್ತ, ಪುಟ.೯೬-೯೭.

೫೯. Shamashatry R., 1916, Kautilya's Arthasastra, p-51.

೬೦. ಚಕ್ರಕೋಡಿ ಈಶ್ವರಶಾಸ್ತ್ರೀ, ೧೯೮೭, ಮನುಸ್ಮೃತಿ, ಪುಟ.೭೪.

೬೧. ಮುಗಳಿ ರಂ.ಶ್ರೀ., ೧೯೭೬, ನಾಗಚಂದ್ರನ, ಪಂಪರಾಮಾಯಣಂ(ರಾಮಚಂದ್ರ ಚರಿತಪುರಾಣಂ, ಪುಟ.೧೧೩-೧೧೬.

೬೨. ಹರಿಹರನ ಗಿರಿಜಾ ಕಲ್ಯಾಣ, ೧೯೭೬, ಪುಟ.೭೯.

೬೩. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ಶ್ರೀನಿವಾಸ ರಿತ್ತಿ, ೨೦೦೦, ಪೂರ್ವೋಕ್ತ, ಪುಟ.೨೧೮.

೬೪. ಕೇಶವಭಟ್ಟ ಟಿ., ೧೯೬೯, ದೇವಪ್ಪಕವಿ ವಿರಚಿತ ರಾಮವಿಜಯಕಾವ್ಯ, ಪುಟ.೪೩-೪೪.

೬೫. ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೧೪೨.

೬೬. ಮಲ್ಲಿಕಾರ್ಜುನ ಕೆ., ಮಾಳಿ ವಿ.ಎಸ್., ಬಿರಾದಾರ ಬಿ.ಎಸ್., ಅಶೋಕ ನರೋಡೆ, ೨೦೧೨, ಡಾ.ಬಿ.ಆರ್.ಹಿರೇಮಠರ ಶಾಸನ ಅಧ್ಯಯನ, ಪುಟ.೧೯.

೬೭. ಬಸವರಾಜ ಡಿ.ಆರ್., ೨೦೦೬, ನಿಡುಗಲ್ಲು ದುರ್ಗ, ಪುಟ.೧೬.

೬೮. Shamashatry R., 1916, Kautilya's Arthasastra, p-50-51.

೬೯. ಸರ್ಕಾರ್ ಬಿ.ಕೆ., ೧೯೧೪, ಶುಕ್ರನೀತಿಸಾರ, ಪುಟ.೮೩.

೭೦. ಚಕ್ರಕೋಡಿ ಈಶ್ವರಶಾಸ್ತ್ರೀ, ೧೯೮೭, ಮನುಸ್ಮೃತಿ, ಪುಟ.೭೦.

೭೧. ಚನ್ನಬಸಪ್ಪ ಎಸ್.ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಸಂಪುಟ-೧, ಪುಟ.೩-೪.

೭೨. ಶಾಮಶಾಸ್ತ್ರಿ ಆರ್., ೧೯೨೬, ಅಭಿಲಾಷಿತಾರ್ಥ ಚಿಂತಾಮಣಿ, ಪುಟ.೧೮೦.

೭೩. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ, ಜಗನ್ನಾಥ್ ಎಸ್.ಎ.(ಸಂ)., ೧೯೯೧, ಇತಿಹಾಸ ದರ್ಶನ ಸಂಪುಟ-೬, ಪುಟ.೧೬೦-೧೬೧.

೭೪. ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೩೫, ೧೪೫.

೭೫. ಚನ್ನಬಸಪ್ಪ ಎಸ್.ಪಾಟೀಲ, ೧೯೯೯, ಕರ್ನಾಟಕದ ಕೋಟೆಗಳು, ಸಂಪುಟ-೧, ಪುಟ.೨-೩.

೭೬. ಶ್ರೀಧರ್ ಹೆಚ್.ಜಿ., ೨೦೦೨, ಪೂರ್ವೋಕ್ತ, ಪುಟ.೩೫.

ಅಧ್ಯಾಯ ೪

ರಕ್ಷಣಾ ವಾಸ್ತುಶಿಲ್ಪ

ಪ್ರಸ್ತಾವನೆ

ತುಮಕೂರು ಜಿಲ್ಲೆಯಲ್ಲಿ ಸಿಗುವಂತಹ ಮೌಖಿಕ ಸಾಹಿತ್ಯ, ಸ್ಥಳ ಪುರಾಣ, ಶಾಸನ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಕ್ಷೇತ್ರಕಾರ್ಯದ ಮೂಲಕ ಇದುವರೆಗೂ ಜಿಲ್ಲೆಯ ಕೋಟೆ-ಕೊತ್ತಲ ಬಗೆಗೆ ಆಗಿರುವ ಅಧ್ಯಯನಗಳಿಗಿಂತ ಭಿನ್ನವಾಗಿ ಅವುಗಳನ್ನು ಮತ್ತಷ್ಟು ಪ್ರಾಚೀನಕ್ಕೆ ಕೊಂಡೊಯ್ಯಲಾಗಿದೆ. ಶಾತವಾಹನ, ಕದಂಬ, ಗಂಗ, ರಾಷ್ಟ್ರಕೂಟ, ನೊಳಂಬ, ನಿಡುಗಲ್ಲು ಚೋಳ, ಹೊಯ್ಸಳ, ವಿಜಯನಗರ, ಪಾಳೆಪಟ್ಟುಗಳ ಅವಧಿಯಲ್ಲಿ ಯಾವ್ಯಾವ ಕೋಟೆ-ಕೋತ್ತಲಗಳು ನಿರ್ಮಾಣವಾದವು ಎಂಬುದನ್ನು ಸ್ಪಷ್ಟಪಡಿಸಲಾಗಿದೆ.

ಮನುಷ್ಯ ನಾಗರಿಕನಾದಂತೆಲ್ಲಾ ಅವನೊಟ್ಟಿಗೆ ಅವನ ಕಲಾಭಿವ್ಯಕ್ತಿಯು ಕಾಲಕಾಲಕ್ಕೆ ಬದಲಾಗಿರುವುದು ಅಧ್ಯಯನಗಳಿಂದ ತಿಳಿಯಬಹುದು. ಹೀಗೆ ರೂಪುಗೊಂಡ ಕಾಲಾಭಿವ್ಯಕ್ತಿಯ ಹಿಂದಿರುವ ಉದ್ದೇಶ, ಅವುಗಳ ವಾಸ್ತುವಿನ್ಯಾಸ, ಮಹತ್ವ, ಅವುಗಳೊಂದಿಗಿನ ಸಾಮಾನ್ಯರ ಒಡನಾಟವನ್ನು ಬಿಡಿಸಿ ನೋಡಿದಾಗ ಮಾತ್ರ ಅದರ ನೈಜ ಚಿತ್ರಣ ಬೆಳಕಿಗೆ ಬರುತ್ತದೆ. ಈ ಕಾರಣಕ್ಕಾಗಿಯೇ ಅನಾದಿಕಾಲದಿಂದಲೂ ಮನುಷ್ಯ ಬಳಸಿ ಬಿಟ್ಟುಹೋದ ಆಯುಧೋಪಕರಣ, ದೇವಾಲಯ, ಕೋಟೆ-ಕೊತ್ತಲ, ಕೆರೆ-ಕಟ್ಟೆ, ಬಾವಿ, ಲೌಖಿಕ ಮತ್ತು ಅಲೌಖಿಕ ಕಟ್ಟಡಗಳು ಇಂದು ಚರಿತ್ರೆಯ ಆಕರಗಳೆಂದು ಪರಿಗಣಿಸಲ್ಪಟ್ಟಿವೆ. ಪ್ರಾಗಿತಿಹಾಸ ಕಾಲದಿಂದಲೂ ಮಾನವ ತನ್ನನ್ನು ತಾನು ರಕ್ಷಿಸಿಕೊಳ್ಳಲು ಹಾಗೂ ಸ್ವತಂತ್ರವಾಗಿ ಜೀವಿಸಲು ಒಂದಲ್ಲ ಒಂದು ರೀತಿಯಲ್ಲಿ ರಕ್ಷಣಾ ತಂತ್ರಗಳನ್ನು ರೂಪಿಸಿಕೊಳ್ಳುತ್ತಾ ಬಂದಿದ್ದಾನೆ. ಆರಂಭದಲ್ಲಿ ಕಾಡುಮೃಗಳಿಂದ ರಕ್ಷಣೆ ಪಡೆಯಲು ಶಿಲೆ, ಮರ, ಮೂಳೆ, ಲೋಹಗಳಿಂದ ಆಯುಧೋಪಕರಣಗಳನ್ನು ಆವಿಷ್ಕರಿಸಿಕೊಂಡು ಮಳೆ-ಗಾಳಿಗಳಿಂದ ರಕ್ಷಣೆ ಪಡೆಯಲು ಮರದ ಪೊಟರೆ, ಕಲ್ಲಾಸರೆ, ಗುಹೆ ಮೊದಲಾದವುಗಳನ್ನು ಆಶ್ರಯಿಸಿದನು. ಕ್ರಮೇಣ ನಾಗರಿಕನಾದಂತೆಲ್ಲಾ ಒಂದೆಡೆ ನೆಲೆನಿಂತು ಸಮುದಾಯ ಜೀವನ ನಡೆಸಲು ಮುಂದಾಗಿ ಗ್ರಾಮಗಳ ಹುಟ್ಟಿಗೂ ಕಾರಣನಾದನು. ಹೀಗೆ ರೂಪುಗೊಂಡ ಗ್ರಾಮಗಳ

ಸುತ್ತಲೂ ಕಾಡುಮೃಗ ಮತ್ತು ಇತರೆ ಶತ್ರುಗಳಿಂದ ರಕ್ಷಣೆ ಪಡೆಯಲು ಕಾಪುಗೋಡೆ, ಮಣ್ಣಿನ ದಿಬ್ಬ, ಮರದ ಬೊಂಬುಗಳಿಂದ ಬೇಲಿ, ಆಳವಾದ ಕಂದಕಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಇಂತಹ ಗ್ರಾಮಗಳು ಹೊಂದಿರುತ್ತಿದ್ದ. ಹೇರಳ ಪಶು ಸಂಪತ್ತುಗಳಿಂದ ಶತ್ರುಗಳನ್ನು ಅವರ ಮೇಲೆ ದಾಳಿ ಮಾಡುವಂತೆ ಪ್ರೇರೇಪಿಸುತ್ತಿತ್ತು. ಆದುದರಿಂದಲೇ ಗ್ರಾಮ ಮಟ್ಟದಲ್ಲಿ ಗ್ರಾಮಗಳ ರಕ್ಷಣೆಗಾಗಿ ಗ್ರಾಮಾಡಳಿತ ಹುಟ್ಟಿಕೊಂಡಿತು. ಕ್ರಮೇಣ ಗ್ರಾಮಗಳು ಅಭಿವೃದ್ಧಿಯಾದಂತೆ ಅವು ಪಟ್ಟಣ, ನಗರಗಳಾಗಿ ಮಾರ್ಪಾಟು ಹೊಂದಿದವು. ಹೀಗೆ ಏಳಿಗೆ ಹೊಂದಿದ ನಗರಗಳಲ್ಲಿ ಗಣರಾಜ್ಯ ಅಥವಾ ಜನಪದಗಳು ಹುಟ್ಟಿಕೊಂಡು ರಾಜ್ಯ ವಿಸ್ತರಣಾ ಆಕಾಂಕ್ಷೆಯನ್ನು ಮೈಗೂಡಿಸಿಕೊಂಡವು. ಹಾಗಾಗಿ ಇವು ತಮ್ಮ ರಾಜ್ಯಗಳನ್ನು ಶತ್ರುಗಳ ಸಂಭವನೀಯ ದಾಳಿಗಳಿಂದ ರಕ್ಷಿಸಿಕೊಳ್ಳಲು ಎತ್ತರವಾದ ಹಾಗೂ ಭದ್ರತೆಯಿಂದ ಕೂಡಿದ ಪ್ರದೇಶಗಳಲ್ಲಿ ಕೋಟೆ–ಕೊತ್ತಲಗಳನ್ನು ನಿರ್ಮಿಸಿಕೊಳ್ಳಲು ಮುಂದಾದರು. ಕ್ರಮೇಣ ನಗರ ರಾಜ್ಯಗಳಲ್ಲಿನ ಕೋಟೆಗಳು ಮಹತ್ವದ ಸ್ಥಾನವನ್ನು ಪಡೆದುಕೊಂಡವು. ನಂತರ ರಾಜ್ಯಗಳ ಅಳಿವು ಮತ್ತು ಉಳಿವು ಅವುಗಳ ಮೇಲೆಯೇ ನಿರ್ಧಾರವಾಗುತ್ತಿತ್ತು.[೧]

ಕರ್ನಾಟಕದ ಆಗ್ನೇಯ ದಿಕ್ಕಿನಲ್ಲಿರುವ ತುಮಕೂರು ಜಿಲ್ಲೆಯಲ್ಲಿ ರಾಮಾಯಣ, ಮಹಾಭಾರತ ಕಾವ್ಯಗಳ ಕಾಲದಿಂದಲೂ ಹಲವು ಕ್ಷೇತ್ರಗಳು ಪೌರಾಣಿಕವಾಗಿ ಪ್ರಸಿದ್ಧಿ ಹೊಂದಿದ್ದವು. ಕಡಬ–ಕದಂಬ ಮಹರ್ಷಿಗಳ ತಪೋಕ್ಷೇತ್ರ, ತುರುವೇಕೆರೆ–ಮೃಕಂಡು ಮುನಿಗಳ ಯೋಗ ಭೂಮಿ, ಕ್ಯಾತಸಂದ್ರ–ಗೌತಮಮುನಿಗಳ ಆಶ್ರಮ, ನಾಮದ ಚಿಲುಮೆ–ಶ್ರೀರಾಮನ ತಾಣ, ಸಂಪಿಗೆ–ಮಹಾಭಾರತದ ಸುಧನ್ವನಾಳಿದ ಚಂಪಕನಗರ,[೨] ನಿಡುಗಲ್ಲು–ಚೋರ ಕಥೆಯಲ್ಲಿ ಬರುವ ನೀಲಾವತಿ ಪಟ್ಟಣ ಹಾಗೂ ಹರಿವಂಶದ ಶ್ರಾದ್ಧಾಫಲವನ್ನು ಹೇಳುವಾಗ ಬರುವ ಕಾಳಾಂಜನಗಿರಿ[೩], ಪಾಂಡವರೊಂದಿಗೆ ಗುರುತಿಸಿಕೊಳ್ಳುವ ಹಲವು ಸ್ಥಳ ಪುರಾಣಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಅದೇ ರೀತಿ ಚಾರಿತ್ರಿವಾಗಿ ಹಲವು ಅರಸು ಮನೆತನಗಳು ಆಳ್ವಿಕೆ ನಡೆಸಿರುವುದಕ್ಕೆ ಸ್ಥಳಪುರಾಣ, ಶಾಸನ, ದೇವಾಲಯ, ಕೆರೆ–ಕಟ್ಟೆ, ಬಾವಿ, ಕೋಟೆ–ಕೊತ್ತಲ, ಕಟ್ಟಡಗಳಿಂದ ಕ್ರಿ.ಶ.೪೦೦ರ ಒಂದನೆಯ ಮಾಧವನ ಮೆಳೆಕೋಟೆ[೪] ಶಾಸನವು ಇಂದಿನ ತುಮಕೂರು ಜಿಲ್ಲೆ ಗಂಗರ ಕಾಲದಲ್ಲಿ 'ಜನಪದ' ಎಂಬ ಆಡಳಿತ ಕೇಂದ್ರವಾಗಿತ್ತೆಂದು ಉಲ್ಲೇಖಿಸಿದೆ. ಕ್ರಿ.ಶ. ೯೫೫ರ ತುಮಕೂರಿನ[೫] ಸೋಮೇಶ್ವರ ದೇವಾಲಯದಲ್ಲಿನ ಶಾಸನ ತುಮಕೂರನ್ನು 'ತುಮ್ಮೆಗೂರು' ಎಂದು ಕರೆದಿದ್ದು ಜನಪದರು ಇದನ್ನು ತುಂಬೆಗೂರು, ತುಮಕೇನಹಳ್ಳಿ, ತುಂಬೆಯೂರು ಎಂಬುದಾಗಿ ಹಲವು ಹೆಸರುಗಳಿಂದ ಕರೆಯುತ್ತಿದ್ದಾರೆ.

ಸಾಂಸ್ಕೃತಿಕ ಪರಂಪರೆಗೆ ಕುರುಹಾಗಿ ಜಿಲ್ಲೆಯಲ್ಲಿ ಪ್ರಾಚೀನ ಕಾಲಘಟ್ಟದಿಂದಲೂ ಹಲವು ಅರಸು ಮನೆತನಗಳು ಹಾಗೂ ಪಾಳೆಪಟ್ಟುಗಳ ಅವಧಿಯಲ್ಲಿ ನಿರ್ಮಾಣಗೊಂಡ ಕೋಟೆ ಕೊತ್ತಲಗಳು ೩೦೦ಕ್ಕೂ ಹೆಚ್ಚು ಕಂಡುಬರುತ್ತವೆ. ಅವುಗಳನ್ನು ಕ್ರಮಬದ್ಧವಾಗಿ ಕಾಲಮಾನಕ್ಕೆ

ಅನುಗುಣವಾಗಿ ವಾಸ್ತು ವಿನ್ಯಾಸ, ರಚನೆ, ಮಹತ್ವ ಪ್ರಕಾರ, ಲಕ್ಷಣಗಳನ್ನು ಚರ್ಚಿಸಿ ಅವುಗಳೊಂದಿಗೆ ಜನಸಾಮಾನ್ಯರು ಹೊಂದಿದ್ದ ಒಡನಾಟವನ್ನು ಗುರುತಿಸಲಾಗಿದೆ. ಏಕೆಂದರೆ ಇದುವರೆಗೆ ಕೇವಲ ಪ್ರಭುತ್ವ ಕೇಂದ್ರಿತ ಕೋಟೆಗಳ ಮೇಲೆಯೇ ಹೆಚ್ಚು ಬೆಳಕು ಚೆಲ್ಲುವ ಪ್ರಯತ್ನ ಮಾಡಿದ್ದಾರೆ. ಕೇವಲ ರಾಜ ತನ್ನ ಸಂಬಂಧಿಕರು, ಸಂಪತ್ತು ಮತ್ತು ರಾಜಧಾನಿ ರಕ್ಷಣೆಗಾಗಿ ಮಾತ್ರ ಕೋಟೆಗಳು ನಿರ್ಮಿಸಲ್ಪಡುತ್ತಿದ್ದವು ಎಂದರೆ ಆ ರಾಜ್ಯದ ಪ್ರಜೆಗಳ ರಕ್ಷಣೆಗಾಗಿ ಯಾವ ಕ್ರಮಗಳನ್ನು ಕೈಗೊಳ್ಳುತ್ತಿರಲಿಲ್ಲವೇ ಎಂಬ ಸಂದೇಹ ಏರ್ಪಡುತ್ತದೆ. ಆದುದರಿಂದ ಪ್ರಸ್ತುತ ಜಿಲ್ಲೆಯ ಕೋಟೆಗಳನ್ನು ಈ ನಿಟ್ಟಿನಲ್ಲಿ ಅಧ್ಯಯನ ಮಾಡಿ ವಿಶ್ಲೇಷಣೆ ಒಳಪಡಿಸಲಾಗಿದೆ.

ಆರಂಭದಲ್ಲಿ ಯಾವುದೇ ಒಂದು ರಾಜ್ಯ ಮತ್ತೊಂದು ರಾಜ್ಯದ ಮೇಲೆ ದಾಳಿ ಮಾಡಿದಂತಹ ಸಂದರ್ಭದಲ್ಲಿ ಸಾಮಾನ್ಯ ಜನರಿಗೆ ಯಾವುದೇ ಕಿರುಕುಳ ನೀಡುತ್ತಿರಲಿಲ್ಲ. ಆದರೆ ಮಧ್ಯಕಾಲೀನ ಸಂದರ್ಭದಲ್ಲಿ ಬದಲಾದ ಯುದ್ಧ ನೀತಿಯಿಂದಾಗಿ ಮುಸ್ಲಿಂ ಅರಸರು, ಮರಾಠರು, ಹೈದರ್ ಟಿಪ್ಪು[೬] ಮೊದಲಾದ ಅರಸರು ತಮ್ಮ ನಿರಂತರ ರಾಜಕೀಯ ಸಂಘರ್ಷಗಳಿಗೆ ಬೇಕಾದ ಆದಾಯದ ಮೂಲವನ್ನು ಪಡೆಯಲು ಗ್ರಾಮಗಳನ್ನು ದೋಚುತ್ತಿದ್ದರೆಂಬ ಅಂಶ ಜಿಲ್ಲೆಯಾದ್ಯಂತ ನಿರ್ಮಾಣಗೊಂಡ ಇಷ್ಟು ಪ್ರಮಾಣದ ಕೋಟೆ-ಕೊತ್ತಲಗಳಿಂದ ತಿಳಿಯುತ್ತದೆ. ಕ್ರಿ.ಶ. ೧೮೦೦ರಲ್ಲಿ ತುಮಕೂರು ಜಿಲ್ಲೆಯನ್ನು ಸಂದರ್ಶಿಸಿದ ಮೆಕೆಂಜಿ ಮಧುಗಿರಿ ಪ್ರಾಂತ್ಯವೊಂದರಲ್ಲೇ ೨೭೦[೭] ಕೋಟೆ-ಕೊತ್ತಲಗಳಿದ್ದವೆಂದು ಉಲ್ಲೇಖಿಸಿದ್ದಾನೆ. ಇದನ್ನು ಗಮನಿಸಿದರೆ ಜಿಲ್ಲೆಯಲ್ಲಿದ್ದ ರಾಜಕೀಯ ಅಭದ್ರತೆಯನ್ನು ಗೋಚರವಾಗುತ್ತದೆ. ಬಹುಶಃ ಈ ಕಾರಣಕ್ಕಾಗಿಯೇ ಜಿಲ್ಲೆಯ ಬಹುತೇಕ ಹಳ್ಳಿಗಳಲ್ಲಿ ಕೋಟೆಗಳು ಕಂಡುಬರುತ್ತವೆ. ಜೊತೆಗೆ ಜಿಲ್ಲೆಯಾದ್ಯಂತ ಆಳ್ವಿಕೆ ನಡೆಸಿದ ಪಾಳೆಪಟ್ಟುಗಳು ಸಹ ತಮ್ಮ ಸಂಸ್ಥಾನವನ್ನು ರಕ್ಷಿಸಿಕೊಳ್ಳಲು ರಾಜಧಾನಿ ಸುತ್ತಲೂ ಸರಪಳಿಯಂತೆ(ಚೈನ್ ಲಿಂಕ್) ಗಡಿ ಪ್ರಾಂತ್ಯಗಳ ಸುತ್ತಲೂ ಕೋಟೆಗಳನ್ನು ನಿರ್ಮಿಸಿಕೊಂಡಿದ್ದಾರೆ.

ಜಿಲ್ಲೆಯಾದ್ಯಂತ ಕಂಡುಬಂದ ಕೋಟೆ-ಕೊತ್ತಲ, ಸೈನಿಕ ಕೇಂದ್ರ ಹಾಗೂ ಪುರಗಳನ್ನು ಅಧ್ಯಯನದ ಅನುಕೂಲಕ್ಕಾಗಿ ರಾಜಧಾನಿ ಕೇಂದ್ರಿತ ಕೋಟೆ, ರಕ್ಷಣಾ ಕೇಂದ್ರಿತ ಕೋಟೆ, ಗ್ರಾಮ ಕೇಂದ್ರಿತ ಕೋಟೆ, ಬುರುಜುಗಳು ಎಂಬುದಾಗಿ ನಾಲ್ಕು ವಿಧದಲ್ಲಿ ವಿಭಾಗ ಮಾಡಿಕೊಳ್ಳಲಾಗಿದೆ. ಇವುಗಳ ರಚನೆ, ವಾಸ್ತು ವಿನ್ಯಾಸ, ಪ್ರಕಾರ, ಮಹತ್ವ, ಲಕ್ಷಣಗಳನ್ನು ವಿಶ್ಲೇಷಿಸಿ ಅವುಗಳ ರಚನೆಯ ಹಿಂದಿನ ರಾಜಕೀಯ, ಸಾಮಾಜಿಕ, ಆರ್ಥಿಕ, ಧಾರ್ಮಿಕ ಮೊದಲಾದ ಉದ್ದೇಶಗಳನ್ನು ತಲಸ್ಪರ್ಶಿಯವಾಗಿ ಮೊದಲ ಬಾರಿಗೆ ಅಧ್ಯಯನ ಮಾಡಲಾಗಿದೆ.

೪.೧. ರಾಜಧಾನಿ ಕೇಂದ್ರಿತ ಕೋಟೆಗಳು

ಜಿಲ್ಲೆಯು ಚಾರಿತ್ರಿಕವಾಗಿ ಪ್ರಾಚೀನ ಕಾಲದಿಂದಲೂ ಮಹತ್ವವಲ್ಲದ ಪ್ರದೇಶವೆಂದೇ ಗುರುತಿಸಿಕೊಂಡಿದೆ. ಸಾಮಾನ್ಯವಾಗಿ ಯಾವುದೇ ಒಂದು ಸಾಮ್ರಾಜ್ಯ ಅಥವಾ ಅರಸು ಮನೆತನ ಕೃಷಿ ಮತ್ತು ವ್ಯಾಪಾರದ ಉದ್ದೇಶಕ್ಕಾಗಿ ನದಿ ತೀರಗಳಲ್ಲಿಯೇ ಹೆಚ್ಚಾಗಿ ರಾಜಧಾನಿಗಳನ್ನು

ನಿರ್ಮಿಸಿಕೊಂಡು ಅದರ ಸುತ್ತಲೂ ಕೋಟೆ ಕಟ್ಟಿಸಿರುವುದು ಕಂಡುಬರುತ್ತದೆ. ಆದರೆ ಜಿಲ್ಲೆಯಲ್ಲಿ ಅಂತಹ ಹೇಳಿಕೊಳ್ಳುವ ಯಾವ ನದಿಗಳು ಇಲ್ಲದಿರುವುದರಿಂದ ಕರ್ನಾಟಕದ ಚರಿತ್ರೆಗೆ ತಿರುವು ನೀಡುವಂತಹ ಯಾವುದೇ ರೀತಿಯ ರಾಜ ಮನೆತನಗಳ ಆಳ್ವಿಕೆಯಾಗಲಿ ಇಲ್ಲವೇ ರಾಜಕೀಯ ಸಂಘರ್ಷಗಳಾಗಲಿ ನಡೆದಿಲ್ಲ.[೮] ಕೇವಲ ಉತ್ತರ ಮತ್ತು ದಕ್ಷಿಣದ ರಾಜ್ಯಗಳಿಗೆ ಗಡಿ ಪ್ರಾಂತ್ಯವಾಗಿ ಅವರಿಂದ ನಿರ್ಮಿಸಲ್ಪಟ್ಟ ಕೋಟೆ ಕೊತ್ತಲಗಳು ಕಂಡುಬರುತ್ತವೆ. ಹಾಗಾಗಿ ಇವರ ಸಾರ್ವಭೌಮತ್ವದಡಿ ಜಿಲ್ಲೆಯಲ್ಲಿ ಹಲವು ಸಾಮಂತ ಅರಸು ಮನೆತನಗಳು ಹಾಗೂ ಪಾಳೆಪಟ್ಟುಗಳು ಅಧಿಕಾರಕ್ಕೆ ಬಂದು ೩೦೦ಕ್ಕೂ ಹೆಚ್ಚು ಕೋಟೆ-ಕೊತ್ತಲುಗಳ ಹುಟ್ಟಿಗೂ ಕಾರಣವಾಗಿದೆ. ಹೀಗೆ ಅಧಿಕಾರವಹಿಸಿಕೊಂಡ ಪಾಳೆಪಟ್ಟುಗಳ ನಿರಂತರ ರಾಜಕೀಯ ಸಂಘರ್ಷವು ಜಿಲ್ಲೆಯಲ್ಲಿ ತಮ್ಮ ಸಂಸ್ಥಾನಗಳ ರಕ್ಷಣೆಗಾಗಿ ಗಡಿ ಪ್ರಾಂತ್ಯಗಳ ಸುತ್ತಲೂ ಕೋಟೆ-ಕೊತ್ತಲ ನಿರ್ಮಿಸಿಕೊಳ್ಳುವಂತೆ ಮಾಡಿತು. ವಿಶೇಷವಾಗಿ ಇವರನ್ನು ಕಾಲಕಾಲಕ್ಕೆ ಸುರಕ್ಷಿತವಾದ ಪ್ರದೇಶಗಳಿಗೆ ತಮ್ಮ ರಾಜಧಾನಿಗಳನ್ನು ಬದಲಾಯಿಸುವಂತೆ ಮಾಡಿತು. ಶತ್ರುಗಳ ದಾಳಿಯಿಂದ ರಾಜಧಾನಿಗೆ ರಕ್ಷಣೆ ನೀಡಲು ಬದಲಾದ ಯುದ್ಧನೀತಿ ಹಾಗೂ ಆಯುಧೋಪಕರಣಗಳ ಆವಿಷ್ಕಾರಕ್ಕೆ ಅನುಗುಣವಾಗಿ ಬಲಯುತವಾದ ಕೋಟೆಗಳನ್ನು ಸುರಕ್ಷಿತ ಪ್ರದೇಶದಲ್ಲಿ ನಿರ್ಮಿಸಿಕೊಂಡಿರುವುದು ಜಿಲ್ಲೆಯಲ್ಲಿ ಕಂಡು ಬರುತ್ತದೆ. ಉದಾಹರಣೆಗೆ ಕ್ರಮವಾಗಿ ನಿಡುಗಲ್ಲು ಚೋಳರು-ಗೋವಿಂದವಾಡಿ, ಹೇಮಾವತಿ, ನಿಡುಗಲ್ಲ್, ಗುಂಡ್ಲಹಳ್ಳಿ, ಗುಡಿಯಕುಂಟೆ, ಹುಲಿಯರೆ ಪ್ರಭುಗಳು-ಕಣಕಟ್ಟೆ, ಹುಳಿಯಾರು, ಮಹಾನಾಡಪ್ರಭುಗಳು-ಮುಮ್ಮಡಿ ಪಟ್ಟಣ, ಬಿಜವರ, ಸಿದ್ಧಾಪುರ, ಮಧುಗಿರಿ, ಮಿಡಿಗೇಶಿ, ಬೇಡತ್ತೂರು[೧೦], ಕುಂದುರ್ಪಿ ಪಾಳೆಯಗಾರರು-ಕುಂದುರ್ಪಿ, ವೈ.ಎನ್.ಹೊಸಕೋಟೆ(ಯಲ್ಲಪ್ಪ ನಾಯಕನ ಹೊಸಕೋಟೆ), ಕಾಮನದುರ್ಗ[೧೧], ಸಿರಾ ಪಾಳೆಯಗಾರರು-ಸಿರಾ, ರತ್ನಗಿರಿ, ಮಿಡಿಗೇಶಿ, ಹಾಗಲವಾಡಿ ನಾಯಕರು-ಎರೆಕಟ್ಟೆ, ಚಿಕ್ಕನಾಯಕನಹಳ್ಳಿ, ಹಾಗಲವಾಡಿ, ಹೊಳವನಹಳ್ಳಿ[೧೨] ಸಂಸ್ಥಾನೀಕರು-ಹೊಳವನಹಳ್ಳಿ, ಕೊರಟಗೆರೆ[೧೩] ಹೀಗೆ ಹಲವು ಪಾಳೆಯ ಪಟ್ಟುಗಳು ತಮ್ಮ ರಾಜಧಾನಿ ಕೇಂದ್ರಗಳನ್ನು ನಿರಂತರವಾಗಿ ಬದಲಾಯಿಸುತ್ತಿದ್ದದ್ದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಜಿಲ್ಲೆಯ ಪಾಳೆಪಟ್ಟುಗಳು ತಮ್ಮ ಮೂಲ ರಾಜಧಾನಿಯನ್ನು ಬಲಪಡಿಸುವ ಬದಲು ಇಡೀ ಆಡಳಿತ ಕೇಂದ್ರವನ್ನೇ ಬದಲಾಯಿಸುತ್ತಿದ್ದದ್ದು ಕೋಟೆ ನಿರ್ಮಿಸುವಲ್ಲಿ ಇವರು ಸ್ಥಳದ ಆಯ್ಕೆಗೆ ಮೊದಲ ಆದ್ಯತೆ ನೀಡುತ್ತಿದ್ದರೆಂಬ ಅಂಶ ತಿಳಿಯುತ್ತದೆ. ಏಕೆಂದರೆ ಜಿಲ್ಲೆಯ ಪಾಳೆಪಟ್ಟುಗಳ ಮೂಲ ರಾಜಧಾನಿಗಿಂತಲೂ ಬದಲಾಯಿಸಲ್ಪಟ್ಟ ರಾಜಧಾನಿಗಳೇ ಭೌಗೋಳಿಕವಾಗಿ ಹೆಚ್ಚು ಭದ್ರತೆಯಿಂದ ಕೂಡಿವೆ. ಬಹುಶಃ ಈ ಕಾರಣಕ್ಕಾಗಿಯೇ ಹೊಸ ರಾಜಧಾನಿ ನಿರ್ಮಾಣ ಕಾರ್ಯ ಹೆಚ್ಚು ಖರ್ಚುದಾಯಕವಾದರೂ, ಭದ್ರತೆಯ ದೃಷ್ಟಿಯಿಂದ ಹೊಸ ರಾಜಧಾನಿಯ ನಿರ್ಮಾಣಕ್ಕೆ ಮುಂದಾಗುತ್ತಿದ್ದಿರಬೇಕು.

ಕೆಲವೊಮ್ಮೆ ಜಿಲ್ಲೆಯಲ್ಲಿ ಶತ್ರು ಅರಸರಿಂದ ಅಧಿಕಾರ ಕಳೆದುಕೊಂಡ ಸಂದರ್ಭದಲ್ಲಿ ವಲಸೆ ಹೋದ ಪ್ರದೇಶದಲ್ಲೇ ಹೊಸದಾಗಿ ಕೋಟೆ ಕಟ್ಟಿಸಿ ರಾಜಧಾನಿ ಮಾಡಿಕೊಂಡಿರುವುದು ಸಹ

ಕಂಡುಬರುತ್ತದೆ. ಉದಾಹರಣೆಗೆ ನಿಡುಗಲ್ಲು ಚೋಳರ ನಾಲ್ಕನೆಯ ಇರುಂಗೊಳ ಹೊಯ್ಸಳರ ನಿರಂತರ ದಾಳಿಗಳಿಂದ ರಕ್ಷಿಸಲು ರಾಜಧಾನಿಯನ್ನು ನಿಡುಗಲ್ಲಿನಿಂದ ಗುಂಡ್ಲಹಳ್ಳಿಗೆ[೧೪] ವರ್ಗಾಯಿಸಿ ಅಲ್ಲಿಯೇ ಕೋಟೆ ಕಟ್ಟಿಸಿದನು. ಅದೇ ರೀತಿ ಪೆನುಗೊಂಡೆಯ ನವಾಬ ಮತ್ತು ಆತನಿಂದ ನೇಮಿಸಲ್ಪಟ್ಟ ಕುಂದುರ್ಪಿಯ ಅಧಿಕಾರಿ ಪೆದ್ದಕೋನೆಟಿನಾಯಕರ ಕಿರುಕುಳದಿಂದ ಯಲ್ಲಪ್ಪನಾಯಕ ಹೊಸಕೋಟೆಯಿಂದ[೧೫] ರಾಜಧಾನಿಯನ್ನು ಕಾಮನದುರ್ಗಕ್ಕೆ ಬದಲಾಯಿಸಿ ಅಲ್ಲಿಯೇ ಕೋಟೆ ಕಟ್ಟಿಸಿದ ಮಹಾನಾಡ ಪ್ರಭುಗಳ ಕೊನೆಯ ಅರಸ ಚೆನ್ನಪ್ಪಗೌಡ ಹೈದರ್ ಟಿಪ್ಪುವಿನ ದಾಳಿಯಿಂದ ರಾಜಧಾನಿಯನ್ನು ಮಧುಗಿರಿಯಿಂದ ಮಿಡಿಗೇಶಿಗೆ[೧೬] ಬದಲಾಯಿಸಿ ಅಲ್ಲಿಯ ಕೋಟೆಯನ್ನು ಬಲಪಡಿಸಿದನು. ಹಾಗೆಯೇ ಸಿರಾ ಮತ್ತು ರತ್ನಗಿರಿ ಪಾಳೆಯಗಾರರು ಸಹ ನಿರಂತರ ದಾಳಿಗಳಿಂದ ತಮ್ಮ ಅಭೇದ್ಯವಾದ ಕೋಟೆಗಳನ್ನು ಕಳೆದುಕೊಂಡ ರಾಜಧಾನಿಯನ್ನು ಮಿಡಿಗೇಶಿಗೆ ಬದಲಾಯಿಸಿದರು. ಇಂತಹ ಅನಿವಾರ್ಯ ಪರಿಸ್ಥಿತಿಯನ್ನು ಜಿಲ್ಲೆಯ ಬಹುತೇಕ ಪಾಳೆಯಪಟ್ಟುಗಳು ಅನುಭವಿಸಿದರು. ಈ ರಾಜಕೀಯ ವಿದ್ಯಮಾನಗಳನ್ನು ಸೂಕ್ಷ್ಮವಾಗಿ ಗಮನಿಸಿದರೆ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಪಾಳೆಯಪಟ್ಟುಗಳು ಪರಸ್ಪರ ವಿರೋಧಿ ನಿಲುವುಗಳಿಂದ ರಾಜ್ಯ ವಿಸ್ತರಣಾಕಾಂಕ್ಷೆಗೆ ಮುಂದಾಗಿ ತಮ್ಮ ಅಂತ್ಯವನ್ನು ತಾವೇ ಮಾಡಿಕೊಂಡಿದ್ದಾರೆ. ಬಹುಶಃ ಇದರಿಂದಲೇ ಇವರು ನಿರಂತರವಾಗಿ ತಮ್ಮ ರಾಜಧಾನಿಗಳನ್ನು ಬದಲಾಯಿಸಿಕೊಳ್ಳುತ್ತಿದ್ದರು.

ಹೀಗೆ ನಿರ್ಮಾಣಗೊಂಡ ರಾಜಧಾನಿ ಕೇಂದ್ರಿತ ಕೋಟೆಗಳ ವಾಸ್ತು ವಿನ್ಯಾಸ ಮತ್ತು ಲಕ್ಷಣಗಳನ್ನು ಗಮನಿಸಿದರೆ ಜಿಲ್ಲೆಯಲ್ಲಿ ಸಾಮಂತರು, ಪಾಳೆಯಪಟ್ಟುಗಳು, ಅಧಿಕಾರಿ ವರ್ಗದವರಿಂದ ಬೃಹತ್ ಸಾಮ್ರಾಜ್ಯಗಳ ಸಾರ್ವಭೌಮತ್ವದ ಅಡಿಯಲ್ಲಿ ನಿರ್ಮಾಣಗೊಂಡರೂ ಸ್ವತಂತ್ರ ರಾಜಧಾನಿ ಕೇಂದ್ರಿತ ಕೋಟೆಗಳಿಗೆ ಇರಬೇಕಾದ ಎಲ್ಲಾ ಲಕ್ಷಣಗಳು ಇವುಗಳಲ್ಲಿ ಕಂಡುಬರುತ್ತವೆ. ಇಂತಹ ಕೋಟೆ-ಕೊತ್ತಲಗಳ ವಾಸ್ತು ರಚನೆ, ವಿನ್ಯಾಸ, ತಂತ್ರಜ್ಞಾನ, ವಾಸ್ತುಬದ್ಧವಾಗಿದ್ದರೂ ತಮ್ಮ ಅನುಕೂಲಕ್ಕೆ ತಕ್ಕಂತೆ ವಾಸ್ತುವನ್ನು ಮಾರ್ಪಡಿಸಿಕೊಂಡಿದ್ದಾರೆ. ಏಕೆಂದರೆ ಆಷಾಢ ಮಾಸದಲ್ಲಿ ಬೀಸುವಂತಹ ಗಾಳಿಯ ರಭಸಕ್ಕೆ ಬೆಟ್ಟವನ್ನು ಏರುವುದೇ ಕಷ್ಟಸಾಧ್ಯ. ಹಾಗಾಗಿ ಗಾಳಿ ಬೀಸುವ ವಿರುದ್ಧ ದಿಕ್ಕಿಗೆ ಕೋಟೆ ಗೋಡೆ ನಿರ್ಮಿಸಬೇಕಾಗುತ್ತದೆ. ಬೆಟ್ಟದ ತುದಿ ಭಾಗದಲ್ಲಿ ಗೋಡೆಯ ಅವಶ್ಯಕತೆ ಇಲ್ಲದಿದ್ದರೂ ಎತ್ತರವಾಗಿ ತುದಿ ಸುತ್ತಲೂ ನಿರ್ಮಾಣ ಮಾಡಿದ್ದಾರೆ. ಬೆಟ್ಟದ ಮಧ್ಯ ಭಾಗವನ್ನು ಅರ್ಧಚಂದ್ರಾಕಾರವಾಗಿ ಎರಡು ಬದಿಗಳಿಂದ ಸೇರುವ ಹಾಗೆ ಅವಶ್ಯವಿರುವಲ್ಲಿ ಮಾತ್ರ ಏರುಮುಖವಾಗಿ ಗೋಡೆ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ವಾಸ್ತು ಜ್ಞಾನವಿಲ್ಲದವರಿಂದ ಈ ತಂತ್ರವನ್ನು ರೂಪಿಸಲು ಸಾಧ್ಯವಿಲ್ಲ. ಏಕೆಂದರೆ ಬೆಟ್ಟದ ಇಳಿಜಾರು ಪ್ರದೇಶದಲ್ಲಿ ಹೇಗೆಂದರೆ ಹಾಗೆ ಗೋಡೆಯನ್ನು ನಿರ್ಮಾಣ ಮಾಡಿದರೆ ಅದು ಪ್ರಪಾತ ಅಥವಾ ಕೊರಕಲ್ಲಿಗೆ ಬೀಳುವ ಸಂಭವ ಹೆಚ್ಚಿರುತ್ತದೆ. ಹಾಗಾಗಿ ಇಳಿಜಾರು ಭಾಗದಲ್ಲಿರುವ ಕೋಟೆ ಗೋಡೆ ಸಡಿಲಗೊಳ್ಳದಂತೆ ಬಿಗಿಯಾಗಿ ಹಿಡಿದಿಟ್ಟುಕೊಳ್ಳಲು ಗುಣಮಟ್ಟದ ಮಣ್ಣಿನ ಗಚ್ಚನ್ನು ಪ್ರಾಚೀನ ಕೋಟೆಗಳಲ್ಲಿ

ಬಳಸಿಕೊಂಡರೆ, ಹೈದರ್-ಟಿಪ್ಪುವಿನ ಕಾಲದ ಗೋಡೆಗೆ ಗಾರೆಯ ಗಚ್ಚನ್ನು ಬಳಸಲಾಗಿದೆ. ವಿಶೇಷವಾಗಿ ಗೋಡೆಯ ಹೊರಬದಿ ಸಡಿಲವಾಗದಂತೆ ತಳಪಾಯದಲ್ಲಿ ರಂಧ್ರ ಕೊರೆದು ಕಬ್ಬಿಣ ಇಲ್ಲವೆ ಕಲ್ಲಿನ ಉಳಿಗಳನ್ನು ಇಡಲಾಗಿದೆ. ಮಧುಗಿರಿ, ಮಿಡಿಗೇಶಿ, ಚೆನ್ನರಾಯನದುರ್ಗ, ಹುತ್ತರೀದುರ್ಗ, ಪಾವಗಡ, ಭಸ್ಮಾಂಗಿ ಮೊದಲಾದ ಗಿರಿದುರ್ಗಗಳಲ್ಲಿ ಇದು ಕಂಡುಬರುತ್ತದೆ. ಅಲ್ಲದೆ ಬೆಟ್ಟದ ಬುಡದಿಂದ ತುದಿ ಭಾಗದವರೆಗಿನ ಗೋಡೆ ೯೦ಂಯಂತೆ ನೇರವಾಗಿರದೆ ತ್ರಿಭುಜ ಮಾದರಿಯಲ್ಲಿ, ಅಂದರೆ ಗೋಡೆಯ ತಳಭಾಗ ಅಗಲವಾಗಿ ಮೇಲೆ ಹೋದಂತೆ ಕಿರಿದಾಗುವಂತೆ ಮಾಡಿದ್ದಾರೆ. ಏಕೆಂದರೆ ಇಳಿಜಾರಾದ ಪ್ರದೇಶದ ಗೋಡೆಯ ತುದಿ ಭಾಗ ಹೆಚ್ಚು ಭಾರ ಹೊಂದಿದರೆ ಅದು ಕುಸಿಯುವ ಸಂಭವವಿರುತ್ತದೆ. ಹಾಗಾಗಿ ಗೋಡೆಯ ಭಾರ ಕಡಿಮೆಯಾಗಲೆಂದು ತುದಿಭಾಗದ ಗೋಡೆಯನ್ನು ಕಿರಿದಾಗಿರುವಂತೆ ನೋಡಿಕೊಳ್ಳುತ್ತಾರೆ. ಈ ಕಾರಣಕ್ಕಾಗಿಯೇ ಸಮಾರು ೪೦೦ರಿಂದ ೫೦೦ ವರ್ಷಗಳ ಹಿಂದಿನ ಗಿರಿದುರ್ಗಗಳಲ್ಲಿನ ಕೋಟೆ ಗೋಡೆಯು ಇಂದಿಗೂ ಸಡಿಲಗೊಳ್ಳದಂತೆ ಗಟ್ಟಿಯಾಗಿದೆ.

ಜಿಲ್ಲೆಯಲ್ಲಿ ಶಾಸ್ತ್ರಗ್ರಂಥಗಳು ಉಲ್ಲೇಖಿಸುವ ರಚನಾ ಶೈಲಿಯನ್ನು ಕೈಬಿಟ್ಟರೂ ತಮ್ಮದೇ ಆದ ಸ್ಥಳೀಯ ವಾಸ್ತು ವಿನ್ಯಾಸವನ್ನು ಯುದ್ಧನೀತಿ ಮತ್ತು ಆಯುಧೋಪಕರಣಗಳಿಗೆ ಅನುಗುಣವಾಗಿ ಪ್ರಾಕೃತಿಕ ಹವಾಗುಣ ಅಥವಾ ಪರಿಸರಕ್ಕೆ ಹೊಂದಿಕೆಯಾಗುವ ದೇವಾಲಯ, ಅರಮನೆ, ಕೆರೆಕ-ಟ್ಟೆ, ಬಾವಿ, ಕೋಟೆ-ಕೊತ್ತಲ ಮೊದಲಾದವುಗಳನ್ನು ನಿರ್ಮಿಸಲಾಗಿದೆ. ಆದರೆ ಸ್ಥಳದುರ್ಗಗಳನ್ನು ಮಾತ್ರ ವಾಸ್ತುಬದ್ಧವಾಗಿಯೇ ನಿರ್ಮಾಣ ಮಾಡಲಾಗಿದೆ. ಕೌಟಿಲ್ಯ, ಮನು, ಶುಕ್ರ, ಕಾಮಾಂದಕ ಮೊದಲಾದ ರಾಜನೀತಿಜ್ಞರು ಅಭೇದ್ಯವಿಲ್ಲದೆಡೆ ಭದ್ರತೆಯನ್ನು ಮಾನವ ನಿರ್ಮಿತವಾಗಿ ಸೃಷ್ಟಿಸಿಕೊಂಡು ಕೋಟೆ ಕಟ್ಟಬೇಕು ಎಂದಿದ್ದಾರೆ. ಸಾಮಾನ್ಯವಾಗಿ ಸ್ಥಳದುರ್ಗಗಳನ್ನು ನೀರಿರುವಲ್ಲಿ ಮಾತ್ರ ನಿರ್ಮಿಸಬೇಕಾಗುತ್ತದೆ. ಒಂದು ವೇಳೆ ನೀರಿಲ್ಲದ ಪ್ರದೇಶದಲ್ಲಿ ಕೋಟೆ ನಿರ್ಮಿಸಬೇಕಾದಾಗ ನೀರಿನ ಮೂಲಗಳಿರುವ ನದಿ, ಸರೋವರಗಳಿಂದ ಕಾಲುವೆಗಳ ಮೂಲಕ ನೀರನ್ನು ಕೋಟೆಯ ಸುತ್ತಲೂ ಇರುವ ಕಂದಕ ಹಾಗೂ ಕೋಟೆಯ ಒಳಗಿನ ದಿನನಿತ್ಯದ ಕೆಲಸ ಕಾರ್ಯಗಳಿಗೆ ಬಳಕೆಗೆ ಯೋಗ್ಯವಾಗುವಂತೆ ಮಾಡಬೇಕು. ಹಾಗಾಗಿ ನದಿ ಸಂಚಯಗಳಿಲ್ಲದ ಈ ಜಿಲ್ಲೆಯಲ್ಲಿ ಸಣ್ಣಪುಟ್ಟ ನದಿ ಹಾಗೂ ಹಳ್ಳ-ಕೊಳ್ಳಗಳಿಗೆ ಅಡ್ಡಲಾಗಿ ಕೆರೆ-ಕಟ್ಟೆಗಳನ್ನು ಕಟ್ಟಿ ಮಳೆಗಾಲದಲ್ಲಿ ಬೀಳುವ ಮಳೆಯ ನೀರನ್ನು ಸಂಗ್ರಹಿಸಿ ವರ್ಷವಿಡೀ ಬಳಸಿಕೊಳ್ಳುವಂತಹ ಪರ್ಯಾಯ ಮಾರ್ಗವನ್ನು ಕಂಡುಕೊಂಡಿದ್ದಾರೆ. ಆದುದರಿಂದಲೇ ಜಿಲ್ಲೆಯ ಸ್ಥಳದುರ್ಗಗಳು ಕೆರೆ-ಕಟ್ಟೆಗಳ ಕೆಳಗೆ ನಿರ್ಮಾಣಗೊಂಡಿರುವುದು ಕಂಡುಬರುತ್ತದೆ.. ಉದಾಹರಣೆಗೆ ಸಿರಾ, ಹಾಗಲವಾಡಿ, ಕುಣಿಗಲ್ಲು, ಬಿಜವರ, ಸಿದ್ದಾಪುರ ಹಂದನಕರೆ, ಹೊಳವನಹಳ್ಳಿ, ಹೊನ್ನೆನಹಳ್ಳಿ, ಕಂದಿಕೆರೆ, ತುರುವೇಕೆರೆ, ತುಮಕೂರು, ಕೈದಾಳ ಮೊದಲಾದವು.

ಜಿಲ್ಲೆಯ ರಾಜಧಾನಿ ಕೇಂದ್ರಿತ ಕೋಟೆಗಳ ದ್ವಾರಗಳಲ್ಲಿ ಸಾಮಾನ್ಯವಾಗಿ ದಕ್ಷಿಣ ಅಥವಾ ಪೂರ್ವ ದಿಕ್ಕಿಗೆ ಆಂಜನೇಯನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಆದರೆ ಸಿದ್ಧಾಪುರದ ಕೋಟೆಯ ದ್ವಾರದಲ್ಲಿ ಮಾತ್ರ ವಿಘ್ನೇಶ್ವರನ ಮೂರ್ತಿಯಿದೆ. ಹೀಗೆ ಜಿಲ್ಲೆಯ ಕೋಟೆ-ಕೊತ್ತಲಗಳ ಒಂದೊಂದು ದ್ವಾರದ ಬಳಿಯು ಆಂಜನೇಯ, ಶಿವ ಮತ್ತು ದುರ್ಗಿಯ ವಿವಿಧ ಅವತಾರ, ವಿಘ್ನೇಶ್ವರನ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಗಿದೆ. ಇವು ಹೈದರ್-ಟಿಪ್ಪುವಿನ ಕಾಲದಲ್ಲೂ ವಿಘ್ನಗೊಳ್ಳದೆ ಇಂದಿಗೂ ಪೂಜೆಗೆ ಒಳಪಡುತ್ತಿವೆ. ಈ ದೇವತಾ ಮೂರ್ತಿಗಳು ರಕ್ಷಣೆಯ ಸಂಕೇತವಾಗಿದ್ದು, ಸೈನಿಕರು, ಪ್ರಜೆಗಳು ಮತ್ತು ರಾಜನಿಗೆ ಅಪತ್ಕಾಲದಲ್ಲಿ ಇವು ರಕ್ಷಣೆ ಮಾಡುತ್ತವೆ ಎಂಬ ದೃಢವಾದ ನಂಬಿಕೆಯಿತ್ತು. ಹಾಗಾಗಿ ದಾಳಿಯಂತಹ ಸಂದರ್ಭದಲ್ಲಿ ರಕ್ಷಕರಾಗಿ ನಿಂತು ಶತ್ರುಗಳ ವಿರುದ್ಧ ತಮ್ಮನ್ನು ದೃಢಚಿತ್ತವಾಗಿ ಹೋರಾಡುವಂತೆ ಮಾಡುತ್ತವೆಂಬ ನಂಬಿಕೆಯಿತ್ತು. ಹಾಗಾಗಿಯೇ ಆಂಜನೇಯನು ಶಕ್ತಿ ಪರಾಕಾಷ್ಠೆಯ ಸಂಕೇತವಾಗಿ; ಕೋಟೆಯ ರಕ್ಷಕನಾಗಿ ಕಂಡಿದ್ದಾನೆ. ಶಿವನು ಲೋಕರಕ್ಷಕನಾಗಿ; ಶತ್ರುಗಳಿಗೆ ರುದ್ರನಾಗಿ; ಕೋಟೆಗೆ ಪಾಲಕನಾಗಿಯೂ, ವಿಘ್ನೇಶ್ವರನು ಸಕಲ ಕೆಲಸ ಕಾರ್ಯಗಳ ಶುಭ ಸಂಕೇತವಾಗಿ; ವಿಘ್ನ ನಿವಾರಕನಾಗಿ; ಕೋಟೆಗಳಿಗಿರುವ ಕಂಟಕಗಳನ್ನು ದೂರ ಮಾಡುವವನಾಗಿಯೂ, ದುರ್ಗಿಯ ವಿವಿಧ ಅವತಾರಗಳು ಭಯಾನಕತೆಯನ್ನು ಸೃಷ್ಟಿಸಿ ಶತ್ರುಗಳ ಪಾಳೆಯ ಚದುರುವಂತೆ ಮಾಡಿ ಅವರ ಪಾಲಿಗೆ ಯಮಪಾಶವಾಗಿ ಕಾಣುವಂತಹ ದೇವತೆಯಾಗಿ ಗುರುತಿಸಿಕೊಂಡಿದ್ದಾರೆ. ಈ ಕಾರಣಕ್ಕಾಗಿಯೇ ರಾಜನು ಕೋಟೆಯ ದ್ವಾರಗಳಲ್ಲಿ ದೇವತಾ ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಿದ್ದರು. ಆ ಮೂಲಕ ಸಾಮಾನ್ಯ ಜನ, ರಾಜ ಮತ್ತು ಅವನ ಸಂಬಂಧಿಕರು ನೆಮ್ಮದಿಯ ಜೀವನ ನಡೆಸಲು ಹಾಗೂ ಸೈನಿಕರು ಸದಾ ಕಾಲ ದೃಢಚಿತ್ತವಾಗಿ ಕಾರ್ಯೋನ್ಮುಖರಾಗಿರುವಂತ ವಾತಾವರಣ ಸೃಷ್ಟಿಸಲು ಮುಂದಾಗುತ್ತಿದ್ದರು. ಹಾಗಾಗಿ ಬಿಜಾಪುರದ ಸುಲ್ತಾನ, ಮೊಘಲ್ ಸೇನೆ, ಸಿರಾದ ಸುಬೇದಾರರು, ಹೈದರ್-ಟಿಪ್ಪು ಮೊದಲಾದ ಯಾವ ಮುಸ್ಲಿಂ ಅರಸರ ಕಾಲದಲ್ಲೂ ಜಿಲ್ಲೆಯಲ್ಲಿ ಕಂಡುಬರುವ ಕೋಟೆಗಳಲ್ಲಿ ಅಧಿಕಾರ ಕೇಂದ್ರಿತ ದೇವಾಲಯಗಳು ಮಾತ್ರ ನಾಶ ಹೊಂದಿದವೇ ಹೊರತು, ಕೋಟೆಯ ದ್ವಾರಗಳಲ್ಲಿರುವ ಯಾವ ಮೂರ್ತಿಯು ಭಗ್ನಗೊಂಡಿಲ್ಲ. ಬಹುಶಃ ಈ ದಾಳಿಕಾರರ ಸೇನೆಯಲ್ಲಿ ಸ್ಥಳೀಯರೇ ಇರುತ್ತಿದ್ದರಿಂದ ಜನ ಸಾಮಾನ್ಯರೊಂದಿಗೆ ಬಿಡನಾಟ ಹೊಂದಿದ ಯಾವ ಮೂರ್ತಿಯನ್ನು ವಿಘ್ನಗೊಳಿಸುವ ಗೋಜಿಗೆ ಯಾರು ಮುಂದಾಗುತ್ತಿರಲಿಲ್ಲ. ಅಲ್ಲದೆ ಯಾವುದೇ ಅರಸ ಆಡಳಿತದ ವಿಷಯದಲ್ಲಿ ಪ್ರಜೆಗಳನ್ನು ಓಲೈಸಿಕೊಳ್ಳಲು ಅವರ ಧರ್ಮದ ಸಂಕೇತವಾಗಿ ದೇವಾಲಯ, ಮಸೀದಿ, ಚರ್ಚ್ ಮೊದಲಾದವುಗಳನ್ನು ನಿರ್ಮಿಸುತ್ತಿದ್ದನು. ಹಾಗಾಗಿ ಯಾವುದೇ ಅರಸ ಒಂದು ರಾಜ್ಯದ ಮೇಲೆ ದಾಳಿ ಮಾಡಿದಾಗ ಆ ರಾಜ್ಯದ ಪ್ರಭುತ್ವ ಕೇಂದ್ರಿತ ದೇವಾಲಯ, ಮಸೀದಿಗಳನ್ನಷ್ಟೇ ನಾಶಪಡಿಸುತ್ತಿದ್ದನೇ ಹೊರತು ಸಮುದಾಯ ಕೇಂದ್ರಿತ ದೇವಾಲಯ, ಮಸೀದಿಗಳನ್ನು ಎಲ್ಲಿಯೂ ಯಾವ ಅರಸ ನಾಶ ಮಾಡಿದ ಎಂಬುದಕ್ಕೆ ಉಲ್ಲೇಖ ಸಿಗುವುದಿಲ್ಲ.

ಜಿಲ್ಲೆಯ ಒಂದು ಪಾಳೆಪಟ್ಟಿನ ರಾಜಧಾನಿಗೂ ಮತ್ತೊಂದು ಪಾಳೆಪಟ್ಟಿನ ರಾಜಧಾನಿಗೂ ಕೇವಲ ೨೫ರಿಂದ ೩೦ ಕಿ.ಮೀ. ಅಂತರವಿದೆ. ಹಾಗಾಗಿ ಪ್ರತಿ ಪಾಳೆಪಟ್ಟು ರಾಜ್ಯ ವಿಸ್ತರಣೆಗಾಗಿ ನಿರಂತರ ಸಂಘರ್ಷದಲ್ಲಿ ತೊಡಯಗುವಂತಹ ಅನಿವಾರ್ಯ ಪರಿಸ್ಥಿತಿ ಉಂಟಾಗಿತ್ತು. ಆದುದರಿಂದ ಇವರು ರಾಜಧಾನಿ ರಕ್ಷಣೆಗಾಗಿ ನಿರಂತರ ಕಾರ್ಯಾಚರಣೆಯಲ್ಲಿ ತೊಡಗಿಕೊಂಡಿರಬೇಕಾಗಿತ್ತು. ಉದಾಹರಣೆಗೆ ನಿಡುಗಲ್ಲು, ಪಾವಗಡ, ಮಿಡಿಗೇಶಿ, ಮಧುಗಿರಿ, ಚೆನ್ನರಾಯನದುರ್ಗ, ದೇವರಾಯನದುರ್ಗ, ಭಸ್ಮಾಂಗಿ, ಹುತ್ತರೀದುರ್ಗ, ಹುಲಿಯೂರುದುರ್ಗ, ಕಾಮನದುರ್ಗ, ವೈ.ಎನ್.ಹೊಸಕೋಟೆ. ತೆಲುಗಲಕೊಂಡ, ತಿಪ್ಪಯ್ಯನದುರ್ಗ, ಮುಗದಾಳಬೆಟ್ಟ ಮೊದಲಾದ ಕೋಟೆಗಳು ೧ರಿಂದ ೧೦ ಕಿ. ಮೀ.ನಷ್ಟು ವಿಶಾಲ ಪ್ರದೇಶವನ್ನು ವ್ಯಾಪಿಸಿಕೊಂಡಿವೆ. ಕೋಟೆಯ ಒಳಗೆಯೇ ಕೆರೆ–ಕಟ್ಟೆ, ಬಾವಿ ಹಾಗೂ ಕೃಷಿ ಕೈಗೊಳ್ಳಲು ವಿಶಾಲ ಮೈದಾನ ಇರುವ ಹಾಗೆ ವ್ಯವಸ್ಥೆ ಮಾಡಿಕೊಳ್ಳುತ್ತಿದ್ದರು. ಆದುದರಿಂದ ಅಪತ್ಕಾಲದಲ್ಲಿ ಕೋಟೆಯ ಒಳಗೆಯೇ ಆಹಾರ ಧಾನ್ಯಗಳನ್ನು ಬೆಳೆದುಕೊಳ್ಳಬಹುದಿತ್ತು. ಬಹುಶಃ ಈ ಕಾರಣಕಾಗಿಯೇ ನಿಡುಗಲ್ಲು, ಮಧುಗಿರಿ, ಹಾಗಲವಾಡಿ, ಹುತ್ತರೀದುರ್ಗ, ಕ್ರಿಡಾಪುರ (ಕೈದಾಳ)ದಂತಹ ಸಣ್ಣಪುಟ್ಟ ಸಂಸ್ಥಾನಗಳು ಸಹ ರಾಷ್ಟ್ರಕೂಟ, ಹೊಯ್ಸಳ, ವಿಜಯನಗರ, ಬಿಜಾಪುರ ಸುಲ್ತಾನ, ಮೈಸೂರು ಒಡೆಯರು, ಹೈದರ್–ಟಿಪ್ಪು ಮೊದಲಾದಂತಹ ಬಲಿಷ್ಠ ಅರಸರಿಗೆ ಪ್ರತಿಸ್ಪರ್ಧೆ ನೀಡಿರುವುದು. ಏಕೆಂದರೆ ಸಣ್ಣ ಸಂಸ್ಥಾನಗಳಾದ ನಿಡುಗಲ್ಲು ಚೋಳರು – ಹೊಯ್ಸಳರನ್ನು ಸುಮಾರು ೫ ತಿಂಗಳವರೆಗೆ, ಹರತಿ ನಿಡುಗಲ್ಲು ನಾಯಕರು–ಮೊಘಲ್ ಸೇನೆಯನ್ನು (ಇವರ ಅಧೀನರಾಗಿದ್ದ ಸಿರಾ ಸುಬೇದಾರರು) ೯ ತಿಂಗಳು, ಮಹಾನಾಡಪ್ರಭುಗಳು–ಹೈದರ್ ಟಿಪ್ಪುವನ್ನು ೫ ತಿಂಗಳು ಹಾಗೂ ೯ ತಿಂಗಳವರೆಗೆ ಮೈಸೂರು ಒಡೆಯರ ವಿರುದ್ಧ ಪ್ರತಿಸ್ಪರ್ಧೆ ನೀಡಿದರೆಂದರೆ ಅವರ ಕೋಟೆ–ಕೊತ್ತಲಗಳ ಎಷ್ಟು ಅಭೇದ್ಯವಾಗಿದ್ದವು ಎಂಬುದು ತಿಳಿಯಬಹುದಾಗಿದೆ. ಹೈದರ್–ಟಿಪ್ಪು ಜಿಲ್ಲೆಯ ಆದುದರಿಂದಲೇ ಅಭೇದ್ಯ ಕೋಟೆಗಳಿಗೆ ಫ್ರೆಂಚ್ ವಾಸ್ತು ವಿನ್ಯಾಸ ನೀಡಿ, ಹುತ್ತರೀದುರ್ಗದಲ್ಲಿ ಮರಾಠ ಮತ್ತು ನಿಜಾಮ ಸೇನೆಯನ್ನು ಯಶಸ್ವಿಯುತವಾಗಿ ಸೋಲಿಸಲು ಸಾಧ್ಯವಾಗಿದ್ದು. ಪ್ರಮುಖವಾಗಿ ರಾಜಧಾನಿ ಕೇಂದ್ರಿತ ಕೋಟೆಗಳಲ್ಲಿನ ನೀರಿನ ಮೂಲ, ಆಹಾರ ಧಾನ್ಯದ ಕಣಜ, ಮದ್ದಿನ ಮನೆ, ತುಪ್ಪದ ಕೊಳ, ಅಪಾರ ಸಂಖ್ಯೆಯ ವಸತಿ ಅವಶೇಷ, ವಿಶಾಲ ಕೃಷಿ ಭೂಮಿ(ಇಂದಿಗೂ ನಿಡುಗಲ್ಲು ಕೋಟೆ ಗೋಡೆಗಳ ಮೇಲೆ ಸ್ಥಳೀಯರು ವ್ಯವಸಾಯ ಮಾಡುತ್ತಿದ್ದಾರೆ), ಗೋಡೆಯ ರಚನಾ ಶೈಲಿಯನ್ನು ಗಮನಿಸಿದರೆ ಅವರ ಆದಾಯದ ಮೂಲ ಏನಾಗಿತ್ತು ಎಂಬ ಬಗೆಗೆ ಸಂದೇಹ ಏರ್ಪಡುವಂತೆ ಮಾಡುತ್ತದೆ.

೪.೨. ರಕ್ಷಣಾ ಕೇಂದ್ರಿತ ಕೋಟೆಗಳು

ಯಾವುದೇ ಒಂದು ಸಾಮ್ರಾಜ್ಯ ಅಥವಾ ಅರಸು ಮನೆತನ ಇಲ್ಲವೇ ಪಾಳೆಪಟ್ಟು ತನ್ನ ರಾಜ್ಯ ಅಥವಾ ಸಂಸ್ಥಾನದ ಸುತ್ತಲೂ ಗಡಿಪ್ರಾಂತ್ಯಗಳಲ್ಲಿ ಸರಪಳಿಯಂತೆ (ಚೈನ್ ಲಿಂಕ್)

ನಿರ್ಮಿಸಲಾಗುತ್ತಿದ್ದ ಕೋಟೆಗಳನ್ನು ರಕ್ಷಣಾ ಕೇಂದ್ರಿತ ಕೋಟೆಗಳೆಂದು ಕರೆಯಲಾಗುತ್ತದೆ. ಅಂದರೆ ಶತ್ರುಗಳನ್ನು ರಾಜಧಾನಿಗೆ ಪ್ರವೇಶ ಮಾಡುವುದಕ್ಕಿಂತ ಮೊದಲೇ ಗಡಿದುರ್ಗಗಳಲ್ಲೇ ತಡೆಯುವಂತೆ ಕಾರ್ಯನಿರ್ವಹಿಸುತ್ತಿದ್ದವು. ಪ್ರಾರಂಭದಲ್ಲಿ ಇವು ಸಂಪರ್ಕ ಮಾಧ್ಯಮಗಳಾಗಿಯೂ, ರಾಜಧಾನಿಗೆ ಮಾಹಿತಿ ರವಾನಿಸುವ ಕಾರ್ಯವನ್ನು ನಿರ್ವಹಿಸುತ್ತಿದ್ದವು. ವಿಶೇಷವಾಗಿ ಇವು ಉದ್ಯಮ, ವ್ಯಾಪಾರ, ಕಂದಾಯ ವಸೂಲಿ, ಟಂಕಸಾಲೆ, ಕೃಷಿಯಂತಹ ಕಾರ್ಯಗಳನ್ನೂ ನಿರ್ವಹಿಸುತ್ತಿದ್ದವು. ಇದಕ್ಕೆ ಪೂರಕವೆಂಬಂತೆ ಜಿಲ್ಲೆಯ ಹಲವೆಡೆ ಕಬ್ಬಿಣದ ಕುಲುಮೆ, ನಾಣ್ಯ ಟಂಕಿಸುತ್ತಿದ್ದರೆಂದು ಹೇಳುವ ಕೊಲಿಮೆಗೆರೆ ಎಂಬ ಸ್ಥಳನಾಮ ಅವಶೇಷಗಳು ಕಂಡುಬಂದಿವೆ. ಇವುಗಳ ವಾಸ್ತು ರಚನೆಯನ್ನು ಗಮನಿಸಿದರೆ ಆರಂಭದಲ್ಲಿ ಚೌಕ ಮಾದರಿಯ ಕೋಟೆಗೆ ನಾಲ್ಕು ದಿಕ್ಕಿಗೂ ನಾಲ್ಕು ಕೊತ್ತಲ, ಆ ಕೋಟೆಯ ಒಳಗೆ ಕಿಲ್ಲೆದಾರನ ಇಲ್ಲವೇ ಆತನ ಸಂಬಂಧಿಕರ, ಅಧಿಕಾರಿ ವರ್ಗದ ಕಟ್ಟಡಗಳು ಮಾತ್ರ ಇರುತ್ತಿದ್ದವು. ಕ್ರಮೇಣ ನೀರಿನ ಮೂಲಗಳು ಇರುವಲ್ಲಿ ವಸತಿ ನಿವೇಶನಗಳು ವಿಸ್ತರಿಸಲ್ಪಡುತ್ತಿದ್ದವು ಎಂಬುದು ತಿಮ್ಮನಾಯಕನಬೆಟ್ಟ, ಮುಗದಾಳಬೆಟ್ಟ, ತಿಪ್ಪಯ್ಯನದುರ್ಗ, ಹುತ್ತರೀದುರ್ಗ, ಹುಲಿಯೂರುದುರ್ಗ, ಬೇಡತ್ತೂರು, ಬ್ಯಾಡನೂರು ಬೆನಕನಹಳ್ಳಿ ಭಸ್ಮಾಂಗಿ, ಕೊಲಿಮೆಗೆರೆ ರಾಂಪುರ, ಚೆನ್ನರಾಯನದುರ್ಗ, ಕಾಮನದುರ್ಗ, ಕೊರಟಗೆರೆ ಮೊದಲಾದ ಕೋಟೆಗಳಲ್ಲಿ ಕಂಡುಬಂದ ಕಟ್ಟಡ ಅವಶೇಷಗಳಿಂದ ಸ್ಪಷ್ಟವಾಗುತ್ತದೆ. ಆದರೆ ಹೊಸದುರ್ಗ, ಸ್ವಾರಮ್ಮನಬೆಟ್ಟ, ಇಂದ್ರಬೆಟ್ಟ, ಬೋಳಿಬೆಟ್ಟ, ಇಳಕಲ್‌ಬೆಟ್ಟ, ಎಮ್ಮೆತಿಮ್ಮನಹಳ್ಳಿ, ಓಬನಾಯಕನದುರ್ಗ ಮೊದಲಾದ ಕೇಂದ್ರಗಳು ಯಾವುದೇ ಮಾರ್ಪಾಟನ್ನು ಹೊಂದದೆ ಆರಂಭದ ಕೋಟೆಯ ಲಕ್ಷಣಗಳನ್ನಷ್ಟೇ ಹೊಂದಿವೆ.

ಮಧ್ಯಕಾಲೀನ ಸಂದರ್ಭದಲ್ಲಿ ಕೋಟೆಗಳ ರಚನಾ ಶೈಲಿ ಮಹತ್ವಪೂರ್ಣ ಬದಲಾವಣೆಯನ್ನು ಕಂಡುಕೊಂಡಿತು. ಗೆರಿಲ್ಲಾ ಯುದ್ಧ ನೀತಿ ಪ್ರಯೋಗಗೊಳ್ಳುವಲ್ಲಿ ಇವು ಮಹತ್ವವನ್ನು ಕಳೆದುಕೊಂಡವು. ಈ ಕಾರಣಕ್ಕಾಗಿಯೇ ಕೋಟೆ–ಕೊತ್ತಲಗಳ ಅನಿವಾರ್ಯತೆ ಇರುವಲ್ಲಿ ಮಾತ್ರ ಅವುಗಳನ್ನು ನಿರ್ಮಾಣ ಮಾಡಿ ಉಳಿದೆಡೆ ಭೌಗೋಳಿಕವಾಗಿ ಅಭೇದ್ಯವಾದೆಡೆ ಸೈನಿಕ ತುಕಡಿಗಳನ್ನು ಇಡುತ್ತಿದ್ದರು. ಈ ಬೆಳವಣಿಗೆ ವಿಜಯನಗರೋತ್ತರ ಕಾಲದಲ್ಲಿ ಹೆಚ್ಚಾಗಿದ್ದದು ಜಿಲ್ಲೆಯಲ್ಲಿ ಕಂಡು ಬಂದ ಪಾಳ್ಯ ಎಂಬ ಸ್ಥಳನಾಮಗಳಿಂದ ದೃಢವಾಗುತ್ತದೆ. ಆದುದರಿಂದ ರಕ್ಷಣಾ ಕೇಂದ್ರಗಳನ್ನು ರಕ್ಷಣೆಯ ಹಿನ್ನೆಲೆಯಲ್ಲಿ ಅರ್ಥೈಸಹೊರಟಾಗ ಸೈನಿಕ ಕೇಂದ್ರಗಳನ್ನು ಪರಿಗಣಿಸದಿದ್ದರೆ ಅದು ಅಧ್ಯಯನದ ಹಾದಿಯನ್ನು ತಪ್ಪಿಸುತ್ತದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ರಕ್ಷಣಾ ಕೇಂದ್ರಿತ ಕೋಟೆ–ಕೊತ್ತಲಗಳ ಜೊತೆಗೆ ಸೈನಿಕ ತುಕಡಿ ಹೊಂದಿರುವ ಗ್ರಾಮಗಳನ್ನು ಆಯಾಯ ಸಂದರ್ಭಕ್ಕೆ ಅನುಗುಣವಾಗಿ ಬಳಸಿಕೊಳ್ಳಲಾಗಿದೆ. ಏಕೆಂದರೆ ಜಿಲ್ಲೆಯ ಬಹುತೇಕ ಪಾಳೆಪಟ್ಟುಗಳಿಗೆ ಪ್ರಾಕೃತಿಕ ಸಂಪತ್ತೇ ರಕ್ಷಣಾ ಕವಚವಾಗಿತ್ತು. ಇಂತಹ ಬೆಟ್ಟಗುಡ್ಡ, ದಟ್ಟಡವಿಗಳಲ್ಲಿ ಕೋಟೆಯನ್ನು ನಿರ್ಮಿಸುವಂತಹ ಅವಶ್ಯಕತೆಯೆನೂ ಇರುವುದಿಲ್ಲ. ರಹಸ್ಯ ಸ್ಥಳಗಳಲ್ಲಿ ಎಲ್ಲಿ ಬೇಕಾದರೂ

ಸೇನಾ ತುಕಡಿಗಳನ್ನು ಇಟ್ಟು ಗೆರಿಲ್ಲಾ ಮಾದರಿಯ ದಾಳಿಗಳ ಮೂಲಕ ಶತೃಗಳನ್ನು ತಡೆಯಬಹುದಿತ್ತು. ಈ ಕಾರಣಕ್ಕಾಗಿಯೇ ಮಧುಗಿರಿ, ಮಿಡಿಗೇಶಿ, ಪಾವಗಡ, ನಿಡುಗಲ್ಲು, ಸಿರಾ, ಹಾಗಲವಾಡಿ, ಗುಬ್ಬಿ, ಹೊಳವನಹಳ್ಳಿ, ವೈ.ಎನ್.ಹೊಸಕೋಟೆ, ದೇವರಾಯನದುರ್ಗ, ಕುಣಿಗಲ್, ಹುತ್ತರೀದುರ್ಗ, ಹುಲಿಯೂರುದುರ್ಗ ಮೊದಲಾದ ಪಾಳೆಪಟ್ಟುಗಳಿಗೆ ಕೋಟೆ ಕೊತ್ತಲ ಇಲ್ಲದಿರುವ ಪ್ರಾಂತ್ಯದಲ್ಲಿ ದಂಡು, ಶಿವರ, ಗರಡಿ (ಗರಣಿ) ಪಾಳ್ಯ, ಮಡಗು, ದಂಡಿನ ಶಿವರ ಎನ್ನುವ ಸೇನಾ ಶಿಬಿರಗಳನ್ನು ಸೂಚಿಸುವ ಸ್ಥಳನಾಮವಿರುವ ಗ್ರಾಮಗಳು ಕಂಡುಬರುತ್ತವೆ. ಇದಕ್ಕೆ ಪೂರಕವಾಗಿ ಆ ಪ್ರತಿ ಪ್ರದೇಶದಲ್ಲಿಯೂ ಸೇನಾ ತುಕಡಿ ಇದ್ದವೆನ್ನಲು ಅಲ್ಲಿನ ಐತಿಹ್ಯವು ಸಹ ನೆರವಾಗುತ್ತವೆ. ಉದಾಹರಣೆಗೆ ಮಿಡಿಗೇಶಿ ಪಾಳೆಯಗಾರನಾದ ನಾಗಿರೆಡ್ಡಿ ತನ್ನ ಸಂಸ್ಥಾನದ ಪೂರ್ವ ದಿಕ್ಕಿಗೆ ತೋಟಮಡಗು ಎಂಬ ಗ್ರಾಮದಲ್ಲಿ ಗಿರಿದುರ್ಗವನ್ನು ನಿರ್ಮಿಸಿ ಅಲ್ಲಿಯ ತೋಟಗಳ ಮಧ್ಯೆ ಸೇನಾ ತುಕಡಿಗಳನ್ನು ಇಟ್ಟು, ಶತ್ರುಗಳ ಮೇಲೆ ಗೆರಿಲ್ಲಾ ಮಾದರಿಯ ದಾಳಿಗಳನ್ನು ಮಾಡಲು ಸೇನೆಗೆ ಆದೇಶಿಸಿದ್ದನಂತೆ; ಹಾಗಾಗಿ ಈ ಗ್ರಾಮಕ್ಕೆ ತೋಟಗಳ ಮಧ್ಯೆ ಸೈನಿಕರನ್ನು ಮಡಗುತ್ತಿದ್ದ ಕಾರಣಕ್ಕೆ ತೋಟಮಡಗು ಎಂಬ ಹೆಸರು ಬಂದಿದೆಯೆಂದು ಸ್ಥಳೀಯರು ಹೇಳುತ್ತಾರೆ. ಇಂದಿಗೂ ಈ ಗ್ರಾಮದಲ್ಲಿ ಬರಗಾಲವಿದ್ದರೂ ಇಲ್ಲಿನ ಕೆರೆಯಲ್ಲಿ ಮಾತ್ರ ಸದಾಕಾಲ ನೀರಿರುವುದರೊಂದಿಗೆ ತೋಟಗಳು ಸಹ ಜೀವಂತವಾಗಿವೆ.

ರಕ್ಷಣಾ ಕೇಂದ್ರಿತ ಕೋಟೆಗಳ ಮುಖ್ಯ ಕಾರ್ಯ ಗಡಿಪ್ರಾಂತ್ಯದಲ್ಲಿ ಶತ್ರುಗಳ ಚಲನವಲನವನ್ನು ರಾಜಧಾನಿಗೆ ತಿಳಿಸುವ ಹಾಗೂ ಗಡಿಯನ್ನು ರಕ್ಷಿಸುವುದಾದರೂ, ಸಮುದಾಯಗಳೊಂದಿಗೆ ಹೆಚ್ಚಾಗಿ ನಿಕಟ ಸಂಬಂಧ ಹೊಂದಿರುತ್ತಿದ್ದವು. ಏಕೆಂದರೆ ರಾಜಧಾನಿಗಳಿಗೆ ಬೇಕಾದ ಆಯುಧೋಪಕರಣ, ಮಡಕೆ, ಆಹಾರ ಧಾನ್ಯ, ನಾಣ್ಯ, ಆಭರಣ ಮೊದಲಾದವುಗಳನ್ನು ರಕ್ಷಣಾ ಕೇಂದ್ರಿತ ಕೋಟೆಗಳಲ್ಲೇ ತಯಾರಿಸುತ್ತಿದ್ದರು. ಉದಾಹರಣೆಗೆ ನಿಡುಗಲ್ಲು ಸಂಸ್ಥಾನಕ್ಕೆ ತಿಮ್ಮನಾಯಕನಬೆಟ್ಟ, ಕರೆಕ್ಯಾತನಹಳ್ಳಿ, ಕತ್ತಿರಾಜನಪಾಳ್ಯ, ಕಾವಲುರಂಗಾಪುರ, ಸಾರವಾಟಪುರ, ಕುಂದುರ್ಪಿ ಪಾಳೆಯಗಾರರಿಗೆ–ಕೆ.ರಾಂಪುರ ಹೊಸಹಳ್ಳಿ, ಕಾಮನದುರ್ಗ, ಮಧುಗಿರಿ ಪಾಳೆಯಗಾರರಿಗೆ– ತಾಯಗೊಂಡನಹಳ್ಳಿ, ಬೂದೇನಹಳ್ಳಿ, ದೊಡ್ಡೆರಿ, ಹೊಳವನಹಳ್ಳಿ ಪಾಳೆಯಗಾರರಿಗೆ–ಕೊರಟಗೆರೆಯಲ್ಲಿನ ಕೊಲಿಮೆಗೆರಿ, ಯಲಹಂಕಪ್ರಭುಗಳಿಗೆ– ಹುಲಿಯೂರುದುರ್ಗ, ಹುತ್ತರೀದುರ್ಗ, ಕುಣಿಗಲ್ ಮೊದಲಾದ ತಮ್ಮ ರಕ್ಷಣಾ ಕೇಂದ್ರಗಳಲ್ಲಿ ಆಯುಧಗಾರ, ಟಂಕಸಾಲೆಗಳಿದ್ದವು. ಈ ಪ್ರದೇಶಗಳಲ್ಲಿ ಸುಮಾರು ಎರಡು ಮೂರು ಎಕರೆ ವಿಸ್ತಾರದಲ್ಲಿ ಕಬ್ಬಿಣದ ಕುಲುಮೆ ಮತ್ತು ಕಿಟ್ಟದ ರಾಶಿಯಿದೆ. ಇಷ್ಟು ಈ ಪ್ರಮಾಣದಲ್ಲಿ ಕಬ್ಬಿಣದ ಕಿಟ್ಟ ಸಿಗುತ್ತದೆ ಎಂದರೆ ಸಹಜವಾಗಿ ಕಬ್ಬಿಣದ ಅದಿರಿನ ಮೂಲ ಎಲ್ಲಿತ್ತು ಎಂಬ ಸಂದೇಹ ಏರ್ಪಡುತ್ತದೆ. ಈ ಪ್ರದೇಶ ಬೆಟ್ಟಗುಡ್ಡಗಳಿಂದ ಸುತ್ತುವರಿದಿರುವಂತಹದ್ದು ಬೃಹತ್ ಶಿಲಾಯುಗದ ಸಂಸ್ಕೃತಿ ಹೆಚ್ಚಾಗಿ ನೆಲೆ ನಿಲ್ಲಲು ಅವಕಾಶ ಮಾಡಿಕೊಟ್ಟಿದೆ. ಕಬ್ಬಿಣದೊಂದಿಗೆ ನಿಕಟ ಸಂಬಂಧ ಹೊಂದಿದ್ದ ಇವರಿಗೆ ಜಿಲ್ಲೆಯಲ್ಲಿದ್ದ ಕಬ್ಬಿಣದ

ನಿಕ್ಷೇಪವೂ ಗೊತ್ತಿರಬೇಕು ಇಲ್ಲವೇ ಬೇರೆಡೆಯಿಂದ ತರಿಸಿಕೊಂಡಿರುವ ಪರಂಪರೆ ಸಾಧ್ಯತೆಯಿದ್ದು, ಪಾಳೆಯಗಾರರ ಕಾಲದವರೆಗೂ ಮುಂದುವರೆದುಕೊಂಡು ಬಂದಿರುವ ಸಾಧ್ಯತೆಗಳನ್ನು ಅಲ್ಲಗೆಳೆಯಲಾಗದು. ಏಕೆಂದರೆ ಕ್ರಿ.ಶ.೧೮೦೦ರಲ್ಲಿ ದಖ್ಖನ್ ಕರ್ನಾಟಕವನ್ನು ಸಂದರ್ಶಿಸಿದ ಬುಕಾನನ್ ತನ್ನ ಬರವಣಿಗೆಗಳಲ್ಲಿ ಬಳ್ಳಾರಿಯಿಂದ ಕತ್ತೆಗಳ ಮೂಲಕ ಕಬ್ಬಿಣದ ಅದಿರನ್ನು ದಖ್ಖನ್ ಕರ್ನಾಟಕದ ಪಾಳೆಯಗಾರರಿಗೆ ಸಾಗಿಸಲಾಗುತ್ತಿತ್ತೆಂದು ಉಲ್ಲೇಖಿಸಿದ್ದಾನೆ. ಸಾಮಾನ್ಯವಾಗಿ ವಿಜಯನಗರದ ಅರಸರೊಂದಿಗೆ ದಖ್ಖನ್ ಭಾಗದ ಪಾಳೆಯಗಾರರು ಅವಿನಾಭಾವ ಸಂಬಂಧ ಹೊಂದಿದ್ದರಿಂದ ಇದನ್ನು ಒಪ್ಪಿಕೊಳ್ಳಬೇಕಾಗುತ್ತದೆ.

ಜಿಲ್ಲೆಯ ರಕ್ಷಣಾ ಕೇಂದ್ರಗಳ ವೈಶಿಷ್ಟ್ಯತೆ ಎಂದರೆ ಪ್ರಾಚೀನ ಕಾಲದಿಂದಲೂ ಉತ್ತರ ದಖ್ಖನ್ ಮತ್ತು ದಕ್ಷಿಣ ದಖ್ಖನ್ ಭಾಗವನ್ನು ಸೇರಿಸುವ ಕೊಂಡಿಯಾಗಿ ಕಾರ್ಯನಿರ್ವಹಿಸಿವೆ. ಆದುದರಿಂದಲೇ ಶಾತವಾಹನರ ಕಾಲಕ್ಕಾಗಲೇ ಜಿಲ್ಲೆಯಲ್ಲಿ ಕೋಟೆಗಳಿದ್ದವೆಂಬುದಕ್ಕೆ ಸ್ಪಷ್ಟ ಆಕರಗಳು ದೊರೆಯುತ್ತವೆ. ಕ್ರಮೇಣ ಅವು ಗಂಗ, ನೊಳಂಬರ ಕಾಲಕ್ಕೆ ಮಹತ್ವದ ಸ್ಥಾನ ಪಡೆದಿದ್ದವೆಂದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ ಕ್ರಿ.ಶ. ೭೫೦ರ ತಮಿಳುನಾಡಿನ ಧರ್ಮವರಂ ಜಿಲ್ಲೆಯ ಕಡಲೂರು ಶಾಸನ ಗಂಗರ ಎರೆಯಪ್ಪನು ನೊಳಂಬರ ಕೇಂದ್ರ ಸ್ಥಾನವಾದ ಹೆಂಜೇರಿನ ಮೇಲೆ ದಾಳಿ ಮಾಡಿದಾಗ ಅದರ ಗಡಿದುರ್ಗಗಳಾದ ಮಿಡಿಗೆ(ಇಂದಿನ ಮಿಡಿಗೇಶಿ), ತೈಲಂಗೆರೆ(ಇಂದಿನ ಅಮರಾಪುರ), ಏರಿಗಲ್(ಇಂದಿನ ನಿಡುಗಲ್), ಶೈಲೇಂದ್ರ[೧೭](ಇಂದಿನ ಶೈಲಾಪುರ ಇಲ್ಲವೆ ಇಂದ್ರಬೆಟ್ಟ)ಗಳನ್ನೂ ವಶಪಡಿಸಿಕೊಂಡಿದ್ದರ ಉಲ್ಲೇಖ ಸಿಗುತ್ತದೆ. ಪ್ರಾಚೀನ ಕಾಲದಿಂದಲೂ ರಾಜಧಾನಿ ರಕ್ಷಣೆಗಾಗಿ ಅದರ ಗಡಿಪ್ರಾಂತ್ಯದಲ್ಲಿ ಕೋಟೆಗಳನ್ನು ನಿರ್ಮಿಸಲಾಗುತ್ತಿತ್ತೆಂದು ಇದರಿಂದ ಸ್ಪಷ್ಟವಾಗುತ್ತದೆ. ಅದೇ ರೀತಿ ರಾಷ್ಟ್ರಕೂಟರ ಧ್ರುವನ ಮಗ ಸ್ತಂಭನು ಕುಣಿಗಲ್ ಪಟ್ಟಣದಲ್ಲಿ[೧೮] ಕೋಟೆಯನ್ನು ಕಟ್ಟಿಸಿ ಆಳ್ವಿಕೆಯನ್ನು ಆರಂಭಿಸಿದನು. ಕುಣಿಗಲ್ ಪಟ್ಟಣವನ್ನು[೧೯] ದಖನ್ ಭಾಗದ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಳ್ಳಲು ಮುಖ್ಯ ಕಾರಣ ಗಂಗರ ಪ್ರಾಬಲ್ಯವನ್ನು ತುಳಿಯುವುದಾಗಿತ್ತು. ಆದರೆ ಮೈಸೂರು ಭಾಗದಲ್ಲಿ ರಾಷ್ಟ್ರಕೂಟರ ನೇರ ಆಳ್ವಿಕೆಗೆ ಗಂಗರು. ಅಡ್ಡಿಪಡಿಸಿದರು. ತುಮಕೂರಿನ ಪೂರ್ವ ಭಾಗದಲ್ಲಿ ಚೋಳರು ಪ್ರಬಲರಾಗಿದ್ದರಿಂದ ಆ ಭಾಗಕ್ಕೂ ತಮ್ಮ ಅಧಿಕಾರವನ್ನು ವಿಸ್ತರಿಸಲು ಸಾಧ್ಯವಾಗಲಿಲ್ಲ. ಈ ಕಾರಣಕ್ಕಾಗಿಯೇ ಸಾವಿರಾರು ಎಕರೆಗೆ ಜೀವಸೆಲೆಯಾಗಿ ಅಧಿಕ ವರಮಾನವನ್ನು ತಂದುಕೊಡುತ್ತಿದ್ದ ದಖನ್‌ನ ಪ್ರಸಿದ್ಧ ವ್ಯಾಪಾರಿ ಕೇಂದ್ರವಾಗಿದ್ದ ಐಯ್ಯನೂರ್ವರ್‌ಐಯ್ಯವೊಳೆಗೆ ಹೊಂದಿಕೊಂಡಿದ್ದ ಕುಣಿಗಲ್ ಪಟ್ಟಣವನ್ನು ಆಯ್ಕೆ ಮಾಡಿಕೊಂಡರು. ನಂತರ ತಂಜಾವೂರನ ಚೋಳರು ಸಹ ಈ ಉದ್ದೇಶದಿಂದಲೇ ಇಡೀ ಹೋಯ್ಸಳ ಮಂಡಲದ ನಿರ್ವಹಣೆಗಾಗಿ ಕುಣಿಗಲ್ ಪಟ್ಟಣವನ್ನು ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡರು. ಅಂದರೆ ರಕ್ಷಣಾ ಕೇಂದ್ರಗಳು ಕೇವಲ ರಕ್ಷಣಾ ಕಾರ್ಯವನ್ನು ಮಾತ್ರ ನಿರ್ವಹಿಸದೆ ವ್ಯಾಪಾರ, ವ್ಯವಹಾರ, ಕೃಷಿಯಂತಹ ಕಾರ್ಯಗಳಲ್ಲಿಯೂ ತೊಡಗಿರುತ್ತಿದ್ದವು.

ಈ ಕಾರ್ಯಗಳಲ್ಲಿ ಮಧ್ಯಮವರ್ಗ ಹಾಗೂ ತಳವರ್ಗಗಳೇ ಹೆಚ್ಚಾಗಿ ಪಾಲ್ಗೊಳ್ಳುತ್ತಿದ್ದರಿಂದ ಇವು ಸಾಮಾನ್ಯರೊಂದಿಗೆ ನಿಕಟ ಸಂಬಂಧ ಹೊಂದಿದ್ದವು. ಹೊಸಹಳ್ಳಿ(ಅರಸಿಕೆರೆ ಬಳಿ), ದೊಡ್ಡೆರಿ, ದೊಡ್ಡಮಾಲೂರು, ಚಿಕ್ಕನಾಯಕನಹಳ್ಳಿ ಮೊದಲಾದವು ಪಾಳೆಯಗಾರರ ಕಾಲದ ಪ್ರಮುಖ ವ್ಯಾಪಾರಿ ಕೇಂದ್ರಗಳಾಗದ್ದವು.

ಕೆಲವೊಮ್ಮೆ ಈ ಗಡಿದುರ್ಗಗಳನ್ನು ಪಡೆಯಲು ಒಂದು ಪಾಳೆಪಟ್ಟಿಗೂ ಇನ್ನೊಂದು ಪಾಳೆಯಪಟ್ಟಿಗೂ ನಿರಂತರ ಸಂಘರ್ಷಗಳಾಗುತ್ತಿದದ್ದು ಜಿಲ್ಲೆಯಲ್ಲಿ ದೊರೆತ ಐತಿಹ್ಯಗಳಿಂದ ಸ್ಪಷ್ಟವಾಗುತ್ತದೆ. ಉದಾಹರಣೆಗೆ ದೇವರಬೆಟ್ಟ, ಅರಕ್ಯಾತನಹಳ್ಳಿ, ಕತ್ತಿಕ್ಯಾತನಹಳ್ಳಿ ಕೋಟೆಗಳನ್ನು ಪಡೆಯಲು ನಿಡುಗಲ್ಲು, ಪಾವಗಡ, ರತ್ನಗಿರಿ ಪಾಳೆಯಗಾರರ ಮಧ್ಯೆ ನಿರಂತರ ಕಾದಾಟ ನಡೆದಿರುವುದು ಈ ಪ್ರದೇಶಗಳಲ್ಲಿ ದೊರೆತ ಐತಿಹ್ಯಗಳು ಸ್ಪಷ್ಟಪಡಿಸುತ್ತವೆ. ಮೂರು, ನಾಲ್ಕು ಬಾರಿ ಕೋಟೆಯ ಗೋಡೆ ಜೀರ್ಣೋದ್ದಾರ ಆಗಿರುವಂತಹ ಲಕ್ಷಣಗಳೊಂದಿಗೆ ಈ ಐತಿಹ್ಯವನ್ನು ಹೋಲಿಕೆ ಮಾಡಿ ನೋಡಿದಾಗ ಎರಡಕ್ಕೂ ಸಾಮ್ಯತೆಯಿರುವುದು ಕಂಡುಬರುತ್ತದೆ. ಏಕೆಂದರೆ ಅರಕ್ಯಾತನಹಳ್ಳಿ ಎಂಬ ಗ್ರಾಮಕ್ಕೆ ಹಿಂದೆ ಗಡಿವೆಂಕಟಾಪುರ ಎಂಬ ಹೆಸರು ಇತ್ತೆಂದು, ನಿಡುಗಲ್ಲು ಪಾಳೆಯಗಾರರಿಗೆ ಬೇಕಾದ್ದಂತಹ ಆಹಾರ ಧಾನ್ಯಗಳನ್ನು ಕಣಜಗಳಲ್ಲಿ ಸಂಗ್ರಹಿಸುತ್ತಿದ್ದರೆಂದೂ ಇದನ್ನು ಗಮನಿಸಿದ ಪಾವಗಡ ಪಾಳೆಯಗಾರರು ಈ ಕೋಟೆ ನಮಗೆ ಸೇರಿದ್ದೆಂದು ಅದರ ಮೇಲೆ ದಾಳಿ ಮಾಡಿ ವಶಪಡಿಸಿಕೊಳ್ಳುತ್ತಿದ್ದರಂತೆ, ಈ ವಿಷಯವನ್ನು ಅರಿತಂತಹ ನಿಡುಗಲ್ಲು ಪಾಳೆಯಗಾರರು ಪುನಃ ಈ ಕೋಟೆಯನ್ನು ವಶಪಡಿಸಿಕೊಂಡು ಅಲ್ಲಿ ಕಿಲ್ಲೆದಾರನನ್ನು ನೇಮಿಸಿ ಹಿಂದಿರುಗುತ್ತಿದ್ದರಂತೆ ಪುನಃ ಪಾವಗಡ ಪಾಳೆಯಗಾರರು ಇದನ್ನು ವಶಪಡಿಸಿಕೊಂಡು ಹಾಳುಗೆಡವುತ್ತಿದ್ದರಂತೆ, ಹೀಗೆ ಪದೇ ಪದೇ ಗಡಿ ಪ್ರಾಂತ್ಯಕ್ಕಾಗಿ ಕ್ಯಾತೆ ತೆಗೆಯುತ್ತಿದ್ದ ಈ ಗಡಿವೆಂಕಟಾಪುರವೆ ಜನಪದರ ಆಡು ಮಾತಿನಲ್ಲಿ ಅರಕ್ಯಾತನಹಳ್ಳಿ ಎಂದು ಕರೆಯಲ್ಪಟ್ಟಿತು. ಸ್ಥಳೀಯರ ಇಂತಹ ಹೇಳಿಕೆಗಳನ್ನು ಗಮನಿಸಿದರೆ, ಗಡಿ ಪ್ರಾಂತ್ಯಗಳಿಗಾಗಿ ಜಿಲ್ಲೆಯಲ್ಲಿ ನಿರಂತರ ಸಂಘರ್ಷ ಇತ್ತೆಂದು ಅದರ ಫಲವಾಗಿ ಮೂರು ನಾಲ್ಕು ಹಂತಗಳಲ್ಲಿ ಜೀರ್ಣೋದ್ಧಾರಗೊಂಡ ಕೋಟೆ ಗೋಡೆಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ.

ರಕ್ಷಣಾ ಕೇಂದ್ರಿತ ಕೋಟೆಗಳು ಸಾಂಸ್ಕೃತಿಕವಾಗಿಯೂ ಗುರುತಿಸಿಕೊಂಡಿವೆ. ಜಿಲ್ಲೆಯ ಬಹುಭಾಗ ಬೆಟ್ಟ-ಗುಡ್ಡಗಳಿಂದ ಕೂಡಿರುವುದು ಸಹಜವಾಗಿ ಪಶುಪಾಲಕ ಸಮುದಾಯಗಳು ನೆಲೆಯೂರುವಂತೆ ಮಾಡಿದೆ. ಕ್ರಮೇಣ ಈ ಸಮುದಾಯಗಳೇ ಇಲ್ಲಿ ಅಧಿಕಾರದ ಗದ್ದುಗೆಗೆ ಏರುವಂತೆ ಅವರನ್ನು ಉತ್ತೇಜಿಸಿದೆ. ಆದುದರಿಂದಲೇ ಇವರು ತಮ್ಮ ಪ್ರತಿ ಕೆಲಸ ಕಾರ್ಯದಲ್ಲೂ ಪಶು ಸಂಪತ್ತನ್ನು ಬಳಸಿಕೊಂಡಿದ್ದಾರೆ. ಉದಾಹರಣೆಗೆ ಹಾಗಲವಾಡಿಯ ಪಾಳೆಯಗಾರ ಒಮ್ಮೆ ಬಿಜಾಪುರದ ರಣದುಲ್ಲಾಖಾನನ ಸೈನ್ಯದ ಮುಂದೆ ಹೋರಾಡಲಾಗದೇ ಕುಟಿಲೋಪಾಯದಿಂದ ಹಳ್ಳಿಕಾರ್ ಎಂಬ ರಾಸುಗಳ ಕೊಡುಗಳಿಗೆ ರಾತ್ರಿ ವೇಳೆ ಪಂಜುಗಳನ್ನು ಕಟ್ಟಿ ಶತ್ರು ಪಾಳೆಯದ ಮೇಲೆ

ಹರಿಬಿಟ್ಟಾಗ ಇವು ಎಬ್ಬಿಸಿದ ಕೋಲಾಹಲಕ್ಕೆ ಶತ್ರುಸೈನ್ಯ ಚದುರಿಹೋಯಿತ್ತಂತೆ; ಅದೇ ರೀತಿ ಟಿಪ್ಪುವಿನ ವಿರುದ್ಧ ಹೋರಾಡಲು ಮಹಾನಾಡಪ್ರಭು ಚೆನ್ನಪ್ಪಗೌಡನು ಬಿಜವರ ಮಠಕ್ಕೆ ಬಿಟ್ಟಿದ್ದ ೨೦೦೦ ರಾಸುಗಳನ್ನು ಹಿಂಪಡೆದನೆಂದು ಮಧುಗಿರಿ ರಾಯರೇಖೆಯಲ್ಲಿ ಉಲ್ಲೇಖವಿದೆ. ಈ ರಾಸುಗಳ ಕಾರ್ಯ ದಕ್ಷತೆಯನ್ನು ಗಮನಿಸಿದ ಟಿಪ್ಪು ಇವುಗಳ ಮೂಲಕವೇ ಬಿದನೂರಿಗೆ ಫಿರಂಗಿಗಳನ್ನು ಜನರಲ್ ಮೇಡಾಸನಿಗಿಂತ ಮೊದಲೇ ಸಾಗಿಸಿದ್ದನ್ನು ಗಮನಿಸಿದ ಜನರಲ್ ಮೇಡಾಸ್ ಆಶ್ಚರ್ಯ ಪಟ್ಟಿದ್ದನಂತೆ.[೨೦] ಆರಂಭದಿಂದಲೇ ಸಾಮಂತ ಅರಸು ಮನೆತನ, ಪಾಳೆಪಟ್ಟುಗಳು ತಮ್ಮ ಗಡಿ ಪ್ರಾಂತ್ಯಗಳ ಕಿಲ್ಲೆದಾರನ ಸುಪರ್ದಿಗೆ ಪಶುಗಳ ಪಾಲನೆ, ರಕ್ಷಣೆಯ ಜವಾಬ್ದಾರಿಯನ್ನು ವಹಿಸಿದ್ದರು. ಉದಾಹರಣೆಗೆ ಮಿಡಿಗೇಶಿ ಪಾಳೆಯಗಾರನಾದ ನಾಗಿರೆಡ್ಡಿ ಬೆನಕನಹಳ್ಳಿಯಲ್ಲಿ ದೊಡ್ಡಪ್ಪ, ಚಿಕ್ಕಪ್ಪ ಎಂಬ ಸೋದರರಿಗೆ ದೊಡ್ಡಪಾಳ್ಯ, ಚಿಕ್ಕಪಾಳ್ಯ ಎಂಬೆರಡು ಹಳ್ಳಿಗಳನ್ನು ನಿರ್ಮಿಸಿ ಅವುಗಳ ಸುತ್ತಲೂ ಕೋಟೆ ಕಟ್ಟಿಸಿ ಸುತ್ತಲಿನ ಏಳೂರು ದನಗಳ ರಕ್ಷಣಾ ಹೊಣೆಯನ್ನು ವಹಿಸಿದ್ದನು. ಹಾಗಾಗಿ ಈ ಸೋದರರು ಶತ್ರುಗಳ ದಾಳಿಯ ಸಂದರ್ಭದಲ್ಲಿ ಏಳೂರಿನ ಏಳನೂರು ದನಗಳ ರಕ್ಷಣೆಗಾಗಿ ಬೆಟ್ಟದಲ್ಲಿರುವ ಗುಹೆಯ ಸುತ್ತಲೂ ಕೋಟೆ ಕಟ್ಟಿಸಿದ್ದನಂತೆ. ಈ ಗುಹೆ ಇಂದಿಗೂ ಏಳೂರ ಗುಹೆ ಎಂದೇ ಕರೆಯಲ್ಪಡುತ್ತಿದೆ. ಬಹುಶಃ ಪಶುಗಳ ಮೇಲೆ ನಿರಂತರ ದಾಳಿಗಳಿದ್ದುದರಿಂದ ಜಿಲ್ಲೆಯಲ್ಲಿ ನಿಡುಗಲ್ಲು ಚೋಳರಿಗಿಂತ ಹಿಂದಿನಿಂದಲೂ ನಡೆಯುತ್ತಿದ್ದವೆಂಬುದಕ್ಕೆ ದೊರೆತಿರುವ ತುರುಗೋಳ್ ಸ್ಮಾರಕಗಳಿಂದ ಸ್ಪಷ್ಟವಾಗುತ್ತದೆ. ಇಂದಿಗೂ ಸಹ ರಕ್ಷಣಾ ಕೇಂದ್ರಿತ ಕೋಟೆಗಳ ಸಮೀಪವೇ ಬುಡಕಟ್ಟು ಸಮುದಾಯದವರು ಹೆಚ್ಚಾಗಿ ವಾಸಿಸುತ್ತಿದ್ದಾರೆ. ಉದಾಹರಣೆಗೆ ಪುಲಮಾಚಿ-ಕಾಡುಗೊಲ್ಲ, ಮಲ್ಲನಾಯಕನಹಳ್ಳಿ-ಬೇಡ ಮತ್ತು ಕಾಡುಗೊಲ್ಲ, ಕೊಲಿಮೆಗೆರೆ ರಾಂಪುರ-ಬೇಡ, ಹುತ್ತರೀದುರ್ಗ-ಬೇಡ, ಕುರುಬ, ಬಂಗಾರನಾಯಕನದುರ್ಗ-ಬೇಡ, ಓಬನಾಯಕನದುರ್ಗ-ಬೇಡ, ನಿಡುಗಲ್ಲು-ಬೇಡ, ಕುರುಬ, ತಿಪ್ಪಯ್ಯನದುರ್ಗ-ಗೊಲ್ಲ, ಬೇಡ, ಕಾಮನದುರ್ಗ-ಬೇಡ ಹೀಗೆ ಜಿಲ್ಲೆಯ ಹಲವೆಡೆ ಇಂದಿಗೂ ಪಶುಪಾಲಕರಾಗಿಯೇ ಜೀವನ ಸಾಗಿಸುತ್ತಿದ್ದಾರೆ.

ಜಿಲ್ಲೆಯ ರಕ್ಷಣಾ ಕೇಂದ್ರಗಳು ವ್ಯಾಪಾರ ವಹಿವಾಟಿನೊಂದಿಗೂ ಪ್ರಮುಖ ಪಾತ್ರವಹಿಸಿದ್ದವೆಂಬ ಅಂಶ ಬಿ.ಎಲ್.ರೈಸ್ ಎಫಿಗ್ರಾಫಿಯ ಸಂಪುಟ ೧೨ರಲ್ಲಿ ಉಲ್ಲೇಖಿಸಿರುವ ಕುಣಿಗಲ್ ಪಟ್ಟಣವು ಚೋಳರ ಕಾಲದಲ್ಲಿ ಕೇರಳದ ತ್ರಿವೆಂಡ್ರಂ ಬಂದರಿನೊಂದಿಗೆ ವ್ಯಾಪಾರ ಸಂಬಂಧ ಹೊಂದಿತ್ತೆಂಬುದರಿಂದ ಸ್ಪಷ್ಟವಾಗುತ್ತದೆ. ಹಾಗೂ ವಿಜಯನಗರ ಕಾಲದಲ್ಲಿ ಹಂಪಿ ಮೂಲಕ ಪಶ್ಚಿಮದ ಕಡಲ ತೀರಗಳಿಗೆ ಎತ್ತಿನ ಬಂಡಿಗಳಿಂದ ಸರಕು ಸರಂಜಾಮುಗಳನ್ನು ಸಾಗಿಸುತ್ತಿದ್ದರೆಂದು ವಿದೇಶಿ ಪ್ರವಾಸಿಗರು ಉಲ್ಲೇಖಿಸಿದ್ದಾರೆ. ಹೇರಳ ಪಶುಸಂಪತ್ತನ್ನು ಹೊಂದಿದ ಇಂತಹ ಸಣ್ಣಮುಟ್ಟ ಅರಸು ಮನೆತನ ಹಾಗೂ ಪಾಳೆಪಟ್ಟುಗಳು ತಮ್ಮ ಒಡೆಯರಿಗೆ ಇಂತಿಷ್ಟು ಪಶುಗಳನ್ನು ವಾರ್ಷಿಕವಾಗಿ ಸಲ್ಲಿಸಬೇಕಾಗಿತ್ತು.

ರಕ್ಷಣಾ ಕೇಂದ್ರಗಳು ರಾಜಧಾನಿಗೆ ಶತ್ರುಗಳ ಮುನ್ಸೂಚನೆಯನ್ನು ರಾಜಧಾನಿ ಇಲ್ಲವೇ ಮತ್ತೊಂದು ರಕ್ಷಣಾ ಕೇಂದ್ರಕ್ಕೆ ನೀಡಿ ಅವರು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡು ತಮ್ಮ ನೆರವಿಗೆ ಧಾವಿಸುವಂತೆ ಮಾಡುತ್ತಿದ್ದ ತಂತ್ರ ಆಶ್ಚರ್ಯವೆನಿಸುತ್ತದೆ. ಜಿಲ್ಲೆಯಲ್ಲಿ ಪ್ರತಿ ಪಾಳೆಪಟ್ಟಿನ ಪ್ರಮುಖ ಆಡಳಿತ ಕೇಂದ್ರಕ್ಕೆ ಕೇವಲ ಐದಾರು ಕಿ.ಮೀ.ಗಳ ಅಂತರದಲ್ಲಿ ಚೈನ್‌ಲಿಂಕ್‌ನಂತೆ (ಸರಪಳಿಯಾಕಾರ) ಸ್ಥಳದುರ್ಗ ಅಥವಾ ಗಿರಿದುರ್ಗಗಳಿವೆ. ಜಿಲ್ಲೆಯ ಯಾವುದೇ ಸ್ತ್ರೀ ಬೆಟ್ಟದ ತುದಿ ಭಾಗದಿಂದ ಸುತ್ತಲಿರುವ ಪರಿಸರವನ್ನು ವೀಕ್ಷಿಸಿದರೆ ಸುಮಾರು ೧೦ರಿಂದ ೧೫ ಕಿ.ಮೀ. ದೂರದ ಚಲನವಲನ ಕಂಡುಬರುತ್ತದೆ. ಬೆಂಕಿಯನ್ನು ಆ ಬೆಟ್ಟದ ತುದಿಯಲ್ಲಿ ಹಚ್ಚಿದ್ದೇ ಆದರೆ ಸುಮಾರು ೨೦ರಿಂದ ೩೦ ಕಿ.ಮೀ. ದೂರದ ಪ್ರದೇಶಗಳಿಗೆ ಅದರ ಜ್ವಾಲೆ ಕಾಣಿಸುತ್ತದೆ. ಬಹುಶಃ ಈ ಕಾರಣದಿಂದಲೇ ಜಿಲ್ಲೆಯಲ್ಲಿ ಕೋಟೆಗಳನ್ನು ಬೆಟ್ಟದ ತುದಿ ಭಾಗದಲ್ಲಿ ಅಥವಾ ಬೃಹತ್ ನಿಲುವುಗಲ್ಲುಗಳ ಮೇಲೆ ಬತೇರಿ, ಬುರುಜುಗಳನ್ನು ನಿರ್ಮಾಣ ಮಾಡಲಾಗಿದೆ. ಈ ಭಾಗದಲ್ಲಿ ಬೆಂಕಿಯನ್ನು ಹಚ್ಚುವುದರ ಮೂಲಕ ಶತ್ರುಗಳು ಪ್ರವೇಶಿಸುತ್ತಿದ್ದಾರೆಂಬ ಮುನ್ನೆಚ್ಚರಿಕೆಯನ್ನು ಸಮೀಪ ಇರುವಂತಹ ರಕ್ಷಣಾ ಕೇಂದ್ರ ಇಲ್ಲವೇ ರಾಜಧಾನಿಗೆ ನೀಡುತ್ತಿದ್ದರು. ಒಂದು ವೇಳೆ ಸ್ಥಳದುರ್ಗವಾಗಿದ್ದರೆ ಶತ್ರುಗಳ ಪ್ರವೇಶದ ಸಂಗತಿಯನ್ನು ರಾಜಧಾನಿಗೆ ಗುಪ್ತವಾಗಿ ಕುದುರೆ ಅಥವಾ ಬೇರೆ ಮಾಧ್ಯಮಗಳ ಮೂಲಕ ರವಾನಿಸಲಾಗುತ್ತಿತ್ತು. ಗಂಗರ ಸಾಮಂತ ಮನೆತನ ಕ್ರೀಡಾಪುರದಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ನೊಳಂಬರ ಪದೇ ಪದೇ ದಾಳಿಗಳಿಂದ ರಾಜಧಾನಿಯನ್ನು ರಕ್ಷಿಸಲು ಇಂದಿನ ತುಮಕೂರು ನಗರದ ಹಳೇ ಮಾರುಕಟ್ಟೆ ಪ್ರದೇಶದಲ್ಲಿ ಎತ್ತರದ ದಿಬ್ಬವನ್ನು ನಿರ್ಮಿಸಿ, ಶತೃಗಳ ಪ್ರವೇಶದ ಮುನ್ಸೂಚನೆ ದೊರೆತ ತಕ್ಷಣ ದಿಬ್ಬದ ಮೇಲೆ ನಿಂತು ಜೋರಾಗಿ ನಗಾರಿ ಬಾರಿಸುವ ತಂಡವನ್ನು ನೇಮಿಸಿದ್ದರಂತೆ. ಹೀಗೆ ತಮಗೆ ಅನುಕೂಲವಿರುವ ತಂತ್ರೋಪಾಯಗಳಿಂದ ಮಾಹಿತಿಯನ್ನು ರಾಜಧಾನಿಗೆ ರವಾನಿಸುತ್ತಿದ್ದರು. ಹಾಗಾಗಿ ರಾಜಧಾನಿ ರಕ್ಷಣೆಗಾಗಿ ಚೈನ್‌ಲಿಂಕ್‌ನಂತಿರುವ ರಕ್ಷಣಾ ಕೇಂದ್ರಿತ ಕೋಟೆ–ಕೊತ್ತಲ, ಸೈನಿಕ ತುಕಡಿಗಳಿರುವ ಸ್ಥಳಗಳು ಮಹತ್ವದ ಪಾತ್ರವಹಿಸುತ್ತಿದ್ದವು.

ಹೀಗೆ ಹಲವು ಉದ್ದೇಶಗಳಿಗಾಗಿ ನಿರ್ಮಾಣಗೊಂಡ ಈ ವಾಸ್ತು ರಚನೆಯನ್ನು ಗಮನಿಸಿದರೆ ಸ್ವಾರಮ್ಮನಬೆಟ್ಟ, ಮಲ್ಲನಾಯಕನಹಳ್ಳಿ, ಬೊಳಿಬೆಟ್ಟ, ಆನಂದರಾವ್‌ಗುಡ್ಡ ಮೊದಲಾದೆಡೆ ಚೌಕ ಮಾದರಿಯ ಕೋಟೆ ಗೋಡೆಯನ್ನು ಮಾತ್ರ ಕಾಣಬಹುದು. ಇನ್ನುಳಿದ ಮುಗದಾಳಬೆಟ್ಟ, ಇಂದ್ರಬೆಟ್ಟ, ದೇವರಬೆಟ್ಟ, ಹೊಸದುರ್ಗ, ಓಬನಾಯಕನದುರ್ಗ, ಬೆನಕನಹಳ್ಳಿ, ತೋಟಮಡಗು, ಬೇಡತ್ತೂರು, ದೊಡ್ಡಬೋಣಿ, ರಂಗಪ್ಪನಬೆಟ್ಟ, ಕೋಟೆಕಲ್ಲೇಶ್ವರ ಮೊದಲಾದೆಡೆ ಶತ್ರುಗಳ ಪ್ರವೇಶ ಸುಲಭಸಾಧ್ಯವಾದ ಸ್ಥಳದಲ್ಲಿ ಮಾತ್ರ ಶತ್ರುಗಳನ್ನು ತಡೆಯುವ ಉದ್ದೇಶಕ್ಕಾಗಿ ಗೋಡೆಯನ್ನು ನಿರ್ಮಿಸಲಾಗಿದೆ. ಈ ಕೋಟೆಗಳೆಲ್ಲಾ ಗಿರಿದುರ್ಗಗಳೇ ಆಗಿರುವುದರಿಂದ ಇಡೀ ಬೆಟ್ಟವೇ ರಕ್ಷಣಾ ಗೋಡೆಯಂತೆ ಇರುತ್ತದೆ. ಇವರಿಗೆ ಶತ್ರುಗಳಿಂದ ಬಹುಬೇಗ ತಪ್ಪಿಸಿಕೊಳ್ಳಲು ಕಲ್ಲಾಸರೆ, ಪೊಟರೆ,

ಗುಹೆ, ದಟ್ಟಡವಿ, ಗುಪ್ತ ಸುರಂಗ ಮಾರ್ಗಗಳಂಥ ನೈಸರ್ಗಿಕ ನಿರ್ಮಿತಿಗಳೇ ವರದಾನವಾಗಿರುವುದರಿಂದ ಜಿಲ್ಲೆಯ ಬಹುತೇಕ ರಕ್ಷಣಾ ಕೇಂದ್ರಗಳಲ್ಲಿ ಬಾಣದ ಮೊನೆ, ಕಬ್ಬಿಣದ ಮೊಳೆಗಳು ಹೇರಳವಾಗಿ ದೊರೆಯುತ್ತವೆ. ಸಾಮಾನ್ಯವಾಗಿ ಈ ಕೋಟೆಗಳಲ್ಲಿ ಅಂಬುಕಿಂಡಿ, ಬಂದೂಕುಕಿಂಡಿ, ಫಿರಂಗಿಕಿಂಡಿಗಳು ಕಂಡುಬರುವುದಿಲ್ಲ. ಇರುವಂತಹ ಅಲ್ಪ ಕಿಂಡಿಗಳು ವೀಕ್ಷಣೆಗಾಗಿಯೇ ಬಳಕೆಯಾಗುತ್ತಿದ್ದವು. ಏಕೆಂದರೆ ಈ ವೀಕ್ಷಣಾ ಕಿಂಡಿಗಳನ್ನು ಗಮನಿಸಿದರೆ ಅವುಗಳಿಂದ ವೀಕ್ಷಿಸಲ್ಪಟ್ಟ ಅಂತರ ಬಹಳ ದೂರ ಇರುತ್ತಿದ್ದರಿಂದ ಅವುಗಳ ಮೂಲಕ ಯಾವುದೇ ಅಸ್ತ್ರವನ್ನು ಪ್ರಯೋಗಿಸಿದರೂ ಅವು ಶತ್ರುಗಳಿಗೆ ಗುರಿ ಮುಟ್ಟುವಾಗ ಅದರ ವೇಗ ಕಡಿಮೆಯಾಗುತ್ತಿತ್ತು. ಆಳವಾದ ಪ್ರಪಾತ ಇರುವಲ್ಲೂ ಈ ಕಿಂಡಿಗಳು ಕಂಡುಬರುವುದರಿಂದ ಅವು ಕೇವಲ ವೀಕ್ಷಣೆಗಾಗಿ ಮಾತ್ರ ಬಳಕೆಯಾಗುತ್ತಿದ್ದವು. ಆದರೆ ಪ್ರವೇಶ ದ್ವಾರದ ಬಳಿ ಇರುವ ಕಿಂಡಿಗಳನ್ನು ವೀಕ್ಷಣೆಗಾಗಿಯೂ, ಬಂದೂಕು ಮತ್ತು ಬಾಣಗಳನ್ನು ಬಿಡಲು ಹಾಗೂ ಶತ್ರುಗಳ ಮೇಲೆ ಕಾದ ಎಣ್ಣೆ, ಅಂಬಲಿ, ನೀರನ್ನು ಸುರಿಯಲು ಹೀಗೆ ಹಲವು ಉದ್ದೇಶಗಳಿಗಾಗಿ ಬಳಕೆಯಾಗುತ್ತಿದ್ದವು. ಜಿಲ್ಲೆಯಲ್ಲಿ ಕಂಡುಬರುವ ಬೆಟ್ಟಗಳ ಇಳಿಜಾರಾದ ನೈಸರ್ಗಿಕ ನಿರ್ಮಿತಿಯೇ ಈ ಮಾದರಿಯ ತಂತ್ರಗಳ ಬಳಕೆಗೆ ಪೂರಕ ವಾತಾವರಣವನ್ನು ಕಲ್ಪಿಸಿತ್ತು.

ಈ ಕಾರಣಕ್ಕಾಗಿಯೇ ಜಿಲ್ಲೆಯ ರಕ್ಷಣಾ ಕೇಂದ್ರಿತ ಕೋಟೆಗಳೆಲ್ಲವೂ ಗೆರಿಲ್ಲಾ ಮಾದರಿಯ ಯುದ್ಧನೀತಿಗೆ ಹೆಸರುವಾಸಿಯಾಗಿದ್ದವು. ಬಹುಶಃ ಇಂತಹ ಪಾಳೆಪಟ್ಟುಗಳನ್ನು ಗಮನಿಸಿಯೇ ಕೃಷ್ಣದೇವರಾಯ ಕೋಟೆಕಾಳಗಕ್ಕೆ ವಿಶೇಷವಾಗಿ ಪಾಳೆಪಟ್ಟುಗಳಿಂದ ಬೇಡ ಪಡೆಯನ್ನು ಪಡೆದುಕೊಳ್ಳುತ್ತಿದ್ದಾಗಿ ಎಂಬುದು ಅಮುಕ್ತಮಾಲ್ಯದ ಕೃತಿಯಲ್ಲಿ ಉಲ್ಲೇಖಿಸಿಕೊಂಡಿದ್ದಾನೆ. ಸಾಮಾನ್ಯವಾಗಿ ಇವರು ರಕ್ಷಣಾ ಕೇಂದ್ರಗಳ ಮೇಲೆ ದಾಳಿ ಮಾಡಿದಾಗ ಕೋಟೆಯ ಒಳಗಿರುವ ಗುಪ್ತ ಪ್ರದೇಶಗಳಲ್ಲಿ ಅಡಗಿಕೊಂಡು ಅವರ ಚಲನವಲನವನ್ನು ಗಮನಿಸುತ್ತ ಅನಿರೀಕ್ಷಿತ ಪ್ರತಿ ದಾಳಿಯನ್ನು ಮಾಡುತ್ತಿದ್ದರು. ಇಂತಹ ತಂತ್ರಗಳಿಂದಲೇ ಜಿಲ್ಲೆಯ ಸಣ್ಣಪುಟ್ಟ ಅರಸು ಮನೆತನ ಹಾಗೂ ಪಾಳೆಪಟ್ಟುಗಳಿಗೆ ಸುಮಾರು ೨೦೦ರಿಂದ ೩೦೦ ವರ್ಷಗಳ ಸುದೀರ್ಘ ಆಳ್ವಿಕೆ ಮಾಡಲು ಸಾಧ್ಯವಾಗಿರುವಂತಥ ಕೆಲವೊಮ್ಮೆ ಇಂತಹ ತಂತ್ರಗಳನ್ನು ಅರಿತಿದ್ದ ರಕ್ಷಣಾ ಕೇಂದ್ರಗಳ ಕಿಲ್ಲೆದಾರರು ತನ್ನ ಒಡೆಯನ ವಿರುದ್ಧವೇ ತಿರುಗಿಬೀಳುವಂತಹ ಅವಕಾಶವಾದಿತನವನ್ನು ಕಾಯ್ದುಕೊಳ್ಳುತ್ತಿದ್ದರು. ಉದಾಹರಣೆಗೆ ಯಲಹಂಕ ನಾಡಪ್ರಭುಗಳು ತಮ್ಮ ಗಡಿ ರಕ್ಷಣೆಗಾಗಿ ನಿರ್ಮಿಸಿದ್ದ ಹುತ್ತರೀದುರ್ಗ, ಹುಲಿಯೂರುದುರ್ಗ, ಕುಣಿಗಲ್ ಕೋಟೆಗಳ ಕಿಲ್ಲೆದಾರರು ತಮ್ಮ ಒಡೆಯನ ವಿರುದ್ಧವೇ ತಿರುಗಿಬಿದ್ದದ್ದು ಈ ಪ್ರದೇಶಗಳ ನೈಸರ್ಗಿಕ ಅಭೇದ್ಯವೂ ಕಾರಣವಿರಬಹುದು.

ಜಿಲ್ಲೆಯಲ್ಲಿನ ರಕ್ಷಣಾ ಕೇಂದ್ರಗಳ ಬಹುಮುಖ್ಯ ವೈಶಿಷ್ಟ್ಯತೆ ಎಂದರೆ ಅವರು ನೀರಿಗಾಗಿ ಕೈಗೊಂಡ ವೈಜ್ಞಾನಿಕ ಕ್ರಮಗಳು ಏಕೆಂದರೆ ಯಾವುದೇ ಭಾಗಕ್ಕೂ ಗಾರೆಯ ಲೇಪನ ಇಲ್ಲದಿರುವ ಕೋಟೆಗಳಲ್ಲೂ ನೀರಿನ ಹೊಂಡಗಳಿಗೆ ಮಾತ್ರ ಗಾರೆ ಮತ್ತು ಇಟ್ಟಿಗೆಯನ್ನು ಬಳಸಲಾಗಿದೆ.

ಗಾರೆಯು ಮಾನವ ನಿರ್ಮಿತಿಗಳಿಗೆ ಸೂಕ್ತವಾದ ಒಂದೇ ರೀತಿಯ ವಾತಾವರಣವನ್ನು ಸದಾ ಕಾಲವೂ ಕಾಯ್ದುಕೊಂಡು ಹೋಗುವ ಗುಣವನ್ನು ಹೊಂದಿದೆ. ಹಾಗಾಗಿ ಇವುಗಳಲ್ಲಿ ಸಂಗ್ರಹವಾಗುವ ಯಾವ ಪದಾರ್ಥ ಅಥವಾ ಪಾನಿಯಗಳು ಹಾಳಾಗದಂತೆ ಹವಾಗುಣವನ್ನು ಸಮನಾಂತರವಾಗಿ ಕಾಯ್ದುಕೊಳ್ಳುವ ನೈಸರ್ಗಿಕ ಗುಣ ಇರುವುದರಿಂದಲೇ ಬಿರುಬಿಸಿಲು ನಾಡಾದ ಈ ಭಾಗದಲ್ಲಿ ನಿರ್ಮಾಣಗೊಂಡ ಗಾರೆಬಾವಿ, ಕಟ್ಟೆ, ಹೊಂಡ, ಕಲ್ಯಾಣಿಗಳಲ್ಲಿ ಶೇಖರಗೊಳ್ಳುವ ನೀರು ಇಂದಿಗೂ ಸದಾ ಕಾಲ ತಂಪಿನಿಂದ ಕೂಡಿರುತ್ತದೆ. ನೀರಿನ ಸಂಗ್ರಹಣೆಯನ್ನು ಹೊರತುಪಡಿಸಿ ಉಳಿದಂತೆ ಕೋಟೆಯ ರಕ್ಷಣಾ ನಿರ್ಮಿತಿಗಳು ಪ್ರಾಚೀನ ಮಾದರಿಯಲ್ಲಿ ತಮಗೆ ಅನುಕೂಲವಾದ ರೀತಿ ಇವೆ. ಈ ಕೇಂದ್ರಗಳು ವಿಸ್ತರಣೆಗೊಂಡಂತೆ ಅವುಗಳ ರಕ್ಷಣಾ ತಂತ್ರಗಳೂ ವಿಸ್ತರಿಸಲ್ಪಟ್ಟಿರುವುದಕ್ಕೆ ಕುಲುಮೆ ಘಟಕ, ಮದ್ದಿನಮನೆ, ಕಣಜ, ಫಿರಂಗಿಕಿಂಡಿ, ಕೋಟೆತೆನೆ, ಇಳಿವೂರೆ ಮೊದಲಾದವುಗಳ ನಿರ್ಮಾಣ ಖಚಿತಪಡಿಸುತ್ತದೆ. ಅದೇ ರೀತಿ ಸ್ಥಳದುರ್ಗಗಳಾದರೆ ಕಂದಕ, ವೀಕ್ಷಣಾಕಿಂಡಿ, ಕೈಪಿಡಿಗೋಡೆ, ದೇವಾಲಯ, ಅರಮನೆ, ವಸತಿ ಮತ್ತು ಅಧಿಕಾರಿ ವರ್ಗದ ಕಟ್ಟಡಗಳಿಂದ ಅದು ಸ್ಪಷ್ಟವಾಗುತ್ತದೆ.

ರಕ್ಷಣಾ ಕೇಂದ್ರಿತ ಕೋಟೆಗಳ ವಿನ್ಯಾಸ ಚೌಕ, ಆಯತ, ವೃತ್ತಕಾರದಲ್ಲಿವೆ, ಕೋಟಗುಡ್ಡ, ತಿಮ್ಮನಾಯಕನಬೆಟ್ಟ, ತೋಟಮಡುಗು ಮೊದಲಾದ ಕೆಲವು ಕೋಟೆಗಳಿಗೆ ತಮಗೆ ಅನುಕೂಲವಾದ ರೀತಿಯ ಆಕಾರದಲ್ಲಿ ಅವಶ್ಯವಿರುವಲ್ಲಿ ಮಾತ್ರ ನಿರ್ಮಿಸಿಕೊಂಡಿದ್ದಾರೆ. ಬಹುತೇಕ ಕೋಟೆಗಳು ಸ್ಥಳೀಯವಾಗಿ ಸಿಗುವ ಗ್ರಾನೈಟ್, ಕಾಡುಗಲ್ಲು, ಸೌಟುಕಲ್ಲು, ಬೆಣಚುಶಿಲೆ, ಡೈಕ್ ಶಿಲೆಯಿಂದ ನಿರ್ಮಿಸಲ್ಪಟ್ಟಿವೆ. ಆದರೆ ಗುಟ್ಟೆಯಲ್ಲಿ ಮಾತ್ರ ಮೈಕಾ ಮಿಶ್ರಿತ ಕಾಡುಗಲ್ಲನ್ನು ಬಳಸಿರುವುದು ವಿಶೇಷವೆನಿಸುತ್ತದೆ. ಈ ಶಿಲಾ ಮಾಧ್ಯಮವನ್ನು ಕೆಲವೆಡೆ ಹಾಗೆಯೇ ಬಳಸಿದರೆ, ಕೆಲವೆಡೆ ಅವುಗಳನ್ನು ಆಯತ, ಚೌಕ, ತ್ರಿಭುಜ, ಚಪ್ಪಟೆ, ಚುರ್ಕಿಗಳನ್ನಾಗಿ ಕತ್ತರಿಸಿ ಬಳಸಲಾಗಿದೆ. ಗೋಡೆಯ ಅಗಲವನ್ನು ವಿಸ್ತರಿಸಲು ಮಧ್ಯ ಭಾಗಕ್ಕೆ ಮಣ್ಣನ್ನು ಸುರಿಯಲಾಗಿದೆ. ಹೊರಬದಿಯಲ್ಲಿ ಗೋಡೆ ಸಡಿಲಗೊಳ್ಳದಂತೆ ತಳಪಾಯಕ್ಕೆ ಕಬ್ಬಿಣ ಅಥವಾ ಕಲ್ಲಿನ ಉಳಿಗಳನ್ನು ರಂಧ್ರ ಮಾಡಿ ಜೋಡಿಸಿದ್ದಾರೆ. ಬಹುಶಃ ಇವರಿಗೆ ಕಬ್ಬಿಣದ ಅದಿರಿನ ಅಭಾವ ಇದ್ದಿದ್ದರಿಂದ ಅದಕ್ಕೆ ಪರ್ಯಾಯವಾಗಿ ಕಲ್ಲಿನ ಉಳಿಗಳನ್ನು ಬಳಸಿಕೊಂಡಿದ್ದಾರೆ. ಅಂದರೆ ಪಾಳೆಪಟ್ಟುಗಳು ತಮ್ಮಲ್ಲಿ ಇಲ್ಲದಿರುವ ಮಾಧ್ಯಮಕ್ಕೆ ಪರ್ಯಾಯ ಮಾರ್ಗವನ್ನು ನಿರಂತರವಾಗಿ ಕಂಡುಕೊಳ್ಳುತ್ತಿದ್ದರು ಎಂಬ ಅಂಶ ಇದರಿಂದ ಗೋಚರಿಸುತ್ತದೆ. ಉದಾಹರಣೆಗೆ ಜಿಲ್ಲೆಯಲ್ಲಿ ಗಾರೆಗೆ ಪರ್ಯಾಯವಾಗಿ ಪ್ರಾಗಿತಿಹಾಸ ಕಾಲದ ವಸತಿ ದಿಬ್ಬಗಳಲ್ಲಿ ದೊರೆಯುವ ಮಡಕೆ ಚೂರು, ಬೂದಿಯಿಂದ ಕೂಡಿರುವ ಮಣ್ಣನ್ನು ಗೋಡೆ ಕಟ್ಟಲು ಗಚ್ಚಿನಂತೆ ಬಳಸಿಕೊಂಡಿದ್ದಾರೆ. ಈ ಗೋಡೆಯ ಮಧ್ಯ ಭಾಗದಲ್ಲಿ ದೊರೆತ ನವಶಿಲಾಯುಗ, ಬೃಹತ್ ಶಿಲಾಯುಗ ಹಾಗೂ ಇತಿಹಾಸ ಆರಂಭಕಾಲದ ಮಡಕೆ ಚೂರುಗಳಿಂದ ಇದು ಸ್ಪಷ್ಟವಾಗುತ್ತದೆ. ಪ್ರಾಗಿತಿಹಾಸ ಕಾಲದ ಬೂದಿ ದಿಬ್ಬ ಗಾರೆಗಿಂತಲೂ

ಗೋಡೆ ಸಡಿಲಗೊಳ್ಳದಂತೆ ಬಿಗಿಯಾಗಿ ಹಿಡಿದಿಟ್ಟುಕೊಳ್ಳುವ ನೈಸರ್ಗಿಕ ಗುಣ ಹೊಂದಿದೆ. ಇವರು ವೆಚ್ಚದಾಯಕ ವಿಧಾನಗಳನ್ನು ಕೈಬಿಟ್ಟು ಸ್ಥಳೀಯ ವಾಸ್ತು ವೈವಿಧ್ಯತೆಯನ್ನು ತೋರ್ಪಡಿಸಿದ್ದಾರೆ. ಹಾಗಾಗಿಯೇ ಸುಮಾರು ಮೂನ್ನೂರು ನಾಲ್ಕುನೂರು ವರ್ಷಗಳಾದರೂ ಕೋಟೆ ಗೋಡೆಗಳನ್ನು ಕಾಣಲು ಸಾಧ್ಯವಾಗಿರುವುದು. ಜಿಲ್ಲೆಯ ಪ್ರತಿ ರಕ್ಷಣಾ ಕೇಂದ್ರವು ಬದಲಾದ ಯುದ್ಧನೀತಿಗೆ ಅನುಗುಣವಾಗಿ ಮಾರ್ಪಾಟುಗೊಂಡರೂ ಸ್ಥಳೀಯ ವಾಸ್ತು ವೈವಿಧ್ಯತೆಯನ್ನು ಪ್ರಧಾನವಾಗಿ ಕಾಣಬಹುದು.

೪.೩. ಗ್ರಾಮ ಕೇಂದ್ರಿತ ಕೋಟೆಗಳು

ಕೋಟೆ–ಕೊತ್ತಲಗಳ ನಿರ್ಮಾಣ ಆರಂಭವಾಗಿದ್ದೇ ಗ್ರಾಮ ಮಟ್ಟದಲ್ಲಿ; ಆದರೆ ಅದು ಪ್ರಾಮುಖ್ಯತೆ ಗಳಿಸಿಕೊಂಡಿದ್ದು ಪ್ರಭುತ್ವಶಾಹಿಗಳಿಂದ. ಆರಂಭದಲ್ಲಿ ಅವುಗಳನ್ನು ವನ್ಯಮೃಗಗಳು ಮತ್ತು ಕಳ್ಳಕಾಕರಿಂದ ರಕ್ಷಣೆ ಪಡೆಯುವುದಕ್ಕಾಗಿ ಕಟ್ಟಿಕೊಳ್ಳುತ್ತಿದ್ದರು. ಕ್ರಮೇಣ ಅವು ಸಾಂಸ್ಕೃತಿಕವಾಗಿಯೂ ತಮ್ಮ ಬದುಕಿನ ಭಾಗ ಎನ್ನುವಷ್ಟರ ಮಟ್ಟಿಗೆ ಗುರುತಿಸಿಕೊಂಡವು. ಇವು ತಮ್ಮದೇ ಆದ ಪರಂಪರಾಗತ ಆಚರಣೆಗಳನ್ನು ತಲೆತಲಾಂತರಗಳವರೆಗೆ ಜೀವಂತಿಕೆಯಿಂದಿರಲು ಕಾರಣವೂ ಆಗಿವೆ. ಏಕೆಂದರೆ ಇಂದಿಗೂ ಕಾಡುಗೊಲ್ಲ, ಬೇಡ ಮೊದಲಾದ ಬುಡಕಟ್ಟು ಸಮುದಾಯಗಳು ಮಡಿವಂತಿಕೆಯ ವಿಚಾರದಲ್ಲಿ ತಮ್ಮ ಕುಲವು ಅಪವಿತ್ರವಾಗಬಾರದೆಂದು ಇತರ ಸಮುದಾಯ, ಪ್ರಾಣಿ, ಪಕ್ಷಿಗಳ ಪ್ರವೇಶವನ್ನು ತಡೆಯಲು ಹಟ್ಟಿಗಳ ಸುತ್ತಲೂ ಬೇಲಿಯನ್ನು ಹಾಕಿಕೊಂಡು ತಮ್ಮ ನಂಬಿಕೆ, ಆಚರಣೆಗಳನ್ನು ರಕ್ಷಿಸಿಕೊಳ್ಳುತ್ತಿದ್ದಾರೆ. ಇದು ಅವರ ಪಾಲಿಗೆ ಮಡಿವಂತಿಕೆಯ ಸಂಗತಿಯಾದರೂ ತಮ್ಮ ನಂಬಿಕೆ, ಆಚರಣೆಗಳ ರಕ್ಷಣೆಗಾಗಿ ಹಟ್ಟಿಯ ಸುತ್ತಲೂ ಹಾಕಿಕೊಂಡ ಬೇಲಿಯನ್ನು ಪ್ರಸ್ತುತ ಮಹಾಪ್ರಬಂಧದಲ್ಲಿ ಕೋಟೆಯ ಪರಿವ್ಯಾಪ್ತಿಯ ಒಳಗೆ ತರುವ ಪ್ರಯತ್ನ ಮಾಡಲಾಗಿದೆ. ಉದಾಹರಣೆಗೆ ಜೆಟ್ಟಿ ಅಗ್ರಹಾರ–ಕಾಡುಗೊಲ್ಲ, ಪುಲಮಾಚಿ–ಕಾಡುಗೊಲ್ಲ, ಕುರೆಹಳ್ಳಿ–ಕಾಡುಗೊಲ್ಲ, ರಾಂಪೇಟ–ಬೇಡ ಮೊದಲಾದೆಡೆ ಈ ಮಾದರಿಯ ಕೋಟೆಗಳನ್ನು ಇಂದಿಗೂ ಕಾಣಬಹುದಾಗಿದೆ.

ಭಾರತದಲ್ಲಿ ಕ್ರಿ.ಪೂ.೧೦೦೦ ವರ್ಷಗಳ ಹಿಂದೆ ಅರಣ್ಯವಾಸಿ ಸಮುದಾಯಗಳಲ್ಲಿ ಆಹಾರ ಸಂಗ್ರಹಣೆಯು ಪಶುಪಾಲನೆಯ ಹಂತದಲ್ಲಿ ಆರಂಭವಾಗಿ ಆಹಾರ ಉತ್ಪತ್ತಿಯು ಸ್ಥಿರ ವ್ಯವಸಾಯವನ್ನು ಹಾಗೂ ಸ್ವಯಂಪೋಷಕ ಗ್ರಾಮ ಸಮಾಜವನ್ನು ರೂಪುಗೊಳ್ಳುವಂತೆ ಮಾಡಿತು. ಕ್ರಮೇಣ ಇವು ಭೂಮಾಲೀಕತ್ವದ ಸ್ವಯಂಪೋಷಕ ಗ್ರಾಮಗಳಾಗಿ ಪರಿವರ್ತನೆ ಹೊಂದುತ್ತಾ ತಮ್ಮ ಗ್ರಾಮದ ಅಧೀನದಲ್ಲಿರುವ ಸಮುದಾಯಗಳ ರಕ್ಷಣೆಗಾಗಿ ಕಾಪುಗೋಡೆಗಳನ್ನು ನಿರ್ಮಿಸಿಕೊಳ್ಳುವಂತೆ ಮಾಡಿತು. ಇಂತಹ ಪರಿವರ್ತನೆ ಕ್ರಿ.ಶ.೯ನೆಯ ಶತಮಾನದ ವೇಳೆಗೆ ಗ್ರಾಮೀಣ ಭೂಮಾಲೀಕತ್ವ ಎಂಬ ಎರಡನೆಯ ಹಂತದ ಹುಟ್ಟಿಗೆ ನಾಂದಿಯಾಯಿತು. ಇದರಿಂದ ರಾಜ ಮತ್ತು ಗ್ರಾಮೀಣ ಕುಟುಂಬಗಳ ನಡುವೆ ಭೂಮಾಲೀಕವರ್ಗ ಸೃಷ್ಟಿಯಾಗಿ ರಾಜನಿಗೆ ಸಲ್ಲುವ ಕಂದಾಯವನ್ನು

ತಾವೇ ವಸೂಲಿ ಮಾಡಿಕೊಳ್ಳುವುದಷ್ಟೇ ಅಲ್ಲದೆ ಗ್ರಾಮಗಳ ಶಾಂತಿ ಸುಭದ್ರತೆ, ಸಂರಕ್ಷಣೆಯ ಹೊಣೆಯನ್ನು ಹೊತ್ತು ಗ್ರಾಮ ಆಡಳಿತಕ್ಕೆ ಮಾನ್ಯತೆ ಸಿಗುವಂತೆ ಮಾಡಿದರು. ಆ ಮೂಲಕ ಪ್ರತಿ ಗ್ರಾಮವು ತಮ್ಮ ಸುತ್ತಲೂ ಕಾಪುಗೋಡೆಗಳನ್ನು ನಿರ್ಮಿಸಿಕೊಳ್ಳಲು ಮುಂದಾದವು. ಹಾಗಾಗಿ ಭಾರತದ ಪ್ರತಿ ಗ್ರಾಮ, ಪುರ, ನಗರ, ಪಟ್ಟಣಗಳ ಕೋಟೆಯ ರಚನೆಯ ಕಾಲವನ್ನು ಕ್ರಿ.ಶ. ಆರಂಭದ ಶತಮಾನಕ್ಕೆ[೨೧] ಕೊಂಡೊಯ್ಯುವ ಸಾಧ್ಯತೆಯನ್ನು ಅಲ್ಲಗೆಳೆಯಲಾಗದು. ಆದರೆ ಈ ಪರಿಕಲ್ಪನೆಗೆ ಕೆಲವೊಮ್ಮೆ ಪುರಾತತ್ವೀಯ ಕುರುಹುಗಳು ದೊರೆಯದೇ ಇರಬಹುದು. ಏಕೆಂದರೆ ಈ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡ ಕೋಟೆ–ಕೊತ್ತಲಗಳ ಮಾಧ್ಯಮವು ಮರದ ದಿಮ್ಮಿ, ಮಣ್ಣಿನ ಕಟ್ಟೆ, ಮರದ ಬೊಂಬುಗಳಿಂದ ಕೂಡಿದ್ದರಿಂದ ಅವು ಕಾಲಗರ್ಭದಲ್ಲಿ ಪ್ರಕೃತಿ ವಿಕೋಪ ಹಾಗೂ ಮನುಷ್ಯನ ಸ್ವಾರ್ಥಕ್ಕೆ ಸಿಲುಕಿ ಹೇಳಹೆಸರಿಲ್ಲದಂತೆ ಅವಸಾನದ ಹಾದಿಹಿಡಿದಿವೆ. ಅಥವಾ ನಂತರದ ಕಾಲಘಟ್ಟಗಳಲ್ಲಿ ಪುನರ್‌ನಿರ್ಮಿತ ಕೋಟೆಗೋಡೆಗಳ ಒಳಗೆ ಸೇರ್ಪಡೆಗೊಂಡಿರುತ್ತವೆ. ಹಾಗಾಗಿ ಅಧಿಕೃತವೆಂದು ಗುರುತಿಸುವ ಸತ್ಯದ ಹಿಂದೆಯೂ ಮತ್ತೊಂದು ರಹಸ್ಯ ಅಡಗಿರುತ್ತದೆ. ಈ ಕಾಲಘಟ್ಟದಲ್ಲಿ ನಿರ್ಮಾಣಗೊಂಡ ಜಿಲ್ಲೆಯಲ್ಲಿನ ಕೋಟೆ–ಕೊತ್ತಲಗಳ ಸಂಗತಿಯೇನೂ ಇದಕ್ಕೆ ಹೊರತೇನಲ್ಲ. ಕ್ರಿ:ಶ. ಳ▯ಶಿನೆಯ ಶತಮಾನದ ವೇಳೆಗೆ ಜಿಲ್ಲೆಯ ಹಲವು ಗ್ರಾಮಗಳು ಗಂಗವಾಡಿ ತೊಂಭತ್ತಾರು ಸಾವಿರ ವ್ಯಾಪ್ತಿಯ ಒಳಗೆ ಸೇರ್ಪಡೆಗೊಂಡಿದ್ದರಿಂದ, ಈ ಅವಧಿಯಲ್ಲೇ ಗ್ರಾಮ ರಕ್ಷಣಾವಾಸ್ತು ಅಧಿಕೃತವಾಗಿ ನಿರ್ಮಿಸಲ್ಪಟ್ಟಿರಬೇಕು. ಏಕೆಂದರೆ ಇವರ ಕಾಲಕ್ಕಾಗಲೇ ಜಿಲ್ಲೆಯಲ್ಲಿ ಗಂಗರು–ಪಲ್ಲವ, ಚೋಳ, ರಾಷ್ಟ್ರಕೂಟರೊಂದಿಗೆ ನಿರಂತರವಾಗಿ ಸಂಘರ್ಷದಲ್ಲಿ ತೊಡಗಿದ್ದರಿಂದ ರಾಜಕೀಯ ಅಭದ್ರತೆ ಗ್ರಾಮ ಸಮಾಜದ ಮೇಲೂ ಪ್ರಭಾವ ಬೀರಿತ್ತು. ಈ ಕಾರಣಕ್ಕಾಗಿಯೇ ಗ್ರಾಮಗಳ ರಕ್ಷಣೆಗಾಗಿ ಕಾಪುಗೋಡೆಗಳು ನಿರ್ಮಾಣಗೊಂಡಿದ್ದವು. ಇದಕ್ಕೆ ಪೂರಕವಾಗಿ ಗಂಗರ ಅಂತ್ಯಕಾಲ ಮತ್ತು ರಾಷ್ಟ್ರಕೂಟರ ಆರಂಭ ಕಾಲಕ್ಕಾಗಲೇ ಗ್ರಾಮಗಳನ್ನು ಗೌಡಿಕೆ ನೀಡುವ ಪರಂಪರೆ ಆರಂಭವಾಗಿತ್ತೆಂದೂ ಜಿಲ್ಲೆಯ ಹಿರೇಗುಂಡಗಲ್, ಎರೆಕಟ್ಟೆ, ಸಂಪಿಗೆ, ಮೆಳೆಕೋಟೆ, ಸೀಬಿ, ನೆರ್ಲೇಕೆರೆ ಮೊದಲಾದ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಗೌಡಿಕೆ ನೀಡುವುದು ಹೊಯ್ಸಳ, ವಿಜಯನಗರ ಮತ್ತು ವಿಜಯನಗರೋತ್ತರ ಕಾಲದಲ್ಲಿ ಹೆಚ್ಚು ಮಾನ್ಯತೆ ಗಳಿಸಿಕೊಂಡು ತುಮಕೂರು ಜಿಲ್ಲೆಯಾದ್ಯಂತ ಗ್ರಾಮ ಮಟ್ಟದಲ್ಲಿ ಕೋಟೆ–ಕೊತ್ತಲಗಳು ನಿರ್ಮಾಣಗೊಳ್ಳಲು ಕಾರಣವಾಯಿತು

ಆರಂಭದಲ್ಲಿ ಮರದ ಬೇಲಿ, ದಿಮ್ಮಿ, ಮಣ್ಣಿನ ದಿಬ್ಬಗಳಿಂದ ನಿರ್ಮಾಣಗೊಳ್ಳುತ್ತಿದ್ದ ಗ್ರಾಮಗಳಲ್ಲಿನ ಕೋಟೆ–ಕೊತ್ತಲಗಳ ಮಾಧ್ಯಮವು ವಿಜಯನಗರ ಮತ್ತು ವಿಜಯನಗರೋತ್ತರ ಅವಧಿಯಲ್ಲಿ ಕಲ್ಲು, ಇಟ್ಟಿಗೆ, ಗಾರೆಯಿಂದ ನಿರ್ಮಿಸಲ್ಪಟ್ಟಿತು. ಆದುದರಿಂದ ಈಗಾಗಲೇ ನಿರ್ಮಾಣಗೊಂಡಿದ್ದ ಕೋಟೆಗಳಿಗೆ ಇವರ ಕಾಲದಲ್ಲಿ ಶಿಲೆಯ ಹೊದಿಕೆಯನ್ನು ಮಾಡಿ ಬಲಿಷ್ಠ ಪಡಿಸಿದ್ದಾರೆ. ಹೀಗೆ ನಿರ್ಮಾಣಗೊಂಡ ಕೋಟೆ ಗೋಡೆಯ ಕುರುಹುಗಳನ್ನಾಧರಿಸಿ ಇದು ವಿಜಯನಗರ ಕಾಲಘಟ್ಟದ್ದು

ಎಂದು ಹಲವು ವಿದ್ವಾಂಸರು ಖಚಿತವಾಗಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ವಿಜಯನಗರಕ್ಕಿಂತ ಪೂರ್ವದಲ್ಲಿ ಇದ್ದಂತಹ ಕೋಟೆಯನ್ನು ಗುರುತಿಸುವಲ್ಲಿ ಇವರು ಎಡವಿದ್ದಾರೆ. ಹಾಗಾಗಿ ಆ ಪ್ರದೇಶದಲ್ಲಿ ಸಿಗುವ ಶಾಸನ, ಐತಿಹ್ಯ, ಕಥೆ, ಕಾವ್ಯ, ಲಾವಣಿ, ಸ್ಥಳಪುರಾಣಗಳನ್ನು ಪೂರಕವಾಗಿ ಬಳಸಿಕೊಂಡು ವಿಜಯನಗರಕ್ಕಿಂತ ಪೂರ್ವದಲ್ಲಿ ಕೋಟೆಗಳು ಇದ್ದವೆಂದು ಗುರುತಿಸುವ ಪ್ರಯತ್ನ ಮಾಡಲಾಗಿದೆ. ಇದೇ ವಾದವನ್ನು ಎ.ಎಲ್.ಬಾಶಮ್ ಅವರು ಸಹ ಒಪ್ಪಿಕೊಂಡಿದ್ದಾರೆ. ದಕ್ಷಿಣ ಭಾರತದ ಹಳ್ಳಿಗಳು ಮೊದಲಿನಿಂದಲೂ ಗ್ರಾಮದ ಸುತ್ತಲೂ ಕಾಪುಗೋಡೆಗಳನ್ನು ಹೊಂದಿದ್ದವೆಂದು[೨೨] ಅಭಿಪ್ರಾಯಪಟ್ಟಿದ್ದಾರೆ. ಹಾ.ಮಾ.ನಾಯಕ ಅವರು ಕರ್ನಾಟಕದಲ್ಲಿ ಜನ ಊರುಗಳನ್ನು ಕಟ್ಟಿಕೊಂಡು ನೆಲೆಸತೊಡಗಿದ ದಿನದಿಂದ ೧೯ನೆಯ ಶತಮಾನದ ಕೊನೆಯವರೆಗೂ ಊರುಗಳ ಸುತ್ತಲೂ ಮಣ್ಣಿನ ದಿಬ್ಬ ಏರಿಸುವುದು, ಆಳವಾದ ಕಂದಕ ತೋಡುವುದು, ಇಟ್ಟಿಗೆ ಅಥವಾ ಕಲ್ಲಿನಿಂದ ಗೋಡೆಯನ್ನು ಕಟ್ಟಿಕೊಳ್ಳುತ್ತಿದ್ದುದ್ದು[೨೩] ಎಂದು ಅಭಿಪ್ರಾಯಿಪಟ್ಟಿದ್ದಾರೆ. ತುಮಕೂರು ಜಿಲ್ಲೆಯ ಗ್ರಾಮ ಮಟ್ಟದ ಕೋಟೆ-ಕೊತ್ತಲಗಳು ಪ್ರಾಚೀನ ಕಾಲದಿಂದಲೂ ಹಲವು ಕಾರಣಗಳಿಗಾಗಿ ನಿರ್ಮಾಣಗೊಂಡಿರುವುದು ಐತಿಹ್ಯಗಳಿಂದ ವೇದ್ಯವಾಗುತ್ತದೆ.

ಪ್ರಾಗಿತಿಹಾಸ ಕಾಲದಿಂದಲೂ ಜಿಲ್ಲೆಯು ವಾಸಯೋಗ್ಯ ಪ್ರದೇಶವಾಗಿತ್ತು ಎಂಬುದು ಹಲವು ವಿದ್ವಾಂಸರಿಂದ ಮತ್ತು ಸುಮಾರು ೪೦೦ಕ್ಕೂ ಹೆಚ್ಚು ನೆಲೆಗಳ ಆವಿಷ್ಕಾರದಿಂದ ಸ್ಪಷ್ಟವಾಗಿದೆ. ಅದರಲ್ಲೂ ಪಶುಪಾಲಕ ಸಂಸ್ಕೃತಿಯಾದ ನವಶಿಲಾಯುಗವು ಹೆಚ್ಚಾಗಿ ಕಂಡುಬರುವುದರಿಂದ ಪಶುಪಾಲನೆಗೆ ಸೂಕ್ತ ಹವಾಮಾನ, ಭೌಗೋಳಿಕ ಲಕ್ಷಣಗಳು ಜಿಲ್ಲೆಯಲ್ಲಿ ಇದ್ದವೆಂದು ಸ್ಪಷ್ಟವಾಗುತ್ತದೆ. ಈ ಪಶುಪಾಲಕ ಸಂಸ್ಕೃತಿ ಅಂದಿನಿಂದಲೂ ಹಾಗೆಯೇ ಮುಂದುವರೆದುಕೊಂಡು ಬಂದು ಇತಿಹಾಸ ಕಾಲದಲ್ಲಿ ಹಲವು ತುರುಗಾಳಗಳು ನಡೆಯುವುದಕ್ಕೆ ಕಾರಣವಾಯಿತು. ಬಹುಶಃ ಈ ಉದ್ದೇಶದಿಂದಲೇ ಪಶುಪಾಲಕ ಸಮುದಾಯಗಳು ಶತ್ರುಗಳಿಂದ ರಕ್ಷಣೆ ಪಡೆಯಲು ಬೆಟ್ಟ-ಗುಡ್ಡಗಳ ಸಮೀಪ ಜೀವಿಸುತ್ತಿದ್ದರು. ಅದು ಇಂದಿಗೂ ಮುಂದುವರೆದುಕೊಂಡು ಬರುತ್ತಿದೆ. ಅಂದು ಪಶುಗಳೇ ಸಂಪತ್ತಿನ ಮೂಲಗಳಾಗಿದ್ದರಿಂದ ನಿರಂತರವಾಗಿ ಶತ್ರುಗಳ ಕಾಟ ಪಶುಪಾಲಕರ ಮೇಲೆ ಇತ್ತು. ಹಾಗಾಗಿ ಇಂದು ಪಶುಪಾಲಕ ಸಮುದಾಯಗಳಿರುವ ಕಾಮನದುರ್ಗ, ಕೆ.ರಾಂಪುರ, ಇಂದ್ರಬೆಟ್ಟ, ಜಿಟ್ಟಿ ಅಗ್ರಹಾರ, ತೋಟಮಡಗು, ತಿಪ್ಪಯ್ಯನದುರ್ಗ, ಒಬೇನಹಳ್ಳಿ, ಸತ್ತಿಗಾನಹಳ್ಳಿ ಮೊದಲಾದ ಕಡೆ ಹೆಚ್ಚಾಗಿ ಕೋಟೆ-ಕೊತ್ತಲಗಳು ಕಂಡುಬರುತ್ತವೆ.

ತುಮಕೂರು ಜಿಲ್ಲೆಯಲ್ಲಿನ ಶಾಸನ, ಐತಿಹ್ಯ, ಸ್ಥಳಪುರಾಣ, ಸ್ಥಳ ನಿಷ್ಪತ್ತಿಯನ್ನು ವಿಶ್ಲೇಷಣೆಗೆ ಒಳಪಡಿಸಿದಾಗ ಚಿನ್ನದ ಗಣಿಗಾರಿಕೆ ಅಥವಾ ಉದ್ಯಮ ನಡೆಯುತ್ತಿದ್ದ ಬಗೆಗೆ ಹಲವು ಒಳಸುಳಿವುಗಳು ದೊರೆಯುತ್ತವೆ. ಪೊನ್ನಸಮುದ್ರ, ಹೊನ್ನವಳ್ಳಿ, ಹೊನ್ನೆನಹಳ್ಳಿ, ಸುವರ್ಣಗಿರಿ, ಬಂಗಾರುಕೊಂಡ, ಬಂಗಾರುನಾಯಕನದುರ್ಗ, ಬೆನಕವಜ್ರ, ರತ್ನಗಿರಿ, ಕನಕಾದ್ರಿ ಎಂಬ ಸ್ಥಳನಾಮಗಳನ್ನು ವಿವೇಚಿಸಿದಾಗ

ಹೊನ್ನಿನ ಮೂಲವನ್ನು ಸುಲಭವಾಗಿ ಗುರುತಿಸಬಹುದು. ಇದಕ್ಕೆ ಪೂರಕವಾಗಿ ಜಿಲ್ಲೆಯ ಕ್ರಿ.ಶ. ೧೨೦೯ರ ನಿಡುಗಲ್ಲು ಶಾಸನ[೨೪] ಕರ್ಣಾಟ ದೇಶದಲ್ಲೇ ಪ್ರಸಿದ್ಧಿಹೊಂದಿದ ಮುತ್ತಿನ ವ್ಯಾಪಾರಿಗಳನ್ನು, ಕ್ರಿ.ಶ. ೧೪೭೨ರ ಮಿಡಿಗೇಶಿ[೨೫] ಶಾಸನ ದೊಡ್ಡಮಲ್ಲಶೇಟ್ಟಿ, ಚಿಕ್ಕಮಲ್ಲಶೆಟ್ಟಿ ವಂಶಸ್ಥರು ಮುತ್ತಿನ ವ್ಯಾಪಾರ ಕೈಗೊಳ್ಳುತ್ತಿದ್ದನ್ನು ಉಲ್ಲೇಖಿಸುತ್ತದೆ. ಎ.ವಿ.ನರಸಿಂಹಮೂರ್ತಿ ಅವರು ಹೊನ್, ಪೊನ್, ಹೇಮ, ಸುವರ್ಣ, ಬಂಗಾರು ಎಂಬ ಪದಗಳಿರುವ ಸ್ಥಳನಾಮಗಳಲ್ಲಿ ಅಧ್ಯಯನ ಕೈಗೊಂಡರೆ ಚಿನ್ನದ ಗಣಿಗಾರಿಕೆ ಅಥವಾ ಉದ್ಯಮ ಪ್ರಾಚೀನ ಕಾಲದಿಂದಲೂ ನಡೆಯುತ್ತಿದ್ದ ಬಗೆಗೆ[೨೬] ತಿಳಿಯುತ್ತದೆ ಎಂದು ಅಭಿಪ್ರಾಯಟ್ಟಿದ್ದಾರೆ. ಏಕೆಂದರೆ ಕ್ರಿ.ಪೂ. ಎರಡನೆಯ ಶತಮಾನದಲ್ಲೇ ತುಮಕೂರು ಜಿಲ್ಲೆಗೆ ಸಮೀಪವಿರುವ ಕೋಲಾರದಲ್ಲಿ ಚಿನ್ನದ ಗಣಿಗಾರಿಕೆ[೨೭] ನಡೆಯುತ್ತಿದ್ದನ್ನು ಪಾಶ್ಚಾತ್ಯರು ಉಲ್ಲೇಖಿಸಿದ್ದಾರೆ. ಬಹುಶಃ ಇದರಿಂದಲೇ ಗಂಗರು ತಲಕಾಡಿನಲ್ಲಿ ರೋಮನ್ನರ ನಾಣ್ಯಗಳನ್ನು ನಕಲು ಮಾಡುತ್ತಿದ್ದರು ಎಂಬುದಕ್ಕೆ ಮಣ್ಣಿನ ಪಡಿಯಚ್ಚುಗಳು ದೊರೆತಿವೆ. ಹಾಗಾಗಿ ಜಿಲ್ಲೆಯಲ್ಲಿ ಚಿನ್ನದ ಉದ್ಯಮ ಇತ್ತೆನ್ನಲು ಈ ಅಂಶಗಳು ಸಸಹಾಯಕವಾಗುತ್ತವೆ. ಇದಕ್ಕೆ ಪೂರಕವಾಗಿ ಗಣಿ ಭೂವಿಜ್ಞಾನ ಸರ್ವೇಕ್ಷಣಾ ಇಲಾಖೆಯವರು ತುಮಕೂರಿನ ಬೆಳ್ಳಾವೆ, ಹಲಿಯೂರುದುರ್ಗ ಮೊದಲಾದೆಡೆ ಚಿನ್ನದ ಅದಿರನ್ನು, ಪಾವಗಡದಲ್ಲಿ ವಜ್ರದ ನಿಕ್ಷೇಪವನ್ನು[೨೮], ಪಾವಗಡದ ಗಡಿಗೆ ಹೊಂದಿಕೊಂಡ ೩೦ಕಿ.ಮೀ. ಅಂತರವಿರುವ ಆಂಧ್ರದ ಬಂಗಾರು ರಾಮಗಿರಿಯಲ್ಲಿ ಚಿನ್ನದ ಅದಿರನ್ನು ಪತ್ತೆ ಹಚ್ಚಿರುವುದು ಜಿಲ್ಲೆಯಲ್ಲಿ ಚಿನ್ನದ ಅದಿರಿನ ನಿಕ್ಷೇಪ ಇತ್ತೆಂಬುದನ್ನು ದೃಢಪಡಿಸುತ್ತದೆ. ಏಕೆಂದರೆ ಜಿಲ್ಲೆಯ ಬಹುತೇಕ ಗ್ರಾಮಸ್ಥರು ಮಳೆಯಾಶ್ರಿತ ಕೃಷಿ ಚಟುವಟಿಕೆಗಳಲ್ಲಿ ತೊಡಗಿರುವುದರಿಂದ ಅವರ ಆದಾಯದ ಮೂಲ ಇಷ್ಟೊಂದು ಪ್ರಮಾಣದ ಕೋಟೆ–ಕೊತ್ತಲಗಳ ನಿರ್ಮಾಣಕ್ಕೆ ಸಾಕಾಗುತ್ತಿರಲಿಲ್ಲ. ಆದುದರಿಂದಲೇ ಚಿನ್ನದ ಉದ್ಯಮಗಳಲ್ಲಿ ತೊಡಗಿರುತ್ತಿದ್ದದದ್ದು ಸ್ಪಷ್ಟವಾಗುತ್ತದೆ. ಹೀಗೆ ಗಳಿಸಿದ ಸಂಪತ್ತಿನಿಂದಲೇ ಇವರು ಕೋಟೆ–ಕೊತ್ತಲಗಳ ನಿರ್ಮಾಣವನ್ನು ಮಾಡುತ್ತಿದ್ದರು.

ಐತಿಹ್ಯಗಳು ಸಹ ಈ ಊಹೆಗೆ ಸಾಮೀಪ್ಯವಿರುವುದನ್ನು ಸ್ವಷ್ಟಪಡಿಸುತ್ತವೆ. ಕಡಗತ್ತೂರಿನ ಜನರು ಹಿಂದೆ ಶತ್ರುಗಳ ದಾಳಿಯನ್ನು ತಾಳಲಾರದೆ ಅವರ ಮೇಲೆ ಚಿನ್ನದ ಕೈಗಡಗಳನ್ನು ಎಸೆದರಂತೆ. ಕನ್ನಮೇಡಿಯಲ್ಲಿ ರೈತರು ಚಿನ್ನದ ಮೇಡಿಯನ್ನು ಹೊಂದಿದ ನೇಗಿಲಿನಿಂದ ಉಳುಮೆ ಮಾಡುತ್ತಿದ್ದರಂತೆ; ಒಮ್ಮೆ ಪಾಲುಕುಂಟೆ ಕಳ್ಳರು ಕನ್ನಮಾಡಿದ ಮೇಡಿಯಿಂದ ಈ ಊರಿಗೆ ಕನ್ನಮೇಡಿ ಎಂಬ ಹೆಸರು ಬಂದಿತೆಂದೂ, ದೊಡ್ಡಮಾಲೂರು ಮತ್ತು ಚಿಕ್ಕ ಮಾಲೂರು ಗ್ರಾಮಗಳಲ್ಲಿ ಚಿನ್ನದ ಮರಗಳಿಂದ ಅಕ್ಕಿಯನ್ನು ಕೇರುತ್ತಿದ್ದರಂತೆ, ಇವರಿಂದ ರತ್ನಗಿರಿಯ ನಾಯ್ಡು ವಂಶಜರು ಮೋಸದಿಂದ ಸಂಪತ್ತನ್ನೆಲ್ಲ ಕಿತ್ತುಕೊಂಡರೆಂದೂ, ಹೈದರಾಲಿ ಒಮ್ಮೆ ಸಿದ್ದರಬೆಟ್ಟದ ಮೂಲಕ ಪೆನುಗೊಂಡೆಗೆ ದಾಳಿ ಮಾಡುವ ಸಂದರ್ಭದಲ್ಲಿ ತನ್ನ ಆನೆಯ ಕಾಲಿಗಿರುವ ಕಬ್ಬಿಣದ ಸರಪಳಿಯು ಗಿಡಮೂಲಿಕೆಗಳ ಸ್ಪರ್ಶದಿಂದ ಬಂಗಾರವಾಗಿ

ರೂಪುಗೊಂಡಿತೆಂದೂ, ಬಂಗಾರನಾಯಕನಬೆಟ್ಟದಲ್ಲಿ ಬಂಗಾರುನಾಯಕನು ಏಳು ಕೊಪ್ಪರಿಗೆಗಳನ್ನು ಬಳುವಳಿಯಾಗಿ ಪಡೆದನೆಂಬಂತಹ ಐತಿಹ್ಯಗಳು ಚಿನ್ನದ ಗಣಿಗಾರಿಕೆ ಇತ್ತೆಂಬುದನ್ನು ದೃಢಪಡಿಸುತ್ತವೆ. ಹಾಗಾಗಿ ಚಿನ್ನದ ಅದಿರಿನ ಬಗೆಗೆ ವೈಜ್ಞಾನಿಕವಾಗಿ ಮತ್ತಷ್ಟು ಅಧ್ಯಯನಗಳು ನಡೆದಲ್ಲಿ ನೈಜ ಚಿತ್ರಣ ಮೂಡಿಬರಲು ಸಾಧ್ಯವಾಗುತ್ತದೆ. ಹೀಗೆ ಗ್ರಾಮಗಳು ಹಲವು ಮೂಲಗಳಿಂದ ಸಂಪಾದಿಸಿದ ಸಂಪತ್ತಿನ ಒಂದು ಭಾಗವನ್ನು ಊರಗೌಡ, ಪಾಳೆಯಗಾರ ಅಥವಾ ರಾಜನಿಗೆ ಸಲ್ಲಿಸಿ ಅವರಿಂದ ಗ್ರಾಮದ ಸುತ್ತಲೂ ಕಾಪುಗೋಡೆಯನ್ನು ನಿರ್ಮಿಸಿಕೊಳ್ಳುತ್ತಿದ್ದರು. ಜೊತೆಗೆ ಮುತ್ತಿನ ವ್ಯಾಪಾರಿಗಳು ಕೆರೆ-ಕಟ್ಟೆ, ದೇವಾಲಯ ಮೊದಲಾದವುಗಳಿಗಾಗಿ ಸಹಾಯಧನ ನೀಡಿರುವುದು ಜಿಲ್ಲೆಯ ಕವಡಗೆರೆ, ಆಲ್ಬೂರು, ಕೋಟನಾಯಕನಹಳ್ಳಿ, ಹೊಳವನಹಳ್ಳಿ, ಎಲಿಯೂರು, ನಿಟ್ಟೂರು, ಘಟಿಕರನಕೆರೆ, ಸಂಪಿಗೆ, ತೂಬಿನಕುಂಟೆ, ಶಿವರ, ಚಾಮನಹಳ್ಳಿ, ಅರಕೆರೆ, ತಿಪಟೂರು, ಹೆಗ್ಗೆರೆ, ಸಿರಾ[51] ಮೊದಲಾದ ಶಾಸನಗಳಿಂದ ದೃಢಪಟ್ಟಿದೆ. ಹಾಗಾಗಿ ಜಿಲ್ಲೆಯಲ್ಲಿ ದೊಡ್ಡ ಮಟ್ಟದಲ್ಲಿ ಮುತ್ತು, ರತ್ನಗಳ ವ್ಯಾಪಾರ ವ್ಯವಹಾರ ನಡೆಯುತ್ತಿತ್ತೆಂದು 'ತೆಂಕಣ ಐಯ್ಯಾವೊಳೆ' ಎಂಬ ವ್ಯಾಪಾರಿ ಕೇಂದ್ರಗಳಿಂದ ವೇದ್ಯವಾಗುತ್ತದೆ. ಇವರು ಜಿಲ್ಲೆಯ ೨೦೦ಕ್ಕೂ ಹೆಚ್ಚು ಗ್ರಾಮಗಳಲ್ಲಿ ಕೋಟೆ-ಕೊತ್ತಲಗಳನ್ನು ನಿರ್ಮಿಸಲು ಸಹಾಯ ಮಾಡಿದರೆಂಬುದನ್ನು ಅಲ್ಲಗೆಳೆಯಲಾಗದು.

ತುಮಕೂರು ಜಿಲ್ಲೆಯ ಬಹುತೇಕ ಗ್ರಾಮ ಮಟ್ಟದ ಕೋಟೆಗಳು ಕಳ್ಳಕಾಕರಿಂದ ರಕ್ಷಣೆ ಪಡೆದುಕೊಳ್ಳುವುದಕ್ಕಾಗಿ ನಿರ್ಮಿಸಲ್ಪಟ್ಟಿವೆ ಎಂಬುದು ಗಮನಾರ್ಹ ಸಂಗತಿಯಾಗಿದೆ. ಏಕೆಂದರೆ ಜಿಲ್ಲೆಯಲ್ಲಿ ಯಾವುದೇ ನದಿ ಸಂಚಯಗಳಿಲ್ಲದ ಕಾರಣ ಶ್ರಮಜೀವಿಗಳಿಂದ ಸಂಪತ್ತನ್ನು ಕಸಿದುಕೊಳ್ಳುವ ಜನರೇ ಹೆಚ್ಚಾಗಿರುತ್ತಿದ್ದರು. ಈ ಕಾರಣಕ್ಕಾಗಿ ಗ್ರಾಮದ ಸುತ್ತಲೂ ಇವರು ಕಾಪುಗೋಡೆಗಳನ್ನು ನಿರ್ಮಿಸಿಕೊಳ್ಳುತ್ತಿದ್ದರು. ಉದಾಹರಣೆಗೆ ಪಾವಗಡದ ಎರ್ರಗೊಲ್ಲ ಸಮುದಾಯದವರ ಕುರಿ ಮಂದೆಗಳ ಮೇಲೆ ನಿರಂತರವಾಗಿ ದಾಳಿ ಮಾಡುತ್ತಿದ್ದ ಪಂಜುಗಳ್ಳರನ್ನು ಹಿಮ್ಮೆಟ್ಟಿಸಿ ಅರ್ಧಕ್ಕೆ ನಿಂತಿದ ಕೋಟೆಯನ್ನು ಪೂರ್ಣಗೊಳಿಸಲು ವೆಂಟಪತಿಯು ಬಲ್ಲಪ್ಪನಾಯಕನಿಗೆ ಆದೇಶಿಸಿದನು. ಆದರೆ ಪಂಜುಗಳನ್ನು ಏಕೆ ಕಳ್ಳತನ ಮಾಡುತ್ತಿದ್ದರು ಎಂಬುದು ಕುತೂಹಲದ ಸಂಗತಿಯಾಗಿದೆ. ಜಿಲ್ಲೆಯ ಪಾಳೆಪಟ್ಟುಗಳು ಆಳ್ವಿಕೆ ಮಾಡುತ್ತಿದ್ದ ಕೋಟೆ-ಕೊತ್ತಲಗಳು ಬೆಟ್ಟಗಳಲ್ಲಿ ಇರುತ್ತಿದ್ದರಿಂದ ಸದಾ ಬೆಂಕಿಯ ಅವಶ್ಯಕತೆ ಇರುತ್ತಿತ್ತು. ಏಕೆಂದರೆ ಬೆಂಕಿ ಇರುವಲ್ಲಿಗೆ ಯಾವುದೇ ವನ್ಯಮೃಗಗಳು ಬರುತ್ತಿರಲಿಲ್ಲ. ಅಲ್ಲದೆ ಶತ್ರುಗಳ ದಾಳಿಯ ಸಂದರ್ಭದಲ್ಲಿ ಗುಪ್ತ ಮಾರ್ಗಗಳ ಮೂಲಕ ಹೊರ ಹೋಗಲು ಪಂಜುಗಳ ಅವಶ್ಯಕತೆ ಇರುತ್ತಿತ್ತು. ಕೆಲವೊಮ್ಮೆ ಬದಲಾದ ಯುದ್ಧನೀತಿಗಳಿಗೆ ಅನುಗುಣವಾಗಿ ತಮ್ಮ ಆರ್ಥಿಕ ಶಕ್ತಿಗನುಸಾರ ತಮ್ಮದೇ ಆದಂತಹ ತಂತ್ರಗಳನ್ನು ಸ್ಥಳೀಯವಾಗಿ ರೂಪಿಸಿಕೊಂಡಿದ್ದರು ಎಂಬುದು ಹಾಗಲವಾಡಿ ಪಾಳೆಯಗಾರರು ಬಿಜಾಪುರದ ರಣದುಲ್ಲಾಖಾನನನ್ನು ಸೋಲಿಸಲು ಹಳ್ಳಿಕಾರ್ ರಾಸುಗಳ ಕೋಡುಗಳಿಗೆ ಪಂಜುಗಳನ್ನು ಕಟ್ಟಿ ಶತ್ರು ಸೈನ್ಯದ ಮೇಲೆ ಹರಿಬಿಟ್ಟಿದ್ದರಿಂದ ವೇದ್ಯವಾಗುತ್ತದೆ. ಇಂತಹ ಹಲವು ಉದ್ದೇಶಗಳಿಗಾಗಿ

ಪಂಜುಗಳಿಗೆ ಬೇಡಿಕೆ ಇದ್ದಿದ್ದರಿಂದ ಅವುಗಳನ್ನು ಕಳ್ಳತನ ಮಾಡುವ ವರ್ಗವೇ ತುಮಕೂರು ಜಿಲ್ಲೆಯಲ್ಲಿತ್ತು. ಎಮ್ಮೆತಿಮ್ಮನಹಳ್ಳಿ ಗ್ರಾಮದಲ್ಲಿ ಕಳ್ಳಕಾಕರಿಂದ ರಕ್ಷಣೆ ಪಡೆಯಲು ಗ್ರಾಮಸ್ಥರೆಲ್ಲರೂ ಹಟ್ಟಿಯ ಸುತ್ತಲೂ ಗೋಡೆಯನ್ನು ನಿರ್ಮಿಸಿ ಸರತಿಯಂತೆ ಕೋಣಗಳಿಗೆ ಪಂಜನ್ನು ಕಟ್ಟಿ ಗ್ರಾಮದ ಸುತ್ತಲೂ ಕಾವಲು ಕಾಯುತ್ತಿದರೆಂದು, ಅದೇ ರೀತಿ ಕಡಗತ್ತೂರಿನ ಕೋಟೆಯು ಸಹ ಕಳ್ಳಕಾಕರಿಂದ ರಕ್ಷಣೆ ಪಡೆದುಕೊಳ್ಳುವುದಕ್ಕಾಗಿ ನಿರ್ಮಿಸಲ್ಪಟ್ಟದ್ದೆಂದು ಸ್ಥಳೀಯರ ಹೇಳಿಕೆಗಳಿಂದ ಸ್ಪಷ್ಟವಾಗುತ್ತದೆ.

ಹೊಯ್ಸಳರ ಕಾಲಕ್ಕಾಗಲೇ ಗ್ರಾಮಗಳ ಗೌಡಿಕೆಯು ಆರಂಭವಾಗಿದ್ದರಿಂದ ಗ್ರಾಮಗಳ ಶಾಂತಿ ಸುಭದ್ರತೆಗಾಗಿ ಕೋಟೆ ನಿರ್ಮಾಣ ಕಾರ್ಯವು ಗೌಡರ ಸುಪರ್ದಿಗೆ ಸೇರ್ಪಡೆಗೊಂಡಿತು. ಅದಕ್ಕಾಗಿ ಅವರಿಗೆ ಇಂತಿಷ್ಟು ಭೂಮಿಯನ್ನು ಮಾನ್ಯ ಮಾಡುತ್ತಿದ್ದ ಸಂಗತಿ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಇವರ ಕಾಲದ ಗೌಡಿಕೆಯನ್ನು ನೆರ್ಲೇಕೆರೆ, ಎರಕಟ್ಟೆ, ಬಿಜವರ, ಮೆಳೆಕೋಟೆ, ಮತ್ತಿಗಟ್ಟ, ಶೀತಕಲ್ಲು, ಕೊಡ್ಲಾಪುರ, ಹೇಚನೂರು, ವೋಟಕೆರೆ ಶಾಸನಗಳು[೩೦] ಸ್ಪಷ್ಟಪಡಿಸುತ್ತದೆ.

ವಿಜಯನಗರ ಕಾಲಘಟ್ಟದಲ್ಲಿ ೨೦ರಿಂದ ೩೦ ಕಿ.ಮೀಟರ್‌ಗೊಂದೊಂದು ಪಾಳೆಪಟ್ಟುಗಳು ಅಧಿಕಾರಕ್ಕೆ ಬಂದಿದ್ದರಿಂದ ಅವರಲ್ಲಿ ರಾಜ್ಯ ವಿಸ್ತರಣಾಕಾಂಕ್ಷೆ ಹೆಚ್ಚಾಗಿ ನಿರಂತರ ಸಂಘರ್ಷದಲ್ಲಿ ತೊಡಗುವಂತೆ ಮಾಡಿತು. ಆದುದರಿಂದಲೇ ಗ್ರಾಮ ಮಟ್ಟದಲ್ಲಿ ವಿಜಯನಗರ ಕಾಲಕ್ಕೆ ಕೋಟೆ-ಕೊತ್ತಲಗಳ ನಿರ್ಮಾಣ ಕಾರ್ಯ ಹೆಚ್ಚಾಯಿತು.[೩೧]

ಹೊಯ್ಸಳ ಮತ್ತು ವಿಜಯನಗರ ಕಾಲಘಟ್ಟದಲ್ಲಿ ಈಗಾಗಲೇ ಇದ್ದಂತಹ ಹಳ್ಳಿಗಳನ್ನು ಪುರವರ್ಗವಾಗಿ ದೇವಾಲಯಕ್ಕೋ ಇಲ್ಲವೆ, ಗೌಡರು, ಸ್ಥಳೀಯ ನಾಯಕರು, ಬ್ರಾಹ್ಮಣರಿಗೆ ದತ್ತಿ ನೀಡಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹೀಗೆ ಪುರವರ್ಗವಾದ ಪ್ರತಿ ಗ್ರಾಮವು ಕೋಟೆ-ಕೊತ್ತಲ ಹೊಂದಿರುತ್ತಿದ್ದವು. ಋಗ್ವೇದದಲ್ಲಿ ಅರಣ್ಯವಾಸಿ ಸಮುದಾಯಗಳಾದ ಋಷ್ಣ, ಪಿಪು, ಶಂಬರ ಎಂಬ ದಾಸರ ಪುರಗಳನ್ನು ಇಂದ್ರನು ನಾಶಪಡಿಸಿ ಪುರಂದರ ಎಂಬ ಬಿರುದನ್ನು ಗಳಿಸಿದ[೩೨] ಆದುದರಿಂದ ಪುರಗಳನ್ನು ಕೇವಲ ಪಟ್ಟಣ, ಗ್ರಾಮಗಳೆಂದು ಪರಿಗಣಿಸದೇ ಅವುಗಳನ್ನು ಕೋಟೆ ಗೋಡೆಯಿಂದ ಆವರಿಸಲ್ಪಟ್ಟ ಆವರಣ ಎಂಬುದಾಗಿ ಅರ್ಥೈಸುವುದು ಸೂಕ್ತವೆನಿಸುತ್ತದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ತುಮಕೂರು ಜಿಲ್ಲೆಯ ಪುರವರ್ಗಗಳನ್ನು ಈ ದೃಷ್ಟಿಕೋನದಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಪ್ರಮುಖವಾಗಿ ಇವರ ಕಾಲದ ಪುರವರ್ಗಗಳೆಂದರೆ ಸೋಮದೇವರಪಾಳ್ಯ-ಶ್ರೀಪುರ, ರಾಜವಂತಿ-ತಿರುಮಲಾಪುರ, ಗೊಲ್ಲನಕುಂಟೆ-ವೀರಭದ್ರಪುರ, ತುರುವೇಕೆರೆ-ವಿಜಯನರಸಿಂಹಪುರ, ಇಂಗಳಸಂತೆ-ವಿಜಯಗೋಪಾಳಪುರ, ಚೌಡರಹಳ್ಳಿ-ಚೌಡಾಪುರ, ಕೋಣನಕುರಿಕೆ-ವಿಠಲಾಪುರ, ಮಾರುಹೊಳೆ-ಪ್ರಸನ್ನಕೇಶವಪುರ, ಶೆಟ್ಟಿಕೆರೆ-ಶ್ರೀಭರಿತಪ್ರಕಾಶಪುರ, ಆದಿಗೌಡನಹಳ್ಳಿ-ಬ್ರಹ್ಮಪುರ, ಬುವನಹಳ್ಳಿ-ಜಗನ್ನಾಥಪುರ, ಬೆನಚಗೆರೆ-

ಬ್ರಹ್ಮದೇವಪುರ, ತಂಡಗ–ಶಂಕರನಾರಾಯಣಪುರ, ಹೊನ್ನುಡಿಕೆ–ನಾರಾಯಣಪುರ ಎಂಬಂತಹ ಹಲವು ಪುರವರ್ಗಗಳು ತುಮಕೂರು ಜಿಲ್ಲೆಯಲ್ಲಿ ಕಂಡುಬರುತ್ತವೆ

ಮಧ್ಯಕಾಲೀನ ಸಂದರ್ಭದಲ್ಲಿ ಬದಲಾದ ಯುದ್ಧನೀತಿಗಳಿಂದಾಗಿ ಗ್ರಾಮ ಮಟ್ಟದಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಕೋಟೆ–ಕೊತ್ತಲಗಳು ನಿರ್ಮಾಣವಾದವು. ಏಕೆಂದರೆ ಆರಂಭದಲ್ಲಿ ರಾಜನು ರಾಜನೀತಿಗೆ ವಿರುದ್ಧವಾಗಿ ಯಾವ ಗ್ರಾಮ ಸಮುದಾಯಗಳ ಮೇಲೂ ದಾಳಿ ಮಾಡುತ್ತಿರಲ್ಲ. ಆದರೆ ಮಧ್ಯಕಾಲೀನ ಸಂದರ್ಭದಲ್ಲಿ ನಿರಂತರವಾಗಿ ಸಂಘರ್ಷಗಳಲ್ಲಿ ತೊಡಗಲೇಬೇಕಾದಂತಹ ವಾತಾವರಣವನ್ನು ಸೃಷ್ಟಿಸಿತು. ಹಾಗಾಗಿ ಈ ಸಂರ್ಘಗಳಿಗೆ ಬೇಕಾದ ಸಂಪತ್ತನ್ನು ಪಡೆಯಲು ಗ್ರಾಮಗಳನ್ನು ದೋಚುವ ಕಾರ್ಯಕ್ಕೆ ಮುಂದಾದರು. ಆದುದರಿಂದಲೇ ಮರಾಠರು ಇತರರಿಂದ ತಮಗೆ ರಕ್ಷಣೆ ಬೇಕೆಂದರೆ ಸುಂಕವನ್ನು ತೆರಬೇಕೆಂಬ ನೀತಿಯನ್ನು ಜಾರಿಗೆ ತಂದರು. ಜಿಲ್ಲೆಯಲ್ಲಿ ಮರಾಠರ ದಾಳಿ ಹಲವು ಗ್ರಾಮಗಳಲ್ಲಿ ಕಾಪುಗೋಡೆಗಳು ನಿರ್ಮಾಣಗೊಳ್ಳುವಂತೆ ಮಾಡಿತು. ಹೈದರ್–ಟಪ್ಪುವಿನ ಕಾಲಕ್ಕೆ ಇವುಗಳ ಸಂಖ್ಯೆ ಮತ್ತಷ್ಟು ಹೆಚ್ಚಿತು. ಏಕೆಂದರೆ ಬ್ರಿಟೀಷರೊಂದಿಗೆ ಹೋರಾಡಲು ಅಧಿಕ ಪ್ರಮಾಣದ ಆದಾಯ ಮೂಲಗಳನ್ನು ಕೊನೆ ಕೊನೆಗೆ ಕಳೆದುಕೊಳ್ಳುತ್ತಾ ಬಂದಿದ್ದರಿಂದ ಗ್ರಾಮಗಳಿಂದ ಅನಿವಾರ್ಯವಾಗಿ ಸಂಪತ್ತನ್ನು ಪಡೆಯಲೇಬೇಕಾಗಿತ್ತು. ಮರಾಠ ಮತ್ತು ಟಿಪ್ಪುವಿನ ದಾಳಿಗಳು ಜಿಲ್ಲೆಯ ಹಲವು ಗ್ರಾಮಗಳಲ್ಲಿ ಕೋಟೆಗಳನ್ನು ನಿರ್ಮಿಸಿಕೊಳ್ಳುವಂತೆ ಮಾಡಿತು. ಈ ಕಾರಣಕ್ಕಾಗಿಯೇ ಜಿಲ್ಲೆಯ ಹಲವು ಗ್ರಾಮಗಳಲ್ಲಿ ಆಹಾರ ಧಾನ್ಯಗಳನ್ನು ಸಂಗ್ರಹಿಸುವ ಹಗೆವುಗಳು ಇಂದಿಗೂ ಕಂಡುಬರುತ್ತಿವೆ.

ಟಿಪ್ಪುವಿನ ನಂತರ ಮೈಸೂರು ಒಡೆಯರ ಕಾಲದಲ್ಲಿ ಜಿಲ್ಲೆಯ ಹಲವು ಗ್ರಾಮಗಳಲ್ಲಿ ರಾಜಕೀಯ ಅಭದ್ರತೆ ಮೊದಲಿಗಿಂತಲೂ ಹೆಚ್ಚಾಯಿತು. ಏಕೆಂದರೆ ಬ್ರಿಟೀಷರ ನಿರಂತರ ದಾಳಿಗಳು ಈ ವಾತಾವರಣವನ್ನು ಸೃಷ್ಟಿಸಿತು. ಈ ಪರಿಸ್ಥಿತಿ ಸ್ವಾತಂತ್ರ್ಯ ಭಾರತ ಉದಯಿಸಿದರೂ ಗ್ರಾಮಗಳಿಗೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯ ದೊರೆತಿರಲಿಲ್ಲ. ಗಾಂಧೀಜಿ ಗ್ರಾಮಗಳ ಅಭಿವೃದ್ಧಿಗೆ ಮೊದಲ ಆದ್ಯತೆ ನೀಡಿದ್ದು ಈ ಹಿನ್ನೆಲೆಯಿಂದಲೂ ಇದ್ದಿರಬಹುದು. ತುಮಕೂರು ಜಿಲ್ಲೆಯಲ್ಲಿನ ಗ್ರಾಮಗಳ ಪರಿಸ್ಥಿತಿಯೇನೂ ಇದಕ್ಕೆ ಹೊರತಾಗಿರಲಿಲ್ಲ. ಹಳೆಬಿಜ್ಜಳನಬೆಳ್ಳ, ಹೊಸಬಿಜ್ಜಳನಬೆಳ್ಳ, ಜೋಗಿಹಳ್ಳಿ, ಸತ್ತಿಗಾನಹಳ್ಳಿ, ಜಟ್ಟಿಅಗ್ರಹಾರ, ಎಮ್ಮೆತಿಮ್ಮನಹಳ್ಳಿ, ಕಂದಿಕೆರೆ ಮೊದಲಾದ ಗ್ರಾಮಗಳಲ್ಲಿ ಸ್ವಾತಂತ್ರ್ಯ ನಂತರವೂ ಕಳ್ಳಕಾಕರಿಂದ ರಕ್ಷಣೆ ಪಡೆಯಲು ಕೋಟೆಗಳಲ್ಲೇ ವಾಸಿಸುತಿದ್ದುದಾಗಿ ಇಂದಿಗೂ ಅಲ್ಲಿಯ ಹಿರಿಯ ತಲೆಮಾರಿನವರು ಹೇಳುತ್ತಾರೆ.

ಕೆಲವೊಮ್ಮೆ ಪಾಳೆಯಗಾರ ತಮ್ಮ ಸಂಸ್ಥಾನಕ್ಕೆ ಬೇಕಾದ ಮಡಕೆ, ಆಯುಧೋಪಕರಣ ಹಾಗೂ ಉಪ್ಪನ್ನು ತಯಾರಿಸಿಕೊಡುವ ಕುಲಕಸುಬು ಸಮುದಾಯಗಳಿಗೆ ಪ್ರತ್ಯೇಕವಾಗಿ ಹೊಸದಾದ ಗ್ರಾಮಗಳನ್ನು ನಿರ್ಮಿಸಿಕೊಟ್ಟು ಅವರ ರಕ್ಷಣೆಗಾಗಿ ಆ ಗ್ರಾಮದ ಸುತ್ತಲೂ ಕೋಟೆಯನ್ನು ಕಟ್ಟಿ ಒಬ್ಬ ಅಧಿಕಾರಿಯನ್ನು ನೇಮಿಸುತ್ತಿದ್ದರು. ಇಂದಿಗೂ ಆ ಕುಲಕಸುಬುದಾರ ಸಮುದಾಯಗಳ

ಹೆಸರಿನಲ್ಲಿಯೇ ಕುಂಬಾರಹಳ್ಳಿ, ಉಪ್ಪಾರಹಳ್ಳಿ, ಕೊಲಿಮೆಗೆರೆ ಎಂಬಂಥ ಹಲವು ಗ್ರಾಮಗಳು ಹಾಗೂ ಆ ಸ್ಥಳನಾಮದ ಕುರಿತಾದ ಐತಿಹ್ಯಗಳು ತುಮಕೂರು ಜಿಲ್ಲೆಯಲ್ಲಿ ಕಂಡುಬರುತ್ತವೆ. ಪ್ರಮುಖವಾಗಿ ಹಾಗಲವಾಡಿ ಪಾಳೆಯಗಾರರು ತಮ್ಮ ಸಂಸ್ಥಾನಕ್ಕೆ ಬೇಕಾಗುವಷ್ಟು ಪಾತ್ರೆ ಹಾಗೂ ಕಬ್ಬಿಣದ ಅದಿರನ್ನು ಶದ್ಧೀಕರಿಸಲು ಬೇಕಾದ ಮಣ್ಣಿನ ಕುಲುಮೆಗಳನ್ನು ತಯಾರಿಸಲು ಕುಂಬಾರ ಜನಾಂಗಕ್ಕೆ ಅವರ ಹೆಸರಿನಲ್ಲಿಯೇ ಕುಂಬಾರಹಳ್ಳಿ ಎಂಬ ಗ್ರಾಮವನ್ನು ನಿರ್ಮಿಸಿ ಕೋಟೆ ಕಟ್ಟಿಸಿದರೆಂದು ಅಲ್ಲಿನ ಐತಿಹ್ಯದಿಂದ ಸ್ಪಷ್ಟವಾಗುತ್ತದೆ.

ವಿಶೇಷವಾಗಿ ಜಿಲ್ಲೆಯಲ್ಲಿ ಹೊಸಹಳ್ಳಿ ಎಂಬ ಸ್ಥಳನಾಮ ಇರುವಲ್ಲೆಲ್ಲ ಕೋಟೆ-ಕೊತ್ತಲಗಳಿವೆ. ಬಹುಶಃ ಹಳೆಯ ಗ್ರಾಮವನ್ನು ಯಾವುದೋ ಕಾರಣಕ್ಕಾಗಿ (ಸ್ಥಳೀಯರ ಹೇಳಿಕೆಯಂತೆ ಅಡವಿಯಲ್ಲಿರುವ ಮೊಲ ಅಥವಾ ಚಿರತೆ ಗ್ರಾಮದ ಮಧ್ಯಪ್ರವೇಶ ಮಾಡಿತೆಂದೂ ಇಲ್ಲವೆ ನೀರಿನ ಮೂಲಗಳ ಬತ್ತಿಹೋಗುವಿಕೆಯು ಸಹಜವಾಗಿ ಅವರನ್ನು ಸ್ಥಳಾಂತರಗೊಳ್ಳುವಂತೆ ಮಾಡಿದ್ದಿರಬಹುದು. ಗ್ರಾಮವನ್ನು ಬಿಟ್ಟು ಹೊಸದಾದ ಪ್ರದೇಶದಲ್ಲಿ ಗ್ರಾಮವನ್ನು ನಿರ್ಮಿಸಿ ಕೋಟೆ ಕಟ್ಟಿಕೊಂಡಿದ್ದರಿಂದ ಈ ಗ್ರಾಮಕ್ಕೆ ಹೊಸಹಳ್ಳಿ ಎಂಬ ಹೆಸರು ಬಂದಿರಬಹುದು.

ಹೀಗೆ ಗ್ರಾಮ ಮಟ್ಟದಲ್ಲಿ ಹಲವು ಕಾರಣಗಳಿಗಾಗಿ ನಿರ್ಮಾಣವಾದ ಕೋಟೆ-ಕೊತ್ತಲಗಳು ಸಾಮಾನ್ಯ ಜನರಿಗೆ ತಮ್ಮ ಬದುಕಿನ ಭಾಗವಾಗಿದ್ದವು. ಕಡೂತಿ ಶಾಸನ ಜಿರಲೆ ಮಲ್ಲಮ್ಮ ಎಂಬಾಕೆ ಊರಿನ ಗೌಡನ ಮಗಳಿಂದ ೨೪೦೦ ವರಹಗಳನ್ನು ಸಾಲ ಪಡೆದು ಕೋಟೆ ಮತ್ತು ದೇವಾಲಯ ನಿರ್ಮಿಸಿದಳೆಂದೂ, ಆ ಸಾಲವನ್ನು ಬೆಣ್ಣೆ ಮಾರಿ ತೀರಿಸಿದಳೆಂದರೆ ಸಾಮಾನ್ಯ ಜನರಿಗೆ ಕೋಟೆಗಳೊಂದಿಗೆ ಇದ್ದ ಸಂಬಂಧ ತಿಳಿಯುತ್ತದೆ. ಜೊತೆಗೆ ಇವುಗಳನ್ನು ಪೂಜ್ಯ ಭಾವನೆಯಿಂದಲೂ ಕಾಣುತ್ತಿದ್ದುದ್ದಾಗಿಯೂ ಇಟ್ಟಿಗದಿಬ್ಬನಹಳ್ಳಿ ಶಾಸನ ಸ್ಪಷ್ಟಪಡಿಸುತ್ತದೆ.

ಜಿಲ್ಲೆಯ ಗ್ರಾಮ ಕೇಂದ್ರಿತ ಕೋಟೆಗಳ ವಾಸ್ತು ವಿನ್ಯಾಸವನ್ನು ಗಮನಿಸಿದರೆ ಕೇವಲ ಕೋಟೆಯ ಬಾಗಿಲು, ಕೋಟೆಯ ಹೆಸರಿನಲ್ಲಿರುವ ದೇವಾಲಯ, ಕೋಟೆಯ ಯಾವುದೋ ಒಂದು ಭಾಗ ಅಥವಾ ಕೋಟೆಓಣಿ ಎಂಬಂತಹ ಅವಶೇಷಗಳು ಮಾತ್ರ ಕಂಡುಬರುತ್ತವೆ. ಕೆಲವು ಗ್ರಾಮಗಳಲ್ಲಿ ಮಾತ್ರ ಹಾಳುಗೆಡವಲ್ಪಟ್ಟ ಕೋಟೆಯ ಅವಶೇಷಗಳನ್ನು ಕಾಣಬಹುದಾಗಿದೆ. ಬಹುತೇಕ ಗ್ರಾಮಗಳಲ್ಲಿ ಜನ ನಿಬಿಡತೆ ಹೆಚ್ಚಿದಂತೆ ಹಳೆಯ ಕೋಟೆ ಅವಶೇಷಗಳ ಮೇಲೆಯೇ ಹೊಸ ಗ್ರಾಮಗಳ ಪುನರ್‌ನಿರ್ಮಾಣ ಆಗಿರುವುದು ಕೋಟೆಯ ಪೂರ್ಣ ಚಿತ್ರಣವನ್ನು ನೀಡಲಾಗದಂತೆ ಮಾಡಿದೆ. ಉಳಿದಿರುವ ಅಲ್ಪಸ್ವಲ್ಪ ಅವಶೇಷಗಳನ್ನಾಧರಿಸಿ ಗ್ರಾಮ ಕೇಂದ್ರಿತ ಕೋಟೆಗಳು ಆಯತ, ಚೌಕ, ವೃತ್ತಕಾರವಾದ ವಿನ್ಯಾಸವನ್ನು ಹೊಂದಿದ್ದವು. ಸಾಮಾನ್ಯವಾಗಿ ಇವು ಒಂದೇ ಒಂದು ದ್ವಾರಬಾಗಿಲನ್ನು ಮಾತ್ರ ಹೊಂದಿರುತ್ತವೆ. ಕೋಟೆ ಗೋಡೆಗೆ ಹೊಂದಿಕೊಂಡಂತೆಯೇ ವಸತಿ ನಿವೇಶನಗಳಿರುತ್ತವೆ. ಈ ಕೋಟೆಯ ಆವರಣದೊಳಗೆ ೨೦ ರಿಂದ ೩೦ ವಸತಿಗಳನ್ನು ಮಾತ್ರ ಕಾಣಲು ಸಾಧ್ಯವಿರುತ್ತದೆ. ಸತ್ತಿಗಾನಹಳ್ಳಿ, ಕಂದಿಕೆರೆ, ಜೋಗಿಹಳ್ಳಿ,

ಗುಂಡಾರ್ಲಹಳ್ಳಿ, ರೆಡ್ಡಿಹಳ್ಳಿ, ಹಳೆಬಿಜ್ಜಳನಬೆಳ್ಳ, ಗರಣಿ, ದೊಡ್ಡಗುಣಿ ಮೊದಲಾದ ಹಳ್ಳಿಗಳಲ್ಲಿ ಈ ಮಾದರಿಯ ವಿನ್ಯಾಸ ಕಂಡುಬರುತ್ತದೆ. ಕೋಟೆಯ ದ್ವಾರದಲ್ಲಿ ದೇವಾಲಯವಿರದೆ ಬುಡ್ಡಕಲ್ಲು ಇರುತ್ತದೆ. ಗ್ರಾಮ ಮಟ್ಟದ ಕೋಟೆಗಳು ಕೆರೆ-ಕಟ್ಟೆಗಳ ಬಳಿಯಲ್ಲೇ ಇರುವುದರಿಂದ ಕೋಟೆಯ ಹೊರಬದಿಯಲ್ಲಿ ಬಾವಿಗಳನ್ನು ತೋಡಿ ಅವುಗಳಿಂದ ದಿನನಿತ್ಯದ ಕೆಲಸ ಕಾರ್ಯಗಳಿಗೆ ನೀರನ್ನು ಬಳಸಿಕೊಳ್ಳುತ್ತಿದ್ದರು.

೪.೪. ಬರುಜುಗಳು

ಗ್ರಾಮ ರಕ್ಷಣಾ ವಾಸ್ತುಗಿಂತಲೂ ಭಿನ್ನವಾದ ವಿನ್ಯಾಸ ಬುರುಜುಗಳಲ್ಲಿ ಕಂಡುಬರುತ್ತದೆ. ಗ್ರಾಮ ಮಟ್ಟದಲ್ಲಿ ಶತ್ರುಗಳ ಹಾವಳಿ ಬರುಜುಗಳಿರುವ ಪ್ರದೇಶಗಳಿಗಿಂತಲೂ ಕಡಿಮೆ ಮಟ್ಟದಲ್ಲಿರುತ್ತದೆ. ಇವುಗಳ ಹಿಂದಿನ ನಿರ್ಮಾಣದ ಉದ್ದೇಶ ಎರಡು ಗ್ರಾಮಗಳ ಮಧ್ಯೆ ಕಾಳಗ ನಡೆದಾಗ ಇಲ್ಲವೇ ಶತ್ರು ಪಾಳೆಯ ದಾಳಿ ಮಾಡಿದ ಸಂದರ್ಭದಲ್ಲಿ ಎತ್ತರವಾದ ಬುರುಜಿನ ಮೇಲೆ ಚಿಕ್ಕ ಮಕ್ಕಳನ್ನು, ಹೆಂಗಸರು, ಮುದುಕರು ಹಾಗೂ ತಮ್ಮ ಸಂಪತ್ತನ್ನು ಏಣಿಗಳ ಮೂಲಕ ಸಾಗಿಸಿ ಉಳಿದ ಪುರುಷರು ಶತ್ರುಗಳೊಂದಿಗೆ ಕಾದಾಡುತ್ತಿದ್ದರು. ಈ ಪದ್ಧತಿ ಕೇವಲ ಮೇಲ್ವರ್ಗದ ಸಮುದಾಯಗಳಿಗೆ ಮಾತ್ರ ಸೀಮಿತವಾಗಿದ್ದಂತೆ ಕಾಣುತ್ತದೆ. ಏಕೆಂದರೆ ಇವುಗಳ ನಿರ್ಮಾಣ ಖರ್ಚುದಾಯಕವಾಗಿದ್ದರಿಂದ ಸಾಮಾನ್ಯರು ಕೇವಲ ಕಾಮಗೋಡೆಗಳನ್ನು ಮಾತ್ರ ನಿರ್ಮಿಸಿಕೊಳ್ಳುತ್ತಿದ್ದರು. ಆದರೆ ಇವು ಗ್ರಾಮಗಳಷ್ಟು ವಿಶಾಲವಲ್ಲದ ಒಂದು ಎಕರೆ ಪ್ರದೇಶದಲ್ಲಿ ಮಾತ್ರ ಆಯಾಯ ಭೌಗೋಳಿಕ ಪರಿಸರಕ್ಕೆ ಅನುಗುಣವಾಗಿ ನಿರ್ಮಿಸಲ್ಪಟ್ಟಿವೆ. ಇವು ಆಯತ, ವೃತ್ತ, ಚೌಕ, ಅಂಡಾಕಾರ ವಿನ್ಯಾಸದಲ್ಲಿ ಒಂದು ಸುತ್ತಿನ ಕೋಟೆ ಗೋಡೆಯ ಒಳಗೆ ವೃತ್ತಾಕಾರದ ಸುಮಾರು ೭೦ರಿಂದ ೧೦೦ ಅಡಿ ಎತ್ತರವಾಗಿ ನಿರ್ಮಾಣಗೊಂಡಿವೆ. ಗಂಗಸಾಗರ, ತಾಯಗೊಂಡನಹಳ್ಳಿ, ಹೊಸಹಳ್ಳಿ (ನಿಡುಗಲ್ಲು ಹೋಬಳಿ), ದೇವರಹಳ್ಳಿ, ಜಾನಕಲ್ಲು, ಸರ್ಜೆ ಚಿನ್ನಪ್ಪನ ಹಳ್ಳಿ ಮೊದಲಾದ ಕಡೆ ಈ ರೀತಿಯ ಬುರುಜುಗಳು ಕಂಡುಬರುತ್ತವೆ.

ಈ ಬರುಜುಗಳ ಬಳಿಯೇ ಕಬ್ಬಿಣದ ಕುಲುಮೆಗಳು ದೊರೆತಿರುವುದರಿಂದ, ಅದರಲ್ಲೂ ತಾಯಗೊಂಡನಹಳ್ಳಿಯಲ್ಲಿ ಬುರುಜಿನ ನಿರ್ಮಾಣಕ್ಕೆ ಕಬ್ಬಿಣದ ಕಿಟ್ಟದ ಹೆಂಡೆಗಳನ್ನು ಬಳಸಿಕೊಂಡಿದ್ದಾರೆ. ಬಹುಶಃ ಹಿಂದೆ ಈ ಪ್ರದೇಶಗಳಲ್ಲಿ ಆಯುಧೋಪಕರಣ ತಯಾರಿಸುವ ಘಟಕಗಳು ಇದ್ದಿರಬಹುದು. ಆಯುಧ ತಯಾರಿಕಾ ಘಟಕಗಳ ಮೇಲೆ ಶತ್ರುಗಳು ನಿರಂತರವಾಗಿ ದಾಳಿ ಮಾಡುತ್ತಿದ್ದರಿಂದ ಆಯುಧಗಳ ರಕ್ಷಣೆಗಾಗಿಯೂ ಬುರುಜುಗಳನ್ನು ಕಟ್ಟಿಸಿರುವ ಸಾಧ್ಯತೆಗಳಿವೆ. ಕಿಟ್ಟದ ಹೆಂಡೆಗಳನ್ನು ಸಹ ಬುರುಜಿನ ನಿರ್ಮಾಣಕ್ಕೆ ಬಳಸಿಕೊಂಡಿರುವುದು ಕಂಡುಬರುತ್ತದೆ. ಕೆಲವೊಮ್ಮೆ ಇವು ವ್ಯಾಪಾರಿ ಕೇಂದ್ರಗಳಾಗಿಯೂ ಕಾರ್ಯ ನಿರ್ವಹಿಸಿರುವ ಉದಾಹರಣೆಗಳುಂಟು. ಏಕೆಂದರೆ ಬೆಲೆ ಬಾಳುವ ವಸ್ತುಗಳನ್ನು ಪ್ರತಿ ವಾರಕ್ಕೊಮ್ಮೆ ಎಲ್ಲಿಂದಲೋ ತಂದು ಮಾರಾಟ ಮಾಡುವುದಕ್ಕಿಂತ ಅಲ್ಲಿಯೇ ಅವುಗಳಿಗೆ ಭದ್ರತೆ ಒದಗಿಸಿದರೆ ಸಾಗಾಟಕ್ಕಾಗಿ ವ್ಯಯಿಸಬೇಕಾದ

ಅಗತ್ಯ ಇರುವುದಿಲ್ಲ. ಇವುಗಳನ್ನು ನೋಡಿಕೊಳ್ಳಲು ಕೇವಲ ಒಬ್ಬ ಕಿಲ್ಲೆದಾರನನ್ನು ನೇಮಿಸಿದರೆ ಸಾಕಾಗುತ್ತಿತ್ತು. ಏಕೆಂದರೆ ಒಬ್ಬನಿಂದಲೇ ಶತ್ರುಗಳನ್ನು ಎದುರಿಸಲು ಈ ಬುರುಜುಗಳು ನೆರವಾಗುತ್ತಿದ್ದವು. ಬುರುಜುಗಳ ವಾಸ್ತುವಿನ್ಯಾಸ, ಅವುಗಳಿಗೆ ಬಳಕೆಯಾದ ಮಾಧ್ಯಮವನ್ನು ಗಮನಿಸಿದರೆ ಸಾಮಾನ್ಯರಿಂದ ನಿರ್ಮಿಸಿದಂಥವುಗಳಲ್ಲ. ಇದರ ರಚನೆಯು ವ್ಯಾಪಾರಿವರ್ಗ ಇಲ್ಲವೇ ಶ್ರೀಮಂತ ಸಮುದಾಯಗಳಿಂದ ನೆರವಿದ್ದಾಗ ಮಾತ್ರ ಸಾಧ್ಯವಾಗುತ್ತದೆ.

ಬುರುಜುಗಳ ವಾಸ್ತು ಲಕ್ಷಣವನ್ನು ಗಮನಿಸಿದರೆ ಜಿಲ್ಲೆಯ ಪ್ರತಿ ಬುರುಜಿಗೂ ಸ್ಥಳೀಯವಾಗಿ ಸಿಗುವಂತಹ ಗ್ರಾನೈಟ್, ಕಾಡುಗಲ್ಲುಗಳನ್ನು ವ್ಯವಸ್ಥಿತವಾಗಿ ಆಯತ, ಚೌಕ, ತ್ರಿಭುಜ, ಚಪ್ಪಟೆ ಹೀಗೆ ಹಲವು ಕೋನಗಳಲ್ಲಿ ಕತ್ತರಿಸಿ, ಅವುಗಳನ್ನು ನುಣುಪುಮಾಡಿ ಬಳಸಲಾಗಿದೆ. ವೃತ್ತಾಕಾರದ ಬುರುಜಿನ ಸುತ್ತಲೂ ಕಾಪುಗೋಡೆಯನ್ನು ಅದಕ್ಕೆ ರಕ್ಷಣೆ ನೀಡುವ ಸಲುವಾಗಿ ನಿರ್ಮಿಸಲಾಗಿದೆ. ಏಕೆಂದರೆ ಬುರುಜಿನ ಮೇಲೆ ಸೀಮಿತ ಸ್ಥಳಾವಕಾಶ ಇರುತ್ತಿದ್ದರಿಂದ ಎಲ್ಲರನ್ನು ಏರಿಸಲು ಸಾಧ್ಯವಾಗುತ್ತಿರಲಿಲ್ಲ. ಜೊತೆಗೆ ಸೈನಿಕರ ಕೊರತೆ ನೀಗಿಸಲು ಗ್ರಾಮದ ಪುರುಷರಿಗೆ ಅಭೇದ್ಯತೆಯಿಂದ ಕೂಡಿದ ಕಾಪುಗೋಡೆ ಇದ್ದರೆ ಶತ್ರುಗಳ ವಿರುದ್ಧ ಹೋರಾಡಲು ಆನೆ ಬಲ ದೊರೆತಂತಾಗುತ್ತಿತ್ತು ಎಂಬ ಕಾರಣಕ್ಕಾಗಿ ಬುರುಜಿನ ಸುತ್ತಲೂ ಕಾಪುಗೋಡೆ ನಿರ್ಮಿಸಲಾಗುತ್ತಿತ್ತು. ಈ ಗೋಡೆಯನ್ನು ಸುಮಾರು ೫ ಮೀಟರ್‌ಗಿಂತಲೂ ಎತ್ತರವಾಗಿ ನಿರ್ಮಿಸುತ್ತಿದ್ದರು. ಅದಕ್ಕೆ ಹೊಂದಿಕೊಂಡಂತೆ ನಾಲ್ಕೈದು ವಸತಿ ಕಟ್ಟಡಗಳು ಹೊಂದಿಕೊಂಡಿರುತ್ತವೆ. ಸಾಮಾನ್ಯವಾಗಿ ಜಿಲ್ಲೆಯ ಯಾವುದೇ ಬುರುಜಿಗೂ ಪಾವಟಿಗೆ(ಮೆಟ್ಟಿಲು) ಇಲ್ಲ. ಆದರೆ ಗಂಗಸಾಗರದಲ್ಲಿ ಮಾತ್ರ ಬೃಹತ್ ಹೆಬ್ಬಂಡೆಯಲ್ಲಿ ಬುರುಜಿನ ಕಟ್ಟಡ ಸೇರಿಕೊಂಡಿರುವುದರಿಂದ ಆ ಹೆಬ್ಬಂಡೆಯ ಒಳಗೆ ಸುರಂಗ ಮಾರ್ಗದೋಪಾದಿಯಲ್ಲಿ ಮೇಲಕ್ಕೆರಲು ಹಾದಿಯನ್ನು ಬಿಡಲಾಗಿದೆ. ಪ್ರತಿ ಬುರುಜಿನ ಮೇಲೆಯೂ ಹೆಂಗಸರು, ಮಕ್ಕಳು, ಮುದುಕರು ತಂಗಲು ಹಾಗೂ ಶಸ್ತ್ರಾಸ್ತ್ರ, ಕಾದ ಎಣ್ಣೆ, ಅಂಬಲಿ, ನೀರನ್ನು ಇಡಲು ವೇದಿಕೆಯನ್ನು ಬಿಟ್ಟಿದ್ದಾರೆ. ಹೊರಗಿನವರಿಗೆ ಒಳಗಿರುವವರು ಕಾಣದಿರಲೆಂದು ಎದೆಮಟ್ಟದವರೆಗೂ ಕೈಪಿಡಿಗೋಡೆಯಿದೆ. ಈ ಬುರುಜಿನ ಒಳಭಾಗ ಸ್ಥಳಾವಕಾಶ ಕಲ್ಪಿಸಲೆಂದು ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದಿದ್ದಾರೆ. ಶತ್ರುಗಳು ಬುರುಜುಗಳ ಮೇಲೇರದಂತೆ ಸುತ್ತಲೂ ಇರುವ ಕಿಂಡಿಗಳ ಮೂಲಕ ಕಾದ ಎಣ್ಣೆ, ಅಂಬಲಿ, ನೀರನ್ನು ಸುರಿಯುತ್ತಿದ್ದರು. ಒಂದು ವೇಳೆ ಏಣಿಗಳ ಮೂಲಕ ಏರಲು ಮುಂದಾದರೆ ಅವುಗಳನ್ನು ಒಳಗಿನಿಂದ ಕೆಳಭಾಗಕ್ಕೆ ತಳ್ಳುತ್ತಿದ್ದರು. ಈ ಕಿಂಡಿಗಳನ್ನು ವೀಕ್ಷಣೆಗಾಗಿಯೂ, ಬಾಣ, ಬಂದೂಕುಗಳನ್ನು ಪ್ರಯೋಗಿಸಲು ಸಹ ಬಳಸಿಕೊಳ್ಳುತ್ತಿದ್ದರು.

ತುರ್ತು ಸಂದರ್ಭದಲ್ಲಿ ಕೆಲವರ ಪ್ರಾಣ, ಮಾನಹಾನಿಗಳನ್ನಾದರೂ ರಕ್ಷಿಸಿಕೊಳ್ಳುವಲ್ಲಿ ಬುರುಜುಗಳು ಮಹತ್ವದ ಪಾತ್ರವಹಿಸಿದ್ದವು ಎಂಬ ಅಂಶ ಅಲ್ಲಿಯೇ ದೊರೆತ ವೀರಗಾರರ ಗುಡಿಗಳಿಂದ ವೇದ್ಯವಾಗುತ್ತದೆ. ಆದುದರಿಂದ ಈ ಬುರುಜುಗಳ ಸುತ್ತಮುತ್ತಲ ಪರಿಸರದಲ್ಲಿ ಸಾಂಸ್ಕೃತಿಕ

ವೀರನಾಯಕರ ಯಶೋಗಾಥೆಗಳು ಐತಿಹ್ಯಗಳ ರೂಪದಲ್ಲಿ ಇಂದಿಗೂ ಜೀವಂತವಾಗಿವೆ. ಉದಾಹರಣೆಗೆ ತಾಯಗೊಂಡನಹಳ್ಳಿ ಸಮೀಪ ವೀರಗಾರರ ನೆನಪಿಗಾಗಿ ವೀರಗಾರರಗುಡಿ ಎಂಬ ಹಳ್ಳಿಯಿದ್ದು, ಅಲ್ಲಿ ಇಂದಿಗೂ ಅವು ಪೂಜೆಗೊಳ್ಳುತ್ತಿದೆ. ಅದೇ ರೀತಿ ಸರ್ಜೆ ಚೆನ್ನಪ್ಪನಹಳ್ಳಿ, ಹೊಸಹಳ್ಳಿಯ ಬುರುಜಿನ ಬಳಿಯೇ ವೀರಗಲ್ಲುಗಳು ಪೂಜೆಗೊಳ್ಳುತ್ತಿವೆ. ಹೀಗೆ ತುಮಕೂರು ಜಿಲ್ಲೆಯ ಪ್ರತಿಯೊಂದು ಕೋಟೆ–ಕೊತ್ತಲ, ಬುರುಜುಗಳ ಹಿಂದೆಯೂ ಒಂದೊಂದು ಮಹತ್ವಪೂರ್ಣ ಸಂಗತಿ ಅಡಗಿಕೊಂಡಿದೆ.

೪.೫ ತುಮಕೂರು ಜಿಲ್ಲೆಯ ಪ್ರಮುಖ ಕೋಟೆಗಳು

ಜಿಲ್ಲೆಯಲ್ಲಿ ಸುಮಾರು ೩೦೦ಕ್ಕೂ ಹೆಚ್ಚು ಕೋಟೆ–ಕೊತ್ತಲಗಳ ಅವಶೇಷಗಳು ಕಂಡುಬರುತ್ತವೆ. ಮೆಕೆಂಜಿಯ ಕೈಫಿಯತ್ತು ಮಧುಗಿರಿ ಪ್ರಾಂತ್ಯ ಒಂದರಲ್ಲೇ ೨೭೨ ಸ್ಥಳದುರ್ಗ, ಗಿರಿದುರ್ಗ, ಬುರುಜುಗಳಿದ್ದವೆಂದು ಉಲ್ಲೇಖಿಸುತ್ತದೆ. ಇದು ಈ ಪರಿಸರದಲ್ಲಿ ಪಾಳೆಪಟ್ಟುಗಳಿಗೆ ಕೋಟೆಗಳ ಬಗೆಗೆ ಇದ್ದಂತಹ ಅನಿವಾರ್ಯತೆಯನ್ನು ಸ್ಪಷ್ಟಪಡಿಸುತ್ತದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಅಧ್ಯಯನದ ಮಿತಿಯಿಂದ ಆಯಾಯ ಸಂಗತಿಗಳನ್ನು ಚರ್ಚಿಸುವಾಗ ಮಾತ್ರ ಜಿಲ್ಲೆಯ ಎಲ್ಲಾ ಕೋಟೆ ಕೊತ್ತಲಗಳನ್ನು ಬಳಸಿಕೊಳ್ಳಲಾಗಿದೆ. ಉಳಿದಂತೆ ಪ್ರಮುಖ ಎನಿಸುವ ಕೋಟೆಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ.

೧. ಇಟ್ಟಿಗದಿಬ್ಬನಹಳ್ಳಿ

ಉತ್ತರ ಭಾರತದಲ್ಲಿ ಕೋಟೆಗಳ ನಿರ್ಮಿತಿಯ ಕುರಿತಾದ ಚಾರಿತ್ರಿಕತೆಯನ್ನು ಮಗಧ ಸಾಮ್ರಾಜ್ಯದಿಂದ ಗುರುತಿಸಿದರೆ, ಕರ್ನಾಟಕದಲ್ಲಿ ಶಾತವಾಹನರಿಂದ ಆರಂಭವಾಯಿತೆಂದು ಸನ್ನತಿ, ಬನವಾಸಿ, ಚಂದ್ರವಳ್ಳಿ ಉತ್ಖನನಗಳಿಂದ ತಿಳಿಯುತ್ತದೆ. ಆದರೆ ಮೌರ್ಯ ಮತ್ತು ಶಾತವಾಹರ ಕಾಲಘಟ್ಟದಲ್ಲಿ ತುಮಕೂರು ಜಿಲ್ಲೆಯನ್ನು ಒಳಗೊಂಡಂತೆ ದಕ್ಷಿಣ ಕರ್ನಾಟಕದಲ್ಲಿ ಇನ್ನೂ ಬೃಹತ್ ಶಿಲಾಯುಗ ಸಂಸ್ಕೃತಿ ಜೀವಂತಿಕೆಯಿಂದ ಕೂಡಿತ್ತು. ಬೃಹತ್ ಶಿಲಾಯುಗದ ಸಂಸ್ಕೃತಿಯ ಜನರೊಂದಿಗೆ ಮೌರ್ಯ, ಶಾತವಾಹನರು ವೈವಾಹಿಕ ಸಂಬಂಧವನ್ನು ಹೊಂದಿದ್ದರೆಂದು ಲಕ್ಷ್ಮಣ್ ತೆಲಗಾವಿ ಅವರು ಪ್ರತಿಪಾದಿಸಿದ್ದರಲ್ಲಿ ಸತ್ಯಾಂಶವಿದೆ. ಏಕೆಂದರೆ ಜಿಲ್ಲೆಯಲ್ಲಿ ದೊರೆಯುವ ಮೌರ್ಯರ ಮಟ್ಟಿ, ಪಾಂಡವರ ಗುಟ್ಟಿ ಎನ್ನುವಂತಹ ಸ್ಥಳನಾಮಗಳು ಬೃಹತ್ ಶಿಲಾಯುಗ ಸಂಸ್ಕೃತಿಯ ಪ್ರಾಚ್ಯಾವಶೇಷಗಳ ಮೇಲೆ ಬೆಳಕು ಚೆಲ್ಲುತ್ತವೆ. ಈ ಹಿನ್ನೆಲೆಯಲ್ಲಿ ಇಟ್ಟಿಗದಿಬ್ಬನಹಳ್ಳಿ ಮತ್ತು ಪುಲಮಾಚಿಗಳಲ್ಲಿ ಶಾತವಾಹನರ ಕಾಲಕ್ಕೆ ಸಂಬಂಧಿಸಿದಂತೆ ಇದ್ದಿರಬಹುದಾದ ಕೋಟೆಯ ಬಗೆಗೆ ಅಲ್ಲಿನ ಶಾಸನ, ಐತಿಹ್ಯ, ಪ್ರಾಚ್ಯಾವಶೇಷಗಳಿಂದ ಸ್ಪಷ್ಟತೆ ನೀಡಲು ಸಾಧ್ಯವಿದೆ. ವಿಜಯನಗರ ಕಾಲಕ್ಕೆ ಸೇರಿದ ಇಟ್ಟಿಗದಿಬ್ಬನಹಳ್ಳಿಯ ಶಾಸನ[೩೩] ಅಲ್ಲಿಯ ಐತಿಹ್ಯವನ್ನು ದಾಖಲಿಸಿದೆ. ಇದು ಇಟ್ಟಿಗದಿಬ್ಬನಹಳ್ಳಿಯ ಕೋಟೆಯನ್ನು ಪಾಂಡವ ಕುಲದ ಧರ್ಮರಾಯ, ಅರ್ಜುನ, ಭೀಮ, ನಕುಲ, ಸಹದೇವ ಮತ್ತು ಅರ್ಜುನನ ಮಗ ಅಭಿಮನ್ಯು ಆಳ್ವಿಕೆ ಮಾಡಿರುವರೆಂದು ಉಲ್ಲೇಖಿಸುತ್ತದೆ.

ಸ್ಥಳೀಯ ಐತಿಹ್ಯವು ಸಹ ಇದನ್ನೇ ಪುಷ್ಟೀಕರಿಸುತ್ತದೆ. ಪಾಂಡವರಿಂದ ಆಳ್ವಿಕೆಗೊಳಪಟ್ಟ ಕೋಟೆ ಎಂದು ಗುರುತಿಸಲ್ಪಡುವ ಪ್ರದೇಶ ಮೂಲತಃ ಬೃಹತ್ ಶಿಲಾಯುಗ ಸಂಸ್ಕೃತಿಯ ವಸತಿ ನೆಲೆಯಾಗಿದೆ. ಅಂದರೆ ಇಲ್ಲಿಯ ಕೋಟೆ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರಿಂದಲೇ ನಿರ್ಮಾಣಗೊಂಡಿತ್ತು ಎಂಬ ಸಂದೇಹ ಸಹಜವಾಗಿ ಏರ್ಪಡುವಂತೆ ಮಾಡುತ್ತದೆ. ಅದಕ್ಕೆ ಪೂರಕವಾಗಿ ಅಲ್ಲಿಯೇ ಇಟ್ಟಿಗೆಯ ದಿಬ್ಬ ಇರುವುದು ಶಾತವಾಹನ ಕಾಲಘಟ್ಟವನ್ನು ಗುರುತಿಸುತ್ತದೆ. ಕರ್ನಾಟಕದಲ್ಲಿ ಇಟ್ಟಿಗೆ ಕೋಟೆಯ ನಿರ್ಮಾಣ ಕಾರ್ಯ ಶಾತವಾಹನ ಮತ್ತು ಕದಂಬರ ಕಾಲಘಟ್ಟದಿಂದ ಆರಂಭವಾಯಿತೆಂದು ಸನ್ನತಿ ಮತ್ತು ಬನವಾಸಿ ಕೋಟೆಯ ಪ್ರಾಚ್ಯಾವಶೇಷಗಳಿಂದ ವೇದ್ಯವಾಗುತ್ತದೆ. ಹಾಗಾಗಿ ಇಟ್ಟಿಗದಿಬ್ಬನಹಳ್ಳಿಯಲ್ಲಿ ಐತಿಹ್ಯ ಮತ್ತು ಶಾತವಾಹನರ ಸಮಕಾಲೀನ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಶಾತವಾಹನರ ಮೇಲೆ ಬೆಳಕು ಚೆಲ್ಲುವುದರಿಂದ, ಅಲ್ಲಿರುವಂತಹ ಇಟ್ಟಿಗೆಯ ಕೋಟೆಯು ಸಹ ಶಾತವಾಹನರ ಕಾಲಕ್ಕೆ ಸೇರಿದ್ದಿರಬಹುದು. ಆದರೆ ಇಂದು ಬಹುತೇಕ ಕೋಟೆಯ ಭಾಗ ಪ್ರಕೃತಿ ವಿಕೋಪ ಮತ್ತು ಮನುಷ್ಯನ ಸ್ವಾರ್ಥಕ್ಕೆ ಸಿಲುಕಿ ಅವಸಾನದ ಹಾದಿ ಹಿಡಿದಿದೆ.

ಬೃಹತ್ ಶಿಲಾಯುಗದ ಜನರಿಗೆ ಕಬ್ಬಿಣದ ತಂತ್ರಜ್ಞಾನ ಗೊತ್ತಿತ್ತೆಂದು ಅವರ ಕಾಲದ ಶಿಲಾಗೋರಿಗಳ ರಚನೆಯಿಂದ ತಿಳಿಯುತ್ತದೆ. ಜೊತೆಗೆ ಆ ಸಮುದಾಯ ದೃಢಕಾಯವಾದ ದೇಹ ರಚನೆಯನ್ನು ಹೊಂದಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದುದರಿಂದಲೇ ಪ್ರಾಚೀನ ಸಾಹಿತ್ಯ ಕೃತಿ, ಶಾಸನಗಳಲ್ಲಿ ಕರ್ಣಾಟ ಬಲದ ಶೌರ್ಯ, ಸಾಹಸಗಳ ವರ್ಣನೆಯನ್ನು ಕಾಣಲು ಸಾಧ್ಯವಾಗಿರುವುದು. ಈ ಕಾರಣಕ್ಕಾಗಿಯೇ ಉತ್ತರದ ಸಾಮ್ರಾಜ್ಯಗಳು ದಕ್ಷಿಣದ ಸಮುದಾಯಗಳನ್ನು ಓಲೈಸಿಕೊಳ್ಳಲು ಪ್ರಯತ್ನಿಸುತ್ತಿದದ್ದು. ಇದರ ಕುರುಹಾಗಿಯೇ ಇಟ್ಟಿಗದಿಬ್ಬನಹಳ್ಳಿಯ ಕೋಟೆಯನ್ನು ಬೃಹತ್ ಶಿಲಾಯುಗದ ಜನರ ರಕ್ಷಣೆಗಾಗಿ ಶಾತವಾಹನರು ಕಟ್ಟಿಸಿಕೊಟ್ಟಿರಬಹುದು ಎಂಬ ಇಟ್ಟಿಗದಿಬ್ಬನಹಳ್ಳಿ ಶಾತವಾಹನರ ಮೇಲೆ ಬೆಳಕು ಚೆಲ್ಲುತ್ತದೆ. ಇಟ್ಟಿಗ ಎಂಬುದು ತೆಲುಗು ಭಾಷೆಯಲ್ಲಿ ಇಟ್ಟಿಗೆ ಎಂಬ ಅರ್ಥವನ್ನು ನೀಡುತ್ತದೆ. ದಿಬ್ಬ ಎಂಬುದು ಇಟ್ಟಿಗೆಯ ರಾಶಿ; ಒಂದೆಡೆ ಬಿದ್ದಿರುವಂಥದ್ದನ್ನು ಸೂಚಿಸುತ್ತದೆ. ಸಾಮಾನ್ಯವಾಗಿ ಕರ್ನಾಟಕದಲ್ಲಿ ಇಟ್ಟಿಗೆಯ ಪರಿಕಲ್ಪನೆ ಶಾತವಾಹನರಿಂದ ಆರಂಭವಾಗಿರುವುದರಿಂದ, ಇಲ್ಲಿ ದೊರೆತಿರುವ ಇಟ್ಟಿಗೆಯ ಅವಶೇಷಗಳಿಗೂ ಶಾತವಾಹನರಿಗೂ ಸಂಬಂಧ ಇರುವ ಸಾಧ್ಯತೆಯಿದೆ.

ಇಟ್ಟಿಗದಿಬ್ಬನಹಳ್ಳಿಯ ಪಶ್ಚಿಮಕ್ಕೆ ೧೦ ಕಿ.ಮೀ. ಅಂತರದಲ್ಲಿ ಪುಲಮಾಚಿ ಎನ್ನುವ ಗ್ರಾಮವಿದ್ದು, ಈ ಗ್ರಾಮವನ್ನು ವಸಿಷ್ಠಪುತ್ರ ಪುಲಮಾಯಿ ನಿರ್ಮಿಸಿದ್ದರಿಂದ ಅದಕ್ಕೆ ಪುಲಮಾಚಿ ಎಂಬ ಹೆಸರು ಬಂದಿದೆ ಎಂದು ಅಲ್ಲಿಯ ಐತಿಹ್ಯದಿಂದ ತಿಳಿದುಬರುತ್ತದೆ. ಅಂದರೆ ಪುಲಮಾಯಿಯ ಹೆಸರಿನಲ್ಲಿ 'ಯಿ' ಅಪಭ್ರಂಶಗೊಂಡು 'ಚಿ' ಎಂಬುದು ಸೇರ್ಪಡೆಗೊಂಡಿರಬೇಕು. ಕ್ರಮೇಣ ಅದು ಜನಪದರ ಆಡುಮಾತಿನಲ್ಲಿ 'ಪುಲಮಾಚಿ' ಎಂಬ ಕರೆಯಲ್ಪಟ್ಟಿತು. ಹೀಗೆ ಈ ಪರಿಸರದ

ಸುತ್ತಲೂ ಶಾತವಾಹನರಿಗೆ ಸಂಬಂಧಿಸಿದ ಮೌಖಿಕ ಸಾಹಿತ್ಯದ ಕುರಿತು ಉಲ್ಲೇಖಗಳು ಕ್ರಿ.ಶ.೪-೫ನೆಯ ಶತಮಾನದ(ಕಡಗತ್ತೂರು) ಗಂಗರ ಶಾಸನಗಳು ದೊರೆಯುತ್ತವೆ. ಹಾಗಾಗಿ ಇದು ಪ್ರಾಚೀನ ಕಾಲದಿಂದಲೂ ಸಾಂಸ್ಕೃತಿಕವಾಗಿ ಶ್ರೀಮಂತಿಕೆಯಿಂದ ಕೂಡಿತ್ತು. ಪುಲಮಾಚಿಯಲ್ಲಿರುವ ಮಹಾನಾಡ ಪ್ರಭುಗಳ ಕಾಲದ ಕೋಟೆಗಳು ಇದ್ದರೂ ಅದಕ್ಕೂ ಹಿಂದೆಯೇ ಇಟ್ಟಿಗೆಯ ಕೋಟೆ ಬೆಟ್ಟದ ಕೆಳಗೆ ಇದ್ದಿತ್ತೆಂದು ಕ್ರಮೇಣ ಗ್ರಾಮ ವಿಸ್ತರಣೆಯಾದಂತೆ ಆ ಕೋಟೆಗೆ ಬಳಸಿಕೊಂಡಂತಹ ಇಟ್ಟಿಗೆಗಳಿಂದಲೇ ಇಂದಿನ ಮನೆಗಳನ್ನು ನಿರ್ಮಿಸಿಕೊಳ್ಳಲಾಯಿತೆಂದು ಸ್ಥಳೀಯರು ಹೇಳುತ್ತಾರೆ. ಇಲ್ಲಿಯೂ ಸಹ ಶಾತವಾಹನರ ಕಾಲದ ಕೋಟೆ ಇದ್ದಿರಬಹುದಾದ ಸಾಧ್ಯತೆಯಿದೆ. ವಿಶೇಷವಾಗಿ ಈ ಪರಿಸರದಲ್ಲಿ ಇಟ್ಟಿಗೆಯ ಕಟ್ಟಡಗಳು ಇದ್ದವು ಎನ್ನಲು ಹಲವು ಗ್ರಾಮಗಳಲ್ಲಿ ಕಂಡುಬರುವ ಐತಿಹ್ಯಗಳಿಂದ ಸ್ಪಷ್ಟವಾಗುತ್ತದೆ. ಆದುದರಿಂದ ಇಟ್ಟಿಗದಿಬ್ಬನಹಳ್ಳಿಯು ಇಟ್ಟಿಗೆ ತಯಾರಿಸುವ ಕೈಗಾರಿಕಾ ನೆಲೆಯಾಗಿತ್ತು ಎಂಬುದನ್ನು ಇವು ಸ್ಪಷ್ಟಪಡಿಸುತ್ತವೆ.

೨. ನಿಡುಗಲ್ಲು

ಪಾವಗಡ ತಾಲೂಕು ಕೇಂದ್ರದಿಂದ ಪಶ್ಚಿಮಕ್ಕೆ ೨೫ ಕಿ.ಮೀ. ದೂರದಲ್ಲಿರುವ ನಿಡುಗಲ್ಲು ಪ್ರದೇಶವು ಪ್ರಾಗಿತಿಹಾಸ ಕಾಲದಿಂದಲೂ ಜನವಸತಿ ಕೇಂದ್ರವಾಗಿತೆಂಬುದು ಇಲ್ಲಿ ದೊರೆತ ಪ್ರಾಚ್ಯಾವಶೇಷಗಳಿಂದ ದೃಢಪಟ್ಟಿದೆ. ಚಾರಿತ್ರಿಕವಾಗಿ ಸುಮಾರು ೭೦೦ ವರ್ಷಗಳಿಗೂ ಹೆಚ್ಚು ಕಾಲ ಸಣ್ಣ ಮನೆತನ ಮತ್ತು ಪಾಳೆಪಟ್ಟುಗಳ ಆಡಳಿತ ಕೇಂದ್ರವಾಗಿತ್ತು ಎಂಬುದಕ್ಕೆ ಅವರು ಬಿಟ್ಟುಹೋದ ಕೋಟೆ-ಕೊತ್ತಲ, ದೇವಾಲಯ, ಶಾಸನ ಕೆರೆ-ಕಟ್ಟೆ ಮೊದಲಾದ ಅವಶೇಷಗಳಿಂದ ವೇದ್ಯವಾಗುತ್ತದೆ. ನಿಡುಗಲ್ಲು ಪ್ರದೇಶವನ್ನು ಚೋರಕಥೆಯಲ್ಲಿ 'ನೀಲಾವತಿಪಟ್ಟಣ' ಎಂದೂ, ಹರಿವಂಶದ ಶ್ರಾದ್ಧಫಲವನ್ನು ಹೇಳುವಾಗ 'ಕಾಳಾಂಜನಗಿರಿ' ಎಂದೂ, ಶ್ರೀರಾಮಚಂದ್ರನೇ ಇಲ್ಲಿಯ ಕಾಳಹಸ್ತೇಶ್ವರನನ್ನು ಪೂಜೆಗೈದನೆಂದೂ[೩೪] ಹೇಳುವ ಪ್ರತೀತಿಗಳು ಇವೆ. ಕ್ರಿ.ಶ. ೭೫೦ರ ತಮಿಳುನಾಡಿನ ಕಡಲೂರು ಶಾಸನ[೩೫] ಗಂಗರ ಶ್ರೀಪುರುಷನ ಮಗನಾದ ಎರೆಯಪ್ಪನು ನೊಳಂಬರ ಗಡಿದುರ್ಗವಾದ ಇರಿಗಲ್ವಾಡಿ(ನಿಡುಗಲ್ಲು)ಯ ಮೇಲೆ ದಾಳಿ ಮಾಡಿದ ಕುರಿತು ಸಿಗುವ ಉಲ್ಲೇಖ ನಿಡುಗಲ್ಲು ಕೋಟೆಯನ್ನು ತಿಳಿಸುವ ಅತ್ಯಂತ ಪ್ರಾಚೀನ ದಾಖಲೆಯಾಗಿದೆ. ಅದೇ ರೀತಿ ಶ್ರವಣಗುಡಿಯ[೩೬] ಶಾಸನೋಕ್ತ ವೀರಗಲ್ಲು ಏರಿಗಲ್ವಾಡಿ-೬೦೦ ಪ್ರಾಂತ್ಯವನ್ನು ಚೋಳ ಧನುಂಜಯನು ಆಳ್ವಿಕೆ ಮಾಡುತ್ತಿದ್ದ ಬಗ್ಗೆ ಉಲ್ಲೇಖಿಸುತ್ತದೆ. ಕಡಲೂರಿನ ಶಾಸನದಲ್ಲಿ ಉಲ್ಲೇಖವಿರುವ ಗಡಿದುರ್ಗವೂ ಸಹ ಇದೇ ಆಗಿದೆ. ಏರಿಗಲ್‌ವಾಡಿ ಎಂಬ ನಿಷ್ಪತ್ತಿಯನ್ನು ವಿವೇಚಿಸಿದರೆ ಏರಿ ಎಂಬುದು ಏರುವುದು; ಕಡಿದಾದ ಬೆಟ್ಟದಲ್ಲಿ ಮೇಲೆರುವುದು ಎಂಬ ಅರ್ಥವನ್ನು ನೀಡುತ್ತದೆ. ಗಲ್ ಎಂದರೆ ಕಲ್ಲು ಎಂಬ ಅರ್ಥವಿದ್ದು, ವಾಡಿ ಎಂದರೆ ವಾಡೆ; ಕಿಲ್ಲೆ; ಕೋಟೆ ಎಂಬ ಅರ್ಥ ನೀಡುತ್ತದೆ. ಹಾಗಾಗಿ ಏರಿಗಲ್ವಾಡಿ ಎಂದರೆ ನೀಡಿದಾದ ಬೆಟ್ಟದ ಮೇಲಿರುವ ಕೋಟೆ ಎಂಬ ಅರ್ಥ ಬರುತ್ತದೆ. ನಿಡುಗಲ್ಲು ಕೋಟೆಯೂ ಸಹ ಎತ್ತರದ ಬೆಟ್ಟದ ಮೇಲೆ ನಿರ್ಮಿಸಲ್ಪಟ್ಟಿದ್ದು,

ನೊಳಂಬರ ರಾಜಧಾನಿ ಹೆಂಜೇರಿಗೆ ಗಡಿ ಭಾಗದಲ್ಲಿ ಇರುವುದರಿಂದ ಬಹುಶಃ ಈ ನಿಡುಗಲ್ಲು ಪ್ರದೇಶವೇ ಏರಿಗಲ್ವಾಡಿ ಆಗಿರುವ ಸಾಧ್ಯತೆಗಳಿವೆ.

ಧನುಂಜಯನ ವಂಶಜರೇ ಆದ ಚೋಳರು ನಿಡುಗಲ್ಲು ಪ್ರದೇಶದಲ್ಲಿ ಆಳ್ವಿಕೆ ನಡೆಸಿ ಸಾಂಸ್ಕೃತಿಕವಾಗಿ ಮಹತ್ವದ ಕೊಡುಗೆ ನೀಡಿದ್ದರಿಂದ ಕ್ರಮೇಣ ಅವರು ನಿಡುಗಲ್ಲು ಚೋಳರೆಂದು ಪ್ರಸಿದ್ಧಿಗೆ ಬಂದದ್ದು ಶಾಸನಗಳಿಂದ ತಿಳಿಯುತ್ತದೆ. ಚೋಳ ಅರಸ ಮೊದಲನೆಯ ಇರುಂಗೋಳನು ಕ್ರಿ.ಶ. ೧೧೦೬ರಲ್ಲಿ ನಿಡುಗಲ್ಲು ದುರ್ಗವನ್ನು ಬಲಪಡಿಸಿ ಅದರ ರಕ್ಷಣೆಗಾಗಿ ತನ್ತ್ರನಮಣನನ್ನು[೫೭] ನೇಮಿಸಿದ್ದನು. ಈತನ ನಂತರ ಇಮ್ಮಡಿ ಇರುಂಗೋಳನು ನಿಡುಗಲ್ಲು ಕೋಟೆಯು ಆಕಾಶದ ಮೋಡಗಳನ್ನು ತಾಗುತ್ತಿದೆಯೋ ಎನ್ನುವಷ್ಟು ಎತ್ತರದಲ್ಲಿ ನಿರ್ಮಾಣಗೊಂಡಿತ್ತೆಂದು ಆತನ ನಿಡುಗಲ್ಲು ಶಾಸನವು[೫೮] ವರ್ಣಿಸುತ್ತದೆ. ಅಂದರೆ 'ಕಾಳಾಂಜನವೆಂಬುದಿರುಂಗೋಳನ ಗಿರಿದುರ್ಗವಂತದ ಭ್ರುಂಕಷತಾ ಭೀಳವತರ ಚೂಳವದರುತ್ತಾಳೆತೆಯನೆ ನೋದಿಧಾತ್ರಿ ನಿಡುಗಲ್ಲೆಂಗುಂ' ಎಂಬುದಾಗಿ ಉಲ್ಲೇಖಿಸುತ್ತದೆ. ಇಮ್ಮಡಿ ಇರುಂಗೋಳನ ಉತ್ತರಾಧಿಕಾರಿಯಾಗಿ ಅಧಿಕಾರ ವಹಿಸಿಕೊಂಡ ಮುಮ್ಮಡಿ ಇರುಂಗೋಳನು ತನ್ನ ಮಂತ್ರಿ ಬಿಚಿಯ ನೆರವಿನಿಂದ ನಿಡುಗಲ್ಲು ದುರ್ಗವನ್ನು ಬಲಪಡಿಸಿ ಬ್ರಹ್ಮಗಿರಿಯವರೆಗೂ ಗಡಿದುರ್ಗಗಳನ್ನು ನಿರ್ಮಿಸಿದನೆಂದು ಬ್ರಹ್ಮಗಿರಿ ಶಾಸನ[೫೯] ತಿಳಿಸುತ್ತದೆ. ನಿಡುಗಲ್ಲು ಚೋಳರ ನಂತರ ನಿಡುಗಲ್ಲು ನಾಯಕರು ಈ ಪ್ರದೇಶದಲ್ಲಿ ಅಧಿಕಾರ ವಹಿಸಿಕೊಂಡಾಗ ಈ ದುರ್ಗವು ಕರ್ನಾಟಕದ ಗಿರಿದುರ್ಗಗಳಲ್ಲೇ ಅತ್ಯಂತ ವಿಸ್ತಾರವೂ, ಅಶ್ವಪತಿ ಇಲ್ಲವೇ ಗಜಪತಿಯಾಗಲಿ ವಶಪಡಿಸಿಕೊಳ್ಳಲಾಗದಷ್ಟು ಬಲಾಢ್ಯವೂ ಆದ ಇದನ್ನು ಅಪ್ಪ ದುರ್ಗಿಯರು ರಕ್ಷಿಸುತ್ತಿದ್ದರೆಂದು ಚಿಕ್ಕತಿಪ್ಪನೃಪನ ಕ್ರಿ.ಶ. ೧೪೮೭ರ ನಿಡುಗಲ್ಲು ಶಾಸನ[೬೦] ಉಲ್ಲೇಖಿಸುತ್ತದೆ. ಅಂದರೆ ಈ ಕೋಟೆಯು 'ದುರ್ಘಟವೀ ಕರ್ಣಾಟ ದುರ್ಗಂಗಳಿಗಧಿಕವೆನಿಪ ನಿಡುಗಲ್ಲೆಂಬೀದುರ್ಗವ ನೊಲಿದಾಳುತ ಬಹುದುರ್ಗಕಧಿಪನೆಂಬಾ ಬಾಳ ಚಕತಿಪ್ಪನೃಪಂ॥ ಕಾದಿಪ್ಪರಪ್ಪ ದುರ್ಗಿಯರಾಧಸೆಗಳೊಳಪ್ಪಭೈರವರ್ಗಣಪತಿಗಳು ಮೂದೇವರನೆಲು ನಿಡುಗಲ್ಲು ಸಾದಿಸಲಳವಲ್ಲವಶ್ವಪತಿ ಗಜಪತಿಗಂ॥' ಎಂಬುದಾಗಿ ವರ್ಣಿಸಲ್ಪಟ್ಟಿದೆ. ಚಿಕ್ಕತಿಪ್ಪನ ನಂತರ ಬೊಮ್ಮನಾಯಕನು ನಿಡುಗಲ್ಲಿನ ನೆಲಗೋಟೆಯನ್ನು ಕಟ್ಟಿಸಿ ಅದನ್ನು ಅಭೇದ್ಯ ದುರ್ಗವನ್ನಾಗಿ ಮಾಡಿದನು. ವಿಜಯನಗರ ಸಾಮ್ರಾಜ್ಯ ಪೆನುಗೊಂಡೆಗೆ ಸ್ಥಳಾಂತರಗೊಂಡಾಗ ಉತ್ತರದಿಂದ ಎರಗಬಹುದಾದ ನಿರಂತರ ದಾಳಿಗಳನ್ನು ತಡೆಯುವ ಉದ್ದೇಶದಿಂದ ವಿಜಯನಗರ ಸಾಮ್ರಾಜ್ಯ ನಿಷ್ಠೆಯಿಂದ ಇದ್ದ ಪಾಳೆಪಟ್ಟುಗಳಿಗೆ ದುರ್ಗಗಳನ್ನು ಬಲಪಡಿಸಿಕೊಳ್ಳಲು ಆರ್ಥಿಕ ನೆರವನ್ನು ನೀಡಿತು. ಇಂತಹ ನೆರವು ಪಡೆದವರಲ್ಲಿ ಹರತಿ-ನಿಡುಗಲ್ಲು ಪಾಳೆಯಗಾರರು ಸಹ ಒಬ್ಬರಾಗಿದ್ದಾರೆ. ವಿಜಯನಗರ ಅರಸರ ನೆರವಿನಿಂದ ಅಭೇದ್ಯ ದುರ್ಗವಾಗಿ ಮಾರ್ಪಟ್ಟ ನಿಡುಗಲ್ಲು ಕೋಟೆಯು ಸುಮಾರು ಮೂರು ವರ್ಷಗಳ ಕಾಲ ಮೊಘಲ್ ಸೇನೆಗೆ ಕೋಟೆಯ ಬಾಗಿಲನ್ನು ತೆರೆಯದಂತೆ ರಕ್ಷಣೆಯಿಂದ ಇದ್ದಿತ್ತೆಂದರೆ ಅದರ ಸಾಮರ್ಥ್ಯ ಯಾರ ಅರಿವಿಗಾದರೂ ಬಾರದಿರದು. ಆದರೆ ಈ ಕೋಟೆಯ

ಕೊನೆಯ ಪಾಳೆಯಗಾರನಾದ ತಿಮ್ಮನಾಯಕನು ಹೈದರ್–ಟಿಪ್ಪುವಿನ ಶಿಸ್ತುಬದ್ಧ ಯುದ್ಧ ನೀತಿಯ ಮುಂದೆ ನಿಡುಗಲ್ಲು ದುರ್ಗವನ್ನು ರಕ್ಷಿಸಲಾಗದೆ ನಿಡುಗಲ್ಲಿನ ಸುದೀರ್ಘ ಆಳ್ವಿಕೆಗೆ ಕೊನೆ ಹಾಡಿದನು. ನಂತರ ಇದು ಮೈಸೂರು ಅರಸರ ಸುಪರ್ಧಿಗೆ ಒಳಪಟ್ಟು ಅವರ ನಿರ್ಲಕ್ಷ್ಯತನದಿಂದ ಅವಸಾನ ಹೊಂದಿತು.

ನಿಡುಗಲ್ಲು ಕೋಟೆಯ ಲಕ್ಷಣಗಳು

ತುಮಕೂರಿನ ಹಂಪಿ ಎಂದು ಕರೆಯಲ್ಪಡುವ ನಿಡುಗಲ್ಲು ಪ್ರದೇಶವು ಸಮುದ್ರ ಮಟ್ಟದಿಂದ ೩೭೨೨ ಅಡಿ ಎತ್ತರದಲ್ಲಿದ್ದು, ನಿಸರ್ಗದತ್ತವಾಗಿ ಸುತ್ತಲೂ ಇರುವ ಬೆಟ್ಟಗಳ ಸಾಲುಗಳೇ ನಿಡುಗಲ್ಲಿಗೆ ರಕ್ಷಣಾ ಗೋಡೆಗಳಂತಿವೆ. ಸುಮಾರು ೭೦೦ ವರ್ಷಗಳ ಸುದೀರ್ಘ ಆಳ್ವಿಕೆಯನ್ನು ಕಂಡ ನಿಡುಗಲ್ಲು ಕೋಟೆಯು ಹೇರಳ ಸಂಪನ್ಮೂಲಗಳನ್ನು ಹೊಂದಿ ಶತ್ರುಗಳ ಪಾಲಿಗೆ ಅಭೇದ್ಯವಾಗಿ ರೂಪುಗೊಂಡಿತ್ತು. ಇದರ ಅಭೇದ್ಯತೆ ಜನಮಾನಸದಲ್ಲಿ ಇಂದಿಗೂ ಹರಿದಾಡುತ್ತಾ ಹಲವು ವಿಧದಲ್ಲಿ ವರ್ಣಿಸಲ್ಪಟ್ಟಿದೆ.

ಹಕ್ಕಿಹಾರದ ಕೋಟೆ ಪಕ್ಷಿತೂರದ ಕೋಟೆ
ರಕ್ಕಸನ ಕೋಟೆ ರಣಕೋಟೆ ॥ರನ್ನಾದ॥
ರಕ್ಕಸನ ಕೋಟೆ ರಣಕೋಟೆ ನಿಡುಗಲ್ಲು
ಒಕ್ಕುಹೊಗೊನ ಹೆಸರೆನೆ ॥ರನ್ನಾದ॥
ಕಾಗೆತೂರದ ಕೋಟೆ ಗೂಬೆತೂರದ ಕೋಟೆ
ರಾವಳನ ಕೋಟೆ ರಣಕೋಟೆ ॥ರನ್ನಾದ॥
ರಾವಳನ ಕೋಟೆ ರಣಕೋಟೆ ನಿಡುಗಲ್ಲು
ಓದಿಹೇಳೊನ ಹೆಸರೆನೆ ॥ರನ್ನಾದ॥
ಕೋಟೆ ಆರಾಳುದ್ದ ಕೊತ್ತಳ ಮೂರಾಳುದ್ದ
ಕೋಟೆ ಹೆಸರೆ ಗಡಿಯಂಕ ॥ರನ್ನಾದ॥[೧೧]

ಹೀಗೆ ಹಲವು ವಿಧದಲ್ಲಿ ವರ್ಣಿಸಲ್ಪಟ್ಟ ನಿಡುಗಲ್ಲು ಕೋಟೆಯು ನಾಲ್ಕು ಹಂತದಲ್ಲಿ ನಿರ್ಮಾಣಗೊಂಡು ಏಳು ಸುತ್ತಿನಿಂದ ಕೂಡಿದೆ. ಈ ಕೋಟೆಯಲ್ಲಿ ಇರುವ ಒಂದೊಂದು ಸುತ್ತುಗಳು ಅಲ್ಲಿನ ದೇವಾಲಯ, ಸಮುದಾಯ, ಕಾವಲುಗಾರರ ಹೆಸರಿನಲ್ಲಿ ಸಿನ್ನಕೋಟೆ, ಭೈರವನ ಕೋಟೆ, ವೀರಭದ್ರನ ಕೋಟೆ, ಬೇಸ್ತರ ಕೋಟೆ, ಅರಕೋಟೆ, ಚೆನ್ನರಾಯನಕೋಟೆ, ಕಾಳಹಸ್ತೇಶ್ವರ ಕೋಟೆ ಎಂಬುದಾಗಿ ಕರೆಯಲ್ಪಡುತ್ತಿರುವುದು ವಿಶೇಷವೆನಿಸುತ್ತದೆ. ಅದೇ ರೀತಿ ಶತ್ರುಗಳಿಗೆ ಮೋಸಮಾಡುವ ಉದ್ದೇಶಕ್ಕಾಗಿ ಸಿರಾಬಾಗಿಲು, ಪಾಗೊಂಡೆಬಾಗಿಲು, ವಜ್ರದಬಾಗಿಲು, ಪೆನುಗೊಂಡೆ ಬಾಗಿಲು, ಮಾಟನೂರುಬಾಗಿಲು, ಸಿಂಗಾರದಬಾಗಿಲು, ಚೆನ್ನರಾಯನಬಾಗಿಲು, ಕಾಳಹಸ್ತೇಶ್ವರಬಾಗಿಲು ಎಂಬುದಾಗಿ ಎಂಟು ಮುಖ್ಯ ದ್ವಾರ ಬಾಗಿಲು ನಾಲ್ಕು ದಿಡ್ಡಿ ಬಾಗಿಲುಗಳಿವೆ.

ಭೈರವನ ಕೋಟೆ ಪ್ರಾಚೀನ ಕೋಟೆ ಎಂಬುದಕ್ಕೆ ಅದಕ್ಕೆ ಬಳಸಿರುವ ಡೈಕ್ ಶಿಲೆಯಿಂದ ಸ್ಪಷ್ಟವಾಗುತ್ತದೆ. ಉಳಿದ ಕೋಟೆ ಗೋಡೆಗಳಿಗೆ ಗ್ರಾನೈಟ್, ಸೌಟು ಕಲ್ಲು, ಕಾಡುಗಲ್ಲುಗಳನ್ನು ಬಳಸಲಾಗಿದೆ. ಅವು ವಿಜಯನಗರ ಕಾಲಘಟ್ಟಕ್ಕೆ ಸೇರುತ್ತವೆ ಎನ್ನಲು ತ್ರಿಭುಜ, ಆಯತ, ಚೌಕ ಮಾದರಿಯಲ್ಲಿ ಕಲ್ಲುಗಳನ್ನು ಕತ್ತರಿಸಿ ನುಣುಪುಗೊಳಿಸಿರುವ ಲಕ್ಷಣಗಳಿಂದ ಗೋಚರವಾಗುತ್ತದೆ. ಅಲ್ಲದೆ ಸ್ಥಳೀಯವಾಗಿ ಸಿಗುವಂತಹ ಕಾಡುಗಲ್ಲುಗಳನ್ನು ಹಾಗೆಯೇ ಬಳಸಿದ್ದಾರೆ. ಗೋಡೆಯ ರಕ್ಷಣೆಗಾಗಿ ತಳಭಾಗ ಅಗಲವಾಗಿ ಮಧ್ಯ ಭಾಗವು ಹೊರಕ್ಕೆ ಮುಂಚಾಚಿಕೊಂಡು ಮೇಲಕ್ಕೆ ಹೋದಂತೆಲ್ಲಾ ಕಿರಿದಾಗುತ್ತಾ ಹೋಗಿದೆ. ಏಕೆಂದರೆ ಶತ್ರುಗಳು ಎಸೆಯುವ ಗುಂಡುಕಲ್ಲು, ಬಾಣಗಳು ಗೋಡೆಯ ಮೇಲಿನ ಸೈನಿಕರಿಗೆ ತಾಗದಂತಿರಲೆಂದು ಹಾಗೂ ಗೋಡೆಯನ್ನು ಹೊರಗಿನಿಂದ ಏರಲು ಪ್ರಯತ್ನಿಸಿದರೆ ಮೇಲ್ಭಾಗದಿಂದ ಕಾದ ಎಣ್ಣೆ, ಅಂಬಲಿ, ನೀರನ್ನು ಸುರಿಯಲು ಅನುವಾಗಲೆಂದು ಈ ತಂತ್ರವನ್ನು ಬಳಸಲಾಗಿದೆ. ಆನೆಯಿಂದ ಗುದ್ದಿಸಿದರೆ ಅಥವಾ ಕವಣೆಯಂತ್ರ ಹಾಗೂ ಫಿರಂಗಿಗಳಿಂದ ಸಿಡಿಸುವ ಮದ್ದುಗುಂಡುಗಳ ಹೊಡೆತದಿಂದ ಹಾಳಾಗದಂತೆ ಗೋಡೆಯ ಒಳಭಾಗ ಇಳಿವೋರೆಯನ್ನು ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದು ನಿರ್ಮಿಸಲಾಗಿದೆ. ಈ ಇಳಿವೋರೆಯ ಮೂಲಕವೇ ಗೋಡೆಯ ಮೇಲ್ಭಾಗಕ್ಕೆ ಮದ್ದುಗುಂಡು, ಕಾದ ಎಣ್ಣೆ, ಅಂಬಲಿ ಮೊದಲಾದವುಗಳನ್ನು ಗಾಡಿಗಳಲ್ಲಿ ಸಾಗಿಸುತ್ತಿದ್ದರು. ಹೊರಭಾಗದಲ್ಲಿ ಶತ್ರುಗಳ ವೇಗವನ್ನು ತಡೆಯಲು ಸಮತಟ್ಟಾದ ನೆಲವಿರುವಲ್ಲಿ ಮಾತ್ರ ಆಳವಾದ ಕಂದಕವನ್ನು ನೆಲಗೋಟೆಯಲ್ಲಿ ನಿರ್ಮಿಸಿ, ಆ ಕಂದಕದ ಮಣ್ಣಿನಿಂದಲೇ ದಿಬ್ಬವನ್ನು ಮಾಡಿದ್ದಾರೆ. ಹೊರಗಿನ ಶತ್ರುಗಳಿಗೆ ಗೋಡೆಯ ಮೇಲಿರುವ ಸೈನಿಕರು ಕಾಣದಿರಲೆಂದು ಮಣ್ಣಿನ ತೆನೆಯನ್ನು ನಿರ್ಮಿಸಲಾಗಿದೆ. ಈ ತೆನೆಗಳ ಮೂಲಕ ಶತ್ರುಗಳ ಚಲನವಲನಗಳ ವೀಕ್ಷಣೆ, ಬಂದೂಕು ಇಲ್ಲವೆ ಬಾಣಗಳನ್ನು ಪ್ರಯೋಗಿಸಲು ಕಿಂಡಿಗಳನ್ನು ಬಿಡಲಾಗಿದೆ. ಕೆಲವೊಮ್ಮೆ ಶತ್ರುಗಳಿಗೂ ಸಹ ಇವು ಗೋಡೆ ಏರಲು ಸಹಕಾರಿಯಾಗಿದ್ದವು.

ಕೋಟೆ ಗೋಡೆಗೆ ಹೊಂದಿಕೊಂಡಂತೆ ನಿರ್ಮಾಣಗೊಂಡ ದ್ವಾರಗಳು ದುರ್ಭೇದ್ಯವಾಗಿದ್ದವು. ಮುಖ್ಯ ದ್ವಾರಗಳು ಹಲವು ತಿರುವುಗಳಿಂದ ಎರಡು ಬದಿಯಲ್ಲಿ ಎತ್ತರದ ಗೋಡೆ ಹಾಗೂ ವೇದಿಕೆಯ ಮೇಲೆ ಕಾವಲುಮಂಟಪ, ಅದಕ್ಕೆ ಹೊಂದಿಕೊಂಡಂತೆ ದಿಡ್ಡಿ ಬಾಗಿಲುಗಳ ರಚನೆಯು ಶತ್ರುಗಳು ದ್ವಾರಗಳ ಮೂಲಕ ಪ್ರವೇಶಿಸಲು ಹಿಂಜರಿಯುವಂತೆ ಮಾಡುತ್ತಿದ್ದವು. ಆದುದರಿಂದಲೇ ಗೋಡೆಗಳನ್ನು ಕೆಡವಿ ಒಳ ಮುನ್ನುಗ್ಗುತ್ತಿದ್ದರು ಎಂಬುದಕ್ಕೆ ಎರಡು ಮೂರು ಹಂತಗಳಲ್ಲಿ ಜೀರ್ಣೋದ್ಧಾರಗೊಂಡ ಗೋಡೆಗಳ ರಚನಾ ಶೈಲಿಯಿಂದ ತಿಳಿಯುತ್ತದೆ. ವಜ್ರದ ಬಾಗಿಲು ಶತ್ರುಗಳಿಗೆ ವಜ್ರದೋಪಾದಿಯಂತೆ ದುರ್ಭೇದ್ಯವಾಗಿತ್ತು. ಪಾಗೊಂಡೆ ಊರಬಾಗಿಲು ವಾಸ್ತು ರಚನೆಯಲ್ಲಿ ಗುಮ್ಮನಾಯಕನ ಕೋಟೆಯ ಮಹಾದ್ವಾರವನ್ನು ಹೋಲುತ್ತದೆ. ಮಾಟನೂರು ಬಾಗಿಲಿನ ಎರಡು ಬದಿಯಲ್ಲಿ ಸುಮಾರು ೫ ಮೀ. ಎತ್ತರ, ೧೦ಮೀ. ಉದ್ದದ ಗೋಡೆ

ನಿರ್ಮಾಣಗೊಂಡಿರುವುದು ಶತ್ರುಗಳು ಯಾವ ಯುದ್ಧ ತಂತ್ರ ಬಳಸಿದರೂ ಅದು ವಿಫಲವಾಗುವಂತೆ ಮಾಡುತ್ತಿತ್ತು. ಶೃಂಗಾರದ ಬಾಗಿಲ ಎರಡು ಬದಿ ೫ ಮೀ. ಎತ್ತರದ ಕೊತ್ತಲಗಳಿದ್ದು, ಅರಕೋಟೆಯವರೆಗೂ ಅದರ ಪ್ರವೇಶ ಹಲವು ತಿರುವುಗಳಿಂದ ಕೂಡಿದೆ. ಅಲ್ಲದೆ ಪ್ರತಿ ದ್ವಾರದಲ್ಲಿಯೂ ಆಂಜನೇಯ, ಶಿವ, ಗಣೇಶ, ದುರ್ಗಿ ಅವತಾರ ಮೂರ್ತಿಗಳನ್ನು ಪ್ರತಿಷ್ಠಾಪಿಸಾಗಿದೆ. ಈ ಅಷ್ಟ ದೇವತೆಗಳೇ ಕೋಟೆಯನ್ನು ರಕ್ಷಿಸುತ್ತಾರೆ ಎಂಬ ನಂಬಿಕೆ ಅವರಲ್ಲಿತ್ತು. ವಿಶೇಷವಾಗಿ ವಜ್ರದ ಊರಬಾಗಿಲಿನಿಂದ ಅರಮನೆ ಪ್ರದೇಶದವರೆಗಿನ ದಾರಿಗೆ ಡೈಕ್ ಶಿಲೆಯನ್ನು ನುಣುಪುಗೊಳಿಸಿ ಹಾಸಿದ್ದಾರೆ. ಏಕೆಂದರೆ ಈ ಕಲ್ಲುಗಳ ಮೇಲೆ ಮಳೆಗಾಲದಲ್ಲಿ ಮಳೆಯ ನೀರು ಹರಿದು ಅವು ಮತ್ತಷ್ಟು ನುಣುಪುಗೊಳ್ಳುತ್ತಿದ್ದವು. ಇಂತಹ ನುಣುಪಾದ ಕಲ್ಲಿನ ಮೇಲೆ ವೇಗವಾಗಿ ಯಾರಿಂದಲೂ ಮುನ್ನುಗ್ಗಲು ಸಾಧ್ಯವಾಗುತ್ತಿರಲಿಲ್ಲ. ಹೀಗೆ ಶತ್ರುಗಳ ವೇಗವನ್ನು ಕುಂಠಿತಗೊಳ್ಳುವಂತೆ ಅರಮನೆ ಪ್ರದೇಶದಲ್ಲಿದ್ದ ಕೋಟೆಯನ್ನು ಭದ್ರಪಡಿಸಿಕೊಳ್ಳಲು ಸಮಯಾವಕಾಶ ಸಿಗಲೆಂಬ ಉದ್ದೇಶದಿಂದ ಈ ತಂತ್ರವನ್ನು ಬಳಸಲಾಗಿದೆ.

ಇಡೀ ಬೆಟ್ಟವೇ ಎತ್ತರವಾಗಿ ಇರುವುದರಿಂದ ಅದನ್ನು ಸುತ್ತಲಿನ ಪರಿಸರ ವೀಕ್ಷಿಸಲು ಕಾವಲು ಗೋಪುರದಂತೆ ಬಳಸಿಕೊಳ್ಳುತ್ತಿದ್ದರು. ಆದರೂ ಅರಮನೆ ಪ್ರದೇಶ ಇರುವಲ್ಲಿ ಮಾತ್ರ ಎತ್ತರವಾದ ನಿಲುವುಗಲ್ಲುಗಳ ಮೇಲೆ ಕಾವಲು ಗೋಪುರವನ್ನು ಅರಮನೆಯ ರಕ್ಷಣೆಗಾಗಿ ನಿರ್ಮಿಸಲಾಗಿದೆ. ಕೆಲವೊಮ್ಮೆ ಗೋಡೆಯಲ್ಲಿನ ಕೊತ್ತಲವನ್ನು ಸಹ ಕಾವಲು ಗೋಪುರವನ್ನಾಗಿ ಬಳಸಿಕೊಳ್ಳುತ್ತಿದ್ದರು. ವಿಶೇಷವಾಗಿ ಕೊತ್ತಲಗಳನ್ನು ಗೋಡೆಯ ಅಗಲವನ್ನು ವಿಸ್ತರಿಸುವುದಕ್ಕಾಗಿ ಹಾಗೂ ಸೈನಿಕರು ತಂಗಲು, ಆಯುಧೋಪಕರಣ ಇಡಲು, ಎಲ್ಲಾ ದಿಕ್ಕುಗಳಿಂದ ಒಮ್ಮೆಯೇ ಶತ್ರುಗಳ ಮೇಲೆ ಒಳಗಿನಿಂದ ದಾಳಿ ಮಾಡಲು ಅನುಕೂಲವಾಗಲೆಂದು ನಿರ್ಮಿಸಲಾಗುತ್ತಿತ್ತು. ಕೋಟೆಯ ಒಳಗೆ ಇರುವ ಫಿರಂಗಿ ವೇದಿಕೆಗಳನ್ನು ಗಮನಿಸಿದರೆ ಕೇವಲ ಆ ವೇದಿಕೆಗಳಿಂದ ಮಾತ್ರ ಅವುಗಳನ್ನು ಪ್ರಯೋಗಿಸುತ್ತಿದ್ದರು ಎನಿಸುತ್ತದೆ. ಫಿರಂಗಿಗಳನ್ನು ಬೃಹತ್ ಪ್ರಮಾಣದಲ್ಲಿ ಬಳಸುತ್ತಿದ್ದರು ಎಂಬುದಕ್ಕೆ ಸುಮಾರು ಐದು ಮೀಟರ್ ಆಳವಾದ ತುಪ್ಪದ ಕೋಳಗಳನ್ನು ಗಾರೆ ಮತ್ತು ಇಟ್ಟಿಗೆಯಿಂದ ನಿರ್ಮಿಸಲಾಗಿದೆ. ಫಿರಂಗಿಗಳಿಗೆ ಬೇಕಾದ ಮದ್ದನ್ನು ಚಳಿಯಿಂದ ರಕ್ಷಿಸಿ ಅದು ಸ್ಫೋಟಗೊಳ್ಳುವಂತೆ ಮಾಡಲು ಹಾಗೂ ಬಿಸಿಲಿನ ತಾಪಕ್ಕೆ ಅದು ಸ್ಫೋಟಗೊಳ್ಳದಂತೆ ಅವಶ್ಯವಿರುವಾಗ ಮಾತ್ರ ಅದು ಬಳಕೆಗೆ ಯೋಗ್ಯವಾಗಿರಬೇಕೆಂದು ತುಪ್ಪವನ್ನು ಬಳಸುತ್ತಿದ್ದರು.

ಸಾಮಾನ್ಯವಾಗಿ ಕೋಟೆಯೊಂದು ರಕ್ಷಣಾಬದ್ಧವಾಗಿ ನಿರ್ಮಾಣವಾಯಿತೆಂಬ ಮಾತ್ರಕ್ಕೆ ಅದು ಅಭೇದ್ಯತೆಯಿಂದ ಕೂಡಿದೆ ಎಂದು ಪರಿಗಣಿಸಲಾಗದು. ಏಕೆಂದರೆ ದಿನನಿತ್ಯದ ಕೆಲಸ ಕಾರ್ಯಗಳಿಗೆ ಬೇಕಾದ ನೀರಿನ ಸಂಗ್ರಹಣೆ ಬೆಟ್ಟ ಪ್ರದೇಶಗಳಿಗೆ ಅತಿ ಮುಖ್ಯ. ನಿಡುಗಲ್ಲು ಬೆಟ್ಟದಲ್ಲಿ ನೈಸರ್ಗಿಕ ನಿರ್ಮಿತಿಗಳಾದ ಕುಳಿ, ಕಂದರಗಳು ಹೇರಳವಾಗಿದ್ದರಿಂದ ಅವುಗಳಿಗೆ ಕೆಲವೆಡೆ ಕಲ್ಲು, ಮಣ್ಣು, ಗಾರೆ ಮತ್ತು ಇಟ್ಟಿಗೆಯಿಂದ ಕಟ್ಟೆಗಳನ್ನು ನಿರ್ಮಿಸಲಾಗಿದೆ. ಇವುಗಳಿಗೆ

ಬೆಟ್ಟದಲ್ಲಿ ಬೀಳುವ ಮಳೆಯ ನೀರು ವ್ಯರ್ಥವಾಗಿ ಹರಿಯದಂತೆ ಕಾಲುವೆಗಳ ಮೂಲಕ ಹರಿಬಿಡಲಾಗಿದೆ. ಇಡಿ ಬೆಟ್ಟವೇ ಇಳಿಜಾರಿನಿಂದ ಕೂಡಿರುವುದು ಬೆಟ್ಟದ ಬುಡದಲ್ಲಿ ತೋಡಲಾದ ಬಾವಿಗಳಿಗೆ ಗಿಡ ಮೂಲಿಕೆಗಳ ಮೂಲಕ ಮಳೆಯ ನೀರು ಶುದ್ಧೀಕರಿಸಲ್ಪಟ್ಟು ಬಂದು ಸೇರುವುದು ನಿಸರ್ಗ ನಿರ್ಮಿತ ಕೊಡುಗೆಯಾಗಿ ರೂಪುಗೊಂಡಂತ್ತಿದೆ. ವಿಶೇಷವಾಗಿ ಆನೆಯ ಹೊಂಡಕ್ಕೆ ಬೆಟ್ಟದಲ್ಲಿ ಬೀಳುವ ಇಡೀ ಮಳೆಯ ನೀರನ್ನು ಕಾಲುವೆ, ಸುರಂಗ ಮಾರ್ಗಗಳ ಮೂಲಕ ಹರಿಸಲಾಗಿದೆ. ಆದುದರಿಂದ ಇದರ ಕೆಳ ಭಾಗದಲ್ಲಿ ತೋಡಲಾದ ಬಾವಿಗಳಲ್ಲಿ ಸದಾ ಕಾಲ ನೀರಿನ ಸೆಲೆ ದೊರೆತಂತಾಗಿ ಜೀವಂತ ಚಿಲುಮೆಗಳನ್ನಾಗಿ ಮಾಡಿದೆ.

ಮೂರು ಹಂತವಿರುವ ಈ ಬೆಟ್ಟದಲ್ಲಿ ಮೂರು ಕಡೆಯೂ ಅರಮನೆ ಇದೆ. ಅರಕೋಟೆಯಲ್ಲಿರುವ ಕೋಟೆಯು ಪಾಳೆಯಗಾರರ ಮುಖ್ಯ ಅರಮನೆಯಾಗಿದ್ದು ಕಾಳಹಸ್ತೇಶ್ವರ ಕೋಟೆಯಲ್ಲಿರುವ ವಸಂತ ಕಾಲದ ಅರಮನೆ ಪ್ರಕೃತಿ ಸವಿಯಲು ಹಾಗೂ ಮುಂಗಾರಿನ ಸಂದರ್ಭಕ್ಕೆ ಮಾತ್ರ ಸೀಮಿತವಾಗಿರುತ್ತಿತ್ತು. ಏಕೆಂದರೆ ದಿನನಿತ್ಯ ರಾಜನು ಆಡಳಿತದ ವಿಷಯವಾಗಿ ಬೆಟ್ಟವನ್ನು ಏರುವುದು, ಇಳಿಯುವುದು ಸಾಧ್ಯವಾಗುತ್ತಿರಲಿಲ್ಲ. ಹಾಗಾಗಿ ಅರಕೋಟೆಯ ಮಣ್ಣಿನ ಅರಮನೆಯನ್ನು ವಿಶಾಲವಾಗಿ ಅದಕ್ಕೆ ಹೊಂದಿಕೊಂಡಂತೆ ಈಜುಕೋಳ ಹಾಗೂ ಬಿಸಿನೀರಿನ ಕಟ್ಟಡ, ಬಾವಿಯನ್ನು ನಿರ್ಮಿಸಲಾಗಿದೆ. ಹಸಿ ಮಣ್ಣಿನ ಇಟ್ಟಿಗೆಯನ್ನು ಒಣಗಿಸಿ ನಿರ್ಮಿಸಲಾದ ಅರಮನೆಯ ತಂತ್ರಜ್ಞಾನ ಬಿರು ಬೇಸಿಗೆಯಲ್ಲೂ ಸಹ ಅದರ ಒಳಗೆ ತಣ್ಣನೆಯ ಹವಾಮಾನ ಇರುವಂತೆ ಮಾಡಲಾದ ಅವರ ವಾಸ್ತುವೈವಿಧ್ಯತೆ ಸಾಕ್ಷಿಯಾಗಿದೆ.

೨. ಮಿಡಿಗೇಶಿ

ಕ್ರಿಶ ೭೫೦ರ ಎರೆಯಪ್ಪನ ಕಾಲದ ಕಡಲೂರಿನ ಶಾಸನ ನೊಳಂಬರ ಗಡಿದುರ್ಗವಾದ ಮಿಡಿಗೇಶಿಯನ್ನು 'ಮಿಡಿಗೆ'[೪೨] ಎಂದು ಉಲ್ಲೇಖಿಸಿದೆ. ಈ ಮಿಡಿಗೆಯೇ ಮಿಡಿಗೇಶಿ ಆಗಿರಬೇಕು. ಆದುದರಿಂದ ನೊಳಂಬರ ಆರಂಭ ಕಾಲಘಟ್ಟಕ್ಕಾಗಲ್ಲೇ ಮಿಡಿಗೇಶಿಯಲ್ಲಿ ಕೋಟೆ ನಿರ್ಮಾಣಗೊಂಡಿತ್ತು ಎಂಬುದು ಸ್ಪಷ್ಟವಾಗುತ್ತದೆ. ಶ್ರೀಪುರುಷನ ಕಾಲದ ಮಿಡಿಗೇಶಿಯ ವೀರಗಲ್ಲು ರಾಷ್ಟ್ರಕೂಟರ ವಿರುದ್ಧ ಹೋರಾಡುತ್ತಾ ಜಡಿಮುತ್ತರಸನೆಂಬುವವನು ಕಾದುತ್ತಾ ಸತ್ತ[೪೩]ನೆಂದೂ ಉಲ್ಲೇಖಿಸುತ್ತದೆ. ಬಹುಶಃ ನೊಳಂಬ ಅರಸ ಜಡಿಮುತ್ತರಸನು ತನ್ನ ಗಡಿದುರ್ಗವಾದ ಮಿಡಿಗೇಶಿಯಲ್ಲಿ ಕ್ರಿಶ ೭೫೦ಕ್ಕೂ ಹಿಂದೆಯೇ ಇದ್ದ ಕೋಟೆಯಲ್ಲಿ ರಕ್ಷಣೆ ಪಡೆದು ಹೋರಾಡುತ್ತಿರುವಾಗ ಸತ್ತನೆಂದು ಇದರಿಂದ ಸ್ಪಷ್ಟವಾಗುತ್ತದೆ.

ಕ್ರಿ.ಶ. ೯೦೪ರ ಕೆರೆಹಳ್ಳಿಯ ನೀತಿಮಾರ್ಗನ ಶಾಸನ[೪೪], ಕ್ರಿ.ಶ ೧೫೦೩ರ ಸಾಳ್ವ ಇಮ್ಮಡಿ ನರಸಿಂಹನ ಮಿಡಿಗೇಶಿ ಶಾಸನ[೪೫]ಗಳಲ್ಲಿ 'ಮಿಡಿಗೇಶಿ' ಎಂಬ ಉಲ್ಲೇಖ ಸಿಗುತ್ತದೆ. ಹಾಗಾಗಿ ನಾಗಿರೆಡ್ಡಿಯ ಪತ್ನಿ ಮಲ್ಲಮ್ಮನಿಗೆ ಮುಡಿಯಿಂದ ಅಡಿಯವರೆಗೆ ಕೇಶವಿದ್ದ ಕಾರಣ ಆಕೆಯ ನೆನಪಿಗಾಗಿ ಈ ಪ್ರದೇಶಕ್ಕೆ ಮುಡಿಗೇಶಿ ಎಂದು ನಾಮಕರಣ ಮಾಡಲಾಯಿತೆಂದೂ, ಅಂದರೆ

ಮುಡಿ ಎಂದರೆ ತಲೆಯ ಹಿಂಬದಿ, ಕೇಶ ಎಂದರೆ ಕೂದಲು ಎಂದರ್ಥ. ಕ್ರಮೇಣ ಮುಡಿಕೇಶಿ ಎಂಬುದು ಮಿಡಿಕೇಶಿ ಕ್ರಮೇಣ ಮಿಡಿಗೇಶಿ ಎಂದು ಅಪಭ್ರಂಶಗೊಂಡಿದೆಯೆಂದು ಬುಕಾನಾನ್, ಕಾವಲಮ್ಮ, ವಸು.ಎಂ.ವಿ., ಎಂ.ಡಿ.ಶ್ರೀನಿವಾಸ್, ನಿ.ಕೃ.ರಾಮಶೇಷನ್ ಮೊದಲಾದ ವಿದ್ವಾಂಸರು ಹಾಗೂ ಮಧುಗಿರಿಯ ರಾಯರೇಖೆ ಉಲ್ಲೇಖಿಸಿರುವ ಈ ಈ ವಾದವನ್ನು ಸಂದೇಹದಿಂದಲೇ ನೋಡಬೇಕಾಗುತ್ತದೆ. ಏಕೆಂದರೆ ನಾಗರೆಡ್ಡಿಗೂ ಹಿಂದೆಯೇ ಕ್ರಿಶ ೭೫೦ರ ಕಡಲೂರಿನ ಶಾಸನದಲ್ಲಿ 'ಮಿಡಿಗೆ' ಎಂಬ ಉಲ್ಲೇಖ ಸಿಗುವುದರಿಂದ ಮಿಡಿಗೇಶಿ ಎಂಬ ಸ್ಥಳನಾಮ ಪ್ರಕೃತಿ ವಾಚಕವಾಗಿಯೇ ಬಳಕೆಗೆ ಬಂದಿರುವ ಸಾಧ್ಯತೆಯಿದೆ. ಇಡಿ ಬೆಟ್ಟವು ಸ್ತ್ರೀಯ ಮುಡಿಯಲ್ಲಿ ತುರುಬನ್ನು ಕಟ್ಟಿದ ಹಾಗೆ ಕಾಣುವುದರಿಂದ ಬೆಟ್ಟದ ನೈಸರ್ಗಿಕ ರಚನೆಯೇ ಮಿಡಿಗೇಶಿ ಎಂಬ ಸ್ಥಳನಾಮದ ಹುಟ್ಟಿಗೂ ಕಾರಣವಾಗಿದೆ. ಬಹುಶಃ ನೊಳಂಬರ ಕಾಲಕ್ಕೆ ನಿರ್ಮಾಣಗೊಂಡ ಮಿಡಿಗೇಶಿ ಕೋಟೆಯನ್ನು ನಾಗಿರೆಡ್ಡಿ ವಿಸ್ತರಿಸಿ ಅಲ್ಲಿ ಕೆರೆ, ಕಟ್ಟೆ, ಬಾವಿ, ದೇವಾಲಯ ಮೊದಲಾದವುಗಳನ್ನು ನಿರ್ಮಾಣ ಮಾಡಿ ಜನಮಾನಸದಲ್ಲಿ ಸ್ಥಾನ ಪಡೆದುಕೊಂಡಿದ್ದಾನೆ. ಈ ಕಾರಣಕ್ಕಾಗಿ ಇಂದಿಗೂ ಸ್ಥಳೀಯರು ಮಿಡಿಗೇಶಿ ಎಂದ ತಕ್ಷಣ ನಾಗಿರೆಡ್ಡಿಯ ಹೆಸರನ್ನು ನೆನಪಿಸಿಕೊಳ್ಳುತ್ತಾರೆ.

ಮಿಡಿಗೇಶಿ ಕೋಟೆಯ ಲಕ್ಷಣಗಳು

ಸಮುದ್ರ ಮಟ್ಟದಿಂದ ೩೪೪೯ ಅಡಿ ಎತ್ತರದಲ್ಲಿರುವ ಮಿಡಿಗೇಶಿ ಬೆಟ್ಟದಲ್ಲಿ ಕೋಟೆಯು ಮೂರು ಹಂತಗಳಲ್ಲಿ ನಿರ್ಮಿಸಲ್ಪಟ್ಟಿದೆ. ಒಂದೊಂದು ಹಂತದ ಕೋಟೆಯು ಬೇರೆ ಬೇರೆ ಕಾಲ ಘಟ್ಟಗಳಲ್ಲಿ ನಿರ್ಮಾಣಗೊಂಡಿದೆ. ನೆಲಗೋಟೆಯು ನೊಳಂಬರ ಕಾಲದಲ್ಲಿ ನಿರ್ಮಿಸಲ್ಪಟ್ಟರೆ, ಬೆಟ್ಟದ ಮಧ್ಯಭಾಗದಲ್ಲಿರುವ ಅರಮನೆ ಆವರಣದ ಕೋಟೆ ವಿಜಯನಗರ ಕಾಲದ ಸಾಮಂತ ಪಾಳೆಗಾರರಿಂದ ನಿರ್ಮಿಸಲ್ಪಟ್ಟಿದೆ. ತುದಿಭಾಗದ ಕೋಟೆ ಹೈದರ್ ಮತ್ತು ಟಿಪ್ಪುವಿನಿಂದ ಜೀರ್ಣೋದ್ಧಾರಗೊಂಡು ಫ್ರೆಂಚ್ ವಾಸ್ತುವಿನ್ಯಾಸವನ್ನು ಹೊಂದಿದೆ. ಈ ಕೋಟೆ ಹಲವು ಕಾಲ ಘಟ್ಟಗಳಲ್ಲಿ ಜೀರ್ಣೋದ್ಧಾರಗೊಳ್ಳಲು ಮುಖ್ಯ ಕಾರಣ ಏಕಶಿಲಾ ಬೆಟ್ಟದ ಮೇಲೆ ನಿರ್ಮಾಣಗೊಂಡಿರುವಂತಹದ್ದೇ ಆಗಿದೆ. ಜೊತೆಗೆ ಇಲ್ಲಿ ಅನಾವಶ್ಯಕವಾಗಿ ವಿಶಾಲವಾದ ಕೋಟೆ ನಿರ್ಮಾಣ ಮಾಡುವ ಪ್ರಮೇಯವೂ ಇರುವುದಿಲ್ಲ.

ನೊಳಂಬರ ಕಾಲಕ್ಕೆ ಸೇರಿದ ಮಣ್ಣಿನ ಕೋಟೆಯು ಬೆಟ್ಟದ ತಪ್ಪಲಿನಲ್ಲಿದ್ದು, ಪ್ರಕೃತಿ ವಿಕೋಪ ಮತ್ತು ಮಾನವನ ಸ್ವಾರ್ಥಕ್ಕೆ ಸಿಲುಕಿ ದಿಬ್ಬದೋಪಾದಿಯಲ್ಲಿದೆ. ಆದುದರಿಂದ ಅದರ ಲಕ್ಷಣಗಳನ್ನು ನಿಖರವಾಗಿ ಗುರುತಿಸಲು ಸಾಧ್ಯವಾಗುವುದಿಲ್ಲ. ಅರಮನೆ ಆವರಣದಲ್ಲಿರುವ ವಿಜಯನಗರ ಕಾಲಕ್ಕೆ ಸೇರಿದ್ದ ಕೋಟೆ ಗೋಡೆಯು ಎರಡು ಮೂರು ಹಂತಗಳಲ್ಲಿ ಪುನರ್ ನಿರ್ಮಾಣಗೊಂಡಿರುವುದು ಗೋಡೆಯ ಲಕ್ಷಣಗಳಿಂದ ತಿಳಿಯುತ್ತದೆ. ಬಹುಶಃ ಈ ಪ್ರದೇಶ ನಿರಂತರ ದಾಳಿಗೆ ಒಳಪಡುತ್ತಿತ್ತು ಎಂಬ ಅಂಶ ಇದರಿಂದ ಸ್ಪಷ್ಟವಾಗುತ್ತದೆ. ಈ ಹಂತದ ಗೋಡೆಯ ತಳಭಾಗ ಗ್ರಾನೈಟ್ ಶಿಲೆ ಆಯತ, ಚೌಕ ಮಾದರಿಯಲ್ಲಿ ಕತ್ತರಿಸಿ ಚಿತ್ರದುರ್ಗದ

ಕೋಟೆ ಗೋಡೆಯಂತೆ ನುಣುಪಾಗಿ ನಿರ್ಮಾಣ ಮಾಡಲಾಗಿದೆ. ಆದರೆ ಗೋಡೆಯ ಮಧ್ಯಭಾಗ ಅಲ್ಲಲ್ಲಿ ಕಾಡುಗಲ್ಲು ಮತ್ತು ಸೈಜುಗಲ್ಲುಗಳನ್ನು ಅವೈಜ್ಞಾನಿಕವಾಗಿ ಜೋಡಿಸಿರುವುದನ್ನು ಗಮನಿಸಿದರೆ ಅದು ವಿಜಯನಗರೋತ್ತರ ಕಾಲದ್ದೆಂದು ಸ್ಪಷ್ಟವಾಗುತ್ತದೆ. ಮೇಲ್ಭಾಗದ ಗೋಡೆಗೆ ಆಯತ ಮತ್ತು ಚೌಕ ಮಾದರಿಯಲ್ಲಿ ಕತ್ತರಿಸಲ್ಪಟ್ಟ ಗ್ರಾನೈಟ್ ಶಿಲೆಯನ್ನು ಬಳಸಿದ್ದಾರೆ. ಗೋಡೆಯ ಅಗಲವನ್ನು ವಿಸ್ತರಿಸಲು ಅದರ ಒಳ ಭಾಗದಲ್ಲಿ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದಿರುವುದು ಕಂಡುಬರುತ್ತದೆ. ಅರಮನೆ ಆವರಣದಲ್ಲಿ ಕೆಲವೆಡೆ ಕೇವಲ ಕಾಡುಗಲ್ಲುಗಳಿಂದ ಜೋಡಣೆಗೊಂಡಿರುವುದನ್ನು ಗಮನಿಸಿದರೆ ಪಾಳೆಯಗಾರರ ಕಾಲದಲ್ಲಿ ಈಗಾಗಲೇ ಇದ್ದ ಕೋಟೆ ಗೋಡೆಯು ವಿಸ್ತರಿಸಲ್ಪಟ್ಟಿರುವುದು ಗೋಚರಿಸುತ್ತದೆ. ಈ ಕಾಡುಗಲ್ಲಿನ ಗೋಡೆ ಸಡಿಲಗೊಳ್ಳದಂತೆ ಕಲ್ಲುಗಳ ಮಧ್ಯೆ ಚಕ್ಕೆಗಳನ್ನು ಜೋಡಿಸಿರುವುದು ಕೋಟೆಯ ರಚನಾ ವಾಸ್ತುವಿನ ಅವೈಜ್ಞಾನಿಕ ವಿಧಾನವಾಗಿದೆ. ಏಕೆಂದರೆ ಕೋಟೆ ಗೋಡೆಯನ್ನು ನಿರ್ಮಿಸುವಾಗ ಒಂದು ಕಲ್ಲಿಗೂ ಮತ್ತೊಂದು ಕಲ್ಲಿಗೂ ಅಂತರವಿರದಂತೆ ನುಣುಪುಗೊಳಿಸಬೇಕೆಂದು ಶಾಸ್ತ್ರಗ್ರಂಥಗಳು ತಿಳಿಸುತ್ತವೆ. ಆದರೆ ಪಾಳೆಪಟ್ಟುಗಳು ತಮ್ಮ ಸೀಮಿತ ಆದಾಯದ ಹಿನ್ನೆಲೆಯಿಂದ ಶಾಸ್ತ್ರ ಗ್ರಂಥಗಳಂತೆ ಕೋಟೆಯನ್ನು ನಿರ್ಮಿಸಿಕೊಳ್ಳದಿದ್ದರೂ ಈ ಅವೈಜ್ಞಾನಿಕ ವಿಧಾನದಲ್ಲೇ ತಮ್ಮದೇ ಆದಂಥ ವಾಸ್ತುವೈವಿಧ್ಯತೆಯನ್ನು ಬಳಸಿಕೊಂಡಿರುತ್ತಾರೆ. ಆದರೂ ಇಂತಹ ಸ್ಥಳೀಯ ವೈವಿಧ್ಯತೆಯು ಸಹ ಬದಲಾದ ಯುದ್ಧ ನೀತಿ ಮತ್ತು ನಿರಂತರ ಸಂಘರ್ಷಗಳಿಂದ ರಕ್ಷಣೆ ಪಡೆಯಲು ವೈಜ್ಞಾನಿಕ ರೀತಿಯಲ್ಲಿ ಗೋಡೆಯನ್ನು ನಿರ್ಮಿಸಿಕೊಳ್ಳದಿರುವುದು ಸಹ ಇವರ ಅವಸಾನಕ್ಕೆ ಕಾರಣವಾಯಿತು.

ಬೆಟ್ಟದ ತುದಿಯಲ್ಲಿ ನಿರ್ಮಾಣಗೊಂಡ ಕೋಟೆಯು ಹೈದರನ ಕಾಲದ್ದಾಗಿದೆ. ತುದಿಯ ಮೊದಲ ಪ್ರವೇಶ ದ್ವಾರದ ಬಳಿ ಗೋಡೆಯು ಗಜ ಪುಷ್ಠಾಕಾರವಾಗಿ ಬೆಟ್ಟದ ಎರಡು ಬದಿಗಳನ್ನು ಜೋಡಿಸುವಂತಿದ್ದು ತುದಿಯಲ್ಲಿ ಮಾತ್ರ ವೃತ್ತಾಕಾರದ ಕೋಟೆ ಗೋಡೆಯಿದೆ. ಈ ಗೋಡೆಯಲ್ಲಿ ಕೈಪಿಡಿ ಗೋಡೆ, ಸೈನಿಕರು ಓಡಾಡಲು ಮತ್ತು ಶಸ್ತ್ರಾಸ್ತ್ರಗಳನ್ನು ಇಡಲು ವೇದಿಕೆ ಅದರ ಮೇಲೆರಲು ಕೆಳಗಿನಿಂದ ಮೆಟ್ಟಿಲುಗಳಿವೆ. ಕೈಪಿಡಿಗೋಡೆಯಲ್ಲಿ ವೀಕ್ಷಣಾ ಅಥವಾ ಅಂಬು ಕಿಂಡಿಯನ್ನು ಒಮ್ಮೆ ಒಂದು ಕಿಂಡಿಯ ಮೂಲಕ ಮೂರು ದಿಕ್ಕಿನ ಚಲನವಲನ ವೀಕ್ಷಿಸಲು ಅನುವಾಗುವಂತೆ ಒಂದೇ ಕಿಂಡಿಯೊಳಗೆ ಮತ್ತೆ ರಂಧ್ರಗಳನ್ನು ಕೊರೆಯಲಾಗಿದೆ. ಕೆಲವೊಮ್ಮೆ ಈ ಕಿಂಡಿಗಳ ಮೂಲಕ ಕಾದ ಎಣ್ಣೆ, ನೀರು, ಅಂಬಲಿಗಳನ್ನು ಶತ್ರುಗಳು ಗೋಡೆ ಮೇಲೆರದಂತೆ ಸುರಿಯುತ್ತಿದ್ದರು. ಶತ್ರುಗಳಿಗೂ ಈ ಕಿಂಡಿಯ ಭಾಗಕ್ಕೂ ಅಂತರ ಕಡಿಮೆ ಇದ್ದಾಗ ಮಾತ್ರ ಬಂದೂಕು ಇಲ್ಲವೇ ಬಾಣಗಳನ್ನು ಪ್ರಯೋಗಿಸಲು ಬಳಸಿಕೊಳ್ಳುತ್ತಿದ್ದರು. ಈ ರಂಧ್ರಗಳ ವಿಶೇಷತೆಯೆಂದರೆ ಶತ್ರು ಯಾವ ದಿಕ್ಕಿಗಿದ್ದ ಅದೇ ದಿಕ್ಕಿಗೆ ಶಸ್ತ್ರಾಸ್ತ್ರ ಪ್ರಯೋಗಿಸಬಹುದಿತ್ತು. ಗೋಡೆಯ ಒಳಬದಿಯಲ್ಲಿ ಗೋಡೆಗೆ ಹೊಂದಿಕೊಂಡಂತೆ ಮದ್ದುಗುಂಡುಗಳನ್ನು ಶೇಖರಿಸಲು

ಇಟ್ಟಿಗೆ ಮತ್ತು ಗಾರೆಯಿಂದ ಮದ್ದಿನ ಮನೆಗಳನ್ನು ನಿರ್ಮಿಸಲಾಗಿದೆ. ಅವು ಯುದ್ಧದಂತಹ ಸಂದರ್ಭದಲ್ಲಿ ಮಾತ್ರ ಬಳಕೆಯಾಗುತ್ತಿದ್ದವೆಂದು ಆ ಮದ್ದಿನ ಮನೆಗೆ ಬಾಗಿಲಿನ ಬದಲು ತೆರೆದ ಕಮಾನು ಇರುವುದರಿಂದ ವೇದ್ಯವಾಗುತ್ತದೆ. ಏಕೆಂದರೆ ತುರ್ತು ಸಂದರ್ಭದಲ್ಲಿ ಸೈನಿಕರ ಬಳಿ ಮದ್ದುಗುಂಡು ಮುಗಿದಾಗ ಅವುಗಳನ್ನು ತರಲು ಬೇರೆಡೆ ಹೊಗಬೇಕೆಂದಾಗ ಶತ್ರುಗಳಿಗೆ ಅವಕಾಶ ಮಾಡಿಕೊಟ್ಟಂತಾಗುತ್ತದೆ. ಹಾಗಾಗಿ ಸೈನಿಕರು ಇರುವಲ್ಲೇ ಮದ್ದುಗುಂಡು ದೊರೆಯುವಂತೆ ಅಲ್ಲಲ್ಲಿ ಮದ್ದಿನ ಮನೆಗಳನ್ನು ಗೋಡೆಯ ಮೇಲೆಯೇ ನಿರ್ಮಿಸಲಾಗಿದೆ. ಇದರಿಂದ ಶತ್ರುಗಳಿಗೆ ಅವಕಾಶ ನೀಡದಂತೆ ಅವರ ಮೇಲೆ ನಿರಂತರವಾಗಿ ದಾಳಿ ಮಾಡಬಹುದಾಗಿತ್ತು.

ಗೋಡೆಯ ಒಳ ಮತ್ತು ಹೊರ ಮುಖವು ಮಳೆ, ಬಿಸಿಲಿನಿಂದ ಹಾಳಾಗಬಾರದೆಂದು ಗಾರೆಯಿಂದ ಲೇಪನ ಮಾಡಲಾಗಿದೆ. ಜೊತೆಗೆ ಮಳೆ ನೀರು ಅದರ ಮೇಲೆ ಬಿದ್ದ ತಕ್ಷಣ ಹರಿದು ಹೋಗುವಂತೆ ನೀರಿನ ಪಟ್ಟಿಕೆಗಳನ್ನು ಬಿಟ್ಟಿದ್ದಾರೆ. ಗೋಡೆಯ ಅಗಲವನ್ನು ವಿಸ್ತರಿಸುವುದಕ್ಕಾಗಿ ಗೋಡೆಗೆ ಹೊಂದಿಕೊಂಡಂತೆ ವೃತ್ತ, ಗಜಪುಷ್ಠ, ಅರ್ಧಚಂದ್ರಾಕಾರದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಈ ಕೊತ್ತಲಗಳ ಕೈಪಿಡಿ ಗೋಡೆಯಲ್ಲಿ ಅಂಬುಕಿಂಡಿಗಳಿಗೆ ಬದಲಾಗಿ ಫಿರಂಗಿ ಕಿಂಡಿ ಇರುವುದರಿಂದ ಇಲ್ಲಿಂದಲೇ ಫಿರಂಗಿಗಳನ್ನು ಬಳಸುತ್ತಿದ್ದರೆಂಬ ಅಂಶ ಸ್ಪಷ್ಟವಾಗುತ್ತದೆ. ಬೆಟ್ಟದಲ್ಲಿನ ಇಡೀ ಕೋಟೆಗೆ ಒಟ್ಟು ೧೨ ಪ್ರವೇಶಗಳಿವೆ. ಅರಮನೆಯ ಹಂತದವರೆಗೆ ಇರುವ ದ್ವಾರಗಳಲ್ಲಿ ಕಲ್ಲಿನ ಕಂಬಗಳ ಮೇಲೆ ಚಪ್ಪಡಿಗಳ ಹೊದಿಕೆಯನ್ನು ಮಾಡಲಾಗಿದೆ. ಅವುಗಳ ಒಳ ಬದಿ ಎರಡೂ ಕಡೆ ಕಾವಲು ಮಂಟಪಗಳು ಶತ್ರುಗಳ ಪ್ರವೇಶವನ್ನು ತಡೆಯುವ ಉದ್ದೇಶಕ್ಕಾಗಿ ನಿರ್ಮಿಸಲ್ಪಟ್ಟಿವೆ. ಆದರೆ ಹೈದರ್‌ನ ಕಾಲದ ದ್ವಾರಗಳು ಹಲವು ತಿರುವುಗಳಿಂದ ಕೂಡಿದ ಆಂಗ್ಲ ಅಕ್ಷರದ ಎಲ್ ಮತ್ತು ಜೆಡ್ ಮಾದರಿಯಲ್ಲಿ ನಿರ್ಮಾಣವಾಗಿವೆ. ಪ್ರವೇಶ ಮಾತ್ರ ಕಮಾನು ರೀತಿಯಲ್ಲಿದೆ. ದ್ವಾರದ ಎರಡೂ ಬದಿ ಶತ್ರುಗಳು ದ್ವಾರದ ಬಳಿ ಬಂದ ತಕ್ಷಣ ಅವರ ಮೇಲೆ ಎತ್ತರದ ಪ್ರವೇಶದಿಂದ ಕಾದ ಎಣ್ಣೆ, ನೀರು, ಅಂಬಲಿಯನ್ನು ಸುರಿಯಲು, ಇಲ್ಲವೇ ಕಲ್ಲುಗುಂಡುಗಳನ್ನು ಉರುಳಿಸಲು ಹಾಗೂ ಮೇಲಿಂದ ಆಯುಧಗಳನ್ನು ಪ್ರಯೋಗಿಸಿದರೆ ಶತ್ರುಗಳಿಗೆ ಬಹುಬೇಗ ತಾಗುತ್ತದೆ ಎಂಬ ಉದ್ದೇಶಕ್ಕಾಗಿ ಬುರುಜುಗಳನ್ನು ನಿರ್ಮಿಸಲಾಗಿದೆ. ಏಕೆಂದರೆ ಬೆಟ್ಟದ ತುದಿ ಭಾಗವನ್ನು ಏರುಮುಖವಾಗಿ ಏರಬೇಕಾಗುತ್ತದೆ. ಈ ಏರುಮುಖ ಇರುವ ಒಂದೆಡೆ ಕಾದ ಅಂಬಲಿ, ಎಣ್ಣೆಗಳನ್ನು ಸುರಿದರೆ ಇಡೀ ಹೆಬ್ಬಂಡೆಯೆಲ್ಲ ಬಹುಬೇಗ ಹರಡಿಕೊಳ್ಳುತ್ತದೆ. ಹೀಗೆ ಹರಡಿಕೊಂಡಾಗ ಕೆಳಗಿರುವ ಶತ್ರುಗಳು ಮೇಲೆರಲು ಯಾವ ತಂತ್ರವನ್ನು ಬಳಸಿದರೂ ಸಹ ಅದು ವಿಫಲವಾಗುತ್ತದೆ. ಒಂದು ವೇಳೆ ಮೇಲೆ ಏರಲು ಪ್ರಯತ್ನಿಸಿದಲ್ಲಿ ಆಳವಾದ ಪ್ರಪಾತಕ್ಕೆ ಬೀಳುವಂತಹ ಅವಕಾಶವೇ ಹೆಚ್ಚಿರುತ್ತದೆ. ಆದುದರಿಂದ ಆ ಎಣ್ಣೆ ಅಥವಾ ಅಂಬಲಿಯ ಅಂಶ ಬಂಡೆಯ ಮೇಲೆ ಒಣಗುವವರೆಗೂ ಯಾವುದೇ ರೀತಿಯ ದಾಳಿಗಳನ್ನು ಮಾಡದಂತೆ ತಟಸ್ಥರಾಗಿರಬೇಕಾಗುತ್ತದೆ. ಒಮ್ಮೆ ಶತ್ರುಗಳನ್ನು ತಟಸ್ಥಗೊಳಿಸಿದರೆ ಒಳಗಿರುವವರಿಗೆ ಸಮಯಾವಕಾಶ

ದೊರೆತು ಕೋಟೆಯನ್ನು ಭದ್ರಪಡಿಸಿಕೊಳ್ಳಬಹುದಿತ್ತು. ಹೀಗೆ ಏನೆಲ್ಲಾ ತಂತ್ರಗಳನ್ನು ಬಳಸಿ ಕೋಟೆಯನ್ನು ಎಷ್ಟೇ ದುರ್ಭೇದ್ಯಗೊಳಿಸಿದರೂ ಬಹುಕಾಲದವರೆಗೆ ರಕ್ಷಣೆ ಪಡೆದುಕೊಳ್ಳಲಾಗುತ್ತಿರಲಿಲ್ಲ. ಏಕೆಂದರೆ ಏಕಶಿಲಾ ಬೆಟ್ಟದಲ್ಲಿ ಬಹುಕಾಲದವರೆಗೆ ನೀರನ್ನು ಸಂಗ್ರಹಿಸಿಟ್ಟುಕೊಳ್ಳುವುದು ಕಷ್ಟಸಾಧ್ಯ. ಬೆಟ್ಟದ ಮೇಲೆ ಬೀಳುವಂತಹ ಮಳೆಯ ನೀರನ್ನು ಬಿಟ್ಟರೆ ಮತ್ತಾವ ಮೂಲಗಳು ಇಲ್ಲಿ ಇರುವುದಿಲ್ಲ. ಹಾಗಾಗಿ ಬೆಟ್ಟದಲ್ಲಿ ಬೀಳುವ ಮಳೆಯ ನೀರನ್ನು ಕಾಲುವೆಗಳ ಮೂಲಕ ಇಳಿಜಾರಾದ ಪ್ರದೇಶಗಳಿಗೆ ಹರಿಬಿಟ್ಟು ಅದರ ಸುತ್ತಲೂ ಇಟ್ಟಿಗೆ ಮತ್ತು ಗಾರೆಯಿಂದ ಕಟ್ಟೆಗಳನ್ನು ಕಟ್ಟಿ ಇವುಗಳನ್ನೇ ಬಾವಿ, ದೊಣೆ, ಕಲ್ಯಾಣಿ, ಕಟ್ಟೆಗಳನ್ನಾಗಿ ಮಾಡಿಕೊಂಡಿದ್ದಾರೆ. ಹೀಗೆ ಶೇಖರಣೆಗೊಂಡ ನೀರು ಕಲುಷಿತವಾದರೆ ಅದನ್ನು ಹೊರ ಹಾಕಲು ತಳಭಾಗದಲ್ಲಿ ರಂಧ್ರವನ್ನು ಬಿಡಲಾಗಿದೆ. ಸಾಮಾನ್ಯವಾಗಿ ಬೇಸಿಗೆಯಲ್ಲಿ ಇಡೀ ಬೆಟ್ಟ ಬಿಸಿಲಿನ ಶಾಖಕ್ಕೆ ಅದರಲ್ಲಿರುವ ನೀರನ್ನು ಸಹ ಬಿಸಿಯಾಗುವಂತೆ ಮಾಡುತ್ತದೆ. ಈ ಕಾರಣಕ್ಕಾಗಿ ಬಾವಿ, ದೊಣೆಗಳಿಗೆ ಒಳ ಮತ್ತು ಹೊರ ಮುಖದಲ್ಲಿ ಸದಾ ತಂಪಿನಿಂದ ಕೂಡಿರಲೆಂದು ಗಾರೆಯನ್ನು ಲೇಪಿಸಿ ನುಣುಪುಗೊಳಿಸಲಾಗಿದೆ.

ನೀರಿನ ಜೊತೆಗೆ ಆಹಾರ ಧಾನ್ಯಗಳ ರಕ್ಷಣೆಯು ಸಹ ಕೋಟೆಗೆ ಅತಿ ಮುಖ್ಯವಾಗಿದೆ. ಏಕೆಂದರೆ ಕೋಟೆ ಕಾಳಗದಂತಹ ಸಂದರ್ಭದಲ್ಲಿ ಬಹು ಕಾಲದವರೆಗೂ ಕೋಟೆಯ ಬಾಗಿಲನ್ನು ತೆರೆಯದಂತಿರಬೇಕಾದರೆ ಕೋಟೆಯ ಒಳಗೆ ಹೆಚ್ಚಿನ ಪ್ರಮಾಣದಲ್ಲಿ ಆಹಾರ ಧಾನ್ಯಗಳು ಕೆಡದಂತೆ ಸಂಗ್ರಹಿಸಬೇಕಾಗುತ್ತದೆ. ಈ ಕಾರಣಕ್ಕಾಗಿ ತುದಿಯ ಭಾಗದಲ್ಲಿ ವೃತ್ತ, ಆಯತ, ಚೌಕ ಮಾದರಿಯಲ್ಲಿ ಗ್ರಾನೈಟ್ ಶಿಲೆಯಿಂದ ಕಣಜವನ್ನು ನಿರ್ಮಿಸಲಾಗಿದೆ. ಅದರ ಒಳಭಾಗ ಸದಾ ಕಾಲ ಹವಾಮಾನವನ್ನು ಸಮಸ್ಥಿತಿಯಲ್ಲಿ ಕಾಯ್ದುಕೊಂಡು ಹೋಗುವ ಉದ್ದೇಶದಿಂದ ಗಾರೆಯನ್ನು ಲೇಪಿಸಲಾಗಿದೆ. ಏಕೆಂದರೆ ಬೇಸಿಗೆ, ಮಳೆಗಾಲ, ಚಳಿಗಾಲ ಮೂರು ಕಾಲಮಾನದಲ್ಲೂ ಸಂಗ್ರಹಗೊಂಡ ಆಹಾರ ಧಾನ್ಯಗಳಿಗೆ ವ್ಯತಿರಿಕ್ತ ಹವಾಮಾನ ಉಂಟಾದರೆ ಕೆಡುವಂತಹ ಸಂಭವ ಹೆಚ್ಚಿರುತ್ತದೆ. ತುಪ್ಪದ ಕೊಳಗಳನ್ನೂ ಸಹ ಇದೇ ಮಾದರಿಯಲ್ಲಿ ನಿರ್ಮಿಸಲಾಗಿದೆ.

ಬೆಟ್ಟದ ತುದಿ ಭಾಗದ ಮಸೀದಿಯನ್ನು ಹೊರತುಪಡಿಸಿ ಉಳಿದ ಅರಮನೆ, ಮದ್ದಿನ ಮನೆ, ಗರಡಿಮನೆ, ವಸತಿ ನಿವೇಶನ, ಅಧಿಕಾರಿ ವರ್ಗದ ಕಟ್ಟಡ, ಮಿಡಿಗೇಶಮ್ಮ ದೇವಾಲಯ ಮೊದಲಾದ ಕಟ್ಟಡಗಳಿಗೆ ಗಾರೆಯ ಲೇಪನ ಕಡಿಮೆ ಪ್ರಮಾಣದಲ್ಲಿದೆ. ಹಾಗಾಗಿ ಇವು ಹೈದರನಿಗಿಂತ ಹಿಂದೆಯೇ ನಿರ್ಮಿಸಲ್ಪಟ್ಟಂತಹ ಕಟ್ಟಡಗಳ ಮಾದರಿಯನ್ನು ಹೋಲುತ್ತವೆ. ಏಕೆಂದರೆ ಈ ಕಟ್ಟಡಗಳಿಗೆ ಬಳಸಿದ ಕಲ್ಲಿನ ಮಾಧ್ಯಮ, ಅವುಗಳ ಆಕಾರ, ಕಟ್ಟಡದ ಶೈಲಿಯು ವಿಜಯನಗರ ಸಮಕಾಲೀನ ಪಾಳೆಯಗಾರರಿಂದ ನಿರ್ಮಾಣಗೊಂಡ ಕೋಟೆ ಗೋಡೆಯ ರಚನಾ ಶೈಲಿಗೆ ಸಾಮಿಪ್ಯವಿದೆ. ಹೈದರ್‌ನಿಗಿಂತಲೂ ಹಿಂದೆಯೇ ತುದಿಭಾಗದಲ್ಲಿ ಕೇವಲ ಅಪತ್ಕಾಲದಲ್ಲಿ ರಕ್ಷಣೆ ಪಡೆಯಲು ಕೋಟೆ ನಿರ್ಮಾಣಗೊಂಡಿತ್ತು. ಆದರೆ ಹೈದರ್ ಅದನ್ನೇ ಮುಖ್ಯ ಕೋಟೆಯನ್ನಾಗಿ

ಮಾಡಿಕೊಂಡು ಅದನ್ನು ಪುನರ್‌ನಿರ್ಮಿಸಿದನು. ಹಾಗಾಗಿ ಅದರ ಶೈಲಿಯನ್ನು ಗಮನಿಸಿದ ತಕ್ಷಣ ಸಾಮಾನ್ಯವಾಗಿ ಹೈದರ್‌ನ ಕಾಲದ್ದೆಂದೇ ಗೋಚರಿಸುತ್ತದೆ. ಆದರೆ ಕೋಟೆಯ ಒಳಗಿನ ಕಟ್ಟಡಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಾತ್ರ ಹೈದರನಿಗಿಂತಲೂ ಹಿಂದೆಯೇ ಇಲ್ಲಿ ಕೋಟೆಯಿತ್ತು ಎಂಬುದು ತಿಳಿಯುತ್ತದೆ. ಈ ಹಂತವನ್ನು ಪ್ರವೇಶಿಸಬೇಕೆಂದರೆ ಹೆಬ್ಬಂಡೆಯಲ್ಲಿ ಕೊರೆದ ೨೦೦ಕ್ಕೂ ಹೆಚ್ಚು ಮೆಟ್ಟಿಲುಗಳ ಮೂಲಕವೇ ಹೋಗಬೇಕು. ಬೇರೆ ಯಾವ ಮಾರ್ಗಗಳಿಂದಲೂ ಪ್ರವೇಶಿಸಲು ಸಾಧ್ಯವಿಲ್ಲ. ಏಕೆಂದರೆ ಸುತ್ತಲೂ ಆಳವಾದ ಪ್ರಪಾತವಿದೆ. ಈ ಕಾರಣಕ್ಕಾಗಿಯೇ ಹೈದರ್, ಟಿಪ್ಪು ತುದಿ ಭಾಗವನ್ನು ಮಾತ್ರ ಜೀರ್ಣೋದ್ಧಾರ ಮಾಡಲು ಆಸಕ್ತಿ ವಹಿಸಿದರು.

ಹೀಗೆ ಮಿಡಿಗೇಶಿ ದುರ್ಗ ಒಂದು ಅಭೇದ್ಯವಾದ ದುರ್ಗವಾಗಿ ರೂಪುಗೊಳ್ಳಲು ಬೇಕಿರುವ ಎಲ್ಲಾ ಲಕ್ಷಣಗಳನ್ನು ಹೊಂದಿದ್ದರೂ ಸಹ ನೀರು ಮತ್ತು ಆಹಾರ ಪದಾರ್ಥಗಳನ್ನು ಬಹುಕಾಲದವರೆಗೆ ಕೋಟೆಯ ಒಳಗಿರುವವರಿಗೆ ಒದಗಿಸಲು ಸಾಧ್ಯವಾಗುತ್ತಿರಲಿಲ್ಲ. ಜೊತೆಗೆ ಕೋಟೆ ಕಾಳಗದಂತಹ ಸಂದರ್ಭದಲ್ಲಿಯೂ ಗುಪ್ತ ಮಾರ್ಗಗಳ ಮೂಲಕ ಹೊರಹೋಗಲು ಅವಕಾಶ ಇಲ್ಲದಿರುವಂತಹದ್ದೇ ಶತ್ರುಗಳಿಗೆ ಕೋಟೆಯ ಬಾಗಿಲನ್ನು ಬಹುಬೇಗ ತೆರೆಯುವಂತೆ ಮಾಡುತ್ತಿತ್ತು. ಏಕೆಂದರೆ ಇಡೀ ಬೆಟ್ಟದ ಸುತ್ತಲೂ ಆಳವಾದ ಪ್ರಪಾತ ಇರುವುದರಿಂದ ಪ್ರವೇಶಕ್ಕಾಗಿ ಮಾಡಿಕೊಂಡ ಮೆಟ್ಟಿಲುಗಳ ಮೂಲಕವೇ ಬೆಟ್ಟವನ್ನು ಏರುವ ಇಲ್ಲವೆ ಇಳಿಯುವ ಕಾರ್ಯದಲ್ಲಿ ತೊಡಗುವಂತೆ ಮಾಡಿತ್ತು. ಆದುದರಿಂದಲೇ ಮಿಡಿಗೇಶಿ ಕೋಟೆ ಕರ್ನಾಟಕದ ಪ್ರಮುಖ ಗಿರಿದುರ್ಗವಾಗುವಲ್ಲಿ ಎಡವಿತು.

೩) ಶೈಲೇಂದ್ರ (ಶೈಲಾಪುರ)

ಕ್ರಿ.ಶ ೭೫೦ರ ಎರೆಯಪ್ಪನ ಕಡಲೂರಿನ ಶಾಸನ[೪೬] ಉಲ್ಲೇಖಿಸುವ ಶೈಲೇಂದ್ರವು ಇಂದಿನ ಪಾವಗಡ ತಾಲೂಕಿನ ಶೈಲಾಪುರವೇ ಆಗಿರಬಹುದು. ಏಕೆಂದರೆ ಜಿಲ್ಲೆಯಲ್ಲಿ ಹಾಗೂ ಆಂಧ್ರದ ಮಡಕಶಿರ ಮಂಡಲದಲ್ಲಿ ಶೈಲೇಂದ್ರ ಎಂಬ ಹೆಸರಿನ ಯಾವ ಸ್ಥಳನಾಮಗಳು ಕಂಡು ಬರುವುದಿಲ್ಲ. ಶೈಲಾಪುರ ಸ್ಥಳನಾಮವೂ ಶೈಲೇಂದ್ರ ಎಂಬುದಕ್ಕೆ ಸಾಮಿಪ್ಯತೆ ಹೊಂದಿರುವುದರಿಂದ ಶೈಲ ಎಂದರೆ ಪರ್ವತ ಎಂದೂ, ಇಂದ್ರ ಎಂದರೆ ಒಡೆಯ ಎಂಬ ಅರ್ಥ ನೀಡುತ್ತದೆ. ಇಂದಿನ ಶೈಲಾಪುರ ಗ್ರಾಮದಲ್ಲಿ ಸುತ್ತಲೂ ಬೆಟ್ಟ ಗುಡ್ಡಗಳು ಎರಡು ಮೂರು ಕಿ.ಮೀ. ಅಂತರದಲ್ಲಿ ಸುತ್ತುವರೆದಿದೆ. ಆದರೆ ಶೈಲಾಪುರದಲ್ಲಿ ನೊಳಂಬರ ಕಾಲಕ್ಕೆ ಸೇರಿರುವ ಯಾವ ಕೋಟೆಯ ಅವಶೇಷಗಳು ಕಂಡುಬರುವುದಿಲ್ಲ. ಏಕೆಂದರೆ ಈ ಪರಿಸರದಲ್ಲಿ ಇಂದಿಗೂ ಹಳೆಯ ಕಾಲದ ದಿಬ್ಬಗಳಲ್ಲಿನ ಮಣ್ಣು ಎಲ್ಲಿಯಾದರೂ ಕಂಡರೆ ಅದನ್ನು ತಮ್ಮ ಜಮೀನಿನ ಫಲವತ್ತತೆ ಹೆಚ್ಚಿಸುವ ಉದ್ದೇಶಕ್ಕಾಗಿ ಬಳಸಿಕೊಳ್ಳುತ್ತಾರೆ. ಬಹುಶಃ ಇದರಿಂದಲೇ ಮಣ್ಣಿನ ಕೋಟೆ, ಪ್ರಾಗಿತಿಹಾಸ ಕಾಲದ ದಿಬ್ಬಗಳು ಬಹುತೇಕ ನಾಶ ಹೊಂದಿವೆ.

೪) ಕೈದಾಳ (ಕ್ರೀಡಾಪುರ)

ಕ್ರೀಡಾಪುರ ಅಥವಾ ಕೈದಾಳವು ಗಂಗರ ಆರಂಭದ ಕಾಲಘಟ್ಟಕ್ಕಾಗಲೇ ಪ್ರಮುಖ ಪಟ್ಟಣವಾಗಿದ್ದರಿಂದ ಪಲ್ಲವ, ಚೋಳ, ರಾಷ್ಟ್ರಕೂಟರ ಗಂಗಮಂಡಲದ ಮೇಲಿನ ದಾಳಿಗಳು ಈ ಭಾಗದ ಮೂಲಕವೇ ನಡೆದವು. ಆದುದರಿಂದ ಗಂಗರು ತಮ್ಮ ಗಡಿ ಪ್ರಾಂತ್ಯವಾದ ಕೈದಾಳದಲ್ಲಿ ಕೋಟೆಯನ್ನು ನಿರ್ಮಿಸಿ ಒಬ್ಬ ದಂಡನಾಯಕ ಇಲ್ಲವೇ ಅಧಿಕಾರಿಯನ್ನು ನೇಮಿಸಿದರೆಂದು ಕೈದಾಳ ಪರಿಸರದ ಗಂಗರ ಶಾಸನಗಳಿಂದ ತಿಳಿಯುತ್ತದೆ. ಕ್ರಮೇಣ ಇಲ್ಲಿ ಗಂಗರ ಸಾರ್ವಭೌಮತ್ವದ ಅಡಿಯಲ್ಲಿ ಸಾಮಂತ ಮನೆತನವೊಂದು ಪ್ರಭುತ್ವ ಸಾಧಿಸಿದ್ದನ್ನು ಅಮೋಘವರ್ಷನ ಕಾಲದ ನೀಲಗುಂದ, ಶಿರೂರು[೪೮], ಕನ್ನೂರು ಶಾಸನಗಳು[೪೭] ಸ್ಪಷ್ಟಪಡಿಸುತ್ತವೆ. ಇವು ಅಮೋಘವರ್ಷನ ಸಾಮಂತನಾದ ಬಂಕೇಶ ಗಂಗ ಮಂಡಲವನ್ನು ವಶಪಡಿಸಿಕೊಳ್ಳುವ ಸಂದರ್ಭದಲ್ಲಿ ಕೈದಾಳ ಕೋಟೆಯ ಮೇಲೆ ದಾಳಿ ಮಾಡಿ ಹಾಳುಗೆಡವಿದನೆಂದು ತಿಳಿಸುತ್ತವೆ.

ಕೈದಾಳವು ಹೊಯ್ಸಳರ ಕಾಲಕ್ಕೆ ಪ್ರಸಿದ್ಧಿಗೆ ಬಂದು ರಾಜ್ಯ ಮಾನ್ಯತೆ ಗಳಿಸಿಕೊಂಡಿತ್ತು. ಹೊಯ್ಸಳರ ಬಹು ನಂಬಿಕಸ್ತ ಸಾಮಂತ ಗೂಳಿಬಾಚಿ ಮತ್ತು ಆತನ ವಂಶಿಕರಿಂದ ಕೋಟೆಯು ವಿಸ್ತರಿಸಲ್ಪಟ್ಟಿರುವುದು ಶಾಸನಗಳಿಂದ ಸ್ಪಷ್ಟವಾಗುತ್ತದೆ. ವಿಶೇಷವಾಗಿ ಶಾಸನಗಳಲ್ಲಿ ಕೈದಾಳವು ಕ್ರೀಡಾಪುರ, ಕೈದಳವಂ[೪೮], ಕಿದಾಳ್[೪೯], ಕಯ್ದಾಳ[೫೦] ಎಂಬುದಾಗಿ ಉಲ್ಲೇಖಿಸಲ್ಪಟ್ಟಿದೆ. ಆದರೆ ಕ್ರೀಡಾಪುರ ಎಂಬ ಉಲ್ಲೇಖವನ್ನು ಕದಂಬರೊಂದಿಗೆ ಸಮೀಕರಿಸುವ ಪ್ರಯತ್ನವನ್ನು ಆರ್. ಗೋಪಾಲ್ ಮತ್ತು ಭಾಸ್ಕರಪ್ಪ ಮೊದಲಾದ ವಿದ್ವಾಂಸರು ಮಾಡಿದ್ದಾರಾದರೂ ಅದಕ್ಕೆ ಪೂರಕವಾದ ಯಾವ ಪ್ರಾಚ್ಯವಶೇಷಗಳನ್ನು ಈ ಪರಿಸರದಲ್ಲಿ ವ್ಯಾಪಕವಾಗಿ ಕೃಷಿ ಚಟುವಟಿಕೆ ನಡೆಯುತ್ತಿರುವುದರಿಂದ ಪತ್ತೆಹಚ್ಚಲು ಸಾಧ್ಯವಾಗುತ್ತಿಲ್ಲ. ಆದರೂ ರಾಷ್ಟ್ರಕೂಟರ ಅಮೋಘವರ್ಷನ ಕಾಲದ ಶಾಸನಗಳಲ್ಲಿ ಕೈದಾಳ ಕೋಟೆಯ ಉಲ್ಲೇಖ ದೊರೆಯುವುದರಿಂದ ರಾಷ್ಟ್ರಕೂಟರಿಗಿಂತಲೂ ಪೂರ್ವದಲ್ಲಿಯೇ ಇಲ್ಲಿ ಕೋಟೆ ಇತ್ತು ಎಂಬುದು ಸ್ಪಷ್ಟವಾಗುತ್ತದೆ.

೫. ತುಮಕೂರು

ತುಮ್ಮಗೂರು, ತುಮಕೇನಹಳ್ಳಿ, ತುಂಬೇನಹಳ್ಳಿ ಎಂದೆಲ್ಲಾ ಕರೆಯಲ್ಪಡುವ ಇಂದಿನ ತುಮಕೂರು ಪಟ್ಟಣ ಮೊದಲಿಗೆ ಇಂದಿನ ಕೈದಾಳ ಪ್ರದೇಶದಲ್ಲಿತ್ತು. ಕ್ರಮೇಣ ಜನವಸತಿ ಹೆಚ್ಚಾದಂತೆಲ್ಲಾ ಇಂದಿನ ತುಮಕೂರು ಪಟ್ಟಣಕ್ಕೆ ವಿಸ್ತರಿಸಲ್ಪಟ್ಟಿರುವುದು ಶಾಸನ, ಐತಿಹ್ಯ ಮೊದಲಾದವುಗಳಿಂದ ತಿಳಿಯುತ್ತದೆ. ಗಂಗರ ಸಾಮಂತ ಮನೆತನವೊಂದು ಇಂದಿನ ತುಮಕೂರು ಪಟ್ಟಣದ ಹಳೆ ಮಾರುಕಟ್ಟೆ ಪ್ರದೇಶದಲ್ಲಿ ಎತ್ತರದ ದಿಬ್ಬವೊಂದನ್ನು ನಿರ್ಮಿಸಿ ಅಲ್ಲಿ ಶತ್ರುಗಳ ಮುನ್ಸೂಚನೆ ದೊರೆತ ನಂತರ ಜೋರಾಗಿ ನಗಾರಿ ಬಾರಿಸುವಂತಹ ತಂಡವೊಂದನ್ನು ನೇಮಿಸಿದ್ದರಂತೆ. ಈ ನಗಾರಿಯ ಶಬ್ದ ಟುಯುಕ್, ಟುಯುಕ್ ಎಂಬುದಾಗಿ ಹೊರಹೊಮ್ಮುತ್ತಿತ್ತಂತೆ. ಹಾಗಾಗಿಯೇ ಈ ಪ್ರದೇಶ ಟುಮುಕಿ ಎಂಬುದಾಗಿ ಪ್ರಸಿದ್ಧಿಗೆ ಬಂತೆಂದೂ ಅದು ಅಪಭ್ರಂಶಗೊಂಡು ಇಂದಿನ

ತುಮಕೂರು ಆಯಿತೆಂದು ಹೇಳಲಾಗುತ್ತದೆ. ಅದೇ ರೀತಿ ತುಮಕೂರು ಪರಿಸರದಲ್ಲಿ ತುಂಬೆ ಗಿಡಗಳು ಹೇರಳವಾಗಿದ್ದ ಕಾರಣ ತುಮಕೇನಹಳ್ಳಿ, ತುಂಬೆಗೂರು ಎಂಬುದಾಗಿಯೂ ಇದು ಪ್ರಸಿದ್ಧಿಗೆ ಬಂತೆಂದೂ, ತುಮಕೂರು ಪಟ್ಟಣದ ಸುತ್ತಲೂ ಅಕ್ಕಾತಂಗಿ ಕೆರೆ, ಅಮಾನಿಕೆರೆ, ಗೂಳೂರು ಕೆರೆ ಮೊದಲಾದವು ಸದಾ ನೀರಿನಿಂದ ತುಂಬಿ ಕೋಡಿಯಲ್ಲಿ ಹರಿಯುವ ನೀರು ಟುಮುಕ್, ಟುಮುಕ್ ಎಂಬ ಶಬ್ದವನ್ನು ಹೊರಸೂಸುತ್ತಿದ್ದವಂತೆ. ಹಾಗಾಗಿ ಈ ಪ್ರದೇಶವನ್ನು ಟುಮುಕಿ ಎಂದು ಜನಪದರು ಕರೆದುಕೊಂಡರು ಕ್ರಮೇಣ ಟುಮುಕಿ ಎಂಬ ಶಬ್ದ ಅಪಭ್ರಂಶಗೊಂಡು ತುಮಕೂರು ಆಗಿದೆ ಎಂದೂ, ಅದೇ ರೀತಿ ಹಿಂದೆ ಇಲ್ಲಿ ಮದ್ದುಗುಂಡುಗಳನ್ನು ಗಂಗರ ಕಾಲದಲ್ಲಿ ತಯಾರಿಸುತ್ತಿದ್ದರಂತೆ. ಒಮ್ಮೆ ಮದ್ದುಗುಂಡೊಂದು ಸ್ಫೋಟಗೊಂಡು ಟುಮುಕ್ ಎಂಬ ಶಬ್ದವನ್ನು ಹೊರಸೂಸಿದ್ದರಿಂದ ಈ ಪ್ರದೇಶ ಟುಮುಕಿ ಎಂದು ಹೆಸರು ಬಂತೆಂದು ಹೇಳುವಂತಹ ಹಲವು ಐತಿಹ್ಯಗಳನ್ನು ಗಮನಿಸಿದರೆ ಗಂಗರ ಸಾಮಂತ ಮನೆತನ ಕೈದಾಳದಲ್ಲಿ ಆಳ್ವಿಕೆ ಮಾಡುತ್ತಿದ್ದರಿಂದ ಪಲ್ಲವ, ನೊಳಂಬ, ಚೋಳ, ರಾಷ್ಟ್ರಕೂಟರ ದಾಳಿಗಳು ನಿರಂತರವಾಗಿ ಇವರ ಮೇಲೆ ನಡೆಯುತ್ತಿತ್ತು. ಆದುದರಿಂದ ಈ ಪ್ರದೇಶದಲ್ಲಿ ಮದ್ದುಗುಂಡು, ನಗಾರಿಗಳ ಮೂಲಕ ಕ್ರೀಡಾಪುರಕ್ಕೆ ಮಾಹಿತಿ ರವಾನಿಸುವ ಕಾರ್ಯನಿರ್ವಹಿಸುತ್ತಾ ಅದರಿಂದ ಹೊರಸೂಸುವ ಟುಮುಕಿ ಎಂಬ ಶಬ್ದದಿಂದಲೇ ಈ ಪ್ರದೇಶಕ್ಕೆ ಸ್ಥಳವಾಚಕ ಬಂದಿರುವ ಸಾಧ್ಯತೆಯಿದೆ. ಕ್ರಮೇಣ ಇಲ್ಲಿ ಜನವಸತಿ ನೆಲೆನಿಂತ ಮೇಲೆ ಊರು ರೂಪುಗೊಂಡು ಟುಮುಕೂರು ಎನ್ನುವ ಹೆಸರಿನಲ್ಲಿ ಪ್ರಸಿದ್ಧಿಗೆ ಬಂದು ನಂತರದಲ್ಲಿ ಟುಮಕೂರು, ತುಮಕೂರು ಎಂಬುದಾಗಿ ರೂಢಿಗೆ ಬಂದಿತು.

ಹೀಗೆ ಹಲವು ಕಾರಣಗಳಿಗಾಗಿ ರೂಪುಗೊಂಡ ಇಲ್ಲಿನ ಮಣ್ಣಿನ ದಿಬ್ಬವು ಹೊಯ್ಸಳರ ಸಾಮಂತ ಗೂಳಿಬಾಚಿಯ ಕಾಲಕ್ಕೆ ಕೋಟೆಯಾಗಿ ಪರಿವರ್ತನೆ ಹೊಂದಿತು. ವಿಜಯನಗರ ಕಾಲಕ್ಕಾಗಲೇ ಇಂದಿನ ಹಳೆಯ ಮಾರುಕಟ್ಟೆಯಿಂದ ಅಮಾನಿಕೆರೆಯವರೆಗೂ, ಬಟವಾಡೆ ಹಾಗೂ ಇಳಿಕಲ್‌ಬೆಟ್ಟದಲ್ಲಿ ಕೋಟೆ ವಿಸ್ತರಿಸಲ್ಪಟ್ಟಿದ್ದು ಶಾಸನ ಮತ್ತು ಅಲ್ಲಿಯ ಕೋಟೆಯ ಅವಶೇಷಗಳಿಂದ ತಿಳಿಯುತ್ತದೆ. ಆದರೆ ಇಂದಿನ ಹಳೆ ಮಾರುಕಟ್ಟೆ ಮತ್ತು ಬಟವಾಡೆಯಲ್ಲಿ ಪಟ್ಟಣ ವಿಸ್ತಾರವಾದಂತೆಲ್ಲಾ ಕೋಟೆಯು ಮಾನವನ ಸ್ವಾರ್ಥಕ್ಕೆ ಸಿಲುಕಿ ಅವಸಾನ ಹೊಂದಿದೆ. ಬಟವಾಡೆಯನ್ನು ಪುರವರ್ಗವಾಗಿ ಕೃಷ್ಣದೇವರಾಯ ದತ್ತಿ ಬಿಟ್ಟಿದ್ದನ್ನು ಕ್ರಿಶ ೧೫೧೩ರ ಬಟವಾಡೆ ಶಾಸನ[೫೧] ಉಲ್ಲೇಖಿಸುತ್ತದೆ. ಆದುದರಿಂದ ಇದರ ಸಮೀಪದಲ್ಲಿರುವ ಇಳಕಲ್‌ಬೆಟ್ಟದ ಕೋಟೆಯೂ ಸಹ ಪುರವರ್ಗದ ರಕ್ಷಣೆಗಾಗಿ ಕೃಷ್ಣದೇವರಾಯನ ಕಾಲದಲ್ಲಿ ನಿರ್ಮಿಸಲ್ಪಟ್ಟಿರಬಹುದು. ಈ ಬೆಟ್ಟದಲ್ಲಿ ಸುಲಭವಾಗಿ ಪ್ರವೇಶಿಸಲು ಅವಕಾಶವಿರುವಲ್ಲಿ ಮಾತ್ರ ಹಾಗೂ ಕಿಲ್ಲೇದಾರನ ಕಟ್ಟಡದ ಸುತ್ತಲೂ ಕಾಡುಗಲ್ಲುಗಳಿಂದ ನಿರ್ಮಿಸಲಾಗಿದೆ. ಏಕೆಂದರೆ ಬೆಟ್ಟದ ತುದಿಯ ಭಾಗ ಆಳವಾದ ಪ್ರಪಾತವನ್ನು ಸುತ್ತಲೂ ಹೊಂದಿರುವುದರಿಂದ ಶತ್ರುಗಳ ಪ್ರವೇಶಕ್ಕೆ ಅವಕಾಶವಿಲ್ಲ. ಈ

ಉದ್ದೇಶದಿಂದಲೇ ಅನಾವಶ್ಯಕವಾದಲ್ಲಿ ಗೋಡೆಯನ್ನು ನಿರ್ಮಿಸಿಲ್ಲ. ಜೊತೆಗೆ ಗೋಡೆಯನ್ನು ಸಹ ಅವೈಜ್ಞಾನಿಕವಾಗಿ ಕಾಡುಗಲ್ಲುಗಳಿಂದ ಜೋಡಿಸಿದ್ದಾರೆ. ಏಕೆಂದರೆ ಇಡೀ ಬೆಟ್ಟವೇ ರಕ್ಷಣೆ ನೀಡುವುದರಿಂದ ಬೆಟ್ಟದಲ್ಲಿ ಕೋಟೆ ಇದೆಯೋ ಇಲ್ಲವೋ ಎನ್ನುವಂತಿದೆ. ತಿಳಿಯದಂತಹ ಪ್ರದೇಶದಲ್ಲಿ ನಿರ್ಮಿಸುವ ಹಿಂದಿನ ಉದ್ದೇಶ ಶತ್ರುಗಳನ್ನು ಮೋಸಗೊಳಿಸುವ ತಂತ್ರ ಈ ಕೋಟೆಯು ಎರಡು ಸುತ್ತಿನಿಂದ ಕೂಡಿದ್ದು ಒಳಭಾಗದಲ್ಲಿ ಕಿಲ್ಲೆದಾರನ ಆಯತಾಕಾರದ ಕಟ್ಟಡ, ನೀರಿನ ಸಂಗ್ರಹಣೆಗಾಗಿ ಮಣ್ಣಿನ ಕಟ್ಟೆ, ದೊಣೆ, ಕಿಲ್ಲೆದಾರನ ಸಂಬಂಧಿಕರ ವಸತಿ ನಿವೇಶನಗಳ ಅವಶೇಷಗಳಿವೆ. ಆದರೆ ಅವುಗಳನ್ನು ಇಂತಹದ್ದೇ ಕಟ್ಟಡದ್ದು ಇದು ಎಂದು ಗುರುತಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ತಳಪಾಯದ ಅವಶೇಷಗಳು ಮಾತ್ರ ಉಳಿದುಕೊಂಡಿದೆ. ಇಲ್ಲಿ ಕೋಟೆ ಇತ್ತು ಎಂದು ಗುರುತಿಸಲು ಕೋಟೆ ಆಂಜನೇಯ ದೇವಾಲಯ ಮಾತ್ರ ಉಳಿದುಕೊಂಡಿದೆ. ವಿಜಯನಗರ ಸಾಮ್ರಾಜ್ಯದ ಅಂತ್ಯದೊಂದಿಗೆ ಈ ಕೋಟೆಯೂ ಸಹ ಮಹತ್ವ ಕಳೆದುಕೊಂಡದ್ದು ಒಡೆಯರು ದೇವರಾಯನದುರ್ಗಕ್ಕೆ ನೀಡಿದ ಪ್ರಾಧಾನ್ಯತೆಯಿಂದ ಸ್ಪಷ್ಟವಾಗುತ್ತದೆ.

೬. ಕುಣಿಗಲ್

ಈ ಪ್ರದೇಶವು ಶಾಸನ, ಐತಿಹ್ಯ, ಕಥೆ, ಕಾವ್ಯಗಳಲ್ಲಿ ಕುಣಿಂಗಿಲ್. ಕುಣುಂಗಲ್, ನರ್ತನಿಪುರಿ ಎಂಬುದಾಗಿ ಉಲ್ಲೇಖಗೊಂಡಿದೆ. ಒಮ್ಮೆ ಶಿವನು ಈ ಪ್ರದೇಶದ ಪ್ರಕೃತಿಯನ್ನು ವೀಕ್ಷಿಸಲು ಬಂದಾಗ ಅಲ್ಲಿಯ ಸೊಬಗನ್ನು ಕಂಡು ನರ್ತನ ಮಾಡಿದನಂತೆ. ಅದನ್ನು ಕಂಡ ಅಲ್ಲಿಯ ಕಲ್ಲುಗಳು ಸಹ ಕೆರೆಯ ಮೇಲೆ ನರ್ತಿಸಿದವಂತೆ; ಅದಕ್ಕಾಗಿಯೇ ಈ ಪಟ್ಟಣಕ್ಕೆ ನರ್ತನಪುರಿ ಎಂಬ ಹೆಸರು ಬಂದಿತೆಂದು ಅಲ್ಲಿಯ ಐತಿಹ್ಯವೊಂದು ಸ್ಪಷ್ಟಪಡಿಸುತ್ತದೆ. ಬಹುಶಃ ಶಿವನ ನರ್ತನೆಯ ಕಲ್ಪನೆ ಇರುವ ಈ ಐತಿಹ್ಯಕ್ಕೂ ಅಲ್ಲಿಯೇ ಇರುವ ಗಂಗರ ಕಾಲದ ಸೋಮೇಶ್ವರ ದೇವಾಲಯದಲ್ಲಿನ ನರ್ತನಾ ಶಿಲ್ಪಗಳಿಗೂ ಸಂಬಂಧ ಇರುವುದರಿಂದ ನರ್ತನಿಪುರ ಎಂಬುದು ಗಂಗರ ಕಾಲಕ್ಕೆ ಪ್ರಸಿದ್ಧಿಗೆ ಬಂದಿರಬಹುದು. ಈ ಪರಿಸರದಲ್ಲಿ ನರ್ತಕಿಯರ ನರ್ತನಕ್ಕೆ ಮೆಚ್ಚಿ ದಾನದತ್ತಿ ನೀಡಿದ ಉಲ್ಲೇಖ ಶಾಸನಗಳಲ್ಲಿ ಸಿಗುತ್ತವೆ. ಆಸ್ಥಾನಗಳಲ್ಲಿ ನರ್ತನೆ ಅಥವಾ ನೃತ್ಯ ಮಾಡುವ ನರ್ತಕಿಯರ ಗುಂಪು ಈ ಪ್ರದೇಶದಲ್ಲಿ ಇದ್ದಿದ್ದರಿಂದಲೇ ನರ್ತನಾ ಶಿಲ್ಪಗಳು ಸೋಮೇಶ್ವರ ದೇವಾಲಯದ ಭಿತ್ತಿ ಮತ್ತು ಕಂಬಗಳಲ್ಲಿ ಹೆಚ್ಚಾಗಿ ಕಂಡುಬರುತ್ತವೆ. ಈ ಐತಿಹ್ಯದಲ್ಲಿ ಕೆರೆಯ ಉಲ್ಲೇಖ ಸಹ ಸಿಗುವುದರಿಂದ ಕುಣಿಗಲ್ಲಿನ ಶ್ರೀಪುರುಷ[೨೨] ಶಾಸನ ಕೆರೆಯ ಕಟ್ಟೆಯನ್ನು ಜೀರ್ಣೋದ್ಧಾರ ಮಾಡಿದ್ದನ್ನು ತಿಳಿಸುತ್ತದೆ. ಹಾಗಾಗಿ ಐತಿಹ್ಯದಲ್ಲಿರುವ ಐತಿಹಾಸಿಕ ಅಂಶಗಳನ್ನು ಒಪ್ಪಿಕೊಳ್ಳಬಹುದು. ಕೆರೆಗೆ ಬಳಸಲ್ಪಟ್ಟ ಡೈಕ್ ಶಿಲಾ ಮಾಧ್ಯಮವೇ ಇಲ್ಲಿನ ಕೋಟೆಗೂ ಬಳಕೆಯಾಗಿರುವುದರಿಂದ ಶ್ರೀಪುರುಷನ ಅಂತ್ಯಕಾಲಕ್ಕೆ ಕೋಟೆ ಗೋಡೆ ನಿರ್ಮಾಣಗೊಂಡಿರಬಹುದು. ಏಕೆಂದರೆ ಶ್ರೀಪುರುಷ[೨೨] ಕೆರೆಯನ್ನು ನಿರ್ಮಿಸಿದನೆಂದಾಗ ಅದರ ಕೆಳಗಿನ ಪಟ್ಟಣವನ್ನು ಆತನೇ ನಿರ್ಮಿಸಿರಬೇಕು. ಏಕೆಂದರೆ ಸಾಮಾನ್ಯವಾಗಿ ಕೆರೆಗಳ ಕೆಳಗೆಯೇ ಪಟ್ಟಣ ಬೆಳವಣಿಗೆ ಹೊಂದಿರುವುದಕ್ಕೆ

ಚಾರಿತ್ರಿಕವಾಗಿ ದಾಖಲೆಗಳಿವೆ. ಅದೇ ರೀತಿ ಕುಣಿಗಲ್‌ನಲ್ಲಿ ಹೇರಳವಾದ ಗುರಗಂಜಿ ಗಿಡಗಳಿದ್ದು ಗುರಗಂಜಿ ಎಂದರೆ ನಂದಿವೃಕ್ಷ ಎಂಬ ಅರ್ಥವಿದೆ. ಹಾಗಾಗಿ ಗುರಗಂಜಿ ಗಿಡಗಳಿರುವ ಪ್ರದೇಶವೇ ಕುಣಿಗಲ್ ಎಂಬುದಾಗಿ ಜನಪದರಲ್ಲಿ ರೂಢಿಗೆ ಬಂದಿರುವ ಸಾಧ್ಯತೆಗಳೂ ಇವೆ.

ಕುಣಿಗಲ್ ಪರಿಸರಲ್ಲಿ ಇಂದಿಗೂ ಆಳವಾದ ಕುಣಿ, ಡೈಕ್ ಶಿಲೆಯ ಗುಂಡುಗಳ ರಚನೆ ಕಂಡುಬರುತ್ತದೆ. ಬಹಶಃ ಶ್ರೀಪುರುಷನ ಕಾಲದಲ್ಲಿ ಇಂತಹ ಬೃಹತ್ ಕುಣಿಗಳಿಗೆ ತಡೆ ಗೋಡೆಯಾಗಿ ಅಲ್ಲಿಯೇ ಇದ್ದ ಈ ಡೈಕ್ ಶಿಲೆಗಳಿಂದ ಕಟ್ಟೆಯನ್ನು ಕಟ್ಟಿದ್ದರಿಂದಲೇ ಕುಣಿಗಳಿಗೆ ಅಡ್ಡಲಾಗಿ ಕಲ್ಲುಗಳಿಂದ ಕಟ್ಟಿದ ಕೆರೆಯ ಕೆಳಗೆ ಪಟ್ಟಣವೇ ಕ್ರಮೇಣ ಕುಣಿಗಲ್ ಎಂಬುದಾಗಿ ಪ್ರಸಿದ್ಧಿಗೆ ಬಂದಿದೆ. ಈ ಕೆರೆಯು ಸಾವಿರಾರು ಎಕರೆಗಳಿಗೆ ಜೀವಸೆಲೆಯಾಗಿ ಈ ಪರಿಸರದಲ್ಲಿ ಕೃಷಿಯು ವಿಸ್ತಾರಗೊಳ್ಳುವಂತೆ ಮಾಡಿತು. ಆ ಮೂಲಕ ರಾಜ್ಯಕ್ಕೆ ಬೇಕಾದ ಕೃಷಿ ಉತ್ಪನ್ನ ಹಾಗೂ ವರಮಾನವನ್ನು ನೀಡುತ್ತಿತ್ತು. ಈ ಉದ್ದೇಶದಿಂದಲೇ ಶ್ರೀಪುರುಷ[೫೩] ತನ್ನ ಉತ್ತರಾಧಿಕಾರಿಯಾದ ಶಿವಮಾರನನ್ನು ಕುಣಿಗಲ್‌ನ ರಾಜ್ಯಪಾಲನನ್ನಾಗಿ ನೇಮಿಸಿದನು. ಈತನಿಂದಲೇ ಕುಣಿಗಲ್ ಪಟ್ಟಣದಲ್ಲಿ ಮೊದಲ ಬಾರಿಗೆ ಅಧಿಕಾರ ಚಲಾಯಿಸಲ್ಪಟ್ಟಿದ್ದರಿಂದ ಕೆರೆಯ ಕೆಳಗಿರುವ ಡೈಕ್ ಶಿಲೆಯ ೩೦೦ಮೀ. ಉದ್ದದ ಕೋಟೆ ಗೋಡೆಯು ನಿರ್ಮಿಸಲ್ಪಟ್ಟಿರಬಹುದು. ಆದರೆ ಶಾಸನೋಕ್ತ ದಾಖಲೆಗಳು ಗಂಗ ಮಂಡಲವನ್ನು ಗೆದ್ದ ರಾಷ್ಟ್ರಕೂಟರ ಧ್ರುವನು ತನ್ನ ಮಗ ಸ್ತಂಭ ಅಥವಾ ಕಂಭನನ್ನು ಕುಣಿಗಲ್ ಪ್ರದೇಶದ ರಾಜ್ಯಪಾಲನನ್ನಾಗಿ ನೇಮಿಸಿದಾಗ ಆತನಿಂದಲೇ ಇಲ್ಲಿಯ ಕೋಟೆ ನಿರ್ಮಾಣ[೫೪]ಗೊಂಡಿತೆಂದು ಉಲ್ಲೇಖಿಸುತ್ತವೆ. ಇವರ ನಂತರ ಇಡೀ ಗಂಗ ಮಂಡಲವನ್ನು ತಮ್ಮ ಅಧಿಪತ್ಯಕ್ಕೆ ತೆಗೆದುಕೊಳ್ಳಲು ಪ್ರಯತ್ನಿಸಿದ ಚೋಳರು ಸಹ ಈ ಪ್ರದೇಶದ ವರಮಾನವನ್ನು ನೋಡಿ ಕುಣಿಗಲ್ ಪಟ್ಟಣವನ್ನೇ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು 'ವಿಕ್ರಮ ಚೋಳಪುರ'[೫೫] ಎಂದು ಮರುನಾಮಕರಣ ಮಾಡಿದರು. ಅದರ ನಿರ್ವಹಣೆಗಾಗಿ ಒಬ್ಬ ಅಧಿಕಾರಿಯನ್ನು ಸಹ ನೇಮಿಸಿದ್ದರು. ಇವರ ಕಾಲದಲ್ಲೂ ಪಟ್ಟಣ ವಿಸ್ತಾರಗೊಂಡಂತೆ ಕೋಟೆಯೂ ವಿಸ್ತರಿಸಲ್ಪಟ್ಟಿರುವ ಸಾಧ್ಯತೆಗಳಿವೆ. ಚೋಳರು ಗಂಗ ಮಂಡಲದಿಂದ ಹೊರ ಹೋದಾಗ ಹೊಯ್ಸಳರು ಕುಣಿಗಲ್ ಪಟ್ಟಣವನ್ನು ತಮ್ಮ ಪ್ರಮುಖ ಉಪವಿಭಾಗವನ್ನಾಗಿ ಮಾಡಿಕೊಂಡರು. ಇದು ವಿಜಯನಗರ ಕಾಲಕ್ಕೆ ಅಭೇದ್ಯ ದುರ್ಗವಾಗಿ ರೂಪುಗೊಂಡಿತ್ತು ಎಂಬುದಕ್ಕೆ ಸೋಮೇಶ್ವರ ದೇವಾಲಯದ ಬಳಿ ಇರುವ ಐದು ಮುಖ್ಯ ಪ್ರವೇಶ ದ್ವಾರಗಳಿಂದ ತಿಳಿಯುತ್ತದೆ. ಇವುಗಳಲ್ಲಿ ಪಶ್ಚಿಮ ದಿಕ್ಕಿಗಿರುವ ದ್ವಾರವನ್ನು ಮೈಸೂರು ಬಾಗಿಲೆಂದು[೫೬] ಕರೆಯಲಾಗುತ್ತಿದೆ. ಬಹುಶಃ ವಿಜಯನಗರದ ಅರಸರ ಸಾಮಂತರಾಗಿದ್ದ ಮೈಸೂರು ಒಡೆಯರು ಕುಣಿಗಲ್ ಪಟ್ಟಣದೊಂದಿಗೆ ನಿರಂತರವಾಗಿ ಸಂಪರ್ಕ ಹೊಂದಿದ್ದರೆಂಬುದನ್ನು ಸೂಚಿಸುತ್ತದೆ. ಮಾಗಡಿ ಕೆಂಪೇಗೌಡ ಹಾಗೂ ಹೈದರಾಲಿ ಮತ್ತು ಟಿಪ್ಪುವಿನ ಕಾಲಕ್ಕೆ ಇದು ಅಭೇದ್ಯವಾದ ಗಡಿದುರ್ಗ[೫೭]ವಾಗಿತ್ತೆಂದು ಕುಣಿಗಲ್ ಶಾಸನಗಳು ಸ್ಪಷ್ಟಪಡಿಸುತ್ತವೆ. ಈ ದುರ್ಗದಲ್ಲಿ ಸೈನಿಕರಿಗೆ ತರಬೇತಿ, ಶಸ್ತ್ರಾಸ್ತ್ರ ತಯಾರಿಕೆ,

ಗಡಿಭಾಗಗಳ ರಕ್ಷಣೆಗಾಗಿ ಇವರು ಕಿಲ್ಲೇದಾರರನ್ನು ನೇಮಿಸಿದ್ದರು. ಕೆಲವೊಮ್ಮೆ ಕಿಲ್ಲೇದಾರರೇ ತನ್ನ ಒಡೆಯನ ವಿರುದ್ಧ ತಿರುಗಿಬಿದ್ದು ಸ್ವತಂತ್ರರಾಗಲು ಪ್ರಯತ್ನಿಸಿರುವುದಕ್ಕೆ ಹಲವು ಉದಾಹರಣೆಗಳುಂಟು.

ಕುಣಿಗಲ್ ಕೋಟೆಯು ಗಂಗ, ರಾಷ್ಟ್ರಕೂಟ, ಚೋಳ, ಹೊಯ್ಸಳ, ವಿಜಯನಗರ, ಮಾಗಡಿ ಕೆಂಪೇಗೌಡ, ಮೈಸೂರು ಒಡೆಯ, ಹೈದರ್–ಟಿಪ್ಪು ಮೊದಲಾದವರ ಕಾಲದಲ್ಲಿ ಇಡೀ ಗಂಗ ಮಂಡಲದಲ್ಲಿ ಪ್ರಮುಖ ಆದಾಯದ ಮೂಲವನ್ನು ನೀಡುವ ಉಪಆಡಳಿತ ವಿಭಾಗವಾಗಿತ್ತು. ಇಲ್ಲಿನ ಕೆರೆ ಸಾವಿರಾರು ಎಕರೆಗಳಿಗೆ ಜೀವ ಸೆಲೆಯಾಗಿತ್ತು. ಎಲ್ಲಾ ರಾಜ್ಯಗಳಿಗೆ ಮಧ್ಯಭಾಗದಲ್ಲಿ ಆಯಕಟ್ಟಿನ ಪ್ರದೇಶ ಮತ್ತು ಉತ್ತಮ ಹವಾಮಾನ ಹೊಂದಿದ್ದರಿಂದ ಬಹುತೇಕ ದಖ್ಖನ್‌ನ ಸಾಮ್ರಾಜ್ಯಗಳು ಈ ಪ್ರದೇಶವನ್ನು ಪಡೆಯಲು ಉತ್ಸುಕರಾಗಿದ್ದರು. ಆದುದರಿಂದಲೇ ಇಡೀ ದಖ್ಖನ್‌ನಲ್ಲೇ ಮೊದಲ ಬಾರಿಗೆ ಟಿಪ್ಪುವಿನ ಅವಧಿಯಲ್ಲಿ ಕುದುರೆ ಸಂರಕ್ಷಣಾ ಕೇಂದ್ರ ಇಲ್ಲಿ ಆರಂಭವಾಯಿತು. ಇದನ್ನು ಮೈಸೂರು ಒಡೆಯರು ಮತ್ತು ಬ್ರಿಟೀಷರು ಸಹ ಮುಂದುವರೆಸಿಕೊಂಡು ಹೋದರು. ವಿಶೇಷವಾಗಿ ಕುಣಿಗಲ್ ಪಟ್ಟಣಕ್ಕೆ ಗಂಗ, ಹೊಯ್ಸಳ, ವಿಜಯನಗರದ ಅರಸರು ತಮ್ಮ ಯುವರಾಜರನ್ನೇ ಇಲ್ಲಿಗೆ ನೇಮಿಸಿದ್ದು, ಇದರ ಐತಿಹಾಸಿಕ ಮಹತ್ವವನ್ನು ಸೂಚಿಸುತ್ತದೆ.

ಹೀಗೆ ಪ್ರಾಚೀನ ಕಾಲದಿಂದಲೂ ಹಲವು ಸಂಸ್ಕೃತಿಗಳ ಹುಟ್ಟಿಗೂ ಮತ್ತು ಅವುಗಳ ಜೀವಂತಿಕೆಗೂ ಕಾರಣವಾದ ಕುಣಿಗಲ್ ಕೋಟೆಯು ಇಂದು ಪ್ರಕೃತಿ ವಿಕೋಪ ಮತ್ತು ಮನುಷ್ಯನ ಸ್ವಾರ್ಥಕ್ಕೆ ಸಿಲುಕಿ ೩೦೦ ಮೀಟರ್ ಉದ್ದದ ತಳಪಾಯವಿರುವ ಗೋಡೆ ಹಾಗೂ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡ ದ್ವಾರಗಳು ಮಾತ್ರ ಉಳಿದುಕೊಂಡಿವೆ. ದ್ವಾರಗಳ ಎರಡೂ ಬದಿ ಕಾವಲು ಮಂಟಪಗಳಿದ್ದು, ಮರದ ಬಾಗಿಲನ್ನು ಹಾಕಲೆಂದು ಮೇಲ್ಭಾಗದಲ್ಲಿ ರಂಧ್ರಗಳನ್ನು ಕೊರೆಯಲಾಗಿದೆ. ವಿಶೇಷವಾಗಿ ಉತ್ಸವಮೂರ್ತಿ ಅಥವಾ ರಾಜನನ್ನು ಆನೆಯ ಮೇಲೆ ಕರೆತರಲು ಅನುವಾಗಲೆಂದು ದ್ವಾರವನ್ನು ಎತ್ತರವಾಗಿ ನಿರ್ಮಾಣ ಮಾಡಲಾಗಿದೆ.

೭. ಇಂದ್ರಬೆಟ್ಟ

ಇಂದ್ರಕುಮಾರನೆಂಬುವನು ಎತ್ತರದ ಬೆಟ್ಟದಲ್ಲಿ ಆಳ್ವಿಕೆ ಮಾಡುತ್ತಿದ್ದರಿಂದ ಈ ಗ್ರಾಮಕ್ಕೆ ಆತನ ಹೆಸರೇ ಗ್ರಾಮ ವಾಚಕವಾಗಿ ಬಂದಿದೆ ಎಂಬ ಪ್ರತೀತಿ ಇದೆ. ಈ ಐತಿಹ್ಯವನ್ನು ವಿಶ್ಲೇಷಿಸಿದರೆ ರಾಷ್ಟ್ರಕೂಟರ ಮೂರನೆಯ ಇಂದ್ರ ಶ್ರವಣಬೆಳಗೊಳದಲ್ಲಿ ಸಲ್ಲೇಖನ ವ್ರತ ಕೈಗೊಂಡು ಮರಣ ಹೊಂದಿದನೆಂದು ತಿಳಿಸುವ ಶಾಸನ ಹೇಮಾವತಿಯಲ್ಲಿದೆ. ಅಂದರೆ ಮೂರನೆಯ ಇಂದ್ರ ಹೇಮಾವತಿಗೆ ಭೇಟಿ ನೀಡಿದ್ದನೆಂದು ಉಲ್ಲೇಖಿಸುವ ಅಲ್ಲಿಯ ಶಾಸನ ಮತ್ತು ದೊಡ್ಡೇಶ್ವರ, ವಿರೂಪಾಕ್ಷೇಶ್ವರ ದೇವಾಲಯಗಳ ರಚನಾ ಶೈಲಿಯಿಂದ ಸ್ಪಷ್ಟವಾಗುತ್ತದೆ. ಹೇಮಾವತಿಗೆ ಉತ್ತರದಿಂದ ಪ್ರವೇಶಿಸಬೇಕೆಂದರೆ ಇಂದ್ರಬೆಟ್ಟ ಮಾರ್ಗದ ಮೂಲಕವೇ ಪ್ರವೇಶಿಸಬೇಕು. ಏಕೆಂದರೆ ನೊಳಂಬರು ಹೆಂಜೇರಿನ ಮೂಲಕ ನಿಡುಗಲ್ಲು, ಕಂಬದೂರು, ಕಣೇಕಲ್ಲು, ಗೋವಿಂದವಾಡಿ, ಗುತ್ತಿ,

ಆದೋನಿಗಳವರೆಗೆ ಆರಂಭ ಕಾಲದಿಂದಲೂ ವ್ಯಾಪಾರ ಸಂಪರ್ಕ ಹೊಂದಿದ್ದರು. ಇಂದ್ರಬೆಟ್ಟವು ಕಂಬದೂರಿಗೆ ಕೇವಲ ೧೨ ಕಿ.ಮೀ ಅಂತರದಲ್ಲಿರುವುದರಿಂದ ಈ ಪರಿಸರದ ಬೆಟ್ಟಗಳಲ್ಲಿ ಸಹಜವಾಗಿಯೇ ಜೈನ ಯತಿಗಳು ವಾಸಿಸುತ್ತಿದ್ದರಬಹುದು. ಹಾಗಾಗಿ ಮೂರನೆಯ ಇಂದ್ರ ಈ ಬೆಟ್ಟದಲ್ಲಿ ಇದ್ದಿರಬಹುದಾದ ಜೈನ ಯತಿಗಳನ್ನು ಭೇಟಿ ಮಾಡಿ ಅಲ್ಲಿಯೇ ಕೆಲವು ದಿನಗಳವರೆಗೆ ತಂಗಿರಬಹುದು. ಆದುದರಿಂದ ಈ ಪ್ರದೇಶ ಹೆಸರಿನಲ್ಲಿ ಪ್ರಸಿದ್ಧಿಗೆ ಬಂದಿರಬಹುದು.

ರಾಷ್ಟ್ರಕೂಟರು ನೊಳಂಬರೊಂದಿಗೆ ಆರಂಭದ ದಿನಗಳಲ್ಲಿ ಸಂಘರ್ಷ ಮಾಡಿಕೊಂಡಾಗ ಅವರ ಗಡಿದುರ್ಗವಾಗಿದ್ದ ಶೈಲೇಂದ್ರದವರೆಗೂ ತಮ್ಮ ರಾಜ್ಯವನ್ನು ವಿಸ್ತರಿಸಿಕೊಂಡಿರಬಹುದು. ಈ ಶೈಲೇಂದ್ರವೇ ಮೂರನೆಯ ಇಂದ್ರನ ಕಾಲಕ್ಕೆ ಇಂದ್ರಕೊಂಡ, ಇಂದ್ರಬೆಟ್ಟ ಆಗಿ ಪರಿವರ್ತನೆಯಾಗಿರುವ ಸಾಧ್ಯತೆಗಳಿವೆ. ಶೈಲ ಎಂದರೆ ಪರ್ವತ, ಇಂದ್ರ ಎಂದರೆ ಒಡೆಯ ಎಂದರ್ಥ. ಹಾಗಾಗಿ ಇಂದ್ರಕೊಂಡದಲ್ಲಿ ೩೦೦೦ ಅಡಿಗಳಿಗಿಂತಲೂ ಎತ್ತರದ ಬೆಟ್ಟದ ಮೇಲೆ ಇಂದ್ರ ಎಂಬ ಯುವರಾಜ ಆಳ್ವಿಕೆ ಮಾಡಿದ್ದನೆಂಬ ಪ್ರತೀತಿ ಮೌಖಿಕ ಪರಂಪರೆಯಲ್ಲಿ ಸಿಗುವುದರಿಂದ ಶೈಲೇಂದ್ರವೇ ಇಂದ್ರಬೆಟ್ಟ ಆಗಿರಬಹುದು. ಏಕೆಂದರೆ ಧ್ರುವನು ಗಂಗ ಮಂಡಲದ ಮೇಲೆ ಅಧಿಪತ್ಯ ಸ್ಥಾಪಿಸಿದಾಗ ಅದನ್ನು ನೋಡಿಕೊಳ್ಳಲು ಯುವರಾಜ ಸ್ತಂಭನನ್ನು ಕುಣಿಗಲ್ ಪಟ್ಟಣದ ರಾಜ್ಯಪಾಲನನ್ನಾಗಿ ನೇಮಿಸಿದ. ಅದೇ ರೀತಿ ತನ್ನ ಇನ್ನೊಬ್ಬ ಮಗನಾದ ಯುವರಾಜ ಇಂದ್ರನನ್ನು ಇಂದಿನ ಕಂಬದೂರು ಪ್ರದೇಶದಲ್ಲಿ ರಾಜ್ಯಪಾಲನನ್ನಾಗಿ ನೇಮಿಸಿದ್ದಿರಬೇಕು. ಹಾಗಾಗಿ ಇಂದ್ರಬೆಟ್ಟದಲ್ಲಿ ಇಂದ್ರಕುಮಾರ ಎಂಬ ಯುವರಾಜ ಆಳ್ವಿಕೆ ನಡೆಸಿದ್ದಾಗಿ ಮೌಖಿಕ ಪರಂಪರೆಯಲ್ಲಿ ಉಲ್ಲೇಖ ಸಿಗುತ್ತದೆ.

ಹೀಗೆ ವಿವಿಧ ಕಾಘಟ್ಟಗಳಲ್ಲಿ ನಿರ್ಮಾಣಗೊಂಡ ಕೋಟೆ ಗೋಡೆಯು ಅವಶ್ಯವಿರುವಲ್ಲಿ ಮಾತ್ರ ಬೆಟ್ಟದ ಮಧ್ಯಭಾಗದಿಂದಲೇ ಅಲ್ಲಲ್ಲಿ ಕಾಡುಗಲ್ಲುಗಳಿಂದ ತಡೆಗೋಡೆಯನ್ನು ನಿರ್ಮಿಸಲಾಗಿದೆ. ತುದಿಯ ಭಾಗದಲ್ಲಿ ಮಾತ್ರ ಎರಡು ಸುತ್ತಿನ ಕೋಟೆ ಎರಡು ಮೂರು ಹಂತಗಳಲ್ಲಿ ನಿರ್ಮಾಣಗೊಂಡಿರುವುದು ಗೋಡೆಗೆ ಬಳಕೆಯಾದ ಶಿಲಾಮಾಧ್ಯಮದಿಂದ ತಿಳಿಯುತ್ತದೆ. ಮೊದಲ ಹಂತವು ಬೃಹತ್ತಾದ ಕಾಡುಗಲ್ಲುಗಳನ್ನು ಆನೆ ಅಥವಾ ಕೋಣಗಳ ಮೂಲಕ ತಳ್ಳಿಸಿ ಅವುಗಳ ಮಧ್ಯೆ ಕಲ್ಲಿನ ಚಕ್ಕೆಯನ್ನಿಟ್ಟು ಗೋಡೆಯನ್ನು ನಿರ್ಮಿಸಿದ್ದಾರೆ. ಈ ಗೋಡೆಯಲ್ಲಿ ಕೆಲವೆಡೆ ಉದ್ದನೆಯ ಆಯತ ಮತ್ತು ಚೌಕ ಮಾದರಿಯ ಗ್ರ್ಯಾನೈಟ್ ಶಿಲೆಗಳನ್ನು ಬಳಸಲಾಗಿದೆ. ಸಾಮಾನ್ಯವಾಗಿ ಈ ಮಾದರಿಯ ಉದ್ದನೆಯ ಆಯತ ಕಲ್ಲುಗಳು ೧೧ ಮತ್ತು ೧೩ನೆಯ ಶತಮಾನದ ಮಧ್ಯಭಾಗದಲ್ಲಿ ನಿರ್ಮಾಣಗೊಂಡ ಕೋಟೆ ಗೋಡೆಗಳಲ್ಲಿ ಬಳಕೆಯಾಗಿರುವುದು ಕರ್ನಾಟಕದ ಬಹುತೇಕ ಕೋಟೆಗಳಲ್ಲಿ ಕಂಡುಬರುತ್ತದೆ. ಹಾಗಾಗಿ ೧೧ರಿಂದ ೧೩ನೆಯ ಶತಮಾನದಲ್ಲಿ ಈ ಭಾಗವನ್ನು ಹೊಯ್ಸಳರು ತಮ್ಮ ಅಧಿಪತ್ಯಕ್ಕೆ ಒಳಪಡಿಸಿಕೊಂಡಿದ್ದರಿಂದ ಇವರಿಂದಲೇ ಈ ಕೋಟೆ ಜೀರ್ಣೋದ್ಧಾರಗೊಂಡಿರುವ ಸಾಧ್ಯತೆಯಿದೆ. ವಿಜಯನಗರ ಕಾಲಕ್ಕೆ ಇವರ ಸಾಮಂತ

ಕುಂದುರ್ಪಿ ಪಾಳೆಯಗಾರ ಯಲ್ಲಪ್ಪನಾಯಕನಿಗೆ ಇದು ಪ್ರಮುಖ ಗಡಿದುರ್ಗವಾಗಿತ್ತು. ಈತನ ಕಾಲದಲ್ಲಿ ಕೋಟೆ ವಿಸ್ತರಿಸಲ್ಪಟ್ಟು ಕಾಡುಗಲ್ಲಿನಿಂದ ನಿರ್ಮಾಣಗೊಂಡಿತು. ಕಿಲ್ಲೇದಾರನು ವಾಸಿಸುವಂತಹ ಆವರಣದ ಸುತ್ತಲೂ ಹೊಸಕೋಟೆ ಮತ್ತು ಹೊಸದುರ್ಗದ ಕೋಟೆಗಳಿಗೆ ಬಳಸಿದಂತಹ ಗ್ರಾನೈಟ್ ಶಿಲೆಯಲ್ಲಿ ಆಯತ, ಚೌಕ ಮತ್ತು ಕೆಲವು ಆಕಾರವಿಲ್ಲದ ಕಲ್ಲುಗಳನ್ನು ಬಳಸಿಕೊಂಡು ೧.೮೦ಮೀ. ಎತ್ತರ, ೦.೮೫ ಮೀ. ಅಗಲವಾಗಿ ನಿರ್ಮಿಸಲ್ಪಟ್ಟಿದೆ. ಈ ಆವರಣದ ನಾಲ್ಕು ದಿಕ್ಕುಗಳಿಗೂ ನಾಲ್ಕು ಕೊತ್ತಲಗಳಿವೆ. ಕೆಲವೆಡೆ ನೈಸರ್ಗಿಕ ಗುಂಡುಗಳ ಮಧ್ಯೆಯೇ ಗೋಡೆ ಹಾದು ಹೋಗಿರುವುದರಿಂದ ಅವುಗಳನ್ನೇ ಕೊತ್ತಲಗಳನ್ನಾಗಿ ಬಳಸಿಕೊಂಡಿದ್ದಾರೆ. ಗೋಡೆಯ ತಳಪಾಯ ಅಗಲವಾಗಿ ಮೇಲೆ ಹೋದಂತೆಲ್ಲ ಕಿರಿದಾಗುತ್ತಾ ಒಂದಿದೆ. ಏಕೆಂದರೆ ಬೆಟ್ಟದಲ್ಲಿ ಗೋಡೆಗಳನ್ನು ಅಗಲವಾಗಿ ನಿರ್ಮಿಸಿದಂತೆಲ್ಲಾ ಅದರ ಭಾರ ಹೆಚ್ಚಿ ಮೇಲ್ಭಾಗ ಕುಸಿಯುವ ಸಂಭವ ಇರುತ್ತದೆ. ಆದುದರಿಂದ ಗೋಡೆಯ ತುದಿಭಾಗ ಕಿರಿದಾಗಿರುತ್ತದೆ. ಗೋಡೆಯಲ್ಲಿ ವೀಕ್ಷಣಾ ಕಿಂಡಿಗಳು ತ್ರಿಭುಜ, ಆಯತ ಮಾದರಿಯಲ್ಲಿದ್ದು ಅವುಗಳನ್ನು ಶತ್ರುಗಳ ಚಲನವಲನ ವೀಕ್ಷಿಸಲು ಮಾತ್ರ ಬಳಸಿಕೊಳ್ಳುತ್ತಿದ್ದರು. ಕಿಲ್ಲೇದಾರನ ಕಟ್ಟಡದ ಪೂರ್ವಕ್ಕೆ ಇರುವ ಆಳವಾದ ಕೊರಕಲಿಗೆ ಗ್ರಾನೈಟ್ ಶಿಲೆ ಮತ್ತು ಮಣ್ಣಿನಿಂದ ತಡೆಗೋಡೆಯನ್ನು ನಿರ್ಮಿಸಿ ಮಳೆಯ ನೀರು ಅದರಲ್ಲಿ ಸಂಗ್ರಹಗೊಳ್ಳುವಂತೆ ಮಾಡಿದ್ದಾರೆ. ಈ ದೋಣೆಯವರೆಗೂ ಒಂದು ಬದಿಯಲ್ಲಿ ಕೋಟೆ ಗೋಡೆಯನ್ನು ನಿರ್ಮಿಸಿದ್ದು ಮತ್ತೊಂದು ಬದಿ ಆಳವಾದ ಪ್ರಪಾತ ಇರುವುದರಿಂದ ಗೋಡೆಯ ಅನಿವಾರ್ಯತೆಯಿಲ್ಲ. ಈ ಕೋಟೆಯ ವಿಶೇಷತೆ ಎಂದರೆ ಆಹಾರ ಧಾನ್ಯಗಳ ಸಂಗ್ರಹಣೆಗಾಗಿ ಭೂಮಿಯ ಒಳಗೆ ಹಗೇವುಗಳನ್ನು ನಿರ್ಮಿಸಿರುವಂತಹದ್ದಾಗಿದೆ. ಬಹುಶಃ ಈ ಭಾಗದಲ್ಲಿ ಕೃಷಿ ಚಟುವಟಿಕೆಗಳು ಹೇರಳವಾಗಿದ್ದವು ಎಂಬುದು ಇದರಿಂದ ಸ್ಪಷ್ಟವಾಗುತ್ತದೆ. ಇಂದ್ರಬೆಟ್ಟ ಪ್ರಾಗಿತಿಹಾಸ ಕಾಲದಿಂದಲೂ ವಾಸಯೋಗ್ಯವಾಗಿದ್ದರಿಂದ ಹಲವು ಸಂಸ್ಕೃತಿಗಳು ಏಳಿಗೆ ಹೊಂದಿದವು. ಹೀಗೆ ನಿರ್ಮಾಣಗೊಂಡ ಪ್ರತಿಯೊಂದರ ಹಿಂದೆಯೂ ಔಚಿತ್ಯಪೂರ್ಣ ಸಂಗತಿಗಳು ಅಡಗಿಕೊಂಡಿವೆ. ಆದರೆ ಇಂದು ನಿಧಿಗಳ್ಳರ ಹಾವಳಿಯಿಂದ ಬಹುತೇಕ ಪ್ರಾಚ್ಯ ಅವಶೇಷಗಳು ಅವಸಾನದ ಹಾದಿ ಹಿಡಿದಿವೆ.

೮). ದೇವರಾಯನದುರ್ಗ

ತುಮಕೂರು ತಾಲೂಕು ಕೇಂದ್ರದಿಂದ ಈಶಾನ್ಯಕ್ಕೆ ೧೮ ಕಿ.ಮೀ ದೂರದಲ್ಲಿರುವ ದೇವರಾಯನದುರ್ಗವು ತಳವಾರಬೆಟ್ಟ, ಶೀಗೆಕೊಪ್ಪಳಬೆಟ್ಟ, ಚಿನ್ನದಬೆಟ್ಟ, ಈಶನಾಯಕನಬೆಟ್ಟ, ದೊಡ್ಡವಾಡಿಬೆಟ್ಟಗಳಿಂದ ಸುತ್ತುವರೆದಿದೆ. ಹೇರಳವಾದ ನೈಸರ್ಗಿಕ ಸಂಪತ್ತು, ದಟ್ಟ ಅಡವಿಯನ್ನು ಹೊಂದಿರುವ ಈ ಪ್ರದೇಶ ಪ್ರಾಗಿತಿಹಾಸ ಕಾಲದಿಂದಲೂ ವಾಸಯೋಗ್ಯವಾಗಿದೆ. ಪೌರಾಣಿಕವಾಗಿ ಶ್ರೀರಾಮಚಂದ್ರನು ವನವಾಸ ಸಂದರ್ಭದಲ್ಲಿ ಇಲ್ಲಿ ಭೇಟಿ ನೀಡಿದ್ದ ಎನ್ನುವಂತಹ ನಾಮದ ಚಿಲುಮೆಯು ಸ್ಥಳಪುರಾಣ ತಿಳಿಸುತ್ತದೆ. ಐತಿಹಾಸಿಕವಾಗಿ ಈ ಪ್ರದೇಶ ಗಂಗರ ಕಾಲಘಟ್ಟದಿಂದ

ಗುರುತಿಸಿಕೊಂಡಿದೆ. ಗಂಗರ ಉಪಆಡಳಿತ ವಿಭಾಗವಾದ ಕ್ರೀಡಾಪುರ ಈ ಪ್ರದೇಶಕ್ಕೆ ೨೦ ಕಿ.ಮೀ ದೂರದಲ್ಲಿ ಇದ್ದಿದ್ದರಿಂದ ಗಂಗರ ಆರಂಭ ಕಾಲದಿಂದ ಇಲ್ಲಿ ಜನ ನಿಬಿಢತೆಯಿತ್ತು. ಕ್ರಿಶ ೧೩೮೭ರ ದೇವರಾಯನದುರ್ಗದ ಶಾಸನ[೫೮] ದೇವರಾಯನದುರ್ಗವನ್ನು ಆನೆಬಿದ್ದಸರಿ ಎಂದು ಉಲ್ಲೇಖಿಸುತ್ತದೆ.

ಈ ಉಲ್ಲೇಖವನ್ನು ಗಮನಿಸಿದರೆ ಗಜಪ್ರಿಯರಾದ ಗಂಗರಿಗೆ ಈ ಪ್ರದೇಶದಲ್ಲಿ ಆನೆಗಳನ್ನು ಪಳಗಿಸಿ ಅವುಗಳಿಗೆ ತರಬೇತಿ ನೀಡಿ ತಮ್ಮ ಒಡೆಯರಿಗೆ ಒಪ್ಪಿಸುವಂತಹ ಸಮುದಾಯ ಮತ್ತು ಅದರ ಉಸ್ತುವಾರಿಕೆಗೆ ಅಧಿಕಾರಿ ವರ್ಗ ನೇಮಕಗೊಂಡಿದ್ದರೆಂಬ ಅಂಶವನ್ನು ಅಲ್ಲಿಯ ಸ್ಥಳಪುರಾಣವು ಸಹ ಸ್ಪಷ್ಟಪಡಿಸುತ್ತದೆ. ಹಿಂದೆ ಒಮ್ಮೆ ಆನೆಯನ್ನು ಪಳಗಿಸುವ ಸಂದರ್ಭದಲ್ಲಿ ಕಾಲು ಜಾರಿ ಆಳವಾದ ಕಂದಕಕ್ಕೆ ಬಿತ್ತೆಂದೂ, ಕ್ರಮೇಣ ಆ ಪ್ರದೇಶದಲ್ಲಿ ಆನೆಕಾಲು ಜಾರಿಬಿದ್ದಿದ್ದರಿಂದ ಆನೆಬಿದ್ದಸರಿ, ಆನೆಬಿದ್ದಜರಿ ಎಂಬುದಾಗಿ ಪ್ರಸಿದ್ಧಿಯಾಯಿತೆಂದು ತಿಳಿಸುತ್ತದೆ. ಸಾಮಾನ್ಯವಾಗಿ ಆನೆ ಪಳಗಿಸುವ ಗಂಗ ಮಂಡಲದ ಪ್ರದೇಶಗಳಲ್ಲೆಲ್ಲಾ ಗಂಗರಿಗೆ ಸಂಬಂಧಿಸಿದ ಪ್ರಾಚ್ಯಾವಶೇಷಗಳು ಕಂಡುಬರುತ್ತವೆ. ಪ್ರಮುಖವಾಗಿ ಆನೆಬಿದ್ದಜರಿ–ದೇವರಾಯನದುರ್ಗ, ಆನೆಬಿದ್ದಜರಿ–ಬೆನಕನಹಳ್ಳಿ, ಆನೆಯಹೊಂಡ–ನಿಡುಗಲ್ಲು, ಹಾನೆಯಹೊಳೆ; ಹಾನೆಯಬೆಟ್ಟ–ಬ್ರಹ್ಮಗಿರಿ ಮೊದಲಾದ ಪ್ರದೇಶಗಳನ್ನು ಹೊಯ್ಸಳರು ಗಂಗರಿಂದ ಬಲವಂತವಾಗಿ ಪಡೆದರೆಂಬ ಸಂಗತಿ ಅಲ್ಲಿಯೇ ದೊರೆಯುವ ಹೊಯ್ಸಳ ಶಾಸನಗಳಿಂದ ತಿಳಿಯುತ್ತದೆ. ಅಂದರೆ ಈ ಪ್ರದೇಶಗಳಲ್ಲಿ ಗಂಗರ ಕಾಲದಲ್ಲೇ ಆಡಳಿತ ಕೇಂದ್ರಗಳಿದ್ದ, ಸಂಗತಿಯ ಇದರಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಪೂರಕವಾಗಿ ಚಿಕ್ಕನಾಯಕನ ಹಳ್ಳಿಯ ಶಾಸನ ಆನೆಯನ್ನು ಪಳಗಿಸುವಂತಹ ಸಮುದಾಯವೊಂದು ಇತ್ತೆಂಬುದನ್ನು ಸ್ಪಷ್ಟಪಡಿಸುತ್ತದೆ. ಹಾಗಾಗಿ ದೇವರಾಯನದುರ್ಗದಲ್ಲಿ ಗಂಗರ ಕಾಲದಲ್ಲಿ ಆನೆಗಳನ್ನು ಪಳಗಿಸಿ ಅವುಗಳನ್ನು ಯುದ್ಧಕ್ಕೆ ಬಳಸಿಕೊಳ್ಳಲಾಗುತ್ತಿತ್ತೆಂದು ಉಲ್ಲೇಖಿಸುವ ಸ್ಥಳಪುರಾಣವು ಹಲವು ಚಾರಿತ್ರಿಕ ಸಂಗತಿಗಳನ್ನು ತಿಳಿಸುತ್ತದೆ. ಈ ಐತಿಹ್ಯದಲ್ಲಿ ಕುಂಬಿಬೆಟ್ಟದ ಉಲ್ಲೇಖ ಇರುವುದರಿಂದ ಗಂಗರ ಕಾಲಕ್ಕೆ ಇಲ್ಲಿ ಕೋಟೆ ನಿರ್ಮಿಸಲ್ಪಟ್ಟಿತ್ತು ಎಂಬುದನ್ನು ತಿಳಿಯಬಹುದು. ಆದರೆ ಹೊಯ್ಸಳ, ವಿಜಯನಗರ, ಮೈಸೂರು ಒಡೆಯರ ಕಾಲದಲ್ಲಿ ಇದು ಸಂಪೂರ್ಣವಾಗಿ ಜೀರ್ಣೋದ್ಧಾರ ಹೊಂದಿರುವುದರಿಂದ ಮೂಲ ಕೋಟೆಯ ಲಕ್ಷಣಗಳನ್ನು ಕಾಣಲಾಗುವುದಿಲ್ಲ.

ಕ್ರಿ.ಶ. ೧೨೯೯ರ ದೇವರಾಯನದುರ್ಗದ ಶಾಸನ[೫೯] ಹೊಯ್ಸಳರ ಸಾಮಂತನಾದ ಚಿಕ್ಕ ಕೇತಯ್ಯ ಆನೆಬಿದ್ದಸರಿಯಲ್ಲಿ ಅಧಿಕಾರ ನಡೆಸುತ್ತಿದ್ದನೆಂದು ಉಲ್ಲೇಖಿಸುತ್ತದೆ. ಹಾಗಾಗಿ ಈತನ ಕಾಲಕ್ಕೆ ಮೇಲುಕೋಟೆ ವಿಸ್ತರಿಸಲ್ಪಟ್ಟಿರಬಹುದು. ಏಕೆಂದರೆ ವಿಜಯನಗರ ಸಾಮ್ರಾಜ್ಯದ ರಾಜ್ಯಪಾಲನಾಗಿ ಆನೆಬಿದ್ದಸರಿಗೆ ಬುಕ್ಕನು ನೇಮಕಗೊಂಡಾಗ ಆತನ ಬಂಟನಾದ ಪೋಲೆನಾಯಕ ಕ್ರಿ.ಶ. ೧೩೮೭ರಲ್ಲಿ[೬೦] ಮೊದಲೇ ಇದ್ದಂತಹ ಮೇಲುಕೋಟೆಯ ಬಳಿ ದೋಣೆ ನಿರ್ಮಿಸಿದನೆಂಬ ಉಲ್ಲೇಖ ಸಿಗುತ್ತದೆ. ಅಂದರೆ ಬುಕ್ಕನಿಗಿಂತ ಹಿಂದೆ ಹೊಯ್ಸಳರ ಸಾಮಂತರು ಇಲ್ಲಿ ಅಧಿಕಾರ

ನಡೆಸುತ್ತಿದ್ದರಿಂದ ಅವರ ಕಾಲದಲ್ಲಿ ಮೇಲುಕೋಟೆ ನಿರ್ಮಿಸಲ್ಪಟ್ಟಿರುವ ಸಾಧ್ಯತೆಗಳಿವೆ. ಆದರೆ ಆನೆಬಿದ್ದಸರಿಗೆ 'ದೇವರಾಯನದುರ್ಗ' ಎಂಬ ಹೆಸರು ಯಾವ ಕಾಲಘಟ್ಟದಲ್ಲಿ ಬಂದಿದೆ ಎಂಬುದಕ್ಕೆ ಸ್ಪಷ್ಟ ದಾಖಲೆಗಳಿಲ್ಲ. ಏಕೆಂದರೆ ಪ್ರೌಢದೇವರಾಯನ ಕಾಲದ ಕ್ರಿ.ಶ. ೧೪೨೭ರ ಸತ್ಯಮಂಗಲ ಶಾಸನ[೬೧] 'ದೇವರಾಯಪುರ' ಎಂಬ ಪ್ರತಿನಾಮವನ್ನು ಸತ್ಯಮಂಗಲಕ್ಕೆ ಇಡಲಾಯಿತೇ ಹೊರತು ಸತ್ಯಮಂಗಲದ ಬಳಿ ಇರುವ ಆನೆಬಿದ್ದಸರಿಗಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದರೂ ಪ್ರೌಢದೇವರಾಯನ ಕಾಲದಲ್ಲಿ ಆನೆಬಿದ್ದಸರಿಯ ನೆಲಗೋಟೆ, ಮೇಲುಕೋಟೆಯನ್ನು ಜೀರ್ಣೋದ್ಧಾರ ಮಾಡಿದ್ದನ್ನು ಅಲ್ಲಿಯೇ ಇರುವ ಶಾಸನ ತಿಳಿಸುತ್ತದೆ. ಆದುದರಿಂದ ಪ್ರೌಡದೇವರಾಯನಿಂದಲೇ 'ದೇವರಾಯನದುರ್ಗ' ಎಂಬ ಹೆಸರು ಪ್ರಸಿದ್ಧಿಗೆ ಬಂದಿರುವ ಸಾಧ್ಯತೆಯಿದೆ. ಆದರೆ ಕ್ರಿ.ಶ. ೧೫೬೨ರ ದೇವರಾಯದುರ್ಗದ ಅಳಿಯ ರಾಯರಾಯನ ಶಾಸನ ಆನೆಬಿದ್ದಸರಿಯನ್ನು 'ಕರಿಗಿರಿದುರ್ಗ' ಎಂದು ಉಲ್ಲೇಖಿಸುತ್ತದೆ. ಇದನ್ನು ಗಮನಿಸಿದರೆ ಪ್ರೌಡದೇವರಾಯನ ಕಾಲದಲ್ಲಿ ಕೋಟೆ ನಿರ್ಮಾಣಗೊಂಡಿತ್ತೇ ಎಂಬ ಸಂದೇಹ ಉಂಟಾಗುವುದು ಸಹಜ. ಆದರೂ ಆನೆಬಿದ್ದಸರಿಯ ನೆಲಗೋಟೆಗೆ ಬಳಸಲಾದ ತ್ರಿಭುಜ ಮತ್ತು ಆಯತ ಮಾದರಿಯ ಗ್ರಾನೈಟ್ ಶಿಲೆ ಹಾಗೂ ದ್ವಾರದ ಗೋಡೆಯನ್ನು ನುಣುಪುಗೊಳಿಸಿದ ಪಟ್ಟಿಕೆಗಳನ್ನು ಎರಡೂ ಬದಿಯಲ್ಲಿ ಜೋಡಿಸಿ ಅದರ ಮಧ್ಯೆ ಕಲ್ಲಿನ ಚೂರು, ಮಣ್ಣನ್ನು ಸುರಿದಿರುವಂತಹ ಲಕ್ಷಣಗಳು ಪ್ರೌಢದೇವರಾಯನ ಕಾಲದ್ದೇ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಹಾಗಾಗಿ ದೇವರಾಯನದುರ್ಗ ಎಂಬ ಹೆಸರು ಆನೆ ಬಿದ್ದಸರಿಗೆ ಪ್ರೌಢದೇವರಾಯನ ಕಾಲದಿಂದಲೇ ನಾಮಕರಣಗೊಂಡಿರಬೇಕು.

೧೫೬೫ರಲ್ಲಿ ವಿಜಯನಗರ ಸಾಮ್ರಾಜ್ಯ ರಕ್ಕಸಗಿತಂಗಡಗಿ ಯುದ್ಧದಲ್ಲಿ ಸೋಲನ್ನನುಭವಿಸಿದ್ದರಿಂದ ಕ್ರಿ.ಶ. ೧೬೨೧ರಲ್ಲಿ ಚಿಕ್ಕದೇವರಾಜ ಒಡೆಯರು ಆನೆಬಿದ್ದಸರಿಯ ಮೇಲೆ ಅಧಿಪತ್ಯ ಸ್ಥಾಪಿಸಿ ಅದನ್ನು ಚಿಕ್ಕದೇವರಾಯದುರ್ಗ ಎಂದು ಮರುನಾಮಕರಣ ಮಾಡಿಕೊಂಡಿದ್ದಾನೆ. ಕ್ರಿ.ಶ.೧೬೯೯ ಮತ್ತು ಕ್ರಿ.ಶ.೧೭೨೯ರ ದೇವರಾಯನದುರ್ಗದ ಶಾಸನಗಳೂ ಸಹ 'ಚಿಕ್ಕದೇವರಾಯದುರ್ಗ' ಎಂದೇ ಉಲ್ಲೇಖಿಸಿರುವುದನ್ನು ಗಮನಿಸಿದರೆ ಕುಂಬಿಬೆಟ್ಟದ ಕೋಟೆಯನ್ನು ಚಿಕ್ಕದೇವರಾಜ ಒಡೆಯರು ಜೀರ್ಣೋದ್ಧಾರಗೊಳಿಸಿರಬಹುದು. ಹಾಗಾಗಿ ನಂತರದಲ್ಲಿ ಅಧಿಕಾರಕ್ಕೆ ಬಂದ ಮೈಸೂರು ಒಡೆಯರ ಶಾಸನಗಳಲ್ಲಿಯೂ 'ಚಿಕ್ಕದೇವರಾಯದುರ್ಗ' ಎಂದೇ ಉಲ್ಲೇಖ ಸಿಗುತ್ತದೆ. ಆದರೆ ವಿಜಯನಗರದ ಪತನದಿಂದ ಆನೆಬಿದ್ದಸರಿಯಲ್ಲಿ ತೆರೆಯೂರಿನ ತಿಮ್ಮಾನಾಯಕನ ಮಗ ನರಸಪ್ಪ ಒಡೆಯರು ದೇವರಾಯನದುರ್ಗವನ್ನು 'ಜಡಕನದುರ್ಗ[೬೨]' ಎಂದು ಕರೆದು ಆಳ್ವಿಕೆ ಮಾಡುತ್ತಿದ್ದನ್ನು ಕ್ರಿ.ಶ. ೧೬೯೯ರ ತಾಮ್ರಶಾಸನ[೬೩] ಉಲ್ಲೇಖಿಸುತ್ತದೆ. ಬಹುಶಃ ಕ್ರಿ.ಶ. ೧೬೯೯ರಲ್ಲಿ ನರಸಪ್ಪ ಒಡೆಯರಿಂದ ಮರಳಿ ಪಡೆದ ಮೈಸೂರು ಒಡೆಯರು ಜಡಕನದುರ್ಗಕ್ಕೆ ಬದಲಾಗಿ ಚಿಕ್ಕದೇವರಾಯದುರ್ಗ ಎಂದು ಮರು ನಾಮಕರಣ ಮಾಡಿರಬಹುದು.

ಕೋಟೆಯ ಲಕ್ಷಣಗಳು

ದೇವರಾಯನದುರ್ಗ ಮೂರು ಹಂತಗಳಲ್ಲಿ ದುರ್ಗಮವಾದ ದಟ್ಟ ಅರಣ್ಯದಿಂದ ಕೂಡಿದಂತಹ ಬೆಟ್ಟವಾಗಿದೆ. ಇದರ ಸುತ್ತಲೂ ಬೆಟ್ಟ-ಗುಡ್ಡ, ಏರು-ತಗ್ಗು, ಕುಣಿ, ಬೃಹತ್ ಹೆಬ್ಬಂಡೆ, ಆಳವಾದ ಕಂದರಗಳು ಇರುವುದರಿಂದ ಇಡೀ ಬೆಟ್ಟವೇ ದುರ್ಭೇದ್ಯ ಕೋಟೆಯಂತೆ ರಕ್ಷಣೆ ನೀಡುತ್ತಿತ್ತು. ಈ ಉದ್ದೇಶದಿಂದಲೇ ಶತ್ರುಗಳು ಸುಲಭವಾಗಿ ಪ್ರವೇಶಿಸಲು ಅನುವು ಮಾಡದಂತಹ ಸ್ಥಳಗಳಲ್ಲಿ ಮಾತ್ರ ಕೋಟೆ ಗೋಡೆ ನಿರ್ಮಿಸಲ್ಪಟ್ಟಿದೆ. ಪ್ರಸ್ತುತ ಅಧ್ಯಯನದ ಅನುಕೂಲಕ್ಕಾಗಿ ಈ ಕೋಟೆಯನ್ನು ನೆಲಗೋಟೆ, ಮೇಲುಗೋಟೆ ಎಂದು ವಿಭಾಗ ಮಾಡಲಾಗಿದೆ. ಆಯತಾಕಾರದಲ್ಲಿರುವ ಈ ಕೋಟೆ ಒಂಭತ್ತು ದ್ವಾರಗಳನ್ನು ಹೊಂದಿದೆ.

ನೆಲಗೋಟೆಯಲ್ಲಿ ತ್ರಿಭುಜ ಆಯತ, ಚೌಕ ಮಾದರಿಯ ಗ್ರಾನೈಟ್ ಶಿಲೆಯಿಂದ ಒಳ ಮತ್ತು ಹೊರಭಾಗದಲ್ಲಿ ನುಣುಪುಗೊಳಿಸಿದ ಕಲ್ಲುಗಳನ್ನು ಜೋಡಿಸಿ ಅವುಗಳ ಮಧ್ಯ ಭಾಗಕ್ಕೆ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದು ಗೋಡೆಯ ಅಗಲವನ್ನು ವಿಸ್ತರಿಸಲಾಗಿದೆ. ಗೋಡೆಯ ಅಗಲವನ್ನು ವಿಸ್ತರಿಸಲು, ಶತ್ರುಗಳ ಚಲನವಲನ ಗಮನಿಸಲು ಹಾಗೂ ಕೋಟೆ ಕಾಳಗದ ಸಂದರ್ಭದಲ್ಲಿ ಫಿರಂಗಿ ಇಲ್ಲವೆ ಬಂದೂಕುಗಳನ್ನು ಎಲ್ಲಾ ದಿಕ್ಕುಗಳಿಗೂ ತಿರುಗಿಸಿ ಪ್ರಯೋಗಿಸಲು ಚೌಕ, ವೃತ್ತ ಮಾದರಿಯ ಕೊತ್ತಲವನ್ನು ೫ರಿಂದ ೬ ಮೀ. ಅಗಲ, ೭ರಿಂದ ೮ಮೀ. ಉದ್ದ, ೧೦ರಿಂದ ೧೨ಮೀ. ಎತ್ತರವಾಗಿ ನಿರ್ಮಿಸಲಾಗಿದೆ. ಈ ನೆಲಗೋಟೆಯ ಪಶ್ಚಿಮಕ್ಕೆ ಇರುವ ಆಳವಾದ ಕೊರಕಲನ್ನೇ ಕಂದಕವನ್ನಾಗಿ ಬಳಸಿಕೊಂಡಿರುವುದು ವಿಶೇಷ ಎನಿಸುತ್ತದೆ. ಗೋಡೆಯು ಫಿರಂಗಿಗಳ ಹೊಡೆತಕ್ಕೆ ಹಾಳಾಗಬಾರದೆಂದು ಸಮತಟ್ಟಾದ ಪ್ರದೇಶ ಇರುವಲ್ಲಿ ಮಾತ್ರ ಇಳಿವೂರೆಯನ್ನು ನಿರ್ಮಿಸಿದ್ದಾರೆ. ಗೋಡೆಯ ಮೇಲೆ ಸಣ್ಣದಾದ ಚೌಕ ಮತ್ತು ಆಯತ ಮಾದರಿಯ ಗ್ರಾನೈಟ್ ಶಿಲೆಯಿಂದ ನಿರ್ಮಾಣವಾದ ವೇದಿಕೆಯಿದ್ದು, ಅದರ ಮೇಲೆ ಹಸಿ ಇಟ್ಟಿಗೆಗಳಿಂದ ಕೋಟೆಯ ಒಳಗಿನ ಸೈನಿಕರು ಕಾಣದಂತೆ ತೆನೆಯನ್ನು ನಿರ್ಮಿಸಲಾಗಿದೆ.

ನೆಲಗೋಟೆಗೆ ತಳಭಾಗದಲ್ಲಿ ಬೃಹತ್ ಕಲ್ಲು ಗುಂಡುಗಳನ್ನು ಬಳಸಲಾಗಿದ್ದು, ಗೋಡೆ ಮೇಲೆ ಹೋದಂತೆಲ್ಲಾ ಕಿರಿದಾಗುತ್ತಾ ಹೋಗಿದೆ. ನೆಲಗೋಟೆಯಲ್ಲಿ ಪಶ್ಚಿಮ ದಿಕ್ಕಿಗೆ ನಾಲ್ಕು ಹಂತಗಳಲ್ಲಿ ಪಿರಮಿಡ್ಡಿನಾಕಾರದ ವೇದಿಕೆಯನ್ನು ಆಯತ ಮತ್ತು ಚೌಕ ಕಲ್ಲುಗಳಿಂದ ನಿರ್ಮಿಸಲಾಗಿದೆ. ಬಹುಶಃ ಇದು ಫಿರಂಗಿ ವೇದಿಕೆ, ವೀಕ್ಷಣಾ ಗೋಪುರ, ಮಹಾನವಮಿ ದಿಬ್ಬವಾಗಿಯೂ ಬಳಸಲ್ಪಟ್ಟಿರಬಹುದು. ಏಕೆಂದರೆ ವಿಜಯನಗರದ ಅಧಿಕಾರಿಗಳು ಇಲ್ಲಿ ಆಳ್ವಿಕೆ ಮಾಡುತ್ತಿದ್ದರಿಂದ ವಿಜಯದಶಮಿ ಆಚರಣೆಗಾಗಿ ಇದನ್ನು ಬಳಸಿಕೊಂಡಿರಬಹುದು. ನೀರಿನ ಸೆಲೆ ಇರುವೆಡೆ ಬಾವಿ, ಪುಷ್ಕರಣಿ, ಹೊಂಡಗಳನ್ನು ನಿರ್ಮಿಸಲ್ಪಟ್ಟಿವೆ. ನೆಲಗೋಟೆಯಲ್ಲಿ ಮುಖ್ಯವಾದ ಮೂರು ದ್ವಾರಗಳಿದ್ದು, ಊರಬಾಗಿಲು ಬಳಿ ಎರಡು ಕಾವಲು ಮಂಟಪಗಳು ಮಾತ್ರ ಉಳಿದುಕೊಂಡಿವೆ. ಉಳಿದಂತೆ ಮೈಸೂರು ಮತ್ತು ಪೆನುಗೊಂಡೆ ದ್ವಾರಗಳು ಹಲವು ತಿರುವುಗಳಿಂದ ಜಿಗ್‌ಜಾಗ್

ಮಾದರಿಯಲ್ಲಿವೆ. ಇವುಗಳ ಪ್ರವೇಶದ ಎರಡೂ ಬದಿ ಎತ್ತರದ ಜಗತಿಯ ಮೇಲೆ ಕಂಬಗಳಿಂದ ಕೂಡಿದ ಕಾವಲು ಮಂಟಪ ಮತ್ತು ಕೊತ್ತಲಗಳಿವೆ. ಮುಖ್ಯ ಬಾಗಿಲನ್ನು ಅವಶ್ಯವಿರುವ ಸಂದರ್ಭವನ್ನು ಹೊರತುಪಡಿಸಿ ಉಳಿದ ಸಮಯದಲ್ಲಿ ಮುಚ್ಚಿರುತ್ತಿದ್ದರು ಎಂಬುದಕ್ಕೆ ದಿಡ್ಡಿ ಬಾಗಿಲುಗಳಿವೆ. ಇವುಗಳನ್ನು ದಿನನಿತ್ಯದ ವ್ಯವಹಾರಕ್ಕಾಗಿ ಕೋಟೆಯಿಂದ ಒಳ ಮತ್ತು ಹೊರ ಹೋಗಲು ತಪಾಸಣೆ ಮಾಡಿ ಬಿಡುತ್ತಿದ್ದಕ್ಕೆ ಕಾವಲು ಪಡೆಯು ಸದಾ ಕಾಲ ಇರುತ್ತಿತ್ತು ಎನ್ನಲು ಅಲ್ಲಿಯೆ ಕಾವಲು ಮಂಟಪಗಳು ಇರುವುದರಿಂದ ಸ್ಪಷ್ಟವಾಗುತ್ತದೆ.

ಮೇಲುಗೋಟೆಯಲ್ಲಿ ಬೃಹತ್ತಾದ ಕಲ್ಲುಗುಂಡುಗಳ ಮಧ್ಯೆಯೇ ಗೋಡೆಯನ್ನು ನಿರ್ಮಿಸಲಾಗಿದೆ. ಈ ಗೋಡೆಗೂ ಸಹ ಆಯತ, ತ್ರಿಭುಜ, ಚೌಕ ಮಾದರಿಯ ನುಣುಪುಗೊಳಿಸಿದ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಗೋಡೆಯ ಅಗಲವನ್ನು ವಿಸ್ತರಿಸುವ ಉದ್ದೇಶಕ್ಕಾಗಿ ಮಧ್ಯಭಾಗದಲ್ಲಿ ಮಣ್ಣನ್ನು ಸುರಿಯಲಾಗಿದೆ. ಗೋಡೆಯ ಮೇಲೆ ಹಸಿ ಇಟ್ಟಿಗೆಯಿಂದ ನಿರ್ಮಿಸಿದ ತೆನೆಯಿದ್ದು ಅದರಲ್ಲಿ ವೀಕ್ಷಣಾ ಕಿಂಡಿಗಳನ್ನು ಬಿಡಲಾಗಿದೆ. ಎರಡನೆಯ ದ್ವಾರದ ಎಡಬದಿಯಲ್ಲಿ ಆಂಜನೇಯ, ಯೋಗನರಸಿಂಹ ದ್ವಾರದ ಬಳಿ ಆಂಜನೇಯ ಮತ್ತು ಗರುಡನ ಕಾಳಗ ಶಿಲ್ಪ, ಕುಂಭಿ ಬೆಟ್ಟದಲ್ಲಿ ಪುಷ್ಕರಣಿ, ಮದ್ದಿನ ಮನೆ, ತೆರೆದ ಮಂಟಪ, ಕಾವಲು ಮಂಟಪಗಳಿವೆ. ದೇವರಾಯ ನದುರ್ಗದ ಕೋಟೆ ದುರ್ಭೇದ್ಯವಾಗಿ ನಿರ್ಮಿಸಲ್ಪಟ್ಟಿದ್ದರೂ ಗೋಡೆಯ ಮಧ್ಯೆ ಮಣ್ಣನ್ನು ಸುರಿದಿರುವುದು ಅವೈಜ್ಞಾನಿಕ ವಿಧಾನವಾಗಿದ್ದು ಗೋಡೆಯನ್ನು ಸಡಿಲಗೊಳ್ಳುವಂತೆ ಮಾಡುತ್ತದೆ.

೯. ಬೇಡತ್ತೂರು

ಮಧುಗಿರಿ ತಾಲೂಕಿನ ಬೇಡತ್ತೂರು ಗ್ರಾಮವು ಪ್ರಾಗಿತಿಹಾಸ ಕಾಲದಿಂದಲೂ ವಾಸಯೋಗ್ಯವಾಗಿತ್ತು ಎಂಬುದಕ್ಕೆ ಅಲ್ಲಿ ಕಂಡುಬಂದ ಪ್ರಾಚ್ಯಾವಶೇಷಗಳಿಂದ ದೃಢಪಟ್ಟಿದೆ ಚಾರಿತ್ರಿಕವಾಗಿ ನೊಳಂಬ ಅರಸ ಪೊಳಲ್ಚೋರನ ಶಾಸನ ಇಲ್ಲಿ ದೊರೆತಿರುವುದರಿಂದ ನೊಳಂಬರ ಕಾಲದಿಂದಲೂ ಇದು ಪ್ರಸಿದ್ಧಿಯಲ್ಲಿತ್ತು. ಸಂಬಂಧಿಸಿದರೂ ನಂತರ ಹೊಯ್ಸಳರ ಕಾಲಕ್ಕೆ ಸ್ಥಳಿಯ ಐತಿಹ್ಯವನ್ನು ಆಧರಿಸಿ ಇಲ್ಲಿ ಕೋಟೆ ನಿರ್ಮಿಸಲ್ಪಟ್ಟಿತ್ತೆಂದು ಸ್ಪಷ್ಟಗೊಳ್ಳುತ್ತದೆ. ದೇವಲನಾಯಕ ಎಂಬಾತ ಶಿವರುದ್ರ ಮುನಿಗಳ ಸಹಾಯದಿಂದ ಲಕ್ಕಣ್ಣ ಮತ್ತು ವೀರಣ್ಣ ಎಂಬ ಬಂಟರೊಂದಿಗೆ ಕಾಮಾಕ್ಷಿಪುರದ ಬಟ್ಟಿಗನನ್ನು ಕೊಂದು ಇಂದಿನ ಬೇಡತ್ತೂರು ಗ್ರಾಮದಲ್ಲಿ 'ಮಲಪರಾಯ' ಎಂಬ ಹೆಸರನ್ನು ಧರಿಸಿ ಈ ಗ್ರಾಮಕ್ಕೆ 'ಮಲ್ಲಿನಾಥಪುರ' ಎಂಬ ಪ್ರತಿನಾಮವ ಮಾಡಿ ಮೂರು ಸುತ್ತಿನ ಕೋಟೆ ಮತ್ತು ಅದರ ಸುತ್ತಲೂ ಕಂದಕವನ್ನು ತೋಡಿಸಿದನಂತೆ. ಅಲ್ಲದೆ ಹಳ್ಳಗಳಲ್ಲಿ ಹರಿಯುವ ನೀರನ್ನು ಕಾಲುವೆಗಳ ಮೂಲಕ ಕಂದಕಕ್ಕೆ ಹರಿಬಿಡುವ ವ್ಯವಸ್ಥೆಯನ್ನು ಮಾಡಿದನಂತೆ. ಕೋಟೆಯ ಒಳಗೆ ಅರಮನೆ, ಸೈನಿಕ ಶಾಲೆ, ಶೂಲದ ಕಂಭ, ಕೋನೇರು ಬಾವಿ ಮೊದಲಾದವನ್ನು ನಿರ್ಮಿಸಿದ್ದನು. ಆದರೆ ಮಲಪರಾಯನ ಅಕಾಲ ಮರಣದಿಂದ ಮಲ್ಲಿನಾಥಪುರ ನಾಶವಾಯಿತೆಂದೂ, ಪುನಃ ಮಲ್ಲಿನಾಥಪುರದ ಉತ್ತರಕ್ಕೆ ಹೊಸದಾಗಿ ಗ್ರಾಮವನ್ನು ನಿರ್ಮಿಸಿ ಅದರ ಸುತ್ತಲೂ

ಕೋಟೆ ಕಟ್ಟಲಾಯಿತ್ತೆಂದು ಸ್ಥಳಪುರಾಣ ಹೇಳುತ್ತದೆ. ಇಂದಿಗೂ ಬೇಡತ್ತೂರು ಗ್ರಾಮದ ಉತ್ತರಕ್ಕೆ ಬುರುಜಿನ ಅವಶೇಷ ಕಂಡುಬರುತ್ತದೆ. ನಂತರ ಮಿಡಿಗೇಶಿಯ ಪಾಳೆಗಾರ ನಾಗಿರೆಡ್ಡಿ ಬೆಟ್ಟದ ಮೇಲೆ ಕೋಟೆಯನ್ನು ನಿರ್ಮಿಸಿದನು. ಬೆಟ್ಟದ ಮಧ್ಯಭಾಗದಲ್ಲಿ ತಡೆಗೋಡೆಯಾಗಿ ಕಾಡುಗಲ್ಲುಗಳನ್ನು ಜೋಡಿಸಿದ್ದಾರೆ. ಇಲ್ಲಿಯೇ ಇರುವ ಸುಮಾರು ೫೦ ಮೀಟರ್ ಎತ್ತರದ ನಿಲುವುಗಲ್ಲುಗಳ ಮೇಲೆ ಶತ್ರುಗಳ ಚಲನವಲನ ಗಮನಿಸಲು ಕಾವಲು ಮಂಟಪಗಳನ್ನು ನಿರ್ಮಿಸಲಾಗಿದೆ. ತುದಿಯ ಭಾಗಕ್ಕೆ ಎರಡು ಹೆಬ್ಬಂಡೆಗಳ ನಡುವೆ ಕೊರಕಲಿನಂತಿರುವ ಪ್ರದೇಶದಿಂದ ಹೋಗಬೇಕು. ತುದಿಯಲ್ಲಿ ಸುತ್ತಲೂ ಆಳವಾದ ಕಂದರ ಇರುವುದರಿಂದ ಅನಿವಾರ್ಯ ಇರುವಲ್ಲಿ ಮಾತ್ರ ಗೋಡೆ ನಿರ್ಮಾಣಗೊಂಡಿದೆ. ವಸತಿ ನಿವೇಶನಗಳಿಗೆ ಸಹ ಬೆಟ್ಟದಲ್ಲಿ ಕಲ್ಲಾಸರೆ, ಗುಹೆಗಳು ಹೇರಳವಾಗಿರುವುದರಿಂದ ನಿರ್ಮಿಸಲ್ಪಟ್ಟಿಲ್ಲ. ಸುತ್ತಲೂ ಹೆಬ್ಬಂಡೆಯ ರಚನೆ ಇರುವುದರಿಂದ ಶತ್ರುಗಳು ದಾಳಿ ಮಾಡಿದಾಗ ಕಾದ ಅಂಬಲಿ ಮತ್ತು ಎಳ್ಳೆಣ್ಣೆಯನ್ನು ಮೇಲಿಂದ ಸುರಿಯುತ್ತಿದ್ದರೆಂದು ಅಲ್ಲಿಯೇ ಬಿದ್ದಿರುವ ರಾಗಿಕಲ್ಲುಗಳಿಂದ ವೇದ್ಯವಾಗುತ್ತದೆ. ಬೆಟ್ಟದ ರಚನೆಯೂ ಸಹ ಇದಕ್ಕೆ ಪೂರಕವಾಗಿದೆ.

೧೦. ಮುಮ್ಮಡಿ ಪಟ್ಟಣ

ಹೊಯ್ಸಳರ ಕಾಲದಲ್ಲಿ ಗುಬ್ಬಿ, ತಿಪಟೂರು, ತುಮಕೂರು ಭಾಗದಲ್ಲಿ ನಾಡಪ್ರಭುಗಳೆಂದು ಗುರುತಿಸಿಕೊಂಡ ಏಳು ಜನ ಸಹೋದರರು ಜಿಲ್ಲೆಯ ವಿವಿಧ ಭಾಗಗಳಿಗೆ ಚದುರಿ ಹೋಗಿ ರಾಜ್ಯ ಕಟ್ಟಲು ಪ್ರಯತ್ನಿಸಿದ್ದರ ಕುರುಹಾಗಿಯೇ ಮುಮ್ಮಡಿ ಪಟ್ಟಣ ಕಂಡುಬರುತ್ತದೆ. ಈ ಏಳು ಜನ ಸಹೋದರರಲ್ಲಿ ಮಾರೇಗೌಡನು ಸುರಕ್ಷತೆಯ ದೃಷ್ಟಿಯಿಂದ ಜಿಲ್ಲೆಯ ಪೂರ್ವ ಭಾಗದಲ್ಲಿ ಹರಿಯುವ ಜಯಮಂಗಲಿ ನದಿ ತೀರದಲ್ಲಿ ಹೊಸದಾದ ಮುಮ್ಮಡಿ ಪಟ್ಟಣವನ್ನು ನಿರ್ಮಿಸಿ ಅದರ ಸುತ್ತಲೂ ಕೋಟೆ ಕಟ್ಟಿಸಿದನು. ಸುಮಾರು ೧೮ ಮೈಲಿ ವಿಶಾಲ ಪ್ರದೇಶವನ್ನು ಇಲ್ಲಿಂದಲೇ ನೋಡಿಕೊಳ್ಳುತ್ತಿದ್ದನು. ಮಾರೇಗೌಡನ ಮಗ ವೀರೇಗೌಡನಿಂದ ಈ ಕೋಟೆ ವಿಸ್ತರಿಸಲ್ಪಟ್ಟರೂ ದೊಡ್ಡಗೌಡನ ಕಾಲಕ್ಕೆ ಮುಸ್ಲಿಮರ ದಾಳಿಯಿಂದ ಹಾಳುಗೆಡವಲ್ಪಟ್ಟಿತು. ಆದರೂ ಚಿಕ್ಕಪ್ಪಗೌಡ ಈ ಪಟ್ಟಣವನ್ನು ಪುನಃ ಜೀರ್ಣೋದ್ಧಾರ ಮಾಡಲು ಮುಂದಾದರೂ ರಕ್ಷಣೆಯ ದೃಷ್ಟಿಯಿಂದ ಬಿಜವರಕ್ಕೆ ರಾಜಧಾನಿಯನ್ನು ವರ್ಗಾಯಿಸಿದನು. ಮುಮ್ಮಡಿ ಚಿಕ್ಕಪ್ಪ ಗೌಡ ಇಲ್ಲಿನ ನೊಳಂಬೇಶ್ವರ ದೇವಾಲಯ ಮತ್ತು ಕೋಟೆಯ ಅವಶೇಷಗಳನ್ನು ಬಳಸಿಕೊಂಡು ಮಧುಗಿರಿಯ ವೆಂಕಟರಮಣ ಮತ್ತು ಮಲ್ಲಿಕಾರ್ಜುನ ದೇವಾಲಯಗಳನ್ನು ನಿರ್ಮಿಸಿದನು. ಹಾಗಾಗಿ ಇಂದು ಮುಮ್ಮಡಿ ಪಟ್ಟಣ ಎಲ್ಲಿತ್ತು ಎಂಬುದನ್ನು ಸ್ಪಷ್ಟವಾಗಿ ಗುರುತಿಸುವುದು ಕಷ್ಟಸಾಧ್ಯವಾಗಿದೆ. ಏಕೆಂದರೆ ಇಂದಿನ ಜಯಮಂಗಲಿ ನದಿ ತೀರದಲ್ಲಿರುವ ಪುರವರ, ಸಂಕಾಪುರ, ಕೊಡಗದಾಲ, ಹೊಸಹಳ್ಳಿ, ಗೊಂದಿಹಳ್ಳಿ, ಬ್ಯಾಲ್ಯ, ಹುಣಸವಾಡಿ ಮೊದಲಾದ ಹಳ್ಳಿಗಳು ನದಿಯಿಂದ ಎರಡು ಮೂರು ಕಿ.ಮೀ. ದೂರದಲ್ಲಿದ್ದು, ಅದಕ್ಕೆ ಪೂರಕವಾದ ಯಾವ ಅಲ್ಲಿ ಪ್ರಾಚ್ಯಾವಶೇಷಗಳು

ಕಂಡು ಬರುವುದಿಲ್ಲ. ಜಯಮಂಗಲಿ ನದಿ ತೀರದ ೧೮ ಮೈಲಿ ವಿಸ್ತಾರ ಪ್ರದೇಶದಲ್ಲಿ ಇಂದಿನ ಇಮ್ಮಡಗೊಂಡನಹಳ್ಳಿ ಇರುವ ಗ್ರಾಮವೇ ಮುಮ್ಮಡಿ ಪಟ್ಟಣ ಆಗಿತ್ತೆಂದು ಅಲ್ಲಿ ದೊರೆತ ಪ್ರಾಚ್ಯಾವಶೇಷ ಮತ್ತು ಸ್ಥಳನಾಮ ನಿಷ್ಪತ್ತಿ ಸ್ಪಷ್ಟಪಡಿಸುತ್ತದೆ. ಇಮ್ಮಡಗೊಂಡನಹಳ್ಳಿ ಮತ್ತು ಕೂಡ್ಲಾಪುರ ಎಂಬ ಜೋಡಿ ಗ್ರಾಮಗಳು ಗಂಗರ ಕಾಲದಿಂದಲೂ ಚಾರಿತ್ರಿಕವಾಗಿ ಗುರುತಿಸಿಕೊಂಡಿವೆ. ಗಂಗರ ಕಾಲಕ್ಕೆ ಸೇರಿದ ಸೂರ್ಯನಾರಾಯಣ ದೇವಾಲಯ, ಹೊಯ್ಸಳ ಅರಸರಾದ ರಾಮನಾಥ ಮತ್ತು ಮೂರನೆಯ ಬಲ್ಲಾಳರ ಶಾಸನ ಮತ್ತು ಶೂಲದ ಕಂಭ ಕಂಡುಬರುತ್ತವೆ. ಹೊಯ್ಸಳರಿಂದ ಗೌಡಿಕೆಯಾಗಿ ಪಡೆದುಕೊಂಡ ಈ ಗ್ರಾಮ್ಯದಲ್ಲಿ ನಾಡಪ್ರಭುಗಳು ಗ್ರಾಮದಲ್ಲಿ ವಿಜಯನಗರದ ಅರಸರಿಂದ ಅಮರನಾಯಕತನವನ್ನು ಪಡೆದುಕೊಂಡರು.

ಇಂದು ಮಧುಗಿರಿ ತಾಲೂಕಿನಲ್ಲಿ ಮುಮ್ಮಡಿ ಪಟ್ಟಣ ಎಂದು ಕರೆಯಲ್ಪಡುವ ಯಾವ ಹಳ್ಳಿಗಳೂ ಕಂಡು ಬರುವುದಿಲ್ಲ. ಹಾಗಾಗಿ ಇಮ್ಮಡಗೊಂಡನಹಳ್ಳಿಯೇ ಮುಮ್ಮಡಿ ಪಟ್ಟಣ ಆಗಿದ್ದಿರಬಹುದು. ಏಕೆಂದರೆ ಮುಮ್ಮಡಿ ಎಂಬುದು ಅಪಭ್ರಂಶಗೊಂಡು ಇಮ್ಮಡ ಆಗಿರುವ ಸಾಧ್ಯತೆಯಿದೆ. ಗೊಂಡ ಎಂದರೆ ದಟ್ಟ ಅರಣ್ಯ ಎಂದರ್ಥ. ಅಂದರೆ ಪಟ್ಟಣ ಹಾಳಾಗಿ ಯಾವುದೋ ಕಾಲದಲ್ಲಿ ಪುನಃ ಅಲ್ಲಿ ಜನವಸತಿ ಆರಂಭಗೊಂಡಿದ್ದರಿಂದ ಅದು ಇಮ್ಮಡಗೊಂಡನಹಳ್ಳಿ ಎಂದು ಪ್ರಸಿದ್ಧಿಗೆ ಬಂದಿರಬಹುದು.

೧೧. ಹೊನ್ನವಳ್ಳಿ

ತಿಪಟೂರು ತಾಲೂಕಿನ ಹೊನ್ನವಳ್ಳಿ ಗ್ರಾಮ ಚಾರಿತ್ರಿಕವಾಗಿ ಗಂಗರ ಆರಂಭ ಕಾಲದಿಂದಲೂ ಗುರುತಿಸಿಕೊಂಡಿದೆ. ಹೊನ್ನು ಎಂದರೆ ಬಂಗಾರ ಎಂದರ್ಥ. ಹೇರಳವಾದ ಹೊನ್ನನ್ನು ಹೊಂದಿದ್ದ ಈ ಗ್ರಾಮವೇ ಹೊನ್ನವಳ್ಳಿ ಎಂಬ ಹೆಸರನ್ನು ಪಡೆದುಕೊಂಡಿತು. ಹೀಗೆ ಅಪಾರ ಹೊನ್ನನ್ನು ಹೊಂದಿದ್ದರಿಂದ ನಿರಂತರ ದಾಳಿಗಳನ್ನು ಎದುರಿಸಬೇಕಾಯಿತೆಂದು, ಕೆರೆಯ ಬಳಿ ಇರುವ ವೀರಗಲ್ಲು, ಸತಿಗಲ್ಲು, ಮಹಾಸತಿಗಲ್ಲುಗಳಿಂದ ತಿಳಿಯುತ್ತದೆ. ವೀರ ಬಲ್ಲಾಳನ ಕಾಲಕ್ಕೆ 'ಹೊನ್ನವಳ್ಳಿ' ಸಣ್ಣದಾದ ಆಡಳಿತ ವಿಭಾಗವಾಗಿತ್ತೆಂದು ಆತನ ಶಾಸನಗಳು ಸ್ಪಷ್ಟಪಡಿಸುತ್ತವೆ. ಏಕೆಂದರೆ ಈ ಪರಿಸರದಲ್ಲಿ ಹೊಯ್ಸಳರ ಸಾಮಂತರಾದ ಹುಲಿಯರೆ ಪ್ರಭುಗಳು ಆಳ್ವಿಕೆ ಮಾಡುತ್ತಿದ್ದರು. ಹಾಗಾಗಿ ಇಲ್ಲಿಯ ಕೋಟೆಯು ಸಹ ಅವರಿಂದಲೇ ನಿರ್ಮಾಣಗೊಂಡಿರಬಹುದು. ಈ ಕೋಟೆಯ ತಳಭಾಗಕ್ಕೆ ಆನೆ ಇಲ್ಲವೇ ಕೋಣಗಳ ಮೂಲಕ ಬೃಹತ್ ಗುಂಡುಗಳನ್ನು ತಳ್ಳಿಸಿ ನಿರ್ಮಿಸಲಾಗಿದೆ. ಈ ರಚನಾಶೈಲಿ ಹೊಯ್ಸಳರ ಆರಂಭ ಕಾಲಘಟ್ಟ ಇಲ್ಲವೇ ಗಂಗರ ಅಂತ್ಯ ಕಾಲಕ್ಕೆ ಸೇರುತ್ತದೆ. ಏಕೆಂದರೆ ಇಲ್ಲಿಯ ಕೆರೆಗಳ ಉಲ್ಲೇಖ ವೀರನರಸಿಂಹನ ಶಾಸನದಲ್ಲಿ ಸಿಗುವುದರಿಂದ ಅದಕ್ಕೂ ಪೂರ್ವದಲ್ಲೇ ಅವು ಇದ್ದವೆಂದು ಸ್ಪಷ್ಟವಾಗುತ್ತದೆ. ಈ ಕೋಟೆಯ ಎರಡು ಕೆರೆಗಳ ಮಧ್ಯೆ ಇರುವುದರಿಂದ ಕೆರೆಯ ನೀರನ್ನೇ ಕೋಟೆಯ ಸುತ್ತಲೂ ಇರುವ ಕಂದಕಗಳಿಗೆ ಬಿಡಲಾಗುತ್ತಿತ್ತು. ಈ ಕೆರೆಗಳ ನಿರ್ಮಾಣಕ್ಕೆ ಬಳಸಿದ ಶಿಲಾಮಾಧ್ಯಮಕ್ಕೂ ಕೋಟೆಗೆ

ಬಳಸಲಾದ ಶಿಲಾಮಾಧ್ಯಮಕ್ಕೂ ಸಾಮ್ಯತೆ ಇದ್ದು ಇವೆರಡೂ ಒಂದೇ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿವೆ. ನಂತರ ಹೊಯ್ಸಳರು, ಹುಲಿಯರೆ ಪ್ರಭುಗಳು, ವಿಜಯನಗರ ಮತ್ತು ಹಾಗಲವಾಡಿ ಪಾಳೆಯಗಾರರಿಂದ ಜೀರ್ಣೋದ್ಧಾರ ಹೊಂದಿದೆ. ಕ್ರಿ.ಶ. ೧೫೬೧ರಲ್ಲಿ ಹಾಗಲವಾಡಿಯ ಭೈರನಾಯಕನು ಹಾಗಲವಾಡಿ ಕೋಟೆಯ ರೀತಿಯಲ್ಲೇ ಆಯತ, ಚೌಕ, ಚಪ್ಪಟೆ, ಚಕ್ಕೆ, ಗುಂಡುಕಲ್ಲುಗಳಿಂದ ಕೋಟೆಯನ್ನು ಜೀರ್ಣೋದ್ಧಾರಗೊಳಿಸಿದನು. ಎರಡು ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡ ಕೋಟೆ ಗೋಡೆಯು ಸಡಿಲಗೊಳ್ಳದಂತೆ ಅವುಗಳ ಮಧ್ಯೆ ಕಲ್ಲಿನ ಚಕ್ಕೆಗಳನ್ನು ನಂತರದಲ್ಲಿ ಜೋಡಿಸಿದ್ದಾರೆ. ಗೋಡೆಯ ಅಗಲವನ್ನು ವಿಸ್ತರಿಸಲು ಮಧ್ಯ ಭಾಗದಲ್ಲಿ ಮಣ್ಣನ್ನು ಸುರಿಯಲಾಗಿದೆ. ಮದ್ದುಗುಂಡುಗಳ ಹೊಡೆತಕ್ಕೆ ಕೋಟೆ ಹಾಳಾಗಬಾರದೆಂದು ಮಣ್ಣಿನ ಇಳಿವೊರೆ ಗೋಡೆಯ ಒಳಬದಿಯಲ್ಲಿ ನಿರ್ಮಾಣಗೊಂಡಿದೆ. ಈ ಕೋಟೆಯಲ್ಲಿ ೨೦ ಮೀ ಗಿಂತಲೂ ಎತ್ತರವಾದ ಐದು ಬುರುಜುಗಳು ಗೋಡೆಗೆ ಹೊಂದಿಕೊಂಡಂತಿವೆ. ಆದುದರಿಂದ ಎಲ್ಲಾ ದಿಕ್ಕುಗಳಿಂದಲೂ ಶತ್ರುಗಳ ಚಲನವಲನ ವೀಕ್ಷಿಸಲು ಅವಕಾಶವಿತ್ತು. ಆದರೆ ಇಂದು ನಾಲ್ಕು ಬುರುಜುಗಳು ಮಾತ್ರ ಉಳಿದುಕೊಂಡಿವೆ. ಗೋಡೆಯ ತಳಭಾಗ ೪.೩೦ ಮೀ ಅಗಲ, ಮೇಲ್ಭಾಗ ೧.೮೦ ಮೀ ಅಗಲ, ೧೦ ಮೀ. ಎತ್ತರವಿದೆ. ಕೋಟೆಯಲ್ಲಿ ಪೂರ್ವದ ದ್ವಾರ ಮಾತ್ರ ಇಂದು ಉಳಿದುಕೊಂಡಿದ್ದು, ಜಿಗ್‌ಜಾಗ್ ಮಾದರಿಯಲ್ಲಿದೆ. ದ್ವಾರದ ಮೇಲ್ಛಾವಣಿಯಲ್ಲಿ ರಂಧ್ರಗಳಿರುವುದರಿಂದ ಬಾಗಿಲನ್ನು ಹಾಕಲಾಗುತ್ತಿತ್ತು. ದ್ವಾರದ ಎರಡೂ ಬದಿ ಶತ್ರುಗಳ ಅನಿರೀಕ್ಷಿತ ದಾಳಿಯನ್ನು ತಡೆಯಲು ಅನುವಾಗಲೆಂದು ಕಾವಲು ಮಂಟಪಗಳನ್ನು ನಿರ್ಮಿಸಲಾಗಿದೆ. ಇವುಗಳಿಗೆ ಹೊಂದಿಕೊಂಡಂತೆ ಕೋಟೆಯ ಒಳಗಿನವರು ದಿನನಿತ್ಯದ ವ್ಯವಹಾರ ಕೈಗೊಳ್ಳಲು ದಿಡ್ಡಿ ಬಾಗಿಲನ್ನು ನಿರ್ಮಿಸಿದ್ದಾರೆ. ಸಾಮಾನ್ಯವಾಗಿ ದಿಡ್ಡಿ ಬಾಗಿಲಿನ ಮೂಲಕ ಶತ್ರು ಪಾಳೆಯದ ಯಾವ ವ್ಯಕ್ತಿಯು ಒಳ ಪ್ರವೇಶಿಸುವ ಸಾಹಸಕ್ಕೆ ಮುಂದಾಗುತ್ತಿರಲಿಲ್ಲ. ಏಕೆಂದರೆ ಅಷ್ಟು ದುರ್ಭೇದ್ಯವಾಗಿ ನಿರ್ಮಿಸಲ್ಪಟ್ಟಿರುತ್ತಿದ್ದವು. ಮುಖ್ಯ ದ್ವಾರ ೩.೭೫.ಮೀ, ಅಗಲ, ೪.ಮೀ. ಎತ್ತರ, ೭.೮೦.ಮೀ. ದಪ್ಪವಿದ್ದು, ದಿಡ್ಡಿ ಬಾಗಿಲು ೨.೫೦.ಮೀ ಅಗಲ, ೪.ಮೀ. ಎತ್ತರ, ೧.೯೩.ಮೀ ದಪ್ಪವನ್ನು ಹೊಂದಿದೆ. ಹೀಗೆ ಹಲವು ಕಾಲಘಟ್ಟಗಳಲ್ಲಿ ಅಭೇದ್ಯ ದುರ್ಗವಾಗಿದ್ದಂತಹ ಈ ಕೋಟೆ ಕ್ರಿ.ಶ. ೧೭೭೫ರಲ್ಲಿ ಮರಾಠರ ದಾಳಿಯಿಂದ ಅವಸಾನ ಹೊಂದಿತು.

೧೨. ಪಾವಗಡ

ನಿಡಿದಾದ ಬೃಹತ್ ನೈಸರ್ಗಿಕ ಬಂಡೆಗಳಿಂದ ಕೂಡಿದ ಪಾವಗಡ ಬೆಟ್ಟ ಸಮುದ್ರ ಮಟ್ಟದಿಂದ ೩೦೨೯ ಅಡಿ ಎತ್ತರದಲ್ಲಿದೆ. ಪ್ರಾಗಿತಿಹಾಸ ಕಾಲದಿಂದಲೂ ವಾಸಯೋಗ್ಯವಾಗಿತ್ತು ಎಂಬುದಕ್ಕೆ ಅಲ್ಲಿ ದೊರೆತ ಪ್ರಾಚ್ಯಾವಶೇಷಗಳಿಂದ ದೃಢಪಟ್ಟಿದೆ. ಇಲ್ಲಿಯ ಸ್ಥಳಪುರಾಣವೊಂದು ಪಾಂಡವರು ವನವಾಸದ ಸಂದರ್ಭದಲ್ಲಿ ಈ ಬೆಟ್ಟದಲ್ಲಿ ತಂಗಿದ್ದರೆಂದೂ, ಒಮ್ಮೆ ದ್ರೌಪದಿಗೆ ಬಾಯಾರಿಕೆಯಾದಾಗ ಬೆಟ್ಟದಲ್ಲಿ ಎಲ್ಲಿಯೂ ನೀರಿನ ಸೆಲೆಯಿಲ್ಲದ್ದನ್ನು ಕಂಡ ಭೀಮನು ಸಿಟ್ಟಿನಿಂದ ಗದೆಯಿಂದ

ಬಂಡೆಗೆ ಹೊಡೆದಾಗ ನೀರಿನ ಬುಗ್ಗೆ ಹೊರಚಿಮ್ಮಿತೆಂದೂ, ಅದನ್ನು ಇಂದಿಗೂ ಭೀಮನ ದೋಣಿ ಎಂದು ಪೂಜ್ಯ ಭಾವನೆಯಿಂದ ಕಾಣುತ್ತಾರೆ. ಹೀಗೆ ಪಾಂಡು ರಾಜಕುಮಾರರು ಇಲ್ಲಿ ತಂಗಿದ್ದರಿಂದ 'ಪಾಂಡುಕೊಂಡ'[೬೫] ಎಂಬುದಾಗಿ ಜನಪದರಲ್ಲಿ ರೂಢಿಗತವಾಗಿ ಕರೆಯಲ್ಪಟ್ಟಿತು. ಕ್ರಮೇಣ ಇದು ಪಾವಗಡ ಶಾಸನದಲ್ಲಿ ಪಾಗೊಂಡ, ಪಾಮುಗೊಂಡ, ಪಾವಗೊಂಡ ಎಂಬುದಾಗಿ ಉಲ್ಲೇಖಿಸಲ್ಪಟ್ಟಿದೆ. ಈ ಐತಿಹ್ಯವನ್ನು ಐತಿಹಾಸಿಕವಾಗಿ ವಿಶ್ಲೇಷಣೆಗೆ ಒಳಪಡಿಸಿದರೆ ಬೆಟ್ಟದ ಸಮೀಪವೇ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬರುತ್ತವೆ. ಭೀಮನು ಬಂಡೆಗೆ ಗದೆಯಿಂದ ಒಡೆದಂತಹ ಉಲ್ಲೇಖ ಈ ಐತಿಹ್ಯದಲ್ಲಿ ಸಿಗುವುದರಿಂದ ಜಿಲ್ಲೆಯ ಹಲವು ಬೃಹತ್ ಶಿಲಾಯುಗದ ನೆಲೆಗಳು ಪಾಂಡವರ ಕಾಲಘಟ್ಟದೊಂದಿಗೆ ಗುರುತಿಸಲ್ಪಟ್ಟಿವೆ ಅಂದರೆ ಪಾಂಡವರ ಉಲ್ಲೇಖ ಎಲ್ಲಿ ಕಂಡುಬರುತ್ತದೋ ಅಲ್ಲಿ ಬೃಹತ್ ಶಿಲಾಯುಗ ಸಂಸ್ಕೃತಿಯ ಅವಶೇಷಗಳು ಕಂಡುಬರುತ್ತದೆ; ಈ ಹಿನ್ನೆಲೆಯಿಂದಲೇ ಪಾವಗಡದ ಸ್ಥಳನಾಮವೂ ಸಹ ರೂಪುಗೊಂಡು ಕ್ರಮೇಣ ಪಾಮುಗೊಂಡ, ಪಾಕೊಂಡ ಎಂಬುದಾಗಿ ಕರೆಯಲ್ಪಡುತ್ತಿತ್ತು; ಕೊನೆಗೆ ೧೭೬೭ರಲ್ಲಿ ಮಾಧವರಾಯ ಇದಕ್ಕೆ 'ಪಾವಗಡ'[೬೬] ಎಂದು ಮರುನಾಮಕರಣ ಮಾಡಿದನು.

ಐತಿಹಾಸಿಕವಾಗಿ ಪಾವಗಡವು ಗಂಗ, ನೊಳಂಬ ಪಲ್ಲವರ ಕಾಲದಿಂದ ಗುರುತಿಸಿಕೊಂಡರೂ ಕೋಟೆಯ ನಿರ್ಮಾಣ ಕಾರ್ಯ ಮಾತ್ರ ಮೊದಲನೆಯ ದೇವರಾಯನ ಆಸ್ಥಾನ ಅಧಿಕಾರಿ ಮತ್ತು ನಿಡುಗಲ್ಲು ಪ್ರದೇಶದಲ್ಲಿ ನಿಯೋಜನೆಗೊಂಡಿದ್ದ ಗೋಪರಾಜನಿಂದ ಕ್ರಿ.ಶ. ೧೪೦೫ರಲ್ಲಿ ಆರಂಭವಾಯಿತೆಂದು ಕ್ರಿ.ಶ. ೧೪೦೫ರ ಪಾವಗಡ ಶಾಸನ[೬೭] ಉಲ್ಲೇಖಿಸುತ್ತದೆ. ನಂತರ ಅದೇ ದೇವರಾಯನ ಆದೇಶದ ಮೇರೆಗೆ ಕೋಟೆಯ ನಿರ್ಮಾಣ ಕಾರ್ಯವನ್ನು ಅರ್ಧಕ್ಕೆ ನಿಲ್ಲಿಸಲಾಯಿತು. ಪುನಃ ವೆಂಕಟಪತಿ ಪೆನುಗೊಂಡೆಯಲ್ಲಿ ಆಳ್ವಿಕೆ ಮಾಡುತ್ತಿದ್ದಾಗ ಈ ಪರಿಸರದಲ್ಲಿನ ಪಂಜುಗಳ್ಳರ ಹಾವಳಿಯನ್ನು ತಡೆಯಲು ಕ್ರಿ.ಶ. ೧೫೮೫ರಲ್ಲಿ ಕೋಟೆಯನ್ನು ಪೂರ್ಣಗೊಳಿಸಲು ಬಲ್ಲಪ್ಪನಾಯಕನಿಗೆ ಆದೇಶಿಸಿದನು. ಆಗ ಬಲ್ಲಪ್ಪನಾಯಕ ಸುಬ್ಬರಾಯಪ್ಪನ ನೆರವಿನಿಂದ ಕೋಟೆಯ ನಿರ್ಮಾಣ ಕಾರ್ಯವನ್ನು ಏಳುನೂರು ಬಂಡಿಯಲ್ಲನ ಬೋಯಿ, ಮುನ್ನೂರು ಹಿಂಡಿ ಮುದ್ದಪ್ಪನ ಬೋಯಿ, ನಾಗನ್ನಬೋಯಿ, ಮುನ್ನೂರು ಖಂಡಿ ಮುದ್ದೇನ ಬೋಯಿ, ನಾಗನ್ನ ಬೋಯಿ, ಸಾವಿರ ಖಂಡಿ ಪಲ್ಲನ್ನ ಬೋಯಿ ಮೊದಲಾದ ವಡ್ಡರಿಗೆ ವಹಿಸಿದನು. ಆದರೆ ಬಲ್ಲಪ್ಪನಾಯಕನ ನಂತರ ಅಧಿಕಾರ ವಹಿಸಿಕೊಂಡ ಪಾವಗಡ ಪಾಳೆಯಗಾರರು ಮೊಘಲ್, ಮರಾಠ, ಬಿಜಾಪುರ ಸುಲ್ತಾನ, ಹೈದರ್, ಟಿಪ್ಪುವಿನ ನಿರಂತರ ದಾಳಿಗಳಿಂದ ಪಾವಗಡ ಕೋಟೆಯ ಮೇಲಿನ ಅಧಿಪತ್ಯವನ್ನು ಕಳೆದುಕೊಂಡರು. ಹೀಗೆ ಕಳೆದುಕೊಂಡ ಅಧಿಕಾರವನ್ನು ಪುನಃ ಪಡೆಯಲು ಈ ಪಾಳೆಪಟ್ಟಿನ ಕೊನೆಯ ಅರಸನಾದ ತಿಮ್ಮಪ್ಪನಾಯಕ[೬೮] ಪ್ರಯತ್ನಿಸಿದರೂ ಅದು ಯಶಸ್ವಿಯಾಗಲಿಲ್ಲ. ಹೈದರ್-ಟಿಪ್ಪುವಿನ ಕಾಲದಲ್ಲಿ ಕೋಟೆಗೆ ಕುಸುರಿ ಕಲೆಯನ್ನು ಗಾರೆಯಲ್ಲಿ ಬಿಡಿಸಿ, ಫ್ರೆಂಚ್ ವಾಸ್ತುವಿನ್ಯಾಸದಿಂದ ಕೋಟೆಯ ಹಲವು ಭಾಗಗಳನ್ನು ಜೀರ್ಣೋದ್ಧಾರಗೊಳಿಸಿದನು. ಟಿಪ್ಪುವಿನ

ಮರಣದಿಂದ ಮರಾಠರ ಅಧಿಪತ್ಯಕ್ಕೆ ಒಳಪಟ್ಟ ಕೋಟೆಯು ತನ್ನ ಮಹತ್ವವನ್ನು ಕಳೆದುಕೊಂಡಿತು. ಕೊನೆಗೆ ಮೈಸೂರು ಒಡೆಯರ ಸುಪರ್ದಿಗೆ ಸೇರ್ಪಡೆಗೊಂಡಿತು.

ಪಾವಗಡ ಕೋಟೆಯ ಲಕ್ಷಣಗಳು

ಮೊದಲನೆಯ ದೇವರಾಯನ ಆಸ್ಥಾನದ ಅಧಿಕಾರಿಯಾದ ಗೋಪಣ್ಣನು ಪಾವಗಡ ಬೆಟ್ಟದ ರಚನೆಯನ್ನು ಗಮನಿಸಿ ಕೋಟೆಯನ್ನು ಕಟ್ಟಲು ಮುಂದಾದನು. ಆದರೆ ದೇವರಾಯನ ಆದೇಶದ ಮೇರೆಗೆ ಅದರ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತಿತು. ಪುನಃ ವೆಂಕಟಪತಿಯ ಕಾಲದಲ್ಲಿ ಅದು ಪೂರ್ಣಗೊಂಡಿತು. ಹೀಗೆ ನಿರ್ಮಾಣಗೊಂಡ ಕೋಟೆ ಗೋಡೆಗೆ ತಳ ಭಾಗದಲ್ಲಿ ಬೃಹತ್ ಗ್ರಾನೈಟ್ ಕಲ್ಲುಗಳನ್ನು ಬಳಸಲಾಗಿದ್ದು, ಮೇಲೆ ಹೋದಂತೆಲ್ಲಾ ಅವು ಕಿರಿದಾಗುತ್ತಾ ಹೋಗಿವೆ. ಗೋಡೆ ಸಡಿಲಗೊಳ್ಳದಂತೆ ಕಲ್ಲುಗಳ ಅವುಗಳ ಮಧ್ಯೆ ಚಕ್ಕೆಗಳನ್ನು ಜೋಡಿಸಿದ್ದಾರೆ. ಕಾಲಾಂತರದಲ್ಲಿ ಬಿದ್ದು ಹೋಗಿದ್ದರಿಂದ ಪುನಃ ಅವುಗಳ ಮಧ್ಯೆ ಕಲ್ಲಿನ ಚಕ್ಕೆಗಳನ್ನು ಜೋಡಿಸದೆ ಗಾರೆಯ ಲೇಪನ ಮಾಡಿದ್ದಾರೆ. ಹನುಮಂತನ ಬೆಟ್ಟದಿಂದ ತುದಿಯವರೆಗಿನ ಕೋಟೆ ಹಾಗೂ ನೆಲಗೋಟೆಯಲ್ಲಿ ಆಯತ, ಚೌಕ, ತ್ರಿಭುಜ ಮಾದರಿಯ ಗ್ರಾನೈಟ್ ಶಿಲೆಯನ್ನು ನುಣುಪುಗೊಳಿಸಿ ಕೆಲವೆಡೆ ಕಾಡುಗಲ್ಲುಗಳನ್ನು ಬಳಸಿದ್ದಾರೆ. ಹನುಮಂತ ದೇವಾಲಯದ ಬಳಿ ಇರುವ ದೇವರಾಯನ ಕಾಲದ ಶಾಸನ ಮತ್ತು ಹಂಪಿಯ ಕೋಟೆಗೆ ಬಳಸಿದ ತ್ರಿಭುಜ ಮಾದರಿಯ ಕಲ್ಲುಗಳಂತೆ ಇಲ್ಲಿಯೂ ಬಳಕೆಯಾಗಿರುವುದರಿಂದ ಅದು ದೇವರಾಯನ ಕಾಲದ ಕೋಟೆ ಎಂಬುದು ಸ್ಪಷ್ಟವಾಗುತ್ತದೆ. ಇಡೀ ಕೋಟೆಯನ್ನು ಗಮನಿಸಿದರೆ ಬೆಟ್ಟದ ತುದಿ ಭಾಗವನ್ನು ಹೊರತುಪಡಿಸಿ ಹಾನಿಗೊಂಡಿಲ್ಲ. ಎಲ್ಲಿಯೂ ಏಳುಸುತ್ತಿನ ಕೋಟೆಯಲ್ಲಿ ತುದಿಭಾಗದ ಆವರಣದಲ್ಲೇ ಅಧಿಕಾರಿ ವರ್ಗ, ಪಾಳೆಯಗಾರರ, ಜನಸಾಮಾನ್ಯರ ಕಟ್ಟಡಗಳು ಇರುವುದರಿಂದ ಈ ಭಾಗವನ್ನು ವಶಪಡಿಕೊಳ್ಳಲು ಅಧಿಕ ಶ್ರಮವಹಿಸುತ್ತಿದ್ದರು. ಅದಕ್ಕಾಗಿಯೇ ತುದಿ ಭಾಗದ ಕೋಟೆ ಹಾನಿಗೀಡಾಗುತ್ತಿತ್ತು. ಈ ಕಾರಣದಿಂದಲೇ ತುದಿ ಭಾಗದ ಕೋಟೆ ಎರಡು ಮೂರು ಹಂತಗಳಲ್ಲಿ ಜೀರ್ಣೋದ್ಧಾರಗೊಂಡಿದೆ. ತುದಿಯ ಭಾಗದ ಗೋಡೆಯ ಹೊರಮುಖದಲ್ಲಿ ಗಾರೆಯ ಲೇಪನ ಇರುವುದರಿಂದ ಹೈದರ್–ಟಿಪ್ಪುವಿಗಿಂತ ಪೂರ್ವದಲ್ಲಿದ್ದ ಕೋಟೆಯ ಲಕ್ಷಣಗಳನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಹೈದರ್–ಟಿಪ್ಪು ಕಾಲದ ಕೋಟೆಯ ವಿಶೇಷತೆ ಎಂದರೆ ಪ್ರತಿ ಭಾಗದಲ್ಲೂ ಇಟ್ಟಿಗೆ ಮತ್ತು ಗಾರೆಯ ಬಳಕೆ ಕಂಡುಬರುವುದು.

ವಾಸ್ತುಬದ್ಧವಾಗಿ ನಿರ್ಮಿಸಲ್ಪಟ್ಟ ಗೋಡೆಯಲ್ಲಿ ತಳಭಾಗ ಬೃಹತ್ ಕಾಡುಗಲ್ಲುಗಳನ್ನು ಹೊಂದಿದ್ದು ಮಧ್ಯ ಭಾಗ ಸಣ್ಣದಾದ ಕಲ್ಲನ್ನು ತುದಿಯ ಭಾಗದಲ್ಲಿ ಆಯತ, ಚೌಕ ಮಾದರಿಯ ಗ್ರಾನೈಟ್ ಶಿಲೆ ಹಾಗೂ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಕೈಪಿಡಿಯನ್ನು ಗೋಡೆ ಹೊಂದಿದೆ. ನೆಲಗೋಟೆಯ ರಕ್ಷಣೆಗಾಗಿ ನಿರ್ಮಿಸಲಾಗುವ ಕಂದಕವು ಕೋಟೆಯ ಒಳಗಿತ್ತೋ ಅಥವಾ ಹೊರಗಿತ್ತೋ ಎಂಬುದು ಇಂದು ಪಟ್ಟಣ ವಿಸ್ತರಿಸಲ್ಪಟ್ಟಿರುವುದರಿಂದ ಸ್ಪಷ್ಟವಾಗಿ ಗುರುತಿಸಲು

ಸಾಧ್ಯವಿಲ್ಲ. ಆದರೂ ಮಧುಗಿರಿ ಊರಬಾಗಿಲಿನ ಬಳಿ ಕಂದಕ ಒಳಭಾಗದಲ್ಲಿಯೇ ಇತ್ತು ಎಂಬುದಕ್ಕೆ ಗೋಡೆಯ ಒಳ ಬದಿಯಲ್ಲಿ ಆಳವಾದ ಕಂದರವಿದೆ. ಬಹುಶಃ ಬೆಟ್ಟದ ಇಳಿಜಾರಿನ ಮೂಲಕ ಹರಿಯುವ ನೀರನ್ನು ಒಳಬದಿಯಲ್ಲಿರುವ ಕಂದಕಕ್ಕೆ ಬಿಡುವುದರಿಂದ ಒಳಗಿರುವ ಜನವಸತಿಗೆ ದಿನನಿತ್ಯದ ಬಳಕೆಗೆ ಬೇಕಾಗಬಹುದಾದ ನೀರನ್ನು ಇದರಲ್ಲಿ ಸಂಗ್ರಹಿಸಲು ಅನುಕೂಲವಾಗುತ್ತದೆ. ಆದರೆ ಇಂತಹ ಕೋಟೆಗಳಲ್ಲಿ ಸಮತಟ್ಟಾದ ಪ್ರದೇಶ ಇದ್ದಾಗ ಮಾತ್ರ ಕಂದಕವನ್ನು ನಿರ್ಮಿಸಬಹುದು. ಉಳಿದಂತೆ ಕೋಟೆಯ ಹೊರ ಬದಿಯಲ್ಲಿ ಕಂದಕ ಇತ್ತು ಎನ್ನಲು ಕೋಟೆಯ ಮುಂಬದಿಯಲ್ಲಿ ಇರುವ ಎರಡು ಕೆರೆಗಳಿಂದ ವೇದ್ಯವಾಗುತ್ತದೆ.

ಹೈದರ್ ಟಿಪ್ಪುವಿನ ಕಾಲದಲ್ಲಿ ಗೋಡೆಯ ರಕ್ಷಣೆಗಾಗಿ ಗೋಡೆಯ ಹೊರ ಮತ್ತು ಒಳ ಮುಖಕ್ಕೆ ಗಾರೆಯ ಲೇಪನ ಮಾಡಿ, ಮಳೆಯ ನೀರು ಗೋಡೆಯಲ್ಲಿ ನಿಲ್ಲದಂತೆ ಪಟ್ಟಿಕೆಗಳನ್ನು ಬಿಡಲಾಗಿದೆ. ಗೋಡೆಯ ಮೇಲೆ ಸೈನಿಕರು ಓಡಾಡಲು, ಆಯುಧೋಪಕರಣ ಇಡುವುದಕ್ಕಾಗಿ ಸ್ಥಳಾವಕಾಶ ಕಲ್ಪಿಸಲು ವೇದಿಕೆಯನ್ನೂ ಸಹ ಗಾರೆ ಮತ್ತು ಇಟ್ಟಿಗೆಗಳಿಂದ ಇಳಿಜಾರಾಗಿ ನಿರ್ಮಿಸಿದ್ದಾರೆ. ಈ ವೇದಿಕೆಯಲ್ಲಿದ್ದಾಗ ಒಳಗಿನ ಸೈನಿಕರು ಹೊರಗಿನ ಶತ್ರುಗಳಿಗೆ ಕಾಣಿಸದಿರಲೆಂದು ಎದೆಯ ಮಟ್ಟದವರೆಗೂ ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿ ಗೋಡೆಯಿದೆ. ಕೆಲವೆಡೆ ಈ ಗೋಡೆಯಲ್ಲಿ ಶಸ್ತ್ರಾಸ್ತ್ರ ಇಡಲು ಇಲ್ಲವೇ ಸೈನಿಕರು ತಂಗುವುದಕ್ಕಾಗಿ ಬಂಕರ್‌ಗಳನ್ನು ನಿರ್ಮಿಸಿದ್ದಾರೆ. ಬಹುಶಃ ಇವುಗಳಲ್ಲಿ ಫಿರಂಗಿಗಳಿಗೆ ಬೇಕಾದ ಮದ್ದನ್ನು ಸಂಗ್ರಹಿಸುತ್ತಿದ್ದರು. ಕೈಪಿಡಿ ಗೋಡೆಯ ಹೊರಭಾಗ ಆನೆಯ ಬೆನ್ನಿನಂತೆ ಇಳಿಜಾರಾಗಿ ಇರುವುದರಿಂದ ಮಳೆಯ ನೀರು ಬಿದ್ದ ತಕ್ಷಣ ಒಂದೆಡೆ ನಿಲ್ಲದಂತೆ ಹರಿದು ಹೋಗುತ್ತದೆ. ಕೈಪಿಡಿ ಗೋಡೆ ಹೊರಮುಖಕ್ಕೆ ಇಳಿಜಾರಾಗಿ ಗೋಡೆಯ ಮೇಲಿಂದ ಕೆಳಗಿರುವ ಶತ್ರುಗಳ ಮೇಲೆ ಕಾದ ಎಣ್ಣೆ, ಅಂಬಲಿಯನ್ನು ಸುರಿಯಲು ಹಾಗೂ ಶಸ್ತ್ರಾಸ್ತ್ರ ಪ್ರಯೋಗಿಸಲು ಸೂಕ್ತವಾದ ವೇದಿಕೆಯನ್ನು ಕಲ್ಪಿಸಿದಂತಿದೆ. ಈ ಗೋಡೆಯಲ್ಲಿ ಆಯತ, ಚೌಕ, ತ್ರಿಭುಜ ಮಾದರಿಯ ಕಮಾನುಗಳು, ಗಜಪುಷ್ಠಾಕಾರವಾಗಿ ವೀಕ್ಷಣೆ ಮತ್ತು ಶಸ್ತ್ರಾಸ್ತ್ರ ಪ್ರಯೋಗಿಸಲು ಕಿಂಡಿಗಳನ್ನು ಬಿಟ್ಟಿರುವುದು ವಿಶೇಷವೆನಿಸುತ್ತದೆ. ಒಮ್ಮೆ ಈ ಕಿಂಡಿಯ ಮೂಲಕ ಹೊರಗಿನ ಪರಿಸರವನ್ನು ವೀಕ್ಷಿಸಿದರೆ ನಾಲ್ಕರಿಂದ ಐದು ದಿಕ್ಕುಗಳ ಚಲನವಲನ ಕಾಣುವಂತಹ ವೈಜ್ಞಾನಿಕತೆಯನ್ನು ರೂಪಿಸಿದ್ದಾರೆ. ಅಲ್ಲದೆ ಈ ಕಿಂಡಿಗಳಲ್ಲಿ ಒಮ್ಮೆ ಕಾದ ಎಣ್ಣೆಯನ್ನು ಸುರಿದರೆ ಅದು ಗೋಡೆಯ ತುಂಬಾ ಪಸರಿಸಿಕೊಳ್ಳುತ್ತದೆ. ಆದುದರಿಂದ ಗೋಡೆ ಏರುವಂತಹ ಶತ್ರು ಪಾಳೆಯ ನಿರಾಸೆಯನ್ನು ಅನುಭವಿಸಬೇಕಾಗುತ್ತದೆ.

ದಳವಾಯಿ ಓಣಿಯಿಂದ ಮೇಲ್ಭಾಗದ ಕೋಟೆ ಶತ್ರುಗಳಿಗೆ ಬಹುಬೇಗ ವಶವಾಗದಿರಲೆಂದೂ ಹಾಗೂ ಆ ಗೋಡೆ ಅದೇ ಮದ್ದುಗುಂಡುಗಳ ಹೊಡೆತಕ್ಕೆ ಹಾಳಾಗದಿರಲು ಅದನ್ನು ಹಲವು ತಿರುವುಗಳ ಮೂಲಕ ಬೃಹತ್ ಗುಂಡುಗಳ ಮಧ್ಯೆ ಹಾದುಹೋಗುವಂತೆ ನಿರ್ಮಿಸಿದ್ದಾರೆ. ಗೋಡೆಯ ಅಗಲವನ್ನು ವಿಸ್ತರಿಸುವ ಉದ್ದೇಶದಿಂದ ಕೊತ್ತಲಗಳನ್ನು ಎತ್ತರವಾಗಿ ನಿರ್ಮಿಸಲಾಗಿದೆ.

ಈ ಕೊತ್ತಲಗಳಲ್ಲಿ ಫಿರಂಗಿ ಕಿಂಡಿಗಳು ಹೆಚ್ಚಿರುವುದನ್ನು ಗಮನಿಸಿದರೆ ಫಿರಂಗಿಗಳ ಬಳಕೆ ಹೆಚ್ಚಾಗಿ ಕೊತ್ತಲಗಳಲ್ಲೇ ಆಗುತ್ತಿತ್ತು. ಫಿರಂಗಿ ಕಿಂಡಿಗಳ ಕೆಳ ಭಾಗ ಅಂಬುಕಿಂಡಿ, ವೀಕ್ಷಣಾಕಿಂಡಿಗಳು ಸಹ ಕಂಡುಬರುತ್ತವೆ. ಕೊತ್ತಲದ ಮೇಲ್ಭಾಗದಲ್ಲಿಯೇ ಶಸ್ತ್ರಾಸ್ತ್ರಗಳನ್ನು ಇಡಲು ಹಾಸುಗಲ್ಲುಗಳನ್ನು ಹಾಕಿ ಗಾರೆಯಿಂದ ನುಣುಪುಗೊಳಿಸಿದ್ದಾರೆ. ಕೊತ್ತಲಗಳ ಮೇಲೇರಲು ಒಳಬದಿಯಲ್ಲಿ ಮೆಟ್ಟಿಲುಗಳಿವೆ. ವಿಶೇಷವಾಗಿ ದಳವಾಯಿ ಬೀದಿಯಿಂದ ತುದಿಯ ಭಾಗದವರೆಗಿನ ಪ್ರತಿ ಪ್ರವೇಶ ದ್ವಾರದಲ್ಲೂ ೫ ಮೀ. ಎತ್ತರದ ಕೊತ್ತಲಗಳಿವೆ. ಅವುಗಳ ಮಧ್ಯೆಯೇ ಒಳ ಪ್ರವೇಶಿಸಬೇಕಿರುತ್ತದೆ. ಆದುದರಿಂದಲೇ ಶತ್ರುಗಳಿಗೆ ದ್ವಾರಗಳು ದುರ್ಭೇದ್ಯವಾಗಿ ಕಂಡುಬರುತ್ತಿದ್ದವು. ಸುಮಾರು ೫ ಕಿ.ಮೀ. ಪ್ರದೇಶದಲ್ಲಿ ವಿಸ್ತರಿಸಲ್ಪಟ್ಟಿರುವ ಈ ಕೋಟೆಗೆ ಒಟ್ಟು ೧೨ ಮುಖ್ಯ ದ್ವಾರಗಳಿವೆ. ಅವುಗಳಲ್ಲಿ ಮಧುಗಿರಿ, ಪೆನುಗೊಂಡೆ, ನಿಡಗಲ್ಲು, ದಳವಾಯಿ ದ್ವಾರಗಳು ವಿಶೇಷವಾಗಿವೆ. ಏಕೆಂದರೆ ಪ್ರತಿ ದ್ವಾರವು ಜಿಗ್‌ಜಾಗ್ ಮಾದರಿಯಲ್ಲಿ ಇದ್ದು ಶತ್ರುಗಳು ಸುಲಭವಾಗಿ ಪ್ರವೇಶಿಸದಂತೆ ಮಾಡಿದೆ. ಈ ಜಿಗ್‌ಜಾಗ್ ಮಾದರಿಯ ಗೋಡೆ ೧೦ ಮೀ. ಎತ್ತರ, ೨೦ ರಿಂದ ೬೦ಮೀ. ಉದ್ದ ಇರುವುದ್ದು ಶತ್ರುಗಳು ದ್ವಾರಬಾಗಿಲ ಬಳಿ ಬಂದಾಗ ಸಮರ್ಥ ಪ್ರತಿ ದಾಳಿ ಮಾಡಲು ಒಳಗಿನವರಿಗೆ ಅನುವು ಮಾಡಿಕೊಡುತ್ತಿದ್ದವು. ದಳವಾಯಿ ದ್ವಾರದಿಂದ ಬೆಟ್ಟದ ತುದಿವರೆಗಿನ ದ್ವಾರಗಳೂ ಇದೇ ಮಾದರಿಯಲ್ಲಿದ್ದರೂ ಪ್ರವೇಶ ದ್ವಾರ ಕಿರಿದಾಗಿವೆ. ಏಕೆಂದರೆ ಶತ್ರುಗಳು ದ್ವಾರದ ಬಳಿ ಬಂದಾಗ ಅವರಿಗೆ ಬೇರೆಡೆ ತಪ್ಪಿಸಿಕೊಳ್ಳಲು ಅವಕಾಶವಿಲ್ಲದಂತೆ ಮಾಡುವ ಉದ್ದೇಶದಿಂದ ಹೀಗೆ ನಿರ್ಮಿಸುತ್ತಿದ್ದರು. ಜೊತೆಗೆ ಅವರ ಮೇಲೆ ಗೋಡೆಯ ಮೇಲ್ಭಾಗದಿಂದ ಕಾದ ಎಣ್ಣೆ, ಅಂಬಲಿ ಕಲ್ಲು ಗುಂಡುಗಳನ್ನು ಸುರಿಯಲು, ಶಸ್ತ್ರಾಸ್ತ್ರ ಪ್ರಯೋಗಿಸಲು ಅನುವಾಗಲೆಂದು ಹೀಗೆ ನಿರ್ಮಿಸುತ್ತಿದ್ದರು. ದ್ವಾರದಲ್ಲಿ ಮರದ ಬಾಗಿಲನ್ನು ಹಾಕುತ್ತಿದ್ದರು ಎಂಬುದಕ್ಕೆ ಮೇಲ್ಭಾಗ ರಂಧ್ರಗಳಿದ್ದು, ಸದಾ ಕಾವಲುಪಡೆ ಇರಲು ಎರಡೂ ಬದಿ ಕಾವಲು ಮಂಟಪಗಳನ್ನು, ಕೋಟೆಯ ಒಳಗಿನವರಿಗೆ ದಿನನಿತ್ಯದ ವ್ಯವಹಾರದಲ್ಲಿ ತೊಡಗಲು ಅನುಕೂಲವಾಗಲೆಂದು ದಿಡ್ಡಿಬಾಗಿಲನ್ನು ನಿರ್ಮಿಸಿದ್ದಾರೆ. ಕೋಟೆಯಲ್ಲಿರುವ ಒಟ್ಟು ೭ ಮುಖ್ಯ ದ್ವಾರಗಳಿಗೆ ದಿಡ್ಡಿಬಾಗಿಲುಗಳು ಕಂಡುಬರುತ್ತವೆ.

ಸಾಮಾನ್ಯವಾಗಿ ಯಾವುದೇ ಒಂದು ಕೋಟೆಯ ಭವಿಷ್ಯ ಅದು ಎಷ್ಟು ಬಲಿಷ್ಠವಾಗಿ ನಿರ್ಮಿಸಲ್ಪಟ್ಟಿದೆ ಎನ್ನುವುದಕ್ಕಿಂತ ಅದರ ಒಳಗೆ ಅಡಗಿರುವ ನೀರು ಮತ್ತು ಆಹಾರ ಧಾನ್ಯಗಳ ಸಂಗ್ರಹಣೆಯ ಮೇಲೆ ಅಡಗಿರುತ್ತದೆ. ಆದುದರಿಂದ ಸುಮಾರು ೮೦ರಿಂದ ೧೨೦ ಅಡಿ ಆಳವಿರುವ ಕೊರಕಲಿಗೆ ಇಟ್ಟಿಗೆ ಮತ್ತು ಗಾರೆಯಿಂದ ತಡೆಗೋಡೆಯನ್ನು ನಿರ್ಮಿಸಿ ಅದಕ್ಕೆ ಬೆಟ್ಟದ ತುದಿಯಲ್ಲಿ ಬೀಳುವ ಮಳೆಯ ನೀರು ಕಾಲುವೆಗಳ ಮೂಲಕ ಹರಿಯುವಂತೆ ಮಾಡಿದ್ದಾರೆ. ಅನುಕೂಲ ಇರುವಲ್ಲಿ ದೋಣೆ, ಹೊಂಡ, ಬಾವಿಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿ ಸದಾ ಕಾಲ ನೀರಿನ ಬಳಕೆಗೆ ಅವು ಯೋಗ್ಯವಾಗಿರುವಂತೆ ನೋಡಿಕೊಂಡಿದ್ದಾರೆ. ಮಳೆಯ

ನೀರು ವ್ಯರ್ಥವಾಗದಿರಲೆಂದು ಕಾಲುವೆಗಳಿಗೆ ಹಾಸುಗಲ್ಲುಗಳನ್ನು ಹಾಕಿ ಗಾರೆಯಿಂದ ಅವುಗಳನ್ನು ನುಣುಪುಗೊಳಿಸಿದ್ದಾರೆ. ಭೀಮನ ದೋಣಿಗೆ ೧೦೦ ಅಡಿಗೂ ಎತ್ತರವಾದ ಹೆಬ್ಬಂಡೆಗಳು ಆಸರೆಯಾಗಿ ಇರುವುದರಿಂದ ಎಂತಹ ಬಿರು ಬೇಸಿಗೆಯಲ್ಲೂ ತಣ್ಣಗೆ ಕೊರೆಯುವಂತಹ ನೀರು ದೊರೆಯುತ್ತದೆ. ಇಂದಿಗೂ ಸುತ್ತಲಿನ ಹಳ್ಳಿಯವರು ಈ ಹೊಂಡದ ನೀರನ್ನು ವರ್ಷಕ್ಕೊಮ್ಮೆಯಾದರೂ ಕುಡಿದು ಹೋಗುವ ಸಂಪ್ರದಾಯವನ್ನು ರೂಢಿಸಿಕೊಂಡು ಬರುತ್ತಿದ್ದಾರೆ. ಈ ನೀರನ್ನು ಕುಡಿದರೆ ಚರ್ಮ ಸಂಬಂಧಿ ಕಾಯಿಲೆಗಳು ಬರುವುದಿಲ್ಲ ಎಂಬ ನಂಬಿಕೆ ಅವರಲ್ಲಿದೆ. ಹಿಂದೆ ನೆಲಗೋಟೆಯ ಹೊರಬದಿಯಲ್ಲಿ ಹಿಂದೆ ಎಲ್ಲಿ ನೋಡಿದರೂ ಬಾವಿಗಳಿದ್ದವಂತೆ; ಅವುಗಳಿಗೆ ನೀರಿನ ಸೆಲೆ ಸದಾ ಕಾಲ ಇರಲೆಂದು ಕೋಟೆಯ ಸಮೀಪವೇ ಎರಡು ಕೆರೆಗಳನ್ನು ನಿರ್ಮಾಣ ಮಾಡಿದ್ದಾರೆ. ಹಾಗಾಗಿ ಬಾವಿಗಳಲ್ಲಿ ಸದಾ ಕಾಲ ನೆಲಮಟ್ಟದವರೆಗೂ ನೀರುತುಂಬಿ ಹರಿಯುತ್ತಿತ್ತಂತೆ. ಹೀಗೆ ಹರಿಯುವ ನೀರನ್ನು ಕೃಷಿ ಚಟುವಟಿಕೆಗಳಿಗೆ ಬಳಸಿಕೊಳ್ಳುತ್ತಿದ್ದರೆಂದು ಇಂದು ಉಳಿದುಕೊಂಡಿರುವ ಬಾವಿ ಮತ್ತು ಕಾಲುವೆಗಳಿಂದ ವೇದ್ಯವಾಗುತ್ತದೆ. ಹೀಗೆ ಬೆಳೆದಂತಹ ಆಹಾರ ಧಾನ್ಯಗಳನ್ನು ಸಂಗ್ರಹಿಸಲು ಕಲ್ಲಿನಿಂದ ನಿರ್ಮಿಸಲ್ಪಟ್ಟ ಕಣಜಗಳು ಕೋಟೆಯಲ್ಲಿ ಹೇರಳವಾಗಿ ಕಂಡುಬರುತ್ತವೆ. ಫಿರಂಗಿಕಿಂಡಿ, ಬಂದೂಕು ಕಿಂಡಿಗಳು ಹೆಚ್ಚಾಗಿ ಇರುವಲ್ಲಿ ಅವುಗಳ ಸಮೀಪವೇ ಮದ್ದಿನ ಮನೆಗಳನ್ನು ನಿರ್ಮಿಸಲಾಗಿದೆ. ಸೈನಿಕರ ದಿನ ನಿತ್ಯದ ದೈಹಿಕ ಕಸರತ್ತಿಗಾಗಿ ಗರಡಿ ಮನೆಗಳನ್ನು ಸದಾ ಕತ್ತಲಿನಿಂದ ಕೂಡಿರುವಂತೆ, ಅದರ ಪ್ರವೇಶವನ್ನು ಸಣ್ಣದೊಂದು ಕಿಂಡಿ ಮೂಲಕ ಹಾದು ಹೋಗುವಂತೆ ಮಾಡಲಾಗಿದೆ. ಇಂತಹ ನಿಶ್ಯಬ್ಧ ಮತ್ತು ಕತ್ತಲು ಆವರಿಸಿರುವ ಕೋಣೆಗಳಲ್ಲಿ ಕತ್ತಿವರಸೆಯ ತರಬೇತಿಯನ್ನು ನೀಡುತ್ತಿದ್ದರು. ಅದೇ ರೀತಿ ಕುದುರೆಗಳಿಗೆ ನೀರು ಕುಡಿಸಲು ಬಳಸುತ್ತಿದ್ದ ಕುದುರೆ ದೋಣಿ, ಅಪರಾಧಿಗಳಿಗೆ ಶಿಕ್ಷೆಯನ್ನು ಅಮಲುಗೊಳಿಸುತ್ತಿದ್ದ ಕಳ್ಳರ ಜರುಗು, ಅಧಿಕಾರಿವರ್ಗ ಹಾಗೂ ಸಾಮಾನ್ಯ ಜನರ ವಸತಿ ಕಟ್ಟಡ, ರಾಜನ ದರ್ಬಾರು ಸಭಾಂಗಣ, ಮಸೀದಿ, ಸೂರ್ಯನಾರಾಯಣ, ವೇಣುಗೋಪಾಲ ದೇವಾಲಯ ಮೊದಲಾದ ಕಟ್ಟಡ ಅವಶೇಷಗಳು ತುದಿ ಭಾಗದಲ್ಲಿ ಕಂಡುಬರುತ್ತವೆ.

ತುದಿಭಾಗದ ಟಿಪ್ಪು ಮತ್ತು ಸುಬ್ಬರಾಯಪ್ಪನ ಬತೇರಿ, ಬಂಕರ್, ತುಪ್ಪದ ಕೊಳದ ರಚನೆಗಳು ವಾಸ್ತು ವೈಶಿಷ್ಟ್ಯತೆಯನ್ನು ತೋರ್ಪಡಿಸುತ್ತವೆ. ಈ ಬತೇರಿಗಳು ೧೦೦ರಿಂದ ೧೫೦ ಮೀ. ಎತ್ತರವಿರುವ ಏಕಶಿಲಾ ಗುಂಡುಗಳ ಮೇಲೆ ರಚನೆಯಾಗಿದ್ದು, ಮೇಲೆರಲು ಮೆಟ್ಟಿಲುಗಳನ್ನು ಹೊಂದಿವೆ. ಇವುಗಳನ್ನು ರಾಜ ಇಲ್ಲವೆ ಅಧಿಕಾರಿ ವರ್ಗ ಆಜ್ಞೆಗಳನ್ನು ಹೊರಡಿಸಲು ಮತ್ತು ಗುಪ್ತ ಸಮಾಲೋಚನೆ ನಡೆಸಲು ಬಳಸಿಕೊಳ್ಳುತ್ತಿದ್ದರು. ಈ ಬತೇರಿಗಳ ಮೇಲಿಂದ ವೀಕ್ಷಿಸಿದರೆ ಇಡೀ ತುದಿಯ ಭಾಗವೆಲ್ಲಾ ಕಾಣುತ್ತದೆ. ಸಾಮಾನ್ಯವಾಗಿ ಬತೇರಿಗಳಿಗೆ ಸಮತಟ್ಟಾದ ಪ್ರದೇಶ ಇರುವ ದಿಕ್ಕಿಗೆ ಕಮಾನಿನಾಕಾರದ ಕಿಂಡಿಗಳು ಇರುವುದರಿಂದ ಇವುಗಳ ಮೂಲಕ ಸೈನಿಕರಿಗೆ ತರಬೇತಿ ನೀಡಲು, ಸಾಮಾನ್ಯ ಜನರು ಮತ್ತು ಅಧಿಕಾರಿ ವರ್ಗಕ್ಕೆ ಆಜ್ಞೆಗಳನ್ನು ಹೊರಡಿಸಲು

ಎತ್ತರದ ವೇದಿಕೆಯನ್ನಾಗಿ ಬಳಸಿಕೊಳ್ಳುತ್ತಿದ್ದರು. ಕೆಲವೊಮ್ಮೆ ತುರ್ತು ಸಂದರ್ಭದಲ್ಲಿ ತುದಿಯ ಭಾಗದ ಕೋಟೆಯನ್ನು ರಕ್ಷಿಸಲು ಶತ್ರುಗಳು ಯಾವ ದಿಕ್ಕಿಗಿದ್ದರೆ ಅದೇ ದಿಕ್ಕಿಗೆ ಫಿರಂಗಿಗಳನ್ನು ತಿರುಗಿಸುತ್ತಾ ಪ್ರಯೋಗಿಸಲು ಒತೇರಿಗಳಿಂದ ಸಾಧ್ಯವಾಗುತ್ತಿತ್ತು. ರಾಜ ಸಭಾಂಗಣದ ಪಶ್ಚಿಮ ದಿಕ್ಕಿಗೆ ಇಟ್ಟಿಗೆ, ಗಾರೆ ಮತ್ತು ಹೆಂಚಿನಿಂದ ದಿಬ್ಬದ ಒಳಗೆ ಬಂಕರನ್ನು ನಿರ್ಮಿಸಲಾಗಿದೆ. ಅದಕ್ಕೆ ಗಾಳಿ ಬೆಳಕಿಗಾಗಿ ಕಿಂಡಿಗಳನ್ನು ಮೇಲ್ಭಾಗ ಬಿಡಲಾಗಿದೆ. ಈ ಕಟ್ಟಡ ಹೊರಗಿನಿಂದ ಬೇಗ ಕಾಣಿಸದಂತೆ ಇರುವುದರಿಂದ ಕೆಲವೊಮ್ಮೆ ಶತ್ರುಗಳನ್ನು ಮೋಸಗೊಳಿಸುವ ತಂತ್ರವೂ ಇದರಲ್ಲಿ ಅಡಗಿರುತ್ತಿತ್ತು. ಬಹುಶಃ ಇದನ್ನು ತುರ್ತು ಸಂದರ್ಭದಲ್ಲಿ ರಾಜ ಮತ್ತು ಆತನ ಸಂಬಂಧಿಕರು, ಅಧಿಕಾರಿ ವರ್ಗ ಅಡಗಿಕೊಳ್ಳಲು ಬಂಕರ್ ಆಗಿಯೂ, ಫಿರಂಗಿಗಳಿಗೆ ಬೇಕಾದ ಮದ್ದನ್ನು ಸಂಗ್ರಹಿಸಲೂ ಸೂಕ್ತ ಹವಾಮಾನ ಬೇಕಿರುವುದರಿಂದ ಬಿಸಿಲಿನ ತಾಪಕ್ಕೆ ಸ್ಫೋಟಗೊಳ್ಳದಂತೆ ಹಾಗೂ ಚಳಗಾಲದಲ್ಲಿ ಮದ್ದು ಸ್ಫೋಟಗೊಳ್ಳದಂತೆ ತಡೆಯಲು ದಿಬ್ಬದ ಒಳಗಿರುವ ಬಂಕರನ್ನು ಬಳಸಿಕೊಂಡಿರುವ ಸಾಧ್ಯತೆಗಳಿವೆ. ಫಿರಂಗಿಗಳಿಗೆ ಬೇಕಾದ ತುಪ್ಪ ಸಂಗ್ರಹಿಸಲು ಗಾರೆ ಮತ್ತು ಇಟ್ಟಿಗೆಯಿಂದ ನಯಗೊಳಿಸಿದ ಕಣಜಗಳು ವಿಶೇಷವೆನಿಸುತ್ತವೆ. ತುಪ್ಪವನ್ನು ಯುದ್ಧದಲ್ಲಿ ಗಾಯಗೊಂಡ ಸೈನಿಕರಿಗೆ, ಕುದುರೆ, ಆನೆಗಳಿಗೆ ಔಷಧೋಪಚಾರ ಮಾಡಲು ಸಹ ಬಳಸಲ್ಪಡುತ್ತಿತ್ತು.

ಪಾವಗಡ ಕೋಟೆ ತುಮಕೂರು ಜಿಲ್ಲೆಯಲ್ಲಿ ಇರುವಂತಹ ಎಲ್ಲಾ ಕೋಟೆಗಳಿಗಿಂತಲೂ ವೈಶಿಷ್ಟ್ಯಪೂರ್ಣವಾಗಿದೆ ಎಂಬುದಕ್ಕೆ ಕಾರಣ ಹೈದರಾಲಿ ಮತ್ತು ಟಿಪ್ಪು ಸುಮಾರು ೧೮ನೆಯ ಶತಮಾನದಿಂದಲೂ ಚಾರಿತ್ರಿಕವಾಗಿ ಮಹತ್ವದ ಸ್ಥಾನ ಪಡೆದಿದ್ದ ನಿಡುಗಲ್ಲು ದುರ್ಗವನ್ನು ಉಪೇಕ್ಷಿಸಿ ಪಾವಗಡ ಕೋಟೆ ಬಗೆಗೆ ಅತೀವ ಆಸಕ್ತಿ ಬೆಳೆಸಿಕೊಂಡಿರುವುದು. ಬಹುಶಃ ಬದಲಾದ ಯುದ್ಧ ನೀತಿಗೆ ಅನುಗುಣವಾಗಿ ನಿಡುಗಲ್ಲು ಬೆಟ್ಟಕ್ಕಿಂತಲೂ ಪಾವಗಡ ಬೆಟ್ಟದ ರಚನೆ ಸೂಕ್ತವಾಗಿತ್ತು ಎಂಬುದನ್ನು ಅವರು ಅರಿತುಕೊಂಡಿರಬಹುದು.

೧೩. ಕೊಡಗದಾಲ ಕೋಟೆ

ಮಹಾನಾಡ ಪ್ರಭುಗಳು ವಿಜಯನಗರದ ಅರಸರಿಂದ ಉಂಬಳಿಯಾಗಿ ಪಡೆದಂತಹ ಹಳ್ಳಿಗಳಲ್ಲಿ ಕೊಡಗದಾಲ ಗ್ರಾಮವು ಒಂದಾಗಿದೆ. ವಿಜಯನಗರದ ಅರಸರಿಂದ ಕೊಡುಗೆಯಾಗಿ ಬಂದಂತಹ ಪ್ರದೇಶವೇ ಕ್ರಮೇಣ ಕೊಡಗದಾಲ ಎಂಬುದಾಗಿ ಪ್ರಸಿದ್ಧಿಗೆ ಬಂದಿರಬಹುದು. ಹಿರೇಚಿಕ್ಕಪ್ಪಗೌಡ ಮುಮ್ಮಡಿ ಪಟ್ಟಣ ನಾಶಗೊಂಡ ನಂತರ ಕೃಷ್ಣದೇವರಾಯನಿಂದ ಅನುಮತಿ ಪಡೆದು ೧೫೨೪ರಲ್ಲಿರಲ್ಲಿ ಬಿಜವರದಲ್ಲಿ ಕೋಟೆಯನ್ನು ಕಟ್ಟಿಸಿ ರಾಜಧಾನಿಗೆ ಗಡಿಭಾಗದಲ್ಲಿದ್ದ ಕೊಡಗದಾಲ ಗುಡ್ಡದಲ್ಲಿ ಕ್ರಿ.ಶ. ೧೫೩೪ರಂದು ಕೋಟೆಗೆ ಅಡಿಪಾಯ ಹಾಕಿ ಅದನ್ನು ಗಡಿದುರ್ಗವನ್ನಾಗಿ ಮಾಡಿಕೊಂಡನು. ಆದರೆ ಇಂದು ರಾಜಧಾನಿಯಾಗಿದ್ದ ಬಿಜವರದಲ್ಲಿ ಕೋಟೆಯ ಅವಶೇಷ ಕಂಡುಬರದಿದ್ದರೂ ಕೊಡಗದಾಲದಲ್ಲಿ ಮಾತ್ರ ಇನ್ನೂ ಉಳಿದುಕೊಂಡಿದೆ. ಕೋಟೆಯ ಒಳಗಿರುವ ಕೇವಲ ೯ ಕಟ್ಟಡಗಳ ಅವಶೇಷಗಳು ಯಾವುದು ಯಾವ ಕಟ್ಟಡದ್ದು ಎಂಬುದನ್ನು ಖಚಿತವಾಗಿ ಗುರುತಿಸಲಾಗದಂತೆ ತಳಪಾಯ ಮಾತ್ರ ಉಳಿದಿದೆ.

ಕೊಡಗದಾಲ ಕೋಟೆ ಗೋಡೆ ಕಾಡುಗಲ್ಲುಗಳಿಂದ ರೂಪುಗೊಂಡಿದ್ದು, ಅದರ ರಕ್ಷಣೆಗಾಗಿ ಒಳಬದಿಯಲ್ಲಿ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದು ಇಳಿವೊರೆಯನ್ನು ನಿರ್ಮಿಸಲಾಗಿದೆ. ಅದನ್ನೇ ಸೈನಿಕರು ಓಡಾಟಕ್ಕಾಗಿ ವೇದಿಕೆಯನ್ನಾಗಿಯೂ ಬಳಸಿಕೊಂಡಿರಬಹುದು. ಗೋಡೆಯ ಅಗಲವನ್ನು ವಿಸ್ತರಿಸಲು ಹಾಗೂ ಶತ್ರುಗಳನ್ನು ಎಲ್ಲಾ ದಿಕ್ಕಿನಿಂದಲೂ ಎದುರಿಸಲು ಅನುವಾಗುವಂತೆ ಕೋಟೆಯ ಸುತ್ತಲೂ ಆಯತ, ಚೌಕ, ವೃತ್ತ ಮಾದರಿಯಲ್ಲಿ ೧೩ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಕೋಟೆಯ ಮುಖ್ಯದ್ವಾರದ ರಕ್ಷಣೆಗಾಗಿ ಅದರ ಹೊರಬದಿ ಗಜಪುಷ್ಠಾಕಾರದ ಗೋಡೆ ಇದೆ. ಈ ಗೋಡೆಯಲ್ಲಿರುವ ಕಿರಿದಾದ ದ್ವಾರದ ಮೂಲಕ ೨.೧೨.ಮೀ ಅಗಲ, ೨.೬೦.ಮೀ ಎತ್ತ, ೧.೭೬.ಮೀ ದಪ್ಪವಿರುವ ಮುಖ್ಯದ್ವಾರವನ್ನು ಪ್ರವೇಶಿಸಬೇಕು. ಕಿರಿದಾದ ದ್ವಾರದ ಬಳಿ ಎರಡೂ ಬದಿಯಲ್ಲಿ ಕಾವಲು ಮಂಟಪಗಳಿವೆ. ಮುಖ್ಯದ್ವಾರದ ಕಂಬಗಳ ಮೇಲ್ಭಾಗ ರಂಧ್ರ ಇರುವುದರಿಂದ ಮರದ ಬಾಗಿಲು ಇತ್ತೆಂಬ ಅಂಶ ಸ್ಪಷ್ಟವಾಗುತ್ತದೆ. ಈ ಕೋಟೆಗೆ ಬಳಸಿದ ಕಾಡುಗಲ್ಲುಗಳ ಶೈಲಿಯನ್ನು ಗಮನಿಸಿದರೆ ಮಹಾನಾಡಪ್ರಭುಗಳ ಆರಂಭ ಕಾಲಘಟ್ಟದಲ್ಲಿ ನಿರ್ಮಾಣಗೊಂಡಿರಬೇಕೆಂಬ ಅಂಶ ಸ್ಪಷ್ಟಗೊಳ್ಳುತ್ತದೆ. ಬಹುಶಃ ಮುಮ್ಮಡಿ ಪಟ್ಟಣ ಬಹುಮನಿ ಸುಲ್ತಾನರಿಂದ ಹಾಳಾದ ಸಂದರ್ಭದಲ್ಲೇ ಈ ಕೋಟೆಯು ಸಹ ಹಾಳುಗೆಡವಲ್ಪಟ್ಟಿರಬಹುದು. ಏಕೆಂದರೆ ಕ್ರಿ.ಶ. ೧೫೩೪ರಲ್ಲಿ ಹಿರೇಚಿಕ್ಕಪ್ಪಗೌಡ[೨೦] ಇದರ ಜೀರ್ಣೋದ್ಧಾರ ಕಾರ್ಯ ಮಾಡಿರುವುದಕ್ಕೆ ಸ್ಪಷ್ಟ ಉಲ್ಲೇಖ ಸಿಗುತ್ತದೆ. ಆದುದರಿಂದ ಜೀರ್ಣೋದ್ಧಾರ ಮಾಡಲು ಮುಂದಾದನೆಂದರೆ ಅದು ಹಾಳುಗೆಡವಲ್ಪಟ್ಟಿರಲೇಬೇಕು. ಈ ಕಾರಣದಿಂದಲೇ ಕೋಟೆಯು ಎರಡು ಹಂತಗಳಲ್ಲಿ ನಿರ್ಮಾಣಗೊಂಡಿದೆ. ಗೋಡೆಗೆ ಬಳಸಲಾದ ಕಾಡುಗಲ್ಲುಗಳು ಹೇಗೆಂದರೆ ಹಾಗೆಯೇ ಜೋಡಿಸಲ್ಪಟ್ಟಿವೆ. ಅಲ್ಲದೆ ಗೋಡೆ ಸಡಿಲಗೊಳ್ಳದಿರಲೆಂದು ಕಲ್ಲುಗಳ ಮಧ್ಯೆ ಚಕ್ಕೆಗಳನ್ನು ಜೋಡಿಸಿದ್ದಾರೆ. ಸಾಮಾನ್ಯವಾಗಿ ವಾಸ್ತುಬದ್ಧವಾಗಿ ನಿರ್ಮಾಣಗೊಂಡ ಯಾವ ಕೋಟೆಯಲ್ಲೂ ಇಂತಹ ಲಕ್ಷಣಗಳು ಕಂಡುಬರುವುದಿಲ್ಲ. ಕೋಟೆಯ ಒಳಭಾಗ ಏರುತಗ್ಗುಗಳಿಂದ ಕೂಡಿದ್ದು, ಮಳೆಯ ನೀರನ್ನು ಆ ತಗ್ಗು ಪ್ರದೇಶಗಳಲ್ಲಿ ಸಂಗ್ರಹಿಸಲು ಮಣ್ಣು ಮತ್ತು ಕಲ್ಲಿನ ತಡೆಗೋಡೆಯನ್ನು ನಿರ್ಮಿಸಿಕೊಳ್ಳುವಂತೆ ಮಾಡಿದೆ. ಕೋಟೆ ರಚನೆಯ ನಿವೇಶನದ ಆಯ್ಕೆಯನ್ನು ಗಮನಿಸಿದರೆ ಜನಸಾಮಾನ್ಯರ ವಸತಿಗಳು ಗುಡ್ಡದ ಕೆಳಗೆ ಇದ್ದಂತೆ ಕಾಣುತ್ತದೆ. ಏಕೆಂದರೆ ಕೋಟೆಯ ಒಳಭಾಗ ಯಾವುದೇ ವಸತಿ ಅವಶೇಷ ಕಂಡುಬರುವುದಿಲ್ಲ. ಆದುದರಿಂದ ಗುಡ್ಡದ ಕೆಳಭಾಗದಲ್ಲಿಯೇ ವಸತಿ ನಿವೇಶನ ಇದ್ದಿರಬಹುದು. ಆದರೆ ಇಂದು ಗ್ರಾಮ ವಿಸ್ತರಿಸಲ್ಪಟ್ಟಿರುವುದರಿಂದ ಮಹಾನಾಡಪ್ರಭುಗಳ ಕಾಲದ ಯಾವುದೇ ಅವಶೇಷ ಕಂಡುಬರುವುದಿಲ್ಲ. ಬಹುಶಃ ತುರ್ತು ಸಂದರ್ಭದಲ್ಲಿ ಮಾತ್ರ ರಕ್ಷಣೆಗಾಗಿ ಕೋಟೆಯ ಒಳಬದಿಯಲ್ಲಿ ಆಶ್ರಯ ಪಡೆದುಕೊಳ್ಳುತ್ತಿದ್ದರು.

೧೪. ಚಿಕ್ಕನಾಯಕನಹಳ್ಳಿ

ಎರಕಟ್ಟೆಯಲ್ಲಿ ಆಳ್ವಿಕೆ ಮಾಡುತ್ತಿದ್ದ ಸಾಲಿನಾಯಕನು ರಾಜ್ಯ ವಿಸ್ತರಣೆಗೆ ನೆರವು ನೀಡಿದ

ತನ್ನ ಸಹೋದರ ಚಿಕ್ಕನಾಯಕನ ಹೆಸರಿನಲ್ಲಿ ಇಂದಿನ ಚಿಕ್ಕನಾಯಕನಹಳ್ಳಿ ತಾಲೂಕು ಕೇಂದ್ರ ಇರುವಲ್ಲಿ ಹೊಸದಾದ ಗ್ರಾಮವೊಂದನ್ನು ನಿರ್ಮಿಸಿ 'ಚಿಕ್ಕನಾಯಕನಹಳ್ಳಿ' ಎಂದು ನಾಮಕರಣ ಮಾಡಿದನು. ಈತನ ನಂತರ ಅಧಿಕಾರಕ್ಕೆ ಬಂದ ಭೈರನಾಯಕ ಕ್ರಿ.ಶ. ೧೫೬೧ರಲ್ಲಿ ಚಿಕ್ಕನಾಯಕನಹಳ್ಳಿ ಪಟ್ಟಣದ ಸುತ್ತಲೂ ಕೋಟೆ ಕಟ್ಟಿಸಿ[೭೧], ಶುಕ್ರವಾರದ ಬಾಗಿಲು ಹಾಗೂ ಇಂದಿನ ಖಾಸಗಿ ಬಸ್ ನಿಲ್ದಾಣದ ಬಳಿ ಇತ್ತೆಂದು ಹೇಳಲಾಗುವ ಮೂಲೆ ಬಾಗಿಲನ್ನು ನಿರ್ಮಿಸಿದನು. ಆದರೆ ರಣದುಲ್ಲಾಖಾನನ ಕಾಲದಲ್ಲಿ ಕೋಟೆ ಹಾಳುಗೆಡವಲ್ಪಟ್ಟಿದ್ದರಿಂದ ಹಾಗಲವಾಡಿಗೆ ರಾಜಧಾನಿ ವರ್ಗಾವಣೆಗೊಂಡಿತು. ಆದರೂ ಹಾಗಲವಾಡಿ ನಾಯಕರು ಚಿಕ್ಕನಾಯಕನಹಳ್ಳಿ ಕೋಟೆಯನ್ನು ಬಲಪಡಿಸಿದರಾದರೂ ಕ್ರಿ.ಶ. ೧೭೭೬ರ ವೇಳೆಗೆ ಪರಶುರಾಮ್‌ಬಾಹು[೭೨] ಎಂಬ ಮರಾಠ ಅಧಿಕಾರಿಯಿಂದ ಸಂಪೂರ್ಣ ನಾಶ ಹೊಂದಿತು. ಹೀಗೆ ಹಂತ ಹಂತವಾಗಿ ವಿವಿಧ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡ ಚಿಕ್ಕನಾಯಕನಹಳ್ಳಿ ಕೋಟೆಯಲ್ಲಿ ಇಂದು ಕೇವಲ ಶುಕ್ರವಾರದ ಬಾಗಿಲಿನ ಅವಶೇಷ ಮಾತ್ರ ಕಂಡುಬರುತ್ತದೆ. ಈ ದ್ವಾರದ ಎರಡೂ ಬದಿ ಕಾವಲು ಮಂಟಪ, ದ್ವಾರದ ಕಂಬಗಳ ಮೇಲ್ಭಾಗ ರಂಧ್ರ ಇರುವುದರಿಂದ ಮರದ ಬಾಗಿಲನ್ನು ಹಾಕಲಾಗುತ್ತಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ದ್ವಾರದ ನಿರ್ಮಾಣಕ್ಕೆ ಆಯತ, ಚೌಕ ಮಾದರಿಯ ಗ್ರಾನೈಟ್ ಶಿಲೆ ಹಾಗೂ ಕಾಡುಗಲ್ಲುಗಳನ್ನು ಬಳಸಲಾಗಿದೆ. ಹಿಂದೆ ಈ ಬಾಗಿಲಿನ ಮೂಲಕವೇ ಪ್ರತಿ ಶುಕ್ರವಾರ ಹಾಗಲವಾಡಿ ನಾಯಕರು ಸಂತೆಗೆ ಬರುತ್ತಿದ್ದ ಕಾರಣ ಇದು ಶುಕ್ರವಾರದ ಬಾಗಿಲು ಎಂದೇ ಪ್ರಸಿದ್ಧಿಯಾಗಿದೆ. ಶುಕ್ರವಾರವನ್ನು ಹೊರತುಪಡಿಸಿ ಉಳಿದ ದಿನಗಳಲ್ಲಿ ಈ ಬಾಗಿಲನ್ನು ಮುಚ್ಚಿರುತ್ತಿದ್ದರೆಂದು ಇಂದಿಗೂ ಸ್ಥಳೀಯರು ಹೇಳುತ್ತಾರೆ.

೧೫. ಕಂದಿಕೆರೆ

ಕಂದಿಕೆರೆ ಎಂಬ ಸ್ಥಳನಾಮವು ಕಂದಕ ಮತ್ತು ಕೆರೆ ಎಂಬ ಎರಡು ಪದಗಳ ಸೇರ್ಪಡೆಯಿಂದ ಆಗಿದೆ. ಅಂದರೆ ಗ್ರಾಮದ ರಕ್ಷಣೆಗಾಗಿ ಸುತ್ತಲೂ ಆಳವಾದ ಕಂದಕವನ್ನು ನಿರ್ಮಿಸಿ, ಅದರ ಪೂರ್ವದ ಅಂಚಿಗಿರುವ ಕೆರೆಯಿಂದ ನೀರನ್ನು ಹರಿಬಿಡಲಾಗುತ್ತಿದ್ದರಿಂದ ಈ ಸ್ಥಳವು ಕಂದಿಕೆರೆ ಎಂದು ಜನಪದರಲ್ಲಿ ರೂಢಿಗತವಾಗಿ ಬಳಕೆಯಲ್ಲಿದೆ. ಹಾಗಲವಾಡಿ ನಾಯಕರಾದ ಭೈರೇನಾಯಕನು ಸಂಸ್ಥಾನವನ್ನು ವಿಸ್ತರಿಸುವ ಉದ್ದೇಶದಿಂದ ಕ್ರಿ.ಶ. ೧೫೬೧ರಲ್ಲಿ ಶೆಟ್ಟಿಕೆರೆ ಮೇಲೆ ದಾಳಿ ಮಾಡಿದನು. ಅಲ್ಲಿಂದ ಹಿಂದಿರುಗುವಾಗ ಅದೇ ಮಾರ್ಗದಲ್ಲಿ ಬರುವ ಕಂದಿಕೆರೆಯನ್ನು ಸಹ ವಶಪಡಿಸಿಕೊಂಡು ಅಲ್ಲಿ ಕೋಟೆಯನ್ನು ಕಟ್ಟಿಸಿದನು. ಕಂದಕವೇ ಇದರ ಪ್ರಧಾನ ಲಕ್ಷಣ ಆಗಿರುವಂತಹದ್ದು ಜಿಲ್ಲೆಯ ಇತರ ಕೋಟೆಗಳಿಗಿಂತ ವೈಶಿಷ್ಟ್ಯವಾದ ರಕ್ಷಣಾ ತಂತ್ರವಾಗಿ ಕಾರ್ಯನಿರ್ವಹಿಸುತ್ತಿತ್ತು. ಕಂದಕದ ಒಳ ಬದಿ ಕಾಡುಗಲ್ಲು ಮತ್ತು ಕತ್ತರಿಸಲ್ಪಟ್ಟ ಗ್ರಾನೈಟ್ ಶಿಲೆಯಿಂದ ಸುಮಾರು ೫ ಮೀ. ಎತ್ತರದ ಕೋಟೆ ಗೋಡೆ, ವೃತ್ತ ಮಾದರಿಯ ಕೊತ್ತಲ

ಅವಶೇಷ ಮಾತ್ರ ಇಂದು ಉಳಿದುಕೊಂಡಿದೆ. ಗೋಡೆಯ ರಕ್ಷಣೆಗಾಗಿ ನಿರ್ಮಾಣಗೊಂಡ ಇಳಿವೊರೆಯ ಸ್ವಲ್ಪಭಾಗದ ಅವಶೇಷ ಮಾತ್ರ ಅಲ್ಲಲ್ಲಿ ಉಳಿದಿದೆ. ಇದರ ಮೇಲೆ ಬಿಜಾಪುರದ ಸುಲ್ತಾನರು, ಮರಾಠರು ಮತ್ತು ಮೈಸೂರು ಒಡೆಯರು ದಾಳಿ ಮಾಡುತ್ತಿದ್ದರಿಂದ ಇಲ್ಲಿ ನೆಲೆನಿಂತ ಬಹುತೇಕರು ಬೇರೆಡೆ ಸ್ಥಳಾಂತರಗೊಂಡಿರಬಹುದು. ಆದುದರಿಂದಲೇ ಕೋಟೆಯ ಒಳಬದಿ ಪುನಃ ೨೦ ವಸತಿ ನಿವೇಶನಗಳ ಸುತ್ತಲೂ ವಾಡೆ ನಿರ್ಮಾಣಗೊಂಡಿದೆ. ಈ ವಾಡೆಯನ್ನು ಸೌಟು ಮಾದರಿಯ ಕಾಡುಗಲ್ಲುಗಳಿಂದ ನಿರ್ಮಿಸಲಾಗಿದೆ. ಈ ಗೋಡೆಯ ತಳಪಾಯ ಒಂದು ಮೀಟರ್ ಅಗಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತಾ ಹೋಗಿದೆ. ಗೋಡೆಯ ಅಗಲವನ್ನು ವಿಸ್ತರಿಸುವ ಉದ್ದೇಶದಿಂದ ಗೋಡೆಯ ಮಧ್ಯೆ ಮಣ್ಣನ್ನು ಸುರಿಯಲಾಗಿದೆ.

೧೬. ಹಂದನಕೆರೆ

ಹಂದನಕೆರೆಯಲ್ಲಿ ನೀರು ತುಂಬಿದಾಗ ಈ ಪರಿಸರದ ಪ್ರಕೃತಿ ನೋಡುಗರ ಕಣ್ಮನವನ್ನು ಈಗಲೂ ಸೆಳೆಯುವಂತಹ ಸೌಂದರ್ಯ ಇದೆಯೆಂದು ಜನಪದರಲ್ಲಿ ಪ್ರತೀತಿ ಇದೆ. ಆದುದರಿಂದಲೇ ಜನರ ಆಡುಮಾತಿನಲ್ಲಿ ಅಂದದಿಂದ ಕೂಡಿದ ಗ್ರಾಮವೇ ಅಂದನಕೆರೆ>ಹಂದನಕೆರೆ ಎಂಬುದಾಗಿ ಪ್ರಸಿದ್ಧಿಗೆ ಬಂದಿದೆ. ಆದರೆ ಈ ಗ್ರಾಮವನ್ನು ಕ್ರಿ.ಶ. ೧೨೨೪ರ ಎರಡನೆಯ ನರಸಿಂಹನ ಕಾಲದ ಹಂದನಕೆರೆ ಶಾಸನವು ಇದನ್ನು 'ಹಂದಲಕೆರೆ'[೭೩] ಎಂದು ಪ್ರಸ್ತಾಪಿಸಿದ್ದು, ಈ ಗ್ರಾಮದ ಅಧಿಕಾರಿ ಸೇನಭೋವ ಮಲ್ಲಯ್ಯನನ್ನು ಉಲ್ಲೇಖಿಸಿದೆ. ಈ ಶಾಸನದ ಉಲ್ಲೇಖದಿಂದ ಹೊಯ್ಸಳರ ಕಾಲಕ್ಕೆ ಇದೊಂದು ಪ್ರಮುಖ ಪಟ್ಟಣವಾಗಿ ಸಾಮಂತ ಅಧಿಕಾರಿಗಳ ಆಳ್ವಿಕೆಗೆ ಒಳಪಟ್ಟಿತ್ತೆಂದು ಸ್ಪಷ್ಟವಾಗುತ್ತದೆ. ಆದರೆ ಅವರ ಕಾಲಕ್ಕೆ ಸರಿಹೊಂದುವ ದೇವಾಲಯಗಳ ಸಮೂಹ ಇದೆಯಾದರೂ ಕೋಟೆಯ ಅವಶೇಷಗಳು ಮಾತ್ರ ಕಂಡು ಬರುವುದಿಲ್ಲ. ಆದರೂ ಸಾಮಂತ ಅಧಿಕಾರಿಗಳ ಉಲ್ಲೇಖ ಸಿಗುವುದರಿಂದ ಕೋಟೆಯು ಸಹ ಹೊಯ್ಸಳರ ಕಾಲಘಟ್ಟದಲ್ಲೇ ನಿರ್ಮಾಣಗೊಂಡಿರಬಹುದೆಂಬ ವಾದವನ್ನು ಅಲ್ಲಗೆಳೆಯಲಾಗದು. ಹೊಯ್ಸಳರ ಕಾಲದ ಇಟ್ಟಿಗೆಯ ಹರಿಹರೇಶ್ವರ ದೇವಾಲಯದ ಸುತ್ತಲೂ ಹಾಗಲವಾಡಿ ನಾಯಕರ ಕಾಲಕ್ಕೆ ಸೇರಿದ ೨ ಮೀ. ಎತ್ತರ, ೦.೫೦ ಮೀ. ಅಗಲದ ಪ್ರಾಕಾರ ಗೋಡೆ ಇದೆ. ಈ ಗೋಡೆಗೆ ನೇರವಾದ ದ್ವಾರವಿದ್ದು, ಅದರ ಎರಡೂ ಬದಿ ಎರಡೆರಡು ಕಂಬಗಳಿವೆ. ಈ ದೇವಾಲಯದ ಪಶ್ಚಿಮ ದಿಕ್ಕಿಗೆ ಇರುವ ದ್ವಾರದಲ್ಲಿ ೨.೫೫ ಮೀ. ದಪ್ಪ, ೩.೫೭ ಮೀ. ಅಗಲ, ೨.೯೦ ಮೀ. ಎತ್ತರದ ಕಂಬಗಳಿವೆ. ಈ ದ್ವಾರದ ರಕ್ಷಣೆಗಾಗಿ ಆಂಜನೇಯ ಮೂರ್ತಿಯನ್ನು ಹಾಗೂ ದಕ್ಷಿಣ ದ್ವಾರದ ರಕ್ಷಣೆಗಾಗಿ ಗಣಪತಿ ದೇವಾಲಯವನ್ನು ನಿರ್ಮಿಸಲಾಗಿದೆ.

ಹಾಗಲವಾಡಿ ನಾಯಕರ ಕಾಲದಲ್ಲಿ ಶೈಲೇಂದ್ರ ಎಂಬ ಮಹಾರಾಜ ಗ್ರಾಮದ ಸುತ್ತಲೂ ಕೋಟೆ, ಅರಮನೆ, ದೇವಾಲಯ ಕಟ್ಟಿಸಿ ಆಳ್ವಿಕೆ ಮಾಡುತ್ತಿದ್ದನೆಂದು ಐತಿಹ್ಯವೊಂದು ತಿಳಿಸುತ್ತದೆ. ಈ ಕೋಟೆಯ ಪಶ್ಚಿಮ ದಿಕ್ಕಿಗೆ ಹನ್ನೆರಡು ಸೋಪಾನ ಬಾವಿಯಿದ್ದು, ಅದನ್ನು ನಾಲ್ಕು

ದಿಕ್ಕಿನಿಂದಲೂ ಪ್ರವೇಶಿಸಲು ಒಂದೊಂದು ದಿಕ್ಕಿಗೂ ಮೂರು ಕಡೆಯಿಂದ ಪ್ರವೇಶ ದ್ವಾರಗಳು ಮೂರು ಕಡೆ ಕವಲೊಡೆದಿವೆ. ಪ್ರತಿ ಪ್ರವೇಶದಲ್ಲೂ ಬಾವಿಯ ತಳಭಾಗವನ್ನು ತಲುಪಲು ಮೆಟ್ಟಿಲುಗಳಿವೆ. ಹೀಗೆ ಕವಲೊಡೆದ ಮೂರು ಪ್ರವೇಶಗಳು ಒಂದೆಡೆ ಸೇರುವ ಸ್ಥಳದಲ್ಲಿ ನಾಲ್ಕು ಕಂಬಗಳ ಮೇಲೆ ನಿರ್ಮಾಣಗೊಂಡ ತೆರೆದ ಮಂಟಪವಿದೆ. ಇದೇ ವ್ಯವಸ್ಥೆ ಉಳಿದ ಮೂರು ದಿಕ್ಕಿನ ದ್ವಾರಗಳಲ್ಲೂ ಕಂಡುಬರುತ್ತದೆ. ಇದರ ನಿರ್ಮಾಣ ಶೈಲಿ ವಿಜಯನಗರ ಕಾಲಘಟ್ಟಕ್ಕೆ ಸೇರಿದ ಪುಷ್ಕರಣಿಗಳಂತೆ ಇರುವುದರಿಂದ ಇವರ ಸಮಕಾಲೀನರಾಗಿ ಈ ಪ್ರದೇಶದಲ್ಲಿ ಆಳ್ವಿಕೆ ನಡೆಸಿದ ಹಾಗಲವಾಡಿ ನಾಯಕರಿಂದಲೇ ಇಲ್ಲಿ ಕೋಟೆ ಮತ್ತು ಬಾವಿ ನಿರ್ಮಾಣಗೊಂಡಿದೆ. ಹಾಗಲವಾಡಿ ನಾಯಕರಾದ ಭೈರನಾಯಕನಿಂದ ಕ್ರಿ.ಶ. ೧೫೬೧ರಲ್ಲಿ ಹಂದನಕೆರೆ[೭೪] ಕೋಟೆಯನ್ನು ನಿರ್ಮಿಸಿ, ಶೈಲೇಂದ್ರ ಮಹಾರಾಜರಿಗೆ ಇದರ ಉಸ್ತುವಾರಿಕೆ ವಹಿಸಿದ್ದರಿಂದ ಹೊಯ್ಸಳರ ಕಾಲದ ಇಟ್ಟಿಗೆಯ ಹರಿಹರೇಶ್ವರ ದೇವಾಲಯದ ಸುತ್ತಲೂ ಹಾಗಲವಾಡಿ ನಾಯಕರ ಕಾಲದ ಪ್ರಾಕಾರ ಗೋಡೆ ಕಂಡುಬರುತ್ತದೆ. ಹಾಗಲವಾಡಿ ನಾಯಕರ ಕೊನೆಯ ಕಾಲಘಟ್ಟಕ್ಕಾಗಲೇ ಬಿಜಾಪುರ ಸುಲ್ತಾನ, ಮರಾಠ, ಮೈಸೂರು ಒಡೆಯರಿಂದ ನಿರಂತರವಾಗಿ ದಾಳಿಗೆ ಒಳಪಡುತ್ತಿದ್ದರಿಂದ ಈ ಕೋಟೆ ತನ್ನ ಮಹತ್ವವನ್ನು ಕಳೆದುಕೊಂಡಿತು.

೧೭. ಸಿದ್ಧಾಪುರ

ಇಮ್ಮಡಿ ಚಿಕ್ಕಪ್ಪಗೌಡ ತನ್ನ ಗುರುಗಳಾದ ತೋಂಟದ ಸಿದ್ಧಲಿಂಗ ಯತಿಗಳ ನೆನಪಿಗಾಗಿ ಮಧುಗಿರಿಯಿಂದ ಎರಡು ಕಿ.ಮೀ. ದೂರದಲ್ಲಿ ಹೊಸದಾಗಿ ಗ್ರಾಮವೊಂದನ್ನು ನಿರ್ಮಿಸಿ ಅದಕ್ಕೆ ಸಿದ್ಧಾಪುರ ಎಂದು ನಾಮಕರಣ ಮಾಡಿದನು. ಈ ಗ್ರಾಮದ ಸುತ್ತಲೂ ಆಯತಾಕಾರದ ಕೋಟೆ-ಕೊತ್ತಲ, ಕಂದಕ, ಅರಮನೆ, ಬಾವಿ, ಗರಡಿಮನೆ ಇತ್ಯಾದಗಳನ್ನು ನಿರ್ಮಿಸಲಾಯಿತೆಂದು ಅಲ್ಲಿಯೇ ಇರುವಂತಹ ಇಮ್ಮಡಿ ಚಿಕ್ಕಭೂಪಾಲನ ಕ್ರಿ.ಶ. ೧೫೯೩ರ[೭೫] ಶಾಸನದಿಂದ ಸ್ಪಷ್ಟವಾಗುತ್ತದೆ. ಈ ಕೋಟೆಯನ್ನು ವಿಶೇಷವಾಗಿ ಸೈನಿಕರ ತರಬೇತಿಗಾಗಿಯೇ ನಿರ್ಮಿಸಲಾಗಿತ್ತೆಂಬ ಅಂಶ ವೀರಭದ್ರ ದೇವಾಲಯದಲ್ಲಿರುವ ಮಹಾನಾಡ ಪ್ರಭುಗಳ ಕಾಲದ ಗರಡಿಮನೆ ಉಪಕರಣಗಳಿಂದ ಗೋಚರವಾಗುತ್ತದೆ. ಬಿಜಾಪುರ ಸುಲ್ತಾನ ಮತ್ತು ಮರಾಠರ ದಾಳಿಗಳಿಂದ ಈ ಪರಿಸರದಲ್ಲಿ ಕೋಟೆಗಳು ಹಾಳಾದಂತೆ ಈ ಕೋಟೆಯು ಸಹ ಹಾಳುಗೆಡವಲ್ಪಟ್ಟು ತನ್ನ ಮಹತ್ವವನ್ನು ಕಳೆದುಕೊಂಡಿತು.

ಸಿದ್ಧಾಪುರ ಕೋಟೆಯ ಲಕ್ಷಣಗಳನ್ನು ಗಮನಿಸಿದರೆ ಚೌಕ ಮತ್ತು ಆಯತಾಕಾರದಲ್ಲಿ ಕತ್ತರಿಸಲ್ಪಟ್ಟ ಉದ್ದನೆಯ ಗ್ರಾನೈಟ್ ಶಿಲೆಯ ಬಳಕೆ ಕ್ರಿ.ಶ. ೧೩ನೆಯ ಶತಮಾನದಲ್ಲಿ ನಿರ್ಮಾಣಗೊಂಡ ಕುಮ್ಮಟದುರ್ಗ, ರಾಯಚೂರು ಕೋಟೆಗಳಿಗೆ ಬಳಸಲಾದ ಶಿಲಾ ಮಾಧ್ಯಮವನ್ನು ಹೋಲುತ್ತದೆ. ಬಹುಶಃ ವೀರಬಲ್ಲಾಳನ ಬಿಜವರದ ಶಾಸನವು ಸಾಸಿರ ಅಗ್ರಹಾರದ ನಿರ್ಮಾಣವನ್ನು ತಿಳಿಸುವುದರಿಂದ ಈತನ ಕಾಲದಲ್ಲೇ ಸಿದ್ಧಾಪುರ ಕೋಟೆಯು ಸಹ ರೂಪುಗೊಂಡಿರಬಹುದು.

ನಂತರದಲ್ಲಿ ವಿಜಯನಗರದ ಅರಸರ ಆರಂಭ ಕಾಲದಲ್ಲಿ ನಿರ್ಮಾಣಗೊಂಡಿದ್ದ ಮುಮ್ಮಡಿ ಪಟ್ಟಣದ ಅವಶೇಷಗಳನ್ನು ಈ ಕೋಟೆಯ ಜೀರ್ಣೋದ್ಧಾರಕ್ಕೆ ಬಳಸಿಕೊಳ್ಳಲಾಗಿದೆ. ಆದುದರಿಂದ ಗೋಡೆಯನ್ನು ಸಡಿಲಗೊಳ್ಳದ ಹಾಗೆ ನಯಗೊಳಿಸಲ್ಪಟ್ಟ ಕಲ್ಲುಗಳಿಂದ ಜೋಡಿಸಲಾಗಿದೆ. ಕೆಲವೆಡೆ ಗೋಡೆ ವಿಜಯನಗರೋತ್ತರ ಕಾಲಕ್ಕೆ ಸೇರಿತ್ತೆಂಬುದಕ್ಕೆ ಉಳಿಯಿಂದ ಕತ್ತರಿಸಿದ ಗುರುತುಗಳನ್ನು ಕಲ್ಲಿನ ಅಂಚಿನಲ್ಲಿ ಹಾಗೆಯೇ ಕಾಣುವಂತೆ ಬಿಡಲಾಗಿದೆ. ನಂತರವೂ ಇದು ಜೀರ್ಣೋದ್ಧಾರ ಹೊಂದಿದೆ ಎಂಬುದಕ್ಕೆ ಈ ಕೋಟೆಯ ಪಶ್ಚಿಮ ದಿಕ್ಕಿನ ಗೋಡೆಯಲ್ಲಿ ಚಿಕ್ಕದಾದ ಸೈಜುಗಲ್ಲುಗಳನ್ನು ಬಳಸಲಾಗಿದೆ. ಈ ಮೂರು ಮಾದರಿಯ ಗೋಡೆಗಳ ಮಧ್ಯಭಾಗದಲ್ಲಿ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದು ಗೋಡೆಯ ಅಗಲವನ್ನು ವಿಸ್ತರಿಸಿದ್ದಾರೆ. ಕೋಟೆಯ ರಕ್ಷಣೆಗಾಗಿ ನಾಲ್ಕು ದಿಕ್ಕಿಗೆ ಒಂದೊಂದಾಗಿ ಚೌಕ ಮಾದರಿಯ ನಾಲ್ಕು ಕೊತ್ತಲಗಳನ್ನು ನಿರ್ಮಿಸಲಾಗಿದೆ. ಆದರೆ ಇಂದು ಎರಡು ಕೊತ್ತಲಗಳು ಮಾತ್ರ ಉಳಿದಿರುವುದರಿಂದ ಕೋಟೆಯ ಪೂರ್ಣ ಚಿತ್ರಣ ಸಿಗುವುದಿಲ್ಲ.

ಪೂರ್ವದಿಕ್ಕಿನ ಪ್ರವೇಶ ದ್ವಾರ 'ಎಲ್' ಮಾದರಿಯಲ್ಲಿದ್ದು, ಮುಂಬದಿಯಲ್ಲಿ ಎರಡೂ ಕಡೆ ಎತ್ತರವಾದ ಗೋಡೆಯನ್ನು ನಿರ್ಮಿಸಲಾಗಿದೆ. ಭೂತಬಂಗ್ಲೆ ಎಂದು ಕರೆಯಲ್ಪಡುವ ವಿಜಯನಗರ ಕಾಲದ ಆಹಾರ ಧಾನ್ಯದ ಕಣಜವು ನುಣುಪುಗೊಂಡ ಆಯತಕಾರದ ಉದ್ದನೆಯ ಕಲ್ಲುಗಳಿಂದ ರಚನೆಯಾಗಿದೆ. ಅದೇ ರೀತಿ ಜಿಲ್ಲೆಯ ಯಾವ ಕೋಟೆಯು ಹೊಂದಿರದಂತಹ ವಿಶೇಷ ಲಕ್ಷಣವಾದ ಕೋಟೆ ಗೋಡೆಯ ಹೊರ ಬದಿಯಲ್ಲಿ ೧೫ ಮೀ.ಗಿಂತಲೂ ಆಳವಾದ ಕಂದಕ ಹಾಗೂ ಕಂದಕದ ಹೊರ ಬದಿ ಗೋಡೆ ಕಾಣಿಸಬಾರದೆಂದು ಎತ್ತರವಾದ ಮಣ್ಣಿನ ದಿಬ್ಬವನ್ನು ಹೊಂದಿದೆ. ಏಕೆಂದರೆ ಶತ್ರುಗಳು ಪ್ರಯೋಗಿಸುವ ಮದ್ದು ಗುಂಡುಗಳು ಗೋಡೆಗೆ ತಾಗದಿರಲೆಂದು ಹಾಗೂ ಅವರು ಗೋಡೆಯನ್ನು ಏರಲು ಈ ದಿಬ್ಬದ ಬಳಿ ಬಂದಾಗ ಒಳಗಿನಿಂದ ಅವರ ಮೇಲೆ ಸುಲಭವಾಗಿ ದಾಳಿ ಮಾಡಬಹುದೆಂಬ ಉದ್ದೇಶಕ್ಕಾಗಿ ಈ ತಂತ್ರವನ್ನು ಬಳಸಿದ್ದಾರೆ. ಅದರಲ್ಲೂ ಇಷ್ಟು ಆಳವಾದ ಕಂದಕವನ್ನು ದಾಟಿ ಗೋಡೆಯ ಬಳಿಗೆ ಬರುವುದು ಸುಲಭ ಸಾಧ್ಯವಾಗಿರಲಿಲ್ಲ. ಒಂದು ವೇಳೆ ಶತ್ರುಗಳು ಇವೆರಡು ತಡೆಗೋಡೆಗಳನ್ನು ಸುಲಭವಾಗಿ ಭೇದಿಸಿ ಗೋಡೆಯ ಸಮೀಪ ಬಂದರೆ ಮೇಲ್ಭಾಗದಿಂದ ಕಾದ ಎಣ್ಣೆ, ಗುಂಡುಗಳನ್ನು ತಳ್ಳಲು ಅಟ್ಟಾಲಕವನ್ನು ಗೋಡೆಯ ಒಳಬದಿಯಲ್ಲಿ ಬಿಡಲಾಗಿದೆ. ಬಹುಶಃ ಈ ತಂತ್ರಗಳಿಂದಲೇ ಮೈಸೂರು ಒಡೆಯರು ಮತ್ತು ಹೈದರ್-ಟಿಪ್ಪುವಿನ ದಾಳಿಗಳನ್ನು ಮಧುಗಿರಿ ಮಹಾನಾಡ ಪ್ರಭುಗಳು ಸಮರ್ಥವಾಗಿ ಎದುರಿಸಲು ಸಾಧ್ಯವಾಗಿರುವಂತಹದ್ದು.

೧೮. ಸಿರಾ

ತುಮಕೂರು ಜಿಲ್ಲೆಯ ಸ್ಥಳದುರ್ಗಗಳಲ್ಲೇ ಸಿರಾ ಕೋಟೆ ವೈಶಿಷ್ಟ್ಯತೆಯಿಂದ ಕೂಡಿದೆ. ಅದರಲ್ಲೂ ಪ್ರಾಗಿತಿಹಾಸ ಕಾಲದಿಂದಲೂ ಇದು ವಾಸಯೋಗ್ಯವಾಗಿತ್ತೆಂದು ಕೋಟೆಯ ಅನತಿ

ದೂರದಲ್ಲಿರುವ ಮಣ್ಣಿನದಿಬ್ಬವೊಂದರಿಂದ ತಿಳಿಯುತ್ತದೆ. ಅಂದರೆ ಪ್ರಾಗಿತಿಹಾಸ ಮಾನವನ ವಸತಿ ಸಮುಚ್ಚಯಕ್ಕೆ ಹೊಂದಿಕೊಂಡಿರುವ ಈ ದಿಬ್ಬವು ಬೃಹತ್ ಶಿಲಾಯುಗ ಸಂಸ್ಕೃತಿಯ ಮಾನವ ನಿರ್ಮಿಸಿದ ಕೋಟೆಯಂತೆ ಕಾಣುತ್ತದೆ. ಏಕೆಂದರೆ ಈ ಪರಿಸರದಲ್ಲಿ ಶಾತವಾಹನ ಮತ್ತು ಕದಂಬರ ಆರಂಭ ಕಾಲಕ್ಕಿನ್ನೂ ಬೃಹತ್ ಶಿಲಾಯುಗ ಸಂಸ್ಕೃತಿ ಜೀವಂತವಾಗಿದ್ದರಿಂದ ತಮ್ಮ ರಕ್ಷಣೆಗಾಗಿ ಅವರು ಮಣ್ಣಿನ ಕೋಟೆಯನ್ನು ಕಟ್ಟಿಸಿರಲೂಬಹುದು. ಏಕೆಂದರೆ ಬೃಹತ್ ಶಿಲಾಯುಗದ ಜನರಿಗೆ ಕಬ್ಬಿಣದ ಜ್ಞಾನ ಅತ್ಯುನ್ನತ ಮಟ್ಟದಲ್ಲಿದ್ದರಿಂದ ಅಶೋಕನ ಕಾಲಘಟ್ಟದಿಂದಲೂ ದಕ್ಷಿಣದ ಬೃಹತ್ ಶಿಲಾಯುಗ ಸಂಸ್ಕೃತಿಯ ಜನರನ್ನು ಒಲ್ಯೆಸಿಕೊಳ್ಳುವ ಪ್ರಯತ್ನ ನಡೆಯುತ್ತಾ ಬಂದಿತ್ತು. ಆದುದರಿಂದಲೇ ಬೃಹತ್ ಶಿಲಾಯುಗಕ್ಕೆ ಸೇರಿದ್ದೆನ್ನಲಾದ ಮಣ್ಣಿನ ದಿಬ್ಬಗಳನ್ನು ಬನವಾಸಿ, ಹಲಸಿ, ಹಾನಗಲ್, ಚಾಂದೋರ್[೭೬] ಮೊದಲಾದ ಪ್ರದೇಶಗಳಲ್ಲಿ ಪತ್ತೆಹಚ್ಚಲು ಸಾಧ್ಯವಾಗಿರುವುದು. ಆದರೆ ಇಂದು ಸಿರಾ ಪಾಳೆಯಗಾರರಿಂದ ನಿರ್ಮಿಸಲ್ಪಟ್ಟದೆಂದು ಗುರುತಿಸಲಾಗುವ ಕೋಟೆಗಿಂತ ಪೂರ್ವದಲ್ಲಿ ಕೋಟೆ ಇರಲಿಲ್ಲವೇ ಎಂಬ ಸಂದೇಹ ಸಿರೆನಾಡು ಎಂಬ ಆಡಳಿತ ವಿಭಾಗದ ಉಲ್ಲೇಖದಿಂದ ಉಂಟಾಗುತ್ತದೆ. ಏಕೆಂದರೆ ನೊಳಂಬರ ಕಾಲಕ್ಕಾಗಲೇ ಸಿರಾ ಒಂದು ಆಡಳಿತ ವಿಭಾಗವಾಗಿ ಪ್ರಸಿದ್ಧಿ ಹೊಂದಿತ್ತು. ಅಲ್ಲದೆ ಈ ಪರಿಸರದಲ್ಲಿ ಗಂಗರ ಕಾಲಕ್ಕೆ ಕೆರೆಗಳ ನಿರ್ಮಾಣಕಾರ್ಯ ಆರಂಭವಾಗಿದ್ದರಿಂದ ಕಂದಕಗಳಿಗೆ ಬೇಕಾದ ನೀರನ್ನು ಒದಗಿಸುತ್ತಿತ್ತು. ಆದುದರಿಂದ ಸಿರಾ ಪ್ರದೇಶವು ನೊಳಂಬರ ಆರಂಭ ಕಾಲಕ್ಕೆ ಸಿರೆನಾಡು ನಾನ್ನೂರು ಎಂಬ ಆಡಳಿತ ವಿಭಾಗವನ್ನು ಹೊಂದಿತ್ತೆಂದು ಕ್ರಿ.ಶ. ೮೭೮ರ ಶಾಸನ ತಿಳಿಸುತ್ತದೆ. ಅದೇ ರೀತಿ ಸಿರಾ ಮುನ್ನೂರು ಎಂಬ ಆಡಳಿತ ವಿಭಾಗವನ್ನು ಕ್ರಿ.ಶ. ೧೧೨೯ರ ಶಾಸನ[೭೭] ಉಲ್ಲೇಖಿಸುತ್ತದೆ. ಅಲ್ಲದೇ ಕ್ರಿ.ಶ. ೧೩೩೭ರ ವೇಳೆಗಾಗಲೇ ಹೊಳಕಲ್ಲು ಬೊಮ್ಮನಾಯಕನ ಆಳ್ವಿಕೆ ಸಿರಾದಲ್ಲಿ ಇದ್ದಿದರಿಂದ ಹೊಯ್ಸಳರಿಗಿಂತ ಪೂರ್ವದಲ್ಲೇ ನೊಳಂಬ ಪಲ್ಲವರು ರಾಜಧಾನಿ ರಕ್ಷಣೆಗಾಗಿ ಗಡಿಭಾಗಗಳಲ್ಲಿ ಕೋಟೆಗಳನ್ನು ನಿರ್ಮಿಸಿದ್ದರೆಂದು ತಮಿಳುನಾಡಿನ ಕಡಲೂರು ಶಾಸನ[೭೮] ಸ್ಪಷ್ಟಪಡಿಸುವುದರಿಂದ ನೊಳಂಬರ ಆಡಳಿತ ವಿಭಾಗವಾಗಿದ್ದ ಸಿರಾದಲ್ಲಿಯಬ ಕೋಟೆಯ ನಿರ್ಮಾಣ ಕಾರ್ಯ ಇವರ ಕಾಲದಲ್ಲೇ ಆರಂಭವಾಗಿದ್ದಿರಬಹುದು. ನಂತರ ಹೊಯ್ಸಳರ ಅಧೀನಕ್ಕೆ ಬಂದ ಈ ಪ್ರದೇಶದ ಮೇಲ್ವಿಚಾರಣೆಗಾಗಿ ಗಂಗೆಯನಾಯಕನನ್ನು ಬಲ್ಲಾಳ ನೇಮಿಸಿದನು. ವಿಜಯನಗರ ಕಾಲಕ್ಕೆ ಈ ಪ್ರದೇಶವನ್ನು ಅಮರಮಾಗಣಿಯಾಗಿ ಪಡೆದ ಹರತಿ ವಂಶಜರು ಸಿರಾದಲ್ಲಿ ಹೊಸದಾಗಿ ಕೋಟೆಯನ್ನು ಕಟ್ಟಿಸಿ ಆಳ್ವಿಕೆ ಮಾಡಿದರು. ಕೆಲವು ಕಾಲ ರತ್ನಗಿರಿ ಪಾಳೆಯಗಾರರು ಸಹ ಈ ಕೋಟೆಯಲ್ಲಿ ಆಳ್ವಿಕೆ ನಡೆಸಿದ್ದರೆನ್ನಲು ದ್ವಾರಗಳ ಶೈಲಿಯೇ ಸಾಕ್ಷಿ. ಸಿರಾ ಪಾಳೆಯಗಾರ ರಂಗಪ್ಪರಾಜ ೧೫೯೩ರಲ್ಲಿ[೭೯] ಇಂದಿನ ಸಿರಾ ಕೋಟೆಗೆ ಅಡಿಪಾಯ ಹಾಕಿಸಿದನೆಂದು ಮುಖ್ಯದ್ವಾರದ ಬಳಿ ಇರುವ ಶಾಸನದಿಂದ ಸ್ಪಷ್ಟವಾಗುತ್ತದೆ. ಆದರೆ ರಣದುಲ್ಲಾಖಾನನ ದಾಳಿಯಿಂದ ಕೋಟೆಯ ನಿರ್ಮಾಣ ಕಾರ್ಯ ಅರ್ಧಕ್ಕೆ ನಿಂತು, ಮೊಗಲರ

ಫೌಜುದಾರನಾಗಿ ನೇಮಕಗೊಂಡ ಖಾಸಿಂಖಾನನಿಂದ ಪೂರ್ಣಗೊಂಡಿತು. ನಂತರ ಬಿಜಾಪುರದ ಸುಲ್ತಾನರ ಸುಬೇದಾರರಾದ ಮಲ್ಲಿಕ್ ಹುಸೇನ್, ದಿಲಾವರ್‌ಖಾನ್‌ರು ಕೋಟೆಗೆ ಮುಸ್ಲಿಂ ವಾಸ್ತು ಶೈಲಿಯನ್ನು ನೀಡಿ ಅಭೇದ್ಯ ದುರ್ಗವನ್ನಾಗಿ ಮಾಡಿದರು. ದಿಲಾವರ್ ಖಾನ ನಂತರ ಹೈದರ್-ಟಿಪ್ಪು ಮಣ್ಣಿನ ಕೋಟೆಗೆ ಕಲ್ಲಿನ ಹೊದಿಕೆಯನ್ನು ಮಾಡಿದರು. ಅಲ್ಲದೇ ಪ್ರೆಂಚ್ ಇಂಜಿನಿಯರ್‌ಗಳ ನೆರವಿನಿಂದ ಗೋಡೆಗಳಿಗೆ ಹೆಚ್ಚಿನ ರಕ್ಷಣಾ ತಂತ್ರವನ್ನು ಒದಗಿಸಿದರು. ಟಿಪ್ಪು ಸಿರಾದಲ್ಲಿದ್ದ ೧೦,೦೦೦ ಮುಸ್ಲಿಂ ಕುಟುಂಬಗಳನ್ನು ಗಂಜಾಂಗೆ ಸ್ಥಳಾಂತರಿಸಿದ್ದರಿಂದಲೇ ಈ ಕೋಟೆಯು ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಂಡಿತು.[೮೦] ಹೈದರ್-ಟಿಪ್ಪುವಿನ ನಂತರ ಸಿರಾ ಕೋಟೆಯು ಮೈಸೂರು ಒಡೆಯರ ಅಧೀನಕ್ಕೆ ಒಳಪಟ್ಟಿತ್ತು.

ಸಿರಾ ಕೋಟೆಯ ಲಕ್ಷಣಗಳು

ಸಿರಾ ಕೋಟೆಯು ಹಲವು ಕಾಲಘಟ್ಟಗಳಲ್ಲಿ ನಿರ್ಮಾಣ ಹಾಗೂ ಜೀರ್ಣೋದ್ಧಾರ ಹೊಂದಿರುವಂತಹದ್ದೇ ಅದರ ಮೂಲರೂಪವನ್ನು ಅರಿಯಲು ಸಾಧ್ಯವಾಗದಿರುವುದಕ್ಕೆ ಮುಖ್ಯ ಕಾರಣವಾಗಿದೆ. ಅಂದರೆ ಮಣ್ಣಿನ ಕೋಟೆಯ ಸ್ಥಳದಲ್ಲಿ ಕಲ್ಲಿನ ಕೋಟೆ ಇರುವುದರಿಂದ ಮಣ್ಣಿನ ಕೋಟೆಯ ಲಕ್ಷಣಗಳು ಹೇಗಿದ್ದವೆಂದು ಅರಿಯುವುದು ಕಷ್ಟಸಾಧ್ಯ. ಆದರೂ ಮೂರು ಸುತ್ತಿನ ಕೋಟೆ ಗೋಡೆಗೆ ಬಳಸಲ್ಪಟ್ಟ ಮಾಧ್ಯಮ ಬೇರೆ ಬೇರೆ ಆಗಿರುವುದರಿಂದ ಅದು ಯಾವ ಕಾಲಘಟ್ಟಕ್ಕೆ ಸೇರಿದೆಯೆಂದು ಸುಲಭವಾಗಿ ಗುರುತಿಸಬಹುದು. ಮೊದಲನೆಯ ಸುತ್ತಿನ ಕೋಟೆ ಗೋಡೆ ಸಣ್ಣದಾದ ಕಾಡುಗಲ್ಲುಗಳಿಂದ ನಿರ್ಮಿಸಲ್ಪಟ್ಟಿದ್ದು, ಅದರ ಅಗಲ ಸಹ ಕಡಿಮೆ ಇರುವುದರಿಂದ ಪಾಳೆಯಗಾರರ ಕಾಲದ್ದೆಂದು ಸ್ಪಷ್ಟಪಡಿಸಬಹುದು. ಉಳಿದ ಗೋಡೆಗಳು ಸುಬೇದಾರರು ಮತ್ತು ಹೈದರ್-ಟಿಪ್ಪುವಿನ ಕಾಲದಲ್ಲಿ ಜೀರ್ಣೋದ್ದಾರ ಹೊಂದಿರುವುದರಿಂದ ಅವು ಮುಸ್ಲಿಂ ಮತ್ತು ಪ್ರೆಂಚ್ ವಾಸ್ತು ವಿನ್ಯಾಸವನ್ನು ಹೊಂದಿವೆ. ಈ ಗೋಡೆಗೆ ಆಯತ, ಚೌಕ, ಕೆಲವೆಡೆ ಆಕಾರವಿಲ್ಲದ ಕಾಡುಗಲ್ಲುಗಳನ್ನು ಬಳಸಲಾಗಿದೆ. ಆದರೆ ಆಯತ ಮಾದರಿಯ ಉದ್ದನೆಯ ಕಲ್ಲು ೧೩ನೆಯ ಶತಮಾನದ ಕೋಟೆಯ ಆಯತ ಮಾದರಿಯ ಕಲ್ಲುಗಳಂತಿವೆ. ಹಾಗಾಗಿ ಇದರ ಕಾಲಮಾನವನ್ನು ಸಿರಾ ಪಾಳೆಯಗಾರರ ಕಾಲಕ್ಕಿಂತಲೂ ಪೂರ್ವಕ್ಕೆ ಕೊಂಡೊಯ್ಯಲು ಸಾಧ್ಯವಿದೆ. ಈ ಗೋಡೆಗೆ ತಳಭಾಗದಲ್ಲಿ ಬೃಹತ್ ಗಾತ್ರದ ಕಲ್ಲುಗಳನ್ನು ಬಳಸಿದ್ದು, ಮೇಲೆ ಹೋದಂತೆ ಸಣ್ಣದಾಗುತ್ತಾ ಅವು ಇಟ್ಟಿಗೆಯ ಗಾತ್ರಕ್ಕೆ ಬಂದಿವೆ. ಪುನಃ ಅದರ ಮೇಲೆ ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿ ಗೋಡೆಯನ್ನು ನಿರ್ಮಿಸಿದ್ದಾರೆ. ಇದು ೭ ಮೀ. ಎತ್ತರ ೭ ಮೀ.ನಷ್ಟು ಅಗಲ ಇರುವುದರಿಂದ ಗೋಡೆಯ ಒಳಬದಿ ತೆನೆಯ ಹಂತದವರೆಗೂ ಮಣ್ಣಿನ ಇಳಿಪೊರೆಯನ್ನು ಹೊಂದಿದೆ. ಈ ಇಳಿಪೊರೆ ಮಳೆ ನೀರಿಗೆ ಕೊಚ್ಚಿ ಹೋಗದಿರಲೆಂದು ಹೊರಬದಿಯಲ್ಲಿ ಕಲ್ಲಿನ ಹೊದಿಕೆಯನ್ನು ಮಾಡಿ ಅದನ್ನೇ ಸೈನಿಕರು ಓಡಾಡಲು ೬ ಮೀ. ಅಗಲದ ವೇದಿಕೆಯನ್ನಾಗಿ ಬಳಸಿಕೊಂಡಿದ್ದಾರೆ. ತಿರುವುಗಳಿರುವಲ್ಲಿ

ಸೈನಿಕರು ಓಡಾಡಲು ಮತ್ತು ಮದ್ದು ಗುಂಡುಗಳನ್ನು ಇಡುವುದಕ್ಕಾಗಿ ಹೆಚ್ಚಿನ ಸ್ಥಳಾವಕಾಶ ಒದಗಿಸಲು ಎರಡೂ ಗೋಡೆಗಳ ಮೇಲೆ ಆಯತಾಕಾರದ ಉದ್ದನೆಯ ಪಟ್ಟಿಕೆಗಳನ್ನು ಬಿಟ್ಟಿದ್ದಾರೆ. ಇವು ಶತ್ರುಗಳ ಮೇಲೆ ಅನಿರೀಕ್ಷಿತವಾಗಿ ಪ್ರತಿದಾಳಿಯನ್ನು ಮಾಡಲು ಅನುವು ಮಾಡಿಕೊಡುತ್ತಿದ್ದವು. ಏಕೆಂದರೆ ಗಿರಿದುರ್ಗಗಳಿಗೆ ಹೋಲಿಸಿದರೆ ಸ್ಥಳದುರ್ಗಗಳು ಹೆಚ್ಚು ಅಸುರಕ್ಷಿತವಾಗಿರುತ್ತವೆ. ಶತ್ರುಗಳು ವೇಗವಾಗಿ ಒಮ್ಮಿಂದೊಮ್ಮೆಲೇ ಪ್ರವೇಶಿಸಲು ಅವಕಾಶವಿರುತ್ತದೆ. ಆದುದರಿಂದ ಗೋಡೆಗಳ ಮೇಲ್ಭಾಗದಲ್ಲಿ ಸ್ಥಳಾವಕಾಶವನ್ನು ಹೆಚ್ಚು ಬಿಡುತ್ತಿದ್ದರು. ಏಕೆಂದರೆ ಇವುಗಳ ಮೇಲೆ ಸೈನಿಕರು ಓಡಾಡಲು ಹಾಗೂ ಹೆಚ್ಚಿನ ಸಂಖ್ಯೆಯಲ್ಲಿ ಮದ್ದು ಗುಂಡು ಇಲ್ಲವೇ ಕಾದ ಎಣ್ಣೆಯನ್ನು ಗೋಡೆಗಳ ಮೇಲಿಟ್ಟು ಶತ್ರುಗಳ ಮೇಲೆ ಬಿಡುವಿಲ್ಲದಂತೆ ದಾಳಿ ಮಾಡಲು ಅವಕಾಶ ಸಿಗುತ್ತಿತ್ತು. ಮೊದಲ ಸುತ್ತಿನ ಕೋಟೆಗೆ ರಕ್ಷಣೆ ನೀಡಲು ಅದರ ಸುತ್ತಲೂ ಇದ್ದ ಕಂದಕಕ್ಕೆ ಪೂರ್ವ ದಿಕ್ಕಿನ ದೊಡ್ಡ ಕೆರೆಯಿಂದ ನೀರನ್ನು ಬಿಡುವ ವ್ಯವಸ್ಥೆ ಮಾಡಲಾಗಿದೆ.

ಕೋಟೆ ಗೋಡೆಯ ನಾಲ್ಕು ದಿಕ್ಕಿನಲ್ಲಿ ಶತ್ರುಗಳ ಚಲನವಲನ ವೀಕ್ಷಿಸಲು ವೃತ್ತಾಕಾರದ ಬುರುಜುಗಳನ್ನು ನಿರ್ಮಿಸಲಾಗಿದೆ. ಗೋಡೆಯ ಉದ್ದಕ್ಕೂ ಚೌಕ, ವೃತ್ತ ಮಾದರಿಯ ಕೊತ್ತಲಗಳನ್ನು ಶತ್ರುಗಳ ಮೇಲೆ ಎಲ್ಲಾ ದಿಕ್ಕಿನಿಂದಲೂ ಫಿರಂಗಿಗಳನ್ನು ಬಳಸಲು ಅನುಕೂಲವಾಗುವಂತೆ ಗೋಡೆಗಿಂತ ಎತ್ತರವಾಗಿ ನಿರ್ಮಾಣಗೊಂಡಿವೆ. ಪ್ರತಿ ಗೋಡೆಯ ಮೇಲ್ಭಾಗದಲ್ಲಿ ಕೈಪಿಡಿ ಗೋಡೆಯಿದ್ದು, ಅದರಲ್ಲಿ ಬಂದೂಕುಕಿಂಡಿ, ಫಿರಂಗಿಕಿಂಡಿ, ಅಂಬುಕಿಂಡಿ, ವೀಕ್ಷಣಾಕಿಂಡಿಗಳನ್ನು ಬಿಡಲಾಗಿದೆ. ಈ ವೀಕ್ಷಣಾ ಕಿಂಡಿಗಳಿಂದ ಒಮ್ಮೆಯೇ ಒಂದರಿಂದ ಆರು ದಿಕ್ಕುಗಳ ಚಲನವಲನಗಳನ್ನು ಗಮನಿಸುವಂತಹ ವೈಜ್ಞಾನಿಕ ತಂತ್ರಜ್ಞಾನವನ್ನು ಬಳಸಲಾಗಿದೆ. ಗೋಡೆಯ ಮೇಲ್ಭಾಗ ಮಳೆ ನೀರು ನಿಲ್ಲದಂತೆ ಸೈನಿಕರು ಓಡಾಡುವ ಅಟ್ಟಾಲಕವನ್ನು ಇಳಿಜಾರಾಗಿ ನಿರ್ಮಿಸಿದ್ದಾರೆ. ಅಲ್ಲದೆ ಅದರ ಮೇಲೆ ಬಿದ್ದ ನೀರನ್ನು ನೇರವಾಗಿ ಕಂದಕಕ್ಕೆ ಹೋಗುವುದಕ್ಕಾಗಿ ಗೋಡೆಯ ತಳಭಾಗದಲ್ಲಿ ರಂಧ್ರಗಳಿವೆ. ಕೋಟೆಯ ಒಳಗೆ ಮೂರು ಬಾವಿಗಳನ್ನು ಆಳವಾಗಿ ನಿರ್ಮಿಸಿದ್ದಾರೆ. ಇವುಗಳ ವಿಶೇಷತೆ ಎಂದರೆ ಕೋಟೆ ಗೋಡೆಗೆ ಕೇವಲ ೧೦೦ ಮೀ. ಅಂತರದಲ್ಲಿದ್ದ ದೊಡ್ಡ ಕೆರೆಯಲ್ಲಿ ಸದಾ ಕಾಲ ನೀರು ಇರುತ್ತಿದ್ದರಿಂದ ಈ ಬಾವಿಗಳಿಗೆ ಅಂತರ್ಜಲ ಮೇಲ್ಮಟ್ಟದಲ್ಲೇ ಇರುತ್ತಿತ್ತು. ಆದುದರಿಂದ ಕೋಟೆಯ ಒಳಗಿನ ಬಾವಿಗಳಿಗೆ ಯಾವುದೇ ಕಾಲುವೆಗಳ ಮೂಲಕ ನೀರನ್ನು ಹರಿಸುವ ಪ್ರಮೇಯ ಇವರಿಗೆ ಎದುರಾಗಿಲ್ಲ. ಯಾವಾಗಲೂ ತುಂಬಿರುತ್ತಿದ್ದ ಬಾವಿಗಳಿಂದ ಕೋಟೆಯಲ್ಲಿರುವ ಅರಮನೆ, ವಸತಿ, ಈಜುಕೊಳಗಳಿಗೆ ನೀರನ್ನು ತರುವುದು ಸಮಸ್ಯೆಯಾಗಬಹುದೆಂದು ಕಪಿಲೆಯ ಮೂಲಕ ನೀರನ್ನು ಕಾಲುವೆಗಳಿಗೆ ಹರಿಸಿ ಅಲ್ಲಿಂದ ಕಟ್ಟಡಗಳಿಗೆ ಬಿಡುತ್ತಿದ್ದರೆಂಬುದಕ್ಕೆ ಇಂದು ಕಂಡುಬರುವ ಅಳಿದುಳಿದ ಕಾಲುವೆಯ ಅವಶೇಷಗಳಿಂದ ತಿಳಿಯುತ್ತದೆ. ಈ ಬಾವಿಗಳಿಗೆ ಮೆಟ್ಟಿಲುಗಳು (ಪಾವಟಿಗೆ) ಇರುವುದನ್ನು ಗಮನಿಸಿದರೆ ಜನರು ದಿನ ನಿತ್ಯದ ಕೆಲಸಗಳಿಗೆ ಬೇಕಾದ ನೀರನ್ನು ತಾವೇ ತೆಗೆದುಕೊಂಡು

ಹೋಗುತ್ತಿದ್ದರು ಎನಿಸುತ್ತದೆ. ಏಕೆಂದರೆ ಈ ಕಾಲುವೆಗಳ ಮೂಲಕ ಹರಿಯುತ್ತಿದ್ದ ನೀರು ಕೇವಲ ಅರಮನೆ ಮತ್ತು ಅಧಿಕಾರಿ ವರ್ಗದ ಕಟ್ಟಡಗಳಿಗೆ ಮಾತ್ರ ವ್ಯವಸ್ಥೆ ಮಾಡಿದಂತೆ ಕಾಣುತ್ತದೆ. ಏಕೆಂದರೆ ಕಾಲುವೆಗಳ ಅವಶೇಷ ಇಂದು ಬಹುತೇಕ ಮಣ್ಣಿನ ದಿಬ್ಬದ ಒಳಗೆ ಮುಚ್ಚಿಹೋಗಿವೆ. ಕೋಟೆಗೆ ಮೂರು ಮುಖ್ಯ ದ್ವಾರಗಳಿದ್ದು ಅವುಗಳಲ್ಲಿ ದಕ್ಷಿಣಕ್ಕಿರುವ ದಿಡ್ಡಿಬಾಗಿಲು ಸಹ ಒಂದಾಗಿದೆ.

ಈ ದ್ವಾರಗಳು ಜಿಗ್‌ಜಾಗ್ ಮಾದರಿಯಲ್ಲಿ ಅನಿರೀಕ್ಷಿತ ತಿರುವುಗಳಿಂದ ಕೂಡಿದೆ. ದ್ವಾರದ ಎರಡೂ ಬದಿ ಎತ್ತರವಾದ ಗೋಡೆಯನ್ನು ಹೊಂದಿದ್ದು ಶತ್ರುಗಳು ಪ್ರವೇಶ ದ್ವಾರದ ಬಳಿ ಧಾವಿಸದಂತೆ ಒಳಗಿನವರಿಗೆ ಭದ್ರತೆಯನ್ನು ನೀಡುತ್ತಿತ್ತು. ದ್ವಾರವನ್ನು ಕಿರಿದಾದ ಅನಿರೀಕ್ಷಿತರ ತಿರುವುಗಳ ಮೂಲಕ ಪ್ರವೇಶಿಸಿದಾಗ ಗೋಡೆಯ ಮೇಲಿಂದ ಪ್ರತಿ ದಾಳಿಯನ್ನು ಮಾಡಲು ಸುಲಭವಾಗುತ್ತಿತ್ತು. ಅಲ್ಲದೆ ಶತ್ರುಗಳು ಬೇರೆಡೆ ತಪ್ಪಿಸಿಕೊಂಡು ಹೋಗಲು ಅವಕಾಶ ಇಲ್ಲದಂತೆ ಮಾಡುತ್ತದೆ. ಮುಖ್ಯದ್ವಾರವನ್ನು ಸದಾ ಕಾಲ ಮುಚ್ಚಿರುತ್ತಿದ್ದರು; ಏಕೆಂದರೆ ಈ ದ್ವಾರವನ್ನು ಪ್ರವೇಶಿಸಿದರೆ ನೇರವಾಗಿ ಅರಮನೆ ಸಿಗುತ್ತಿತ್ತು. ಆದುದರಿಂದ ದಿಡ್ಡಿಬಾಗಿಲಿನ ಮೂಲಕ ದಿನನಿತ್ಯದ ಕಾರ್ಯಗಳನ್ನು ಪೂರೈಸಿಕೊಳ್ಳಬೇಕಾಗಿತ್ತು. ಅವಶ್ಯಕವೆನಿಸಿದಾಗ ಮಾತ್ರ ಮುಖ್ಯದ್ವಾರವನ್ನು ತೆರೆಯಲಾಗುತ್ತಿತ್ತು. ಈ ಮೂರು ಪ್ರವೇಶ ದ್ವಾರಗಳೂ ವೈದಿಕ ವಾಸ್ತುಶಿಲ್ಪದ ಹಿನ್ನೆಲೆಯಲ್ಲಿದ್ದು, ದ್ವಾರದ ಎರಡೂ ಬದಿ ಎತ್ತರದ ಪೀಠದ ಮೇಲಿನ ಕಾವಲು ಮಂಟಪಗಳಲ್ಲಿ ಕಂಬಗಳನ್ನು ನಿಲ್ಲಿಸಲಾಗಿದೆ. ಈ ಮೂರು ದ್ವಾರಗಳನ್ನು ಗಮನಿಸಿದರೆ ಸಿರಾ ಪಾಳೆಯಗಾರರ ಕಾಲದಲ್ಲಿಯೇ ಮೂರು ಸುತ್ತಿನ ಕೋಟೆ ಇತ್ತೆಂದು ಸ್ಪಷ್ಟವಾಗುತ್ತದೆ. ಏಕೆಂದರೆ ಕೆಂಪೇಗೌಡನ ಕಾಲದಲ್ಲಿ ನಿರ್ಮಾಣಗೊಂಡ ದೇವನಹಳ್ಳಿ ಮತ್ತು ಬೆಂಗಳೂರಿನ ಮಾರುಕಟ್ಟೆಯಲ್ಲಿರುವ ಮಣ್ಣಿನ ಕೋಟೆಗಳು ಟಿಪ್ಪುವಿನ ಕಾಲದಲ್ಲಿ ಕಲ್ಲಿನ ಹೊದಿಕೆ ಹೊಂದಿದಂತೆ ಸಿರಾ ಕೋಟೆಯು ಸಹ ಮಾರ್ಪಾಟು ಹೊಂದಿರುವ ಸಾಧ್ಯತೆಗಳಿವೆ. ಈ ಕೋಟೆಯ ವಿಶೇಷತೆಯೆಂದರೆ ಔರಂಗಜೇಬನು ಇಲ್ಲಿ ಪ್ರಮುಖ ಯಾವುದೇ ನದಿ ಸಂಚಯಗಳು ಇಲ್ಲದಿದ್ದರೂ ದಖನ್‌ನ ಪ್ರಮುಖ ಮಿಲಿಟರಿ ಕೇಂದ್ರವನ್ನಾಗಿ ಮಾಡಿಕೊಳ್ಳಲು ಪ್ರಯತ್ನಿಸಿದ್ದು ಆಶ್ಚರ್ಯದ ಸಂಗತಿ. ಆದರೂ ಪ್ರಾಚೀನ ಕಾಲದಿಂದಲೂ ಇದೊಂದು ಪ್ರಮುಖ ಆಡಳಿತ ವಿಭಾಗವಾಗಿ ರೂಪುಗೊಳ್ಳಲು ಇಲ್ಲಿನ ಫಲವತ್ತಾದ ಮಣ್ಣು ಸಹಕಾರಿಯಾಗಿತ್ತು. ಏಕೆಂದರೆ ಇಲ್ಲಿ ಒಮ್ಮೆ ಮಳೆ ಬಂದರೆ ಭೂಮಿ ಮೃದುವಾಗಿ ಕೃಷಿ ಚಟುವಟಿಕೆಗಳಲ್ಲಿ ತೊಡಗಲು ಅನುಕೂಲ ಮಾಡಿಕೊಡುತ್ತಿತ್ತು. ಈ ಉದ್ದೇಶದಿಂದ ಸಿರಾ ಪ್ರಾಂತ್ಯದಲ್ಲಿ ಕೆರೆ–ಕಟ್ಟೆಗಳನ್ನು ಕಟ್ಟಿ ವ್ಯವಸಾಯಕ್ಕೆ ನೀರನ್ನು ಬಳಸಿಕೊಂಡದ್ದು, ಈ ಪ್ರಾಂತ್ಯದ ವರಮಾನವನ್ನು ಹೆಚ್ಚಾಗುವಂತೆ ಮಾಡಿತು. ಜೊತೆಗೆ ಹಲವು ಪಾಳೆಯಪಟ್ಟು, ಸಣ್ಣ ಅರಸು ಮನೆತನಗಳ ಹುಟ್ಟಿಗೂ ಕಾರಣವಾಯಿತು. ಇದರ ಕುರುಹಾಗಿಯೇ ಇಂದು ದೇವಾಲಯ, ಮಸೀದಿ, ಕೆರೆ–ಕಟ್ಟೆ, ಕೋಟೆ–ಕೊತ್ತಲಗಳು ಕಂಡುಬರುತ್ತವೆ. ಆದರೂ ಈ ಕೋಟೆಯ ಒಳಭಾಗದಲ್ಲಿ

ಸುಮಾರು ೧೬ ಎಕರೆಗಳಷ್ಟು ವಿಶಾಲವಾದ ಮೈದಾನ ಇರುವುದನ್ನು ಗಮನಿಸಿದರೆ ಆರಂಭದಿಂದಲೂ ಇದೊಂದು ಸೈನಿಕ ಕೇಂದ್ರವಾಗಿಯೇ ಕಾರ್ಯ ನಿರ್ವಹಿಸಿದಂತೆ ಕಾಣುತ್ತದೆ. ಈ ಮೈದಾನದ ಒಳಗಿರುವ ಬಹುತೇಕ ಕಟ್ಟಡ ಅವಶೇಷಗಳು ನಂತರ ಕಾಲಘಟ್ಟದಲ್ಲಿನ ನಿರ್ಮಾಣಗಳಾಗಿವೆ. ಹಾಗಾಗಿ ಈ ವಿಶಾಲ ಮೈದಾನವನ್ನು ಯಾವ ಕಾರಣಕ್ಕೆ ಬಳಸಿಕೊಳ್ಳುತ್ತಿದ್ದರೆಂಬ ಸಂದೇಹ ಸಹಜವಾಗಿ ಏರ್ಪಡುತ್ತದೆ. ಬಹುಶಃ ಸೈನಿಕ ತರಬೇತಿಗಾಗಿ ಇದನ್ನು ಬಳಸಿಕೊಳ್ಳುತ್ತಿದ್ದರು ಎನಿಸುತ್ತದೆ. ಆದುದರಿಂದಲೇ ಸೈನಿಕ ಶಿಬಿರ ಹಿನ್ನೆಲೆಯಿಂದ ಸಿಬಿರ, ಶಿರೆ, ಶಿರ್ಯ, ಸಿರಾ ಆಗಿ ರೂಪಾಂತರ ಹೊಂದಿದೆ.

೧೯. ಕೊರಟಗೆರೆ

ಹೊಳವನಹಳ್ಳಿ ಪಾಳೆಯಗಾರ ರಣಭೈರೇಗೌಡ ತನ್ನ ಸಂಸ್ಥಾನದ ಗಡಿಯಲ್ಲಿದ್ದ ಕೊರಟಗೆರೆಯಲ್ಲಿ ಕ್ರಿ.ಶ. ೧೬೦೦ರಲ್ಲಿ ಹೊಸದಾಗಿ ಕೋಟೆಯನ್ನು ಕಟ್ಟಿಸಿ ಮುಖ್ಯ ಕೇಂದ್ರವನ್ನಾಗಿ ಮಾಡಿಕೊಂಡನು. ಬೆಟ್ಟದ ತುಂಬಾ ಕೋಡಿನಂತಹ ಕಲ್ಲು ಇರುವುದರಿಂದ ಕೊರಟಗೆರೆ ಎಂಬ ಹೆಸರು ಬಂದಿದೆ. ಇಲ್ಲವೇ ಹೊಳವನಹಳ್ಳಿ ಮತ್ತು ಮಧುಗಿರಿ ಪಾಳೆಯಗಾರರ ನಡುವೆ ಇಂದಿನ ಕೊರಟಗೆರೆ ಪ್ರದೇಶವು ಗಡಿಪ್ರಾಂತ್ಯವಾಗಿತ್ತು. ಹೊಳವನಹಳ್ಳಿಗೆ ಕೊರಮಪುರ ಎಂಬ ಮೂಲ ಹೆಸರಿತ್ತು. ಕೊರಮಪುರದಿಂದ ಬಂದ ಪಾಳೆಯಗಾರರು ಗಡಿ ಪ್ರದೇಶದಲ್ಲಿ ಹೊಸದಾಗಿ ಗ್ರಾಮವನ್ನು ನಿರ್ಮಿಸಿ ಅಲ್ಲಿಯೇ ಕೋಟೆ ಕಟ್ಟಿಕೊಂಡು ಆಳ್ವಿಕೆ ಮಾಡಿದ್ದರಿಂದ ಈ ಪ್ರದೇಶಕ್ಕೆ ಕೊರಮಪುರ ಎಂಬ ಹೆಸರು ಬಂದಿದೆ. ಏಕೆಂದರೆ ರಣಭೈರೇಗೌಡನ ಕಾಲದಲ್ಲಿ ಬೆಟ್ಟದಲ್ಲಿ ಚಿನ್ನದ ನಾಣ್ಯಗಳನ್ನು ಟಂಕಿಸುತ್ತಿದ್ದ ಕೊಲಿಮೆ ಇತ್ತಂತೆ; ಹಾಗಾಗಿ ಕೊಲಿಮೆ ಕೆಲಸ ಮಾಡುವ ವಸತಿ ಪ್ರದೇಶವನ್ನು ಹಟ್ಟಿ ಅಥವಾ ಕೇರಿಗಳಿಗೆ ಗೆರೆ ಎಂದು ಕರೆಯುವ ವಾಡಿಕೆ ಇಂದಿಗೂ ಕೆಲವೆಡೆ ರೂಢಿಯಲ್ಲಿದೆ. ಅಲ್ಲದೆ ಗೆರೆ ಎಂಬುದು ಗಿರಿ; ಅಂದರೆ ದುರ್ಗ ಎಂಬುದರ ಅಪಭ್ರಂಶ ರೂಪವೇ ಆಗಿದೆ. ಏಕೆಂದರೆ ಜಿಲ್ಲೆಯಲ್ಲಿ ಗೆರೆ ಎಂಬ ಹೆಸರಿರುವ ಪ್ರದೇಶಗಳೆಲ್ಲಾ ಬೆಟ್ಟ ಗುಡ್ಡಗಳಿಂದ ಕೂಡಿವೆ. ಉದಾ: ಹಿಂದೆ ಪಾವಗಡ ತಾಲೂಕಿನ ಕೊಲಿಮೆಗೆರ ರಾಂಪುರದಲ್ಲಿ ನಾಣ್ಯಗಳನ್ನು ಹಚ್ಚು ಹಾಕುವ ಕೂಲಿಮೆತನ ಮಾಡುತ್ತಿದ್ದರೆಂದು ಎಂದು ಹೇಳುವ ಪ್ರದೇಶದಲ್ಲಿ ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಎರಡು ನಾಣ್ಯಗಳೂ ಸಹ ಸಿಕ್ಕಿವೆ. ಕೂಲಿಮೆತನ ಮಾಡುವವರು ಹೆಚ್ಚಾಗಿ ವಾಸಿಸುವ ಪ್ರದೇಶ ಕೂಲಿಮೆಗೆರೆಯಾಗಿ ನಂತರದಲ್ಲಿ ಗುರುತಿಸಿಕೊಂಡಿವೆ. ಆದುದರಿಂದ ಕೊರಮಪುರ, ಕೊಲಿಮೆಗೆರ ಎಂಬುದರ ಹಿನ್ನೆಲೆಯಿಂದ ಕೊರಟಗೆರೆ ಎಂಬ ಹೆಸರು ಬಂದಿದೆ. ಕೊಲಿಮೆಗೆರೆ ಪದದಲ್ಲಿ ಲಿ ಮತ್ತು ಮೆ ಅಕ್ಷರಗಳು ಅಪಭ್ರಂಶಗೊಂಡು ರ ಮತ್ತು ಟ ಅಕ್ಷರಗಳು ಸೇರ್ಪಡೆಗೊಂಡಿವೆ. ಗೆರೆ ಎಂದರೆ ಎಲ್ಲೆ, ಹದ್ದುಬಸ್ತು ಎಂಬ ಅರ್ಥ ಇರುವುದರಿಂದ ಮಧುಗಿರಿ ಪಾಳೆಯಗಾರರಿಗೆ ಗಡಿಪ್ರಾಂತ್ಯವಾಗಿದ್ದ ಕೊಲಿಮೆಗೆರೆಯು ಕೊರಟಗೆರೆಯಾಗಿ ನಂತರದಲ್ಲಿ ರೂಢಿಗೆ ಬಂದಿದೆ. ಏಕೆಂದರೆ ರಣಭೈರೇಗೌಡನಿಗಿಂತ ಪೂರ್ವದ ಯಾವ ಶಾಸನವು ಕೊರಟಗೆರೆಯಲ್ಲಿ

ಪಟ್ಟಣ ಅಥವಾ ಹಳ್ಳಿ ಇತ್ತು ಎಂಬುದನ್ನು ಉಲ್ಲೇಖಿಸುವುದಿಲ್ಲ. ಹಾಗಾಗಿ ರಣಭೈರೆ ಗೌಡನಿಂದಲೇ ಕೊರಟಗೆರೆ ಪಟ್ಟಣ ಹೊಸದಾಗಿ ನಿರ್ಮಾಣಗೊಂಡಿದೆ ಎಂಬುದನ್ನು ಒಪ್ಪಬಹುದು.

ಕೋಟೆಯ ಲಕ್ಷಣಗಳು

ಕೊರಟಗೆರೆ ಬೆಟ್ಟದಲ್ಲಿ ಎತ್ತರದ ಗುಂಡುಗಳು ಹರಡಿಕೊಂಡಿರುವುದರಿಂದ ಕೋಟೆ ಗೋಡೆಯನ್ನು ಹೆಚ್ಚು ವಿಸ್ತರಿಸದಂತೆ ಮಾಡಿದೆ. ಸುಲಭವಾಗಿ ಪ್ರವೇಶಿಸಲು ಅವಕಾಶ ಇರುವಲ್ಲಿ ಮಾತ್ರ ಕೋಟೆ ಗೋಡೆಯನ್ನು ನಿರ್ಮಿಸಲಾಗಿದೆ. ಉಳಿಯಿಂದ ಕತ್ತರಿಸಿದ ಆಯತ, ತ್ರಿಭುಜ, ಚೌಕ ಮಾದರಿಯ ಗ್ರಾನೈಟ್‌ಕಲ್ಲು ಹಾಗೂ ಕೆಲವೆಡೆ ಬೃಹತ್ ಮತ್ತು ಸಣ್ಣ ಕಾಡುಗಲ್ಲುಗಳನ್ನು ಹಾಗೆಯೇ ಬಳಸಿದ್ದಾರೆ. ಆಯತ ಮಾದರಿಯ ಉದ್ದನೆಯ ಕಲ್ಲುಗಳ ಬಳಕೆ ಮಾತ್ರ ಈ ಕೋಟೆಯ ವಿಶೇಷ ಲಕ್ಷಣವಾಗಿದೆ. ಕಾಡುಗಲ್ಲು ಇರುವಲ್ಲಿ ಗೋಡೆ ಸಡಿಲಗೊಳ್ಳದಿರಲೆಂದು ಕಲ್ಲಿನ ಚಕ್ಕೆಗಳನ್ನು ಜೋಡಿಸಲಾಗಿದೆ. ಆದರೆ ಚೌಕ ಮತ್ತು ಆಯತ ಮಾದರಿಯ ಕಲ್ಲುಗಳನ್ನು ನಯಗೊಳಿಸಿ ಬಳಸಿರುವುದರಿಂದ ಇಂತಹ ಚಕ್ಕೆಗಳನ್ನು ಜೋಡಿಸುವ ಪ್ರಮೇಯ ಕಂಡುಬಂದಿಲ್ಲ. ಗಿರಿದುರ್ಗಗಳಿಗೆ ಕಂದಕಗಳ ಅವಶ್ಯಕತೆ ಇರುವುದಿಲ್ಲ. ಆದರೆ ನೆಲಕೋಟೆ ಇರುವಲ್ಲಿ ಕಂದಕ ಕಂಡುಬರದಿರುವುದು ಇಲ್ಲಿಯ ನೈಸರ್ಗಿಕ ಅಭೇದ್ಯತೆಯನ್ನು ತೋರ್ಪಡಿಸುತ್ತದೆ. ಗೋಡೆಯ ಅಗಲವನ್ನು ವಿಸ್ತರಿಸಿ ಅದರ ರಕ್ಷಣೆಗಾಗಿ ಒಳಬದಿಯಲ್ಲಿ ಮಣ್ಣಿನ ಇಳಿವೊರೆಯನ್ನು ನಿರ್ಮಿಸಿದ್ದಾರೆ. ಇಲ್ಲಿಯ ಬಹುತೇಕ ಕೋಟೆ ಗೋಡೆ ಬೆಟ್ಟದ ಇಳಿಜಾರಿನಲ್ಲಿ ನಿರ್ಮಾಣಗೊಂಡಿರುವುದರಿಂದ ಅದರ ರಕ್ಷಣೆಗಾಗಿ ಹೊರಬದಿಯಲ್ಲಿ ತಳಪಾಯದ ಅಂಚಿಗೆ ಕಬ್ಬಿಣದ ಉಳಿಗಳನ್ನು ಜೋಡಿಸಲಾಗಿದೆ. ಅಂದರೆ ಗೋಡೆ ಕೆಳಕ್ಕೆ ಜಾರಿ ಹೋಗದಂತೆ ಉಳಿಗಳನ್ನು ಬಳಸಲಾಗಿದೆ. ಅದೇ ರೀತಿ ಗೋಡೆಯ ರಕ್ಷಣೆಗಾಗಿ, ಶತ್ರುಗಳ ಚಲನವಲನ ವೀಕ್ಷಣೆಗಾಗಿ, ಶತ್ರುಗಳ ಮೇಲೆ ಆಯುಧೋಪಕರಣಗಳನ್ನು ಪ್ರಯೋಗಿಸಲು ಅನುಕೂಲವಾಗಲೆಂದು ಚೌಕ ಮತ್ತು ಆಯತ ಮಾದರಿಯ ಕೊತ್ತಲಗಳನ್ನು ನಿರ್ಮಿಸಲಾಗಿದೆ. ನೆಲಗೋಟೆಯ ಒಂದು ಕೊತ್ತಲಿನ ಮೇಲ್ಭಾಗದಲ್ಲಿ ಬಿಜಾಪುರ, ಗುಲ್ಬರ್ಗಾ, ಬೀದರ್, ಮುದಗಲ್, ರಾಯಚೂರು ಕೋಟೆಗಳಲ್ಲಿರುವಂತೆ ಪುಷ್ಪ ಬೋದಿಗಳು ಗೋಡೆಯ ತುದಿಯ ಭಾಗದಿಂದ ಸ್ವಲ್ಪ ಮುಂದಕ್ಕೆ ಹೊರ ಚಾಚಿಕೊಂಡಿವೆ. ಹೊಳವನಹಳ್ಳಿ ಪಾಳೆಯಗಾರರ ಸುತ್ತಲೂ ಮಧುಗಿರಿ ಪಾಳೆಯಗಾರರು ಮತ್ತು ಪೆನುಗೊಂಡೆಯಲ್ಲಿದ್ದ ವಿಜಯನಗರದ ಅರಸರು ಹಾಗೂ ಯಲಹಂಕ ನಾಡಪ್ರಭುಗಳು ಶತ್ರುಗಳಾಗಿ ಮಾರ್ಪಟ್ಟಿದ್ದರಿಂದ ಸಿರಾದ ಸುಬೇದಾರರೊಂದಿಗೆ ಮೈತ್ರಿಯನ್ನು ಹೊಂದಿದ್ದರು. ಅದರ ಕುರುಹಾಗಿಯೇ ಇಂದು ಮುಸ್ಲಿಂ ವಾಸ್ತುಶೈಲಿಯ ಲಕ್ಷಣಗಳು ಕೋಟೆಯಲ್ಲಿ ಕಂಡುಬರುತ್ತವೆ. ಕೋಟೆ ಗೋಡೆಯ ನಿರ್ಮಾಣಕ್ಕೆ ತಗಲುವ ವೆಚ್ಚವನ್ನು ಕಡಿತಗೊಳಿಸುವ ಉದ್ದೇಶದಿಂದ ಹೆಬ್ಬಂಡೆಗಳ ಮಧ್ಯೆಯೇ ಗೋಡೆಯನ್ನು ನಿರ್ಮಿಸಲಾಗಿದೆ. ಜೊತೆಗೆ ಹೆಬ್ಬಂಡೆಗಳನ್ನು ಕೊತ್ತಲಗಳನ್ನಾಗಿ ಬಳಸಿಕೊಂಡಿದ್ದರು ಎಂಬುದಕ್ಕೆ ಗೋಡೆಯ ಮಧ್ಯೆ ಹಾದುಹೋಗುವ ಹೆಬ್ಬಂಡೆಗಳ ಮೇಲೆ ವೃತ್ತ ಮತ್ತು ಚೌಕ

ಮಾದರಿಯ ಕೊತ್ತಲದ ಅವಶೇಷಗಳು ಕಂಡುಬರುತ್ತದೆ. ಬೆಟ್ಟದ ತಪ್ಪಲಿನಲ್ಲಿ ಒಂದೆಡೆ ಮಾತ್ರ ಅಂಡಾಕಾರದ ಬುರುಜು ಗೋಡೆಯ ಮಧ್ಯಭಾಗದಲ್ಲಿದೆ. ಈ ಕೋಟೆಯಲ್ಲಿರುವ ಮೂರು ಪ್ರವೇಶ ದ್ವಾರಗಳು ಸಹ ಭಿನ್ನವಾಗಿವೆ. ಮೊದಲ ದ್ವಾರದ ಎರಡು ಬದಿ ಬೃಹತ್ ಹೆಬ್ಬಂಡೆಗಳಿದ್ದು, ಅವುಗಳಿಗೆ ಹೊಂದಿಕೊಂಡು ಕಾವಲು ಮಂಟಪಗಳಿವೆ. ಎರಡನೆಯ ದ್ವಾರ ೧.೭೦ಮೀ. ಅಗಲ, ೬.೯೦ಮೀ. ದಪ್ಪ ೨.೧೦ಮೀ. ಎತ್ತರವಿದ್ದು, ಎರಡು ಬದಿಯಲ್ಲಿ ಕೊತ್ತಲಗಳಿವೆ. ಮೂರನೆಯ ದ್ವಾರ ಬೃಹತ್ ಕಲ್ಲಿನ ಸಮುಚ್ಚಯದ ಒಳಗೆ ಪ್ರವೇಶಿಸಿ ಹೊರ ಹೊಗುವಂತಹ ನೈಸರ್ಗಿಕ ನಿರ್ಮಿತಿಯಾಗಿದೆ. ಬೆಟ್ಟದ ತುದಿಯಲ್ಲಿ ಅರಮನೆ, ಅಧಿಕಾರಿ ವರ್ಗದ ಕಟ್ಟಡಗಳ ಅವಶೇಷಗಳನ್ನು ಯಾವುದು ಯಾವ ಕಟ್ಟಡದ್ದು ಎಂದು ಸ್ಪಷ್ಟವಾಗಿ ಗುರುತಿಸಲು ಸಾಧ್ಯವಾಗದಷ್ಟು ಹಾಳಾಗಿವೆ. ಬೆಟ್ಟದಲ್ಲಿ ಬೀಳುವ ಮಳೆಯ ನೀರು ಹೆಬ್ಬಂಡೆಯಲ್ಲಿರುವ ನೈಸರ್ಗಿಕ ಕಂದಕಕ್ಕೆ ಸೇರುವ ಹಾಗೆ ವ್ಯವಸ್ಥೆ ಮಾಡಿದ್ದು, ಕಂದಕದ ಸುತ್ತಲೂ ಕಲ್ಲು, ಇಟ್ಟಿಗೆ, ಗಾರೆಯಿಂದ ತಡೆಗೋಡೆಯನ್ನು ನಿರ್ಮಿಸಿದ್ದಾರೆ. ಹೆಬ್ಬಂಡೆಗೆ ಮೆಟ್ಟಿಲುಗಳನ್ನು ಸಣ್ಣದಾಗಿ ಕೊರೆದಿದ್ದು, ತುದಿಭಾಗವನ್ನು ಪ್ರವೇಶಿಸಬೇಕೆಂದರೆ ಈ ಮಾರ್ಗವನ್ನು ಹೊರತುಪಡಿಸಿದರೆ ಬೇರ ಯಾವುದೇ ಮಾರ್ಗಗಳು ಇಲ್ಲದಿರುವುದರಿಂದ ಶತ್ರುಗಳು ವೇಗವಾಗಿ ಬೆಟ್ಟ ಏರಲು ಸಾಧ್ಯವಾಗುತ್ತಿರಲಿಲ್ಲ. ಈ ಕಾರಣದಿಂದಲೇ ರಣಭೈರೇಗೌಡನು ಸುತ್ತಲೂ ಇದ್ದಂತಹ ಸಂಸ್ಥಾನಗಳ ಜೊತೆ ರಾಜ್ಯ ವಿಸ್ತರಣೆ ವಿಷಯದಲ್ಲಿ ಕಾದಾಟಕ್ಕೆ ಪದೇ ಪದೇ ಇಳಿಯುತ್ತಿದ್ದನು ಎನಿಸುತ್ತದೆ. ಏಕೆಂದರೆ ಒಂದು ಸಣ್ಣದಾದ ಸಂಸ್ಥಾನವೊಂದು ಯಲಹಂಕ ನಾಡಪ್ರಭುಗಳು, ಮಧುಗಿರಿ ಮಹಾನಾಡ ಪ್ರಭುಗಳು, ಪೆನುಗೊಂಡೆಯ ವಿಜಯನಗರದ ಅರಸರ ವಿರುದ್ಧ ತಿರುಗಿಬಿದ್ದಿದೆ ಎಂದರೆ ಆ ಸಂಸ್ಥಾನದ ರಕ್ಷಣಾ ಸಾಮರ್ಥ್ಯ ಏನಾಗಿತ್ತು ಎಂಬುದು ಪ್ರಮುಖವೆನಿಸಿಕೊಳ್ಳುತ್ತದೆ.

ಮುಖ್ಯ ಕೋಟೆಗೆ ರಕ್ಷಣೆ ನೀಡುವ ಉದ್ದೇಶದಿಂದ ಅಂದರೆ ಶತ್ರುಗಳ ಚಲನವಲನಗಳನ್ನು ಉತ್ತರ ದಿಕ್ಕಿನ ಬೋಳಿಬೆಟ್ಟದಲ್ಲಿ ಚೌಕಾಕಾರದ ಕೋಟೆಯನ್ನು ನಾಲ್ಕು ದಿಕ್ಕಿಗೂ ಚೌಕ ಮಾದರಿಯ ಕೊತ್ತಲಗಳಿರುವಂತೆ ನಿರ್ಮಿಸಿ ಅದರ ಪ್ರವೇಶ ದ್ವಾರವನ್ನು ದಕ್ಷಿಣ ದಿಕ್ಕಿಗೆ ಇಡಲಾಗಿದೆ. ಇದರ ನಿರ್ವಾಹಣೆಗಾಗಿ ಒಬ್ಬ ಕಿಲ್ಲೇದಾರನನ್ನು ನೇಮಿಸಲಾಗಿದೆ. ಈ ಕೋಟೆಯ ಮಧ್ಯಭಾಗದಲ್ಲಿ ಎತ್ತರವಾದ ಬುರುಜು, ಗೊಡೆಗೆ ಹೊಂದಿಕೊಂಡಂತೆ ನಾಲ್ಕು ವಸತಿ ಕಟ್ಟಡಗಳ ಅವಶೇಷಗಳಿವೆ. ಈ ಗೋಡೆಗೆ ಸಣ್ಣದಾದ ಆಕಾರವಿಲ್ಲದ ಕಾಡುಗಲ್ಲುಗಳನ್ನು ಬಳಸಿ ಸಡಿಲಗೊಳ್ಳದಂತೆ ಚಕ್ಕೆಗಳನ್ನು ಜೋಡಿಸಿದ್ದಾರೆ. ಗೋಡೆಯ ಹೊರಬದಿಯಲ್ಲಿ ನೈಸರ್ಗಿಕ ಕುಳಿ ಇರುವುದರಿಂದ ಹೆಬ್ಬಂಡೆಯ ಮೇಲೆ ಬೀಳುವ ಮಳೆನೀರು ಇವುಗಳಲ್ಲಿ ಸಂಗ್ರಹಗೊಳ್ಳುತ್ತಿತ್ತು. ಈ ಎರಡು ಬೆಟ್ಟಗಳ ಮಧ್ಯೆ ಇರುವ ಎರಡು ಕೆರೆಗಳು ಒಂದು ಬದಿಯಲ್ಲಿ ಜಲದುರ್ಗಗಳಂತೆ ರಕ್ಷಣೆ ನೀಡುತ್ತಿದ್ದವು. ಬೆಟ್ಟದಲ್ಲಿ ವಿಶಾಲ ಮೈದಾನ ಇಲ್ಲದಿರುವ ಕಾರಣ ಸಾಮಾನ್ಯ ಜನರು ಈ ಕೆರೆಗಳ ಸಮೀಪ ವಸತಿ ನಿವೇಶನಗಳನ್ನು ಹೊಂದಿರಬಹುದು. ಆದರೆ ಇಂದು ಪಟ್ಟಣ ಬೆಳೆದಿರುವುದರಿಂದ ಯಾವುದೇ ವಸತಿ ಅವಶೇಷಗಳು ಕಂಡುಬರುವುದಿಲ್ಲ.

೧೯. ಮಧುಗಿರಿ

ಗಂಗರ ಆರಂಭ ಕಾಲದಿಂದಲೂ ಮಧುಗಿರಿಯು ಪ್ರಾಮುಖ್ಯತೆ ಪಡೆದುಕೊಂಡಿತ್ತು. ಆದರೆ ಮಧುಗಿರಿ ಪಟ್ಟಣದಲ್ಲಿ ಜನವಸತಿ ಯಾವ ಕಾಲಘಟ್ಟದಿಂದ ಆರಂಭವಾಯಿತೆಂಬುದಕ್ಕೆ ನಿಖರವಾದ ಆಧಾರಗಳಿಲ್ಲ. ಏಕೆಂದರೆ ಕ್ರಿ.ಶ. ೧೧೫೧ರಲ್ಲಿ ಹೊಯ್ಸಳರ ೧ನೆಯ ನರಸಿಂಹನ ಕಾಲದಲ್ಲಿ ಮಧುಗಿರಿಯ ಪಾರ್ಶ್ವನಾಥ ಜಿನಾಲಯ ನಿರ್ಮಾಣಗೊಂಡಿತೆಂದು, ಅದೇ ರೀತಿ ಮಧುಗಿರಿಯ ಸಮೀಪವೇ ಇರುವ ಕಮ್ಮನಕೋಟೆ ಗ್ರಾಮದ ಗೌಡಿಕೆ ಮಾಡುತ್ತಿದ್ದ ಅವರ ವಂಶೀಕರು ಕ್ರಿ.ಶ. ೯೭೮ರ ಸುಮಾರಿನಲ್ಲಿ ಮದ್ದಗಿರಿಹಳ್ಳಿಯನ್ನು ನಿರ್ಮಿಸಿದರೆಂದೂ ಹೇಳುವಂತಹ[೮೧] ದಾಖಲೆಗಳೇ ಪ್ರಾಚೀನ ಕುರುಹುಗಳಾಗಿವೆ. ಇದರಿಂದ ೧೨ನೆಯ ಶತಮಾನದ ವೇಳೆಗೆ ಮಧುಗಿರಿ ಬೆಟ್ಟದ ತಪ್ಪಲಿನಲ್ಲಿ ಜನವಸತಿ ಇತ್ತೆಂದು ಸ್ಪಷ್ಟವಾಗುತ್ತದೆ. ಹಾಗಾಗಿ ಕ್ರಿ.ಶ. ೧೬೦೧ರಲ್ಲಿ ಇಮ್ಮಡಿ ಚಿಕ್ಕಪ್ಪಗೌಡ ಮಧುಗಿರಿಹಳ್ಳಿಯನ್ನು ಹೊಸದಾಗಿ ನಿರ್ಮಿಸಿ ಕೋಟೆ ಕಟ್ಟಿಸಿದನೆಂದು[೮೨] ಹೇಳುವ ಕಾವಲಮ್ಮ, ಯೋಗೀಶ್ವರಪ್ಪ, ಶ್ರೀನಿವಾಸ್ ಎಂ.ಡಿ. ಅವರ ಹೇಳಿಕೆಗಳು ಹಾಗೂ ಇಮ್ಮಡಿ ಚಿಕ್ಕಪ್ಪಗೌಡನ ಮಧುಗಿರಿ ಶಾಸನಗಳನ್ನು ಸಂದೇಹದಿಂದ ನೋಡಬೇಕಾಗುತ್ತದೆ. ಏಕೆಂದರೆ ಇಂತಹ ಅಭೇದ್ಯವಾದ ಏಕಶಿಲಾ ಬೆಟ್ಟವನ್ನು ತಮ್ಮ ರಕ್ಷಣೆಗಾಗಿ ಗಂಗ, ನೊಳಂಬ, ನಿಡುಗಲ್ಲು ಚೋಳ ಮನೆತನಗಳು ಬಳಸಿಕೊಂಡಿಲ್ಲ ಎಂಬುದು ಸತ್ಯಕ್ಕೆ ದೂರವಾದ ಸಂಗತಿ. ಕ್ರಿ.ಶ. ೧೬೦೧ರ ಮಧುಗಿರಿ ಶಾಸನ ಮಧುಗಿರಿ ಕೋಟೆಯು ಇಮ್ಮಡಿ ಚಿಕ್ಕಪ್ಪಗೌಡನಿಂದ ನಿರ್ಮಾಣವಾಯಿತೆದು ಉಲ್ಲೇಖಿಸಿದ ಮಾತ್ರಕ್ಕೆ ಅದೇ ಸತ್ಯ ಎಂದು ಒಪ್ಪಿಕೊಳ್ಳುವ ಅಗತ್ಯವೇನಿಲ್ಲ. ಏಕೆಂದರೆ ಯಾವುದೇ ಕೋಟೆಯ ನಿರ್ಮಾಣದ ಕಾಲವನ್ನು ಖಚಿತವಾಗಿ ಗುರುತಿಸಬೇಕೆಂದಾಗ ಅದರ ಲಕ್ಷಣಗಳನ್ನು ಮೊದಲು ಗಮನಿಸಿ ನಂತರ ಅದಕ್ಕೆ ಸಂಬಂಧಿಸಿದ ಚಾರಿತ್ರಿಕ ದಾಖಲೆಗಳು ಸರಿಹೊಂದುತ್ತವೆಯೇ ಎಂಬುದನ್ನು ಪರಿಶೀಲಿಸಬೇಕಾಗುತ್ತದೆ. ಆಗ ಮಾತ್ರ ಕೋಟೆಯ ಕಾಲಮಾನವನ್ನು ನಿಖರವಾಗಿ ಗುರುತಿಸಬುದು. ಉದಾಹರಣೆಗೆ ನಿಡುಗಲ್ಲು ಕೋಟೆಯು ಒಂದನೆಯ ಇರುಂಗೋಳನ ಕಾಲದಲ್ಲಿವಾಯಿತೆಂದು ಅಲ್ಲಿಯೇ ಇರುವ ಶಾಸನ ಉಲ್ಲೇಖಿಸುತ್ತದೆ. ಆದರೆ ಆ ಕೋಟೆಯ ಲಕ್ಷಣಗಳನ್ನು ಗಮನಿಸಿದರೆ ಕೇವಲ ಭೈರವನ ಕೋಟೆಯನ್ನು ಹೊರತು ಪಡಿಸಿ ಉಳಿದಂತಹ ಎಲ್ಲಾ ಸುತ್ತಿನ ಕೋಟೆ ಲಕ್ಷಣಗಳು ವಿಜಯನಗರ ಕಾಲಕ್ಕೆ ಸಂಬಂಧಿಸುತ್ತವೆ. ಆದುದರಿಂದ ಯಾವುದೇ ಕೋಟೆಯ ಕಾಲಮಾನವನ್ನು ನಿರ್ಧರಿಸುವಲ್ಲಿ ಶಾಸನಗಳೇ ಅಂತಿಮವಲ್ಲ ಎಂಬುದನ್ನು ಮೊದಲು ಗ್ರಹಿಸಿಕೊಂಡು ನಂತರ ಅಧ್ಯಯನಕ್ಕೆ ಇಳಿದರೆ ಕೋಟೆಗಳ ಚಾರಿತ್ರಿಕ ಕಾಲಘಟ್ಟವನ್ನು ಮತ್ತಷ್ಟು ಹಿಂದಕ್ಕೆ ಕೊಂಡೊಯ್ಯಬಹುದು. ಕೆಲವೊಮ್ಮೆ ಪ್ರಾಚೀನ ಮಣ್ಣಿನ ಕೋಟೆಯನ್ನು ಕೆಡವಿ ಅದಕ್ಕೆ ಕಲ್ಲಿನ ಹೊದಿಕೆಯನ್ನು ಮಾಡಿರಬಹುದು; ಆಗ ಕೋಟೆಯ ಲಕ್ಷಣಗಳನ್ನು ಸಹ ಸಂದೇಹದಿಂದ ನೋಡಬೇಕಾಗುತ್ತದೆ. ಅಂತಹ ಸಂದರ್ಭದಲ್ಲಿ ಜನಪದರಲ್ಲಿ ಕೋಟೆಯ ಬಗೆಗೆ ಉಳಿದುಕೊಂಡಿರುವ ಮೌಖಿಕ ಸಾಹಿತ್ಯವನ್ನು ಪರಿಗಣಿಸಿದರೆ ನೈಜ ಅಂಶಗಳು ಹೊರಬರುತ್ತವೆ.

ಒಟ್ಟಾರೆ ಇಮ್ಮಡಿ ಚಿಕ್ಕಪ್ಪಗೌಡನ ನಂತರ ಮುಮ್ಮಡಿ ಚಿಕ್ಕಪ್ಪಗೌಡನ ಕಾಲದಲ್ಲಿ ಕೋಟೆ ಮತ್ತಷ್ಟು ಬಲಿಷ್ಠಗೊಂಡಿತು. ಕ್ರಿ.ಶ. ೧೬೮೬ರಿಂದ ೧೬೯೩ ಅವಧಿಯಲ್ಲಿ ಪುನಃ ಚಿಕ್ಕದೇವರಾಜ ಒಡೆಯರು ಕಪ್ಪಗುಂಡಿನ ಬತೇರಿ, ರಾಮಭದ್ರ ಮತ್ತು ಭೂತನಾಥ ಎಂಬ ಫಿರಂಗಿಗಳನ್ನು[೮೩] ಮಾಡಿಸಿ ಇದನ್ನು ಅಭೇಧ್ಯ ದರ್ಗವನ್ನಾಗಿ ಮಾರ್ಪಡಿಸಿದನೆಂದು ಅಲ್ಲಿಯೇ ಇರುವ ಶಾಸನ ಉಲ್ಲೇಖಿಸುತ್ತದೆ. ಕುಂಭಿದುರ್ಗದ ಕಣಜವನ್ನು ೧೭೦೦ರಲ್ಲಿ[೮೪] ಮೈಸೂರು ಒಡೆಯರಿಂದ ನಿರ್ಮಾಣಗೊಂಡಿತೆಂದು ಕಣಜದ ತೊಲೆಯಲ್ಲಿರುವ ಶಾಸನದಿಂದ ಸ್ಪಷ್ಟವಾಗುತ್ತದೆ. ಅದೇ ರೀತಿ ಹೈದರಾಲಿ ಮೈಸೂರು ಬಾಗಿಲನ್ನು[೮೫] ನಿರ್ಮಿಸಿದನೆಂದು ಅದೇ ದ್ವಾರದಲ್ಲಿರುವ ಶಾಸನ ತಿಳಿಸುತ್ತದೆ. ಹೀಗೆ ವಿವಿಧ ಕಾಲಘಟ್ಟಗಳಲ್ಲಿ ಕೋಟೆಯ ಹಲವು ಭಾಗಗಳು ನಿರ್ಮಾಣಗೊಳ್ಳುತ್ತಾ ಅವರ ಹೆಸರಿನಿಂದಲೇ ಇಂದಿಗೂ ಕರೆಯಲ್ಪಡುತ್ತಿರುವುದು ಅವುಗಳ ಕಾಲಮಾನವನ್ನು ಗುರುತಿಸಲು ನೆರವಾಗುತ್ತಿವೆ. ಮದವೇರಿದ ಆನೆಯೊಂದು ತನ್ನ ಎರಡೂ ಕಾಲಗಳನ್ನು ಮೇಲಕ್ಕೆತ್ತಿದರೆ ಅದರ ಹಿಂಭಾಗ ಹೇಗೆ ಕಾಣುತ್ತದೋ ಆ ಮಾದರಿಯಲ್ಲಿ ಇಡೀ ಬೆಟ್ಟ ಕಾಣುತ್ತದೆ. ಆದುದರಿಂದ ಮದವೇರಿದ ಬೆಟ್ಟದಂತಿರುವ ಗಿರಿಯೇ ಮದ್ದಗಿರಿ ಆಗಿರಬಹುದು. ಒಂದು ವೇಳೆ ಬೆಟ್ಟದ ತುಂಬ ಜೇನಿನ ಗೂಡುಗಳು ಇದ್ದದ್ದರಿಂದ ಮಧುಗಿರಿ ಎಂಬ ಹೆಸರು ಬಂದಿದೆ ಎಂದಾದರೆ ತುಮಕೂರು ಜಿಲ್ಲೆಯಲ್ಲಿ ಹಲವು ಬೆಟ್ಟಗಳಲ್ಲಿ ಇಂದಿಗೂ ಹೆಚ್ಚಾಗಿ ಜೇನಿನ ಗೂಡುಗಳು ಕಂಡುಬರುತ್ತವೆ. ಹಾಗೆಂದ ಮಾತ್ರಕ್ಕೆ ಎಲ್ಲಾ ಬೆಟ್ಟಗಳನ್ನು ಮಧು ಎಂದರೆ ಜೇನು ಗಿರಿ ಎಂದರೆ ಬೆಟ್ಟ ಎಂಬ ಹಿನ್ನೆಲೆಯಲ್ಲೇ ನೋಡಬೇಕಾಗುತ್ತದೆ. ಅಲ್ಲದೇ ಈಗಿರುವ ಮಧುಗಿರಿ ಎಂಬ ಹೆಸರು ೧೯೨೭ರ ನಂತರವೇ ಮದ್ದಗಿರಿ ಎಂಬುದಕ್ಕೆ ಪರ್ಯಾಯವಾಗಿ ನಾಮಕರಣಗೊಂಡಿದ್ದು[೮೬] ಹಾಗಾಗಿ ಮಧುಗಿರಿ ಎಂಬುಕ್ಕೆ ಸ್ಥಳನಾಮ ವಿಶ್ಲೇಷಣೆ ಮಾಡುವುದಕ್ಕೆ ಬದಲಾಗಿ ಮದ್ದಗಿರಿ ಎಂಬುದಕ್ಕೆ ಸ್ಥಳನಾಮ ನಿಷ್ಪತ್ತಿಯನ್ನು ಹುಡುಕಿದಾಗ ಮಾತ್ರ ಕೋಟೆ ನಿರ್ಮಾಣಕ್ಕೆ ಇಲ್ಲವೇ ಜನವಸತಿ ಇತ್ತೆಂಬುದಕ್ಕೆ ಪೂರಕವಾದ ಮಾಹಿತಿ ಸಿಗುತ್ತದೆ. ಸಹಜವಾಗಿ ಇಡೀ ಬೆಟ್ಟ ಮದವೇರಿದ ಆನೆಯಂತೆ ಕಾಣುವುದರಿಂದ ಮದ್ದಗಿರಿ ಎಂಬ ಹೆಸರು ಬಂದಿರಬೇಕು. ಇಲ್ಲವೇ ಮದ್ದು ಗುಂಡುಗಳನ್ನು ಇಲ್ಲಿ ತಯಾರಿಸುವ ಘಟಕ ಇದ್ದಿದ್ದರಿಂದ ಮದ್ದು ಗುಂಡು ತಯಾರಾಗುತ್ತಿದ್ದ ಪ್ರದೇಶವೇ ಜನಪದರ ಆಡುಮಾತಿನಲ್ಲಿ ಮದ್ದಗಿರಿ ಎಂದಾಗಿರಬಹುದು. ಮದ್ಗಿರಿ, ಮದ್ದಗಿರಿ ಎಂಬ ಪ್ರಾಚೀನ ಹೆಸರು ಕಾಲಾಂತರದಲ್ಲಿ ಪ್ರಸ್ನನ್ನಗಿರಿ ಎಂದೂ ಮೈಸೂರು ಅರಸರಿಂದ[೮೭] ಪತೇಹಾಬಾದ್ ಎಂದು ಟಿಪ್ಪುವಿನಿಂದ[೮೮] ಕರೆಯಲ್ಪಡುತ್ತಿತ್ತು. ಅಲ್ಲದೆ ಈ ಪ್ರದೇಶವು ಕೃಷ್ಣಗಿರಿ, ಮಾಧವಗಿರಿ ಎಂಬ ಹೆಸರುಗಳಿಂದಲೂ ಪ್ರಸಿದ್ಧವಾಗಿದೆ.

ಮಧುಗಿರಿಯ ಕೋಟೆಯ ಲಕ್ಷಣಗಳು

ಮಧುಗಿರಿಯ ಏಕಶಿಲಾ ಬೆಟ್ಟದ ರಚನೆಯು ನೈಸರ್ಗಿಕವಾಗಿ ಅಭೇದ್ಯವಾದ ಗಿರಿದುರ್ಗದಂತಿದ್ದು, ಗೋಡೆಯ ವಿಸ್ತಾರವನ್ನು ಕಡಿಮೆಗೊಳಸಿದೆ. ಕೆಲವೆಡೆ ಬೃಹತ್ ಹೆಬ್ಬಂಡೆ, ಗುಂಡುಗಳ ಮಧ್ಯದಲ್ಲೇ

ಕೋಟೆ ಗೋಡೆ ಹಾದು ಹೋಗಿರುವುದರಿಂದ ಫಿರಂಗಿಗಳ ಹೊಡೆತಕ್ಕೂ ಗೋಡೆ ಹಾಳಾಗದೆ ಸುಭದ್ರವಾಗಿರುವಂತಹ ಅನುಕೂಲವನ್ನು ಕಲ್ಪಿಸಿತ್ತು. ಕೋಟೆಗೆ ಗ್ರಾನೈಟ್ ಶಿಲೆಯ ಆಯತ, ಚೌಕ, ಸೈಜುಕಲ್ಲು ಹಾಗೂ ಕಾಡುಗಲ್ಲುಗಳನ್ನು ಬಳಸಲಾಗಿದೆ. ನೆಲಗೋಟೆಗೆ ಹೆಚ್ಚಾಗಿ ಕಾಡುಗಲ್ಲುಗಳನ್ನು ಬಳಸಲಾಗಿದ್ದು, ಹೊರ ಭಾಗದಲ್ಲಿ ಗೋಡೆ ಸಡಿಲಗೊಳ್ಳದಂತೆ ಗಾರೆಯನ್ನು ಕಲ್ಲುಗಳ ಮಧ್ಯೆ ಲೇಪನ ಮಾಡಲಾಗಿದೆ. ಮಧ್ಯಭಾಗದಲ್ಲಿರುವ ಗೋಡೆಗೆ ಮಾತ್ರ ಆಯತ ಮಾದರಿಯ ಉದ್ದನೆಯ ಕಲ್ಲುಗಳನ್ನು ನುಣುಪುಗೊಳಿಸಿ ಬಳಸಲಾಗಿದೆ. ಖಜಾನೆ ದ್ವಾರದ ಗೋಡೆಯ ಹೊರ ಮತ್ತು ಒಳಭಾಗದಲ್ಲಿ ಉದ್ದನೆಯ ಕಲ್ಲುಗಳು ಹೊರ ಚಾಚಿಕೊಂಡಿರುವುದನ್ನು ಗಮನಿಸಿದರೆ ಬಹುಶಃ ಸೈನಿಕರಿಗೆ ದೈಹಿಕ ಕಸರತ್ತು ನಡೆಸಲು ಅದನ್ನು ಬಳಸಿಕೊಂಡಂತೆ ಕಾಣುತ್ತದೆ. ಏಕೆಂದರೆ ಕೋಟೆ ಕಾಳಗದ ಸಂದರ್ಭದಲ್ಲಿ ಸೈನಿಕರು ಶತ್ರುಗಳ ದಾಳಿಯ ನಡುವೆಯೂ ಗೋಡೆಯನ್ನು ಏರುವಂತಹ ತಂತ್ರವನ್ನು ಮೈಗೂಡಿಸಿಕೊಂಡಿರಬೇಕಾಗುತ್ತದೆ. ಇಂತಹ ರಕ್ಷಣಾ ತಂತ್ರಗಳನ್ನು ಗಮನಿಸಿದರೆ ಕೃಷ್ಣದೇವರಾಯನ ದಿನಚರಿ ಮತ್ತು ಆಮುಕ್ತಮಾಲ್ಯದ ಕೃತಿಯ ಉಲ್ಲೇಖವಿರುವ ಕೋಟೆ ಕಾಳಗಕ್ಕೆ ವಿಶೇಷ ತರಬೇತಿ ಪಡೆದ ಬೇಡ ಪಡೆಯನ್ನು ಪಡೆಯುತ್ತಿದ್ದ ಎಂಬುದನ್ನು ಇವು ಖಚಿತಪಡಿಸುತ್ತವೆ. ತುದಿ ಭಾಗದಲ್ಲಿ ಮಾತ್ರ ಕೇವಲ ಚಪ್ಪಟೆಯಂತಹ ಸೈಜುಗಲ್ಲುಗಳನ್ನು ಬಳಸಿ ಗೋಡೆಯನ್ನು ನಿರ್ಮಿಸಲಾಗಿದೆ. ಆದರೆ ಗೋಡೆಗಳು ಇಳಿಜಾರಾದ ಸ್ಥಳಗಳಲ್ಲಿ ಇರುವುದರಿಂದ ಅವುಗಳಲ್ಲಿ ಮಳೆಯ ನೀರು ಶೇಖರಣೆಗೊಳ್ಳದಂತೆ ತಳಪಾಯದಲ್ಲಿ ಸಣ್ಣ ರಂಧ್ರಗಳನ್ನು ಬಿಟ್ಟಿದ್ದಾರೆ. ಕೈಪಿಡಿ ಗೋಡೆಯಲ್ಲೂ ಸಹ ನೀರು ನಿಲ್ಲಬಾರದೆಂದು ಅಟ್ಟಾಲಕವನ್ನು ಮೆಟ್ಟಿಲೋಪಾದಿಯಲ್ಲಿ ನಿರ್ಮಿಸಿ ಅದನ್ನೇ ಸೈನಿಕರು ಪಹರೆ ಕಾಯಲು ಹಾದಿಯನ್ನಾಗಿ ಮಾಡಿಕೊಂಡಿದ್ದಾರೆ. ಆದರೆ ನೆಲಗೋಟೆಯಲ್ಲಿ ಮಾತ್ರ ಸಮತಟ್ಟಾದ ಮೈದಾನ ಇರುವುದರಿಂದ ಸೈನಿಕರು ಓಡಾಡಲು ಅಟ್ಟಾಲಕವನ್ನು ಮತ್ತು ಆಯುಧೋಪಕರಣಗಳನ್ನು ಇಡಲು ವೇದಿಕೆಯನ್ನಾಗಿ ಬಳಸಿಕೊಳ್ಳಲಾಗಿದೆ. ಗೋಡೆಯು ಫಿರಂಗಿಯ ಮದ್ದು ಗುಂಡುಗಳ ಹೊಡೆತಕ್ಕೆ ಹಾಳಾಗಬಾರದೆಂದು ಒಳಬದಿಯಲ್ಲಿ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಬಳಸಿ ಇಳಿವೊರೆಯನ್ನು ನಿರ್ಮಿಸಲಾಗಿದೆ. ಇಳಿವೊರೆಯು ಸಹ ಮಳೆನೀರಿನಲ್ಲಿ ಕೊಚ್ಚಿಹೋಗದಂತೆ ಅದಕ್ಕೆ ಮತ್ತೊಂದು ಬದಿಯಲ್ಲಿ ಕಲ್ಲಿನ ಹೊದಿಕೆಯನ್ನು ನೀಡಿ ಅದನ್ನೇ ಸೈನಿಕರು ಓಡಾಡಲು, ಆಯುಧೋಪಕರಣ ಇಡಲು ವೇದಿಕೆಯನ್ನಾಗಿ ಬಳಸಿಕೊಳ್ಳುವಂತಹ ತಂತ್ರವನ್ನು ಮಾಡಿದ್ದಾರೆ. ಬೆಟ್ಟದಲ್ಲಿ ಇಳಿಜಾರಾದ ಕಡೆ ನಿರ್ಮಾಣಗೊಂಡ ಗೋಡೆ ತ್ರಿಭುಜ ಮಾದರಿಯಲ್ಲಿದೆ. ಅಂದರೆ ತಳಪಾಯವನ್ನು ಅಗಲಗೊಳಿಸಿ ಮೇಲೆ ಹೋದಂತೆ ಗೋಡೆಯನ್ನು ಕಿರಿದಾಗಿಸಿದ್ದಾರೆ. ಏಕೆಂದರೆ ಗೋಡೆ ಮೇಲೆ ಹೋದಂತೆ ಹೆಚ್ಚು ಭಾರವನ್ನು ಹೊಂದಿದ್ದರೆ ಅದು ಕುಸಿಯುವ ಸಂಭವ ಇರುತ್ತದೆ. ಆ ಕಾರಣಕ್ಕಾಗಿ ಇಳಿಜಾರಾದ ಕಡೆ ಗೋಡೆಯನ್ನು ತ್ರಿಭುಜ ಮಾದರಿಯಲ್ಲಿ ನಿರ್ಮಿಸಲಾಗುತ್ತದೆ. ಹೀಗೆ ತ್ರಿಭುಜ ಮಾದರಿಯಲ್ಲಿದ್ದರೂ ಸಹ ನೆಲಗೋಟೆಯಿಂದ ತುದಿಯ

ಭಾಗದವರೆಗೂ ಹಲವು ತಿರುವುಗಳಿಂದ ಕೂಡಿರುವುದು ವಿಶೇಷ ಎನಿಸುತ್ತದೆ. ಕೆಲವೊಮ್ಮೆ ಶತ್ರುಗಳನ್ನು ಮೋಸಗೊಳಿಸುವ ಉದ್ದೇಶದಿಂದಲೂ ಹೀಗೆ ಹಲವು ತಿರುವುಗಳಿಂದ ಗೋಡೆಯನ್ನು ನಿರ್ಮಿಸಲಾಗುತ್ತದೆ. ಆಗ ಶತ್ರುಗಳಿಗೆ ಕೋಟೆಯಲ್ಲಿ ಯಾವ ಕಡೆ ದ್ವಾರ ಇದೆ ಎಂಬುದು ತಿಳಿಯದೆ ಗೊಂದಲಕ್ಕೀಡಾಗುವಂತೆ ಮಾಡಿ ಅವರ ಸಮಯವನ್ನು ವ್ಯರ್ಥಗೊಳಿಸುವ ಉದ್ದೇಶವೂ ಇದರ ಹಿಂದೆ ಇರುತ್ತದೆ. ಇಳಿಜಾರಿರುವ ಸ್ಥಳದಲ್ಲಿ ಗೋಡೆ ಕುಸಿಯಬಾರದೆಂದು ತಳಪಾಯದ ಹೊರಬದಿಯಲ್ಲಿ ಕಬ್ಬಿಣದ ಮೊಳೆಗಳನ್ನು ಜೋಡಿಸಲಾಗಿದೆ. ಕೆಲವೆಡೆ ಹೆಬ್ಬಂಡೆಗಳ ಮೇಲಿನ ಗೋಡೆಯ ತಳಪಾಯ ಕುಸಿದಾಗ ಅದರ ಉಳಿದ ಭಾಗ ಪೂರ್ಣ ಬೀಳದಿರಲೆಂದೂ ನಂತರದ ಕಾಲದಲ್ಲಿ ತಳಭಾಗಕ್ಕೆ ಇಟ್ಟಿಗೆಯನ್ನು ಜೋಡಿಸಿ ಪುನಃ ಇಟ್ಟಿಗೆ ಗೋಡೆಯೂ ಸಹ ಸಡಿಲಗೊಳ್ಳದಿರಲೆಂದು ಅದರ ಅಂಚಿಗೆ ಕಬ್ಬಿಣದ ಮೊಳೆಗಳನ್ನು ತಡೆಗೋಡೆಯಾಗಿ ಬಳಸಲಾಗಿದೆ. ಈ ರಚನಾ ಕ್ರಮವನ್ನು ಗಮನಿಸಿದರೆ ಇವರು ಗೋಡೆಯ ರಕ್ಷಣೆಯ ವಿಷಯದಲ್ಲಿ ಕಾಲ ಕಾಲಕ್ಕೆ ತೆಗೆದುಕೊಳ್ಳುತ್ತಿದ್ದ ಮುನ್ನೆಚ್ಚರಿಕಾ ಕ್ರಮಗಳು ಅರಿವಿಗೆ ಬರುತ್ತವೆ. ಶತ್ರುಗಳ ಚಲನವಲನವನ್ನು ವೀಕ್ಷಿಸಲು ಹಾಗೂ ಅವರ ಮೇಲೆ ಪ್ರತಿ ದಾಳಿ ಮಾಡಲು ಅನುಕೂಲವಾಗಲೆಂದು ಗೋಡೆಯ ಮೇಲೆ ಕೈಪಿಡಿ ಗೋಡೆಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ.

ಕೋಟೆಯನ್ನು ದುರ್ಭೇದ್ಯಗೊಳಿಸಿ ಶತ್ರುಗಳ ಮೇಲೆ ಫಿರಂಗಿಗಳಿಂದ ಮದ್ದು ಗುಂಡು, ಬಿಲ್ಲುಗಳಿಂದ ಬಾಣ, ಬಂದೂಕುಗಳಿಂದ ಗುಂಡುಗಳನ್ನು ಪ್ರಯೋಗಿಸಲು ಕೈಪಿಡಿ ಗೋಡೆಗಳ ಮಧ್ಯೆ ಚೌಕ, ಆಯತ, ಬಾಣದ ಮೊನೆಯಾಕಾರದ ಕಿಂಡಿಗಳನ್ನು ಬಿಟ್ಟಿದ್ದಾರೆ. ಅವುಗಳಲ್ಲಿ ಒಮ್ಮೆಗೆ ಆರು ದಿಕ್ಕುಗಳ ಚಲನವಲನಗಳನ್ನು ವೀಕ್ಷಿಸಬಹುದಾಗಿತ್ತು. ಕೆಲವೊಮ್ಮೆ ಈ ಕಿಂಡಿಗಳನ್ನು ಶತ್ರುಗಳು ಗೋಡೆ ಏರಲು ಪ್ರಯತ್ನಿಸಿದಾಗ ಕಾದ ಎಣ್ಣೆ, ಅಂಬಲಿ, ನೀರನ್ನು ಸುರಿಯುವುದಕ್ಕಾಗಿಯೂ ಬಳಸಲಾಗುತ್ತಿತ್ತು. ಕೆಲವೆಡೆ ಮುಸ್ಲಿಂ ಶೈಲಿಯಲ್ಲಿ ತೆನೆಗಳ ಒಳಗೆ ಕಮಾನುಗಳನ್ನು ಬಿಡಲಾಗಿದ್ದು, ಅವುಗಳಲ್ಲಿಯೇ ಫಿರಂಗಿಗಳನ್ನು ಇಟ್ಟು ಶತ್ರುಗಳ ಮೇಲೆ ಪ್ರಯೋಗಿಸುತ್ತಿದ್ದರು. ಗೋಡೆಗಳ ಮೇಲ್ಭಾಗದಲ್ಲಿಯೇ ಮದ್ದು ಗುಂಡಗಳನ್ನು ಶೇಖರಿಸಲು ಗಾರೆ ಮತ್ತು ಇಟ್ಟಿಗೆಯಿಂದ ಆಧುನಿಕ ಬಂಕರ್‌ಗಳಂತೆ ಸಣ್ಣದಾದ ಕೋಣೆಗಳನ್ನು ನಿರ್ಮಿಸಲಾಗಿದೆ. ಆ ಕೋಣೆಗೆ ಆರ್ಚ್ ಮಾದರಿಯ ದ್ವಾರ ಇರುವುದರಿಂದ ಅವುಗಳನ್ನು ಕೇವಲ ಕೋಟೆ ಕಾಳಗದ ಸಂದರ್ಭದಲ್ಲಿ ಮಾತ್ರ ಬಳಸಿಕೊಳ್ಳಲಾಗುತ್ತಿತ್ತು. ಏಕೆಂದರೆ ಕೋಟೆ ಕಾಳಗದ ಸಂದರ್ಭದಲ್ಲಿ ಎಲ್ಲಿಂದಲೊ ಪ್ರತಿ ಬಾರಿಯು ಆಯುಧೋಪಕರಣಗಳನ್ನು ಗೋಡೆಗಳ ಬಳಿ ತಂದು ಶತ್ರುಗಳ ಮೇಲೆ ದಾಳಿ ನಡೆಸಿದರೆ ಅವರಿಗೆ ಸಮಯಾವಕಾಶವನ್ನು ತಾವಾಗಿಯೇ ಕಲ್ಪಿಸಿಕೊಟ್ಟಾಂತಾಗುತ್ತದೆ. ಆದುದರಿಂದ ಗೋಡೆಗಳ ಬಳಿಯೇ ಆಯುಧೋಪಕರಣಗಳು ಸಿಗುವಂತೆ ಅಲ್ಲಿಯೆ ಬಂಕರ್‌ಗಳನ್ನು ಗೋಡೆಯ ಉದ್ದಕ್ಕೂ ನಿರ್ಮಿಸಲಾಗಿದೆ. ವಿಶೇಷವಾಗಿ ಈ ಕೋಟೆಯಲ್ಲಿ ಗೋಡೆಯ ಎಲ್ಲಾ ದಿಕ್ಕುಗಳಿಂದಲೂ ಒಮ್ಮೆಯೇ ಶತ್ರುಗಳ ಪ್ರತಿ ದಾಳಿ ನಡೆಸಲು ಅನುಕೂಲವಾಗಲೆಂದು ಆಯತ, ಚೌಕ ವೃತ್ತ

ಗಜಪುಷ್ಪಾಕಾರ ಹಾಗೂ ಆಂಗ್ಲ ಆಕ್ಷರವಾದ 'ಟಿ' ಮಾದರಿಯಲ್ಲಿ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಕೊತ್ತಲಗಳಲ್ಲಿ ವಿಶೇಷವಾಗಿ ಹೆಚ್ಚಾಗಿ ಫಿರಂಗಿ ಕಿಂಡಿಗಳು ಕಂಡುಬರುವುದನ್ನು ಗಮನಿಸಿದರೆ ಇಲ್ಲಿ ಮಾತ್ರ ಫಿರಂಗಿಗಳನ್ನು ಬಳಸುತ್ತಿದ್ದರು. ಅದೇ ರೀತಿ ಕೋಟೆಯಲ್ಲಿ ಎತ್ತರವಾದ ಗುಂಡುಗಳ ಮೇಲೆ ಬತೇರಿಗಳನ್ನು ನಿರ್ಮಿಸಿದ್ದು, ಅದರಲ್ಲಿ ಚಿಕ್ಕದೇವರಾಜ ಒಡೆಯರಿಂದ ನಿರ್ಮಾಣಗೊಂಡ ಕಪ್ಪು ಗುಂಡಿನ ವೃತ್ತಾಕಾರದ ಬತೇರಿಯು ಬಹುದೂರದಲ್ಲಿ ಬರುವಂತಹ ಶತ್ರುಗಳ ಮೇಲೆ ಫಿರಂಗಿಗಳನ್ನು ಬಳಸಲು ಅವಕಾಶವನ್ನು ಕಲ್ಪಿಸಿದಂತಿದೆ. ಇದು ಎತ್ತರವಾದ ಗುಂಡುಗಳ ಮೇಲೆ ನಿರ್ಮಿಸಿ ಅದರ ಮೇಲೇರಲು ಮೆಟ್ಟಿಲು ಮತ್ತು ಪ್ರವೇಶ ದ್ವಾರವನ್ನು ಮಾಡಿದ್ದಾರೆ. ಅದರ ಮೇಲ್ಭಾಗ ಆಯುಧೋಪಕರಣಗಳನ್ನು ಇಡಲು ಕೈಪಿಡಿ ಗೋಡೆಯವರೆಗೂ ಮಣ್ಣನ್ನು ಸುರಿದು ಅದರ ಮೇಲೆ ಹಾಸಿದ ಹಾಸುಗಲ್ಲಿಗೆ ಗಾರೆಯನ್ನು ಲೇಪನ ಮಾಡಲಾಗಿದೆ. ಬತೇರಿಯ ಮೇಲಿಂದ ಸುಮಾರು ೫ ಕೀ.ಮೀ.ಗೂ ದೂರದ ಪ್ರದೇಶ ಕಾಣಿಸುವುದರಿಂದ ಶತ್ರುಗಳ ಮೇಲೆ ಫಿರಂಗಿಯನ್ನು ಪ್ರಯೋಗಿಸಲು ಫಿರಂಗಿ ಕಿಂಡಿಗಳನ್ನು ಬಿಡಲಾಗಿದೆ. ಸಾಮಾನ್ಯವಾಗಿ ಯಾವುದೇ ಕೋಟೆಗೆ ಗೋಡೆ ಎಷ್ಟೇ ಅಭೇದ್ಯವಾಗಿದ್ದರೂ ಪ್ರವೇಶ ದ್ವಾರ ಮತ್ತು ದಿಡ್ಡಿ ಬಾಗಿಲುಗಳು ಅಭೇದ್ಯವಾಗಿಲ್ಲ ಎಂದರೆ ಅದು ಬಹುಬೇಗ ಶತೃಗಳ ವಶವಾಗುತ್ತಿತ್ತು. ಆದುದರಿಂದ ಈ ಕೋಟೆಯಲ್ಲಿ ೧೫ಕ್ಕೂ ಹೆಚ್ಚು ಪ್ರವೇಶ ದ್ವಾರಗಳಿವೆ. ಪಟ್ಟಣ ಬೆಳೆದಂತೆಲ್ಲಾ ಕೋಟೆಯು ಸಹ ವಿಸ್ತರಿಸಲ್ಪಟ್ಟಿದೆ ಎಂಬುದಕ್ಕೆ ನೆಲಗೋಟೆಯ ಅನತಿ ದೂರದಲ್ಲಿ ಡಂಗೂರದ ಬಾಗಿಲಿದೆ. ಅದರ ಎರಡೂ ಬದಿ ಕೊತ್ತಲಗಳಿವೆ. ವಿಸ್ತರಣೆಗೊಂಡಿರುವ ನೆಲಗೋಟೆಯು ಮೂರು ಮುಖ್ಯದ್ವಾರಗಳಲ್ಲಿ ಇಂದು ಕೇವಲ ಡಂಗೂರದ ಬಾಗಿಲು ಮಾತ್ರ ಉಳಿದುಕೊಂಡಿದೆ. ಉಳಿದೆರಡು ದ್ವಾರಗಳು ಇಂದು ಪಟ್ಟಣದ ವಿಸ್ತರಣೆಯಾದಂತೆ ನೆಲಸಮಗೊಂಡಿವೆ. ಆದರೂ ಅವು ಇದ್ದವೆಂಬುದಕ್ಕೆ ಇಂದಿಗೂ ಕೋದಂಡರಾಮನಿಗೆ ನೀರಿಡುವ ಆಚರಣೆಯ ಸಂದರ್ಭದಲ್ಲಿ ಡೂಮ್ ಲೈಟ್ ಸರ್ಕಲ್ ಬಳಿ ಇತ್ತೆಂದು ಹೇಳುವ ಪೆನುಗೊಂಡೆ ದ್ವಾರದಲ್ಲಿ ಬಂದು ಪೂಜಾ ಕೈಂಕರ್ಯಗಳನ್ನು ನೆರವೇರಿಸಿದ ನಂತರವೇ ಮುಂದಿನ ಕೆಲಸ ಕಾರ್ಯಗಳನ್ನು ಮಾಡಲಾಗುತ್ತದೆ. ಇದನ್ನು ಇಂದಿಗೂ ಪ್ರತಿ ವರ್ಷ ಮಾಡಿಕೊಂಡು ಬರುತ್ತಿದ್ದಾರೆ. ಮತ್ತೊಂದು ದ್ವಾರವು ಇಂದು ಕೋಟೆ ಆಂಜನೇಯ ದೇವಲಯದ ಬಳಿ ಇತ್ತೆಂದು ಆ ಕೋಟೆ ಆಂಜನೆಯ ಎಂಬ ಹೆಸರಿನಿಂದಲೇ ಸ್ಪಷ್ಟವಾಗುತ್ತದೆ. ಒಟ್ಟಾರೆ ಕೋಟೆಯಲ್ಲಿರುವ ೨೧ ದ್ವಾರಗಳು ಸಹ ವಿಭಿನ್ನವಾದ ರಕ್ಷಣಾ ತಂತ್ರಗಳಿಂದ ರೂಪುಗೊಂಡಿವೆ. ಇವು ಜಿಗ್‌ಜಾಗ್ ಇಲ್ಲವೆ ಆಂಗ್ಲ ಅಕ್ಷರಗಳಾದ 'ಎಲ್' ಮತ್ತು 'ಯು' ಆಕಾರದಲ್ಲಿ ಹಲವು ತಿರುವುಗಳಿಂದ ಕೂಡಿವೆ. ಬೊಕ್ಕಸದ ದ್ವಾರ ಮತ್ತು ಬಂಡಿತಿಮ್ಮನ ದ್ವಾರಗಳನ್ನು ಪ್ರವೇಶಿಸಬೇಕಾದರೆ ಬೇರೊಂದು ಕಿರಿದಾದ ತಿರುವಿನಿಂದ ಕೂಡಿದ ದ್ವಾರದ ಮೂಲಕ ಪ್ರವೇಶಿಸಬೇಕಾಗುತ್ತದೆ. ಅಂದರೆ ಪ್ರವೇಶ ದ್ವಾರದಲ್ಲಿ ಕಿರಿದಾದ ಸ್ಥಳಾವಕಾಶ ಇದ್ದರೆ ಶತ್ರುಗಳ ಮೇಲೆ ಕೋಟೆ ಗೋಡೆಯ ಮೇಲಿಂದ ಸುಲಭವಾಗಿ ಪ್ರತಿದಾಳಿ ಮಾಡಬಹುದೆಂಬ

ಉದ್ದೇಶಕ್ಕಾಗಿ ಈ ತಂತ್ರವನ್ನು ಬಳಸುತ್ತಿದ್ದರು. ಏಕೆಂದರೆ ಕಿರಿದಾದ ಸ್ಥಳದಲ್ಲಿ ಎರಡೂ ಕಡೆ ಎತ್ತರದ ಗೋಡೆ ಇದ್ದಾಗ ಶತೃಗಳಿಗೆ ತಪ್ಪಿಸಿಕೊಳ್ಳಲು ಅವಕಾಶ ಇಲ್ಲದಂತೆ ಮಾಡುತ್ತದೆ. ಶತ್ರುಗಳಿಗೆ ಮೋಸಹೋಗುವಂತೆ ಮಾಡುವ ಉದ್ದೇಶದಿಂದ ಮುಖ್ಯ ದ್ವಾರವನ್ನು ಪ್ರವೇಶಿಸಲು ಮತ್ತೊಂದು ಕಿರಿದಾದ ದ್ವಾರದ ಮೂಲಕ ಒಳ ಪ್ರವೇಶಿಸುವಂತೆ ಮಾಡಿದ್ದಾರೆ. ಹೈದರ್-ಟಿಪ್ಪುವಿನ ಕಾಲದಲ್ಲಿ ನಿರ್ಮಾಣಗೊಂಡ ಇಲ್ಲವೇ ಜೀರ್ಣೋದ್ಧಾರಗೊಂಡ ದ್ವಾರಗಳು ಗಾರೆಯಿಂದ ಲೇಪನಗೊಂಡು ತೆನೆ ಮತ್ತು ಹೂಬಳ್ಳಿಗಳ ಕುಸುರಿ ಕೆತ್ತನೆಯನ್ನು ಹೊಂದಿವೆ. ಭೀಮನ ದೋಣೆ ನಂತರ ಬರುವ ಪಶ್ಚಿಮ ದ್ವಾರ ಹೈದರನ ಕಾಲದ್ದೆಂದೂ, ಕಪ್ಪಗುಂಡಿನ ದ್ವಾರ ಚಿಕ್ಕದೇವರಾಜ ಒಡೆಯರ ಕಾಲದ್ದೆಂದೂ ಆ ದ್ವಾರ ಪಟ್ಟಿಕೆಗಳಲ್ಲಿ ಇರುವಂತಹ ಶಾಸನಗಳಿಂದ ಸ್ಪಷ್ಟವಾಗುತ್ತದೆ. ಹಾಗಾಗಿ ಅವರಡೂ ದ್ವಾರಗಳಿಗೆ ಇರುವಂತಹ ವ್ಯತ್ಯಾಸ ತಿಳಿಯುತ್ತದೆ. ಬೆಟ್ಟದ ತುದಿ ಮತ್ತು ನೆಲಗೋಟೆಯ ನಂತರ ಬರುವ ದ್ವಾರಗಳು ಕಮಾನಿನಾಕಾರದಲ್ಲಿ ಇರುವಂತಹದ್ದು ವಿಶೇಷ ಎನಿಸುತ್ತದೆ. ಈ ಕೋಟೆಯ ಬಹುತೇಕ ದ್ವಾರಗಳ ಬಳಿ ಎರಡೂ ಬದಿಯಲ್ಲಿ ಎತ್ತರವಾದ ಪೀಠದ ಮೇಲೆ ಕಾವಲು ಮಂಟಪಗಳು ಕಂಡುಬರುತ್ತವೆ.

ಈ ಕೋಟೆಯಲ್ಲಿನ ವೈಶಿಷ್ಟ್ಯವಾದ ಲಕ್ಷಣ ಎಂದರೆ ನೀರಿನ ಸಂಗ್ರಹಣೆಯಾಗಿದೆ. ಏಕೆಂದರೆ ಇಡೀ ಬೆಟ್ಟವೇ ಏಕಶಿಲೆಯಿಂದ ಇಳಿಜಾರಾಗಿ ಇರುವಂತಹದ್ದು ನೀರನ್ನು ಸುಲಭವಾಗಿ ಸಂಗ್ರಹಿಸಲು ಸಾಧ್ಯವಾಗುವುದಿಲ್ಲ. ಆದರೂ ಬೆಟ್ಟದ ಮೇಲೆ ಮತ್ತು ಬುಡದಲ್ಲಿ ನೈಸರ್ಗಿಕ ಕುಣಿಗಳಿಗೆ ಕಲ್ಲು, ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ತಡೆಗೋಡೆಯನ್ನು ನಿರ್ಮಿಸಿದ್ದಾರೆ. ವಿಶೇಷವಾಗಿ ಮಳೆಯ ನೀರನ್ನು ಪೋಲಾಗದಂತೆ ಕಾಲುವೆಗಳ ಮೂಲಕ ದೋಣೆಗಳಿಗೆ ಬಿಡುವ ವ್ಯವಸ್ಥೆ ಮಾಡಿದ್ದಾರೆ. ಅದರಲ್ಲೂ ಭೀಮನ ದೋಣೆಗೆ ನೀರಿನ ಸಂಗ್ರಹಣೆಗಾಗಿ ಕೈಗೊಂಡ ಕ್ರಮ ಸ್ಥಳೀಯ ವೈವಿಧ್ಯತೆಯನ್ನು ತೋರ್ಪಡಿಸುತ್ತದೆ. ಅಂದರೆ ಬೆಟ್ಟದಲ್ಲಿ ಬೀಳುವ ಹಾಗೂ ಕೋಟೆಯ ಗೋಡೆ ಮತ್ತು ಕಟ್ಟಡಗಳ ಮೇಲೆ ಮೇಲಿಂದ ಹರಿದು ಬರುವ ನೀರನ್ನು ಕಾಲುವೆಗಳ ಮೂಲ ಆಳವಾದ ಕಂದಕ ಬಿಟ್ಟು ಅದರಲ್ಲಿ ಮೊದಲೇ ಹಾಕಿರುವ ಉಸುಕು ಮಣ್ಣಿನಲ್ಲಿ ಶುದ್ಧೀಕರಣಗೊಂಡು ಕೆಳ ಭಾಗದಲ್ಲಿರುವ ಸಣ್ಣ ರಂಧ್ರದ ಮೂಲಕ ಭೀಮನ ಹೊಂಡಕ್ಕೆ ಸೇರುವಂತೆ ಮಾಡಿದ್ದಾರೆ. ನವಿಲು ದೋಣೆ ಪಂಚ ದೋಣೆ, ಬಾವಿಯ ಜೊತೆಗೆ ಇಳಿಜಾರಾದ ಕಡೆ ತಡೆಗೋಡೆಗಳನ್ನು ನಿರ್ಮಿಸಿ ಅವುಗಳಲ್ಲಿ ಸಂಗ್ರಹಗೊಂಡ ನೀರನ್ನು ದಿನನಿತ್ಯದ ಕೆಲಸಗಳಿಗೆ ಬಳಸಿಕೊಳ್ಳುತ್ತಿದ್ದರು. ಅದೇ ರೀತಿ ನೀರಿನ ಜೊತೆಗೆ ಆಹಾರ ಸಾಮಗ್ರಿ, ಫಿರಂಗಿಗಳಿಗೆ ಬೇಕಾದ ತುಪ್ಪ, ಎಣ್ಣೆಗಳನ್ನು ಸಂಗ್ರಹಿಸಲು ಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾದ ಕಣಜಗಳಿವೆ. ಕುಂಭಿಯಲ್ಲಿ ಆಯತ ಮಾದರಿಯ ಕೋಟೆಯಿದ್ದು, ಅದರ ಒಳಗೆ ಅರಮನೆ ಕೆಲವು ಮುಖ್ಯ ಅಧಿಕಾರಿಗಳ ವಸತಿ ಕಟ್ಟಡಗಳ ಅವಶೇಷಗಳಿವೆ. ಬಹುಶಃ ಇದನ್ನು ತುರ್ತು ಸಂದರ್ಭಗಳಲ್ಲಿ ರಕ್ಷಣೆ ಪಡೆದುಕೊಳ್ಳಲು ಬಳಸಿಕೊಳ್ಳುತ್ತಿದ್ದರು. ಏಕೆಂದರೆ ಭೀಮನ ದೋಣೆಯ ಮೇಲ್ಭಾಗದಲ್ಲಿನ ಬೆಟ್ಟದ ರಚನೆ ಅತ್ಯಂತ

ಕಡಿದಾಗಿದೆ. ಅದನ್ನು ಏರಲು ಸಣ್ಣದಾದ ಕೊರೆದ ಮೆಟ್ಟಿಲುಗಳ ಮೂಲಕವೇ ಪ್ರವೇಶಿಸಬೇಕು. ಇದನ್ನು ಹೊರತುಪಡಿಸಿ ಬೇರೆ ಯಾವ ಮಾರ್ಗಗಳ ಮೂಲಕ ಕುಂಭಿ ಬೆಟ್ಟವನ್ನು ಏರಲು ಸಾಧ್ಯವಿಲ್ಲ. ಆದುದರಿಂದ ಅರಸನು ಇಡೀ ಕೋಟೆ ಶತ್ರುಗಳ ವಶವಾದರೂ ಸಹ ತನ್ನ ಉಳಿದ ಮುಖ್ಯ ಅಧಿಕಾರಿ ವರ್ಗ ಮತ್ತು ಸೈನಿಕರೊಂದಿಗೆ ಇಲ್ಲಿ ತಾತ್ಕಾಲಿಕ ರಕ್ಷಣೆ ಪಡೆಯಬಹುದಿತ್ತು. ಒಂದು ವೇಳೆ ಶತ್ರುಗಳು ಈ ಮೆಟ್ಟಿಲುಗಳ ಮೂಲಕ ಮೇಲೇರಲು ಪ್ರಯತ್ನಿಸಿದರೆ ಮೇಲ್ಭಾಗದಿಂದ ಮೆಟ್ಟಿಲುಗಳ ಮೇಲೆ ಕಾದ ಎಣ್ಣೆಯನ್ನು ಸುರಿದರೆ ಎಂತಹ ಸಾಹಸ ಮಾಡಿದರೂ ಮೇಲೇರಲು ಸಾಧ್ಯವಾಗುವುದಿಲ್ಲ. ಈ ಉದ್ದೇಶಕ್ಕಾಗಿಯೇ ಗಾರೆ ಬಾಗಿಲು ಮತ್ತು ಅದಕ್ಕೆ ಹೊಂದಿಕೊಂಡಿರುವ ಕೋಟೆಯ ಒಳಭಾಗದಲ್ಲಿ ವಿಶಾಲ ವೇದಿಕೆ ಇರುವಂತೆ ವ್ಯವಸ್ಥೆ ಮಾಡಿದ್ದಾರೆ. ಈ ವೇದಿಕೆಯ ಮೇಲೆ ಕಾದ ಎಣ್ಣೆಯನ್ನು ಇಟ್ಟು ಶತ್ರುಗಳು ಕುಂಭಿಬೆಟ್ಟವನ್ನು ಪ್ರವೇಶಿಸಲು ಪ್ರಯತ್ನಿಸಿದರೆ ಮೆಟ್ಟಿಲುಗಳ ಮೇಲೆ ಸುರಿಯುತ್ತಿದ್ದರು ಎಂದು ಸ್ಪಷ್ಟವಾಗುತ್ತದೆ.

ಹೀಗೆ ಕೋಟೆಯು ದೇಶಿಯ ತಂತ್ರಜ್ಞಾನದ ಜೊತೆಗೆ ಪಾಶ್ಚಾತ್ಯ ವಾಸ್ತು ವಿನ್ಯಾಸವನ್ನು ಮೈಗೂಡಿಸಿಕೊಂಡು ಕಾಲ ಕಾಲಕ್ಕೆ ಮಾರ್ಪಾಟುಗೊಂಡಿರುವುದು ಅವುಗಳ ಲಕ್ಷಣಗಳಿಂದ ವೇದ್ಯವಾಗುತ್ತದೆ. ರಕ್ಷಣಾ ತಂತ್ರಗಳ ಜೊತೆಗೆ ಕೋಟೆಯ ಒಳಬದಿಯಲ್ಲಿ ಅಧಿಕಾರಿ ವರ್ಗ, ಸಾಮಾನ್ಯ ಜನರ ನಿವೇಶನಗಳ ಕಟ್ಟಡ, ಬಂಧಿಖಾನೆ, ಖಜಾನೆಯ ಕಟ್ಟಡ ದೇವಾಲಯ ಹಾಗೂ ಮಹಾನವಮಿ ದಿಬ್ಬ ಮೊದಲಾದ ಕಟ್ಟಡದ ಅವಶೇಷಗಳು ಕಂಡುಬರುತ್ತವೆ. ಬಹುತೇಕ ಕಟ್ಟಡಗಳ ಮೆಲ್ಭಾವಣಿಯನ್ನು ಗಾರೆಯಿಂದ ಲೇಪನಗೊಳಿಸಿ ಮಳೆಯ ನೀರನ್ನು ಪಟ್ಟಿಗಳ ಮೂಲಕ ಕಾಲುವೆಗಳಿಗೆ ಹರಿದು ಹೋಗಲು ವ್ಯವಸ್ಥೆ ಮಾಡಿರುವುದನ್ನು ಗಮನಿಸಿದರೆ ಇವರು ನೀರಿನ ಸಂಗ್ರಹಣೆಗಾಗಿ ವಹಿಸುತ್ತಿದ್ದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಸುತ್ತದೆ. ಹಾಗೆಯೇ ಹತ್ತನೆಯ ದ್ವಾರದ ಬಳಿ ಹೈದರ್‌ನ ಕಾಲದ ಎರಡು ಮಿನಾರ್‌ಗಳು ಈ ಕೋಟೆಯ ವಿಶೇಷ ನಿರ್ಮಿತಿಗಳಾಗಿವೆ. ಏಕೆಂದರೆ ಇಳಿಜಾರಾದ ಸ್ಥಳದಲ್ಲಿ ಅಷ್ಟು ಎತ್ತರವಾಗಿ ನಿರ್ಮಾಣ ಮಾಡಿರುವುದು ಅವರ ರಚನಾ ಕೌಶಲ್ಯ ಯಾವ ಪ್ರಮಾಣದಲ್ಲಿ ಮುಂದುವರೆದಿತ್ತು ಎಂಬುದನ್ನು ಸ್ಪಷ್ಟಪಡಿಸುತ್ತದೆ.

೨೦. ಚೆನ್ನರಾಯನದುರ್ಗ

ಏಕಶಿಲಾ ಬೆಟ್ಟವಾಗಿರುವ ಚೆನ್ನರಾಯನದುರ್ಗದಲ್ಲಿ ಇಮ್ಮಡಿ ಚಿಕ್ಕಪ್ಪಗೌಡ ತನ್ನ ಮಗ ಚೆನ್ನಪ್ಪಗೌಡನ ನೆನಪಿಗಾಗಿ ಕ್ರಿ.ಶ.೧೬೧೩ರಲ್ಲಿ[೮೮] ಕೋಟೆಗೆ ಅಡಿಪಾಯ ಹಾಕಿಸಿದನು. ಆತನ ಹೆಸರನ್ನೇ ಈ ಬೆಟ್ಟಕ್ಕೂ ನಾಮಕರಣ ಮಾಡಿದನು. ಚೆನ್ನರಾಯ ಆಳ್ವಿಕೆ ಮಾಡಿದ ದುರ್ಗವೇ ಕ್ರಮೇಣ ಜನಪದರಲ್ಲಿ ಚೆನ್ನರಾಯನದುರ್ಗವಾಗಿ ರೂಢಿಗೆ ಬಂದಿತು. ಮುಮ್ಮಡಿ ಚಿಕ್ಕಪ್ಪಗೌಡ ಕಾಲದಲ್ಲಿ ಈ ಕೋಟೆಯನ್ನು ಮೈಸೂರು ಒಡೆಯರ ದಂಡನಾಯಕ ಕೋಮಾರಯ್ಯ ವಶಪಡಿಸಿಕೊಂಡು ದೊಡ್ಡರಸು ಎಂಬ ಅಧಿಕಾರಿಯನ್ನು ನೇಮಿಸಿ, ಈ ಪ್ರದೇಶಕ್ಕೆ 'ಪ್ರಸನ್ನಗಿರಿ' ಎಂದು ಮರು ನಾಮಕರಣ ಮಾಡಿದನು. ನಂತರ ಹೈದರಾಲಿ[೦] ಈ ಕೋಟೆಯನ್ನು

ವಶಪಡಿಸಿಕೊಂಡರೂ ಮರಾಠರ ಮಾಧವರಾಯನಿಗೆ ಕ್ರಿ.ಶ.೧೭೬೬ರಲ್ಲಿ[೧೧] ಒಪ್ಪಿಸಬೇಕಾಯಿತು. ಆದರೆ ಟಿಪ್ಪು ಅಧಿಕಾರಕ್ಕೆ ಬಂದ ಮೇಲೆ ಕ್ರಿ.ಶ.೧೭೭೨ರಲ್ಲಿ ಈ ಕೋಟೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು ನವೀಕರಿಸಿದನು. ನಾಲ್ಕನೆಯ ಆಂಗ್ಲೋ ಮೈಸೂರು ಯುದ್ಧದ ನಂತರ ಮರಾಠರು ಈ ಕೋಟೆಯನ್ನು ಹಾಳುಗೆಡವಿದರು.

ಚೆನ್ನರಾಯನದುರ್ಗದ ಕೋಟೆಯ ಲಕ್ಷಣಗಳು

ಈ ಕೋಟೆಯ ರಚನಾ ಶೈಲಿಯನ್ನು ಗಮನಿಸಿದರೆ ಅದು ಬೇರೆ ಬೇರೆ ಕಾಲಘಟ್ಟಗಳಲ್ಲಿ ಜೀರ್ಣೋದ್ಧಾರ ಹಾಗೂ ವಿಸ್ತರಿಸಲ್ಪಟ್ಟಿರುವುದು ಗೋಚರವಾಗುತ್ತದೆ. ಮೊದಲ ಹಂತಹ ಕೋಟೆ ಗೋಡೆಗೆ ಆಯತ, ಚೌಕ ಮಾದರಿಯಲ್ಲಿ ಕತ್ತರಿಸಿ ನುಣುಪುಗೊಂಡ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ನಂತರದಲ್ಲಿ ನಿರ್ಮಾಣಗೊಂಡ ಗೋಡೆಗೆ ಮಧ್ಯಮ ಗಾತ್ರದ ಆಕಾರವಿಲ್ಲದ ಗುಂಡು ಕಲ್ಲುಗಳನ್ನು ಬಳಸಿ ಕಲ್ಲಿನ ಚಕ್ಕೆಗಳನ್ನು ಅವುಗಳ ಮಧ್ಯೆ ಜೋಡಿಸಲಾಗಿದೆ. ಕುಂಭಿಯ ಮೇಲಿನ ಕೋಟೆಗೆ ಚಪ್ಪಟೆ, ಆಯತ, ಚೌಕ ಮಾದರಿಯ ಸಣ್ಣ ಕಲ್ಲುಗಳನ್ನು ಬಳಸಲಾಗಿದೆ. ಪಟ್ಟಣ ವಿಸ್ತಾರವಾದಂತೆ ಕೋಟೆಯಲ್ಲಿ ನೀರಿನ ಸಮಸ್ಯೆ ಎದುರಾಗಬಹುದೆಂದು ಬೆಟ್ಟದ ತಪ್ಪಲಿನಲ್ಲಿ ಸಾಮಾನ್ಯ ಜನರಿಗೆ ವಸತಿ ವ್ಯವಸ್ಥೆ ಮಾಡಿರುವುದಕ್ಕೆ ಸಣ್ಣ ಕಾಡುಗಲ್ಲುಗಳಿಂದ ನಿರ್ಮಾಣಗೊಂಡ ಕೋಟೆ ಇದೆ. ಕುಂಭಿ ಮೇಲಿನ ಕೋಟೆಗೆ ಬಳಸಿದ ಆಯತ ಮಾದರಿಯ ಉದ್ದನೆಯ ಕಲ್ಲುಗಳು ಇಮ್ಮಡಿ ಚಿಕ್ಕಪ್ಪಗೌಡನು ಹಾಳುಗೆಡವಲ್ಪಟ್ಟ ಮುಮ್ಮಡಿಪಟ್ಟಣದಿಂದ ಮಧುಗಿರಿ ಕೋಟೆಯ ನಿರ್ಮಾಣಕ್ಕೆ ತಂದ ಶಿಲಾ ಅವಶೇಷಗಳ ಮಾದರಿಯಲ್ಲಿವೆ. ಅದೇ ರೀತಿ ಕಾಡುಗಲ್ಲುಗಳ ಮಧ್ಯಮ ಗಾತ್ರವು ಸಹ ಮುಮ್ಮಡಿ ಕಾಳಚಿಕ್ಕಪ್ಪಗೌಡನ ಕಾಲದಲ್ಲಿ ಜೀರ್ಣೋದ್ಧಾರಗೊಂಡ ಮಧುಗಿರಿ ಕೋಟೆ ಗೋಡೆಯಂತಿದೆ. ಕುಂಭಿ ಬೆಟ್ಟಕ್ಕೆ ಬಳಸಿರುವ ಆಯತ, ಚೌಕ, ಚಪ್ಪಟೆ ಕಲ್ಲುಗಳನ್ನು ಅಲ್ಲಿಯೇ ಇರುವಂತಹ ಹೆಬ್ಬಂಡೆಯನ್ನು ಕತ್ತರಿಸಿ ಬಳಸಲಾಗಿದೆ. ಆ ಮೂಲಕ ಒಳ ಬದಿ ವಿಶಾಲವಾದ ಮೈದಾನ ಸಿಗುವಂತೆ ಮಾಡಿಕೊಂಡಿದ್ದಾರೆ. ಏಕೆಂದರೆ ಕುಂಬಿಯಲ್ಲಿ ವಿಶಾಲ ಮೈದಾನ ಇಲ್ಲದೆ ಅಂಕುಡೊಂಕಾದ ಬಂಡೆಯೊಂದಿತ್ತು. ಆದುದರಿಂದ ಅಲ್ಲಿ ಅಧಿಕಾರಿ ವರ್ಗ ಇಲ್ಲವೆ ಪಾಳೆಗಾರನಿಗೆ ಸಂಬಂಧಿಸಿದ ಅರಮನೆ, ಕಟ್ಟಡವನ್ನು ನಿರ್ಮಿಸಲು ಸಾಧ್ಯವಾಗುತ್ತಿರಲಿಲ್ಲ. ಅಲ್ಲದೆ ಎಲ್ಲಿಂದಲೋ ಕಲ್ಲನ್ನು ತಂದು ಕೋಟೆ ನಿರ್ಮಿಸುವುದು ತ್ರಾಸದಾಯಕವಾದದ್ದು, ಅಲ್ಲಿಯೇ ಸಿಗುವಂತಹ ಹೆಬ್ಬಂಡೆಯನ್ನು ಸಮತಟ್ಟಾಗಿ ಮಾಡಿಕೊಂಡು ಆ ಕಲ್ಲನ್ನೇ ಕೋಟೆಯ ನಿರ್ಮಾಣಕ್ಕೆ ಬಳಸಿಕೊಂಡರೆ ಸಮಯದ ಉಳಿತಾಯ ಮತ್ತು ಸಂಪತ್ತಿನ ಅನಾವಶ್ಯಕ ಖರ್ಚನ್ನು ತಪ್ಪಿಸುತ್ತದೆ. ಜೊತೆಗೆ ಕಟ್ಟಡ ನಿರ್ಮಾಣಕ್ಕೂ ಸ್ಥಳಾವಕಾಶವನ್ನು ಕಲ್ಪಿಸುವ ಉದ್ದೇಶದಿಂದ ಅಲ್ಲಿಯೇ ಸಿಗುವ ಕಲ್ಲುಗಳನ್ನು ಬಳಸಿಕೊಂಡಿದ್ದಾರೆ. ಗೋಡೆಗೆ ಕಲ್ಲಿನ ಚಕ್ಕೆಗಳನ್ನು ಜೋಡಿಸಿರುವಲ್ಲಿ ಹೊರ ಮತ್ತು ಒಳ ಬದಿಗೆ ಗಾರೆಯನ್ನು ಲೇಪನ ಮಾಡಿ ಮಳೆ ನೀರಿನಿಂದ ಅದು ಸಡಿಲಗೊಳ್ಳದಂತೆ ಎಚ್ಚರಿಕೆ ವಹಿಸಿದ್ದಾರೆ. ಅಲ್ಲದೆ ಮಳೆಯ ನೀರು ಗೋಡೆಯ

ಒಳ ಬದಿಯಲ್ಲಿ ಶೇಖರಗೊಳ್ಳದಂತೆ ಹೊರ ಹೋಗಲು ತಳಭಾಗದಲ್ಲಿ ಸಣ್ಣದಾದ ಕಾಲುವೆಗಳನ್ನು ಬಿಟ್ಟಿದ್ದಾರೆ. ಅದೇ ರೀತಿ ಫಿರಂಗಿಗಳ ಹೊಡೆತಕ್ಕೆ ಗೋಡೆ ಹಾಳಾಗಬಾರದೆಂದು ಸುಮಾರು ೬.೬ ಮೀ. ಅಗಲದ ಮಣ್ಣು ಮತ್ತು ಕಲ್ಲಿನ ಚೂರುಗಳಿಂದ ನಿರ್ಮಾಣಗೊಂಡ ಇಳಿಪೊರೆ ಇದೆ. ಅದರ ಮತ್ತೊಂದು ಬದಿಗೆ ಮಳೆ ನೀರಿನಿಂದ ಕುಸಿಯಬಾರದೆಂದು ಕಲ್ಲಿನ ಹೊದಿಕೆಯನ್ನು ಹಾಕಿದ್ದಾರೆ. ಅದನ್ನೇ ಸೈನಿಕರು ಗೋಡೆಯ ಮೇಲೆ ಓಡಾಡಲು, ಶಸ್ತ್ರಾಸ್ತ್ರಗಳನ್ನು ಇಡಲು, ಶಸ್ತ್ರಾಸ್ತ್ರ ಸಂಗ್ರಹಣೆಗಾಗಿ ಇಟ್ಟಿಗೆ ಮತ್ತು ಗಾರೆಯಿಂದ ಬಂಕರ್‌ಗಳ ನಿರ್ಮಾಣಕ್ಕೆ ಬೇಕಾದ ವೇದಿಕೆಯನ್ನಾಗಿ ಬಳಸಿಕೊಂಡಿದ್ದಾರೆ. ಇಳಿಜಾರಾದ ಸ್ಥಳದಲ್ಲಿ ಗೋಡೆಯ ಮೇಲಿನ ಅಟ್ಟಾಲಕ ಕಲ್ಲು, ಇಟ್ಟಿಗೆ ಹಾಗೂ ಗಾರೆಯಿಂದ ಮೆಟ್ಟಿಲಿನೋಪಾದಿಯಲ್ಲಿ ನಿರ್ಮಾಣಗೊಂಡಿದೆ. ಅದು ಸೈನಿಕರಿಗೆ ಕೋಟೆಯ ಸುತ್ತಲೂ ಪಹರೆ ಕಾಯಲು ಸ್ಥಳಾವಕಾಶವನ್ನು ಕಲ್ಪಿಸಿದೆ. ಗೋಡೆಯ ಮೇಲೆ ಸೈನಿಕರು ಓಡಾಡುವ ಸಂದರ್ಭದಲ್ಲಿ ಶತ್ರುಗಳಿಗೆ ತಮ್ಮ ಚಲನವಲನ ತಿಳಿಯಬಾರದೆಂದು ಎದೆ ಮಟ್ಟದವರೆಗೂ ಇಟ್ಟಿಗೆ ಮತ್ತು ಗಾರೆಯಿಂದ ಕಾಪುಗೋಡೆಯನ್ನು ನಿರ್ಮಿಸಲಾಗಿದೆ. ಇದರಲ್ಲಿ ಅಂಬುಕಿಂಡಿ, ವೀಕ್ಷಣಾಕಿಂಡಿ, ಫಿರಂಗಿಕಿಂಡಿ, ತೆನೆಗಳನ್ನು ಶತ್ರುಗಳನ್ನು ತಡೆಯುವಲ್ಲಿ ಸುಲಭವಾಗಲೆಂದು ನಿರ್ಮಾಣ ಮಾಡುತ್ತಿದ್ದರು. ಕುಂಭಿಯಲ್ಲಿ ಫಿರಂಗಿ ಕಿಂಡಿಗಳು ಕಮಾನಿನ ರೀತಿಯಲ್ಲಿ ಅಲಂಕರಿಸಲ್ಪಟ್ಟಿದ್ದು, ಅವುಗಳಲ್ಲಿ ಪಷ್ಪಭೋದಿಗೆಯನ್ನು ಹೊಂದಿರುವ ಕಂಬಗಳು ಹೊರಚಾಚಿಕೊಂಡಿವೆ. ಬಹುಶಃ ಅದನ್ನು ರಾಜನು ಆದೇಶಗಳನ್ನು ಹೊರಡಿಸುವ, ಇಲ್ಲವೇ ನ್ಯಾಯ ತೀರ್ಮಾನ ಮಾಡುವ ನ್ಯಾಯಕಟ್ಟೆಯನ್ನಾಗಿಯೂ ಬಳಸಿಕೊಂಡಿರುವ ಸಾಧ್ಯತೆಗಳಿವೆ. ಇವು ಗುಲ್ಬರ್ಗಾ, ಬೀದರ್, ಬಿಜಾಪುರ, ಮುದುಗಲ್ ಕೋಟೆಗಳಲ್ಲಿನ ಚಜ್ಜಾಗಳಂತೆ ನಿರ್ಮಾಣಗೊಂಡಿವೆ. ಸಾಮಾನ್ಯವಾಗಿ ಯಾವುದೇ ಕೋಟೆಯಲ್ಲಿ ಪ್ರವೇಶ ದ್ವಾರ ಅತ್ಯಂತ ಮಹತ್ವದ ಪಾತ್ರವಹಿಸುತ್ತದೆ. ಈ ಕೋಟೆಗೆ ನೆಲಗೋಟೆಯೂ ಒಳಗೊಂಡಂತೆ ಸಣ್ಣಮಟ್ಟ ದ್ವಾರಗಳು ಸೇರಿದಂತೆ ೧೮ ದ್ವಾರಗಳಿವೆ. ಅವುಗಳಲ್ಲಿ ಬೆಟ್ಟದ ಮೇಲಿನ ಊರಬಾಗಿಲು, ಮಧುಗಿರಿ ಬಾಗಿಲುಗಳು ಪ್ರಮುಖವಾಗಿವೆ. ಇವು ಅನೀರಿಕ್ಷಿತ ತಿರುವುಗಳಿಂದ ಕೂಡಿದ್ದು, ಎರಡು ಕೊತ್ತಲಗಳ ನಡುಭಾಗದಲ್ಲಿ ಕಿರಿದಾದ ದ್ವಾರದ ಮೂಲಕ ಮುಖ್ಯ ದ್ವಾರವನ್ನು ಪ್ರವೇಶಿಸುವಂತಹ ತಂತ್ರವನ್ನು ರೂಪಿಸಿದ್ದಾರೆ. ಇವು ಶತ್ರುಗಳ ಪಾಲಿಗೆ ಮೃತ್ಯುಪಾಶಗಳಂತೆ ಕಂಡುಬರುತ್ತಿದ್ದವು. ಉಳಿದ ದ್ವಾರಗಳು ನೇರ ಪ್ರವೇಶವನ್ನು ಹೊಂದಿವೆಯಾದರೂ ಅದರ ಒಳಬದಿ ಕಾವಲು ಮಂಟಪ ಇರುವುದರಿಂದ ಶತ್ರುಗಳು ಸುಲಭವಾಗಿ ಪ್ರವೇಶ ಮಾಡುವುದನ್ನು ತಡೆಯುತ್ತಿದ್ದವು. ಕೋಟೆ ಗೋಡೆಗೆ ರಕ್ಷಣೆ ನೀಡುವ ಉದ್ದೇಶದಿಂದ ಆಯತ, ಚೌಕ, ಗಜಪುಷ್ಠಾಕಾರ, ವೃತ್ತ ಮಾದರಿಯ ಕೊತ್ತಲಗಳನ್ನು ನಿರ್ಮಿಸಲಾಗಿದೆ.

ಕೊತ್ತಲಗಳ ಎಲ್ಲಾ ದಿಕ್ಕಿಗಳಿಗೂ ಫಿರಂಗಿಕಿಂಡಿ, ಅಂಬುಕಿಂಡಿ, ಬಂದೂಕು ಕಿಂಡಿಗಳನ್ನು ನಿರ್ಮಿಸಲಾಗಿದೆ. ಕೋಟೆಯ ಪ್ರವೇಶ ದ್ವಾರದ ಎರಡು ಬದಿಗೆ ೧೦೦ ಅಡಿ ಅಂತರದಲ್ಲಿ

ಇರುವ ಸುಮಾರು ೧೫ ಮೀ. ಎತ್ತರದ ಫಿರಂಗಿ ವೇದಿಕೆಗಳು ಸುತ್ತಲಿನ ೫ ಕಿ.ಮೀ. ವ್ಯಾಪ್ತಿಯ ಚಲನವಲನ ಗಮನಿಸಲು ಅನುವಾಗುವಂತೆ ನಿರ್ಮಿಸಲಾಗಿದೆ. ಸಾಮಾನ್ಯವಾಗಿ ಯಾವುದೇ ಕೋಟೆಯ ಸುಭದ್ರತೆ ಅದು ಹೊಂದಿರುವ ನೀರಿನ ಸಂಗ್ರಹಣೆಯ ಮೇಲೆಯೇ ನಿರ್ಧಾರವಾಗುತ್ತದೆ. ಮುಖ್ಯವಾಗಿ ಗಿರಿದುರ್ಗಗಳಲ್ಲಿ ನೀರನ್ನು ಸಂಗ್ರಹಿಸುವುದು ತ್ರಾಸದಾಯಕವಾದ ಕೆಲಸ. ಆದರೂ ಬೆಟ್ಟದಲ್ಲಿ ಬೀಳುವ ಮಳೆಯ ನೀರನ್ನು ಸಂಗ್ರಹಿಸಲು ಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ತಡೆಗೋಡೆಗಳನ್ನು ಕೋಟೆಯ ಎರಡೂ ಬದಿಯಲ್ಲಿ ನಿರ್ಮಿಸಿರುವುದರಿಂದ ವರ್ಷಪೂರ್ತಿ ನೀರಿನ ಅಭಾವ ಎದುರಾಗದಂತೆ ಮುನ್ನೆಚ್ಚರಿಕೆ ವಹಿಸಿದ್ದಾರೆ.

ಕೋಟೆಯ ಒಳಗಿನ ಪ್ರದೇಶದಲ್ಲಿ ಮಧುಗಿರಿ ಕೋಟೆಗಿಂತಲೂ ವಿಶಾಲ ಮೈದಾನ ಇರುವುದರಿಂದ ಹಲವು ಕಟ್ಟಡಗಳ ರಚನೆಯನ್ನು ಕಾಣಬಹುದು. ಆದರೆ ಇದು ಇಂತಹ ಕಟ್ಟಡದ್ದೇ ಎಂದು ಖಚಿತವಾಗಿ ಹೇಳಲಾಗದು. ಆದರೂ ಅವುಗಳ ರಚನಾ ಶೈಲಿಯನ್ನು ಆಧರಿಸಿ ಇಂತಹದ್ದೆಂದು ಎಂದು ಊಹಿಸಲು ಅವಕಾಶವಿದೆ. ಕೋಟೆಯ ಒಳಬದಿಯಲ್ಲಿ ಆಹಾರ ಧಾನ್ಯ, ತುಪ್ಪವನ್ನು ಸಂಗ್ರಹಿಸಲು ಇಟ್ಟಿಗೆ ಮತ್ತು ಗಾರೆ ಹಾಗೂ ಕಲ್ಲಿನಿಂದ ಕಣಜಗಳನ್ನು ನಿರ್ಮಿಸಿ ಗಾರೆಯಿಂದ ನುಣುಪುಗೊಳಿಸಲಾಗಿದೆ. ಪುಷ್ಪಬೋದಿಗೆಯ ಕಂಬ ಇರುವ ವಿಶಾಲ ಅಂಗಳವನ್ನು ಗಮನಿಸಿದರೆ ಅದು ಅರಮನೆಯ ಅವಶೇಷ ಇದ್ದಿರಬಹುದೆಂದು ಗೋಚರವಾಗುತ್ತದೆ. ಅದರ ಪಕ್ಕದಲ್ಲಿ ರಾಣಿಯರ ವಸತಿ ಗೃಹವಿದೆ. ಕೋಟೆಯ ಒಳಬದಿ ಸಾಮಾನ್ಯ ಜನರ ವಸತಿಗೆ ಸ್ಥಳಾವಕಾಶ ಇಲ್ಲದಿದ್ದ ಕಾರಣ ಮಧುಗಿರಿ ಬಾಗಿಲಿನ ಹೊರಭಾಗದ ಪೂರ್ವ ದಿಕ್ಕು ಹಾಗೂ ಬೆಟ್ಟದ ದಕ್ಷಿಣಕ್ಕೆ ಸಾಮಾನ್ಯರ ವಸತಿ ನಿವೇಶನದ ಅವಶೇಷಗಳು ಕಂಡುಬರುತ್ತವೆ. ಆದರೆ ದಕ್ಷಿಣ ದಿಕ್ಕಿಗಿರುವ ಗ್ರಾಮಕ್ಕೆ ಮಾತ್ರ ಸುತ್ತಲೂ ಕೋಟೆ ಗೋಡೆ ಇದೆ. ಪೂರ್ವ ದಿಕ್ಕಿಗಿರುವ ವಸತಿ ನಿವೇಶನಗಳಿಗೆ ಯಾವುದೇ ರಕ್ಷಣಾ ಗೋಡೆಯಿಲ್ಲ. ಏಕೆಂದರೆ ಈ ಗ್ರಾಮದ ಸುತ್ತಲೂ ಬೆಟ್ಟ ಗುಡ್ಡಗಳು ಸುತ್ತುವರೆದಿದ್ದು, ದಟ್ಟ ಅರಣ್ಯದಿಂದ ಕೂಡಿದೆ. ಹಾಗಾಗಿ ಈ ವಸತಿ ನಿವೇಶನಕ್ಕೆ ಕೋಟೆಯ ಅನಿವಾರ್ಯತೆ ಉಂಟಾಗಿಲ್ಲ. ಹೀಗೆ ಚೆನ್ನರಾಯನದುರ್ಗವು ಸುಮಾರು ೨೦೦ ವರ್ಷಗಳ ಕಾಲ ಪಾಳೆಯಗಾರರು ಹೈದರ್-ಟಿಪ್ಪು, ಮರಾಠರ ಅಧೀನದಲ್ಲಿ ಹಲವು ಮಾರ್ಪಾಟುಗಳನ್ನು ಹೊಂದಿ ಅಭೇದ್ಯವಾಗಿ ರೂಪುಗೊಂಡಿತ್ತೆಂಬುದು ಕೋಟೆಯ ಲಕ್ಷಣಗಳಿಂದ ಸ್ಪಷ್ಟವಾಗುತ್ತದೆ.

೨೧. ಸಿದ್ಧರಬೆಟ್ಟ

ಪ್ರಾಗೈತಿಹಾಸ ಕಾಲದಿಂದಲೂ ವಾಸಯೋಗ್ಯ ಪರಿಸರವನ್ನು ಹೊಂದಿರುವ ಸಿದ್ಧರಬೆಟ್ಟ ಹಲವು ಗುಹೆ, ಕಂದರ, ದಟ್ಟ ಅರಣ್ಯದಿಂದ ಕೂಡಿದ್ದು, ಸಮುದ್ರ ಮಟ್ಟದಿಂದ ೨೮೦೦ ಅಡಿ[೮] ಎತ್ತರದಲ್ಲಿದೆ. ಈ ಪ್ರದೇಶವು ಸಿದ್ಧಗಿರಿ, ಸುವರ್ಣಗಿರಿ, ಬೂದುಗವಿ, ರಸಸಿದ್ಧರಬೆಟ್ಟ, ಬೆಳ್ಳಿಬೆಟ್ಟ, ಸಂಜೀವಿನಿಬೆಟ್ಟ, ಕುರ‍್ರಮ್ಮನಬೆಟ್ಟ, ಕುರ‍್ರಂಗನಬೆಟ್ಟ[೯] ಎಂಬ ಹಲವು ಹೆಸರುಗಳಿಂದ ಪ್ರಖ್ಯಾತಿ

ಹೊಂದಿದೆ. ಇವುಗಳಲ್ಲಿ ಬಹುತೇಕ ಹೆಸರುಗಳು ಇಲ್ಲಿ ಹಿಂದಿನಿಂದಲೂ ಯತಿವರ್ಯರು ವಾಸವಾಗಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. ಏಕೆಂದರೆ ಈ ಪ್ರದೇಶದಿಂದ ೧೦ ಕಿ.ಮೀ. ಸಮೀಪ ತಾವರೆಕೆರೆ ಮತ್ತು ಕುಚ್ಚಂಗಿಯಲ್ಲಿ ಹೊಯ್ಸಳರ ಕಾಲದ ಜೈನ ಬಸದಿಗಳ ನಿರ್ಮಿತಿಗಳು ಇರುವುದರಿಂದ ಈ ಪರಿಸರದಲ್ಲಿ ಜೈನ ಯತಿಗಳು ನೆಲೆಸಿದ್ದರೆಂಬುದನ್ನು ಸ್ಪಷ್ಟಪಡಿಸುತ್ತದೆ. ಜೊತೆಗೆ ಇಲ್ಲಿರುವ ಗುಹೆಗಳಲ್ಲಿ ಇಂದಿಗೂ ಮುನಿವರ್ಯರು ಬಹು ಹಿಂದಿನಿಂದಲೂ ವಾಸವಾಗಿದ್ದಾರೆ ಎಂಬುದನ್ನು ಸ್ಥಳೀಯರು ಸಹ ಸ್ಪಷ್ಟಪಡಿಸುತ್ತಾರೆ. ವಿಶೇಷವಾಗಿ ಈ ಸ್ಥಳನಾಮದೊಂದಿಗೆ ಇರುವಂತಹ ಐತಿಹ್ಯಗಳನ್ನು ವಿಶ್ಲೇಷಿಸಿದರೆ ಸುವರ್ಣದ ಬಗೆಗೆ ಮಾಹಿತಿ ನೀಡುತ್ತವೆ. ಅಂದರೆ ಹಿಂದೆ ಇಲ್ಲಿ ರಸಸಿದ್ಧರು ಚಿನ್ನವನ್ನು ಶುದ್ಧೀಕರಿಸುವ ಪಾಂಡಿತ್ಯವನ್ನು ಕರಗತ ಮಾಡಿಕೊಂಡಿದ್ದರಂತೆ; ಹಾಗಾಗಿ ಈ ಬೆಟ್ಟವನ್ನು ರಸಸಿದ್ಧರಬೆಟ್ಟ ಎಂದು ಕರೆಯುತ್ತಾರೆ. ಕಾಲಾಂತರದಲ್ಲಿ ಇದು ಜನಪದರಲ್ಲಿ ಸಿದ್ಧರಬೆಟ್ಟ ಎಂದು ರೂಢಿಗತವಾಗಿರಬಹುದು. ಕುರಂಗರಾಜನು ಇಲ್ಲಿ ಕೋಟೆ ಕಟ್ಟಿ ಆಳ್ವಿಕೆ ಮಾಡಿದ್ದರಿಂದ ಕುರ‍್ರಮ್ಮನ ಬೆಟ್ಟ, ಕುರ‍್ರಂಗರಾಜನಬೆಟ್ಟ ಎಂಬ ಹೆಸರು ಈ ಪ್ರದೇಶಕ್ಕೆ ಬಂದಿದೆ.

ಮಧುಗಿರಿಯ ಮಹಾನಾಡಪ್ರಭು ಇಮ್ಮಡಿ ಚಿಕ್ಕಪ್ಪಗೌಡನು ತನ್ನ ಸೇನಾನಿ ಕುರಂಗರಾಯನನ್ನು [೯೪] ತನ್ನ ಗಡಿಪ್ರಾಂತ್ಯವಾದ ಸಿದ್ಧಬೆಟ್ಟಕ್ಕೆ ಕಿಲ್ಲೇದಾರನನ್ನಾಗಿ ನೇಮಿಸಿದನು. ಕುರಂಗರಾಯನನ್ನು(ಕುರಂಗನಾಯಕ) ದಲಿತ ಸಮುದಾಯಕ್ಕೆ ಸೇರಿದವನೆಂದು ಡಾ.ಓ.ಅನಂತರಾಮಯ್ಯ ಮತ್ತು ಓ.ನಾಗರಾಜಯ್ಯ[೯೫] ಅವರು ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಆದರೆ ಇದನ್ನು ಆಕರಗಳ ಕೊರತೆಯಿಂದ ಖಚಿತಪಡಿಸಲು ಸಾಧ್ಯವಿಲ್ಲವಾದರೂ ತುಮಕೂರು ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಪಾಳೆಯಪಟ್ಟುಗಳಲ್ಲಿ ಬಹುತೇಕರು ಬುಡಕಟ್ಟು ಮತ್ತು ತಳಸಮುದಾಯಗಳಿಗೆ ಸೇರಿರುವುದರಿಂದ ಅಂದರೆ ಮಧುಗಿರಿ ತಾಲ್ಲೂಕಿನ ಮಾಲೂರಿನಲ್ಲಿ ಹೊಲೆಯ ಸಮುದಾಯಕ್ಕೆ ಸೇರಿದಾತ ಕೋಟೆಯನ್ನು ಕಟ್ಟಿ ಆಳ್ವಿಕೆ ಮಾಡಿದ್ದನೆಂದು ಹಾಗೂ ಗಂಗರ ಕಾಲಕ್ಕೆ ನಗಾರಿ ಬಾರಿಸುವ ಸಮುದಾಯವೊಂದು ಅಂದರೆ ಹೊಲೆಯ ಸಮುದಾಯ ಕ್ರೀಡಾಪುರ ರಾಜಧಾನಿ ರಕ್ಷಣೆಯಲ್ಲಿ ಪ್ರಮುಖ ಪಾತ್ರವಹಿಸಿತ್ತು ಎಂಬುದರ ಬಗೆಗೆ ಉಲ್ಲೇಖ ಸಿಗುವುದಾದರೆ ಕುರ‍್ರಂಗರಾಯ ದಲಿತನಾಗಿರುವುದರಲ್ಲಿ ಆಶ್ಚರ್ಯವೇನಿಲ್ಲ. ಹೈದರಾಲಿ ಒಮ್ಮೆ ಪೆನುಗೊಂಡೆಗೆ ದಾಳಿ ಮಾಡಲು ಹೋಗುವ ಸಂದರ್ಭದಲ್ಲಿ ಇಲ್ಲಿ ತಂಗಿದ್ದನೆಂದೂ, ತನ್ನ ಪಟ್ಟದ ಆನೆಯ ಕಾಲಿಗೆ ಇದ್ದಂತಹ ಸರಪಳಿ ಅಮೂಲ್ಯ ಗಿಡಮೂಲಿಕೆಗಳ ಸ್ಪರ್ಶದಿಂದ ಚಿನ್ನದ ಸರಪಳಿ ಆಯಿತೆಂದು ಇದನ್ನು ಗಮನಿಸಿದ ಹೈದರ್ ಇದನ್ನು ಸುವರ್ಣಗಿರಿ ಎಂದು ಕರೆದನೆಂದು ಐತಿಹ್ಯಗಳು ಹೇಳುತ್ತದೆ.

ಕುರ‍್ರಮ್ಮನ ಕೋಟೆಯು ಚೌಕಾಕಾರವಾಗಿ ಎರಡು ಸುತ್ತಿನಿಂದ ಕೂಡಿದೆ. ಇದರ ನಿರ್ಮಾಣಕ್ಕೆ ಆಯತ, ಚೌಕ ಮಾದರಿಯ ಸೈಜುಗಲ್ಲುಗಳನ್ನು ಬಳಸಲಾಗಿದೆ. ಗೋಡೆಯಲ್ಲಿ ಗಾರೆಯ

ಬಳಕೆಯಾಗಲಿ ರಕ್ಷಣಾ ತಂತ್ರಗಳಾದ ಇಳಿವೊರೆ, ಅಂಬುಕಿಂಡಿ, ವೀಕ್ಷಣಾಕಿಂಡಿ, ಕೋಟೆ ತೆನೆಗಳ ನಿರ್ಮಿತಿ ಕಂಡುಬರುವುದಿಲ್ಲ. ಇಡೀ ಕೋಟೆ ಇರುವಂತಹ ಪ್ರದೇಶ ದಟ್ಟ ಅರಣ್ಯ, ಗುಡ್ಡಗಳಿಂದ ಸುತ್ತುವರೆದಿರುವುದರಿಂದ ಕೋಟೆ ಇದೆ ಎಂಬ ಸಂಗತಿ ಹೊರಗಿನವರಿಗೆ ತಿಳಿಯುತ್ತಿರಲಿಲ್ಲ. ಒಂದು ವೇಳೆ ತಿಳಿದರೂ ಕೋಟೆ ಎಲ್ಲಿದೆ ಎಂಬುದನ್ನು ಪತ್ತೆ ಹಚ್ಚುವುದು ಕಷ್ಟದ ಕೆಲಸವಾಗಿರುತ್ತಿತ್ತು. ಹಾಗೊಮ್ಮೆ ಕೋಟೆಯ ಸಮೀಪ ಶತ್ರುಗಳು ಸಮೀಪಿಸಿದ್ದೇ ಆದಲ್ಲಿ ನೈಸರ್ಗಿಕವಾಗಿರುವ ಗುಹೆ, ಕಂದರಗಳಲ್ಲಿ ರಕ್ಷಣೆ ಪಡದುಕೊಳ್ಳಬಹುದಿತ್ತು. ಆದುದರಿಂದ ಈ ಕೋಟೆಯನ್ನು ಕೇವಲ ಕಾಡುಪ್ರಾಣಿಗಳಿಂದ ರಕ್ಷಣೆ ಪಡೆಯುವ ರೀತಿಯಲ್ಲಿ ಮಾತ್ರ ನಿರ್ಮಿಸಲಾಗಿದೆ. ಮೊದಲನೆಯ ಪ್ರವೇಶ ದ್ವಾರ ಪೂರ್ವ ದಿಕ್ಕಿಗಿದ್ದು ೫ ಮೀ. ಉದ್ದ, ೧.೫೮ ಮೀ. ಅಗಲವನ್ನು ಹೊಂದಿದೆ. ದ್ವಾರದ ಎರಡೂ ಬದಿ ಚೌಕಕಾರದ ಕೊತ್ತಲಗಳಿವೆ. ಒಳಬದಿಯಲ್ಲಿನ ಗೋಡೆಗೆ ನಾಲ್ಕು ದಿಕ್ಕಿಗೂ ಕೊತ್ತಲಗಳಿವೆ. ಅದರ ಒಳಗೆ ಅರಮನೆ, ಅಧಿಕಾರಿ ವರ್ಗದವರ ಕಟ್ಟಡ ಅವಶೇಷಗಳನ್ನು ಹೊಂದಿದೆ. ಕೋಟೆಯ ಹೊರಗೆ ನೀರಿನ ಸಂಗ್ರಹಣೆಗಾಗಿ ಕಲ್ಲು, ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣಗೊಂಡ ಅಲಸಂದೆಕೆರೆ, ಕಲ್ಯಾಣಿ, ಬಾವಿ, ದೊಣೆಗಳಿವೆ. ಈ ಕೋಟೆಯ ಪೂರ್ಣ ಚಿತ್ರಣವನ್ನು ಗಮನಿಸಿದರೆ ಇದೊಂದು ರಕ್ಷಣಾ ಕೇಂದ್ರವಾಗಿ ನಿರ್ವಹಿಸಿತ್ತೇ ಹೊರತು ಸ್ವತಂತ್ರ ಪಾಳೆಯಪಟ್ಟಾಗಿರಲಿಲ್ಲ ಎಂಬುದು ಸ್ಪಷ್ಟವಾಗುತ್ತದೆ.

೨೨. ಹಾಗಲವಾಡಿ

ಆಂಧ್ರ ಭಾಗದಿಂದ ವನವಾಸದುರ್ಗಕ್ಕೆ ವಲಸೆ ಬಂದ ಎರಿಮಾದನಾಯಕನು ಎರೆಕಟ್ಟೆಯಲ್ಲಿ ನೆಲೆ ನಿಂತು ಚಿಕ್ಕನಾಯಕನಹಳ್ಳಿಗೆ ರಾಜಧಾನಿಯನ್ನು ವರ್ಗಾಯಿಸಿದನು. ನಂತರ ಬಂದ ಮೊದಲನೆಯ ಮುದಿಯಪ್ಪನಾಯಕ ಹಾಗಲದಹಳ್ಳಿಯಲ್ಲಿ ಕೋಟೆಯನ್ನು ಕಟ್ಟಿಸಿ ಅದನ್ನು ಗಡಿದುರ್ಗವನ್ನಾಗಿ ಮಾಡಿಕೊಂಡನು. ಇಮ್ಮಡಿಭೈರಪ್ಪನ ಕಾಲಕ್ಕೆ ಚಿಕ್ಕನಾಯಕನಹಳ್ಳಿ ಕೋಟೆ ಬಿಜಾಪುರದ ಸೇನಾದಂಡನಾಯಕ ರಣದುಲ್ಲಾಖಾನನಿಂದ ಹಾಳುಗೆಡವಲ್ಪಟ್ಟದ್ದರಿಂದ ರಾಜಧಾನಿಯನ್ನು ಹಾಲವಾಡಿಗೆ ಬದಲಾಯಿಸಿ ಕೋಟೆಯನ್ನು ಬಲಿಷ್ಠಗೊಳಿಸಿದನು. ಆದರೂ ಬಿಜಾಪುರದ ಸುಲ್ತಾನರು, ಮೊಘಲರು, ಚಿತ್ರದುರ್ಗದ ನಾಯಕರು, ಸಿರಾದ ಸುಭೇದಾರರು, ಹೈದರ್ ಮತ್ತು ಟಿಪ್ಪು ಮೈಸೂರು ಒಡೆಯರ ನಿರಂತರ ದಾಳಿಗೆ ಒಳಗಾಗುತ್ತಿತ್ತೆಂದು ಕೋಟೆಯ ಜೀರ್ಣೋದ್ಧಾರಗೊಂಡ ಲಕ್ಷಣಗಳಿಂದ ಸ್ಪಷ್ಟವಾಗುತ್ತದೆ. ಆದರೆ ಇಂದು ಕೋಟೆಯ ಬಹು ಭಾಗ ಹಾಳಾಗಿರುವುದರಿಂದ ಕೋಟೆಯ ಪೂರ್ಣ ಚಿತ್ರಣ ಸಿಗುವುದಿಲ್ಲ. ಉಳಿದಂತಹ ಕೋಟೆ ಗೋಡೆ, ಪ್ರವೇಶ ದ್ವಾರಗಳಿಂದ ಕೋಟೆಯ ತಲ ನಕಾಶೆ ಸಿದ್ಧಪಡಿಸಬಹುದು. ಕೋಟೆಯು ಎರಡು ಹಂತಗಳಲ್ಲಿ ನಿರ್ಮಾಣಗೊಂಡಿದ್ದು, ಮೊದಲ ಹಂತದಲ್ಲಿ ವಿಜಯನಗರದ ಆರಂಭ ಕಾಲದ ಆಯತ ಮತ್ತು ಚೌಕ ಮಾದರಿಯ ಗ್ರಾನೆಟ್ ಶಿಲೆಯನ್ನು ಬಳಸಲಾಗಿದೆ. ಅದರಲ್ಲೂ ಉದ್ದನೆಯ ಆಯತ ಕಲ್ಲುಗಳ ಬಳಕೆ ವಿಶೇಷವಾಗಿದೆ. ಇವುಗಳನ್ನು ನುಣುಪುಗೊಳಿಸಿ

ಜೋಡಿಸಿರುವುದರಿಂದ ಚಕ್ಕೆಗಳನ್ನಾಗಲಿ ಇಲ್ಲವೇ ಗಾರೆಯನ್ನಾಗಲಿ ಬಳಸುವ ಅವಶ್ಯಕತೆ ಬಂದಿಲ್ಲ. ಗೋಡೆಯ ಒಳಭಾಗ ಮಣ್ಣನ್ನು ಸುರಿದು ಗೋಡೆಯ ಅಗಲವನ್ನು ವಿಸ್ತರಿಸಿದ್ದಾರೆ. ಈ ಕೋಟೆಯ ಗೋಡೆ ಮತ್ತು ಕೊತ್ತಲಗಳ ವಿಶೇಷಯೆಂದರೆ ತಳಪಾಯ ಅಗಲವಾಗಿ ರಚಿಸಲ್ಪಟ್ಟು ಮೇಲೆ ಹೋದಂತೆ ಕಿರಿದಾಗುತ್ತಾ ಹೋಗಿದೆ. ಸಾಮಾನ್ಯವಾಗಿ ಯಾವುದೇ ಗೋಡೆ ೯೦ ಡಿಗ್ರಿಯಲ್ಲಿ ನೇರವಾಗಿದ್ದರೆ ಫಿರಂಗಿಗಳ ಹೊಡೆತಕ್ಕೆ ಅದು ಒಮ್ಮೆಲೇ ಕುಸಿಯುವ ಸಂಭವ ಇರುತ್ತದೆ. ಅದೇ ತ್ರಿಭುಜ ಮಾದರಿಯಲ್ಲಿದ್ದರೆ ಗೋಡೆಯ ತುದಿ ಭಾಗದ ಭಾರವು ಕಡಿಮೆಯಾಗುತ್ತದೆ. ಜೊತೆಗೆ ಮದ್ದು ಗುಂಡು ಯಾವ ಭಾಗಕ್ಕೆ ತಾಗುತ್ತದೆಯೋ ಆ ಭಾಗ ಮಾತ್ರ ಹಾನಿಗೊಳ್ಳುತ್ತದೆ. ನಂತರದಲ್ಲಿ ಅದನ್ನು ಜೀರ್ಣೋದ್ಧಾರ ಮಾಡಿಸಲು ಸುಲಭವಾಗುತ್ತದೆ. ಎರಡನೆಯ ಹಂತದಲ್ಲಿ ಈಗಾಗಲೇ ಇರುವಂತಹ ಗೋಡೆಯಲ್ಲಿ ಬಿರುಕು ಕಾಣಿಸಿಕೊಂಡಲ್ಲಿ ಮಾತ್ರ ಕಲ್ಲಿನ ಚಕ್ಕೆ ಜೋಡಿಸುವ ಹಾಗೂ ಗಾರೆಯನ್ನು ಲೇಪಿಸುವ ಕಾರ್ಯ ಮಾಡಿದ್ದಾರೆ. ಗೋಡೆಯ ತುದಿಯ ಭಾಗವನ್ನು ಕೆಡವಿ ಸಣ್ಣದಾದ ಆಯತ, ಚೌಕ, ಚಪ್ಪಟೆ ಮಾದರಿಯಲ್ಲಿ ಕತ್ತರಿಸಿದ ಗ್ರಾನೈಟ್ ಶಿಲೆಯನ್ನು ಹಾಗೂ ಸ್ಥಳೀಯವಾಗಿ ಸಿಗುವ ಕಾಡುಗಲ್ಲುಗಳನ್ನು ಬಳಸಿ ಎತ್ತರಗೊಳಿಸಲಾಗಿದೆ. ಕೋಟೆಯ ರಕ್ಷಣೆಗಾಗಿ ಸುಮಾರು ೭೦ ಅಡಿ ಎತ್ತರದ ಬುರುಜನ್ನು ಪಿರಮಿಡ್‌ನೋಪಾದಿಯಲ್ಲಿ ೭ ಹಂತಗಳಲ್ಲಿ ನಿರ್ಮಾಣಗೊಂಡಿದೆ. ಏಕೆಂದರೆ ಸಮತಟ್ಟಾದ ಪ್ರದೇಶದಲ್ಲಿ ೭೦ ಅಡಿ ಎತ್ತರದ ಬುರುಜನ್ನು ೯೦ ಡಿಗ್ರಿಯಲ್ಲಿ ನಿರ್ಮಿಸಿದರೆ ಅದು ಕುಸಿಯುವ ಸಂಭವ ಇರುತ್ತದೆ. ಆದುದರಿಂದ ಈ ತಂತ್ರವನ್ನು ಬಳಸಿ ಬಹುದೂರದಲ್ಲಿ ಬರುವಂತಹ ಶತೃಗಳ ಚಲನವಲನ ಮೊದಲೇ ಗಮನಿಸಿ ಕೋಟೆಯನ್ನು ಭದ್ರಪಡಿಸಿಕೊಳ್ಳುವ ಉಪಾಯವನ್ನು ಕಂಡುಕೊಂಡಿದ್ದಾರೆ. ಅದರ ಪ್ರತಿ ಹಂತದ ಮೇಲೆ ಏರುವುದಕ್ಕಾಗಿ ಮೆಟ್ಟಿಲುಗಳನ್ನು ಬಿಟ್ಟಿದ್ದಾರೆ. ಈ ಬುರುಜಿನ ಮೇಲಿಂದ ಫಿರಂಗಿಗಳನ್ನು ಪ್ರಯೋಗಿಸ ಬಹುದಿತ್ತೆಂಬುದಕ್ಕೆ ಅದರ ತುದಿ ಭಾಗದಲ್ಲಿ ವಿಶಾಲ ವೇದಿಕೆಯಿದ್ದು, ಸುತ್ತಲಿನ ೫ ಕಿ.ಮೀ. ವ್ಯಾಪ್ತಿಯ ಪ್ರದೇಶ ಕಾಣುವಂತೆ ಎತ್ತರವಾದ ದಿಬ್ಬದ ಮೇಲಿದೆ. ಈ ಬುರುಜಿನ ನಿರ್ಮಾಣಕ್ಕೆ ಸ್ಥಳೀಯವಾಗಿ ಸಿಗುವಂತಹ ಕಾಡುಗಲ್ಲುಗಳನ್ನು ಬಳಸಿ ನಿರ್ಮಿಸಲಾಗಿದೆ. ಒಳಬದಿ ಮಣ್ಣು ಮತ್ತು ಕಲ್ಲಿನ ಚೂರುಗಳನ್ನು ಸುರಿದು ಅದರ ಅಗಲವನ್ನು ವಿಸ್ತರಿಸಿದ್ದಾರೆ. ಈ ಕೋಟೆಗೆ ಗೊಂಬೆ ಬಾಗಿಲು ಮತ್ತು ಪಶ್ವಿಮ ದಿಕ್ಕಿಗಿರುವ ಬಾಗಿಲುಗಳಿದ್ದು, ಗೊಂಬೆ ಬಾಗಿಲಿನ ಹೊರಬದಿ ಆಂಗ್ಲ ಅಕ್ಷರದ ಎಲ್ ಮಾದರಿಯ ಗೋಡೆಯಿದೆ. ಶತ್ರುಗಳು ಪ್ರವೇಶ ದ್ವಾರದ ಬಳಿ ಬಂದಾಗ ಅವರ ಮೇಲೆ ಈ ಗೋಡೆಗಳ ಮೇಲಿಂದ ಪ್ರತಿದಾಳಿ ಮಾಡುವುದಕ್ಕಾಗಿ ಈ ತಂತ್ರವನ್ನು ಬಳಸಿದ್ದಾರೆ. ಒಂದು ವೇಳೆ ಇಲ್ಲಿಂದ ತಪ್ಪಿಸಿಕೊಂಡರೂ ದ್ವಾರದ ಒಳಬದಿಯ ಕಾವಲು ಮಂಟಪಗಳಲ್ಲಿ ಇರುತ್ತಿದ್ದ ಶಸ್ತ್ರಸಜ್ಜಿತ ಪಡೆಯಿಂದ ಅನೀರಿಕ್ಷಿತ ದಾಳಿಯನ್ನು ಎದುರಿಸುವಂತೆ ಮಾಡಿದ್ದರು. ಪಶ್ಚಿಮದ ಬಾಗಿಲಿನ ಮೇಲ್ಭಾಗದಲ್ಲಿ ೧.೬೦ ಮೀ. ಉದ್ದನೆಯ ಹಾಸುಗಲ್ಲನ್ನು ಹಾಸಲಾಗಿದೆ. ಬಹುಶಃ ಅದು ಮೇಲ್ಚಾವಣಿಗೆ ಬಳಸಲ್ಪಟ್ಟ ಕಲ್ಲಾಗಿರಬಹುದು. ಅದರ ಮೇಲಿನ

ಗೋಪುರ ಭಾಗವು ಹಾಳಾಗಿದೆ. ಗೊಂಬೆ ಬಾಗಿಲಿನ ಮೇಲಿರುವ ಗೋಪುರದಲ್ಲಿ ದೇವಕೋಷ್ಟಕಗಳನ್ನು ಬಿಟ್ಟಿದ್ದಾರೆ. ಒಂದು ದೇವಕೋಷ್ಟಕದಲ್ಲಿ ನಂದಿಯ ಗಾರೆ ಶಿಲ್ಪವಿದೆ. ಈ ದ್ವಾರದ ರಕ್ಷಣೆಗಾಗಿ ದಿಡ್ಡಿಬಾಗಿಲು, ಆಂಜನೇಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಉಳಿದಂತೆ ಕೋಟೆಯ ಒಳಬದಿಯಲ್ಲಿ ಇಂದಿನ ಗ್ರಾಮ ವಿಸ್ತರಿಸಲ್ಪಟ್ಟಂತೆ ಹಾಗಲವಾಡಿ ನಾಯಕರ ಕಾಲದ ಯಾವ ಕಟ್ಟಡ ಅವಶೇಷವೂ ಉಳಿದಿಲ್ಲ. ಕೇವಲ ಕೋಟೆಯ ಅನತಿ ದೂರದಲ್ಲಿ ಇರುವ ಕಟ್ಟಡದ ಅವಶೇಷವನ್ನು ಅರಮನೆ ಎಂದು ಸ್ಥಳೀಯರು ಹೇಳುತ್ತಿದ್ದಾರೆ. ಆದರೆ ಅದು ತಳಪಾಯ ಮಾತ್ರ ಹೊಂದಿರುವುದರಿಂದ ಅದು ಯಾವ ಕಟ್ಟಡದ್ದು ಎಂದು ನಿಖರವಾಗಿ ಗುರುತಿಸಲಾಗದು. ಕೋಟೆಯ ಕಂದಕಕ್ಕೆ ಮತ್ತು ದಿನನಿತ್ಯದ ಬಳಕೆಗೆ ಅನುಕೂಲವಾಗಲೆಂದು ಮುದಿಯಪ್ಪನಾಯಕನ ಕಾಲದಲ್ಲಿ ಪೂರ್ವ ದಿಕ್ಕಿಗೆ ಕೆರೆಯೊಂದನ್ನು ನಿರ್ಮಿಸಿ ಕಾಲುವೆಗಳ ಮೂಲಕ ಹರಿಸುವ ವ್ಯವಸ್ಥೆ ಮಾಡಿದ್ದಾರೆ. ಆದುದರಿಂದ ಕೋಟೆಯ ಒಳಬದಿಯಲ್ಲಿ ಯಾವುದೇ ಮಾದರಿಯ ಬಾವಿಯ ಅವಶೇಷಗಳು ಕಂಡುಬರುವುದಿಲ್ಲ.

೨೩. ಹುಲಿಯೂರುದುರ್ಗ

ಹಿಂದೆ ಈ ಪ್ರದೇಶದಲ್ಲಿ ಹುಲಿಗಳ ಸಂಖ್ಯೆ ಹೇರಳವಾಗಿದ್ದ ಕಾರಣ ಹುಲಿಯೂರು ನಾಮವಾಚಕವು(ಮಂಜುಳ ಎಸ್.ಟಿ.ಲಕ್ಷ್ಮಣ್ ಬಿ.ವಿ., ೧೯೯೯, ಉತ್ತರಿದುರ್ಗ೫, ಪುಟ ಸಂಖ್ಯೆ-೭೪,೭೫) ಜನಪದರಲ್ಲಿ ರೂಢಿಗತವಾಗಿ ಬಂದಿದೆಯೆಂದು ಸ್ಥಳೀಯರ ಅಭಿಪ್ರಾಯವು ಇಲ್ಲಿನ ದಟ್ಟಡವಿಯಿಂದ ಸ್ಪಷ್ಟವಾಗುತ್ತದೆ. ಹಿಂದೆ ಹುಲಿಯೂರನ್ನು **ವ್ಯಾಘ್ರಪುರ, ಚಿತ್ರಕಾಯಪುರ** ಎಂಬುದಾಗಿಯೂ ಕರೆಯಲಾಗುತ್ತಿತ್ತೆಂದು ಶಾಂತೇಶನ ಸಿದ್ಧೇಶ್ವರ ಪುರಾಣದಲ್ಲಿ ಉಲ್ಲೇಖವಿದೆ. ಲಕ್ಕಶೆಟ್ಟಿಪುರ ಮತ್ತು ಕಿಚ್ಚವಾಡಿ, ಉಜ್ಜನಿ ಶಾಸನಗಳು ೧೫೪೩ರವರೆಗೂ ಈ ಗ್ರಾಮಕ್ಕೆ ಹುಲಿಯೂರು ಎಂಬ ಹೆಸರೇ ಇತ್ತೆಂದು ಸ್ಪಷ್ಟಪಡಿಸುತ್ತವೆ. ೧೫೪೩ರ ನಂತರವೇ ಇಲ್ಲಿ ಕೋಟೆ ನಿರ್ಮಾಣವಾದಂತೆ ಕಾಣುತ್ತದೆ. ಏಕೆಂದರೆ ಹುಲಿಯೂರಿಗೆ ದುರ್ಗ ಎಂಬ ಪದ ಸೇರ್ಪಡೆಗೊಂಡಿದ್ದು ೧೫೪೩ರ ನಂತರವೇ ಎಂಬುದು ಶಾಸನಗಳಲ್ಲೂ ಸ್ಪಷ್ಟತೆ ಸಿಗುತ್ತದೆ. ಕೃಷ್ಣದೇವರಾಯ ೧೫೧೬ರಲ್ಲಿ ಜಗದೇವರಾಯನನ್ನು ಸೋಲಿಸಿ ಆತನ ಅಧೀನದಲ್ಲಿದ್ದ ಈ ಕೋಟೆಯನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡನೆಂದು ಉಲ್ಲೇಖ ಸಿಗುವುದರಿಂದ ೧೬೩೮ಕ್ಕಿಂತಲೂ ಪೂರ್ವದಲ್ಲಿ ಕೋಟೆ ನಿರ್ಮಾಣವಾಗಿರುವುದು ಖಚಿತವಾಗುತ್ತದೆ. ಮಾಗಡಿ ಕೆಂಪೇಗೌಡನ ಕಾಲದಲ್ಲಿ ಇದು ಕ್ರಿ.ಶ. ೧೬೩೮ರಲ್ಲಿ ಗಡಿದುರ್ಗವಾಗಿ ಪ್ರಸಿದ್ಧಿಗೆ ಬಂದಿತು.[೯] ನಂತರ ಚಿಕ್ಕದೇವರಾಜ ಒಡೆಯ, ಹೈದರ್-ಟಿಪ್ಪುವಿನ ಕಾಲದಲ್ಲಿ ಕೋಟೆಯು ಮತ್ತಷ್ಟು ವಿಸ್ತರಿಸಲ್ಪಟ್ಟು ದುಭೇದ್ಯವಾಗಿ ರೂಪುಗೊಂಡಿತು. ಕ್ರಿ.ಶ. ೧೬೪೦ರಲ್ಲಿ ಅಪಜಲ್‌ಖಾನ್ ಮತ್ತು ಒಡೆಯರ ನಡುವೆ ಇಲ್ಲಿ ಕಾಳಗ ನಡೆದಾಗ ಕೋಟೆಯ ಸ್ವಲ್ಪ ಭಾಗ ಹಾಳುಗೆಡವಲ್ಪಟ್ಟಿತು. ಕ್ರಿ.ಶ. ೧೬೬೭ ರಲ್ಲಿ ದೇವರಾಜ ಒಡೆಯರು ಈ ಕೋಟೆಯನ್ನು ವಶಪಡಿಸಿಕೊಂಡರೂ ೧೭೯೧ರ ನಂತರ

ಕಾರ್ನ್‌ವಾಲೀಸ್‌ನ ನಿಯಂತ್ರಣಕ್ಕೆ ಒಳಪಟ್ಟಿತು. ಪುನಃ ಟಿಪ್ಪು ಈ ಕೋಟೆಯನ್ನು ತನ್ನ ಸ್ವಾಧೀನಕ್ಕೆ ತೆಗೆದುಕೊಂಡು ದುರಸ್ತಿಪಡಿಸಿದನು. ಆದರೂ ಕ್ರಿ.ಶ. ೧೭೯೨ರಲ್ಲಿ ಕರ್ನಲ್ ಮ್ಯಾಕ್ಸ್‌ವೆಲ್‌ನು[೯೭] ಈ ಕೋಟೆಯನ್ನು ಕಿಲ್ಲೇದಾರನಿಂದ ಪುನಃ ತನ್ನ ವಶಕ್ಕೆ ತೆಗೆದುಕೊಂಡನು. ಹೀಗೆ ನಿರಂತರ ಕಾದಾಟಕ್ಕೆ ಕಾರಣವಾದ ಈ ಕೋಟೆಯ ಐತಿಹಾಸಿಕತೆ ಅದರ ರಕ್ಷಣಾಬದ್ಧ ವಾಸ್ತು ವಿನ್ಯಾಸದಿಂದ ತಿಳಿಯುತ್ತದೆ.

ಇಡೀ ಬೆಟ್ಟ ತೆಂಗಿನ ಚಿಪ್ಪಿನಂತೆ ಬೋರಲಾಗಿ ಬಿದ್ದಿರುವಂತೆ ನೈಸರ್ಗಿಕ ರಚನೆ ಹೊಂದಿರುವುದರಿಂದ ಶತ್ರುಗಳ ಪಾಲಿಗೆ ಬೆಟ್ಟವನ್ನು ಏರುವುದು ತ್ರಾಸದಾಯಕ ಕೆಲಸವಾಗುತ್ತದೆ. ಬಹುಶಃ ಇದನ್ನು ಗಮನಿಸಿಯೇ ಕೆಂಪೇಗೌಡನು ಇಲ್ಲಿ ಕೋಟೆಯನ್ನು ಕಟ್ಟಿಸಿರಬಹುದು. ನೆಲಗೋಟೆಯು ವಾಸ್ತುಬದ್ಧವಾಗಿ ನಿರ್ಮಾಣಗೊಂಡಿದ್ದು, ಬೆಟ್ಟದ ಮೇಲೆ ಹೋದಂತೆ ಅಲ್ಲಿಯೇ ಸಿಗುವಂತಹ ಕಲ್ಲುಗಳನ್ನು ಬಳಸಿಕೊಂಡು ತಮಗೆ ಹೇಗೆ ಸರಿ ಎನಿಸುತ್ತದೋ ಹಾಗೆ ಗೋಡೆಯನ್ನು ಕಟ್ಟುತ್ತಾ ಹೋಗಿದ್ದಾರೆ. ಇಡೀ ಬೆಟ್ಟ ಕಡಿದಾಗಿರುವಂತಹದ್ದೇ ಈ ರೀತಿಯ ನಿರ್ಮಾಣಕ್ಕೆ ಕಾರಣವಿರಬಹುದು. ಏಕೆಂದರೆ ಬೆಟ್ಟದಲ್ಲಿ ತುದಿ ಭಾಗದ ಸುತ್ತಲೂ ಎಲ್ಲಿಯೂ ಪ್ರವೇಶಿಸಲು ಅವಕಾಶ ಇಲ್ಲದಂತೆ ಪ್ರಪಾತವಿದೆ. ಹಾಗಾಗಿ ತಮಗೆ ಅವಶ್ಯ ಎನಿಸಿದಲ್ಲಿ ಮಾತ್ರ ಅದು ಕೋಟೆಯ ಒಳಗಿನವರೇ ಪ್ರಪಾತಕ್ಕೆ ಬೀಳದಿರಲೆಂದು ತಡೆಗೋಡೆಯನ್ನು ನಿರ್ಮಿಸಿದ್ದಾರೆ. ನೆಲಗೋಟೆಗೆ ಆಯತ, ಚೌಕ, ತ್ರಿಭುಜ, ಚಪ್ಪಟೆ ಮಾದರಿಯಲ್ಲಿ ಗ್ರಾನೈಟ್ ಶಿಲೆಯನ್ನು ಉಳಿಗಳಿಂದ ಕತ್ತರಿಸಿ ಬಳಸಿದ್ದಾರೆಂಬುದಕ್ಕೆ ಪ್ರತಿ ಕಲ್ಲಿನ ಅಂಚಿಗೂ ಉಳಿಯ ಗುರುತುಗಳು ಹಾಗೆಯೇ ಉಳಿದುಕೊಂಡಿವೆ. ಅವುಗಳನ್ನು ಹೆಚ್ಚು ನಯಗೊಳಿಸುವುದಕ್ಕೆ ಹೋಗದೆ ಹಾಗೆಯೇ ನಿರ್ಮಾಣಕ್ಕೆ ಬಳಸಿಕೊಂಡಿದ್ದಾರೆ. ಗೋಡೆಯನ್ನು ೯೦ ಡಿಗ್ರಿಯಂತೆ ನೇರವಾಗಿ ಸುಮಾರು ೩ರಿಂದ ೫ ಮೀ.ವರೆಗೆ ನಿರ್ಮಿಸಲಾಗಿದ್ದು, ಫಿರಂಗಿಗಳ ಹೊಡೆತಕ್ಕೆ ಅದು ಹಾಳಾಗದಿರಲೆಂದು ಬೃಹತ್ ರೀತಿಯ ಮಣ್ಣಿನ ಇಳಿವೊರೆಯನ್ನು ಹಾಕಿದ್ದಾರೆ. ಕೆಲವೆಡೆ ಗೋಡೆಯನ್ನು ಬೃಹತ್ ನೈಸರ್ಗಿಕ ಗುಂಡುಗಳ ಮಧ್ಯೆಯೇ ನಿರ್ಮಿಸಲಾಗಿದೆ. ಆದರೆ ಬೆಟ್ಟದ ತುದಿಯ ಭಾಗದಲ್ಲಿ ಇಳಿಜಾರಾದ ಸ್ಥಳಗಳಲ್ಲಿ ನಿರ್ಮಾಣಗೊಂಡ ಗೋಡೆಗೆ ಕಾಡುಗಲ್ಲು, ಆಯತ, ಚೌಕ, ಮಾದರಿಯಲ್ಲಿ ಕತ್ತರಿಸಿದ ಗ್ರಾನೈಟ್ ಶಿಲೆ ಹಾಗೂ ಆಕಾರವಿಲ್ಲದ ಸೈಜುಗಲ್ಲುಗಳನ್ನು ಬಳಸಿಕೊಳ್ಳಲಾಗಿದೆ. ಇವು ಪ್ರಪಾತಕ್ಕೆ ಕುಸಿಯದಿರಲೆಂದು ಅದರ ಹೊರ ಅಂಚಿಗೆ ರಂಧ್ರಗಳನ್ನು ಕೊರೆದು ಕಬ್ಬಿಣದ ಮೊಳೆಗಳನ್ನು ಜೋಡಿಸಿರುವುದು ಗೋಡೆಯ ರಚನಾ ತಂತ್ರಜ್ಞಾನವನ್ನು ತಿಳಿಯಪಡಿಸುತ್ತದೆ.

ತುದಿಯ ಭಾಗದ ಗೋಡೆಯ ನಿರ್ಮಾಣಕ್ಕೆ ಮಣ್ಣಿಗೆ ಬದಲಾಗಿ ಗಾರೆಯ ಗಚ್ಚನ್ನು ಬಳಸಿರುವುದು ವಿಶೇಷವೆನಿಸುತ್ತದೆ. ಗೋಡೆಯ ಮೇಲೆ ಓಡಾಡಲು ಇಳಿವೊರೆಯನ್ನೇ ಅಟ್ಟಾಲಕವನ್ನಾಗಿ ಬಳಸಿಕೊಂಡಿರಬಹುದಾದರೂ, ಅದರ ಮೇಲೆ ಓಡುವುದು ಹೊರಗಿನಿಂದ ಕಾಣಿಸಬಾರದೆಂದು ನಿರ್ಮಿಸಲಾಗುವ ಎದೆ ಮಟ್ಟದವರೆಗಿನ ಕಾಪುಗೋಡೆಯ ಅವಶೇಷ

ಎಲ್ಲಿಯೂ ಕಂಡುಬರುವುದಿಲ್ಲ. ಬಹುಶಃ ಮಣ್ಣಿನ ಕೈಪಿಡಿ ಗೋಡೆ ಇದ್ದಿರಬಹುದಾದರೂ ಅದು ಕಾಲಾಂತರದಲ್ಲಿ ನಾಶವಾಗಿದ್ದಿರುವ ಸಂಭವವಿರುತ್ತದೆ. ಇಡೀ ಕೋಟೆಯಲ್ಲಿ ದ್ವಾರದ ಬಳಿ ಹೊರತುಪಡಿಸಿದರೆ ಮತ್ತೆಲ್ಲೂ ಕೊತ್ತಲಗಳು ಕಂಡುಬರುವುದಿಲ್ಲ. ಅದೂ ದ್ವಾರದ ಬಳಿ ಶತ್ರುಗಳಿಗೆ ಅಭೇದ್ಯತೆಯನ್ನು ಉಂಟುಮಾಡುವ ಉದ್ದೇಶದಿಂದ ಮಾತ್ರ ನಿರ್ಮಾಣ ಆಗಿರುವಂತಹದ್ದಾಗಿದೆ. ಮುಖ್ಯ ದ್ವಾರವನ್ನು ನೆಲಗೋಟೆಯಲ್ಲಿ ಜಿಗ್‌ಜಾಗ್ ಮಾದರಿಯಲ್ಲಿ ಹಲವು ತಿರುವುಗಳಿಂದ ಕೂಡಿದ ಗೋಡೆಗಳ ಮೂಲಕ ಪ್ರವೇಶಿಸಬೇಕು. ಏಕೆಂದರೆ ಈ ಮಾದರಿಯಲ್ಲಿ ಪ್ರವೇಶ ದ್ವಾರಗಳಿದ್ದಾಗ ಶತ್ರುಗಳ ಮೇಲೆ ಒಳಗಿನಿಂದ ಅನಿರೀಕ್ಷಿತ ಪ್ರತಿ ದಾಳಿಗಳನ್ನು ಮಾಡಲು ಅನುಕೂಲವಿರುತ್ತಿತ್ತು. ಉಳಿದಂತೆ ಇಡೀ ಬೆಟ್ಟವನ್ನು ಕಲ್ಲಾಸರೆ, ಕಂದರಗಳ ಮೂಲಕ ಏರಬೇಕಿರುವುದರಿಂದ ಅವುಗಳೇ ಶತ್ರುಗಳ ಪಾಲಿಗೆ ಅಭೇದ್ಯ ದ್ವಾರಗಳಾಗಿದ್ದವು. ಅದರಲ್ಲೂ ತುದಿಯ ಭಾಗವನ್ನು ಕಡಿದಾದ ಹೆಬ್ಬಂಡೆಯಲ್ಲಿ ಕಿರಿದಾದ ಮೆಟ್ಟಿಲುಗಳ ಮೂಲಕ ಏರಬೇಕಿರುವುದು ಎಂತಹವರಿಗೂ ಕಷ್ಟದಾಯಕ ಎನಿಸುತ್ತದೆ. ಆದುದರಿಂದ ತುರ್ತು ಸಂದರ್ಭದಲ್ಲಿ ರಕ್ಷಣೆ ಪಡೆದುಕೊಳ್ಳುವುದಕ್ಕಾಗಿ ಮುಖ್ಯ ಅಧಿಕಾರಿ ವರ್ಗದವರ ಕಟ್ಟಡಗಳು ತುದಿಯ ಭಾಗದಲ್ಲಿ ಹೆಚ್ಚಾಗಿ ನಿರ್ಮಾಣಗೊಂಡಿವೆ. ಅಲ್ಲಿಯೇ ಇರುವ ಮದ್ದಿನ ಮನೆಯ ತಳಪಾಯಕ್ಕೆ ಕಲ್ಲನ್ನು ಬಳಸಿ ಮೇಲ್ಭಾಗದ ಗೋಡೆಯನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಆ ಗೋಡೆಗೆ ತುದಿಯಲ್ಲಿ ತ್ರಿಭುಜ ಮಾದರಿಯ ಸಣ್ಣ ಬೆಳಕಿನ ಕಿಂಡಿಗಳನ್ನು ಬಿಡಲಾಗಿದೆ. ಈ ಮದ್ದಿನ ಮನೆ ದ್ವಾರವನ್ನು ಒಂದು ಮೀಟರ್ ಎತ್ತರದಲ್ಲಿ ನಿರ್ಮಿಸಲಾಗಿದೆ. ಅದಕ್ಕೆ ಬಾಗಿಲನ್ನು ಹಾಕುತ್ತಿದ್ದರೆಂಬುದಕ್ಕೆ ದ್ವಾರದ ಎರಡೂ ಬದಿ ಕಂಬಗಳಿವೆ. ಉಳಿದಂತೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣಗೊಂಡ ತುಪ್ಪದ ಕೊಳ, ಧಾನ್ಯದ ಕಣಜ, ನೀರಿನ ಕಟ್ಟೆ, ಯಾವ ಕಟ್ಟಡದ್ದೆಂದು ಗುರುತಿಸಲಾಗದ ತಳಪಾಯದ ಅವಶೇಷಗಳು ಕಂಡುಬರುತ್ತವೆ. ಆದರೆ ನೆಲಗೋಟೆಯಲ್ಲಿ ಇರುವ ಕಟ್ಟಡಗಳ ಅವಶೇಷಗಳು ಸಾಮಾನ್ಯ ಜನರ ವಸತಿ ನಿವೇಶನಗಳಂತೆ ಕಾಣುತ್ತವೆ. ಏಕೆಂದರೆ ಇವುಗಳ ನಿರ್ಮಾಣಕ್ಕೂ ಬೆಟ್ಟದ ತುದಿಯಲ್ಲಿರುವ ವಸತಿ ಕಟ್ಟಡಗಳ ರಚನಾ ಶೈಲಿಗೂ ವ್ಯತ್ಯಾಸವಿದೆ. ಕೋಟೆಯಲ್ಲಿ ನೀರಿನ ಸಮಸ್ಯೆ ಎದುರಾಗಬಾರದೆಂಬ ಉದ್ದೇಶಕ್ಕಾಗಿ ಇಳಿಜಾರಾದ ಸ್ಥಳಗಳಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ನೀರನ್ನು ಸಂಗ್ರಹಿಸುವಂತಹ ವ್ಯವಸ್ಥೆ ಮಾಡಿದ್ದಾರೆ.

ಆರಂಭದಲ್ಲಿ ಹುಲಿಯೂರುದುರ್ಗವು ಮಾಗಡಿ ಮಹಾನಾಡ ಪ್ರಭುಗಳ ಅಧೀನದಲ್ಲಿ ಕೇವಲ ಒಂದು ರಕ್ಷಣಾ ಕೇಂದ್ರವಾಗಿ ಕಾರ್ಯ ನಿರ್ವಹಿಸುತ್ತಿದ್ದು, ಅಭೇದ್ಯದುರ್ಗವಾಗಿ ರೂಪುಗೊಂಡ ನಂತರ ಕಿಲ್ಲೇದಾರರೇ ಸ್ವತಂತ್ರವಾಗಿ ಆಳ್ವಿಕೆ ನಡೆಸಲು ಮುಂದಾದ ಸಂಗತಿ ಶಾಸನಗಳಿಂದ ತಿಳಿಯುತ್ತದೆ.

೨೪. ಹುತ್ತರೀದುರ್ಗ(ಹುತ್ರಿದುರ್ಗ)

ಹುತ್ತರೀದುರ್ಗವು ಶಂಕರೇಶ್ವರನಬೆಟ್ಟ,[೯೮] ಬಸವನಬೆಟ್ಟ, ಕುಂಬಿಬೆಟ್ಟ, ತಿರುಮಲಬೆಟ್ಟ[೯೯] ನೆಲಗೆದರೆಬೆಟ್ಟ(ಒಲಗದಬೆಟ್ಟ)ಗಳಿಂದ ಸುತ್ತುವರೆದಿದೆ. ನಾಲ್ಕೂ ಬೆಟ್ಟಗಳಲ್ಲಿ ಕೋಟೆಯ ಅವಶೇಷಗಳು ಕಂಡುಬರುತ್ತವೆ. ಈ ಕೋಟೆಯಲ್ಲಿ ಯಾವುದೇ ಪಾಳೆಯಗಾರನು ಸ್ವತಂತ್ರವಾಗಿ ಆಳ್ವಿಕೆ ಮಾಡಿಲ್ಲದಿದ್ದರೂ ದುರ್ಗದ ಸುತ್ತಲೂ ಅದರ ರಕ್ಷಣೆಗಾಗಿ ಗಡಿದುರ್ಗಗಳನ್ನು ಹೊಂದಿರುವಂತಹದ್ದು ವಿಶೇಷವೆನಿಸುತ್ತದೆ. ಏಕೆಂದರೆ ಎಲ್ಲಿಯೂ ಇಂತಹ ನಿರ್ಮಿತಿಗಳನ್ನು ಕಾಣಲಾಗುವುದಿಲ್ಲ. ಇದು ಕೇವಲ ಮಾಗಡಿ ಮಹಾನಾಡ ಪ್ರಭುಗಳಿಗೆ ಗಡಿದುರ್ಗವಾಗಿ ಕಾರ್ಯನಿರ್ವಹಿಸಿತ್ತು.

ಹುತ್ರಿದುರ್ಗದಲ್ಲಿ ಇಂದಿಗೂ ಎತ್ತರವಾದ ಹುತ್ತಗಳು ಕಂಡುಬರುವುದರಿಂದ ಹುತ್ತಗಳಿರುವ ಸ್ಥಳದಲ್ಲಿ ಕೋಟೆ-ಕೊತ್ತಲ ನಿರ್ಮಾಣಗೊಂಡಿರುವುದರಿಂದ ಹುತ್ತರೀದುರ್ಗ ಎಂಬ ಹೆಸರು ಬಂದಿರಬಹುದು. ಉಳಿದಂತೆ ಆಯಾಯ ಬೆಟ್ಟಗಳಲ್ಲಿ ಕಿಲ್ಲೇದಾರರಾಗಿ ಕಾರ್ಯ ನಿರ್ವಹಿಸಿದ್ದವರ ಹೆಸರಿನಿಂದಲೇ ಅವು ಕರೆಯಲ್ಪಡುತ್ತಿವೆ.

ಹುತ್ರಿದುರ್ಗದ ಕೋಟೆಯು ಕ್ರಿ.ಶ. ೧೬೩೮ರಲ್ಲಿ ಮಾಗಡಿ ಕೆಂಪೇಗೌಡನಿಂದ ನಿರ್ಮಿಸಲ್ಪಟ್ಟು, ಒಡೆಯರು, ಹೈದರ್-ಟಿಪ್ಪುವಿನ ಕಾಲದಲ್ಲಿ ವಿಸ್ತರಿಸಲ್ಪಟ್ಟಿತ್ತು. ಆದರೆ ಮರಾಠರ ತ್ರಯಂಬಕರಾವ್ ಮತ್ತು ಬ್ರಿಟೀಷ್ ಅಧಿಕಾರಿಗಳಾದ ಜನರಲ್ ಸ್ಟುವರ್ಟ್[೧೦೦] ಎಂಬುವವರಿಂದ ಹಾಳುಗೆಡವಲ್ಪಟ್ಟಿತ್ತು. ೧೭೯೯ರಲ್ಲಿ ಟಿಪ್ಪು ಮರಣ ಹೊಂದಿದ ನಂತರ ಇದು ಮೈಸೂರು ಒಡೆಯರ ಸುಪರ್ದಿಗೆ ಒಳಪಟ್ಟಿತು.

ಶಂಕರನ ಬೆಟ್ಟ ಮತ್ತು ಬಸವನ ಬೆಟ್ಟದ ಮಧ್ಯೆ ನಿರ್ಮಿಸಲ್ಪಟ್ಟ ನೆಲಗೋಟೆಯೇ ಸಮುದ್ರ ಮಟ್ಟದಿಂದ ೮೦೦ ಅಡಿ ಎತ್ತರವಿರುವ ಗುಡ್ಡದ ಮೇಲಿದೆ. ಅದೇ ರೀತಿ ಕುಂಭಿಬೆಟ್ಟ ಸಮುದ್ರದ ಮಟ್ಟದಿಂದ ೩೮೬೦ ಅಡಿ ಎತ್ತರದಲ್ಲಿದೆ.[೧೦೧] ಒಟ್ಟಾರೆ ಈ ಕೋಟೆಯು ೭ ಸುತ್ತುಗಳನ್ನು, ೯ ಹೆಬ್ಬಾಗಿಲು, ೨ ದಿಡ್ಡಿ ಬಾಗಿಲುಗಳನ್ನು ಹೊಂದಿದೆ. ಈ ಕೋಟೆಯ ನಿರ್ಮಾಣಕ್ಕೆ ಅಲ್ಲಿಯೇ ಸಿಗುವಂತಹ ಗ್ರಾನೈಟ್ ಶಿಲೆಯನ್ನು ಬಳಸಿಕೊಳ್ಳಲಾಗಿದೆ. ಈ ಪ್ರದೇಶವನ್ನು ವಾಸ್ತುಬದ್ಧವಾಗಿ ಬಳಸಿಕೊಂಡು ಕೋಟೆ-ಕೊತ್ತಲ ನಿರ್ಮಿಸಿದ್ದೇ ಆಗಿದ್ದರೆ ಕರ್ನಾಟಕ ಅಭೇದ್ಯ ಗಿರಿದುರ್ಗಗಳಲ್ಲಿ ಒಂದಾಗಿರುತ್ತಿತ್ತು. ಏಕೆಂದರೆ ವಿಶಾಲ ಮೈದಾನವು ನಾಲ್ಕು ದಿಕ್ಕಿನಿಂದಲೂ ಬೆಟ್ಟಗಳಿಂದ ಸುತ್ತುವರೆದಿರುವಂತಹದ್ದು ನೈಸರ್ಗಿಕವಾಗಿ ಅವುಗಳೇ ಕೋಟೆ ಗೋಡೆಗಳಂತೆ ರಕ್ಷಣೆ ನೀಡುತ್ತಿದ್ದವು. ಆದುದರಿಂದಲೇ ನೈಸರ್ಗಿಕ ಗುಂಡುಗಳನ್ನು ಗೋಡೆಗಳ ನಿರ್ಮಾಣದ ಸಂದರ್ಭದಲ್ಲಿ ಹಾಗೆಯೇ ಉಳಿಸಿಕೊಳ್ಳಲಾಗಿದೆ. ಈ ತಂತ್ರವು ಗೋಡೆಗಳಿಗೆ ಫಿರಂಗಿ ಗುಂಡುಗಳಿಗೂ ಜಗ್ಗದಂತಹ ಅನುಕೂಲವನ್ನು ಕಲ್ಪಿಸಿದೆ. ಇಷ್ಟೆಲ್ಲಾ ನೈಸರ್ಗಿಕ ಅನುಕೂಲತೆಗಳಿದ್ದರೂ ಯಾವ ಅರಸು ಮನೆತನವಾಗಲಿ ಈ ಕೋಟೆಯನ್ನು ವೈಜ್ಞಾನಿಕವಾಗಿ ಜೀರ್ಣೋದ್ಧಾರಪಡಿಸುವುದಕ್ಕೆ ಪ್ರಯತ್ನಿಸದಿರುವುದು ಆಶ್ಚರ್ಯದ ಸಂಗತಿಯಾಗಿದೆ. ಆದರೂ ಟಿಪ್ಪು, ಮರಾಠ ಮತ್ತು ನಿಜಾಮ

ಸೇನೆಯನ್ನು ಯಶಸ್ವಿಯಾಗಿ ಹಿಮ್ಮೆಟ್ಟಿಸಿದ್ದು ಇಲ್ಲಿಯೇ ಎಂಬುದು ಈ ದುರ್ಗದ ಮಹತ್ವವನ್ನು ತಿಳಿಯಪಡಿಸುತ್ತದೆ. ಹೀಗಿದ್ದರೂ ಟಿಪ್ಪು ಸಹ ಇದನ್ನು ಮತ್ತಷ್ಟು ಬಲಪಡಿಸುವ ಗೋಜಿಗೆ ಹೋಗದಿರುವಂತಹದ್ದು ಸೋಜಿಗವೆನಿಸುತ್ತದೆ. ನೆಲಗೋಟೆಗೆ ಆಯತ, ಚೌಕ, ಆಯತದಲ್ಲಿ ಉದ್ದನೆಯ ನುಣುಪುಗೊಳಿಸಿದ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ನಂತರ ಐದು ಮತ್ತು ಆರನೆಯ ಸುತ್ತಿನ ಕೋಟೆ ಗೋಡೆಗಳಿಗೂ ಸಹ ಬೃಹತ್ ಕಾಡುಗಲ್ಲುಗಳನ್ನು ಬಳಸಿದ್ದರೂ ಅವುಗಳ ಮಧ್ಯೆ ಅಂತರ ಉಂಟಾಗದಂತೆ ಮಾಡಿದ್ದಾರೆ. ಶಂಕರೇಶ್ವರನ ಕೋಟೆಗೆ ತಳಭಾಗದಲ್ಲಿ ಬೃಹತ್ ಕಾಡುಗಲ್ಲುಗಳನ್ನು ಜೋಡಿಸಿ ಗೋಡೆಯನ್ನಾಗಿ ಬಳಸಿಕೊಳ್ಳಲಾಗಿದೆ. ನಂತರ ಕಾಲಘಟ್ಟದಲ್ಲಿ ಅದರ ಮೇಲೆ ಸಣ್ಣದಾದ ಕಾಡುಗಲ್ಲುಗಳನ್ನು ಬಳಸಿ ಗೋಡೆಯ ಎತ್ತರವನ್ನು ಇಮ್ಮಡಿಗೊಳಿಸಿದ್ದಾರೆ. ಸಾಮಾನ್ಯವಾಗಿ ಗೋಡೆಯಲ್ಲಿ ಹೆಬ್ಬಂಡೆಗಳಿದ್ದರೆ ಅವುಗಳ ಮೇಲೆ ಕೈಪಿಡಿ ಗೋಡೆಯನ್ನು ನಿರ್ಮಿಸಲು ಸಾಧ್ಯವಾಗುತ್ತಿರಲಿಲ್ಲ. ಆ ಕಾರಣಕ್ಕಾಗಿ ಗೋಡೆಯ ಮಧ್ಯ ಭಾಗದಲ್ಲೇ ಬಂದೂಕು ಕಿಂಡಿಗಳನ್ನು ಬಿಡಲಾಗಿದೆ. ಜೊತೆಗೆ ಗೋಡೆಯ ಮೇಲೆ ಓಡಾಡಲು ವೇದಿಕೆಗಳನ್ನು ಸಹ ಬಿಟ್ಟಿಲ್ಲ. ಏಕೆಂದರೆ ಗೋಡೆಯ ತಳಪಾಯ ಅಗಲವಾಗಿದ್ದು, ಮೇಲೆ ಹೋದಂತೆ ಕಿರಿದಾಗುತ್ತಾ ಬಂದಿದೆ. ಅಂದರೆ ತ್ರಿಭುಜದ ಮಾದರಿಯಲ್ಲಿದೆ. ಹಾಗಾಗಿ ಸೈನಿಕರು ಓಡಾಟಕ್ಕೆ ಅಟ್ಟಾಲಕವನ್ನು ಬಿಡಲು ಸಾಧ್ಯವಾಗಿಲ್ಲ. ಬೆಟ್ಟದಲ್ಲಿ ಬೃಹತ್ ಹೆಬ್ಬಂಡೆ, ಕಲ್ಲಾಸರೆ, ದಟ್ಟಡವಿ ಇರುವುದರಿಂದ ತುರ್ತು ಸಂದರ್ಭದಲ್ಲಿ ಕೋಟೆಯ ಒಳಗಿರುವವರು ಶತ್ರು ಪಾಳೆಯಕ್ಕೆ ಕಾಣಿಸದಾಗೆ ಎಲ್ಲಿ ಬೇಕಾದರೂ ಅವಿತುಕೊಳ್ಳಬಹುದಾದ ರಕ್ಷಣಾ ತಂತ್ರಕ್ಕೆ ಪ್ರಕೃತಿಯೇ ಅವಕಾಶ ಮಾಡಿಕೊಟ್ಟಿದೆ. ಹಾಗಾಗಿ ಅನಾವಶ್ಯಕವಾಗಿ ಎಲ್ಲೆಂದರಲ್ಲಿ ಗೋಡೆಯನ್ನು ವಾಸ್ತುಬದ್ಧವಾಗಿ ರಚಿಸುವ ಕಾರ್ಯಕ್ಕೆ ಮುಂದಾಗಿಲ್ಲ. ತಮ್ಮಗೆ ಅನುಕೂಲಕ್ಕೆ ತಕ್ಕಂತೆ ಶತ್ರುಗಳು ಸುಲಭವಾಗಿ ಪ್ರವೇಶಿಸಲು ಅವಕಾಶ ಇರುವಲ್ಲಿ ಮಾತ್ರ ಗೋಡೆಯನ್ನು ನಿರ್ಮಾಣ ಮಾಡಿದ್ದಾರೆ. ಮೈಸೂರು ಬಾಗಿಲ ಬಳಿ ಮಾತ್ರ ಗೋಡೆಯ ಮೇಲ್ಭಾಗದಲ್ಲಿ ಸೈನಿಕರ ಓಡಾಟಕ್ಕೆ ಬೇಕಾದ ಅಟ್ಟಾಲಕವನ್ನು ಕಾಣಬಹುದಾಗಿದೆ. ಜೊತೆಗೆ ಕೋಟೆಯ ಒಳಗಿನ ಚಲನವಲನ ಹೊರಗಿನವರಿಗೆ ಕಾಣಿಸದ ಹಾಗೆ ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ. ಆ ಗೋಡೆಯ ಮರೆಯಲ್ಲಿ ನಿಂತು ಹೋರಾಡಲು ಅನುಕೂಲವಾಗಲೆಂದು ಬಂದೂಕು ಹಾಗೂ ಫಿರಂಗಿಕಿಂಡಿ, ವೀಕ್ಷಣಾಕಿಂಡಿ, ಕಾದ ಎಣ್ಣೆ ಮತ್ತು ಅಂಬಲಿ ಸುರಿಯಲು ಅನುಕೂಲವಾಗುವ ಕಿಂಡಿಗಳನ್ನು ಬಿಡಲಾಗಿದೆ. ಈ ದ್ವಾರದ ಮೂಲಕವೇ ಕುಂಭಿಬೆಟ್ಟಕ್ಕೆ ಹೋಗಲು ಸುಲಭವಾದ ಪ್ರವೇಶ ಇರುವುದರಿಂದ ಶತ್ರುಗಳನ್ನು ಇಲ್ಲಿಯೇ ತಡೆದು ಅವರನ್ನು ಹಿಮ್ಮೆಟ್ಟಿಸಲು ರಕ್ಷಣಾಬದ್ಧವಾದ ಗೋಡೆಯನ್ನು ನಿರ್ಮಿಸಲಾಗಿದೆ. ಈ ಗೋಡೆಗಳ ಬಳಿ ನಿರಂತವಾಗಿ ಪ್ರತಿ ದಾಳಿ ನಡೆಸಲು ಅನುಕೂಲವಾಗಲೆಂದು ಮದ್ದು ಗುಂಡು ಮತ್ತು ಶಸ್ತ್ರಾಸ್ತ್ರಗಳನ್ನು ಸಂಗ್ರಹಿಸಲು ಆಧುನಿಕ ಮಾದರಿಯ ಬಂಕರ್‌ಗಳನ್ನು ಕೈಪಿಡಿ ಗೋಡೆಗೆ ಹೊಂದಿಕೊಂಡಂತೆ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ. ಶಂಕರೇಶ್ವರ

ಬೆಟ್ಟಕ್ಕೆ ಹೋಗಲು ಹೆಬ್ಬಂಡೆಯಲ್ಲಿನ ಕಿರಿದಾದ ಮೆಟ್ಟಿಲುಗಳನ್ನು ಬಳಸಲೇ ಬೇಕಿರುವುದರಿಂದ ಶತ್ರು ಪಾಳೆಯ ಇಲ್ಲಿಗೆ ಬಂದ ತಕ್ಷಣ ಗೋಡೆಯ ಮೇಲಿಂದ ಕಾದ ಎಣ್ಣೆ ಮತ್ತು ಅಂಬಲಿಯನ್ನು ಸುರಿಯಲು ಅನುವಾಗಲೆಂದು ಬೃಹತ್ ಎಣ್ಣೆಯ ಕಣಜವನ್ನು ಕುಂಭಿಬೆಟ್ಟದಲ್ಲಿ ನಿರ್ಮಿಸಲಾಗಿದೆ.

ಬಸವನದುರ್ಗದ ಕೋಟೆ ಗೋಡೆಗೆ ಕಾಡುಗಲ್ಲುಗಳನ್ನು ಹೇಗೆಂದರೆ ಹಾಗೆಯೇ ಒಡೆದು ಅದನ್ನು ನುಣುಪುಗೊಳಿಸದೆ ಬಳಸಲಾಗಿದೆ. ಈ ಗೋಡೆಯಲ್ಲಿನ ವಿಶೇಷವೆಂದರೆ ಪ್ರತಿ ಕಲ್ಲಿನ ಮಧ್ಯೆ ಚಕ್ಕೆಗಳನ್ನು ಜೋಡಿಸಿ ಅದು ಸಡಿಲಗೊಳ್ಳದಂತೆ ಮಾಡಿದ್ದಾರೆ. ಗೋಡೆಯ ಮೇಲಿನ ಕೈಪಿಡಿ ಗೋಡೆಯನ್ನು ಮಾತ್ರ ಹಸಿ ಮಣ್ಣಿನಿಂದ ಮಾಡಲಾದ ಇಟ್ಟಿಗೆಗಳಿಂದ ನಿರ್ಮಿಸಿದ್ದು, ಇಂದಿಗೂ ಕೈಪಿಡಿ ಗೋಡೆಯಲ್ಲಿ ಎಲ್ಲಿಯೂ ಸಣ್ಣದಾದ ಬಿರುಕು ಸಹ ಕಾಣಿಸಿಕೊಂಡಿಲ್ಲ; ಇದರಿಂದ ಗೋಡೆಯ ರಚನಾ ನೈಪುಣ್ಯತೆ ಹೇಗಿದ್ದಿತ್ತು ಎಂಬ ಅಂಶ ಸ್ಪಷ್ಟಗೊಳ್ಳುತ್ತದೆ. ಈ ಕೈಪಿಡಿ ಗೋಡೆಯ ವಿಶೇಷತೆ ಎಂದರೆ ಕೇವಲ ಒಬ್ಬರು ಮಾತ್ರ ಓಡಾಡುವಷ್ಟು ಸ್ಥಳಾವಕಾಶ ಇದೆ. ತಿರುಮಲ ಬೆಟ್ಟ ಮಾತ್ರ ಕೇವಲ ಕಿಲ್ಲೇದಾರನ ಕಟ್ಟಡದ ಸುತ್ತಲೂ ಆಯತ ಮಾದರಿಯ ಗೋಡೆಯನ್ನು ಹೊಂದಿದೆ. ಅದು ಕೇವಲ ತಳಪಾಯದವರೆಗೆ ಮಾತ್ರ ಉಳಿದುಕೊಂಡಿದೆ. ಕುಂಬಿಬೆಟ್ಟ ಮತ್ತು ಒಲಗದ ಗುಡ್ಡಗಳ ನಡುವೆ ಸಂಪರ್ಕ ಕಲ್ಪಿಸಲು ಆಳವಾದ ಕೊರಕಲಿಗೆ ಮೇಲಿಂದ ಗುಂಡುಗಳನ್ನು ಹೊರಳಿಸಿ ಅದನ್ನೇ ಕೋಟೆ ಗೋಡೆಯನ್ನಾಗಿ ಮಾಡಿಕೊಂಡಿದ್ದಾರೆ. ಆ ಗುಂಡುಗಳ ತಳಭಾಗದಲ್ಲಿ ಗುಪ್ತವಾದ ಬಾಗಿಲಿರುವುದನ್ನು ಗಮನಿಸಿದರೆ ಬಹುಶಃ ತುರ್ತು ಸಂದರ್ಭಗಳಲ್ಲಿ ಮಾತ್ರ ಬಳಕೆಯಾದಂತೆ ಕಾಣುತ್ತದೆ. ಏಕೆಂದರೆ ಒಳಗಿನವರಿಗಾಗಲಿ ಇಲ್ಲವೇ ಹೊರಗಿನವರಿಗಾಗಲಿ ಈ ಬಾಗಿಲು ಗೋಚರವಾಗದಂತೆ ಗುಂಡುಗಳ ಒಳಬದಿಯಲ್ಲಿದೆ. ನೆಲಗೆದರೆ ಬೆಟ್ಟಕ್ಕೆ ಒಂದು ಬದಿ ಮಾತ್ರ ಗೋಡೆಯಿದ್ದು, ಮತ್ತೊಂದೆಡೆ ಆಳವಾದ ಪ್ರಪಾತ ಇರುವುದರಿಂದ ಗೋಡೆಯ ಅವಶ್ಯಕತೆ ಕಂಡುಬಂದಿಲ್ಲ.

ಹೀಗೆ ವಿಶಾಲವಾಗಿ ಹರಡಿಕೊಂಡ ಈ ಕೋಟೆಯ ಅಳಿವು ಉಳಿವಿನ ಭವಿಷ್ಯ ಪ್ರವೇಶ ದ್ವಾರಗಳ ಮೇಲೆಯೇ ಅಡಗಿರುತ್ತಿತ್ತು. ಹಾಗಾಗಿ ಇವುಗಳನ್ನು ಜಿಗ್‌ಜಾಗ್, 'ಎಲ್' ಮಾದರಿಯಲ್ಲಿ ಹಲವು ತಿರುವುಗಳಿಂದ ಕೂಡಿರುವಂತೆ ನಿರ್ಮಿಸಲಾಗಿದೆ. ಕೆಲವೆಡೆ ಮುಖ್ಯ ದ್ವಾರವನ್ನು ಪ್ರವೇಶಿಸಲು ಹಲವು ತಿರುವುಗಳಿಂದ ಕೂಡಿದ ಮತ್ತೊಂದು ಕಿರುದ್ವಾರದ ಮೂಲಕ ಪ್ರವೇಶಿಸುವಂತಹ ತಂತ್ರವನ್ನು ರೂಪಿಸಿ ಶತ್ರುಗಳಿಗೆ ಭಯಾನಕ ವಾತಾವರಣ ಸೃಷ್ಟಿಯಾಗುವಂತೆ ಮಾಡಿದ್ದಾರೆ. ಅಲ್ಲದೆ ದ್ವಾರದ ರಕ್ಷಣೆಗಾಗಿ ಹೊರಬದಿಯಲ್ಲಿ ಆಂಜನೇಯ, ಗಣೇಶ, ನಂದಿಯ ಮೂರ್ತಿಗಳನ್ನು ಪ್ರತಿಷ್ಠಾಪಿಸಿ ಸೈನಿಕರ ಮನೋಸ್ಥೈರ್ಯವನ್ನು ಹೆಚ್ಚಿಸುವ ಕಾರ್ಯ ಮಾಡಿದ್ದಾರೆ. ಏಕೆಂದರೆ ವೈದಿಕರಲ್ಲಿ ದೈವದ ಬಗೆಗೆ ಅತೀವ ನಂಬಿಕೆ ಇರುವುದರಿಂದ ದೇವಾನುದೇವತೆಗಳು ನಮಗೆ ಸದಾ ಕಾಲ ರಕ್ಷಣೆ ನೀಡಲಿ ಎನ್ನುವ ಕಾರಣಕ್ಕಾಗಿ ಈ ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಿದ್ದರು. ಹೀಗೆ ದೇವತಾ ಮೂರ್ತಿಗಳಿದ್ದ ಪಕ್ಷದಲ್ಲಿ ಹೋರಾಟದ ಸಂದರ್ಭದಲ್ಲಿ ಆತನೇ ನಮ್ಮ

ಬೆನ್ನೆಲುಬಾಗಿ ರಕ್ಷಿಸುತ್ತಾನೆಂಬ ನಂಬಿಕೆ ಸೈನಿಕರಲ್ಲಿ ಉಂಟಾದಾಗ ಅವರು ಮೊದಲಿಗಿಂತಲೂ ಹೆಚ್ಚು ಮನೋಬಲದಿಂದ ಹೋರಾಡಬಲ್ಲರು ಎನ್ನುವುದಕ್ಕಾಗಿ ದ್ವಾರಗಳಲ್ಲಿ ದೇವಾಲಯ, ಮೂರ್ತಿಗಳ ನಿರ್ಮಾಣ ಮಾಡಲಾಗುತ್ತದೆ. ದ್ವಾರಗಳಲ್ಲಿ ಕಂಬ, ಪೀಠಗಳ ಮೇಲೆ ಕೆತ್ತಲ್ಪಟ್ಟ ಮತ್ಸ್ಯ, ಮಕರ, ಬೇಡರ ಕಣ್ಣಪ್ಪ, ನಂದಿ, ಶಿವಲಿಂಗ, ಲಜ್ಜಾಗೌರಿ, ಯಾಳಿ, ಕೂರ್ಮ ಮೊದಲಾದ ಉಬ್ಬುಶಿಲ್ಪಗಳು ಕೋಟೆಯ ಒಳಗಿನವರಿಗೆ ಮತ್ತು ವಿಶೇಷವಾಗಿ ಶತ್ರುಗಳಿಗೆ ಭಯಾನಕ ವಾತಾವರಣವನ್ನು ಸೂಚಿಸಲು ಸಂಕೇತಗಳಾಗಿ ಬಳಕೆಯಾಗುತ್ತಿದ್ದವು. ಮೈಸೂರು ಬಾಗಿಲಿನ ಬಳಿ ಒಳ ಮತ್ತು ಹೊರಬದಿಯಲ್ಲಿ ಎರಡೆರಡು ಮರದ ಬಾಗಿಲುಗಳನ್ನು ಹಾಕಲಾಗಿತ್ತೆಂದು ದ್ವಾರದ ಮೇಲ್ಭಾಗದಲ್ಲಿ ಬಿಟ್ಟಿರುವ ರಂಧ್ರಗಳಿಂದ ಖಚಿತವಾಗುತ್ತದೆ. ಮುಖ್ಯ ದ್ವಾರಗಳನ್ನು ಕೇವಲ ತುರ್ತು ಸಂದರ್ಭ ಹೊರತುಪಡಿಸಿ ಸದಾ ಮುಚ್ಚಲಾಗುತ್ತಿತ್ತೆನ್ನಲು ದ್ವಾರಗಳಲ್ಲಿರುವ ದಿಡ್ಡಿ ಬಾಗಿಲುಗಳಿಂದ ಸ್ಪಷ್ಟವಾಗುತ್ತದೆ. ಕೆಲವೆಡೆ ಬೃಹತ್ ಆದ ಹೆಬ್ಬಂಡೆಗಳ ಮಧ್ಯೆಯೇ ಪ್ರವೇಶ ದ್ವಾರವನ್ನು ನಿರ್ಮಿಸಲಾಗಿದೆ. ಕೆಲವು ದ್ವಾರಗಳು ನೇರವಾಗಿ ಗೋಡೆಯ ಮಧ್ಯೆ ಎರಡು ಕಂಬಗಳ ಮೂಲಕ ಒಳ ಪ್ರವೇಶಿಸುವ ಹಾಗೆ ನಿರ್ಮಾಣಗೊಂಡಿವೆ.

ಕೋಟೆ-ಕೊತ್ತಲ ಎಷ್ಟೇ ಅಭೇದ್ಯವಾಗಿದ್ದರೂ ನೀರಿನ ಸಂಗ್ರಹಣೆ ಇಲ್ಲವೆಂದರೆ ಅದು ಬಹುಬೇಗ ಶತ್ರುಗಳ ವಶವಾಗುತ್ತದೆ. ಹಾಗಾಗಿ ಇವರು ಇಡೀ ಬೆಟ್ಟದಲ್ಲಿ ಬೀಳುವ ಮಳೆಯ ನೀರು ನೆಲಗೋಟೆಯ ಉತ್ತರ ದಿಕ್ಕಿನ ಕೋಟೆ ಗೋಡೆಯ ಒಳಬದಿ ಸಂಗ್ರಹಗೊಳ್ಳುವಂತೆ ಮಾಡಿ ವರ್ಷಪೂರ್ತಿ ನೀರಿನ ಸಮಸ್ಯೆ ಎದುರಾಗದಂತಹ ತಂತ್ರ ರೂಪಿಸಿದ್ದಾರೆ. ಪ್ರತಿ ಸುತ್ತಿನ ಕೋಟೆಯ ಒಳಬದಿ ಇಳಿಜಾರಾದ ಕೊರಕಲಿಗೆ ಕಲ್ಲಿನ ಇಲ್ಲವೇ ಗಾರೆ ಮತ್ತು ಇಟ್ಟಿಗೆಯಿಂದ ತಡೆಗೋಡೆ ನಿರ್ಮಿಸಲ್ಪಟ್ಟಿರುವುದನ್ನು ಗಮನಿಸಿದರೆ ಗೋಡೆಯ ಮೇಲೆ ಪಹರೆ ಕಾಯುವವರಿಗೆ ಅಲ್ಲಿಯೇ ನೀರು ಸಿಗುವಂತಹ ಉದ್ದೇಶವೂ ಇದರ ಹಿಂದೆ ಇದ್ದಿರಬಹುದು. ಬೆಟ್ಟದಲ್ಲಿ ಹರಿಯುವ ಮಳೆ ನೀರು ಶುದ್ಧೀಕರಿಸಲ್ಪಟ್ಟು ನೆಲಗೋಟೆಯಲ್ಲಿರುವ ಬಾವಿಗೆ ಸೇರುವ ಹಾಗೆ ಅದನ್ನು ಇಳಿಜಾರಾದ ಸ್ಥಳದಲ್ಲಿ ನಿರ್ಮಿಸಿರುವ ಅವರ ತಂತ್ರ ವಾಸ್ತು ವೈವಿಧ್ಯತೆಯಿಂದ ಕೂಡಿದೆ. ಶಂಕರೇಶ್ವರ ದೇವಾಲಯದ ಬಳಿ ಮದ್ದುಗುಂಡು ಸಂಗ್ರಹಿಸಲು ನಿರ್ಮಾಣಗೊಂಡ ಬಂಕರ್ ವಾಸ್ತು ಹಿನ್ನೆಲೆಯಿಂದ ವಿಶೇಷವಾಗಿದೆ. ಅದೇ ರೀತಿ ಆಹಾರಧಾನ್ಯ, ತುಪ್ಪ, ಎಣ್ಣೆ, ಕಾಳುಗಳನ್ನು ಸಂಗ್ರಹಿಸಲು ವೃತ್ತ ಮಾದರಿಯ ಕಣಜಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ಹಾಗೂ ಕಲ್ಲು ಮತ್ತು ಮಣ್ಣಿನಿಂದ ನಿರ್ಮಿಸಲಾಗಿದೆ. ಸುಮಾರು ನಾಲ್ಕುನೂರು ವರ್ಷಗಳ ಹಿಂದೆ ನಿರ್ಮಾಣಗೊಂಡ ಈ ಮಣ್ಣಿನ ಕಣಜಗಳು ಇಂದಿಗೂ ಒಂದಿಷ್ಟು ಹಾಳಾಗದಂತೆ ಇರುವುದು ಅವರಲ್ಲಿದ್ದ ವಾಸ್ತು ರಚನೆಯ ಜ್ಞಾನವನ್ನು ತೋರ್ಪಡಿಸುತ್ತದೆ. ಅದೇ ರೀತಿ ಕೋಟೆಯಲ್ಲಿ ಜನವಸತಿ, ಅಧಿಕಾರಿ ವರ್ಗದ ಕಟ್ಟಡಗಳು, ದರ್ಬಾರು ಸಭಾಂಗಣ, ನೃತ್ಯ ವೇದಿಕೆ, ಮಂಟಪ, ಅರಮನೆ, ಕೋಶಖಾನೆ, ನ್ಯಾಯದ ಕಟ್ಟೆ ಮೊದಲಾದ ಅವಶೇಷಗಳು ಅವರ ದಿನನಿತ್ಯದ ಜೀವನಶೈಲಿಯನ್ನು ಅನಾವರಣಗೊಳಿಸುತ್ತದೆ.

೨೫. ಭಸ್ಮಾಂಗಿ

ಭಸ್ಮಾಂಗಿ ಬೆಟ್ಟ ಎರಡು ಹಂತಗಳಲ್ಲಿ ಪ್ರತ್ಯೇಕಗೊಂಡಿದ್ದು, ಕದಿರಪ್ಪ ಮತ್ತು ಕದಿರಮ್ಮ ಬೆಟ್ಟಗಳೆಂದು ಕರೆಯಲ್ಪಡುತ್ತಿವೆ. ಸಿರಾ ಪಾಳೆಯಗಾರರು ತಮ್ಮ ಸಂಸ್ಥಾನದ ರಕ್ಷಣೆಗಾಗಿ ಗಡಿಭಾಗದ ಸುತ್ತಲೂ ಕೋಟೆಗಳನ್ನು ಕಟ್ಟಿಸುತ್ತಿದ್ದರು. ಅಂತಹವುಗಳಲ್ಲಿ ಒಂದಾದ ಭಸ್ಮಾಂಗಿದುರ್ಗವನ್ನು ರಂಗಪ್ಪನಾಯಕ ತನ್ನ ಸಾಮಂತ ಬೂದಿಬಸಪ್ಪನಾಯಕನಿಗೆ ಕಟ್ಟಿಸಲು ಕ್ರಿ.ಶ.೧೬೫೦ರಲ್ಲಿ[೧೦೨] ಆದೇಶ ಹೊರಡಿಸಿದನು. ಬೂದಿಬಸಪ್ಪ ಆರಂಭದಲ್ಲಿ ಮಣ್ಣಿನ ಕೋಟೆಯನ್ನು ನಿರ್ಮಿಸಿಕೊಂಡು ಆಳ್ವಿಕೆ ನಡೆಸಿದನು. ಜೊತೆಗೆ ಈತನಿಂದಲೇ ಶಿವನ ದೇವಸ್ಥಾನ ನಿರ್ಮಾಣಗೊಂಡಿದ್ದರಿಂದ ಅದಕ್ಕೆ ಬೂದಿ ಅಂದರೆ ಭಸ್ಮ ಎಂಬುದಾಗಿ ತನ್ನ ನಾಮದೇಯವು ಸೇರಿಕೊಂಡು ಭಸ್ಮಾಂಗೀಶ್ವರ ಎಂದು ಪ್ರಸಿದ್ಧಿಗೆ ಬಂದಿತು. ಕ್ರಮೇಣ ಭಸ್ಮಾಂಗಿಶ್ವರ ದೇವಾಲಯ ಪ್ರಸಿದ್ಧಿ ಹೊಂದಿದಂತೆ ಕದಿರಪ್ಪ ಮತ್ತು ಕದಿರಮ್ಮ ಬೆಟ್ಟಗಳು ಭಸ್ಮಾಂಗಿಬೆಟ್ಟ ಎಂದೇ ಜನಪದರಲ್ಲಿ ರೂಡಿಗೆ ಬಂದಿತು. ಕದಿರಪ್ಪ ಮತ್ತು ಕದಿರಮ್ಮ ಎಂಬುದಾಗಿ ಈ ಬೆಟ್ಟಗಳು ಕರೆಯಲ್ಪಡುವುದನ್ನು ಗಮನಿಸಿದರೆ ಬಹುಶಃ ಇವರು ಇಲ್ಲಿಯ ಸ್ಥಳೀಯ ಅಧಿಕಾರಿ ಇಲ್ಲವೇ ಕಿಲ್ಲೇದಾರರು ಆಗಿರಬಹುದು. ಆದರೂ ಬೂದಿಬಸಪ್ಪನ ನಂತರ ಇಲ್ಲಿ ಯಾರು ಆಳ್ವಿಕೆ ನಡೆಸಿದರು ಎಂಬುದಕ್ಕೆ ಆಕರಗಳ ಕೊರತೆಯಿಂದ ಈ ಕೋಟೆಗೆ ಸಂಬಂಧಿಸಿದಂತೆ ಸ್ಪಷ್ಟ ಚಿತ್ರಣ ನೀಡಲು ಸಾಧ್ಯವಿಲ್ಲ. ಸಾಮಾನ್ಯವಾಗಿ ಈ ಪ್ರಾಂತ್ಯವೆಲ್ಲಾ ಆ ಕಾಲಘಟ್ಟಕ್ಕೆ ಸಿರಾ ಸುಬೇದಾರರ ಅಧೀನಕ್ಕೆ ಒಳಪಟ್ಟಿದ್ದರಿಂದ ಭಸ್ಮಾಂಗಿಯು ಸಹ ಅವರ ಸುಪರ್ದಿಗೆ ಸೇರ್ಪಡೆಗೊಂಡಿತು. ಕ್ರಿ.ಶ.೧೭೬೮ರಲ್ಲಿ ಹೈದರ್[೧೦೩] ಈ ಕೋಟೆಯನ್ನು ವಶಪಡಿಸಿಕೊಂಡು ಹಳೆಯ ಕೋಟೆ ಇದ್ದ ಸ್ಥಳದಲ್ಲಿ ಅದಕ್ಕೆ ಹೊಸದಾಗಿ ಕಲ್ಲಿನ ಜೋಡಣೆ ಮಾಡಿದನು. ಕೋಟೆಯನ್ನು ನಂತರ ಮರಾಠರು, ಮೈಸೂರು ಒಡೆಯರ ಅಧಿಪತ್ಯಕ್ಕೆ ಒಳಪಟ್ಟಿತ್ತೆಂದು ಅವರ ಕಾಲದ ಸಿರಾ, ನಿಡುಗಲ್ಲು, ಮಧುಗಿರಿ, ರತ್ನಗಿರಿಗಳ ಮೇಲಿನ ದಾಳಿಗಳಿಂದ ಸ್ಪಷ್ಟವಾಗುತ್ತದೆ.

ಭಸ್ಮಾಂಗಿ ಕೋಟೆಯ ಲಕ್ಷಣಗಳು

ಭಸ್ಮಾಂಗಿಬೆಟ್ಟ ಎಂದು ಕರೆಯಲ್ಪಡುತ್ತಿರುವ ಕದಿರಪ್ಪ ಮತ್ತು ಕದಿರಮ್ಮ ಎಂಬ ಎರಡು ಬೆಟ್ಟಗಳ ಮೇಲ್ಭಾಗದಲ್ಲಿ ವಿಶಾಲವಾದ ಮೈದಾನ ಇರುವುದರಿಂದ ಇಡೀ ಬೆಟ್ಟವೇ ಅಭೇದ್ಯದುರ್ಗವಾಗಿ ರೂಪುಗೊಂಡಿದೆ. ಇದನ್ನು ಗಮನಿಸಿಯೇ ಬೂದಿಬಸಪ್ಪನಾಯಕ ಈ ಕವಲೊಡೆದ ಬೆಟ್ಟಗಳನ್ನು ಜೋಡಿಸಿಲು ಕೋಟೆಯನ್ನು ಕಟ್ಟಿಸಿದನು. ಈತನ ಕಾಲದಲ್ಲಿ ಕೇವಲ ನೆಲಗೋಟೆ ಮತ್ತು ಕದಿರಪ್ಪ ಬೆಟ್ಟದ ಮೇಲಿನ ಕೋಟೆ ಮಾತ್ರ ನಿರ್ಮಾಣಗೊಂಡಂತೆ ಕಾಣುತ್ತದೆ. ಏಕೆಂದರೆ ಈ ಹಂತದ ಕೋಟೆಯ ನಿರ್ಮಾಣ ಶೈಲಿಗೂ ಟಿಪ್ಪುವಿನ ಕಾಲದ ಕೋಟೆಯ ಶೈಲಿಗೂ ವ್ಯತ್ಯಾಸವಿದೆ. ನೆಲಗೋಟೆ ಮತ್ತು ಬಸವಣ್ಣ ದೇವಾಲದ ಬಳಿ ಇರುವ ಕೋಟೆಗೆ ಸಣ್ಣ ಕಾಡುಗಲ್ಲುಗಳನ್ನು ಬಳಸಲಾಗಿದ್ದು, ಗೋಡೆಯ ತಳಪಾಯ ಅಗಲವಾಗಿ ಮೇಲೆ ಹೋದಂತೆ ಕಿರಿದಾಗುತ್ತಾ ಹೋಗಿದೆ. ಈ ಗೋಡೆಯಲ್ಲಿ ಮಧ್ಯ ಭಾಗಕ್ಕಿಂತ ಮೇಲೆ ಕಿಂಡಿಗಳನ್ನು

ಬಿಡಲಾಗಿದೆ. ಬಹುಶಃ ತುರ್ತು ಸಂದರ್ಭದಲ್ಲಿ ಗೋಡೆಯ ಒಳ ಬದಿಯಲ್ಲಿ ಮರದ ಅಟ್ಟಾಲಕಗಳನ್ನು ಇಟ್ಟು ಅದರ ಮೇಲಿಂದ ಈ ಕಿಂಡಿಗಳ ಮೂಲಕ ಶತ್ರುಗಳ ಮೇಲೆ ಬಿಲ್ಲು ಬಾಣ, ಮದ್ದು ಗುಂಡು ಪ್ರಯೋಗಿಸುತ್ತಿದ್ದರು. ಆದರೆ ಹೈದರನ ಕಾಲದ ಕೋಟೆಗೆ ಅಟ್ಟಾಲಕ ಮತ್ತು ಕೈಪಿಡಿಗೋಡೆ ಗೋಡೆಯ ಮೇಲ್ಭಾಗವೇ ಇರುತ್ತಿದ್ದರಿಂದ ಮರದ ಅಟ್ಟಾಲಕ ನಿರ್ಮಾಣಕ್ಕೆ ಪ್ರತಿ ವರ್ಷ ತಗಲುವ ವೆಚ್ಚದಲ್ಲಿ ಕಡಿತಗೊಳಿಸಿದರು. ಈ ಗೋಡೆಗೆ ಬೃಹತ್ ಗ್ರಾನೈಟ್ ಕಲ್ಲುಗಳನ್ನು ಆಯತ ಚೌಕ, ಚಪ್ಪಟೆಯ ಮಾದರಿಯಲ್ಲಿ ಉಳಿಗಳಿಂದ ಕತ್ತರಿಸಿ ಬಳಸಲಾಗಿದೆ. ಕಲ್ಲುಗಳ ಮಧ್ಯೆ ಅಂತರವಿರುವಲ್ಲಿ ಮಾತ್ರ ಚಕ್ಕೆಗಳ್ಳು ಜೋಡಿಸಿ ಗೋಡೆ ಸಡಿಲಗೊಳ್ಳದಂತೆ ಭದ್ರಪಡಿಸಿದ್ದಾರೆ. ಗೋಡೆಯ ಒಳಬದಿಯಲ್ಲಿ ಮಣ್ಣಿನ ಇಳಿವೋರೆಯನ್ನು ನಿರ್ಮಿಸಿ ಅದು ಮಳೆಯ ನೀರಿಗೆ ಕೊಚ್ಚಿ ಹೋಗದಿರಲೆಂದು ಅದರ ಮತ್ತೊಂದು ಬದಿಗೆ ಕಲ್ಲಿನ ಹೊದಿಕೆಯನ್ನು ಹಾಕಿದ್ದಾರೆ. ಸೈನಿಕರಿಗೆ ಓಡಾಡಲು ಸ್ಥಳಾವಕಾಶ ಕಲ್ಪಿಸುವ ಉದ್ದೇಶದಿಂದ ಈ ಇಳಿವೋರೆಯ ಮೇಲೆ ಹಾಸುಗಲ್ಲುಗಳನ್ನು ಹಾಸಿ ಗಾರೆಯಿಂದ ನುಣುಪುಗೊಳಿಸಿದ್ದಾರೆ. ಹೀಗೆ ಇಳಿವೋರೆಯ ಮೇಲೆ ಓಡಾಡುವ ಸೈನಿಕರು ಹೊರಗಿನವರಿಗೆ ಕಾಣದಿರಲೆಂದು ಎದೆ ಮಟ್ಟದವರೆಗೂ ಇಟ್ಟಿಗೆ ಮತ್ತು ಗಾರೆಯಿಂದ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ. ಈ ಕೈಪಿಡಿ ಗೋಡೆ ೯೦ ಡಿಗ್ರಿಯಲ್ಲಿದ್ದರೆ ಕುಸಿಯುವ ಸಂಭವ ಹೆಚ್ಚಿರುತ್ತಿದ್ದರಿಂದ ಇದರ ಮೇಲ್ಮುಖ ಇಳಿಜಾರಾಗಿದೆ. ಇದರಿಂದ ಒಳಗಿರುವವರಿಗೆ ಹೊರಗಿನ ಶತ್ರುಗಳ ಚಲನವಲನ ಸ್ಪಷ್ಟವಾಗಿ ಕಾಣುತ್ತಿತ್ತು. ಜೊತೆಗೆ ಮಳೆಯ ನೀರು ಗೋಡೆಯ ಮೇಲೆ ನಿಲ್ಲದಂತೆ ಹರಿದುಕೊಂಡು ಹೋಗುವಂತೆ ಮಾಡುವ ತಂತ್ರವೂ ಇದರ ಹಿಂದೆ ಇತ್ತು. ಈ ವಿಧಾನದಿಂದ ಕೈಪಿಡಿ ಗೋಡೆಗೆ ಬಳಸಿದ ಗಾರೆ ಗಚ್ಚಿನ ತಳಪಾಯವು ಕುಸಿದರೂ ಗಚ್ಚು ಮಾತ್ರ ಹಾಗೆಯೇ ಇರುತ್ತಿತ್ತು. ಇದನ್ನು ಗಮನಿಸಿದರೆ ಹೈದರನ ಕಾಲದಲ್ಲಿ ಗಾರೆ ರಚನಾ ಕೌಶಲ್ಯ ಎಷ್ಟಿತ್ತೆಂಬುದು ವೇದ್ಯವಾಗುತ್ತದೆ.

ಬೆಟ್ಟದ ಕಡಿದಾದ ಭಾಗದಲ್ಲಿ ನಿರ್ಮಾಣಗೊಂಡ ಕೋಟೆ ಗೋಡೆ ಕೆಲವೊಮ್ಮೆ ಪ್ರಪಾತಕ್ಕೆ ಬೀಳುವ ಸಂಭವ ಇರುತ್ತದೆ ಎಂಬ ಕಾರಣಕ್ಕೆ ಅದರ ಹೊರ ಅಂಚಿಗೆ ಕಬ್ಬಿಣಕ್ಕೆ ಬದಲಾಗಿ ಕಲ್ಲಿನಿಂದ ಮಾಡಿದ ಮೊಳೆಗಳನ್ನು ಜೋಡಿಸಿದ್ದಾರೆ. ಅಂದರೆ ಪಾಳೆಯಪಟ್ಟುಗಳಿಗೆ ಎತ್ತರವಾದ ಬೆಟ್ಟ ಪ್ರದೇಶದಲ್ಲಿ ಕೋಟೆ ನಿರ್ಮಾಣ ಮಾಡುವಂತಹ ಕಾರ್ಯ ಆರ್ಥಿಕವಾಗಿ ತ್ರಾಸದಾಯಕವಾಗಿರುತ್ತದೆ. ಹಾಗಾಗಿ ಆದಷ್ಟು ಆರ್ಥಿಕವಾಗಿ ಹೊರೆಯಾಗಬಾರದೆಂಬ ಉದ್ದೇಶದಿಂದ ಈ ಮಾದರಿಯಲ್ಲಿ ದೇಶಿಯವಾದ ಕಡಿಮೆ ಖರ್ಚುದಾಯಕವಾದ ತಂತ್ರೋಪಾಯಗಳನ್ನು ಕಂಡುಕೊಂಡಿದ್ದಾರೆ. ಕಬ್ಬಿಣದ ಬಳಕೆ ವೆಚ್ಚದಾಯಕ ಆಗಿರುವುದರಿಂದ ಅದಕ್ಕೆ ಪರ್ಯಾಯವಾಗಿ ಶಿಲೆಯಿಂದ ಮಾಡಿದ ಉಳಿಗಳನ್ನು ಬಳಸಿಕೊಂಡಿದ್ದಾರೆ. ಕೆಲವೆಡೆ ಗುಂಡು ಕಲ್ಲುಗಳನ್ನು ಸುರಿದು ಗೋಡೆಗೆ ರಕ್ಷಣೆ ನೀಡುವ ಪ್ರಯತ್ನವನ್ನು ಸಹ ಮಾಡಲಾಗಿದೆ. ಬೂದಿಬಸವಪ್ಪನ ಕಾಲದಲ್ಲಿ ನಿರ್ಮಾಣವಾದ ಕೋಟೆ ಗೋಡೆಯ ಮೇಲೇರಲು ಕಲ್ಲಿನ ಮೆಟ್ಟಿಲುಗಳಿವೆ. ಅದೇ

ರೀತಿ ಒಳಬದಿಯಲ್ಲಿ ಮಾತ್ರ ಸೀಮಿತ ಭಾಗಗಳಲ್ಲಿ ಚೌಕ ಮಾದರಿಯ ಕೊತ್ತಲಗಳು ಕಂಡುಬರುತ್ತವೆ. ಹೈದರನ ಕಾಲದಲ್ಲಿ ನಿರ್ಮಾಣಗೊಂಡ ಕೋಟೆ ಗೋಡೆಗಳಲ್ಲಿ ವಿಶೇಷವಾಗಿ ವೃತ್ತ, ಚೌಕ, ಗಜಪುಷ್ಠಾಕಾರದ ಕೊತ್ತಲಗಳನ್ನು ಕಾಣಬಹುದು. ಬಹುತೇಕ ಕೊತ್ತಲಿನ ಮೇಲೇರಲು ವ್ಯವಸ್ಥಿತವಾದ ಕಲ್ಲಿನ ಮೆಟ್ಟಿಲುಗಳನ್ನು ಮಾಡಲಾಗಿದೆ. ಅಂತಹ ಕೊತ್ತಲಗಳಲ್ಲಿ ಸೈನಿಕರ ಓಡಾಟಕ್ಕೆ ಹಾಗೂ ಶಸ್ತ್ರಾಸ್ತ್ರ ಇಡಲು ಬೇಕಾದ ಸ್ಥಳಾವಕಾಶವನ್ನು ಹಾಸುಗಲ್ಲು ಮತ್ತು ಗಾರೆಯಿಂದ ನುಣುಪುಗೊಳಿಸಲಾಗಿದೆ. ಪ್ರತಿ ಕೊತ್ತಲಿನ ಎರಡೂ ಬದಿಯಲ್ಲೂ ಮದ್ದು ಗುಂಡುಗಳ ಸಂಗ್ರಹಣೆಗಾಗಿ ಆಧುನಿಕ ಮಾದರಿಯ ಬಂಕರ್‌ಗಳನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲಾಗಿದೆ.

ಭಸ್ಮಾಂಗಿಯ ನೆಲಗೋಟೆಯೂ ಸೇರಿದಂತೆ ಇರುವ ಎಲ್ಲಾ ೯ ದ್ವಾರಗಳೂ ಗೋಡೆಯ ಮಧ್ಯ ಭಾಗದಲ್ಲಿ ನೇರ ಪ್ರವೇಶವನ್ನು ಹೊಂದಿವೆ. ಒಳಬದಿಯಲ್ಲಿ ಕೆಲವೆಡೆ ಕಾವಲು ಮಂಟಪ ಇದ್ದರೆ, ಮತ್ತೆ ಕೆಲವೆಡೆ ಮುಖ್ಯ ದ್ವಾರದ ಪಕ್ಕದಲ್ಲಿಯೇ ಗೋಡೆಯ ಮಧ್ಯೆ ದಿಡ್ಡಿ ಬಾಗಿಲುಗಳಿವೆ. ಪೂರ್ವ ದಿಕ್ಕಿಗಿರುವ ಒಂದು ದ್ವಾರ ಮಾತ್ರ ಗುಪ್ತ ದ್ವಾರವಾಗಿದ್ದು, ಕೇವಲ ಪಾಳೆಯಗಾರು ಮತ್ತು ಅಧಿಕಾರಿ ವರ್ಗದವರು ತುರ್ತು ಸಂದರ್ಭದಲ್ಲಿ ಹೊರ ಹೋಗುವುದಕ್ಕಾಗಿ ನಿರ್ಮಾಣಗೊಂಡಂತಿದೆ. ಏಕೆಂದರೆ ಈ ದ್ವಾರದಲ್ಲಿ ಒಮ್ಮೆಗೆ ಕೇವಲ ಇಬ್ಬರು ಮಾತ್ರ ಹೊರ ಹೋಗಲು ಅವಕಾಶವಿದೆ. ಅಲ್ಲಿಂದ ಹೊರ ಹೋದರೆ ಬೃಹತ್ ಹೆಬ್ಬಂಡೆಗಳ ನಡುವೆ ಇರುವಂತಹ ಗುಹೆ, ಕಲ್ಲಾಸರೆ ಇರುವಲ್ಲಿಗೆ ಸುಲಭವಾಗಿ ಹೋಗಿ ರಕ್ಷಣೆ ಪಡೆದುಕೊಳ್ಳಬಹುದಿತ್ತು. ಹಾಗಾಗಿ ಇದು ಗುಪ್ತ ಮಾರ್ಗವಾಗಿಯೇ ಕಾರ್ಯ ನಿರ್ವಹಿಸುತ್ತಿತ್ತು ಎಂಬುದರಲ್ಲಿ ಸಂದೇಹವಿಲ್ಲ. ಮತ್ತೆ ಕೆಲವು ದ್ವಾರಗಳನ್ನು ಹೆಬ್ಬಂಡೆಗಳ ನಡುವೆ ಇರುವ ಕಂದರಗಳ ಮೂಲಕ ಪ್ರವೇಶಿಸಬೇಕಿರುವುದರಿಂದ ಶತ್ರುಗಳ ಮೇಲೆ ಅನಿರೀಕ್ಷಿತ ದಾಳಿ ಮಾಡಲು ಅನುಕೂಲ ಕಲ್ಪಿಸಿತ್ತು.

ಇಡೀ ಬೆಟ್ಟ ಎರಡು ಜೋಡಿ ಗುಡ್ಡಗಳಿಂದ ಕವಲೊಡೆದು ವಿಶಾಲ ಮೈದಾನವನ್ನು ಸೃಷ್ಟಿಸಿದೆ. ಈ ವಿಶಾಲವಾದ ಮೈದಾನಕ್ಕೆ ಮಳೆಗಾಲದಲ್ಲಿ ಎರಡು ಗುಡ್ಡಗಳಿಂದ ಹರಿಯುವ ಮಳೆಯ ನೀರನ್ನು ತಡೆದು ಸಂಗ್ರಹಿಸುವ ಉದ್ದೇಶದಿಂದ ಈ ಕವಲುಗಳ ನಡುವೆ ತಡೆಗೋಡೆಯನ್ನು ನಿರ್ಮಿಸಿದ್ದಾರೆ. ಒಂದು ತಡೆಗೋಡೆಯಲ್ಲಿ ಸಂಗ್ರಹಗೊಂಡ ನೀರು ಪುನಃ ವ್ಯರ್ಥವಾಗಿ ಹರಿದು ಹೋಗಬಾರದೆಂದು ಮತ್ತೊಂದು ತಡೆಗೋಡೆಯನ್ನು ನಿರ್ಮಿಸಿದ್ದಾರೆ. ಈ ಕಾರಣದಿಂದಲೇ ವರ್ಷಪೂರ್ತಿ ದಿನ ನಿತ್ಯದ ಬಳಕೆಗಾಗಿ ಬೇಕಾಗುವಷ್ಟು ನೀರು ಕೋಟೆಯೊಳಗಡೆಯೇ ದೊರೆಯುತ್ತಿತ್ತು. ಜೊತೆಗೆ ಕೋಟೆಯಲ್ಲಿ ಯಾವ ಭಾಗದ ಕಟ್ಟಡಕ್ಕೂ ನೀರಿನ ಸಮಸ್ಯೆ ಎದುರಾಗಬಾರದೆಂದು ಮಳೆ ನೀರು ಸಂಗ್ರಹಗೊಳ್ಳಲು ಅವಕಾಶ ಇರುವಲ್ಲೆಲ್ಲಾ ಕಲ್ಲು ಮತ್ತು ಮಣ್ಣಿನ ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಆದುದರಿಂದ ಬೆಟ್ಟದ ತಪ್ಪಲಿನಲ್ಲಿ ಇರುವಂತಹ ಹಾಲುಬಾವಿಯಲ್ಲಿ ಎಂತಹ ಬಿರು ಬೇಸಿಗೆಯಲ್ಲೂ ಸದಾ ನೀರಿರುತ್ತದೆ. ಅಂದರೆ ಇಳಿಜಾರಾದ

ಸ್ಥಳದಲ್ಲಿ ಈ ಬಾವಿ ಇರುವುದರಿಂದ ಬೆಟ್ಟದಲ್ಲಿನ ಮಳೆ ನೀರು ವರ್ಷ ಪೂರ್ತಿ ಅಂತರ್ಜಲದ ಮೂಲಕ ಜಿನಿ ಜಿನಿಯಾಗಿ ಹರಿದು ಬರುವಂತೆ ಮಾಡಿದೆ. ಇಷ್ಟಲ್ಲದೇ ಕೋಟೆಯ ಒಳಬದಿಯಲ್ಲಿ ಅರಮನೆ, ಅಧಿಕಾರಿ ವರ್ಗದವರ ಮತ್ತು ಸಾಮಾನ್ಯ ಜನರ ವಸತಿ ನಿವೇಶನದ ಕಟ್ಟಡಗಳು, ಆಹಾರ ಧಾನ್ಯ ಮತ್ತು ತುಪ್ಪವನ್ನು ಸಂಗ್ರಹಿಸಲು ಕಣಜ, ಸೈನಿಕರಿಗೆ ಕಸರತ್ತು ಮಾಡಲು ಗರಡಿ ಮನೆ, ಶಸ್ತ್ರಾಸ್ತ್ರ ಸಂಗ್ರಹಿಸಲು ಮದ್ದಿನಮನೆ ಮೊದಲಾದ ನಿರ್ಮಿತಿಗಳು ಕಂಡುಬರುತ್ತವೆ. ಇವೆಲ್ಲವುಗಳಲ್ಲಿ ಬತೇರಿಗಳ ನಿರ್ಮಾಣ ವಿಶಿಷ್ಟವಾಗಿದೆ. ಬತೇರಿಗಳ ಮೇಲೆ ಫಿರಂಗಿಗಳನ್ನು ಸಾಗಿಸುವುದಕ್ಕಾಗಿ ಕೆಳಗಿನಿಂದ ಮೇಲಕ್ಕೆ ಇಳಿಜಾರಾಗಿ ಹಾಸುಗಲ್ಲನ್ನು ಹಾಸಲಾಗಿದೆ. ಹಾಗಾಗಿ ಫಿರಂಗಿಗಳನ್ನು ಕೊತ್ತಲ ಅಥವಾ ಬತೇರಿಗಳ ಮೇಲಕ್ಕೆ ಬಂಡಿಗಳಲ್ಲಿಟ್ಟು ತಳ್ಳುತ್ತಿದ್ದರೆಂಬ ಸಂಗತಿ ಸ್ಪಷ್ಟವಾಗುತ್ತದೆ. ಈ ಬತೇರಿಗಳಲ್ಲೇ ಫಿರಂಗಿಗಳನ್ನು ಬಳಸುತ್ತಿದ್ದರೆಂಬುದಕ್ಕೆ ಕೈಪಿಡಿ ಗೋಡೆಯಲ್ಲಿರುವ ಫಿರಂಗಿ ಕಿಂಡಿಗಳಿಂದ ಖಚಿತವಾಗುತ್ತದೆ.

೨೬. ಚಂದ್ರಗಿರಿ

ಚಂದ್ರಗಿರಿಯು ಪ್ರಾಗೈತಿಹಾಸ ಕಾಲದಿಂದಲೂ ಜನವಸತಿ ಕೇಂದ್ರವಾಗಿತ್ತು ಎಂಬುದಕ್ಕೆ ಅಲ್ಲಿ ದೊರೆತಿರುವ ಪ್ರಾಚ್ಯಾವಶೇಷಗಳಿಂದ ಸ್ಪಷ್ಟವಾಗುತ್ತದೆ. ಇಡೀ ಬೆಟ್ಟ ಮೂರು ಹಂತಗಳಲ್ಲಿ ಕವಲೊಡೆದಿದ್ದು, ಒಂದೊಂದು ಕವಲು ಸಹ ಶತ್ರುಗಳ ಚಲನವಲನ ವೀಕ್ಷಿಸಲು ಕಾವಲು ಗೋಪುರಗಳಂತೆ ಕಾರ್ಯನಿರ್ವಹಿಸುವಂತೆ ಅನುಕೂಲ ಕಲ್ಪಿಸಿದ್ದವು. ಆದುದರಿಂದ ಬೆಟ್ಟವೇ ಒಂದು ಅಭೇದ್ಯದುರ್ಗದಂತಿತ್ತು. ಇದರ ವಿಶೇಷತೆ ಎಂದರೆ ಬೆಟ್ಟದಲ್ಲಿ ಕೋಟೆ ಇದೆ ಎಂಬುದನ್ನು ಅದರ ಸಮೀಪ ಬಂದರೂ ಕಾಣುತ್ತಿರಲಿಲ್ಲ. ಹಾಗಾಗಿಯೇ ಈ ಕೋಟೆಗೆ ಪ್ರಕೃತಿಯೇ ನೈಸರ್ಗಿಕ ಅಭೇದ್ಯತೆಯನ್ನು ಕಲ್ಪಿಸಿದೆ. ಬೆಟ್ಟದ ತುದಿ ಭಾಗದಲ್ಲಿ ವಿಶಾಲ ಮೈದಾನವಿದ್ದು, ಅಧಿಕಾರಿ ವರ್ಗ, ಸಾಮಾನ್ಯರ ವಸತಿ ನಿವೇಶನ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದೆ. ಚಂದ್ರಗಿರಿಯ ಬೆಟ್ಟದ ಮೇಲಿನ ಕೋಟೆಗೂ ಬೆಟ್ಟದ ತಪ್ಪಲಿನಲ್ಲಿರುವ ಕೋಟೆಗೂ ಇರುವ ವ್ಯತ್ಯಾಸವನ್ನು ಗಮನಿಸಿದಾಗ ತುದಿ ಭಾಗದಲ್ಲಿನ ಕೋಟೆ ವಿಜಯನಗರಕ್ಕೂ ಪೂರ್ವದ್ದೆಂಬುದು ಗೋಚರವಾಗುತ್ತದೆ ಏಕೆಂದರೆ ಬ್ರಹ್ಮಗಿರಿ ಬೆಟ್ಟದ ಮೇಲಿನ ಪಶ್ಚಿಮ ದಿಕ್ಕಿನ ಗೋಡೆಗೆ ಬೃಹತ್ ಕಾಡುಗಲ್ಲುಗಳನ್ನು ಆನೆ ಇಲ್ಲವೆ ಕೋಣಗಳಿಂದ ತಳ್ಳಿಸಿ ನಿರ್ಮಾಣ ಮಾಡಿದಂತೆ ಕಂಡುಬರುತ್ತವೆ. ಈ ಕಾಲಮಾನಕ್ಕೆ ಸರಿಹೊಂದುವ ಕಲ್ಯಾಣ ಚಾಳುಕ್ಯರ ಆರಂಭ ಕಾಲಕ್ಕೆ ಸೇರಿದ ಬೆಟ್ಟದ ಬುಡದಲ್ಲಿನ ಹಂಪೇಶ್ವರ ದೇವಾಲಯದ ಬಾಗಿಲುವಾಡದ ಮೇಲೆ 'ಒಮ್ಮೆನಾಯಕ' ಎಂಬ ಹೆಸರಿನ ಉಲ್ಲೇಖ ಇರುವುದರಿಂದ ಸ್ಥಳೀಯವಾಗಿ ಆಳ್ವಿಕೆ ಮಾಡುತ್ತಿದ್ದ ಈತನಿಂದಲೇ ಕೋಟೆ ನಿರ್ಮಾಣ ಹೊಂದಿರಬಹುದು ಎಂಬ ಅಂಶ ಸ್ಪಷ್ಟಗೊಳ್ಳುತ್ತದೆ. ಏಕೆಂದರೆ ಬ್ರಹ್ಮಗಿರಿಯಲ್ಲಿ ಕಲ್ಯಾಣ ಚಾಳುಕ್ಯರ ಸಾಮಂತರಾಗಿದ್ದ ನಿಡುಗಲ್ಲು ಚೋಳರಿಂದ ನಿರ್ಮಾಣಗೊಂಡ ಕೋಟೆಯಂತೆ ಚಂದ್ರಗಿರಿಯಲ್ಲೂ ನಿಡುಗಲ್ಲು ಚೋಳರ ನೇರ ನಿಯಂತ್ರಣಕ್ಕೆ ಒಳಪಟ್ಟಿದ್ದರಿಂದ ಕೋಟೆ ಅವರಿಂದಲೇ ನಿರ್ಮಾಣಗೊಂಡಿರುವ

ಸಾಧ್ಯತೆಗಳಿವೆ. ಆದರೆ ದಕ್ಷಿಣ ಮತ್ತು ಪಶ್ಚಿಮ ದಿಕ್ಕಿನ ಗೋಡೆಯು ವಿಜಯನಗರ ಕಾಲಕ್ಕೆ ಸರಿ ಹೊಂದುವ ಆಯತ ಮತ್ತು ಚೌಕ ಮಾದರಿಯಲ್ಲಿ ಕತ್ತರಿಸಲಾದ ಗ್ರ್ಯಾನೈಟ್ ಶಿಲೆಯನ್ನು ಬಳಸಲಾಗಿದೆ. ಮೂರು ಕವಲುಗಳಾಗಿ ಹರಿಡಿಕೊಂಡಿರುವ ಮೂರು ಗುಡ್ಡಗಳ ಮೇಲೆ ಬುರುಜುಗಳನ್ನು ನಿರ್ಮಿಸಿ ಅವುಗಳನ್ನೆ ಕಾವಲು ಗೋಪುರಗಳನ್ನಾಗಿ ಬಳಸಿಕೊಂಡಿದ್ದಾರೆ. ಪಟ್ಟಣ ವಿಸ್ತಾರವಾದಂತೆ ದಿನ ನಿತ್ಯದ ಕೆಲಸ ಕಾರ್ಯಗಳಿಗೆ ಬೆಟ್ಟವನ್ನು ಏರುವುದು ಇಳಿಯುವುದು ತ್ರಾಸದಾಯಕವೆಂದು ಬೆಟ್ಟದ ತಪ್ಪಲಿನಲ್ಲಿ ನೆಲಗೋಟೆಯನ್ನು ಹೆಚ್ಚು ಬಲಪಡಿಸಿದ್ದಾರೆ. ನೆಲಗೋಟೆಯ ನಿರ್ಮಾಣ ಕಾರ್ಯ ವಿಜಯನಗರದ ಆರಂಭ ಕಾಲದಲ್ಲಿ ಆಯಿತೆಂಬ ಅಂಶ ಪಶ್ಚಿಮ ದಿಕ್ಕಿಗಿರುವ ಗೋಡೆಗೆ ಬಳಸಿದ ಗ್ರ್ಯಾನೈಟ್ ಶಿಲೆಯ ಉದ್ದನೆಯ ಆಯತ ಮತ್ತು ಚೌಕ ಮಾದರಿಯ ಸೈಜುಕಲ್ಲುಗಳಿಂದ ತಿಳಿಯುತ್ತದೆ. ಈ ಗೋಡೆಗೆ ಹೊಂದಿಕೊಂಡ ಉತ್ತರ ದಿಕ್ಕಿನ ದ್ವಾರದಲ್ಲಿ ಎರಡೂ ಬದಿ ಪೀಠದ ಮೇಲೆ ಕಾವಲು ಮಂಟಪಗಳಿವೆ. ಹೀಗೆ ಚಂದ್ರಗಿರಿಯಲ್ಲಿನ ಕೋಟೆಯು ಹಲವು ವೈಶಿಷ್ಟ್ಯತೆಗಳಿಂದ ಕೂಡಿದ್ದು, ಇಲ್ಲಿ ಬಹು ಹಿಂದೆ ಚಂದ್ರಗಿರಿಯ ಪೂರ್ವಕ್ಕೆ ಅನತಿ ದೂರದಲ್ಲಿ ರಸಸಿದ್ಧರು ಚಿನ್ನದ ಅದಿರನ್ನು ಶುದ್ಧೀಕರಿಸುವ ಪಾಂಡಿತ್ಯ ಗಳಿಸಿಕೊಂಡು ನಾಡಿನ ಹಲವು ದಿಕ್ಕಿನಲ್ಲಿ ಚಿನ್ನದ ವ್ಯಾಪಾರ ಮಾಡುತ್ತಿದ್ದರೆಂದೂ, ಒಮ್ಮೆ ಅವರಿಗೆ ಈ ಬೆಟ್ಟವು ಹುಣ್ಣಿಮೆಯ ಬೆಳದಿಂಗಳಲ್ಲಿ ಚಂದ್ರನಿಗೆ ತಾಗುವಷ್ಟು ಎತ್ತರವಾಗಿರುವಂತೆ ಕಂಡಿದ್ದರಿಂದ ಈ ಬೆಟ್ಟವನ್ನು ಚಂದ್ರಗಿರಿ ಎಂದು ಕರೆದರೆಂದು ಸ್ಥಳೀಯರಲ್ಲಿ ಪ್ರತೀತಿ ಇದೆ.

೨೭. ಯಲ್ಲಪ್ಪನಾಯಕನ ಹೊಸಕೋಟೆ

ಪಾಮುಲಬಂಡ ಎಂದು ಕರೆಯಲ್ಪಡುತ್ತಿದ್ದ ಇಂದಿನ ವೈ.ಎನ್.ಹೊಸಕೋಟೆಯಲ್ಲಿ ಇರುವಂತಹ ಏಕಶಿಲಾಬೆಟ್ಟ ನೈಸರ್ಗಿಕವಾಗಿ ಅಭೇದ್ಯವಾದ ಗಿರಿದುರ್ಗದಂತೆ ಕಾಣುತ್ತಿದ್ದ ಕಾರಣ ಯಲ್ಲಪ್ಪನಾಯಕ ಕ್ರಿ.ಶ. ೧೬೫೪ರ ರಲ್ಲಿ ಕೋಟೆಯನ್ನು ಕಟ್ಟಿಸಿ ಅದನ್ನೇ ತನ್ನ ರಾಜಧಾನಿಯನ್ನಾಗಿ ಮಾಡಿಕೊಂಡನು. ಯಲ್ಲಪ್ಪನಾಯಕನು ಹೊಸದಾಗಿ ಕೋಟೆ ಕಟ್ಟಿ ಆಳ್ವಿಕೆ ಮಾಡಿದ ಪ್ರದೇಶ ಜನಪದರಲ್ಲಿ ಯಲ್ಲಪ್ಪನಾಯಕನ ಹೊಸಕೋಟೆಯಾಗಿ ಪ್ರಸಿದ್ಧಿಗೆ ಬಂದಿತು. ನಂತರ ಈ ಕೋಟೆಯು ಪೆನುಗೊಂಡೆಯ ಪೆದ್ದಕೊನೇಟಿನಾಯಕ, ಬಿಜಾಪುರದ ಸೇನಾದಂಡನಾಯಕ ರಣದುಲ್ಲಾಖಾನ, ಹೈದರ್-ಟಿಪ್ಪುವಿನ ಸುಪರ್ದಿಗೆ ಒಳಪಟ್ಟು ಜೀರ್ಣೋದ್ಧಾರ ಹೊಂದಿದೆ. ಸಾಮಾನ್ಯವಾಗಿ ಏಕಶಿಲಾಬೆಟ್ಟ ಇರುವಲ್ಲಿ ಕೋಟೆ ನಿರ್ಮಾಣ ಮಾಡುವುದರಿಂದ ಆರ್ಥಿಕವಾಗಿ ಹೆಚ್ಚು ಹೊರೆಯಾಗುತ್ತಿರಲ್ಲ. ಆದುದರಿಂದ ಕುಂದುರ್ಪಿಯಲ್ಲಿ ದುರ್ಭೇದ್ಯ ಕೋಟೆ ಇದ್ದರೂ ಇಂದಿನ ಹೊಸಕೋಟೆಗೆ ರಾಜಧಾನಿಯನ್ನು ಬದಲಾಯಿಸಿದನು. ತುಮಕೂರು ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಬಹುತೇಕ ಸಣ್ಣ ಅರಸು ಮನೆತನ, ಪಾಳೆಯಪಟ್ಟುಗಳು ಕೋಟೆ ನಿರ್ಮಿಸಲು ಬೇಕಾದ ಸ್ಥಳದ ಆಯ್ಕೆಯಲ್ಲಿ ಈ ವಿಧಾನವನ್ನೇ ಹೆಚ್ಚಾಗಿ ಅನುಸರಿಸಿದ್ದಾರೆ. ಅಂದರೆ ಈ ಮೊದಲು ರಾಜಧಾನಿಗೆ ಕೋಟೆ ಇದ್ದರೂ ಅದನ್ನು ಬಲಪಡಿಸದೇ ಮತ್ತೊಂದು ಪ್ರದೇಶದಲ್ಲಿ ಹೊಸದಾಗಿ ರಾಜಧಾನಿ

ನಿರ್ಮಾಣಕ್ಕೆ ಮುಂದಾಗುತ್ತಿದ್ದರು. ಏಕೆಂದರೆ ಇಡೀ ಬೆಟ್ಟವೇ ನೈಸರ್ಗಿಕವಾಗಿ ಅಭೇದ್ಯತೆಯಿಂದ ಕೂಡಿದ್ದರೆ ಆ ಬೆಟ್ಟದಲ್ಲಿ ಅವಶ್ಯ ಇರುವಲ್ಲಿ ಮಾತ್ರ ಕೋಟೆ–ಕೊತ್ತಲ ನಿರ್ಮಿಸಿಕೊಳ್ಳಲು ಅನುವು ಮಾಡಿಕೊಡುತ್ತಿತ್ತು. ಜೊತೆಗೆ ಅಲ್ಲಿಯೇ ಸಿಗುವಂತಹ ಗ್ರಾನೈಟ್ ಶಿಲೆಯ ಸೈಜುಗಲ್ಲು, ಕಾಡುಗಲ್ಲುಗಳನ್ನು ಕೋಟೆಯ ನಿರ್ಮಾಣಕ್ಕಾಗಿ ಬಳಸಿಕೊಳ್ಳುವಂತೆ ಮಾಡಿದೆ. ಗೋಡೆ ಸಡಿಲಗೊಳ್ಳದಿರಲೆಂದು ಚಕ್ಕೆಗಳನ್ನು ಜೋಡಿಸಿದ್ದಾರೆ. ಬೆಟ್ಟದ ಮೇಲ್ಭಾಗದಲ್ಲಿ ಮಾತ್ರ ಉಳಿಯಿಂದ ಆಯತ, ಚೌಕ, ತ್ರಿಭುಜ ಮಾದರಿಯಲ್ಲಿ ಗ್ರಾನೈಟ್ ಶಿಲೆಯನ್ನು ಕತ್ತರಿಸಿ ಗೋಡೆ ನಿರ್ಮಾಣಕ್ಕೆ ಬಳಸಲಾಗಿದೆ. ಕೆಲವೆಡೆ ಕಾಡುಗಲ್ಲುಗಳು ಸಹ ಬಳಕೆಯಾಗಿವೆ. ತುದಿಯ ಉತ್ತರ ದಿಕ್ಕಿನ ಗೋಡೆಯು ಪ್ರಪಾತಕ್ಕೆ ಬೀಳದಿರಲೆಂದು ತಳಪಾಯವನ್ನು ಪೀಠದ ಮೇಲೆ ನಿರ್ಮಾಣ ಮಾಡಿರುವಂತಹದ್ದು ವಿಶೇಷವಾಗಿದೆ. ಕೆಲವೆಡೆ ನಿರ್ಮಿಸಲಾದ ಗೋಡೆಯು ಜರುಗಿದ ಸ್ಥಳಗಳಲ್ಲಿ ಸಣ್ಣದಾದ ಸೈಜುಗಳನ್ನು ಸುರಿದು ಇಲ್ಲವೆ ಅವುಗಳಿಂದ ಹೊರ ಅಂಚಿನಲ್ಲಿ ಮತ್ತೊಂದು ಹಂತದ ಗೋಡೆಯನ್ನು ನಿರ್ಮಿಸಿದ್ದಾರೆ. ತುದಿಯ ಉತ್ತರ ದಿಕ್ಕಿಗಿರುವ ಕೋಟೆಯು ಕೇವಲ ಒಳಗಿರುವವರು ಆಳವಾದ ಪ್ರಪಾತಕ್ಕೆ ಬೀಳದಿರಲೆಂದು ಹಾಗೂ ದೂರದಲ್ಲಿನ ಶತ್ರುಗಳ ಚಲನವಲನ ಗುರುತಿಸುವ ಉದ್ದೇಶಕ್ಕಾಗಿ ನಿರ್ಮಾಣ ಮಾಡಲಾಗಿದೆ. ತುದಿಯಲ್ಲಿ ಆಳವಾದ ಪ್ರಪಾತ ಇರುವುದರಿಂದ ಕೋಟೆಯನ್ನು ಹೆಚ್ಚಿನ ರಕ್ಷಣಾ ತಂತ್ರಗಳಿಂದ ನಿರ್ಮಾಣಗೊಂಡಿಲ್ಲ. ನೆಲೆಗೋಟೆಯ ಮುಖ್ಯ ದ್ವಾರ ಎರಡು ಬೃಹತ್ ಹೆಬ್ಬಂಡೆಗಳ ನಡುವೆ ಇದ್ದು, ಅದರ ಒಳಬದಿಯಲ್ಲಿ ಕಾವಲು ಮಂಟಪಗಳಿವೆ. ಉಳಿದಂತಹ ದ್ವಾರಗಳು ನೈಸರ್ಗಿಕವಾಗಿ ರೂಪುಗೊಂಡ ಬೃಹತ್ ಗುಂಡುಗಳ ಒಳಗೆ ಸುರಂಗ ಮಾರ್ಗದಲ್ಲಿ ಹಾದುಹೋದಂತೆ ಪ್ರವೇಶವನ್ನು ಹೊಂದಿವೆ. ಏಕಶಿಲಾ ಬೆಟ್ಟವು ಎರಡು ಎತ್ತಿನ ಕೋಡುಗಳಂತೆ ಕವಲೊಡೆದಿದ್ದು, ಅವುಗಳ ತುದಿಯ ಮೇಲೆ ಕಾವಲು ಮಂಟಪವನ್ನು ನಿರ್ಮಿಸಿ ಅವುಗಳನ್ನೇ ಕಾವಲು ಗೋಪುರವನ್ನಾಗಿ ಮಾಡಿಕೊಂಡಿದ್ದಾರೆ. ನೀರಿನ ಸಂಗ್ರಹಣೆಗಾಗಿ ಇಳಿಜಾರಾದ ಸ್ಥಳದಲ್ಲಿ ಕಲ್ಲು, ಮಣ್ಣು, ಇಟ್ಟಿಗೆ ಮತ್ತು ಗಾರೆಯಿಂದ ತಡೆಗೋಡೆಗಳನ್ನು ನಿರ್ಮಿಸಲಾಗಿದೆ. ಅದೇ ರೀತಿ ಕೋಟೆಯ ಒಳಗೆ ಮದ್ದಿನಮನೆ, ಕಣಜ, ಅರಮನೆ, ವಸತಿ ನಿವೇಶನ, ಚನ್ನಕೇಶವ ದೇವಾಲಯ ಮೊದಲಾದ ನಿರ್ಮಿತಿಗಳಿವೆ. ಪಾಮುಲಬಂಡೆಯ ಎದುರಿನ ಬೆಟ್ಟದಲ್ಲಿ ಮೂರು ಸುತ್ತಿನ ಕೋಟೆಯನ್ನು ಕಟ್ಟಿಸಿ ಕಿಲ್ಲೇದಾರನನ್ನು ನೇಮಿಸಿದ್ದರು. ಬೆಟ್ಟದ ತುದಿಯಲ್ಲಿ ಇರುವಂತಹ ಚೌಕ ಮಾದರಿಯ ಕಟ್ಟಡ ತಳಪಾಯವನ್ನು ಗಮನಿಸಿದರೆ ಅದು ಕಿಲ್ಲೇದಾರನ ಕಟ್ಟಡ ಎಂಬುದು ಸ್ಪಷ್ಟವಾಗುತ್ತದೆ. ಈ ಕೋಟೆಗೆ ಒಟ್ಟು ನಾಲ್ಕು ದ್ವಾರಗಳಿವೆ. ಇಲ್ಲಿಯ ಗೋಡೆಯನ್ನು ಸಹ ಪಾಮುಲಬಂಡೆಯ ಕೋಟೆಗೆ ಬಳಸಲಾದ ಶಿಲಾ ಮಧ್ಯಮದಿಂದಲೇ ನಿರ್ಮಿಸಲಾಗಿದೆ.

೨೮. ಹೊಸದುರ್ಗ

ಕುಂದುರ್ಪಿಯ ಪಾಳೆಯಗಾರನಾದ ಯಲ್ಲಪ್ಪನಾಯಕ ತನ್ನ ರಾಜಧಾನಿಯ ರಕ್ಷಣೆಗಾಗಿ ಗಡಿ

ಪ್ರಾಂತ್ಯಗಳಲ್ಲೆಲ್ಲಾ ಕೋಟೆ–ಕೊತ್ತಲಗಳನ್ನು ಕಟ್ಟಿಸಿ ಅಲ್ಲಿ ಕಿಲ್ಲೇದಾರನ್ನು ನೇಮಿಸುತ್ತಾ ಹೋಗಿದ್ದಾನೆ. ಅಂತಹ ಗಡಿದುರ್ಗಗಳಲ್ಲಿ ಹೊಸದುರ್ಗವೂ ಒಂದಾಗಿದೆ. ಬೆಟ್ಟದ ಮೇಲೆ ಹೊಸದಾಗಿ ಯಲ್ಲಪ್ಪನಾಯಕ ದುರ್ಗ ಕಟ್ಟಿಸಿದ್ದರಿಂದ ಹೊಸದುರ್ಗ ಎಂಬ ಹೆಸರು ಜನಪದರಲ್ಲಿ ರೂಢಿಗತವಾಗಿ ಬಂದಿದೆ. ಬೆಟ್ಟದ ತಪ್ಪಲಿನಲ್ಲಿರುವ ಮೊದಲ ಹಂತದ ಕೋಟೆಗೆ ನೈಸರ್ಗಿಕ ಗುಂಡುಗಳನ್ನು ಹೊರಳಿಸುವುದರ ಮೂಲಕ ಅದನ್ನೇ ಗೋಡೆಯನ್ನಾಗಿ ಮಾಡಿಕೊಂಡಿದ್ದಾರೆ. ತುದಿಯಲ್ಲಿರುವ ಕೋಟೆಗೆ ಉಳಿಯಿಂದ ಆಯತ, ಚೌಕ, ತ್ರಿಭುಜ ಮಾದರಿಯಲ್ಲಿ ಕತ್ತರಿಸಲಾದ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಈ ಗೋಡೆ ಅಗಲವು ೦.೭೦ ಮೀ.ನಿಂದ ೧.೫೦ ಮೀ. ಹಾಗೂ ೨.೫೦ ಮೀ.ನಿಂದ ೩ ಮೀ.ನಷ್ಟು ಎತ್ತರವಾಗಿದೆ. ಸಡಿಲಗೊಳ್ಳದಿರಲೆಂದು ಕಲ್ಲಿನ ಚಕ್ಕೆಗಳನ್ನು ಜೋಡಿಸಲಾಗಿದೆ. ಈ ಕೋಟೆಯ ರಚನಾ ಶೈಲಿಯನ್ನು ಗಮನಿಸಿದರೆ ಇದು ಕೇವಲ ಕಿಲ್ಲೇದಾರನ ನಿಯಂತ್ರಣದಲ್ಲಿ ರಕ್ಷಣಾ ಕೇಂದ್ರವಾಗಿಯೇ ಕೊನೆಯವರೆಗೂ ಕಾರ್ಯ ನಿರ್ವಹಿಸಿರುವುದು ಗೋಚರವಾಗುತ್ತದೆ. ಏಕೆಂದರೆ ಕಾವಲುಗಾರ ಮತ್ತು ಆತನಿಗೆ ಸಂಬಂಧಿಸಿದವರ ಕಟ್ಟಡದ ಅವಶೇಷಗಳು ಮಾತ್ರ ಇಲ್ಲಿ ಕಂಡುಬರುತ್ತವೆ. ತುದಿಯಲ್ಲಿನ ಪ್ರವೇಶ ದ್ವಾರದ ಎರಡೂ ಬದಿ ಕಾವಲು ಮಂಟಪಗಳಿವೆ. ಗೋಡೆಯ ಮಧ್ಯ ಭಾಗದಲ್ಲೇ ವೀಕ್ಷಣಾ ಕಿಂಡಿಗಳು ಇರುವುದನ್ನು ಗಮನಿಸಿದರೆ ಗೋಡೆ ಬಹಳ ಎತ್ತರವೇನೂ ಇರಲಿಲ್ಲವೆಂಬುದು ಸ್ಪಷ್ಟವಾಗುತ್ತದೆ. ತುದಿಯಲ್ಲಿರುವ ಕೊರಕಲಿಗೆ ಎರಡು ಬದಿಯಲ್ಲಿ ತಡೆಗೋಡೆಯನ್ನು ನಿರ್ಮಿಸಿ ಬೆಟ್ಟದಲ್ಲಿ ಬೀಳುವ ಮಳೆಯ ನೀರನ್ನು ಸಂಗ್ರಹಿಸಿಕೊಳ್ಳುವ ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿ ಇಳಿಜಾರಾದಲ್ಲಿ ಅಡ್ಡಲಾಗಿ ಕಲ್ಲು, ಇಟ್ಟಿಗೆ ಮತ್ತು ಗಾರೆಯನ್ನು ಬಳಸಿ ಮಳೆ ನೀರು ಹರಿದು ಹೋಗದಂತೆ ತಡೆಗೋಡೆಯನ್ನು ನಿರ್ಮಿಸಲಾಗಿದೆ. ಕೆಲವೆಡೆ ಬೆಟ್ಟದಲ್ಲಿ ೧೦೦ ಅಡಿಗಳಿಗಿಂತಲೂ ಎತ್ತರವಾದ ಹೆಬ್ಬಂಡೆಗಳ ಮೇಲೆ ಕಾವಲು ಮಂಟಪವನ್ನು ನಿರ್ಮಿಸಿ ಬಹುದೂರದ ಚಲನವಲನ ಗಮನಿಸುವ ಸ್ಥಳೀಯ ವಾಸ್ತು ವೈವಿಧ್ಯತೆಯನ್ನು ತೋರ್ಪಡಿಸಿದ್ದಾರೆ. ಯಲ್ಲಪ್ಪನಾಯಕನಿಂದ ಆರಂಭವಾದ ಈ ಕೋಟೆಯ ನಿರ್ಮಾಣ ಕಾರ್ಯ ಆತನ ಅಂತ್ಯದೊಂದಿಗೆ ಈ ಪ್ರದೇಶವು ಸಹ ತನ್ನ ಮಹತ್ವವನ್ನು ಕಳೆದುಕೊಂಡಿತು.

೨೯. ಕಾಮನದುರ್ಗ

ಈ ಪ್ರದೇಶವು ಕಾಮನಬೆಟ್ಟ, ಕಾಕಾದ್ರಿಗಿರಿ, ಕಾಕಾದ್ರಿ ಪರ್ವತ, ಕಾಮಿನಿಕೊಂಡ, ಕಾಮದೇನುಬೆಟ್ಟ, ಕಾಮಿಲಿಕೊಂಡ ಎಂಬುದಾಗಿ ಪುರಾಣ ಕಾಲದಿಂದಲೂ ಪ್ರಸಿದ್ಧಿ ಹೊಂದಿದೆ. ನಿಚ್ಚಣಿಕುಪ್ಪ, ದುರ್ಗದಬೆಟ್ಟ, ಹುಲಿಬೆಟ್ಟ, ತಿಮ್ಮನಾಯಕನ ಬೆಟ್ಟ, ಬೂದಿಬೆಟ್ಟ, ದೊಡ್ಡಬೆಟ್ಟ, ಚಿಕ್ಕಬೆಟ್ಟ ಎಂಬ ಏಳು ಬೆಟ್ಟಗಳ ಸಮುಚ್ಚಯದಿಂದ ಸುತ್ತುವರೆದು ಮಧ್ಯ ಭಾಗದಲ್ಲಿ ವಿಶಾಲ ಮೈದಾನವನ್ನು ಸೃಷ್ಟಿಸಿದೆ. ಶತ್ರು ಪಾಳೆಯಕ್ಕೆ ಯಾವ ಬೆಟ್ಟದಲ್ಲಿ ಕೋಟೆ ಇದೆ ಎಂಬ ವಿಷಯ ತಿಳಿಯದ ಹಾಗೆ ನಿಸರ್ಗದತ್ತ ರಕ್ಷಣೆಯನ್ನು ನೀಡಿದೆ. ಅಲ್ಲದೆ ತುಮಕೂರು ಜಿಲ್ಲೆಯಲ್ಲಿ ಯಾವ

ಬೆಟ್ಟದ ಮೇಲೆಯು ಹೊಂದಿರದಷ್ಟು ವಿಶಾಲ ಮೈದಾನ, ಜಲಸಂಪತ್ತು, ದಟ್ಟಡವಿ, ಕಡಿದಾದ ಬೆಟ್ಟ ಪ್ರದೇಶ ಇದ್ದರೂ ಯಾವ ಅರಸರಾಗಲಿ ಇದನ್ನು ವ್ಯವಸ್ಥಿತವಾಗಿ ಬಳಸಿಕೊಳ್ಳದಿರುವುದು ಆಶ್ಚರ್ಯವೆನಿಸುತ್ತದೆ. ಏಕೆಂದರೆ ಬೆಟ್ಟದಲ್ಲಿ ಕೋಟೆ ಇದೆಯೋ ಅಥವಾ ಇಲ್ಲವೋ ಎನ್ನುವ ಸಂದೇಹ ಉಂಟಾಗುವಂತೆ ನೈಸರ್ಗಿಕವಾಗಿ ದುರ್ಭೇದ್ಯತೆಯಿಂದ ಕೂಡಿದೆ. ಈ ಕೋಟೆಯನ್ನು ನಿರ್ಮಾಣ ಮಾಡಿದವರ ಹೆಸರಿನಲ್ಲಿಯೇ ಕರಿಯಣ್ಣನಕೋಟೆ, ದೋಣಯ್ಯನಕೋಟೆ, ಶಿರುವಳಯ್ಯನ ಕೋಟೆ[೧೦೪] ಎಂಬುದಾಗಿ ಕರೆಯಲ್ಪಡುತ್ತಿರುವುದರಿಂದ ಅವುಗಳ ಕಾಲಘಟ್ಟವನ್ನು ಸುಲಭವಾಗಿ ಗುರುತಿಸಬಹುದು. ಏಕೆಂದರೆ ಒಂದೊಂದು ಕೋಟೆಯ ಹಿಂದೆ ಇರುವಂತಹ ಐತಿಹ್ಯಗಳು ಹಲವು ಚಾರಿತ್ರಿಕ ಸಂಗತಿಗಳನ್ನು ಖಚಿತಪಡಿಸುತ್ತವೆ. ಶಿರುವಳಯ್ಯನ ಮಗಳ ಸೌಂದರ್ಯವನ್ನು ಕಂಡ ಉತ್ತರದ ೭ ಜನ ಸಹೋದರರು ಆಕೆಯನ್ನು ಪಡೆಯಲು ಪ್ರಯತ್ನಿಸಿದ್ದರಿಂದ ಮನನೊಂದ ಆಕೆ ಚ್ಯುತಿಬಾರದಿರಲೆಂದು ಶೂಲಕ್ಕೆ ಏರಿದಳೆಂದು ಸ್ಥಳೀಯರಲ್ಲಿ ಪ್ರತೀತಿ ಇದೆ. ಈ ಐತಿಹ್ಯಕ್ಕೆ ಪೂರಕವಾಗಿ ರಾಮಲಿಂಗೇಶ್ವರ ದೇವಾಲಯದ ದ್ವೀಪ ಸ್ತಂಭದ ಬಳಿ ನಿಡುಗಲ್ಲು ಚೋಳರ ಆರಂಭ ಕಾಲಕ್ಕೆ ಸೇರಿದ ಶೂಲದ ಕಂಬ ಇರುವ ಶಿಲ್ಪ ಕಂಡುಬರುತ್ತದೆ. ಅಂದರೆ ಈ ಘಟನಾವಳಿ ನಡೆದ ಕಾಲಘಟ್ಟವನ್ನು ಖಚಿತವಾಗಿ ಗುರುತಿಸಲು ಸಾಧ್ಯವಿರುವುದರಿಂದ ನಿಡುಗಲ್ಲು ಚೋಳರ ನೇರ ಆಡಳಿತಕ್ಕೆ ಒಳಪಟ್ಟಿದ್ದ ಈ ಪ್ರದೇಶದಲ್ಲಿ ಅವರಿಂದಲೇ ಕೋಟೆಯ ನಿರ್ಮಾಣ ಕಾರ್ಯವು ಆಗಿದ್ದಿರುವ ಸಾಧ್ಯತೆಗಳಿವೆ. ಏಕೆಂದರೆ ಇದು ನಿಡುಗಲ್ಲು ಚೋಳರಿಗೆ ಗಡಿ ಪ್ರಾಂತ್ಯದಲ್ಲಿ ಇದ್ದುದರಿಂದ ಗಡಿದುರ್ಗವಾಗಿಯೂ ಕಾರ್ಯ ನಿರ್ವಹಿಸಿರಬಹುದು. ಆದರೆ ಕಾಮನದುರ್ಗ ಎಂಬ ಹೆಸರು ಹೇಗೆ ಬಂದಿದೆ ಎಂಬುದನ್ನು ಚಾರಿತ್ರಿಕವಾಗಿಯೂ ನೋಡಬೇಕಾಗುತ್ತದೆ. ಏಕೆಂದರೆ ಹರತಿನಾಯಕರಲ್ಲಿ ಒಬ್ಬನಾದ ಕಾಮನಾಯಕನಿಂದ ಏನಾದರೂ ಇಲ್ಲಿ ಕೋಟೆ-ಕೊತ್ತಲದ ನಿರ್ಮಾಣ ಕಾರ್ಯ ನಡೆದಿರಬಹುದೇ ಎಂಬುದನ್ನು ಗಮನಿಸಬೇಕಾಗುತ್ತದೆ. ಸಾಮಾನ್ಯವಾಗಿ ಯವುದೇ ಪ್ರದೇಶದಲ್ಲಿ ಸ್ಥಳೀಯವಾಗಿ ಆಳ್ವಿಕೆ ನಡೆಸಿದ ಅಲ್ಲಿಯ ಸ್ಥಳೀಯ ನಾಯಕರ ಹೆಸರೇ ಆ ಪ್ರದೇಶ ಸಂಭೋದಿಸಲ್ಪಡುತ್ತದೆ. ಕಾಮಾನಾಯಕ ಎಂಬ ವ್ಯಕ್ತಿ ಚಾರಿತ್ರಿಕ ವ್ಯಕ್ತಿ ಆಗಿದ್ದನು ಎಂಬುದನ್ನು ತಳ್ಳಿಹಾಕುವಂತಿಲ್ಲ. ಬಹುಶಃ ಈ ಚಾರಿತ್ರಿಕ ವ್ಯಕ್ತಿಯಿಂದಲೇ ಇದು ಪ್ರಸಿದ್ಧಿಗೆ ಬಂದಿರಬಹುದು.

ಬಹು ಹಿಂದಿನಿಂದಲೂ ಕಾಮನದುರ್ಗ, ರಾಂಪೇಟ ನಾಗಲಾಪುರ, ಚಿಕ್ಕಹಳ್ಳಿ ಪರಿಸರಗಳಲ್ಲಿ ಪಶುಪಾಲನೆಯನ್ನೇ ಮುಖ್ಯ ಕಸುಬನ್ನಾಗಿ ಮಾಡಿಕೊಂಡಿದ್ದಾರೆ. ಸಾಮಾನ್ಯವಾಗಿ ಪಶು ಸಂಪತ್ತು ಅನಾದಿ ಕಾಲದಿಂದಲೂ ಸಂಪತ್ತಿನ ಸಂಕೇತವಾಗಿತ್ತು. ಹಾಗಾಗಿ ಶತ್ರು ಪಾಳೆಯ ಪಶುಗಳ ಮೇಲೆ ದಾಳಿ ಮಾಡುವುದನ್ನು ತಡೆಯುವ ಉದ್ದೇಶದಿಂದಲೇ ಬೆಟ್ಟಗಳ ಸಮೀಪವೇ ಪಶುಪಾಲಕರ ಹಟ್ಟಿಗಳಿರುತ್ತಿದ್ದವು. ತುರ್ತು ಸಂದರ್ಭದಲ್ಲಿ ಬೆಟ್ಟಗಳಲ್ಲಿ ರಕ್ಷಣೆ ಪಡೆದುಕೊಳ್ಳುತ್ತಿದ್ದರು ಎಂಬುದಕ್ಕೆ ಇಂದಿಗೂ ಈ ಪರಿಸರದ ಪಶುಗಳು ಮನುಷ್ಯರೇ ಏರಲಸಾಧ್ಯವಾದ ಕಡಿದಾದ ಬೆಟ್ಟಗಳನ್ನು

ಸುಲಭವಾಗಿ ಏರುತ್ತವೆ. ವಿಜಯನಗರಕ್ಕಿಂತ ಪೂರ್ವದಲ್ಲಿ ಈ ಪರಿಸರದಲ್ಲಿ ಪದೇ ಪದೇ ತುರುಗಾಳಗಳು ನಡೆಯುತ್ತಿದ್ದವು ಎಂಬುದಕ್ಕೆ ದೇವರಾಯನದುರ್ಗ, ಬೆನಕನಹಳ್ಳಿ, ನಿಡುಗಲ್ಲು ಮೊದಲಾದೆಡೆ ದೊರೆತ ತುರುಗೊಳ್ ಶಿಲ್ಪಗಳಿಂದ ಸ್ಪಷ್ಟವಾಗುತ್ತದೆ. ಬಹುಶಃ ಈ ಉದ್ದೇಶದಿಂದಲೇ ಕಾಮನದುರ್ಗದಲ್ಲೂ ಸಹ ಪಶುಗಳ ರಕ್ಷಣೆಗಾಗಿ ಕೋಟೆ-ಕೊತ್ತಲ ನಿರ್ಮಿಸಿಕೊಂಡಿರುವ ಸಾಧ್ಯತೆಗಳಿವೆ. ವಿಜಯನಗರೋತ್ತರ ಕಾಲದಲ್ಲಿ ಮುಸ್ಲಿಮರ ನಿರಂತರ ದಾಳಿಗಳಿಂದ ರಕ್ಷಣೆ ಪಡೆಯಲು ಈ ಕೋಟೆಯನ್ನು ಪ್ರಮುಖ ರಕ್ಷಣಾ ಕೇಂದ್ರವನ್ನಾಗಿ ಮಾಡಿಕೊಂಡಿದ್ದರು. ಉದಾಹರಣೆಗೆ ಬಿಜಾಪುರದ ರಣದುಲ್ಲಾಖಾನನ ದಾಳಿಯಿಂದ - ಯಲ್ಲಪ್ಪನಾಯಕ ಮತ್ತು ಶಿರಾ ಸುಭೇದಾರರ ದಾಳಿಯಿಂದ ರಕ್ಷಣೆ ಪಡೆಯಲು ನಿಡುಗಲ್ಲಿನ ತಿಮ್ಮನಾಯಕ ಹಾಗೂ ಚಿತ್ರದುರ್ಗ ಪುಲಿಕೊಂಡರಾಜರು ಈ ಪ್ರದೇಶವನ್ನು ಆಶ್ರಯಿಸಿಕೊಂಡಿದ್ದರು. ಒಟ್ಟಾರೆ ಈ ಎಲ್ಲಾ ಅಂಶಗಳನ್ನು ಗಮನಿಸಿದಾಗ ಕಾಮನದುರ್ಗದಲ್ಲಿ ಯಲ್ಲಪ್ಪನಾಯಕನಿಗಿಂತ ಪೂರ್ವದಲ್ಲೇ ಕೋಟೆ ನಿರ್ಮಾಣಗೊಂಡಿತ್ತು ಎಂಬ ಅಂಶ ಸ್ಪಷ್ಟವಾಗುತ್ತದೆ. ಯಲ್ಲಪ್ಪನಾಯಕ ಇಲ್ಲಿ ಕ್ರಿ.ಶ. ೧೬೫೦ರಲ್ಲಿ ಕೋಟೆ ಕಟ್ಟಿಸಿರಬಹುದಾದರೂ ಅದಕ್ಕೂ ಹಿಂದಿನ ಕೋಟೆಯ ನಿರ್ಮಾಣಕ್ಕೆ ಶಾಸನಗಳ ಉಲ್ಲೇಖ ಮಾತ್ರ ಇಲ್ಲ ಎಂಬುದನ್ನು ಒಪ್ಪಿಕೊಳ್ಳಬೇಕು. ಏಕೆಂದರೆ ಕೋಟೆಯ ಲಕ್ಷಣಗಳು ಯಲ್ಲಪ್ಪನಾಯಕನಿಗಿಂತಲೂ ಪೂರ್ವದಲ್ಲೇ ಕೋಟೆ ಇತ್ತೆಂಬುದನ್ನು ಸ್ಪಷ್ಟಪಡಿಸುತ್ತವೆ. ಈತನ ನಂತರ ತಿಮ್ಮನಾಯಕ ಸಿರಾ ಸುಭೇದಾರನ ಮೋಸಕ್ಕೆ ಬಲಿಯಾಗಿ ಇಲ್ಲಿ ರಕ್ಷಣೆ ಪಡೆದು ಕೋಟೆಯನ್ನು ವಿಸ್ತರಿಸಿದನು. ಹೈದರ್-ಟಿಪ್ಪುವಿನ ನಿಯಂತ್ರಣಕ್ಕೆ ಒಳಪಟ್ಟ ಬಗ್ಗೆ ಉಲ್ಲೇಖಗಳು ಸಿಗುತ್ತವೆಯಾದರೂ ಅವರ ನಂತರದ ಕಾಲದ ಬಗೆಗಿನ ಕೋಟೆಯ ಚಿತ್ರಣ ಸಿಗುವುದಿಲ್ಲ.

ಕೋಟೆಯ ಲಕ್ಷಣಗಳು

ಇಡೀ ಕೋಟೆಯ ವಾಸ್ತು ವಿನ್ಯಾಸವನ್ನು ಗಮನಿಸಿದರೆ ಜನಸಾಂದ್ರತೆ ಹೆಚ್ಚಾದಂತೆ ಪಟ್ಟಣವು ವಿಸ್ತರಣೆಗೊಂಡಿರುವುದು ಗೋಚರವಾಗುತ್ತದೆ. ಯಲ್ಲಪ್ಪನಾಯಕನ ಕಾಲಕ್ಕೆ ಈ ಬೆಟ್ಟದಲ್ಲಿ ೨೦೦೦ ಕುಟುಂಬಗಳಿದ್ದವೆಂದರೆ ಪಟ್ಟಣದ ವಿಸ್ತಾರ ಎಷ್ಟಿತ್ತೆಂಬುದು ತಿಳಿಯುತ್ತದೆ. ಈ ಕೋಟೆಯ ನಿರ್ಮಾಣಕ್ಕೆ ಬೃಹತ್ ಕಾಡುಗಲ್ಲುಗಳನ್ನು ಕೋಣ ಇಲ್ಲವೇ ಆನೆಗಳ ಮೂಲಕ ತಳ್ಳಿ ಗೋಡೆಯನ್ನಾಗಿ ಅದನ್ನು ಬಳಸಿಕೊಂಡಿದ್ದಾರೆ. ನಂತರದಲ್ಲಿ ಇದೇ ಗುಂಡುಗಳನ್ನು ಆಯತ, ಚೌಕ, ಚಪ್ಪಟೆ ಮಾದರಿಯಲ್ಲಿ ಕತ್ತರಿಸಿ ಗೋಡೆಯನ್ನು ಕಟ್ಟುವ ಕೆಲಸ ಮಾಡಲಾಗಿದೆ. ಗೋಡೆ ವಿಸ್ತರಣೆಗೊಂಡಂತೆ ಅದರ ಮೇಲೆ ಗುಂಡುಗಳನ್ನು ಜೋಡಿಸಿ ಎತ್ತರವನ್ನು ಇಮ್ಮಡಿಗೊಳಿಸಿದ್ದಾರೆ. ರಾಮಲಿಂಗೇಶ್ವರ ದೇವಾಲಯದ ಬಳಿ ಮತ್ತು ಬೂದುಬೆಟ್ಟದಲ್ಲಿ ನಿರ್ಮಾಣಗೊಂಡ ಕೋಟೆಗೆ ಗ್ರಾನೈಟ್ ಶಿಲೆಯನ್ನು ಆಯತ ಮತ್ತು ಚೌಕ ರೀತಿಯಲ್ಲಿ ಕತ್ತರಿಸಿ ಬಳಸಿದ್ದಾರೆ. ಈ ಗೋಡೆಯ ವಿಶೇಷವೆಂದರೆ ನವಶಿಲಾಯುಗದ ವಸತಿ ನಿವೇಶನದ ದಿಬ್ಬದಲ್ಲಿನ ಮಣ್ಣನ್ನು ಗೋಡೆಯ ಮಧ್ಯೆ ಗಾರೆಯ ಗಚ್ಚಿಗೆ ಬದಲಾಗಿ ಪರ್ಯಾಯವಾಗಿ ಕಂಡುಕೊಂಡಿದ್ದಾರೆ. ಈ ಮಣ್ಣಿನ ವೈಶಿಷ್ಟ್ಯ ಎಂದರೆ

ಗಾರೆ ಗಚ್ಚಿಗಿಂತಲೂ ಗಟ್ಟಿತನವನ್ನು ಹೊಂದಿರುತ್ತದೆ. ಹಲವು ತಿರುವುಗಳಿಂದ ಕೂಡಿದ ಈ ಗೋಡೆಯು ೦.೬೦ ಮೀ. ನಿಂದ ೧.೦೦ ಮೀ. ವರೆಗೆ ಎತ್ತರ ಹಾಗೂ ೧.೪೦ ಮೀ. ೦.೯೫ ಮೀ. ಅಗಲವಾಗಿದೆ. ಈ ತಂತ್ರದ ಉದ್ದೇಶ ಶತ್ರುಗಳ ವೇಗವನ್ನು ತಡೆಯುವುದೇ ಆಗಿತ್ತು. ನೆಲಗೋಟೆಗೂ ಸಹ ಚಪ್ಪಟ್ಟೆಯಾದ ಕಲ್ಲನ್ನು ಆಯತ, ಚೌಕವಾಗಿ ಕತ್ತರಿಸಿ ಬಳಸಲಾಗಿದೆ. ನೆಲಗೋಟೆಯಲ್ಲಿ ಗ್ರಾಮದ ಸರಹದ್ದನ್ನು ತಿಳಿಯಪಡಿಸುವ ನಂದಿಕಲ್ಲನ್ನು ಇಂದು ಬಸವೇಶ್ವರ ಎಂದು ಪೂಜೆ ಮಾಡುತ್ತಿದ್ದಾರೆ. ಬಹುಶಃ ಸ್ಥಳೀಯ ನಾಯಕರೊಬ್ಬರು ಈ ಗ್ರಾಮವನ್ನು ದತ್ತಿ ಪಡೆದು ನೆಲಗೋಟೆಯನ್ನು ನಿರ್ಮಾಣ ಮಾಡಿರುವಂತಹ ಸಂಗತಿ ಇದರಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಈ ಗ್ರಾಮದ ನಾಲ್ಕು ದಿಕ್ಕಿಗೂ ಬಸವನ ಕಲ್ಲನ್ನು ಪ್ರತಿಷ್ಠೆ ಮಾಡಲಾಗಿದ್ದು. ಕಾಲಾಂತರದಲ್ಲಿ ಈ ಬಸವನ ಕಲ್ಲನ್ನೇ ನಾಯಕನ ವಂಶಸ್ಥರು ಕಟ್ಟಿಸಿದರೆಂದು ಬಸವೇಶ್ವರ ದೇವಾಲಯದಲ್ಲಿಟ್ಟು ಪೂಜೆಗೈಯ್ಯುತ್ತಿದ್ದಾರೆ.

ಗೋಡೆಗಳ ಒಳಬದಿಯಿಂದ ಶತ್ರುಗಳ ಚಲನವಲನ ಗಮನಿಸುವುದಕ್ಕಾಗಿ ವೀಕ್ಷಣಾ ಕಿಂಡಿಗಳನ್ನು ನಿರ್ಮಿಸಲಾಗಿದ್ದು, ಅವುಗಳನ್ನೇ ಬಂದೂಕು, ಅಂಬು ಕಿಂಡಿಗಳನ್ನಾಗಿಯೂ ಬಳಸಿಕೊಳ್ಳುತ್ತಿದ್ದರು. ಕೋಟೆಯ ಪ್ರವೇಶ ದ್ವಾರಗಳನ್ನು ಆಂಗ್ಲ ಅಕ್ಷರವಾದ **'ಎಲ್'** ಇಲ್ಲವೆ ನೇರವಾಗಿ ನಿರ್ಮಾಣ ಮಾಡಲಾಗಿದೆ. ದ್ವಾರದ ಒಳ ಅಥವಾ ಹೊರಬದಿಯಲ್ಲಿ ಶತ್ರುಗಳ ಮೇಲೆ ಒಳಗಿನಿಂದ ಪ್ರತಿದಾಳಿ ಮಾಡಲು ಸುಲಭವಾಗಲೆಂದು ಎತ್ತರವಾದ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಗೋಡೆಯ ರಕ್ಷಣೆಗಾಗಿ ಇಳಿವೊರೆ ಮತ್ತು ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ. ಈ ಕೋಟೆಯ ವಿಶೇಷ ಎಂದರೆ ಎಲ್ಲಿಯೂ ಗಾರೆಯನ್ನು ಬಳಕೆ ಮಾಡದೆ ಸಡಿಲಗೊಳ್ಳಲು ಅವಕಾಶ ಇರುವಲ್ಲಿ ಮಾತ್ರ ಚಕ್ಕೆಗಳನ್ನು ಜೋಡಿಸಿದ್ದಾರೆ. ಬೆಟ್ಟದ ಮೇಲೆಯೇ ಕೆರೆಯೊಂದನ್ನು ನಿರ್ಮಿಸಿ ಏಳು ಬೆಟ್ಟಗಳಲ್ಲಿ ಹರಿಯುವ ಮಳೆ ನೀರು ಸಂಗ್ರಹಗೊಳ್ಳುವಂತಹ ವ್ಯವಸ್ಥೆ ಮಾಡಿದ್ದಾರೆ. ಇದರಿಂದ ಬೆಟ್ಟದ ಮೇಲೆಯೇ ಕೃಷಿಯಲ್ಲಿ ತೊಡಗಲು ಅವಕಾಶವಿತ್ತು. ಜೊತೆಗೆ ದಿನನಿತ್ಯದ ಬಳಕೆಗಾಗಿ ಮತ್ತು ಪಶುಗಳಿಗೆ ಕುಡಿಯುವ ನೀರನ್ನು ಒದಗಿಸಲು ಅನುಕೂಲವಾಗುತ್ತಿತ್ತು.

ಅವಶ್ಯ ಇರುವಲ್ಲಿ ಕೊರಕಲುಗಳಿಗೆ ಅಡ್ಡಲಾಗಿ ಇಟ್ಟಿಗೆ ಮತ್ತು ಗಾರೆಯಿಂದ ತಡೆಗೋಡೆಯನ್ನು ನಿರ್ಮಿಸಿ ಎಂತಹ ಬೇಸಿಗೆಯಲ್ಲೂ ನೀರಿನ ಸಮಸ್ಯೆ ಎದುರಾಗದಂತಹ ಮುನ್ನೆಚ್ಚರಿಕೆಯನ್ನು ವಹಿಸಿದ್ದಾರೆ. ಸಿದ್ಧ ಗವಿಯಲ್ಲಿ ಗುಪ್ತ ಸುರಂಗ ಮಾರ್ಗವನ್ನು ನಿರ್ಮಿಸಲಾಗಿದ್ದು, ಅದರ ಒಳಗೆ ಇಳಿದು ತೆವಳಿಕೊಂಡು ಹೋದರೆ ವಿಶಾಲ ದೋಣೆಯೊಂದು ಸಿಗುತ್ತದೆ. ಅಲ್ಲಿಂದ ಒಳ ಪ್ರವೇಶಿಸಿದರೆ ದುರ್ಗಾದೇವಿಯ ದೇವಸ್ಥಾನವಿದೆ. ಕೋಟೆಯ ಒಳಗೆ ಆಹಾರ ಧಾನ್ಯ ಮತ್ತು ತುಪ್ಪವನ್ನು ಸಂಗ್ರಹಿಸಲು ಕಣಜ, ಅರಮನೆ, ಅಧಿಕಾರಿ ವರ್ಗದವರ ವಸತಿ ನಿವೇಶನ, ಮದ್ದಿನಮನೆ ಮೊದಲಾದ ನಿರ್ಮಿತಿಗಳಿವೆ. ಹೀಗೆ ಒಂದು ಗಿರಿದುರ್ಗವನ್ನು ವಾಸ್ತುಬದ್ಧವಾಗಿ ನಿರ್ಮಿಸಲು ಬೇಕಾದ ಎಲ್ಲಾ ಲಕ್ಷಣಗಳಿದ್ದರೂ ಯಾರು ಸಹ ಸರಿಯಾದ ರೀತಿಯಲ್ಲಿ

ಬಳಸಿಕೊಳ್ಳದ ಕಾರಣ ಯಲ್ಲಪ್ಪನಾಯಕನ ನಂತರ ಈ ದುರ್ಗದ ಚರಿತ್ರೆ ಏನಾಯಿತೆಂಬುದಕ್ಕೆ ಆಕರಗಳ ಕೊರತೆಯಿಂದ ಸ್ಪಷ್ಟ ಚಿತ್ರಣ ನೀಡಲು ಸಾಧ್ಯವಾಗಿಲ್ಲ.

೩೦. ದೇವರಬೆಟ್ಟ

ರಂಗನಾಥಸ್ವಾಮಿ ನೆಲೆನಿಂತ ಬೆಟ್ಟವು ಕ್ರಮೇಣ ಜನಪದರಲ್ಲಿ ದೇವರಬೆಟ್ಟವಾಗಿ ರೂಡಿಯಲ್ಲಿ ಬಂದಿದೆ. ನಿಡುಗಲ್ಲು ನಾಯಕರ ಸುಪರ್ದಿಗೆ ಸೇರಿದ್ದ ಈ ಪ್ರದೇಶವು ಹರತಿ ನಿಡುಗಲ್ಲು ನಾಯಕನರ ವೇಳೆಗಾಗಲೇ ರತ್ನಗಿರಿ ಪಾಳೆಯಗಾರರ ನಿಯಂತ್ರಣಕ್ಕೆ ಸೇರ್ಪಡೆಗೊಂಡಿತ್ತು. ಆದ ಕಾರಣ ಹರತಿ ನಿಡುಗಲ್ಲು ನಾಯಕರು ಈ ಬೆಟ್ಟ ತಮ್ಮ ಮೂಲಜರಿಗೆ ಸೇರಿದ್ದೆಂದು ರತ್ನಗಿರಿ ಪಾಳೆಯಗಾರರಲ್ಲಿ ವಿನಂತಿಸಿಕೊಂಡರೂ ಪ್ರಯೋಜನವಾಗಿಲ್ಲ. ಏಕೆಂದರೆ ಅದು ಆ ವೇಳೆಗೆ ಏಳು ಸುತ್ತಿನ ಕೋಟೆಯಿಂದ ದುಭೇದ್ಯವಾಗಿತ್ತು. ಅದನ್ನು ವಶಪಡಿಸಿಕೊಳ್ಳುವುದು ಸುಲಭದ ಕೆಲಸವಾಗಿರಲಿಲ್ಲ. ಆದುದರಿಂದ ತನ್ನ ಅಧಿಕಾರಿಗಳಾದ ಲಿಂಗಣ್ಣ ಮತ್ತು ಕರಿಯಣ್ಣ ಎಂಬುವವರನ್ನು ದೇವರಬೆಟ್ಟ ಆಕ್ರಣಕ್ಕಾಗಿ ನಿಯೋಜಿಸಿದರು. ಈ ಅಧಿಕಾರಿಗಳು ದೇವರಬೆಟ್ಟದ ಮಹಿಳೆಯೊಬ್ಬಳು ಹುಲ್ಲು ಕೀಳುವುದನ್ನು ಕಂಡು ಆಕೆಗೆ ಹಣ ಆಸೆ ತೋರಿಸಿ ಹುಲ್ಲಿನ ಹೊರೆಯೊಳಗೆ ಲಿಂಗಣ್ಣನನ್ನು ಕರೆದೊಯ್ಯುವಂತೆ ಮನವೊಲಿಸಿದರು. ಮೋಸದಿಂದ ಒಳ ಪ್ರವೇಶಿಸಿದ ಲಿಂಗಣ್ಣ ರಾತ್ರಿಯ ವೇಳೆ ಅಡುಗೆಗೆ ಮತ್ತು ಬರುವಂತಹ ಪದಾರ್ಥವನ್ನು ಬೆರೆಸಿ ಸೈನಿಕರ ಮೇಲೆ ಹಠಾತ್ತಾಗಿ ಆಗಿ ಕರಿಯಣ್ಣನೊಂದಿಗೆ ದಾಳಿ ಮಾಡಿ ಕೋಟೆಯನ್ನು ವಶಪಡಿಸಿಕೊಂಡನು. ನಂತರ ಕರಿಯಣ್ಣ ಈ ಕೋಟೆಯ ಉಸ್ತುವಾರಿಯನ್ನು ವಹಿಸಿಕೊಂಡನು.[೧೦೫] ಆದರೆ ಇವರ ನಂತರ ಯಾವ ಅಧಿಕಾರಗಳು ಆಳ್ವಿಕೆ ನಡೆಸಿದರು ಎಂಬುದಕ್ಕೆ ಸ್ಪಷ್ಟ ದಾಖಲೆಗಳಿಲ್ಲ. ಹೈದರಾಲಿ ಟಿಪ್ಪುವಿನ ದಾಳಿಗೆ ತುಮಕೂರು ಜಿಲ್ಲೆಯ ಬಹುತೇಕ ಆಡಳಿತ ಕೇಂದ್ರಗಳು ಅವಸಾನ ಹೊಂದಿದಂತೆ ಇದು ಸಹ ಅಳಿವಿನಂಚಿಗೆ ಸೇರ್ಪಡೆಗೊಂಡಿತು.

ನಿಡುಗಲ್ಲು ನಾಯಕರ ಕಾಲಕ್ಕೆ ದೇವರಬೆಟ್ಟದ ಕೋಟೆ ಏಳು ಸುತ್ತಿನಿಂದ ಕೂಡಿದ ಗಡಿದುರ್ಗವಾಗಿ ಕಿಲ್ಲೆದಾರನ ನಿಯಂತ್ರಣದಲ್ಲಿತ್ತು. ಇದರ ರಚನಾ ಶೈಲಿಯನ್ನು ಗಮನಿಸಿದರೆ ಎರಡು ಕಾಲಘಟ್ಟಗಳಲ್ಲಿ ನಿರ್ಮಾಣ ಹೊಂದಿರುವಂತಹದ್ದು ಗೋಚರವಾಗುತ್ತದೆ. ಗೋಡೆಯ ತಳ ಭಾಗದಲ್ಲಿ ಬೃಹತ್ ಕಾಡುಗಲ್ಲನ್ನು ಹಾಗೂ ಮೇಲ್ಭಾಗ ಆಯತ, ಚೌಕ ಮಾದರಿಯ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಗೋಡೆಯಲ್ಲಿ ಬಿರುಕುಗಳು ಕಾಣಿಸಬಾರದೆಂದು ಕಲ್ಲಿನ ಚಕ್ಕೆಗಳನ್ನು ಇಡಲಾಗಿದೆ. ಮೇಲ್ಭಾಗ ಗೋಡೆಯಲ್ಲಿ ಶತೃಗಳ ಚಲನವಲನ ಗಮನಿಸಲು ವೀಕ್ಷಣಾ ಕಿಂಡಿಗಳನ್ನು ಬಿಡಲಾಗಿದೆ. ಈ ಕಿಂಡಿಗಳಲ್ಲಿ ಹೊರಗಿನ ಪ್ರದೇಶ ನೋಡಲು ಒಳ ಬದಿ ಮರದ ಅಟ್ಟಾಲಕವನ್ನು ಬಳಸುತ್ತಿದ್ದರು. ಏಕೆಂದರೆ ಈ ಕಿಂಡಿಗಳು ಗೋಡೆಯ ತುದಿ ಭಾಗದಲ್ಲಿ ಇರುವುದರಿಂದ ನೆಲಮಟ್ಟದಿಂದ ಅವುಗಳನ್ನು ಬಳಸುವುದು ಸಾಧ್ಯವಿಲ್ಲ. ಗೋಡೆಯು ಕುಸಿಯಬಾರದೆಂದು ತಳಭಾಗವನ್ನು ಆಗಲವಾಗಿ ಮೇಲೆ ಹೋದಂತೆ ಕಿರಿದಾಗಿ ನಿರ್ಮಿಸಿದ್ದಾರೆ. ಗೋಡೆಯ ರಕ್ಷಣೆಗಾಗಿ ಒಳ ಮತ್ತು

ಹೊರ ಬದಿಯಲ್ಲಿ ವೃತ್ತ ಮತ್ತು ಚೌಕ ರೀತಿಯ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಏಕೆಂದರೆ ಶತ್ರುಗಳನ್ನು ಎಲ್ಲಾ ದಿಕ್ಕುಗಳಿಂದ ಎದುರಿಸಲು ಅನುವಾಗಲೆಂದು ಈ ತಂತ್ರವನ್ನು ಬಳಸಿಕೊಳ್ಳಲಾಗಿದೆ. ಕೋಟೆಗೆ ಒಟ್ಟು ೦೯ ದ್ವಾರಗಳಿದ್ದು, ಅವುಗಳ ಎರಡೂ ಬದಿ ಕಾವಲು ಮಂಟಪಗಳಿವೆ. ಇಂದು ಪ್ರತಿ ದ್ವಾರದಲ್ಲಿ ಎರಡೂ ಬದಿಯಲ್ಲಿನ ನಾಲ್ಕು ಕಂಬಗಳು ಮಾತ್ರ ಉಳಿದುಕೊಂಡಿವೆ. ಈ ಕೋಟೆಯಲ್ಲಿ ಎಲ್ಲಿಯೂ ಗಾರೆ ಬಳಕೆಯಾಗಿಲ್ಲ. ಏಕೆಂದರೆ ಇಡೀ ರಂಗನಾಥ ದೇವಾಲಯವನ್ನು ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಿದ್ದರೂ ಕೋಟೆಯ ಯಾವ ಭಾಗಕ್ಕೂ ಗಾರೆಯ ಲೇಪನವನ್ನು ಕಾಣಲಾಗುವುದಿಲ್ಲ. ಇದನ್ನು ಗಮನಿಸಿದರೆ ಕೋಟೆ ಮತ್ತು ದೇವಾಲಯ ಬೇರೆ ಬೇರೆ ಕಾಲಘಟ್ಟಗಳಲ್ಲಿ ನಿರ್ಮಾಣಗೊಂಡಂತೆ ಕಾಣುತ್ತದೆ. ಗುಡ್ಡದ ತುದಿ ಭಾಗವನ್ನು ತಲುಪಲು ಹೆಬ್ಬಂಡೆಗೆ ಸಣ್ಣದಾದ ಮೆಟ್ಟಿಲುಗಳನ್ನು ಕೊರೆಯಲಾಗಿದೆ. ಅವುಗಳ ಮೂಲಕ ಮೇಲೆ ಹೋದರೆ ಆಯತ ಮಾದರಿಯ ಕೋಟೆಯಲ್ಲಿ ಅರಮನೆ, ಅಧಿಕಾರಿ ವರ್ಗದವರ ಕಟ್ಟಡ ಹಾಗೂ ಗಾಳಿಗೋಪುರಗಳ ನಿರ್ಮಿತಿಗಳಿವೆ. ಎತ್ತರದ ವೇದಿಕೆಯ ಮೇಲಿರುವ ಈ ಗೋಪುರದ ಮೇಲ್ಭಾವಣಿಯಲ್ಲಿ ಹಿಂದೆ ಗಂಟೆಯೊಂದನ್ನು ಇಳಿಬಿಟ್ಟಿದ್ದರೆಂದು ಸ್ಥಳೀಯರು ಹೇಳುತ್ತಾರೆ. ಇದನ್ನು ತುರ್ತು ಸಂದರ್ಭದಲ್ಲಿ ಇಲ್ಲವೆ ರಾಜಾಜ್ಞೆಗಳನ್ನು ಹೊರಡಿಸುವುದಕ್ಕಾಗಿ ಬಳಸಿಕೊಳ್ಳುತ್ತಿದ್ದರೆಂದು ಹಾಳಲಾಗುತ್ತದೆ. ನೀರನ್ನು ಸಂಗ್ರಹಿಸುವುದಕ್ಕಾಗಿ ಇಳಿಜಾರಾದ ಸ್ಥಳಗಳಲ್ಲಿ ಇಟ್ಟಿಗೆ ಮತ್ತು ಗಾರೆಯಿಂದ ತಡೆಗೋಡೆಯನ್ನು ನಿರ್ಮಿಸಿಕೊಂಡಿದ್ದಾರೆ. ಅದೇ ರೀತಿ ಕೋಟೆಯಲ್ಲಿ ಸೈನಿಕರ ಮತ್ತು ಸಾಮಾನ್ಯರ ವಸತಿ ನಿವೇಶನ, ಕಣಜ, ಮದ್ದಿನಮನೆ ಮೊದಲಾದ ಕಟ್ಟಡಗಳ ಅವಶೇಷ ಕಂಡುಬರುತ್ತವೆ.

೩.೧. ಮುಗದಾಳಬೆಟ್ಟ

ಈ ಬೆಟ್ಟವನ್ನು ಕರಿಯಮ್ಮನಬೆಟ್ಟ ಎಂತಲೂ ಕರೆಯಲಾಗುತ್ತದೆ. ಇದು ನಿಡುಗಲ್ಲು ನಾಯಕರಿಗೆ ಗಡಿದುರ್ಗವಾಗಿ ಕಾರ್ಯ ನಿರ್ವಹಿಸುತ್ತಿತ್ತು. ಉಳಿಯಿಂದ ಆಯತ, ಚೌಕ, ತ್ರಿಭುಜ ಮಾದರಿಯಲ್ಲಿ ಗ್ರಾನೈಟ್ ಶಿಲೆಯನ್ನು ಕತ್ತರಿಸಿ ಗೋಡೆಯ ನಿರ್ಮಾಣಕ್ಕೆ ಬಳಸಲಾಗಿದೆ. ಈ ಕೇಂದ್ರದಲ್ಲಿ ಕಬ್ಬಿಣದ ಅದಿರನ್ನು ಶುದ್ಧೀಕರಿಸಿ ನಿಡುಗಲ್ಲು ಸಂಸ್ಥಾನಕ್ಕೆ ಬೇಕಾದಂತಹ ಆಯುಧೋಪಕರಣಗಳನ್ನು ತಯಾರಿಸಿ ಕಳುಹಿಸುವ ಕಾರ್ಯ ಮಾಡುತ್ತಿತ್ತು. ಬೆಟ್ಟದ ತಪ್ಪಲಿನಲ್ಲಿ ಸುಮಾರು ಎರಡು ಎಕರೆ ವಿಸಾರದಲ್ಲಿ ಕಿಟ್ಟದ ರಾಶಿ ಹರಡಿಕೊಂಡಿದ್ದು, ಇಟ್ಟಿಗೆಯಿಂದ ಮಾಡಲಾದ ಕುಲುಮೆಗಳು ಸಹ ಅಲ್ಲಿ ಕಂಡುಬರುತ್ತವೆ. ಈ ಗುಡ್ಡದಲ್ಲಿ ಹರತಿ ನಿಡುಗಲ್ಲು ನಾಯಕರ ಸಾಮಂತ ಅಧಿಕಾರಿಗಳಾದ ಲಿಂಗಣ್ಣ ಮತ್ತು ಕರಿಯಣ್ಣ ಎಂಬುವವರು ಕಿಲ್ಲೆದಾರರಾಗಿ ಕಾರ್ಯ ನಿರ್ವಹಿಸಿದ್ದರು. ತುದಿ ಭಾಗದಲ್ಲಿ ಮೂರು ಫಿರಂಗಿಗಳಿವೆ. ಆದರೆ ಗೋಡೆಯ ನಿರ್ಮಾಣಕ್ಕೆ ಯಾವುದೇ ರೀತಿಯ ರಕ್ಷಣಾ ತಂತ್ರಗಳನ್ನು ಬಳಸದಿರುವುದು ಆಶ್ಚರ್ಯವೆನಿಸುತ್ತದೆ. ಕೇವಲ ಒಂದು ರಕ್ಷಣಾ ಕೇಂದ್ರದ ನಿರ್ವಹಣೆಗಾಗಿ ಫಿರಂಗಿಗಳಿರುವುದನ್ನು ಗಮನಿಸಿದರೆ ಗಡಿ ಭಾಗದ ರಕ್ಷಣೆಗಾಗಿ ಪಾಳೆಯಪಟ್ಟುಗಳು

ವಹಿಸುತ್ತಿದ್ದ ಮುನ್ನೆಚ್ಚರಿಕಾ ಕ್ರಮಗಳನ್ನು ತಿಳಿಯಪಡಿಸುತ್ತವೆ. ಈ ಕೋಟೆಯಲ್ಲಿ ಕಿಲ್ಲೆದಾರ ಮತ್ತು ಆತನ ಅಧಿಕಾರಿ ವರ್ಗದವರ ಕಟ್ಟಡದ ಅವಶೇಷ ಮಾತ್ರ ಕಂಡುಬರುತ್ತವೆ. ಕ್ರಮೇಣ ಜನಸಾಂದ್ರತೆ ಹೆಚ್ಚಾದಂತೆ ಪೂರ್ವ ದಿಕ್ಕಿನಲ್ಲಿರುವ ಗುಡ್ಡದಲ್ಲಿ ಕೋಟೆಯನ್ನು ವಿಸ್ತರಿಸಿ ಎರಡೂ ಗುಡ್ಡಗಳನ್ನು ಸೇರಿಸುವ ಕಾರ್ಯ ಮಾಡಿದ್ದಾರೆ. ಅಲ್ಲದೆ ಇವೆರಡೂ ಗುಡ್ಡಗಳ ನಡುವೆ ಇರುವಂತಹ ಕಂದಕಕ್ಕೆ ಎರಡೂ ಬದಿಯಲ್ಲಿ ತಡೆಗೋಡೆಗಳನ್ನು ನಿರ್ಮಿಸಿ ಬೆಟ್ಟದಲ್ಲಿ ಬೀಳುವ ಮಳೆಯ ನೀರು ಅದರಲ್ಲಿ ಸಂಗ್ರಹಗೊಳ್ಳುವಂತೆ ಮಾಡಿದ್ದಾರೆ. ಶತ್ರುಗಳನ್ನು ವೇಗವಾಗಿ ಮುನ್ನುಗ್ಗದಂತೆ ತಡೆಯುವ ಉದ್ದೇಶದಿಂದ ಪ್ರವೇಶ ದ್ವಾರಗಳನ್ನು ಗೋಡೆಯ ಮಧ್ಯೆಯೇ ಕಿರಿದಾಗಿ ನಿರ್ಮಿಸಲಾಗಿದೆ.

ಕಿಲ್ಲೆದಾರ ಕೋಟೆ ಗೋಡೆಗೆ ಹೊಂದಿಕೊಂಡಂತೆಯೇ ವಸತಿ ಕಟ್ಟಡಗಳಿದ್ದವೆಂಬುದಕ್ಕೆ ಒಳ ಬದಿಯಲ್ಲಿ ಗೂಡುಗಳಿವೆ. ಅಲ್ಲದೆ ಗೋಡೆಗಳು ಸಹ ಎತ್ತರವಾಗೇನು ಇರಲಿಲ್ಲ ಎಂಬುದಕ್ಕೆ ಕೆಳ ಭಾಗದಲ್ಲಿಯೇ ವೀಕ್ಷಣಾ ಕಿಂಡಿಗಳಿವೆ. ಕೆಲವೆಡೆ ಬೃಹತ್ ಹೆಬ್ಬಂಡೆಗಳನ್ನು ಬಳಸಿಕೊಂಡೇ ಗೋಡೆಯನ್ನು ನಿರ್ಮಿಸಲಾಗಿದೆ. ಅದೇ ರೀತಿ ಕೋಟೆಯಲ್ಲಿ ಮದ್ದಿನ ಮನೆ, ಅಧಿಕಾರಿ ವರ್ಗ ಮತ್ತು ಸಾಮಾನ್ಯ ಜನರ ವಸತಿ ನಿವೇಶನಗಳ ಅವಶೇಷ ಕಂಡುಬರುತ್ತವೆ.

೩.೨. ಬಂಗಾರನಾಯಕನದುರ್ಗ

ಹರತಿ–ನಿಡುಗಲ್ಲು ನಾಯಕರ ವಂಶಸ್ಥರಾದ ರಾಜನಾಯಕನಿಗೆ ಬಂಗಾರನಾಯಕ, ಚಿಕ್ಕನಾಯಕ, ನರಸನಾಯಕ, ಒಬವ್ವನಾಗತಿ ಎಂಬ ಮಕ್ಕಳಿದ್ದರು. ಹಿರಿಯ ಮಗನಾದ ಬಂಗಾರನಾಯಕ ಇಂದಿನ ಕೋಟೆ ಇರುವಲ್ಲಿ ಹೊಸದಾಗಿ ಪಾಳೆಯಪಟ್ಟನ್ನು ಕಟ್ಟಿ ಆಳ್ವಿಕೆ ಮಾಡಿದ್ದರಿಂದ ಆತನ ಹೆಸರಿನಿಂದಲೇ ಈ ಪ್ರದೇಶ ಪ್ರಸಿದ್ಧಿಗೆ ಬಂದಿತು. ನಿಡುಗಲ್ಲು ಪಾಳೆಯಗಾರನಾದ ತಿಪ್ಪನಾಯಕ ತನ್ನ ಮಗಳನ್ನು ಬಂಗಾರನಾಯಕನೊಂದಿಗೆ ವಿವಾಹ ಮಾಡಿ ೧೨ ಕೊಪ್ಪರಿಕ ಬಂಗಾರವನ್ನು ವರದಕ್ಷಿಣೆಯಾಗಿ ನೀಡಿದನು. ಬಹುಶಃ ಇದನ್ನು ಗಮನಿಸಿದರೆ ಬಂಗಾರನಾಯಕನಿಗೆ ಅದಕ್ಕೂ ಮೊದಲೇ ಬೇರೊಂದು ಹೆಸರು ಇದ್ದಂತೆ ಗೋಚರಿಸುತ್ತದೆ. ಏಕೆಂದರೆ ಬಳುವಳಿಯಾಗಿ ಅಪಾರ ಬಂಗಾರವನ್ನು ಪಡೆದಿದ್ದರಿಂದ ಆತನು ಜನಪದರಲ್ಲಿ ಬಂಗಾರನಾಯಕನೆಂತಲೇ ಈ ಭಾಗದಲ್ಲಿ ಪ್ರಸಿದ್ಧಿಯಾಗಿದ್ದಾನೆ. ಅಲ್ಲದೇ ಕ್ರಮೇಣ ಈ ಪ್ರದೇಶವನ್ನು ಸಹ ಬಂಗಾರನಾಯಕನದುರ್ಗ ಎಂಬುದಾಗಿಯೇ ಕರೆಯುವುದು ವಾಡಿಕೆಯಲ್ಲಿ ಬಂದಿತು. ರಾಜಧಾನಿಯ ರಕ್ಷಣೆಗಾಗಿ ಅದರ ಸಮೀಪವೇ ಇದ್ದಂತಹ ಬೆಟ್ಟಗಳಲ್ಲಿ ಕ್ರಮವಾಗಿ ಚಿಕ್ಕನಾಯಕ, ನರಸನಾಯಕ ಹಾಗೂ ಭಾವಮೈದ ಓಬನಾಯಕರ ಹೆಸರಿನಲ್ಲಿ ದುರ್ಗಗಳನ್ನು ಕಟ್ಟಿಸಿ ಅವರನ್ನೇ ಕಿಲ್ಲೆದಾರರನ್ನಾಗಿ ನೇಮಿಸಿದನು. ಇಂದಿಗೂ ಅವರ ಹೆಸರಲ್ಲೇ ಈ ಬೆಟ್ಟಗಳು ಕರೆಯಲ್ಪಡುತ್ತಿವೆ. ಆದರೆ ಅಧಿಕಾರದ ದಾಹಕ್ಕೆ ಬಲಿಯಾಗಿ ಒಬನಾಯಕನು ತನ್ನ ಸ್ವಂತ ಭಾವಮೈದನಿಗೆ ಮೋಸ ಮಾಡಿ ಈ ನಾಲ್ಕು ದುರ್ಗಗಳು ಹೈದರಾಲಿಯ ದಾಳಿಗೆ ತುತ್ತಾಗುವಂತೆ ಮಾಡಿದನು. ಕೊನೆಗೆ ಓಬನಾಯಕನು ಸಹ ಅದರ ಫಲಿತವನ್ನು ಅನುಭವಿಸಬೇಕಾಯಿತು. ಅಂದರೆ ಮಧುಗಿರಿಯ ಸೆರೆಮನೆ ಸೇರಬೇಕಾಯಿತು.[೧೦೬]

ಇಡೀ ಬೆಟ್ಟದಲ್ಲಿ ಬೃಹತ್ ಆದಂತಹ ನಿಲುವುಗಲ್ಲು, ಹೆಬ್ಬಂಡೆ, ಗುಂಡು ಮತ್ತು ದಟ್ಟಡವಿ ಇರುವುದರಿಂದ ಕೋಟೆಯ ವಿಸ್ತಾರವನ್ನು ಕಡಿಮೆ ಮಾಡಿದೆ. ಕೇವಲ ಅವಶ್ಯ ಇರುವಲ್ಲಿ ಮಾತ್ರ ಕಾಡುಗಲ್ಲುಗಳನ್ನು ಬಳಸಿಕೊಂಡು ಗೋಡೆಯನ್ನು ನಿರ್ಮಿಸಲಾಗಿದೆ. ಅದು ಸಡಿಲಗೊಳ್ಳದಿರಲೆಂದು ಕಲ್ಲುಗಳ ಮಧ್ಯೆ ಅಂತರವಿರುವಲ್ಲಿ ಚಕ್ಕೆಗಳನ್ನು ಜೋಡಿಸಲಾಗಿದೆ. ಎತ್ತರ ಇರುವಂತಹ ನೈಸರ್ಗಿಕ ಗುಂಡುಗಳ ಮೇಲೆ ಸುತ್ತಲೂ ಗೋಡೆಯನ್ನು ಕಟ್ಟಿ ಅದನ್ನೇ ಕಾವಲು ಗೋಪುರವನ್ನಾಗಿ ಮಾಡಿಕೊಂಡಿದ್ದಾರೆ. ಇದರಿಂದ ಶತ್ರುಗಳ ಬರುವಿಕೆಯನ್ನು ಬಹುದೂರದಲ್ಲೇ ಗುರುತಿಸಲು ಸಾಧ್ಯವಾಗುತ್ತಿತ್ತು. ಬೆಟ್ಟದಲ್ಲಿರುವ ಕೊರಕಲುಗಳನ್ನು ಮಳೆಯ ನೀರಿನ ಸಂಗ್ರಹಣೆಗಾಗಿ ಬಾವಿಗಳಂತೆ ಬಳಸಿಕೊಳ್ಳಲಾಗಿದೆ. ನೀರಿನ ಸಂಗ್ರಹಣೆಗೆ ನೈಸರ್ಗಿಕ ನಿರ್ಮಿತಿಗಳೆ ಹೆಚ್ಚಿರುವುದರಿಂದ ಯಾವುದೇ ರೀತಿಯ ಸ್ಥಳೀಯ ವೈಶಿಷ್ಟ್ಯತೆಯನ್ನು ಬಳಸದಂತೆ ಮಾಡಿದೆ. ಆದರೂ ಸಹ ಒಂದೆಡೆ ಬಾವಿಗೆ ಇಟ್ಟಿಗೆ ಮತ್ತು ಗಾರೆಯನ್ನು ಬಳಸಲಾಗಿದೆ. ಇಲ್ಲಿನ ವಿಶೇಷತೆ ಎಂದರೆ ಪ್ರತಿ ದೊಣೆ, ಗುಂಡು ಕಲ್ಲಿಗೂ ಒಂದೊಂದು ಹೆಸರಿದ್ದು, ಅವು ಜನ ಸಾಮಾನ್ಯರೊಂದಿಗೆ ಹೊಂದಿದ್ದ ಸಂಬಂಧವನ್ನು ತಿಳಿಯಪಡಿಸುತ್ತವೆ. ಉದಾಹರಣೆಗೆ ಬೂದುಗುಂಡ, ನವಿಲುಗುಂಡು, ರಾಜನಗುಂಡು, ಆಮಿದಾಲಗುಂಡು, ತಿಮ್ಮಪ್ಪನಗುಂಡು, ಗುರುದೊಣೆ, ಹೊಸದೊಣೆ, ರಾಮಪ್ಪದೊಣೆ, ಹೂವಿನದೊಣೆ ಎಂಬ ಹೆಸರುಗಳಿದ್ದು ಅವು ವಿವಿಧ ಸಂಸ್ಕೃತಿಗಳ ಕುರುಹಾಗಿದ್ದವು ಎಂಬುದನ್ನು ಸ್ಪಷ್ಟಪಡಿಸುತ್ತವೆ. ಈ ಕೋಟೆಯಲ್ಲಿ ಒಟ್ಟು ನಾಲ್ಕು ದ್ವಾರಗಳಿದ್ದವೆಂದು ಸ್ಥಳೀಯರು ಹೇಳುತ್ತಾರಾದರೂ ಇಂದು ಯಾವ ದ್ವಾರದ ಅವಶೇಷವು ಉಳಿದುಕೊಂಡಿಲ್ಲ. ತುದಿ ಭಾಗದಲ್ಲಿ ಅರಮನೆ, ವಸತಿ ಕಟ್ಟಡ ಹಾಗೂ ತುರ್ತು ಸಂದರ್ಭದಲ್ಲಿ ರಕ್ಷಣೆ ಪಡೆಯಲು ನೆಲದೊಳಗೆ ನಿರ್ಮಾಣಗೊಂಡ ಬಂಕರ್‌ನ ಅವಶೇಷ ಕಂಡುಬರುತ್ತದೆ. ಬಂಗಾರನಾಯಕನು ಇರುವಂತಹ ಸೀಮಿತ ಸಂಪನ್ಮೂಲಗಳನ್ನು ಬಳಸಿಕೊಂಡು ವಿಶಾಲ ಪ್ರದೇಶವನ್ನು ಆಳ್ವಿಕೆ ಮಾಡುತ್ತಿದ್ದನೆಂದು ಆತನಿಂದ ನಿರ್ಮಾಣಗೊಂಡ ಕೋಟೆಯ ರಚನಾ ಶೈಲಿಯು ಖಚಿತಪಡಿಸುತ್ತದೆ.

೩೩. ಕನ್ನಮೇಡಿ

ಇಂದಿನ ಕನ್ನಮೇಡಿ ಗ್ರಾಮದಲ್ಲಿ ಬಹು ಹಿಂದೆ ಸಿರಿ ಸಂಪತ್ತಿನಿಂದ ಕೂಡಿದ್ದರಂತೆ, ಅದು ಯಾವ ಪ್ರಮಾಣದಲ್ಲಿತ್ತು ಎಂದರೆ, ರೈತರು ಸಹ ನೇಗಿಲಿನ ಮೇಡಿಗೆ ಚಿನ್ನದ ಹಿಡಿಕೆಯನ್ನು ಹಾಕಿಕೊಳ್ಳುವ ಪ್ರಮಾಣದಷ್ಟಿತ್ತೆಂದು ಸ್ಥಳೀಯರಲ್ಲಿ ಪ್ರತೀತಿ ಇದೆ. ಹೀಗೆ ಈ ವಿಷಯವನ್ನು ತಿಳಿದ ಪಾಲಕುಂಟೆ ಕಳ್ಳರು ಒಮ್ಮೆ ಇಂತಹ ಚಿನ್ನದ ಮೇಡಿಯನ್ನು ಕನ್ನ ಮಾಡಿದ್ದರಂತೆ, ಅಂದಿನಿಂದ ಕನ್ನವಾದ ಮೇಡಿ **ಕನ್ನಮೇಡಿ** ಎಂಬುದು ಜನಪದರಲ್ಲಿ ರೂಢಿಗತವಾಗಿ ವಾಡಿಕೆಗೆ ಬಂದಿದೆ. ಆದರೆ ಕ್ರಿ.ಶ. ೧೫೫೭ರ ಸದಾಶಿವರಾಯನ ಕಾಲದ ಕನ್ನಮೇಡಿ ಶಾಸನವು ಈ ಗ್ರಾಮವನ್ನು **ಕನ್ನಮೇಟ** ಎಂದು ಉಲ್ಲೇಖಿಸುತ್ತದೆ. ಅಲ್ಲದೆ ಅದೇ ಶಾಸನ ಈ ಗ್ರಾಮಕ್ಕೆ **ಹರಿಹರರಾಯ ಸಮುದ್ರವೆಂದು**[೧೦೭] ಪ್ರತಿ ನಾಮವನ್ನು ಮಾಡಿ ಅಗ್ರಹಾರವನ್ನಾಗಿಸಿದ ಸಂಗತಿಯನ್ನು

ತಿಳಿಯಪಡಿಸುತ್ತದೆ. ಅಂದರೆ ಸದಾಶಿವರಾಯನ ಕಾಲಕ್ಕಾಗಲೇ ಇದು ಪಟ್ಟಣವಾಗಿ ರೂಪುಗೊಳ್ಳುತ್ತಿದ್ದ ಅಂಶ ಈ ಶಾಸನದಿಂದ ಸ್ಪಷ್ಟಗೊಳ್ಳುತ್ತದೆ. ಬಹುಶಃ ಸ್ಥಳೀಯರಿಗೆ ದತ್ತಿ ನೀಡಿದ್ದನ್ನು ಗಮನಿಸಿದರೆ ಸದಾಶಿವಾರಯನ ಕಾಲಕ್ಕೆ ಗ್ರಾಮದ ಸುತ್ತಲೂ ಕೋಟೆ ನಿರ್ಮಾಣಗೊಂಡಿರುವ ಸಾಧ್ಯತೆಯಿದೆ. ಏಕೆಂದರೆ ಕ್ರಿ.ಶ. ೧೭೦೦ ರಲ್ಲಿ ಇಂದುರಾಯ ಎಂಬಾತ ಪೆನುಗೊಂಡೆಯಿಂದ ಈ ಗ್ರಾಮಕ್ಕೆ ಬಂದು ಕೋಟೆ ಕಟ್ಟಿಸಿದನೆಂದು ಹೇಳಲಾಗುತ್ತದೆ. ಆದರೆ ಗುಜ್ಜಾರಪ್ಪನ ಬೆಟ್ಟದಲ್ಲಿರುವ ಕೋಟೆಯ ರಚನಾ ಶೈಲಿಯನ್ನು ಗಮನಿಸಿದರೆ ೧೭ ನೆಯ ಶತಮಾನಕ್ಕಿಂತಲೂ ಪೂರ್ವದ್ದೆಂದು ಸ್ಪಷ್ಟವಾಗುತ್ತದೆ. ಕ್ರಿ.ಶ. ೧೭೪೫ ರಲ್ಲಿ ಗುತ್ತಿಯ ಮುರಾರಿರಾವ್ ಘೋರ್ಪಡೆಯ ಸೋದರ ಸುಬ್ಬರಾವ್ ಘೋರ್ಪಡೆ ಕನ್ನಮೇಡಿ ಕೋಟೆಯನ್ನು ವಶಪಡಿಸಿಕೊಂಡನು. ಆದರೆ ಆ ಪ್ರದೇಶದಿಂದ ಬಾಬೂಜಿಯು ಮುರಾರಿರಾವ್‌ನನ್ನು ಹಿಮ್ಮೆಟ್ಟುವಂತೆ ಮಾಡಿದನು.[೧೦೮] ಹೈದರಾಲಿಯ ಕಾಲದಲ್ಲಿ ಕನ್ನಮೇಡಿ ಕೋಟೆ ಹಾಳುಗೆಡವಲ್ಪಟ್ಟಿತು.

ಕನ್ನಮೇಡಿ ಬೆಟ್ಟ ಎರಡು ಹಂತಗಳಲ್ಲಿ ಕವಲೊಡೆದಿದ್ದು, ಅವು ಇಂದು ಗುಜ್ಜಾರಪ್ಪನ ಬೆಟ್ಟ, ನಕ್ಕಲಕೊಂಡ ಎಂಬುದಾಗಿ ಕರೆಯಲ್ಪಡುತ್ತಿವೆ. ಎರಡೂ ಬೆಟ್ಟಗಳಲ್ಲೂ ವಿಶಾಲ ಕೋಟೆ ಗೋಡೆ ಹರಡಿಕೊಂಡಿದೆ. ಈ ಕವಲುಗಳನ್ನು ಜೋಡಿಸಲು ಎರಡೂ ಬದಿ ಗೋಡೆಯನ್ನು ನಿರ್ಮಿಸಿದ್ದಾರೆ. ಕೋಟೆಯ ಮೇಲಾಗುತ್ತಿದ್ದ ನಿರಂತರ ದಾಳಿಗಳನ್ನು ತಡೆಯುವ ಉದ್ದೇಶದಿಂದ ಗೋಡೆಯನ್ನು ವಿಸ್ತಾರಗೊಳಿಸಿರುವುದು ಎರಡು ಮೂರು ಹಂತಗಳಲ್ಲಿ ನಿರ್ಮಾಣಗೊಡಿರುವಂತಹದ್ದು ಅವುಗಳ ರಚನಾ ಶೈಲಿಯಿಂದ ಸ್ಪಷ್ಟವಾಗುತ್ತದೆ. ಗೋಡೆಯ ನಿರ್ಮಾಣಕ್ಕೆ ಕೆಲವೆಡೆ ತಳಪಾಯದಲ್ಲಿ ಕಾಡುಗಲ್ಲನ್ನು ಬಿಟ್ಟರೆ ಉಳಿದಂತೆ ಆಯತ, ಚೌಕ, ಚಪ್ಪಟೆ ಮಾದರಿಯಲ್ಲಿ ಉಳಿಯಿಂದ ಕತ್ತರಿಸಿದ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಈ ಬೆಟ್ಟಗಳಲ್ಲಿ ಎತ್ತರದ ನಿಲುವುಗಲ್ಲು, ಬೃಹತ್ ಹೆಬ್ಬಂಡೆ, ಗುಂಡುಗಳು ಹೆಚ್ಚಾಗಿರುವುದರಿಂದ ಅವುಗಳನ್ನು ಗೋಡೆಯ ಮಧ್ಯೆಯೆ ಹಾದು ಹೋಗುವಂತೆ ಮಾಡಿ ಅದು ಫಿರಂಗಿಗಳ ಹೊಡೆತಕ್ಕೂ ಹಾಳಾಗದಂತೆ ಮಾಡಿದ್ದಾರೆ. ಅಲ್ಲದೆ ಗೋಡೆಗೆ ರಕ್ಷಣೆ ನೀಡುವ ಉದ್ದೇಶದಿಂದ ಒಳ ಬದಿಯಲ್ಲಿ ಮಣ್ಣಿನ ಇಳಿವೊರೆಯನ್ನು ನಿರ್ಮಿಸಲಾಗಿದೆ. ಕೆಲವೆಡೆ ಮಾತ್ರ ಗೋಡೆಗೆ ಗಾರೆಯನ್ನು ಬಳಸಿರುವಂತಹದ್ದು ಕಂಡುಬರುತ್ತದೆ. ಕೊತ್ತಲಗಳನ್ನು ಆಯತ, ಚೌಕ, ವೃತ್ತ ಮಾದರಿಯಲ್ಲಿ ನಿರ್ಮಾಣ ಮಾಡಲಾಗಿದೆ. ಇವುಗಳ ವಿಶೇಷತೆ ಎಂದರೆ ಗೋಡೆಯ ಮಧ್ಯ ಭಾಗದಲ್ಲೆ ವೀಕ್ಷಣೆ ಇಲ್ಲವೆ ಆಯುಧೋಪಕರಣ ಪ್ರಯೋಗಕ್ಕಾಗಿ ಕಿಂಡಿಗಳನ್ನು ಬಿಟ್ಟಿದ್ದಾರೆ. ಅಂದರೆ ಆರಂಭದಲ್ಲಿ ಕೊತ್ತಲಗಳ ಎತ್ತರವು ಕಡಿಮೆ ಇದ್ದು ನಂತರದಲ್ಲಿ ಅದರ ಎತ್ತರವನ್ನು ಹೆಚ್ಚಿಸಿದ್ದರಿಂದ ಕಿಂಡಿಗಳು ಒಳ ಬದಿ ಇರುವ ಮಣ್ಣಿನಲ್ಲಿ ಮುಚ್ಚಿ ಹೋಗಿವೆ. ಕೆಲವೆಡೆ ಕೊತ್ತಲಗಳನ್ನು ಕೋಟೆ ಗೋಡೆಗೆ ಹೊಂದಿಕೊಂಡಂತೆ ಹೆಬ್ಬಂಡೆಗಳ ಮೇಲ್ಭಾಗ ವೃತ್ತ ಮಾದರಿಯಲ್ಲಿ ನಿರ್ಮಿಸಿದ್ದಾರೆ. ನೀರಿನ ಸಂಗ್ರಹಣೆಗಾಗಿ ನೈಸರ್ಗಿಕ ಕುಳಿಗಳು ಹೇರಳವಾಗಿ ಇರುವುದರಿಂದ ಮಳೆಯ ನೀರು ಅವುಗಳಲ್ಲಿ ಸಂಗ್ರಹಗೊಳ್ಳುತ್ತಿತ್ತು.

ನೀರಿನ ಸಂಗ್ರಹಣೆಗಾಗಿ ಇಳಿಜಾರಾದ ಸ್ಥಳಗಳಲ್ಲಿ ಮಣ್ಣು, ಕಲ್ಲು, ಇಟ್ಟಿಗೆ, ಗಾರೆಯನ್ನು ಬಳಸಿ ತಡೆಗೋಡೆಯನ್ನು ನಿರ್ಮಿಸಿಲಾಗಿದೆ. ಅಲ್ಲದೆ ಚಿರತೆ ದೊಣೆಯನ್ನಾಗಿ ಕೋಟೆ ಗೋಡೆಯ ಒಳ ಬದಿ ಆಳವಾದ ತಗ್ಗು ಪ್ರದೇಶವನ್ನು ನಿರ್ಮಿಸುವುದರ ಮೂಲಕ ಪರ್ಯಾಯ ಮಾರ್ಗಗಳನ್ನು ಕಂಡುಕೊಂಡಿದ್ದಾರೆ. ಎತ್ತರವಾದ ಗುಂಡಗಳ ಮೇಲೆ ಕಲ್ಲಿನಿಂದ ಮಂಟಪವನ್ನು ಕಟ್ಟಿ ಅದನ್ನೇ ಕಾವಲು ಗೋಪುರವನ್ನಾಗಿ ಮಾಡಿಕೊಂಡಿದ್ದಾರೆ. ಈ ಗೋಪುರಗಳ ಮೇಲೆ ಏರಲು ಏಣಿಯನ್ನು ಬಳಸಿಕೊಳ್ಳುತ್ತಿದ್ದರು. ಉಳಿದಂತೆ ಕೋಟೆಯಲ್ಲಿ ಅರಮನೆ, ವಸತಿ, ಅಧಿಕಾರಿಗಳ ಕಟ್ಟಡ, ಗಾರೆಯ ತುಪ್ಪದ ಕೊಳ, ಆಹಾರ ಧಾನ್ಯದ ಕಣಜ, ಮದ್ದಿನ ಮನೆ ಮೊದಲಾದ ಕಟ್ಟಡ ಅವಶೇಷಗಳು ಕಂಡುಬರುತ್ತವೆ. ಆದರೂ ಅವುಗಳನ್ನು ಯಾವುದು ಯಾವ ಕಟ್ಟಡಕ್ಕೆ ಸಂಬಂಧಿಸಿದ್ದು ಎಂದು ಖಚಿತವಾಗಿ ಗುರುತಿಸುವುದು ಸಾಧ್ಯವಾಗುವುದಿಲ್ಲ. ಏಕೆಂದರೆ ಇಂದು ಕೇವಲ ಪ್ರತಿ ಕಟ್ಟಡದ ಅವಶೇಷ ಕೇವಲ ತಳಪಾಯವನ್ನು ಮಾತ್ರ ಹೊಂದಿದೆ.

೩೪. ತಿಪ್ಪಯ್ಯನ ದುರ್ಗ

೧೬ನೆಯ ಶತಮಾನಕ್ಕೆ ಸೇರಿದ ತಿಪ್ಪಯ್ಯನದುರ್ಗದ ಶಾಸನವು ವಿರುಪಾಳನಾಯಕನ ಸೇನಭೋವನಾದ ಚೆನ್ನಪ್ಪನು ತನ್ನ ಅಣ್ಣ ತಿಮ್ಮರಸಯ್ಯನ ಹೆಸರಿನಲ್ಲಿ ಗೊಲ್ಲಹಳ್ಳಿಯ ಭೂಮಿಯನ್ನು ಮಾನ್ಯ ಬಿಟ್ಟ ಸಂಗತಿಯನ್ನು ತಿಳಿಸುತ್ತದೆ. ಈ ಶಾಸನದಲ್ಲಿರುವ ಚೆನ್ನಪ್ಪನು ಇಲ್ಲಿ ಕೋಟೆಯನ್ನು ಕಟ್ಟಿಸಿ ಆಳ್ವಿಕೆ ಮಾಡಿರಬಹುದು. ಅಲ್ಲದೆ ತನ್ನ ಅಣ್ಣನ ನೆನಪಿನಲ್ಲಿ ಈ ಗ್ರಾಮಕ್ಕೂ ಆತನ ಹೆಸರಿನಲ್ಲಿ ತಿಪ್ಪಯ್ಯನದುರ್ಗ ಎಂದು ನಾಮಕರಣ ಮಾಡಿರಬಹುದು.

ಕೋಟೆಯ ರಚನಾ ಶೈಲಿಯನ್ನು ಗಮನಿಸಿದರೆ ಎರಡು ಹಂತಗಳಲ್ಲಿ ನಿರ್ಮಾಣಗೊಂಡಿರುವುದು ಗೋಚರಿಸುತ್ತದೆ. ಗುಡ್ಡದ ಮೇಲಿನ ಕೋಟೆಗೆ ಉಳಿಯಿಂದ ಆಯತ ಮತ್ತು ಚೌಕ ಮಾದರಿಯಲ್ಲಿ ಕತ್ತರಿಸಿದ ಗ್ರಾನೈಟ್ ಶಿಲೆ, ಕೆಲವೆಡೆ ಕಾಡುಗಲ್ಲುಗಳನ್ನು ಬಳಸಲಾಗಿದೆ. ತುದಿಯಲ್ಲಿನ ಅಂಡಾಕಾರದ ಕೋಟೆಯ ನಿರ್ಮಾಣಕ್ಕೆ ಹೆಚ್ಚಾಗಿ ಅಲ್ಲಿಯೇ ಇರುವಂತಹ ಗುಂಡುಗಳನ್ನು ಜರುಗಿಸಿ ಅವಶ್ಯವಿರುವಲ್ಲಿ ಮಾತ್ರ ಸೈಜುಗಲ್ಲನ್ನು ಬಳಸಿ ಗೋಡೆಯನ್ನು ನಿರ್ಮಿಸಿದ್ದಾರೆ. ಗುಂಡುಗಳ ಮೇಲೆಯೇ ಚೌಕ, ವೃತ್ತ ಮಾದರಿಯ ಕೊತ್ತಲಗಳನ್ನು ನಿರ್ಮಿಸಿ ಅವುಗಳ ಎತ್ತರವನ್ನು ಇಮ್ಮಡಿಗೊಳಿಸಿದ್ದಾರೆ. ಅಂದರೆ ಗೋಡೆಯ ನಿರ್ಮಾಣಕ್ಕೆ ಅನಾವಶ್ಯಕವಾಗಿ ವ್ಯಯಿಸಬೇಕಾದ ವೆಚ್ಚವನ್ನು ಕಡಿತಗೊಳಿಸುವ ಉದ್ದೇಶವು ಇದರ ಹಿಂದಿತ್ತು. ಜೊತೆಗೆ ಗುಂಡುಗಳ ಮೇಲೆ ನಿರ್ಮಾಣಗೊಂಡ ಕೊತ್ತಲಗಳ ಮೇಲ್ಭಾಗದಿಂದ ಶತ್ರುಗಳ ಚಲನವಲನ ಗಮನಿಸಲು ಬಹುದೂರದ ಪ್ರದೇಶ ಕಾಣುತ್ತಿತ್ತು. ಗೋಡೆಗೆ ಬಳಕೆಯಾದ ಕಲ್ಲು ಸಡಿಲಗೊಂಡು ಕುಸಿಯಬಾರದೆಂಬ ಉದ್ದೇಶಕ್ಕಾಗಿ ಅವುಗಳ ಮಧ್ಯೆ ಕಲ್ಲಿನ ಚಕ್ಕೆಗಳನ್ನು ಜೋಡಿಸಿದ್ದಾರೆ. ನೆಲಗೋಟೆಗೆ ಆಯತ, ಚೌಕ ಮಾದರಿಯ ಕತ್ತರಿಸಲಾದ ಗ್ರಾನೈಟ್ ಶಿಲೆ ಹಾಗೂ ಚಪ್ಪಟ್ಟೆ ಕಲ್ಲುಗಳನ್ನು ೯೦ ಡಿಗ್ರಿಯಂತೆ ನೇರವಾಗಿ ಬಳಸಲಾಗಿದೆ. ಇದು ೩.೧೦ ಮೀ. ನಿಂದ ೫ ಮೀ. ವರೆಗೆ ಅಗಲವನ್ನು

ಹೊಂದಿದೆ. ನೆಲಗೋಟೆಯ ಮುಖ್ಯ ದ್ವಾರದ ಬಳಿ ದಿಡ್ಡಿ ಬಾಗಿಲಿದ್ದು, ಅದರ ನಿರ್ಮಾಣಕ್ಕೆ ಚಪ್ಪಟೆ ಮಾದರಿಯ ಕಲ್ಲನ್ನು ಬಳಸಿದ್ದಾರೆ. ಮುಖ್ಯ ದ್ವಾರ ೧.೭೦ ಮೀ. ಅಗಲ, ೧.೮೦ ಮೀ. ದಪ್ಪ, ೨.೭೦ ಮೀ. ಎತ್ತರವಾಗಿದೆ. ಅದೇ ರೀತಿ ದಿಡ್ಡಿ ಬಾಗಿಲು ೦.೯೩ ಮೀ. ಅಗಲ, ೧.೪೦ ಮೀ. ಎತ್ತರ, ೧.೯೩ ಮೀ. ದಪ್ಪವಿದೆ. ಉಳಿದಂತೆ ಗುಡ್ಡ ಏರುವಲ್ಲಿ ಇರುವ ದ್ವಾರ ಬೃಹತ್ ಹೆಬ್ಬಂಡೆಗಳ ನಡುಭಾಗದಲ್ಲಿದೆ. ಆದುದರಿಂದ ಆ ಹೆಬ್ಬಂಡೆಗಳೇ ಶತ್ರುಗಳನ್ನು ತಡೆಯುವಲ್ಲಿ ಮಹತ್ವದ ಕಾರ್ಯ ಮಾಡುತ್ತಿದ್ದವು. ನೆಲಗೋಟೆಯ ದ್ವಾರದ ರಕ್ಷಣೆಗಾಗಿ ಆಂಜನೇಯ ಮೂರ್ತಿಯನ್ನು ಪ್ರತಿಷ್ಠಾಪಿಸಿದ್ದಾರೆ. ಆ ಮೂರ್ತಿಯ ಮುಂದಿರುವ ದ್ವೀಪ ಸ್ತಂಭದಲ್ಲಿ ಗೂಳಿ ಮತ್ತು ಕೊಳಲು ಇಡಿದುಕೊಂಡ ಬಾಲಕೃಷ್ಣನ ಉಬ್ಬು ಕೆತ್ತನೆಗಳಿವೆ. ಬಹುಶಃ ಇಲ್ಲಿ ಬಹುಹಿಂದಿನಿಂದಲೂ ಪಶುಪಾಲಕ ಸಮುದಾಯಗಳೇ ವಾಸಿಸುತ್ತಿದ್ದವು ಎಂಬುದಕ್ಕೆ ಈ ಉಬ್ಬು ಕೆತ್ತನೆಗಳೆ ಸಾಕ್ಷಿಯಾಗಿದ್ದು, ಇಂದಿಗೂ ಇಲ್ಲಿ ಕಾಡುಗೊಲ್ಲ ಮತ್ತು ಬೇಡ ಸಮುದಾಯದವರೇ ಹೆಚ್ಚಾಗಿ ವಾಸಿಸುತ್ತಿದ್ದಾರೆ.

೩.೫. ಸ್ವಾರಮ್ಮನ ಬೆಟ್ಟ

ಸ್ವಾರಮ್ಮ ದೇವಾಲಯ ಈ ಬೆಟ್ಟದ ತಪ್ಪಲಿನಲ್ಲಿ ಇರುವ ಕಾರಣ ಸ್ವಾರಮ್ಮನ ಬೆಟ್ಟ ಎಂತಲೇ ಪ್ರಸಿದ್ಧಿಗೆ ಬಂದಿದೆ. ನಿಡುಗಲ್ಲು ಪಾಳೆಯಗಾರನಾದ ಹೊಟ್ಟಪ್ಪನಾಯಕನ ಸಮಕಾಲೀನ ತಿಮ್ಮಪ್ಪನಾಯಕನ ಕಿಲ್ಲೇದಾರನು ಈ ಬೆಟ್ಟದಲ್ಲಿ ಗಡಿಕಾಯುವ ಕಾರ್ಯ ಮಾಡುತ್ತಿದ್ದನು. ಏಕೆಂದರೆ ಇದು ತಿಮ್ಮನಾಯಕನಬೆಟ್ಟಕ್ಕೆ ಕೇವಲ ೫ ಕಿ.ಮೀ. ಅಂತರದಲ್ಲಿದೆ. ಅಲ್ಲದೇ ಕೋಟೆಯ ರಚನೆಯು ಸಹ ಕಿಲ್ಲೇದಾರನ ಕೋಟೆಯಲ್ಲಿ ಇರಬಹುದಾದ ಚೌಕಕಾರದ ಗೋಡೆ ಮಾತ್ರ ಇದೆ. ಈ ಗೋಡೆಯು ಕಾಡುಗಲ್ಲುಗಳಿಂದ ನಿರ್ಮಾಣಗೊಂಡಿದ್ದು, ಕೋಟೆಯ ಒಳ ಬದಿ ಕೇವಲ ಕಿಲ್ಲೇದಾರನಿಗೆ ಸಂಬಂಧಿಸಿದ ಆರು ವಸತಿ ಕಟ್ಟಡಗಳಿವೆ. ಇದು ೨.೨೦ ಮೀ. ಅಗಲ, ೨.೫೦ ಮೀ. ಎತ್ತರವಾಗಿದೆ. ಗೋಡೆಯ ಮೇಲ್ಭಾಗ ಕಾಡುಗಲ್ಲುಗಳನ್ನು ಬಳಸಿಕೊಂಡೇ ಸೈನಿಕರ ಓಡಾಟಕ್ಕೆ ಮತ್ತು ಶಸ್ತ್ರಾಸ್ತ್ರ ಇಡಲು ಅಟ್ಟಾಲಕ ಹಾಗೂ ಕೈಪಿಡಿ ಗೋಡೆಯನ್ನು ನಿರ್ಮಿಸಲಾಗಿದೆ. ಈ ಕೋಟೆಗೆ ಕೇವಲ ಉತ್ತರ ದಿಕ್ಕಿಗೆ ಮಾತ್ರ ದ್ವಾರವಿದ್ದು, ೧.೩೦ ಮೀ. ಅಗಲ, ೧.೫೦ ಮೀ. ಎತ್ತರ, ೧.೭೩ ಮೀ ದಪ್ಪವನ್ನು ಹೊಂದಿದೆ. ಈ ಗೋಡೆಯ ಪೂರ್ವ ಭಾಗಕ್ಕೆ ಮುಖ್ಯ ಕೋಟೆ ಗೋಡೆಯ ರಕ್ಷಣೆಗಾಗಿ ಮತ್ತೊಂದು ಸುತ್ತಿನ ಕೋಟೆಯನ್ನು ನಿರ್ಮಿಸಲಾಗಿದೆ. ಅದರ ಒಳಗೆ ನೀರಿನ ದೊಣೆ ಇರುವುದನ್ನು ಗಮನಿಸಿದರೆ ಆಪತ್ಕಾಲದಲ್ಲಿ ಶತೃಗಳಿಂದ ನೀರು ಕಲುಷಿತಗೊಳ್ಳಬಾರದೆಂದು ನಿರ್ಮಿಸಿದಂತೆ ಕಾಣುತ್ತದೆ. ಏಕೆಂದರೆ ಈ ಸುತ್ತಿನ ಕೋಟೆಯಲ್ಲಿ ನೀರಿನ ದೊಣೆಯನ್ನು ಬಿಟ್ಟರೆ ಮತ್ತಾವ ಕಟ್ಟಡ ಅವಶೇಷಗಳು ಕಂಡುಬರುವುದಿಲ್ಲ. ಕೋಟೆಯ ಒಳ ಬದಿ ನೀರಿನ ಸಂಗ್ರಹಣೆಗಾಗಿ ಹೆಚ್ಚಿನ ವ್ಯವಸ್ಥೆ ಮಾಡಿಲ್ಲ. ಏಕೆಂದರೆ ಬೆಟ್ಟದ ತಪ್ಪಲಿನಲ್ಲಿ ಕೆರೆ ಮತ್ತು ಜಲ್ದಿ ಬಾವಿಯಲ್ಲಿ ಸದಾ ಕಾಲ ನೀರಿರುತ್ತಿದ್ದರಿಂದ ಇಲ್ಲಿಂದಲೇ ನೀರನ್ನು

ತೆಗೆದುಕೊಂಡು ಹೋಗುತ್ತಿದ್ದರು. ಬೆಟ್ಟವೇನು ಅಷ್ಟು ಎತ್ತರವಾಗಿಲ್ಲದಿರುವುದು ಇದಕ್ಕೇ ಕಾರಣವೂ ಸಹ ಆಗಿರಬಹುದು.

೩೬. ಗುಟ್ಟೆ

ಗುಟ್ಟೆಯಲ್ಲಿ ಕೃಷ್ಣಪ್ಪ ನಾಯಕನ ಮಗ ರಾಮಣ್ಣನಾಯಕನು[೧೯] ಮಹಾನಾಡ ಪ್ರಭುಗಳ ಸಮಕಾಲೀನನಾಗಿ ಆಳ್ವಿಕೆ ಮಾಡಿದ್ದಾನೆ. ಬೆಟ್ಟದಲ್ಲಿ ಸಿಗುವ ಮೈಕಾ ಮಿಶ್ರಿತ ಕಾಡುಗಲ್ಲುಗಳನ್ನು ಕೋಟೆಯ ನಿರ್ಮಾಣಕ್ಕೆ ಬಳಸಲಾಗಿದೆ. ತುಮಕೂರು ಜಿಲ್ಲೆಯಲ್ಲಿನ ಇಡೀ ಕೋಟೆಗಳ ರಚನಾ ಶೈಲಿಯನ್ನು ಗಮನಿಸಿದರೆ ಬೆಟ್ಟದ ಸುತ್ತಲೂ ಮೂರು ಸುತ್ತಿನ ಕೋಟೆಯನ್ನು ಹೊಂದಿರುವ ಏಕೈಕ ಕೋಟೆ ಗುಟ್ಟೆಯಲ್ಲಿರುವಂತದ್ದು ಎಂಬ ಸಂಗತಿ ಇದರ ಐತಿಹಾಸಿಕತೆಯನ್ನು ಸ್ಪಷ್ಟಪಡಿಸುತ್ತದೆ. ಸಾಮಾನ್ಯವಾಗಿ ಮೈಕಾ ಮಿಶ್ರಿತ ಶಿಲೆಯು ಮೃದುವಾಗಿರುವುದರಿಂದ ಕೋಟೆಯ ನಿರ್ಮಾಣ ಕಾಲಕ್ಕೆ ಅದು ಸದೃಢವಾಗಿದ್ದರೂ ಕಾಲಾಂತರದಲ್ಲಿ ಸಡಿಲಗೊಂಡು ಕೋಟೆಯ ವಾಸ್ತುವನ್ನು ಅವೈಜ್ಞಾನಿಕವನ್ನಾಗಿಸಿದೆ. ಆದುದರಿಂದಲೇ ಈ ಕೋಟೆಗೆ ಸಂಬಂಧಿಸಿದಂತೆ ಬಹು ವಿರಳವಾಗಿ ಚಾರಿತ್ರಿಕ ಸಂಗತಿಗಳು ಕಂಡುಬರುತ್ತವೆ. ಬಹುಶಃ ಈ ಕಾರಣಕ್ಕಾಗಿಯೇ ಚರಿತ್ರೆಯಲ್ಲಿ ಇದು ಹೆಚ್ಚು ಗುರುತಿಸಿಕೊಂಡಿಲ್ಲ ಎನಿಸುತ್ತದೆ. ಮೊದಲ ಎರಡು ಸುತ್ತಿನ ಕೋಟೆಗಳಲ್ಲಿ ಚೌಕ, ವೃತ್ತ, ಗಜಪುಷ್ಪಾಕಾರದ ಕೊತ್ತಲಗಳನ್ನು ಗೋಡೆಯ ಉದ್ದಕ್ಕೂ ನಿರ್ಮಿಸಲಾಗಿದೆ. ಏಕೆಂದರೆ ಶತ್ರುಗಳನ್ನು ಯಾವ ದಿಕ್ಕಿನಿಂದ ಬೇಕಾದರೂ ಎದುರಿಸಲು ಅನುವಾಗಲೆಂದು ಈ ಮಾದರಿಯಲ್ಲಿ ನಿರ್ಮಿಸಲಾಗಿದೆ. ಕೆಲವೆಡೆ ಗೋಡೆಯಲ್ಲಿ ಅಟ್ಟಾಲಕ, ಕೈಪಿಡಿ ಗೋಡೆಯನ್ನು ಸುಲಭವಾಗಿ ಹಿಮ್ಮೆಟ್ಟಿಸುವ ಉದ್ದೇಶದಿಂದ ಅವಶ್ಯ ಇರುವಲ್ಲಿ ಮಾತ್ರ ನಿರ್ಮಿಸಲಾಗಿದೆ. ಕೋಟೆಯಲ್ಲಿ ಒಟ್ಟು ಐದು ದ್ವಾರಗಳಿದ್ದು, ಅವು ಗೋಡೆಯ ಮಧ್ಯೆಯೇ ನೇರವಾಗಿ ನಿರ್ಮಾಣಗೊಂಡಿವೆ. ಇದರಿಂದ ಶತ್ರುಗಳು ಬಹುಬೇಗ ಕೋಟೆಯನ್ನು ಪ್ರವೇಶಿಸಲು ದ್ವಾರವನ್ನು ಅನುಕುಲ ಮಾಡಿಕೊಟ್ಟಂತಿತ್ತು. ಹಾಗಾಗಿಯೇ ಪ್ರತಿ ದ್ವಾರದ ಬಳಿಯೂ ಶತೃಗಳನ್ನು ತಡೆಯುವ ಉದ್ದೇಶದಿಂದ ಎರಡೂ ಬದಿಯಲ್ಲಿ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಗೋಡೆಯು ಫಿರಂಗಿಗಳ ಹೊಡೆತಕ್ಕೆ ಹಾಳಾಗಬಾರದೆಂದು ಒಳ ಬದಿ ಮಣ್ಣಿನ ಇಳಿವೊರೆ ಇದೆ. ಕೋಟೆಯಲ್ಲಿ ಜನ ವಸತಿ ಇತ್ತೆಂಬುದಕ್ಕೆ ಪೂರಕವಾಗಿ ಯಾವುದೇ ಮಾದರಿಯ ಕಟ್ಟಡ ಅವಶೇಷ ಕಂಡುಬರುವುದಿಲ್ಲ. ಬಹುಶಃ ಇದು ಕಿಲ್ಲೇದಾರನ ಕಟ್ಟಡ ಇದ್ದಿರಬಹುದೆಂದು. ಹೀಗೆ ಹೇಳಲಾಗುವ ಸ್ಥಳದಲ್ಲಿ ಚೌಡೇಶ್ವರಿ ದೇವಾಲಯ ನಿರ್ಮಾಣಗೊಂಡಿದೆ. ಬೆಟ್ಟದ ದಕ್ಷಿಣ ದಿಕ್ಕಿಗೆ ಪಾಳುಬಿದ್ದ ವಸತಿ ಅವಶೇಷ ಇರುವುದನ್ನು ಗಮನಿಸಿದರೆ ಬೆಟ್ಟದಲ್ಲಿ ಮೈಕಾ ಖನಿಜ ಹೆಚ್ಚಾಗಿರುವುದರಿಂದ ಕಟ್ಟಡ ನಿರ್ಮಾಣಕ್ಕೆ ಯೋಗ್ಯ ಸ್ಥಳಾವಕಾಶ ಇಲ್ಲ. ಅಲ್ಲದೆ ನೀರಿನ ಸಂಗ್ರಹಣೆಗಾಗಿಯೂ ಸಹ ಬೆಟ್ಟದಲ್ಲಿ ನೀರಿನ ಮೂಲ ಕಡಿಮೆ ಇದ್ದಿದರಿಂದ ಬೆಟ್ಟದ ತಪ್ಪಲಿನಲ್ಲಿ ವಸತಿ ಸಮುಚ್ಚಯ ಇತ್ತು. ತುರ್ತು ಸಂದರ್ಭದಲ್ಲಿ ಮಾತ್ರ ಕೋಟೆಯ ಒಳಗೆ ರಕ್ಷಣೆ ಪಡೆದುಕೊಳ್ಳುತ್ತಿದ್ದರು. ಚೌಡೇಶ್ವರಿ ದೇವಾಲಯದ

ಮುಂಬದಿ ಇರುವ ಆಳವಾದ ಕೊರಕಲಿಗೆ ತಡೆಗೋಡೆಯನ್ನು ನಿರ್ಮಿಸಿ ಮಳೆ ನೀರನ್ನು ಸಂಗ್ರಹಗೊಳ್ಳುವಂತೆ ಮಾಡಿದ್ದಾರೆ. ಆ ಬಾವಿಗೆ ಇಳಿಯಲು ಗಾರೆ ಮತ್ತು ಇಟ್ಟಿಗೆಯಿಂದ ಪಾವಟಿಗೆಗಳನ್ನು ಮಾಡಿದ್ದಾರೆ.

೩.೭. ತಿಮ್ಮನಾಯಕನ ಬೆಟ್ಟ (ಟಿ. ಎನ್. ಬೆಟ್ಟ)

ನಿಡುಗಲ್ಲು ಪಾಳೆಯಗಾರರು ತಮ್ಮ ಗಡಿಯ ಭಾಗದಲ್ಲಿ ಭದ್ರತೆಯನ್ನು ಕಲ್ಪಿಸುವ ಉದ್ದೇಶದಿಂದ ನೈಸರ್ಗಿಕವಾಗಿ ಅಭೇದ್ಯತೆ ಇರುವಂತಹ ಪ್ರದೇಶಗಳಲ್ಲಿ ಹೊಸದಾಗಿ ಕೋಟೆ ಕೊತ್ತಲಗಳನ್ನು ಕಟ್ಟಿಸಿ ಅವುಗಳ ನಿರ್ವಹಣೆಗಾಗಿ ಒಬ್ಬ ಕಿಲ್ಲೇದಾರ ಇಲ್ಲವೆ ಪಾಳೆಯಗಾರರನ್ನು ನೇಮಿಸಿರುವುದು ಕ್ಷೇತ್ರ ಅಧ್ಯಯನ ಸಂದರ್ಭದಲ್ಲಿ ಕಂಡುಬಂದಿದೆ. ಈ ಮಾದರಿಯ ಕೋಟೆಗಳಲ್ಲಿ ಇದು ಒಂದಾಗಿದೆ. ತಿಮ್ಮಾನಾಯಕನು ಎಂಬ ಪಾಳೆಯಗಾರ ನಿಡುಗಲ್ಲಿನ ತಿಪ್ಪನಾಯಕ, ಬಂಗಾರನಾಯಕನ ಬೆಟ್ಟದ ಬಂಗಾರನಾಯಕನ ಸಮಕಾಲೀನನಾಗಿ ಆಳ್ವಿಕೆ ನಡೆಸಿದ್ದಾನೆ.

ಈ ಬೆಟ್ಟದಲ್ಲಿರುವ ಬೃಹತ್ ನೈಸರ್ಗಿಕ ಗುಂಡುಗಳಿಗೆ ಹೊಂದಿಕೊಂಡಂತೆಯೇ ಕೋಟೆಯನ್ನು ನಿರ್ಮಿಸಲಾಗಿದೆ. ಗೋಡೆಯ ನಿರ್ಮಾಣಕ್ಕೆ ಕಾಡುಗಲ್ಲು, ಸೈಜುಗಲ್ಲು, ಹಾಗೂ ಆಯತ, ಚೌಕ ಮಾದರಿಯಲ್ಲಿ ಕತ್ತರಿಸಿದ ಗ್ರಾನೈಟ್ ಶಿಲೆಯನ್ನು ಬಳಸಲಾಗಿದೆ. ಜೊತೆಗೆ ಅದು ಸಡಿಲಗೊಳ್ಳದಂತೆ ಕಲ್ಲಿನ ಚಕ್ಕೆಗಳನ್ನು ಜೋಡಿಸಿದ್ದಾರೆ. ಇದರ ಅಗಲ ೦.೮೦ ಮೀ. ನಿಂದ ೭.೭೦ಮೀ. ವರೆಗೆ ಹಾಗೂ ೨ ಮೀ.ನಿಂದ ೩.೪೦ ಮೀ. ವರೆಗೆ ಎತ್ತರವಿದೆ. ಬೆಟ್ಟದಲ್ಲಿ ಎತ್ತರ ಇರುವಂತಹ ಸ್ಥಳದಲ್ಲಿ ಕಾವಲು ಗೋಪುರ ಹಾಗೂ ಗೋಡೆಗೆ ಹೊಂದಿಕೊಂಡು ನಿರ್ಮಾಣವಾದ ಕೊತ್ತಲಗಳನ್ನು ಶತ್ರುಗಳ ಚಲನವಲನ ಗಮನಿಸುವುದಕ್ಕಾಗಿ ಬಳಸಿಕೊಳ್ಳಲಾಗಿದೆ. ಗೋಡೆಯ ತಳಭಾಗದಲ್ಲಿ ರಂಧ್ರವನ್ನು ಮಾಡಿ ಮಳೆಯ ನೀರು ಹರಿದು ಹೋಗುವಂತೆ ಮಾಡಿದ್ದಾರೆ. ನೆಲಗೋಟೆಯ ಮುಖ್ಯ ದ್ವಾರವನ್ನು ಎಲ್ ಮಾದರಿಯಲ್ಲಿ ನಿರ್ಮಿಸಿ, ಮತ್ತೊಂದು ಸಣ್ಣದಾದ ೨ ಮೀ. ಅಗಲ, ೭ ಮೀ. ಎತ್ತರ ೬.೧೫ ಮೀ. ದಪ್ಪ, ೧.೮೦ ಮೀ. ವಿಸ್ತೀರ್ಣದ ಕಿರು ದ್ವಾರದ ಮೂಲಕ ಒಳ ಪ್ರವೇಶಿಸಬೇಕಾಗಿತ್ತು. ಅಲ್ಲದೇ ದ್ವಾರದ ಅಭೇದ್ಯತೆಯನ್ನು ಕಾಪಾಡುವ ಉದ್ದೇಶದಿಂದ ಎರಡೂ ಬದಿಯಲ್ಲಿ ಕೊತ್ತಲಗಳನ್ನು ನಿರ್ಮಿಸಲಾಗಿದೆ. ಉಳಿದಂತೆ ಬೆಟ್ಟದಲ್ಲಿ ಅಕ್ಕಮ್ಮ ದೊಣೆ, ಅಧಿಕಾರಿ ವರ್ಗದವರ ಕಟ್ಟಡ, ಸಾಮಾನ್ಯರ ವಸತಿ ಅವಶೇಷಗಳಿವೆ. ನೆಲಗೋಟೆಯಲ್ಲಿ ಹೆಚ್ಚಾಗಿ ಕಮ್ಮಾರಿಕೆ ಮಾಡುವವರ ವಸತಿ ನಿವೇಶನಗಳೇ ಹೆಚ್ಚಾಗಿ ಕಂಡುಬರುತ್ತವೆ. ಏಕೆಂದರೆ ನೆಲಗೋಟೆಯ ಹೊರ ಬದಿ ಕಬ್ಬಿಣವನ್ನು ಶುದ್ಧೀಕರಿಸಿ ಆಯುಧೋಪಕರಣ ತಯಾರಿಸುತ್ತಿದ್ದರು ಎಂಬುದಕ್ಕೆ ಇಟ್ಟಿಗೆ ಮತ್ತು ಗಾರೆಯಿಂದ ಮಾಡಿದ ಕಬ್ಬಿಣದ ಕುಲುಮೆಗಳು ಹಾಗೂ ಕಿಟ್ಟದ ರಾಶಿಯೇ ಇದೆ. ಇದನ್ನು ಗಮನಿಸಿದರೆ ಈ ಕೇಂದ್ರವು ಆಯುಧೋಪಕರಣಗಳ ಪ್ರಮುಖ ವ್ಯಾಪಾರಿ ಕೇಂದ್ರವಾಗಿತ್ತೆಂದು ಸ್ಪಷ್ಟವಾಗುತ್ತದೆ.

೩೮. ದವಡ ಬೆಟ್ಟ

ಈ ಬೆಟ್ಟದಲ್ಲಿ ಕಂಡುಬರುವ ಪ್ರತಿ ಗುಂಡುಕಲ್ಲುಗಳ ಹಿಂದೆಯು ಒಂದೊಂದು ಐತಿಹ್ಯ ಅಡಗಿದೆ. ಇದನ್ನು ಗಮನಿಸಿದರೆ ಅವು ಅಂದಿನ ಜನರೊಂದಿಗೆ ಹೊಂದಿದ್ದ ಸಂಬಂಧವನ್ನು ತಿಳಿಯಪಡಿಸುತ್ತವೆ. ಉದಾಹರಣೆಗೆ ಒನಕೆಗುಂಡು, ನಾಲಿಗೆಗುಂಡು ಎಂಬಂತಹ ಹೆಸರಿನ ಗುಂಡುಗಳನ್ನು ವಿಶ್ಲೇಷನೆಗೆ ಒಳಪಡಿಸಿದರೆ ಒನಕೆಯು ಆಹಾರ ಧಾನ್ಯವನ್ನು ಶುದ್ಧೀಕರಿಸಲು, ಮತ್ತು ಸಾಂಬಾರು ಪದಾದರ್ಥಗಳನ್ನು ಪುಡಿ ಮಾಡಲು ಬಳಸುತ್ತಿದ್ದ ಉಪಕರಣ ಎಂಬುದು ತಿಳಿಯುತ್ತದೆ. ಅಂದರೆ ಇಲ್ಲಿ ಯಾವ ಸಮುದಾಯಗಳು ವಾಸಿಸುತ್ತಿದ್ದರು ಎಂಬ ಸಂಗತಿಯನ್ನು ಇದರಿಂದ ಊಹಿಸಬಹಿದಿತ್ತು. ಸ್ಥಳೀಯರು ಈ ಬೆಟ್ಟವನ್ನು ಬಂಗಾರು ಕೊಂಡ ಎಂತಲೂ ಕರೆಯುತ್ತಾರೆ. ಅಂದರೆ ಬಹು ಹಿಂದೆ ಚಿನ್ನದ ವ್ಯಾಪಾರ ಮಾಡುವ ಸಮುದಾಯ ಈ ಬೆಟ್ಟದಲ್ಲಿ ಹೆಚ್ಚಾಗಿ ವಾಸಿಸುತ್ತಿದ್ದರಂತೆ ಹಾಗಾಗಿ ಈ ಬೆಟ್ಟಕ್ಕೆ ಬಂಗಾರುಕೊಂಡ ಎಂಬ ಹೆಸರು ಬಂದಿದೆ ಎಂದು ಸ್ಥಳೀಯರಲ್ಲಿ ಪ್ರತೀತಿ ಇದೆ. ಆದರೆ ಚಾರಿತ್ರಿಕವಾಗಿ ಗಮನಿಸುವುದಾರೆ ಚಿನ್ನದ ವ್ಯಾಪಾರಿಗಳು ಇಲ್ಲಿ ಇದ್ದಿರಬಹುದಾದರೂ ಇದು ಬಂಗಾರ ನಾಯಕನ ಗಡಿದುರ್ಗವಾಗಿದ್ದರಿಂದ ಈ ಬೆಟ್ಟಕ್ಕೆ ಬಂಗಾರು ಕೊಂಡ ಎಂಬ ಹೆಸರು ಬಂದಿರಬಹುದು. ಕೊಂಡ ಎಂಬುದು ತೆಲುಗು ಭಾಷೆಯಲ್ಲಿ ಬೆಟ್ಟ, ಗಿರಿ ಎಂದರ್ಥವಿದೆ.

ಈ ಬೆಟ್ಟದಲ್ಲಿ ಪಟ್ಟಣ ವಿಸ್ತಾರವಾದಂತೆ ಕೋಟೆಯು ಸಹ ವಿಸ್ತಾರಗೊಂಡಿದೆ. ಕೋಟೆಯ ನಿರ್ಮಾಣಕ್ಕೆ ಅಲ್ಲಿಯೇ ಸಿಗುವ ನೈಸರ್ಗಿಕ ಗುಂಡುಗಳನ್ನು ಉಳಿಯಿಂದ ಆಯತ, ಚೌಕ ಮಾದರಿಯಲ್ಲಿ ಕತ್ತರಿಸಿದರೆ, ಕೆಲವೆಡೆ ಸೈಜುಗಲ್ಲು ಮತ್ತು ನೈಸರ್ಗಿಕ ಗುಂಡುಗಳನ್ನು ಹಾಗೆಯೇ ಬಳಸಿಕೊಂಡಿದ್ದಾರೆ. ಅವು ಸಡಿಲಗೊಳ್ಳದಿರಲೆಂದು ಕಲ್ಲಿನ ಚಕ್ಕೆಗಳನ್ನು ಜೋಡಿಸಿದ್ದಾರೆ. ಇಡೀ ಕೋಟೆಯಲ್ಲಿ ಕೇವಲ ೫ ಮೀ. ಅಗಲ, ೫ ಮೀ. ಉದ್ದದ ೫ ಕೊತ್ತಲಗಳಷ್ಟೇ ಕಂಡುಬರುತ್ತವೆ. ಬೃಹತ್ ಹೆಬ್ಬಂಡೆಗಳು ಕೋಟೆ ಗೋಡೆ ಹೊಂದಿಕೊಂಡಿರುವುದರಿಂದ ಅವುಗಳನ್ನೇ ಕೊತ್ತಲಗಳನ್ನಾಗಿಯೂ ಬಳಸಿಕೊಳ್ಳಲಾಗಿದೆ. ನೆಲಗೋಟೆಯ ದ್ವಾರದ ಒಳ ಬದಿ ಎತ್ತರದ ಎರಡು ವೇದಿಕೆಗಳಿದ್ದು, ಅದಕ್ಕೆ ಹೊಂದಿಕೊಂಡಂತೆ ದಿಡ್ಡಿ ಬಾಗಿಲಿದೆ. ಮುಖ್ಯ ದ್ವಾರ ೨.೭೦ ಮೀ. ಎತ್ತರ, ೧.೯೦ ಮೀ. ದಪ್ಪ, ೨ ಮೀ. ಅಗಲ ಹಾಗೂ ದಿಡ್ಡಿ ಬಾಗಿಲು ೧.೦೮ ಮೀ. ಅಗಲ, ೧.೫೭ ಮೀ. ದಪ್ಪವಿದೆ. ಬೆಟ್ಟದ ಪೂರ್ವ ದಿಕ್ಕಿಗೆ ಸೈನಿಕರು ದೈಹಿಕ ಕಸರತ್ತು ಮತ್ತು ಶಸ್ತ್ರಾಸ್ತ್ರ ತರಬೇತಿಗಾಗಿ ವಿಶಾಲ ಮೈದಾನದ ಸುತ್ತಲೂ ಕೋಟೆಯಿದೆ. ಬೆಟ್ಟದ ಮೇಲೆ ಮಳೆಯ ನೀರಿನ ಸಂಗ್ರಹಣೆಗಾಗಿ ಕಾಲುವೆಗಳ ಮೂಲಕ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಾಣಗೊಂಡ ಬಾವಿಗೆ ಹರಿಬಿಡುವ ವ್ಯವಸ್ಥೆ ಮಾಡಿದ್ದಾರೆ. ಅದೇ ರೀತಿ ಇಳಿಜಾರಾದ ಕಡೆ ಕಲ್ಲಿನ ತಡೆಗೋಡೆಯನ್ನು ನಿರ್ಮಿಸಿ ಮಳೆಯ ನೀರು ವ್ಯರ್ಥವಾಗಿ ಹರಿದು ಹೋಗದಂತೆ ಮಾಡಿದ್ದಾರೆ. ಇದರ ಜೊತೆಗೆ ಕೋಟೆಯಲ್ಲಿ ಅಧಿಕಾರಿ ವರ್ಗದವರ, ಸಾಮಾನ್ಯ ಜನರ ವಸತಿ ನಿವೇಶನ, ಅರಮನೆ, ಮದ್ದಿನ

ಮನೆ, ಆಹಾರ ಧಾನ್ಯ ಮತ್ತು ತುಪ್ಪದ ಕಣಜ, ಮೊದಲಾದ ಕಟ್ಟಡದ ನಿರ್ಮಿತಿಗಳು ಕಂಡುಬರುತ್ತವೆ.

ಹೀಗೆ ತುಮಕೂರು ಜಿಲ್ಲೆಯಲ್ಲಿ ಕಂಡುಬರುವ ಕೋಟೆ, ಕೊತ್ತಲ, ಪುರ, ವಾಡೆ, ಪಾಳ್ಯ, ಶಿಬಿರ ಮೊದಲಾದವುಗಳನ್ನು ರಕ್ಷಣಾ ವಾಸ್ತುಶಿಲ್ಪಕ್ಕೆ ಅನುಗುಣವಾಗಿ ಆಯಾ ವಿಷಯವಾರು ಚರ್ಚಿಸಿ ಜನ ಸಾಮಾನ್ಯರ ಜೀವನ ಕ್ರಮ ಹೇಗಿತ್ತೆಂಬುದನ್ನು ಮೊದಲ ಬಾರಿಗೆ ವಿಶ್ಲೇಷಣೆಗೆ ಒಳಪಡಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಅಂಬಳಿಕೆ ಹಿರಿಯಣ್ಣ (ಪ್ರಸಂ.), ೨೦೦೯ ಕನ್ನಡ ವಿಷಯ ವಿಶ್ವಕೋಶ ಇತಿಹಾಸ ಮತ್ತು ಪುರಾತತ್ವ ಪು. ೨೮೧.

೨. ನಂಜುಂಡಸ್ವಾಮಿ ಬಿ., ೨೦೦೨ ಸಿರಿ, ಪು. ೧೭೫.

೩. ರವೀಶ್ ಜಿ.ಎನ್., ೨೦೧೦ ನಿಡುಗಲ್ಲು ಪರಿಸರದ ರಕ್ಷಣಾ ವಾಸ್ತುಶಿಲ್ಪ, ಪು. ೭೦.

೪. EC.vol.XVI ಮಳೆಕೋಟೆ ಶಾ.ಸಂ. ೭೮, ಪು. ೭೭-೭೮.

೫. EC.vol.XXVI ತುಮಕೂರು, ಶಾ.ಸಂ. ೩೮ ಪು. ೭೭-೭೮.

೬ ಗೋಪಾಲ್ ಆರ್., ೨೦೦೯, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ ಪು.೧೪.

೭ ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೦, ಇತಿಹಾಸ ದರ್ಶನ ಪು. ೧೨೬.

೮. ಕವಿತಾ ಕೃಷ್ಣಾ (ಪ್ರಸಂ.), ೨೦೦೨, ಜಯಮಂಗಲಿ, ಪು. ೩೯.

೯. ವಸು ಎಂ.ವಿ. (ಸಂ)., ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪು. ೨೪.

೧೦. ನಂಜುಂಡಸ್ವಾಮಿ., ೨೦೦೨ ಪೂರ್ವೋಕ್ತ, ಪು. ೩೩೧-೩೩೪.

೧೧. ಗೋಪಾಲ್ ಆರ್., ೨೦೦೯, ಪೂರ್ವೋಕ್ತ ಪು. ೪೦೪-೪೦೫.

೧೨. ಯೋಗೀಶ್ವರಪ್ಪ ಡಿ.ಎನ್., ೧೯೯೯ ಹಾಗಲವಾಡಿ ನಾಯಕರು, ಪು. ೩೩-೩೬.

೧೩. ಯೋಗೀಶ್ವರಪ್ಪ ಡಿ.ಎನ್., ೨೦೧೨, ಕಲ್ಪಶೋಧ, ಪು. ೨೮೦.

೧೪. ವಸು ಎಂ.ವಿ. (ಸಂ.), ೨೦೦೧, ಪೂರ್ವೋಕ್ತ, ಪು. ೨೩.

೧೫. ಗೋಪಾಲ್ ಆರ್., ೨೦೦೯, ಪೂರ್ವೋಕ್ತ ಪು. ೪೦೭.

೧೬. ನಂಜುಂಡಸ್ವಾಮಿ., ೨೦೦೨ ಪೂರ್ವೋಕ್ತ, ಪು. ೩೩೬-೩೩೭.

೧೭. ಲಕ್ಷ್ಮಿ ನಾರಾಯಣರಾಯ, ೨೦೦೮, ಕರ್ನಾಟಕ ಇತಿಹಾಸ, ಪು. ೧೯೪-೧೯೯.

೧೮. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ (ಸಂ.), ೧೯೯೩, ಇತಿಹಾಸ ದರ್ಶನ ಪು. ೧೪೯.

೧೯. ಗೋಪಾಲ್ ಆರ್., ೨೦೦೯, ಪೂರ್ವೋಕ್ತ ಪು. ೧೧೩.

೨೦. ಜ್ಯೋತಿ ಆರ್.ಎಸ್., ೧೯೮೫, ಪ್ರಾಚೀನ ಹಾಗೂ ಅರ್ವಾಚೀನದನಗಳ ಇತಿಹಾಸ ಪು. ೬೧-೬೪.

೨೧. ಬಾಲಗೋಪಾಲ ಕೆ (ಮೂಲ)., ಶ್ರೀಮತಿ ಎಚ್.ಎಸ್ (ಅನು.), ೧೯೯೮, ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ. ಕೊಸಾಂಬಿಯವರ ಚಿಂತನೆಗಳು ಪು. ೧೭-೩೬.

೨೨. ಬಾಶಮ್ ಎ.ಎಲ್. (ಮೂಲ), ಮಿರ್ಜಿ ಡಿ.ಆರ್. (ಅನು.), ೨೦೧೨, ಪ್ರಾಚೀನ ಭಾರತವೆಂಬ ಅದ್ಭುತ, ಪು. ೨೭೪.

೨೩. ನಾಯಕ ಹಾ.ಮ. (ಪ್ರ.ಸಂ.), ೨೦೦೫, ಕನ್ನಡ ವಿಷ ವಿಶ್ವಕೋಶ ಸಂಪುಟ-೧, ಪು. ೬೭೦.

೨೪. EC.Vol XII. ನಿಡುಗಲ್ಲು ಶಾ.ಸಂ. ೫೦, ಪು. ೩೭೧-೩೭೨.

೨೫. EC.Vol XII. ಮಿಡಿಗೇಶಿ ಶಾ.ಸಂ. ೧೧೭, ಪು. ೫೦-೫೧.

೨೬. ನರಸಿಂಹಮೂರ್ತಿ ಎ.ವಿ., ೨೦೧೦, ಕರ್ನಾಟಕ ಪುರಾತತ್ವ ಕೆಲವು ಅಧ್ಯಯನಗಳು, ಪು. ೨೬-೨೭.

೨೭ ಅದೇ, ಪು. ೨೭-೨೮.

೨೮. ಕವಿತಾಕೃಷ್ಣಾ (ಪ್ರ.ಸಂ.), ೨೦೦೨, ಪೂರ್ವೋಕ್ತ ಪು. ೪.

೨೯. ನಾಗರಾಜರಾವ್ ಎಂ.ವಿ., ೧೯೮೫, ಚಿಕ್ಕನಾಯಕನಹಳ್ಳಿ ತಾಲ್ಲೂಕು ದರ್ಶನ, ಪು.೯.

೩೦. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪು. ೪೬೬-೪೬೭.

೩೧. ವಸು ಎಂ.ವಿ. (ಸಂ.), ೨೦೦೧, ಪೂರ್ವೋಕ್ತ, ಪು. ೭೦.

೩೨. ಬಾಲಗೋಪಾಲ್ ಕೆ. (ಮೂಲ) ಶ್ರೀಮತಿ ಎಚ್.ಎಸ್. (ಅನು.), ೨೦೧೨, ಪೂರ್ವೋಕ್ತ, ಪು. ೧೫೦-೧೬೦.

೩೩. EC.Vol XII. ಇಟ್ಟಿಗ ದಿಬ್ಬನಹಳ್ಳಿ, ಶಾ.ಸಂ. ೧೧೯, ಪು. ೫೧.

೩೪. ರವೀಶ್ ಜಿ.ಎನ್., ೨೦೧೦, ನಿಡುಗಲ್ಲು ಪರಿಸರದ ರಕ್ಷಣಾ ವಾಸ್ತು ಶಿಲ್ಪ (ಅಪ್ರಕಟಿತ ಎಂ.ಫಿಲ್. ಪ್ರಬಂಧ) ಪು. ೭೦.

೩೫. ಲಕ್ಷ್ಮಿನಾರಾಯಣ, ೨೦೦೮, ಪೂರ್ವೋಕ್ತ, ಪು. ೧೯೪.

೩೬. EC.Vol.XII , ಶ್ರವಣಗುಡಿ, ಶಾ.ಸಂ. ೯೩, ಪು. ೩೩೯.

೩೭. EC.Vol.XII., ನಿಡುಗಲ್ಲು, ಶಾ.ಸಂ. ೪೩, ಪು. ೩೮೮-೩೮೯.

೩೮. EC.Vol. XII, ನಿಡುಗಲ್ಲು, ಶಾ.ಸಂ. ೫೧, ೫೨, ಪು. ೩೭೩-೩೭೪.

೩೯. EC.Vol.XII, ಬ್ರಹ್ಮಗಿರಿ ಶಾ.ಸಂ. ೨೦, ಪು. ೨೫೦.

೪೦. EC.Vol. XII, ನಿಡುಗಲ್ಲು ಶಾ.ಸಂ. ೫೪, ಪು. ೩೭೬-೩೭೭.

೪೧. ರವೀಶ್ ಜಿ.ಎನ್., ೨೦೧೦, ಪೂರ್ವೋಕ್ತ ಪು. ೭೭-೭೮.

೪೨. ಲಕ್ಷ್ಮಿ ನಾರಾಯಣ, ೨೦೦೮, ಪೂರ್ವೋಕ್ತ, ಪು. ೧೯೪-೧೯೫.

೪೩. Ec.Vol. XII, ಮಿಡಿಗೇಶಿ, ಶಾ.ಸಂ. ೯೯, ಪು. ೩೪೦.

೪೪. ಕೆರೆಹಳ್ಳಿ, ಶಾ.ಸಂ. ೩೫೪, ಪು. ೨೨೭-೨೩೨.

೪೫. ಶ್ರೀನಿವಾಸ್ ಎಂ.ಡಿ., ೨೦೦೯, ಮಿಡಿಗೇಶಿ, ಪು. ೧೮.

೪೬. ಲಕ್ಷ್ಮಿ ನಾರಾಯಣ, ೨೦೦೮, ಪೂರ್ವೋಕ್ತ, ಪು. ೧೯೪-೧೯೫.

೪೭ Ec.Vol XXIV. ಕೈದಾಳ ಶಾ.ಸಂ. ೧೧, ಪು. ೧೧.

೪೮. Ec.Vol. XXIV. ಕೈದಾಳ ಶಾ.ಸಂ. ೧೩, ಪು. ೨೩.

೪೯. Ec.Vol.XXIV. ಕೈದಾಳ ಶಾ.ಸಂ. ೧೪, ಪು. ೨೪.

೫೦. ಅದೇ ಪುಟ.೨೩.

೫೧. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೬, ಇತಿಹಾಸ ದರ್ಶನ ಸಂಪುಟ-೨೧, ಪು. ೨೩೫.

೫೨. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೬, ಇತಿಹಾಸ ದರ್ಶನ ಸಂಪುಟ-೧೯, ಪು. ೪೭-೪೮.

೫೩. ಸೂರ್ಯನಾಥ ಕಾಮತ್, ದೇವರಕೊಂಡಾರೆಡ್ಡಿ, ೧೯೯೩, ಇತಿಹಾಸದರ್ಶನ, ಸಂಪುಟ-೮, ಪು. ೧೪೮.

೫೪. ನಂಜುಂಡಸ್ವಾಮಿ ಬಿ (ಸಂ.)., ೨೦೦೨, ಪೂರ್ವೋಕ್ತ, ಪು. ೩೨೩.

೫೫. ಕವಿತಾಕೃಷ್ಣಾ (ಸಂ.), ೨೦೦೨, ಪೂರ್ವೋಕ್ತ, ಪು. ೧೭೯.

೫೬ ನಂಜುಂಡಸ್ವಾಮಿ ಬಿ (ಸಂ.)., ೨೦೦೨, ಪೂರ್ವೋಕ್ತ, ಪು. ೩೨೩.

೫೭ ಕವಿತಾಕೃಷ್ಣಾ (ಸಂ.), ೨೦೦೨, ಪೂರ್ವೋಕ್ತ, ಪು. ೧೭೯.

೫೮. Ec.Vol XXIV, ದೇವರಾಯನದುರ್ಗ, ಶಾ.ಸಂ. ೪೬, ಪು. ೧೦೭.

೫೯. Ec.Vol.XXIV. ತುಮಕೂರು, ಶಾ.ಸಂ. ೪೧, ಪು. ೮೩-೮೪.

೬೦. Ec.Vol. XXIV., ದೇವರಾಯನದುರ್ಗ, ಶಾ.ಸಂ. ೪೬, ಪು. ೧೦೭-೧೦೮.

೬೧. ಪರಮಶಿವಮೂರ್ತಿ ಡಿ.ವಿ., ೨೦೦೭, ಪ್ರೌಢದೇವರಾಯನ ಶಾಸನಗಳು, ಪು. ೬೮.

೬೨. ಯೋಗೀಶ್ವರಪ್ಪ ಡಿ.ಎನ್., ೨೦೧೨, ಪೂರ್ವೋಕ್ತ, ಪು. ೩೯೪.

೬೩. ನಾಗರಾಜ್‌ರಾವ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ., ೨೦೦೩, ಇತಿಹಾಸದರ್ಶನ ಸಂಪುಟ-೧೮, ಪು. ೧೦೫.

೬೪. ಶ್ರೀನಿವಾಸ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಪು. ೧೨೪, ೧೨೫, ೧೨೮, ೧೨೯.

೬೫. Ec.vol.XII. ಪಾವಗಡ ಶಾ.ಸಂ. ೨, ಪು. ೩೪೫.

೬೬ ಚೆಲುವರಾಜನ್ ಆರ್., ೧೯೮೭, ಪಾವಗಡ ತಾಲ್ಲೂಕು ದರ್ಶನ, ಪು. ೧೭.

೬೭ Ec.vol.XVI. ಪಾವಗಡ ಶಾ.ಸಂ. ೯೭, ಪು. ೫೮.

೬೮. ಚೆಲುವರಾಜನ್ ಆರ್., ೧೯೮೭, ಪೂರ್ವೋಕ್ತ, ಪು. ೨೦–೨೧.

೬೯. ಶ್ರೀನಿವಾಸ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಪು. ೧೮, ೧೯, ೪೪.

೭೦. ವಸು ಎಂ.ವಿ (ಸಂ.)., ೨೦೦೧, ಪೂರ್ವೋಕ್ತ, ಪು. ೨೦೩.

೭೧. ನಾಗರಾಜನ್ ಆರ್., ೧೯೮೫, ಚಿಕ್ಕನಾಯಕನಹಳ್ಳಿ ತಾಲ್ಲೂಕು ದರ್ಶನ, ಪು. ೧೫.

೭೨. www.kamparisy.com/chikkanayakanahalli

೭೩. ಹಂದಿನಕೆರೆ ಶಾ.ಸಂ. ೯೪, ಪು. ೫೦೫.

೭೪. ವಸು ಎಂ.ವಿ (ಸಂ.)., ೨೦೦೧, ಪೂರ್ವೋಕ್ತ, ಪು. ೨೦೩.

೭೫. Ec.vol.XII, ಸಿದ್ಧಾಪುರ, ಶಾ.ಸಂ. ೨೧, ಪು. ೩೧೩.

೭೬ ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪು. ೨೪೭.

೭೭ Ec.vol.XII., ಹಲ್ಲೂರು ಶಾ.ಸಂ. ೧೨೩, ಪು. ೬೩.

೭೮. Ec.vol.XII, ದೊಡ್ಡ ಬಾಣಗೆರೆ, ಶಾ.ಸಂ. ೭, ಪು. ೨೫೫.

೭೯. Ec.vol.XII, ಸಿರಾ ಶಾ.ಸಂ. ೭೩, ಪು. ೨೮೭.

೮೦. ಕವಿತಾ ಕೃಷ್ಣಾ, ೨೦೦೨, ಪೂರ್ವೋಕ್ತ, ಪು. ೪೭.

೮೧. ರಾಮಶೇಷನ್ ನೀ.ಕೃ., ೧೯೮೪, ಮಧುಗಿರಿ, ಪು. ೭–೮.

೮೨. ಶ್ರೀನಿವಾಸ್ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಪು. ೮.

೮೩. ಚೆನ್ನಬಸಪ್ಪ ಎಸ್. ಪಾಟೀಲ., ೧೯೯೯, ಕರ್ನಾಟಕ ಕೋಟೆಗಳು ಸಂಪುಟ–೧, ಪು. ೧೯೭–೧೯೮.

೮೪. ಗೋವಿಂದರಾಜು ಸಿ.ಆರ್., ೨೦೧೨, ಚರಿತ್ರೆ ಅಧ್ಯಯನ ಸಂಪುಟ–೬, ಸಂಚಿಕೆ– ೧,೨, ೨೦೧೦, ೨೦೧೧, ಪು. ೧೫೦.

೮೫. Ec.vol. XII, ಮಧುಗಿರಿ, ಶಾ.ಸಂ. ೧೮, ಪು. ೩೧೨.

೮೬. ಕವಿತಾ ಕೃಷ್ಣಾ, ೨೦೦೨, ಪೂರ್ವೋಕ್ತ, ಪು. ೨೦೪.

೮೭. ಅದೇ, ಪು. ೨೦೪.

೮೮. ರಾಮಶೇಷನ್ ನೀ.ಕೃ., ೧೯೮೪, ಪೂರ್ವೋಕ್ತ , ಪು. ೧೮.

೮೯. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪು. ೨೪೩.

೯೦. ಕವಿತಾ ಕೃಷ್ಣಾ (ಸಂ.), ೨೦೦೨, ಪೂರ್ವೋಕ್ತ, ಪು. ೧೭೮.

೯೧. EC.Vol. XII, ಚನ್ನರಾಯನದುರ್ಗ, ಶಾ.ಸಂ. ೨೩, ಪು. ३೧३.

೯೨. ಶಶಿಕುಮಾರ್ ಎಲ್., ಮಂಗಳಾವರ ३, ಏಪ್ರಿಲ್, ೨೦೧೨, ಕರ್ನಾಟಕ ದರ್ಶನ, ಪ್ರಜಾವಾಣಿ.

೯೩. ಸಿದ್ದಗಿರಿ ನಂಜುಂಡಸ್ವಾಮಿ, ೨೦೧३, ಶ್ರೀಕ್ಷೇತ್ರ ಸಿದ್ಧರಬೆಟ್ಟ, ಪು. ३–೪.

೯೪. ಶಶಿರೇಶಾ ನಾಗೇಂದ್ರ, ಭಾನುವಾರ, ೧೭, ಜುಲೈ, ೨೦೧೧, ಸಾಪ್ತಾಹಿಕ ಲವಲವಿಕೆ, ವಿಜಯಕರ್ನಾಟಕ ಪು. ೬.

೯೫. ದಲಿತರಾಜನ ಕುರಂಕೋಟೆ ೦೭.೨೦.೨೦೧೫, ಕರ್ನಾಟಕ ದರ್ಶನ, ಪ್ರಜಾವಾಣಿ, ಪು.೧.

೯೬. ಮುರಳಿ ಕೃಷ್ಣ ಬೆಳಾಲು, ಆಗಸ್ಟ್–೧೫–೨೦೧३, ಏಳುಸುತ್ತಿನ ಕೋಟೆ ಹುಲಿಯೂರುದುರ್ಗ, ಪ್ರವಾಸ, ವಿಜಯ ಕರ್ನಾಟಕ, ಪು. ೨.

೯೭. ಗೋಪಾಲ್ ಆರ್., ೨೦೦೯, ಪೂರ್ವೋಕ್ತ, ಪು. ೨೪೫, ೨೪೬.

೯೮. ಅದೇ, ಪು. ೨೪೪.

೯೯. ಪುಟ್ಟಸ್ವಾಮಿ ಬಿ.ಎಸ್., ೨೦೧೧, ಯಲಹಂಕನಾಡ ಪ್ರಭು ಕೆಂಪೇಗೌಡ ಮತ್ತು ಅವನವಂಶಸ್ಥರು. ಪು. ೧೪೫.

೧೦೦. ಕವಿತಾಕೃಷ್ಣಾ, ೨೦೦೨, ಪೂರ್ವೋಕ್ತ, ಪು. ೪೬.

೧೦೧. ಮಂಜುಳ ಎಸ್.ಎ., ಲಕ್ಷ್ಮಣ್ ಬಿ.ವಿ, ೧೯೯೯, ಉತ್ತರಿದುರ್ಗ, ಪು. ३೬–३೭.

೧೦೨. ಶ್ರೀನಿವಾಸ ಎಂ.ಡಿ., ೨೦೧೦, ಭಸ್ಮಾಂಗಿ, ಪು. ೨३.

೧೦३. ರಾಮಶೇಷನ್ ನೀ.ಕೃ., ೧೯೮೪, ಪೂರ್ವೋಕ್ತ, ಪು. ३३.

೧೦೪. ಸಣ್ಣನಾಗಪ್ಪ, ೨೦೦೬, ಇತಿಹಾಸ ಪ್ರಸಿದ್ಧ ಕಾಕಾದ್ರಿ ಪರ್ವತ ಶ್ರೀವರದಾಂಜನೇಯ, ಪು. ೬, ३೧, ३೮, ३೯, ೪೦.

೧೦೫. ರವೀಶ್ ಜಿ.ಎನ್., ೨೦೧೦, ಪೂರ್ವೋಕ್ತ, ಪು. ೭೮, ೭೬.

೧೦೬. ಮುದ್ದೇವು ಮಾಧವರೆಡ್ಡಿ, ೨೦೦೨, ಬಂಗಾರ ನಾಯಕನದುರ್ಗ, ಪು. ೧–೧३.

೧೦೭. EC.Vol. X11, ಕನ್ನಮೇಡಿ, ಶಾ.ಸಂ. ೨೧. ಪು. ೨೫೭.

೧೦೮. ಮುದ್ದಾಚಾರಿ ಬಿ., ಮರಾಠರ ಅತಿಕ್ರಮಣ ಮೈಸೂರಿನ ಪ್ರತಿಭಟನೆ, ಪು. ೪೬–೪೮.

೧೦೯. ಶ್ರೀನಿವಾಸ್ ಎಂ.ಡಿ., ೧೯೮೭, ಪೂರ್ವೋಕ್ತ, ಪು. ೧೦೫.

ಅಧ್ಯಾಯ ೫

ರಕ್ಷಣಾ ಸಂಬಂಧಿ ಸ್ಮಾರಕಗಳು

ನಗರ ರಾಜ್ಯಗಳು ಮದ್ದು, ಗುಂಡು ಆವಿಷ್ಕಾರ ಹೊಂದುವವರೆಗೂ ಕೋಟೆ–ಕೊತ್ತಲಗಳಿಂದಲೆ ರಕ್ಷಣೆ ಪಡೆಯುತ್ತಿದ್ದವು.[೧] ಹೀಗೆ ರಕ್ಷಣೆ ಪಡೆಯಲು ಕೇವಲ ಕಾಮು–ಗೋಡೆಗಳಿಂದ ಮಾತ್ರ ಸಾಧ್ಯವಿಲ್ಲ. ಅದಕ್ಕೆ ಪೂರಕವಾದ ರಕ್ಷಣಾ ತಂತ್ರಗಳು ಇದ್ದಾಗ ಮಾತ್ರ ದುರ್ಭೇದ್ಯವಾಗಿ ಮಾರ್ಪಾಟುಗೊಂಡು ಶತ್ರುಗಳಿಂದ ರಾಜ್ಯವನ್ನು ರಕ್ಷಿಸಲು ಸಾಧ್ಯವಾಗುತ್ತಿತ್ತು. ಅಂದರೆ ರಾಜನಿಗೆ ತನ್ನ ಮತ್ತು ತನ್ನವರ ರಕ್ಷಣೆಗೆ ಕೋಟೆ–ಕೊತ್ತಲಗಳು ಎಷ್ಟು ಮುಖ್ಯವೋ, ಕೋಟೆಗೆ ದ್ವಾರ, ಕಾವಲು ಗೋಪುರ, ಕೋಟೆ ತೆನೆ, ಅಂಬುಕಿಂಡಿ, ಫಿರಂಗಿ, ತುಪ್ಪದ ಕಣಜ, ಧಾನ್ಯದ ಕಣಜ, ಮದ್ದಿನ ಮನೆ, ನೀರಿನ ಸಂಗ್ರಹಣೆ, ಅರಮನೆ, ಗರಡಿಮನೆ, ದೇವಾಲಯ, ವಸತಿ ನಿವೇಶನ ಮೊದಲಾದ ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಅಷ್ಟೇ ಮುಖ್ಯವಾಗಿರುತ್ತವೆ. ಆದುದರಿಂದಲೇ ಇವುಗಳ ಮಹತ್ವವನ್ನು ಅರಿತು ಕೌಟಿಲ್ಯ, ಮನು, ಶುಕ್ರ, ಕಾಮಂದಕ, ತಿರುವಳ್ಳವರ್ ಮೊದಲಾದ ರಾಜನಿಜ್ಞರು ಹಾಗೂ ಮೂರನೆಯ ಸೋಮೇಶ್ವರ, ಕೆಳದಿ ಬಸವರಾಜು, ಜನ್ನ, ಅಗ್ಗಳ, ಕನಕದಾಸ, ಹರಿಹರ, ಸೋಮದೇವ ಮೊದಲಾದ ಕವಿವರ್ಯರು ರಕ್ಷಣಾ ಸಂಬಂಧಿ ಸ್ಮಾರಕಗಳನ್ನು ಹಲವು ವಿಧದಲ್ಲಿ ವರ್ಣಿಸಿದ್ದಾರೆ.

೫.೧ ಬಾಗಿಲು(ದ್ವಾರ)

ಆರಂಭದಲ್ಲಿ ಕೋಟೆ–ಕೊತ್ತಲಗಳಿಗೆ ಕೇವಲ ಒಂದೇ ದ್ವಾರ ಬಾಗಿಲಿರುತ್ತಿತ್ತು. ಆದರೆ ಬದಲಾದ ಯುದ್ಧ ನೀತಿಗೆ ಅನುಗುಣವಾಗಿ ಅವಶ್ಯವಿರುವಲ್ಲಿ ಕೋಟೆಯಾದ್ಯಂತ ನಿರ್ಮಾಣಗೊಂಡಿವೆ. ಸಾಮಾನ್ಯವಾಗಿ ಯಾವುದೇ ಕೋಟೆಯ ಭವಿಷ್ಯ ಅದು ಹೊಂದಿರುವ ದ್ವಾರ ಬಾಗಿಲಿನ ದುರ್ಭೇದ್ಯತೆಯ ಮೇಲೆ ನಿಂತಿರುತ್ತದೆ. ಆದುದರಿಂದ ದ್ವಾರದ ರಕ್ಷಣೆಗಾಗಿ ಜಿಲ್ಲೆಯ ಬಹುತೇಕ ರಾಜಧಾನಿ ಕೇಂದ್ರಿತ ಕೋಟೆಗಳಲ್ಲಿ ದ್ವಾರ ಬಾಗಿಲಿನ ಹೊರ ಬದಿಯಲ್ಲಿ ಎತ್ತರವಾದ ಕೊತ್ತಲ, ಒಳ ಬದಿಯಲ್ಲಿ ಕಾವಲು ಮಂಟಪ ಹಾಗೂ ಮುಖ್ಯ ದ್ವಾರದಲ್ಲಿಯೇ ದಿಡ್ಡಿ ಬಾಗಿಲನ್ನು ನಿರ್ಮಿಸಿರುವುದು ಕಂಡುಬರುತ್ತದೆ. ಬಹುಶಃ ದ್ವಾರ ಬಾಗಿಲಿನ ರಕ್ಷಣೆಗಾಗಿ ಕಾಲ ಕಾಲಕ್ಕೆ ಅವುಗಳ ನಿರ್ಮಾಣ ಶೈಲಿಯಲ್ಲಿ ಬದಲಾವಣೆಯನ್ನು ಕಂಡುಕೊಳ್ಳುತ್ತಿದ್ದರು ಎಂಬುದು ಜಿಲ್ಲೆಯಲ್ಲಿ

ಇರುವಂತಹ ಕೋಟೆ–ಕೊತ್ತಲಗಳಿಂದ ಗೋಚರವಾಗುತ್ತದೆ. ದ್ವಾರ ಬಾಗಿಲಿನ ಮಹತ್ವವನ್ನು ಅರಿತ ಕೌಟಿಲ್ಯನು ಕೋಟೆಯ ಪ್ರತಿ ದಿಕ್ಕಿಗೂ ಮೂರು ಬಾಗಿಲುಗಳಂತೆ ಒಟ್ಟು ಹನ್ನೆರಡು ಬಾಗಿಲುಗಳನ್ನು[೭] ನಿರ್ಮಿಸಬೇಕೆಂದು ಸೂಚಿಸಿದ್ದಾನೆ. ಮುಖ್ಯ ಬಾಗಿಲುಗಳನ್ನು ಅನಿವಾರ್ಯ ಸಂದರ್ಭ ಹೊರತುಪಡಿಸಿ ಉಳಿದಂತೆ ಸದಾಕಾಲವೂ ಮುಚ್ಚಲ್ಪಡುತ್ತಿದ್ದವೆಂದು ಅಲ್ಲಿಯೇ ಇರುವ ದಿಡ್ಡಿ ಬಾಗಿಲಿನಿಂದ ತಿಳಿಯುತ್ತದೆ. ಕೋಟೆಯ ಒಳಗಿನವರಿಗೆ ದಿನನಿತ್ಯದ ಕಾರ್ಯ ಮಾಡಲು ತಪಾಸಣೆ ಮಾಡುವ ಕೇಂದ್ರಗಳಾಗಿಯೂ ನಂತರ ಬಿಡುವ ಕಾರ್ಯ ನಿರ್ವಹಿಸುತ್ತಿದ್ದವು. ಈ ಉದ್ದೇಶದಿಂದಲೇ ಪ್ರತಿ ಮುಖ್ಯ ದ್ವಾರದ ಬಳಿಯು ದಿಡ್ಡಿ ಬಾಗಿಲು ಕಂಡುಬರುತ್ತದೆ.[೮]

ಜಿಲ್ಲೆಯ ಬಹುತೇಕ ಕೋಟೆ–ಕೋತ್ತಲಗಳ ಮುಖ್ಯ ದ್ವಾರಗಳು ೧೫ರಿಂದ ೨೦ ಮೀ. ಎತ್ತರ, ೧೦ ಮೀ. ಅಗಲವಾಗಿವೆ. ಇಷ್ಟು ಎತ್ತರದ ದ್ವಾರ ಬಾಗಿಲುಗಳನ್ನು ರಾಜ, ಪಾಳೆಯಗಾರ, ಅಧಿಕಾರಿ ವರ್ಗ ಆನೆಯ ಮೇಲೆ ಕರೆದುಕೊಂಡು ಹೋಗಲು ಇಲ್ಲವೆ ಉತ್ಸವ ಮೂರ್ತಿಗಳನ್ನು ಆನೆಯ ಮೇಲೆ ಮೆರವಣಿಗೆ ಮೂಲಕ ಕೊಂಡೊಯ್ಯಲು ಬಳಸಿಕೊಳ್ಳುತ್ತಿದ್ದರು. ಈ ದ್ವಾರಗಳ ಬಾಗಿಲನ್ನು ಆನೆ ಇಲ್ಲವೇ ಕೋಣಗಳ ಮೂಲಕ ತೆರೆದು ಹಾಕುವ ಕಾರ್ಯವನ್ನು ಮಾಡುತ್ತಿದ್ದರು. ಜಿಲ್ಲೆಯ ಕೋಟೆಗಳ ಹಲವು ದ್ವಾರಗಳು ಬದಲಾದ ಯುದ್ಧ ನೀತಿಗೆ ಅನುಗುಣವಾಗಿ ಕಿರಿದಾಗುತ್ತಾ ಹೋಗಿರುವುದು ಕಂಡುಬಂದಿದೆ. ಭಸ್ಮಾಂಗಿ, ನಿಡುಗಲ್ಲು, ಮಧುಗಿರಿ, ಹುತ್ರೀದುರ್ಗ, ದೇವರಾಯನದುರ್ಗ, ಸಿರಾ ಮೊದಲಾದ ಕೋಟೆಗಳಲ್ಲಿ ಗುಪ್ತ ದ್ವಾರ ಬಾಗಿಲಿರುವುದನ್ನು ಗಮನಿಸಿದರೆ ಕೋಟೆಯಲ್ಲಿನ ಅಧಿಕಾರಿ ವರ್ಗ ನಿರಂತರ ದಾಳಿಗಳಿಂದ ತಮ್ಮನ್ನು ತಾವು ರಕ್ಷಿಸಿಕೊಳ್ಳುವುದಕ್ಕಾಗಿ ಇಂತಹ ಗುಪ್ತ ದ್ವಾರಗಳ ಮೊರೆಹೋಗುತ್ತಿದ್ದರೆಂಬುದು ಸ್ಪಷ್ಟವಾಗುತ್ತದೆ. ಈ ಮಾದರಿಯ ದ್ವಾರಗಳನ್ನು ರಾಜಧಾನಿ ಕೇಂದ್ರಿತ ಕೋಟೆಗಳಲ್ಲಿ ಮಾತ್ರ ಕಂಡುಬರುತ್ತವೆ. ಉಳಿದಂತೆ ರಕ್ಷಣಾ ಕೇಂದ್ರಿತ ಮತ್ತು ಗ್ರಾಮ ರಕ್ಷಣಾ ವಾಸ್ತುವಿನಲ್ಲಿ ಕಂಡುಬರುವುದಿಲ್ಲ. ಏಕೆಂದರೆ ಅವು ಕೇವಲ ಮುಖ್ಯ ದ್ವಾರಗಳನ್ನು ಮಾತ್ರ ಹೊಂದಿರುತ್ತಿದ್ದವು.

೫.೨. ಕಾವಲು ಗೋಪುರ

ಕೋಟೆಯಲ್ಲಿ ಕಂಡುಬರುವ ಯಾವುದೇ ಕಟ್ಟಡ ಶತ್ರುಗಳ ಚಲನವಲನ ಗಮನಿಸಲು ಬಳಕೆಯಾದರೆ ಕಾವಲು ಗೋಪುರದ ಪರಿಧಿಯಲ್ಲಿ ಅಂದರೆ ಕೋಟೆ ಗೋಡೆಗಿಂತಲೂ ಎತ್ತರವಾಗಿ ಅವು ನಿರ್ಮಿಸಲ್ಪಟ್ಟಿರಬೇಕು. ಆದರೆ ಜಿಲ್ಲೆಯ ನೈಸರ್ಗಿಕ ರಚನೆಯನ್ನು ಗಮನಿಸಿದಾಗ ಬಹುಭಾಗ ಬೆಟ್ಟ–ಗುಡ್ಡಗಳಿಂದ ಸುತ್ತುವರೆದಿದೆ. ಆದುದರಿಂದ ಅವುಗಳನ್ನೇ ರಕ್ಷಣಾ ಗೋಪುರಗಳಂತೆ ಬಳಸಿಕೊಳ್ಳಬಹುದಾಗಿದೆ. ಹಾಗಾಗಿ ಅವಶ್ಯವಿರುವಲ್ಲಿ ಮಾತ್ರ ಕಾವಲು ಗೋಪುರಗಳು ನಿರ್ಮಾಣಗೊಂಡಿವೆ. ಯಾವುದೇ ಬೆಟ್ಟದ ಮೇಲಿಂದ ಸುತ್ತಲಿನ ಪರಿಸರ ವೀಕ್ಷಿಸಿದರೆ ಸುಮಾರು ೫ರಿಂದ ೧೫ ಕಿ.ಮೀ. ವ್ಯಾಪ್ತಿಯ ಚಲನವಲನವನ್ನು ಅಲ್ಲಿಂದಲೇ ಗಮನಿಸಬಹುದು. ಈ ಉದ್ದೇಶದಿಂದಲೇ ಪ್ರತಿ ಪಾಳೆಪಟ್ಟು ತನ್ನ ಗಡಿ ಸುತ್ತಲೂ ಇರುವ ಬೆಟ್ಟ ಗುಡ್ಡಗಳನ್ನು ಕಾವಲು ಗೋಪುರಗಳನ್ನಾಗಿ ಬಳಸಿಕೊಂಡಿವೆ. ಹಾಗಾಗಿ ಸರಪಳಿ(ಚೈನ್‌ಲಿಂಕ್)ಯಂತೆ ರಾಜಧಾನಿಯ

ಸುತ್ತಲೂ ಇರುವಂತಹ ಕೋಟೆ–ಕೊತ್ತಲಗಳ ಅವಶೇಷಗಳಿರುವುದು ಕಂಡುಬಂದಿದೆ. ಕನ್ನಮೇಡಿ, ದೇವರಾಯನದುರ್ಗ, ನಿಡುಗಲ್ಲು, ಕಾಮನದುರ್ಗ, ಮಧುಗಿರಿ, ವೈ.ಎನ್. ಹೊಸಕೋಟೆ, ಪಾವಗಡ, ಹುತ್ರೀದುರ್ಗ, ಬಂಗಾರನಾಯಕನದುರ್ಗ, ಓಬೆನಹಳ್ಳಿ ಮೊದಲಾದ ಕೋಟೆಗಳಲ್ಲಿ ಎತ್ತರದ ಪ್ರದೇಶದಲ್ಲಿ ನಿಲುವುಗಲ್ಲು, ಬೃಹತ್ತಾದ ಕಾಡುಗಲ್ಲು, ಹೆಬ್ಬಂಡೆಗಳ ಮೇಲೆ ವೃತ್ತ, ಆಯತ, ಚೌಕ ಮಾದರಿಯ ಕಾವಲು ಗೋಪುರಗಳಿವೆ. ಇವುಗಳ ನಿರ್ಮಾಣಕ್ಕಾಗಿ ಕಾಡುಗಲ್ಲು, ಸೈಜುಗಲ್ಲು, ಗ್ರಾನೈಟ್ ಕಲ್ಲುಗಳನ್ನು ಆಯತ, ಚೌಕ ರೀತಿಯಲ್ಲಿ ಕತ್ತರಿಸಿ ಬಳಸಲಾಗಿದೆ. ಕಾವಲು ಗೋಪುರಗಳನ್ನು ಏರಲು ಏಣಿಗಳನ್ನು ಬಳಸಬೇಕಾಗಿತ್ತು. ಏಕೆಂದರೆ ಕಾವಲು ಗೋಪುರಕ್ಕೆ ಏರಲು ಎಲ್ಲಿಯೂ ಮೆಟ್ಟಿಲುಗಳನ್ನು ನಿರ್ಮಿಸಿರುವುದು ಕಂಡುಬರುವುದಿಲ್ಲ. ಪಾವಗಡ, ಬಂಗಾರನಾಯಕನದುರ್ಗ, ಮಧುಗಿರಿಗಳಲ್ಲಿ ಮಾತ್ರ ೧೦೦ರಿಂದ ೧೫೦ ಮೀಟರ್‌ಗೂ ಎತ್ತರವಾದ ಏಕಶಿಲಾ ಗುಂಡುಗಳ ಮೇಲೆ ಇವುಗಳನ್ನು ನಿರ್ಮಿಸಿದ್ದಾರೆ. ಅದರ ಮೇಲಿಂದ ಇಡಿ ಕೋಟೆಯ ಅವರಣವೆಲ್ಲ ಕಾಣುತ್ತದೆ. ಇವುಗಳ ಮೇಲೆ ಸ್ಥಳೀಯ ಅಧಿಕಾರಿವರ್ಗ ಪಹರೆ ಕಾಯುತ್ತಿದ್ದರು ಎಂಬುದಕ್ಕೆ ಇಂದಿಗೂ ಅವು ಸುಬ್ಬರಾಯಪ್ಪ ಬತೇರಿ, ಟಿಪ್ಪು ಬತೇರಿ, ಕುಪ್ಪುಗುಂಡು, ನವೀಲುಗುಂಡು, ಭೀಮನಗುಂಡು, ರಂಗಪ್ಪನ ಗುಂಡು ಎಂಬಂತಹ ಹಲವು ಹೆಸರುಗಳಿಂದಲೇ ಕರೆಯಲ್ಪಡುತ್ತಿವೆ. ಆದರೆ ಇದಕ್ಕೆ ವ್ಯತಿರಿಕ್ತವಾಗಿ ಕೌಟಿಲ್ಯ ಕಾವಲು ಗೋಪುರವನ್ನು ಮೋಟು ಗೋಡೆಯ ಮೇಲೆ ಪ್ರಾಕಾರ ಭಾಗಕ್ಕೆ ಸಮನಾಗಿರುವಂತೆ ನಿರ್ಮಿಸಬೇಕೆಂದೂ, ಅದರ ವಿಸ್ತಾರದ ೧/೩ ಭಾಗದಷ್ಟು ಪ್ರಮಾಣವಿರುವಂತೆ ಮೊಸಳೆಯ ಆಕೃತಿಯಲ್ಲಿ ಇರಬೇಕೆಂದು[೪] ಉಲ್ಲೇಖಿಸಿದ್ದಾನೆ. ಆದರೂ ಜಿಲ್ಲೆಯಲ್ಲಿ ಆಯಾಯ ಪ್ರದೇಶದ ಪ್ರಾಕೃತಿಕ ಸಂರಚನೆಗೆ ಅನುಗುಣವಾಗಿ ಸ್ಥಳೀಯ ವಾಸ್ತು ವಿನ್ಯಾಸದಿಂದ ನಿರ್ಮಾಣಗೊಂಡು ಬೃಹತ್ ಸಾಮ್ರಾಜ್ಯಗಳಿಗೆ ಪ್ರತಿರೋಧ ವ್ಯಕ್ತಪಡಿಸಿರುವುದು ಕೋಟೆ–ಕೊತ್ತಲಗಳ ಅಭೇದ್ಯತೆ ಸ್ಪಷ್ಟಪಡಿಸುತ್ತದೆ. ಸ್ಥಳೀಯವಾಗಿ ಸಿಗುವಂತಹ ಶಿಲಾ ಮಾಧ್ಯಮದಿಂದಲೇ ನಿರ್ಮಾಣಗೊಂಡಿರುವುದು ಕಂಡುಬರುತ್ತದೆ.

೫.೩. ಅರಮನೆ

ಯಾವುದೇ ಒಂದು ಕೋಟೆ ಕಾಲಕಾಲಕ್ಕೆ ಬದಲಾದ ಯುದ್ಧ ನೀತಿಗೆ ಅನುಗುಣವಾಗಿ ಜೀರ್ಣೋದ್ಧಾರ ಹೊಂದಬೇಕೆಂದರೆ ಅದನ್ನು ನೋಡಿಕೊಳ್ಳಲು ಒಬ್ಬ ಅಧಿಕಾರಿ, ಪಾಳೆಯಗಾರ, ಅರಸನ ಕಾರ್ಯ ಮುಖ್ಯವೆನಿಸಿಕೊಳ್ಳುತ್ತದೆ. ಏಕೆಂದರೆ ಯಾವುದೇ ಕೋಟೆಯಲ್ಲಿ ಅರಸ ಶರಣಾಗತಿ ಹೊಂದಿದ್ದರೆ ಆ ಕೋಟೆ ಸಹಜವಾಗಿ ಶತ್ರುಗಳ ವಶವಾದಂತೆಯೆ. ಹಾಗಾಗಿ ರಾಜನ ಸುರಕ್ಷತೆ ಅತಿ ಮುಖ್ಯವಾಗಿದ್ದು; ಆತನಿಗಾಗಿ ಅರಮನೆಯನ್ನು ನಾಲ್ಕು ವರ್ಣದ ಜನರು ವಾಸಿಸಲು ಯೋಗ್ಯವೂ, ಗುಣಸಂಪನ್ನವೂ, ಅಭೇದ್ಯವೂ ಆದಂತಹ ಕೋಟೆಯ ಮಧ್ಯ ಭಾಗದಲ್ಲಿ ನಿರ್ಮಿಸಬೇಕಾಗುತ್ತದೆ. ಜಿಲ್ಲೆಯಲ್ಲಿ ಸ್ಥಳದುರ್ಗ ಇರುವಲ್ಲಿ ಮಾತ್ರ ಕೋಟೆಯ ಸ್ಥಾನದಲ್ಲಿ ಅರಮನೆಯಿದ್ದು, ಅದಕ್ಕೆ ಸಮೀಪವೇ ಗುಪ್ತ ಮಾರ್ಗಗಳನ್ನು ನಿರ್ಮಿಸಲಾಗಿದೆ. ಏಕೆಂದರೆ ಆಪತ್ಕಾಲದಲ್ಲಿ ರಾಜ ಮತ್ತು ಆತನ ಆಪ್ತಶಾಖೆ ಕೋಟೆಯಿಂದ ಹೊರ ಹೋಗಲು ಈ ಗುಪ್ತಮಾರ್ಗಗಳಿಂದ ಮಾತ್ರ ಸಾಧ್ಯವಾಗುತ್ತಿತ್ತು. ಆದರೆ ಗಿರಿದುರ್ಗಗಳಲ್ಲಿ ಎರಡು ಮೂರು

ಹಂತಗಳಲ್ಲಿ ಬೆಟ್ಟ ಇರುವುದರಿಂದ ಪ್ರತಿ ಹಂತದಲ್ಲೂ ಅರಮನೆ ನಿರ್ಮಿಸಿ ಶತ್ರುಗಳು ಮೋಸ ಹೋಗುವಂತಹ ತಂತ್ರ ರೂಪಿಸಿದ್ದಾರೆ. ಆಡಳಿತದ ಅನುಕೂಲಕ್ಕಾಗಿ ಕಡಿದಾದ ಬೆಟ್ಟಗಳನ್ನು ಪ್ರತಿನಿತ್ಯವೂ ಏರುವ, ಇಳಿಯುವಂತಹ ಕಾರ್ಯ ಕಷ್ಟದಾಯಕವೆಂದು ನೆಲಗೋಟೆಯ ಅರಮನೆಯಲ್ಲಿ ಹೆಚ್ಚಾಗಿ ತಂಗಿರುತ್ತಿದ್ದರು. ಆಪತ್ಕಾಲ ಮಾತ್ರ ಬೆಟ್ಟದ ತುದಿ ಭಾಗದ ಅರಮನೆಗೆ ಹೋಗಿ ರಕ್ಷಣೆ ಪಡೆಯುತ್ತಿದ್ದರು. ಏಕೆಂದರೆ ಮಧುಗಿರಿ, ಮಿಡಿಗೇಶಿ, ನಿಡುಗಲ್ಲು, ಹುತ್ರೀದುರ್ಗ, ಹುಲಿಯೂರುದುರ್ಗ, ಚೆನ್ನರಾಯನದುರ್ಗ, ಕನ್ನಮೇಡಿ, ಭಸ್ಮಾಂಗಿ, ವೈ.ಎನ್.ಹೊಸಕೋಟೆ ಮೊದಲಾದ ಬೆಟ್ಟಗಳಲ್ಲಿ ಕಡಿದಾದ ಹೆಬ್ಬಂಡೆಯ ತುದಿಯಲ್ಲಿ ಅರಮನೆ ಇರುವುದರಿಂದ ಶತ್ರುಗಳಿಗೆ ಈ ಹಂತವನ್ನು ಪ್ರವೇಶಿಸುವುದೇ ಕಷ್ಟದ ಕೆಲಸವಾಗಿತ್ತು. ತುದಿ ಮೇಲಿಂದ ಕಾದಎಣ್ಣೆ, ಅಂಬಲಿಯನ್ನು ಸುರಿದರೆ ಇಡಿ ಹೆಬ್ಬಂಡೆಯೆಲ್ಲಾ ವಿಸ್ತರಿಸಿಕೊಳ್ಳುತ್ತಿತ್ತು. ಹಾಗಾಗಿ ಶತ್ರುಗಳು ಯಾವ ತಂತ್ರ ಹೂಡಿದರೂ ಬೆಟ್ಟದ ತುದಿ ಭಾಗವನ್ನು ತಲುಪುವುದು ಸಾಧ್ಯವಾಗುತ್ತಿರಲಿಲ್ಲ.

೫.೪. ದೇವಾಲಯ

ಸಾಮಾನ್ಯವಾಗಿ ದೇವಾಲಯದ ವಾಸ್ತುವಿಗೂ ಮತ್ತು ರಕ್ಷಣಾ ವಾಸ್ತುವಿನ ನಡುವೆ ಇರುವ ಸಂಬಂಧವನ್ನು ಅರ್ಥೈಸಿಕೊಂಡಾಗ ಮಾತ್ರ ಯಾವ ಕಾರಣಕ್ಕಾಗಿ ಮತ್ತು ಯಾವ ವರ್ಗವನ್ನು ಓಲೈಸಿಕೊಳ್ಳುವ ಉದ್ದೇಶದಿಂದ ಕೋಟೆಗಳಲ್ಲಿ ದೇವಾಲಯ ನಿರ್ಮಿಸಲ್ಪಡುತ್ತಿದ್ದವು ಎಂಬುದು ಸ್ಪಷ್ಟವಾಗುತ್ತದೆ. ಏಕೆಂದರೆ ಭಾರತದಂಥ ವೈದಿಕ ರಾಷ್ಟ್ರದಲ್ಲಿ ದೇವಾನು ದೇವತೆಗಳ ಮೇಲಿನ ಭಕ್ತಿ ಭಾವ ಅನಾದಿ ಕಾಲದಿಂದಲೂ ರೂಢಿಗತವಾಗಿ ಬಂದಿದೆ. ಇಂತಹ ಭಕ್ತಿ ಭಾವವನ್ನು ಪ್ರಭುತ್ವಶಾಹಿ ವರ್ಗವು ಸಮುದಾಯ ಮತ್ತು ಸೈನಿಕವರ್ಗದಲ್ಲಿ ಆತ್ಮಸ್ಥೈರ್ಯವನ್ನು ಮೂಡಿಸಲು ಅಸ್ತ್ರವನ್ನಾಗಿ ಬಳಸಿಕೊಂಡಿದೆ. ಪ್ರಭುತ್ವಶಾಹಿವರ್ಗ ಯಾವುದೋ ಸ್ಥಳದಲ್ಲಿ ದೇವಾಲಯವೊಂದನ್ನು ನಾಶಪಡಿಸಿದರೆ ಮತ್ತೊಂದೆಡೆ ಅದೇ ದೇವಾಲಯವನ್ನು ಜೀರ್ಣೋದ್ಧಾರಗೊಳಿಸುವ ಇಲ್ಲವೆ ನಿರ್ಮಿಸುವ ಕಾರ್ಯ ಮಾಡುತ್ತದೆ. ಅಲ್ಲದೇ ತಳಸಮುದಾಯದವರಿಗೆ ದೇವಾಲಯ ಪ್ರವೇಶ ನಿಷಿದ್ಧವಿರುವ ವೈದಿಕ ಪರಂಪರೆಯಲ್ಲಿ ಕೋಟೆಯ ಪ್ರವೇಶದ ಬಳಿ ದೇವಾಲಯದ ಮುಂದೆಯೇ ಹೋಗಬೇಕಾಗುತ್ತಿತ್ತು. ಹಾಗಾಗಿ ಕೋಟೆಯ ಒಳ ಬದಿ ಎಲ್ಲ ಸಮುದಾಯಗಳಿಗೂ ವಾಸಿಸಲು ಅವಕಾಶ ಕಲ್ಪಿಸಿದ್ದಾರೆ ಸಂದೇಹ ಉಂಟಾಗುತ್ತದೆ. ಒಂದುವೇಳೆ ಕೋಟೆಯ ಒಳಗೆ ಪ್ರವೇಶಿಸಲು ಅವಕಾಶ ಕಲ್ಪಿಸಿದ್ದಾದರೆ ಕೆಲವೇ ದೇವಾಲಯಗಳ ಬಳಿ ಮಾತ್ರ ಅವರು ಹೋಗಬೇಕಾಗಿರುತ್ತದೆಂದು ಪ್ರಭುತ್ವ ಕೇಂದ್ರಿತ ದೇವಾಲಯಗಳ ಸುತ್ತಲೂ ಇರುವ ಪ್ರಾಕಾರ ಗೋಡೆಯಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಪ್ರಾಕಾರ ಗೋಡೆಯಿಂದ ಸುತ್ತುವರಿಯಲ್ಪಟ್ಟ ದೇವಾಲಯಗಳಿಗೆ ಅರಸ ಮತ್ತು ಆತನ ಆಪ್ತವರ್ಗದವರಿಗೆ ಮಾತ್ರ ಪ್ರವೇಶಿಸಲು ಅವಕಾಶವಿರುತ್ತಿತ್ತು. ಗೋಡೆ ಇಲ್ಲದ ದೇವಾಲಯಗಳಿಗೆ ಮಾತ್ರ ಎಲ್ಲಾ ವರ್ಗದವರು ಮುಕ್ತವಾಗಿ ಪ್ರವೇಶಿಸಬಹುದಿತ್ತು ಎಂಬುದು ಎರಡೂ ಮಾದರಿಯ ದೇವಾಲಯಗಳ ನಿರ್ಮಾಣ ಶೈಲಿಯಿಂದ ತಿಳಿಯುತ್ತದೆ. ಸಾಮಾನ್ಯವಾಗಿ ಬುಡಕಟ್ಟು ಸಮುದಾಯಗಳಿಗೆ ಧರ್ಮ ಎಂಬುದೇ ಇರುವುದಿಲ್ಲ ಅವರ ಆರಾಧನೆಯೆಲ್ಲ ಅಮೂರ್ತ ರೂಪದಲ್ಲಿಯೇ ಇರುತ್ತದೆ. ಹಾಗಾದರೆ ಪ್ರಭುತ್ವಶಾಹಿ ಅಧಿಪತ್ಯದಲ್ಲಿರುವ ಸೈನಿಕರೆಲ್ಲ ಬುಡಕಟ್ಟು

ಸಮುದಾಯಗಳಿಗೆ ಸೇರಿದವರಾಗಿರುವುದರಿಂದ ಕೋಟೆಯ ದ್ವಾರಗಳಲ್ಲಿ ಯಾವ ಕಾರಣಕ್ಕಾಗಿ ದೇವಾಲಯ ಇಲ್ಲವೆ ದೇವತಾಮೂರ್ತಿಯನ್ನು ಪ್ರತಿಷ್ಠಾಪಿಸುತ್ತಿದ್ದರು ಎಂಬುದರ ಹಿಂದೆ ಪ್ರಭುತ್ವಶಾಹಿಗಳ ರಾಜಕಾರಣವೂ ಇದ್ದಿರಬಹುದು. ವಿಜಯನಗರ ಕಾಲಕ್ಕಾಗಲೇ ದೇವಾಲಯ ವಾಸ್ತುವು ತಮ್ಮ ಪ್ರಭುತ್ವದ ಪ್ರತಿಷ್ಠೆಯ ಸಂಕೇತವಾಗಿ ಪರಿಗಣಿಸಲ್ಪಟ್ಟಿತ್ತು. ಏಕೆಂದರೆ ವಿಜಯನಗರಕ್ಕೂ ಪೂರ್ವದಲ್ಲಿ ಆಂಜನೇಯ ದೇವಾಲಯಗಳಿದ್ದವೆಂಬುದಕ್ಕೆ ಕೋಟೆಯ ಬಳಿಯು ಎಂಬುದಕ್ಕೆ ಇಲ್ಲಿಯವರೆಗೂ ಯಾವ ದೇವಾಲಯ ದೊರೆತಿಲ್ಲ. ಆದುದರಿಂದ ಜಿಲ್ಲೆಯಲ್ಲಿ ದ್ವಾರಗಳ ಬಳಿ ಕಂಡುಬರುವ ಕೋಟೆಯ ಆಂಜನೇಯ ದೇವಾಲಯಗಳು ವಿಜಯನಗರ ಕಾಲದಲ್ಲಿ ನಿರ್ಮಿಸಲ್ಪಟ್ಟವೆಂದು ಬಹುಶಃ ಸ್ಪಷ್ಟವಾಗುವುದರಿಂದ ಕೋಟೆಯ ಕಾಲಮಾನವನ್ನು ಗುರುತಿಸಲು ಸಾಧ್ಯವಾಗುತ್ತದೆ. ಸೈನಿಕರಿಗೆ ಮತ್ತು ಸಾಮಾನ್ಯ ಜನರಲ್ಲಿ ಕೋಟೆ ಕಾಳಗ, ಪ್ರಕೃತಿ ವಿಕೋಪ ಮೊದಲಾದ ಸಂದರ್ಭಗಳಲ್ಲಿ ಆಪತ್ಕಾಲಗಳಲ್ಲಿ ಆತ್ಮ ಸ್ಥೈರ್ಯವನ್ನು ಮೂಡಿಸಲು ದೇವಾಲಯ ಇಲ್ಲವೆ ದೇವತಾ ಮೂರ್ತಿಗಳನ್ನು ಪ್ರತಿಷ್ಠಾಪಿಸುತ್ತಾರೆ. ಏಕೆಂದರೆ ಆ ದೇವತಾ ಮೂರ್ತಿಗಳೇ ನಮ್ಮನ್ನು ರಕ್ಷಿಸುತ್ತವೆಂಬ ನಂಬಿಕೆ ಅವರಲ್ಲಿ ಬಲವಾಗಿ ಬೇರೂರಿತ್ತು.

ಕೌಟಿಲ್ಯ ಸೈನಿಕರು ಮತ್ತು ಕೋಟೆ ಒಳಗೆ ವಾಸಿಸುವವರಿಗೆ ಆಪತ್ಕಾಲ ಸಂದರ್ಭದಲ್ಲಿ ನಮ್ಮೊಂದಿಗೆ ನಮ್ಮ ದೇವತಾ ಸಮುದಾಯ ಇರುತ್ತದೆಂದೂ ಅವರೇ ನಮ್ಮನ್ನು ರಕ್ಷಿಸುತ್ತಾರೆಂಬ ಭಾವನೆ ಮೂಡಿಸಬೇಕೆಂದೂ, ಯಾವ ದಿಕ್ಕಿಗೆ ಯಾವ ದೇವಾಲಯ ಇರಬೇಕೆಂದು ಉಲ್ಲೇಖಿಸಿದ್ದಾನೆ. ಉದಾಹರಣೆಗೆ ಪಟ್ಟಣದ ಮಧ್ಯೆ-ವಿಷ್ಣು, ಸುಬ್ರಮಣ್ಯ, ಇಂದ್ರ, ಶಿವ, ಕುಬೇರ, ಅಶ್ವಿನಿ, ಲಕ್ಷ್ಮೀ ಮೊದಲಾದ ದೇವತಾ ಮೂರ್ತಿಗಳನ್ನು, ಉಗ್ರಾಣದ ಬಳಿ-ವಾಸ್ತು ದೇವತೆ(ನವಗ್ರಹ)ಯನ್ನು, ಪಟ್ಟಣದ ಉತ್ತರದ ದ್ವಾರ-ಬ್ರಹ್ಮ, ಪೂರ್ವ ದ್ವಾರ-ಇಂದ್ರ, ಪಶ್ಚಿಮ ದ್ವಾರ-ಕುಮಾರಸ್ವಾಮಿ, ದಕ್ಷಿಣದ್ವಾರ-ಯಮನಿಂದ ಅಲಂಕೃತಗೊಳ್ಳಬೇಕೆಂದೂ, ಅಗಳಿನ ಹೊರಗೆ ಒಂದೂವರೆ ದಂಡ ದೂರದಲ್ಲಿ ವೃಕ್ಷ, ಪುಣ್ಯಸ್ಥಾನ, ಆಯಾಯ ದಿಕ್ಕುಗಳಿಗೆ ಅನುಗುಣವಾಗಿ ಇಂದ್ರಾದಿ ದೇವತೆಗಳನ್ನು ಪ್ರತಿಷ್ಠಾಪಿಸಬೇಕೆಂದು ತಿಳಿಸಿದ್ದಾನೆ.

ಆದರೆ ಜಿಲ್ಲೆಯಲ್ಲಿ ರಕ್ಷಣಾ ಕೇಂದ್ರಿತ ಕೋಟೆಗಳನ್ನು ಹೊರತುಪಡಿಸಿ ಉಳಿದಂತಹ ಎಲ್ಲ ಮಾದರಿಯ ಕೋಟೆ-ಕೊತ್ತಲಗಳ ದ್ವಾರಗಳಲ್ಲಿ ಶಿವ, ದುರ್ಗಿ, ವಿನಾಯಕ, ಆಂಜನೇಯರ ವಿವಿಧ ಅವತಾರ ಮೂರ್ತಿಗಳು ಪ್ರತಿಷ್ಠಾಪಿಸಲ್ಪಟ್ಟಿವೆ. ಆದರೆ ರಕ್ಷಣಾ ಕೇಂದ್ರಿತ ಕೋಟೆಗಳಲ್ಲಿ ಮಾತ್ರ ಯಾವುದೇ ದೇವಾಲಯವಾಗಲಿ ಕಂಡುಬರುವುದಿಲ್ಲ. ಜಿಲ್ಲೆಯಲ್ಲಿ ನಿಡುಗಲ್ಲಿನ ಪಾಗೊಂಡೆ ಊರಬಾಗಿಲಿನ ಬಳಿ-ಆಂಜನೇಯ, ಸಿನ್ನ(ಸಿರಾ) ಬಾಗಿಲು-ಕಾಳಭೈರವ, ಕಾಳಹಸ್ತೇಶ್ವರಬಾಗಿಲು-ಕಾಳಹಸ್ತೇಶ್ವರ, ಪಾವಗಡದ ಮಧುಗಿರಿ ಬಾಗಿಲು-ಆಂಜನೇಯ, ಚೆನ್ನರಾಯನದುರ್ಗದ ಮಧುಗಿರಿಬಾಗಿಲು-ಆಂಜನೇಯ, ಕಂದಿಕೆರೆಯ ಪೂರ್ವದ ಬಾಗಿಲು-ಆಂಜನೇಯ, ಹುತ್ರೀದುರ್ಗದ ಮೈಸೂರು ಬಾಗಿಲು-ಆಂಜನೇಯ, ಕುಣಿಗಲ್‌ನ ನೀರುಬಾಗಿಲು-ಆಂಜನೇಯ, ಹಂದನಕೆರೆಯ ದಕ್ಷಿಣದ್ವಾರ-ಗಣೇಶ, ತಾಯಗೊಂಡನಹಳ್ಳಿಯ ಬುರುಜಿನದ್ವಾರ-ಮಾರಮ್ಮ ಮೊದಲಾದ ದೇವತಾಮೂರ್ತಿಗಳು ಆಯಾಯ ಕೋಟೆ-ಕೊತ್ತಲಗಳ ದ್ವಾರದ ಬಳಿ ಪ್ರತಿಷ್ಠಾಪಿಸಲ್ಪಟ್ಟಿವೆ.

ಸಾಮಾನ್ಯವಾಗಿ ಇಂತಹ ದೇವತಾ ಮೂರ್ತಿಗಳ ಪ್ರತಿಷ್ಠಾಪನೆಯ ಹಿಂದೆ ಬೇರೆಯದೇ ಆದ ಉದ್ದೇಶಗಳಿರುತ್ತಿದ್ದವು. ಶಿವನು ಮೂರು ಲೋಕಗಳ ಸೃಷ್ಟಿ, ಲಯ, ಕರ್ತೃಗಳ ಕಾರಣೀಭೂತನಾಗಿದ್ದಾನೆ. ಹಾಗಾಗಿ ಮೂರು ಲೋಕಗಳ ಒಡೆಯನಾದ ಶಿವನ ಮುಂದೆ ಎಂತಹ ಕಷ್ಟ ಎದುರಾದರೂ ಸೇನೆ ಕೋಟೆ ರಕ್ಷಿಸಲ್ಪಡುತ್ತಿತೆಂಬ ನಂಬಿಕೆ ವೈದಿಕರಲ್ಲಿ ಮೊದಲಿನಿಂದಲೂ ರೂಢಿಗತವಾಗಿ ಬಂದಿದೆ. ಈ ಕಾರಣಕ್ಕಾಗಿ ಸೈನಿಕರು ಮತ್ತು ಸಾಮಾನ್ಯ ಜನ ಸಮುದಾಯವನ್ನು ಹುರಿದುಂಬಿಸಲು ಜಿಲ್ಲೆಯ ರಾಜಧಾನಿ ಕೇಂದ್ರಿತ ಕೋಟೆ ಹಿಂದೆ ದ್ವಾರದ ಬಳಿ ಶಿವನ ದೇವಾಲಯಗಳಿವೆ. ದುರ್ಗಿಯು ಶಕ್ತಿ, ಬಲ, ರೌದ್ರ ಮತ್ತು ಭಯಾನಕತೆಯನ್ನು ಉಂಟು ಮಾಡುವ ದೇವತೆಯಾಗಿ ಗುರುತಿಸಲ್ಪಟ್ಟಿದೆ. ಯಾವುದೇ ಶತ್ರು ಪಾಳೆಯ ಕೋಟೆಯ ಮೇಲೆ ದಾಳಿ ಮಾಡಿದರೆ ಆ ಕೋಟೆಯಲ್ಲಿ ದುರ್ಗಿಯ ದೇವತಾ ಮೂರ್ತಿ ಇದ್ದರೆ ಅವರಿಗೆ ತನ್ನ ರೌದ್ರ ರೂಪವನ್ನು ತೋರ್ಪಡಿಸಿ ಹಿಮ್ಮೆಟ್ಟುವಂತೆ ಮಾಡಲೆಂದೂ ಹಾಗೂ ಕೋಟೆಯ ಒಳಗಿರುವವರಿಗೆ ಆನೆಯ ಬಲವನ್ನು ನೀಡಿ ಶತ್ರುಗಳ ವಿರುದ್ಧ ಹುಮ್ಮಸ್ಸಿನಿಂದ ಹೋರಾಡುವಂತೆ ಮಾಡಲಿ ಎಂಬುದಕ್ಕಾಗಿ ದುರ್ಗಿಯನ್ನು ಪ್ರತಿಷ್ಠಾಪಿಸುತ್ತಿದ್ದರು. ಆಂಜನೇಯ ಗ್ರಾಮ ದೇವತೆಯಾಗಿ ಸರ್ವ ಕಾಲದಲ್ಲೂ ರಕ್ಷಿಸಲ್ಪಡುವ ಗ್ರಾಮ ರಕ್ಷಕನಾಗಿ ಗುರುತಿಸಲ್ಪಟಿದ್ದಾನೆ. ಆಂಜನೇಯನ ಆರಾಧನೆ ಅನಾದಿಕಾಲದಿಂದ ಇದ್ದರೂ, ದೇವಾಲಯ ನಿರ್ಮಾಣ ವಿಜಯನಗರದ ಅರಸರಿಂದ ಆರಂಭವಾಯಿತು. ಸಾಮಾನ್ಯವಾಗಿ ಯಾವ ಕೋಟೆಯ ದ್ವಾರದಲ್ಲಿ ಯಾವ ದೇವಾಲಯ ಇಲ್ಲವೆ ಮೂರ್ತಿ ಪ್ರತಿಷ್ಠಾಪನೆಯಾಗಿದೆ ಎಂಬುದರ ಮೇಲೆ ಅದರ ಕಾಲಮಾನವನ್ನು ಗುರುತಿಸಲು ಸಾಧ್ಯವಿದೆ. ಆಂಜನೇಯ ಶಕ್ತಿಯ ಸಂಕೇತವಾಗಿದ್ದು, ಕೋಟೆಗೆ ಬಲವನ್ನು ನೀಡಲಿ ಎನ್ನುವುದಕ್ಕಾಗಿ ದ್ವಾರಗಳ ಬಳಿ ಪ್ರತಿಷ್ಠಾಪಿಸುತ್ತಿದ್ದರು. ಆಂಜನೇಯನ ಮೂರ್ತಿಗಳನ್ನು ದಕ್ಷಿಣ ದ್ವಾರಗಳಲ್ಲಿ ಮಾತ್ರ ಹೆಚ್ಚಾಗಿ ಪ್ರತಿಷ್ಠಾಪಿಸಲಾಗುತ್ತದೆ. ಆದರೆ ಜಿಲ್ಲೆಯಲ್ಲಿ ಉತ್ತರ, ಪಶ್ಚಿಮ, ಪೂರ್ವ ದ್ವಾರಗಳಲ್ಲೂ ಪ್ರತಿಷ್ಠಾಪಿಸಲ್ಪಟ್ಟಿದ್ದಾನೆ. ವಿನಾಯಕ ವಿಘ್ನನಿವಾರಕ, ಶುಭ ಸಂಕೇತವಾಗಿ ಗುರುತಿಸಲ್ಪಟ್ಟಿರುವುದರಿಂದ ವಿಘ್ನ ನಿವಾರಕನಿಗೆ ಕೋಟೆ–ಕೊತ್ತಲಗಳಲ್ಲಿ ಮೊದಲಾದ ಆದ್ಯತೆ ನೀಡಲಾಗುತ್ತಿತ್ತು.

ಜಿಲ್ಲೆಯಲ್ಲಿ ರಕ್ಷಣೆಯ ಉದ್ದೇಶದಿಂದ ನಿರ್ಮಿಸಲ್ಪಟ್ಟ ಯಾವ ದೇವಾಲಯ ಇಲ್ಲವೇ ದೇವತಾ ಮೂರ್ತಿಯಾಗಲಿ ಹಾನಿಗೊಳಗಾಗದೇ ಮುಸ್ಲಿಂ ಅರಸರ ಅವಧಿಯಲ್ಲೂ ಪೂಜೆಗೊಳಪಡುತ್ತಿದ್ದವು. ಏಕೆಂದರೆ ಮುಸ್ಲಿಂ ಅರಸರ ಸೇನೆಯಲ್ಲೂ ವೈದಿಕ ಸಮುದಾಯದವರೇ ಇರುತ್ತಿದ್ದ ಕಾರಣ ದ್ವಾರ ಇಲ್ಲವೆ ಸಮುದಾಯ ಕೇಂದ್ರಿತ ದೇವಾಲಯಗಳನ್ನು ಎಲ್ಲಿಯೂ ನಾಶಪಡಿಸುತ್ತಿರಲಿಲ್ಲ. ಕೇವಲ ಪ್ರಭುತ್ವ ಕೇಂದ್ರಿತ ದೇವಾಲಯಗಳನ್ನು ಮಾತ್ರ ನಾಶಪಡಿಸುತ್ತಿದ್ದರು ಎಂಬುದಕ್ಕೆ ಜಿಲ್ಲೆಯ ದೇವಾಲಯ ವಾಸ್ತುವಿನಿಂದ ಸ್ಪಷ್ಟಗೊಳ್ಳುತ್ತದೆ. ಒಟ್ಟಾರೆ ಜಿಲ್ಲೆಯ ಕೋಟೆ ದ್ವಾರಗಳಲ್ಲಿರುವ ದೇವಾಲಯ ವಾಸ್ತುವನ್ನು ಆಧರಿಸಿ ಆ ಹಂತದ ಕೋಟೆಯ ಯಾವ ಕಾಲಘಟ್ಟದಲ್ಲಿ ನಿರ್ಮಿಸಲ್ಪಟ್ಟಿದೆ ಎಂಬುದನ್ನು ಗುರುತಿಸಬಹುದು. ಉದಾಹರಣೆಗೆ ನಿಡುಗಲ್ಲಿನಲ್ಲಿರುವ ಭೈರವನ ಕೋಟೆ ನೊಳಂಬರ ಕಾಲದ್ದೆಂದು ಗುರುತಿಸಲು ಆ ಕೋಟೆಗೆ ಬಳಸಿದ ಡೈಕ್ ಶಿಲಾ ಮಾಧ್ಯಮಕ್ಕೂ ಭೈರವನ

ಆರಾಧನೆಯ ಆರಂಭಕ್ಕೂ ಸಾಮ್ಯತೆ ಇರುವುದರಿಂದ ಏಳುಸುತ್ತಿನ ನಿಡುಗಲ್ಲು ಕೋಟೆಯಲ್ಲಿ ಭೈರವನ ಕೋಟೆ ಮಾತ್ರ ಪ್ರಾಚೀನ ಕಾಲದ್ದೆಂದು ಸ್ಪಷ್ಟವಾಗಿ ಗುರುತಿಸಬಹುದು.

೫.೫. ನೀರಿನ ಸಂಗ್ರಹಣೆ

ಸಕಲ ಜೀವಕೋಟಿಗೂ ನೀರು ಅತ್ಯವಶ್ಯಕವಾಗಿದ್ದು, ಅದಿಲ್ಲದೆ ಯಾವ ಜೀವಿಯೂ ಬದುಕಲಾರದು. ಹಾಗಾಗಿ ಇಂತಹ ನೀರಿನ ಮೂಲಗಳನ್ನು ಅರಸುತ್ತಾ ಒಂದು ಪ್ರದೇಶದಿಂದ ಮತ್ತೊಂದು ಪ್ರದೇಶಕ್ಕೆ ವಲಸೆ ಹೊಗುತ್ತಿದದ್ದು ಹಲವು ಪುರಾತತ್ವೀಯ ಅಧ್ಯಯನಗಳಿಂದ ದೃಢಪಟ್ಟಿದೆ. ಕೋಟೆ–ಕೋತ್ತಲಗಳ ಬೆಳವಣಿಗೆ ನೀರಿನ ಮೂಲಗಳನ್ನು ವಾಸ್ತುಬದ್ಧವಾಗಿ ಒಂದೆಡೆ ಸಂಗ್ರಹಿಸಿಕೊಳ್ಳುವಂತೆ ಅನಿವಾರ್ಯತೆಯನ್ನು ಉಂಟುಮಾಡಿದೆ. ಕೌಟಿಲ್ಯ, ಮನು, ಕಾಮಾಂದಕ, ಶುಕ್ರ ಮೊದಲಾದ ರಾಜನೀತಿಜ್ಞರು ಸಹ ಕೋಟೆ–ಕೋತ್ತಲಗಳನ್ನು ನೀರಿನಿಂದ ಸುತ್ತವರೆದ ಜಲ ಮೂಲಗಳಿರುವಲ್ಲಿ ನಿರ್ಮಿಸಿಕೊಳ್ಳಬೇಕೆಂದು ಸೂಚಿಸಿದ್ದಾರೆ. ಏಕೆಂದರೆ ಜಲದುರ್ಗವಾದರೆ ಕೋಟೆಯ ಸುತ್ತಲೂ ಕಂದಕಗಳಿಗೆ ಬೇಕಾದ ನೀರನ್ನು ಹಾಗೂ ಕೋಟೆಯ ಒಳಗಿನವರಿಗೆ ದಿನನಿತ್ಯದ ಅವಶ್ಯಕತೆಗಳಿಗೆ ಬೇಕಾಗುವ ನೀರನ್ನು ಮೂರು ಕಾಲಗಳಿಗೂ ಪಡೆಯಲು ಯಾವ ತೊಂದರೆಯನ್ನು ಎದುರಿಸುವಂತಿಲ್ಲ. ಒಂದುವೇಳೆ ನೀರಿನ ಮೂಲಗಳಿಲ್ಲದ ಪಕ್ಷದಲ್ಲಿ ನೀರಿನ ಮೂಲವನ್ನು ಸೃಷ್ಟಿಸಿಕೊಂಡು ಅಂದರೆ ಕೆರೆ–ಕಟ್ಟೆಗಳನ್ನು ಕಟ್ಟಿಕೊಂಡು ಕೋಟೆ ಕೊತ್ತಲಗಳ ನಿರ್ಮಾಣಕ್ಕೆ ಮುಂದಾಗಬೇಕೆಂದು ಅಭಿಪ್ರಾಯಪಟ್ಟಿದ್ದಾರೆ.

ಜಿಲ್ಲೆಯಲ್ಲಿ ಕಂಡುಬರುವ ಬೆಟ್ಟ ಗುಡ್ಡಗಳ ಸಾಲು ಎಲ್ಲಾ ಕಾಲದಲ್ಲೂ ಈ ಪರಿಸರದಲ್ಲಿ ನೀರಿನ ಸೆಲೆಗಳಿರುವಂತೆ ಜೀವಂತಗೊಳಿಸಿವೆ. ಅಲ್ಲದೆ ಬೆಟ್ಟಗಳ ನೈಸರ್ಗಿಕ ರಚನೆ ನೀರನ್ನು ಪ್ರಕೃತಿ ಸಹಜವಾಗಿ ಒಡ್ಡುಗಳಲ್ಲಿ ಸಂಗ್ರಹಗೊಳ್ಳುವಂತೆ ಮಾಡಿದ್ದು, ಕೋಟೆಗಳ ನಿರ್ಮಾಣಕ್ಕೆ ಬೇಕಾದ ಸೂಕ್ತ ವಾತಾವರಣವನ್ನು ಕಲ್ಪಿಸಿದೆ. ಹಾಗಾಗಿ ಜಿಲ್ಲೆಯ ಗಿರಿದುರ್ಗಗಳಲ್ಲಿ ನೈಸರ್ಗಿಕವಾಗಿ ರೂಪುಗೊಂಡ ತಗ್ಗು, ದಿನ್ನೆ, ಕುಣಿ, ಕಂದರಗಳಿಗೆ ತಡೆಗೋಡೆಯನ್ನು ನಿರ್ಮಿಸಿಕೊಂಡಿದ್ದಾರೆ. ಅವಶ್ಯವಿರುವಲ್ಲಿ ಮಾತ್ರ ಬೆಟ್ಟದಲ್ಲಿ ಬೀಳುವ ಮಳೆಯ ನೀರು ವ್ಯರ್ಥವಾಗಿ ಹರಿದು ಹೋಗದಂತೆ ಕಾಲುವೆಗಳ ಮೂಲಕ ಇಳಿಜಾರಾದ ಪ್ರದೇಶಕ್ಕೆ ಹರಿದು ಹೋಗುವಂತೆ ಮಾಡಿ ಹೊಂಡಗಳನ್ನು ನಿರ್ಮಿಸಲಾಗಿದೆ. ಹುತ್ರೀದುರ್ಗ, ನಿಡುಗಲ್ಲು, ಭಸ್ಮಾಂಗಿ, ದೇವರಾಯನದುರ್ಗ ಮೊದಲಾದ ಗಿರಿದುರ್ಗಗಳಲ್ಲಿ ನಿರ್ಮಾಣಗೊಂಡ ಹೊಂಡಗಳೇ ಬಾವಿಗಳಿಗೆ ನೀರಿನ ಸೆಲೆಗಳಾಗಿ ರೂಪುಗೊಂಡಿದ್ದವು. ಮಧುಗಿರಿಯ ಆನೆಯ ಹೊಂಡದಲ್ಲಿ ಬಳಕೆಯಾದ ಸ್ಥಳೀಯ ತಂತ್ರವು ಪಾಳೆಯಗಾರರು ನೀರಿನ ಶುದ್ಧೀಕರಣಕ್ಕಾಗಿ ಬಯಲುಸೀಮೆಯಲ್ಲಿ ವಹಿಸುತ್ತಿದ್ದ ಮುಂಜಾಗ್ರತಾ ಕ್ರಮವನ್ನು ತಿಳಿಸುತ್ತದೆ. ಏಕೆಂದರೆ ಇಡೀ ಬೆಟ್ಟದಲ್ಲಿ ಬೀಳುವ ಮಳೆಯ ನೀರನ್ನು ಉಸುಕಿನಿಂದ ಕೂಡಿದ ಹೊಂಡಕ್ಕೆ ಹರಿಸಿ ಅದರ ಮೂಲಕ ಆ ಶುದ್ಧೀಕರಿಸಲ್ಪಟ್ಟು ಬಳಕೆಗೆ ಯೋಗ್ಯವಾಗಿರುವಂತೆ ಮಾಡಿ ಪುನಃ ಆನೆಯ ಹೊಂಡಕ್ಕೆ ಬಿಟ್ಟು ಅದನ್ನು ದಿನನಿತ್ಯದ ಅವಶ್ಯಕತೆಗಳಿಗೆ ಬಳಸಿಕೊಳ್ಳುವಂತೆ ಮಾಡಿದ್ದಾರೆ. ಮಿಡಿಗೇಶಿ, ಒಡೇರಹಳ್ಳಿ, ಪಾವಗಡ, ವೈ.ಎನ್.ಹೊಸಕೋಟೆ, ಹುಲಿಯೂರುದುರ್ಗ ಮೊದಲಾದ ಪ್ರದೇಶಗಳಲ್ಲಿ ಅನುಕೂಲವಿರುವಲ್ಲಿ ಗಾರೆ ಮತ್ತು ಇಟ್ಟಿಗೆ ಇಲ್ಲವೆ ಮಣ್ಣು ಅಥವಾ

ಕಲ್ಲಿನ ತಡೆಗೋಡೆಗಳನ್ನು ನಿರ್ಮಿಸಿಕೊಂಡು ಮಳೆಯ ನೀರನ್ನು ಸಂಗ್ರಹಿಸಿಕೊಳ್ಳುವ ವ್ಯವಸ್ಥೆ ಮಾಡಲಾಗಿತ್ತು. ಜಿಲ್ಲೆಯ ಪಾಳೆಪಟ್ಟುಗಳು ರಾಜಧಾನಿಗಳನ್ನು ನೀರಿನ ಮೂಲಗಳನ್ನು ಅರಸುತ್ತಾ ಬದಲಾಯಿಸುತ್ತಿದ್ದುದು ಅವರು ನೀರಿನ ಸಂಗ್ರಹಣೆಗಾಗಿ ಕೈಗೊಂಡ ನಿರ್ಮಿತಿಗಳಿಂದ ಸ್ಪಷ್ಟವಾಗುತ್ತದೆ.

ಜಿಲ್ಲೆಯ ಬಹುತೇಕ ಪಾಳೆಪಟ್ಟುಗಳು ಎತ್ತರದ ಬೆಟ್ಟ-ಗುಡ್ಡಗಳಲ್ಲಿ ಆಳ್ವಿಕೆ ನಡೆಸುತ್ತಿದ್ದರಿಂದ ಅಲ್ಲಿ ಇಳಿಜಾರಾದ ಸ್ಥಳದಲ್ಲಿರುವ ಬಾವಿ, ಹೊಂಡ, ಕಲ್ಯಾಣಿ, ದೊಣೆಗಳಲ್ಲಿ ನೀರು ಸದಾಕಾಲ ಜಿನುಗುತ್ತಿರುವಂತೆ ಮಾಡಿದೆ.

ಸ್ಥಳದುರ್ಗ ಇರುವಲ್ಲಿ ಮಾತ್ರ ಯಾವ ನದಿ ಸಂಚಯಗಳು ಇರದ ಕಾರಣ ಶಾಸ್ತ್ರ ಗ್ರಂಥಗಳು ಸೂಚಿಸಿರುವಂತೆ ಮಳೆಗಾಲದ ಸಂದರ್ಭದಲ್ಲಿ ಹಳ್ಳ ಕೊಳ್ಳಗಳಿಂದ ಹರಿಯುವ ಮಳೆಯ ನೀರಿಗೆ ತಡೆಗೋಡೆಯಾಗಿ ಕೆರೆ-ಕಟ್ಟೆಗಳನ್ನು ಕಟ್ಟಿದ್ದಾರೆ. ಅವುಗಳಿಂದ ಕಂದಕಗಳಿಗೆ ಬಿಡುವ ತಂತ್ರ ಸಿರಾ, ಸಿದ್ಧಾಪುರ, ಕುಣಿಗಲ್, ಅರಸೀಕೆರೆ, ತುರುವೇಕೆರೆ, ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ, ತುಮಕೂರು, ಕೈದಾಳ, ದಿಬ್ಬೂರು ಮೊದಲಾದ ಸ್ಥಳಗಳಲ್ಲಿ ಕಂಡುಬರುತ್ತದೆ. ಓಡೇರಹಳ್ಳಿ, ಸಿಂಗರೆಡ್ಡಿಹಳ್ಳಿ, ಟಿ.ಎನ್.ಬೆಟ್ಟ, ದೇವರಬೆಟ್ಟ, ಕನ್ನಮೇಡಿ, ಮುಗದಾಳಬೆಟ್ಟ, ವೈ.ಎನ್.ಹೊಸಕೋಟೆ, ಗುಟ್ಟೆ ಮೊದಲಾದ ಕಡೆ ಕೋಟೆಯ ಯಾವುದೇ ಭಾಗಕ್ಕೂ ಗಾರೆಯ ಲೇಪನ ಇರದಿದ್ದರೂ ನೀರಿನ ಸಂಗ್ರಹಣೆಯ ತಡೆಗೋಡೆಗಳಿಗೆ ಮಾತ್ರ ಗಾರೆಯನ್ನು ಬಳಸಿದ್ದಾರೆ. ಈ ಗಾರೆಯ ಬಳಕೆಯಿಂದಲೂ ಕೋಟೆ ಯಾವ ಕಾಲದಲ್ಲಿ ನಿರ್ಮಿಸಲ್ಪಟ್ಟಿದೆ, ಇಲ್ಲವೆ ಜೀರ್ಣೋದ್ಧಾರಗೊಂಡಿದೆ ಎಂಬುದು ಸ್ಪಷ್ಟವಾಗುತ್ತದೆ.

೫.೬. ಮದ್ದಿನಮನೆ

ಪ್ರಾಚೀನ ಕಾಲದ ವೈದಿಕ ಯುದ್ಧ ನೀತಿಯನ್ನು ಗಮನಿಸಿದರೆ ಮದ್ದು ಗುಂಡುಗಳ ಬಳಕೆ ಅತಿ ವಿರಳವೆಂದೇ ಹೇಳಬೇಕಾಗುತ್ತದೆ. ಹಾಗಾಗಿ ಮದ್ದಿನ ಮನೆಗಳು ಯಾವ ಕಾಲಘಟ್ಟದಿಂದ ನಿರ್ಮಿಸಲ್ಪಟ್ಟವು ಎಂಬುದು ಮುಖ್ಯವಾಗುತ್ತದೆ. ವೈದಿಕರಿಗೆ ಫಿರಂಗಿಗಳ ಬಾಬರನ ಕಾಲಘಟ್ಟದಿಂದ ಪರಿಚಯವಾಗಿ ಫಿರಂಗಿಗಳಿಗೆ ಬೇಕಾದ ಮದ್ದನ್ನು ಸಂಗ್ರಹಿಸಲು ಅವಶ್ಯವಾದ ಮದ್ದಿನ ಮನೆಗಳ ನಿರ್ಮಾಣವು ಆ ಕಾಲಘಟ್ಟದಿಂದಲೇ ಆಗಿರುವ ಸಾಧ್ಯತೆಯಿದೆ. ಕ್ರಮೇಣ ಯುದ್ಧ ಶೈಲಿ ಬದಲಾದಂತೆ ಅದರ ನಿರ್ಮಾಣ ಶೈಲಿಯೂ ಬದಲಾಗಿದ್ದು ಕೋಟೆ ಗೋಡೆಗಳ ಮೇಲೆಯೇ ಸಣ್ಣ ಗಾತ್ರದ ಮದ್ದಿನ ಮನೆಗಳ ನಿರ್ಮಾಣದಿಂದ ಸ್ಪಷ್ಟವಾಗುತ್ತದೆ. ಏಕೆಂದರೆ ಕೋಟೆ ಕಾಳಗದ ಸಂದರ್ಭದಲ್ಲಿ ಯಾವುದೋ ಗೋಡೆಯ ಮೇಲೆ ಫಿರಂಗಿ ಇದ್ದು, ಮತ್ತೆಲ್ಲೋ ಮದ್ದು ಗುಂಡು ಇದ್ದರೆ ಅದನ್ನು ಪ್ರತಿ ಬಾರಿಯೂ ಫಿರಂಗಿ ಬಳಿ ತಂದು ಪ್ರಯೋಗಿಸಬೇಕೆಂದರೆ ಶತ್ರುಗಳಿಗೆ ಅವಕಾಶ ಕಲ್ಪಿಸಿಕೊಟ್ಟಂತಾಗುತ್ತದೆ. ಆದುದರಿಂದ ಶತ್ರುಗಳಿಗೆ ಸಮಯಾವಕಾಶ ದೊರೆಯದಂತೆ ನಿರಂತರವಾಗಿ ಅವರ ದಾಳಿ ಮಾಡುವ ಉದ್ದೇಶದಿಂದ ಗೋಡೆಯ ಮೇಲ್ಭಾಗವೇ ಸಣ್ಣ ಗಾತ್ರದ ಮದ್ದಿನ ಮನೆಗಳನ್ನು ನಿರ್ಮಿಸಲಾಗಿದೆ. ಆದರೂ ಫಿರಂಗಿಗೆ ಬಳಸುವ ಮದ್ದನ್ನು ವರ್ಷದ ಬೇಸಿಗೆ, ಚಳಿಗಾಲ, ಮಳೆಗಾಲ ಮೂರು ಕಾಲಗಳಲ್ಲಿ ಬಳಸಲು ಯೋಗ್ಯ ಇರಬೇಕಾದರೆ

ಸೂಕ್ತ ಹವಾಮಾನವನ್ನು ಕಾಯ್ದುಕೊಂಡು ಹೋಗುವ ಕಟ್ಟಡಗಳ ರಚನೆ ಅನಿವಾರ್ಯವಾಗಿರುತ್ತದೆ. ಆದುದರಿಂದ ಮದ್ದಿನ ಮನೆಗಳ ಒಳ ಭಾಗದಲ್ಲಿ ಗಾರೆಯನ್ನು ಲೇಪನ ಮಾಡಿದ್ದಾರೆ. ಏಕೆಂದರೆ ಗಾರೆಗೆ ಉಷ್ಣತೆ ಮತ್ತು ಶೀತವನ್ನು ಹೀರಿಕೊಳ್ಳುವ ವೈಜ್ಞಾನಿಕವಾದುದು.

ಜಿಲ್ಲೆಯಲ್ಲಿ ಕಂಡುಬರುವ ಬಿಜಾಪುರ ಸಮಕಾಲೀನ ಕೋಟೆ-ಕೊತ್ತಲಗಳಲ್ಲಿ ಹೆಚ್ಚಿನ ಮದ್ದಿನ ಮನೆಗಳು ಕಂಡುಬರುತ್ತವೆ. ಟಿಪ್ಪುವಿನ ಕಾಲದಲ್ಲೂ ಪಾವಗಡ, ಮಿಡಿಗೇಶಿ, ಮಧುಗಿರಿ, ಚೆನ್ನರಾಯನದುರ್ಗ, ಸಿರಾ, ಹುತ್ರೀದುರ್ಗ, ಭಸ್ಮಾಂಗಿ ಕೋಟೆ ಗೋಡೆಗಳ ಮೇಲ್ಭಾಗ ಮದ್ದಿನ ಮನೆಗಳು ನಿರ್ಮಿಸಲ್ಪಟ್ಟಿವೆ. ಉಳಿದ ಬಹುತೇಕ ಕೋಟೆಗಳಲ್ಲಿ ಹಳೆ ಮಾದರಿಯ ಕತ್ತಿ, ಗುರಾಣಿ, ಭರ್ಜಿ, ಈಟಿ, ಬಿಲ್ಲು ಬಾಣಗಳನ್ನೇ ಬಳಸುತ್ತಿದ್ದರೆಂಬುದಕ್ಕೆ ಯಾವ ಮದ್ದಿನ ಮನೆ ಅವಶೇಷಗಳು ಕಂಡುಬರುವುದಿಲ್ಲ. ಪಾವಗಡ ಕೋಟೆಯ ತುದಿ ಭಾಗದಲ್ಲಿ ಹೆಂಚು ಮತ್ತು ಇಟ್ಟಿಗೆಯಿಂದ ದಿಬ್ಬದ ಒಳಭಾಗ ಮದ್ದಿನ ಮನೆಯನ್ನು ನಿರ್ಮಿಸಿದ್ದು, ವೈವಿಧ್ಯತೆಯಿಂದ ಕೂಡಿದೆ. ಭೂಮಿಯ ಒಳಭಾಗ ನಿರ್ಮಾಣಗೊಂಡ ಯಾವುದೇ ಕಟ್ಟಡ ಸದಾ ಕಾಲ ಒಂದೇ ಹವಾಗುಣವನ್ನು ಹೊಂದಿರುತ್ತದೆ.

೫.೭. ಕಣಜಗಳು

ಕೋಟೆ ಎಷ್ಟೇ ಬಲಿಷ್ಠತೆಯಿಂದ ಕೂಡಿದರೂ ಅದು ಹೊಂದಿರುವ ಆಹಾರ ಧಾನ್ಯಗಳ ಸಂಗ್ರಹಣೆಯ ಮೇಲೆ ಅದರ ಅಳಿವು ಉಳಿವು ನಿಂತಿರುತ್ತದೆ. ಏಕೆಂದರೆ ಯಾವುದೇ ಕೋಟೆ ದಾಳಿಗೆ ಒಳಪಟ್ಟಾಗ ಅದು ಎಷ್ಟೇ ಅಭೇದ್ಯತೆಯಿಂದ ಕೂಡಿದ್ದರೂ ಸಹ ಒಳಗಿನವರಿಗೆ ಬಹು ಕಾಲದವರೆಗೂ ಆಹಾರ ಧಾನ್ಯಗಳನ್ನು ಪೂರೈಸುವ ಸಾಮರ್ಥ್ಯದ ಮೇಲೆ ಭವಿಷ್ಯ ನಿಂತಿರುತ್ತದೆ. ಒಂದು ವೇಳೆ ಆಹಾರ ಧಾನ್ಯ ಮುಗಿಯಿತೆಂದರೆ ಶತ್ರು ಪಾಳೆಯಕ್ಕೆ ಕೋಟೆಯ ಬಾಗಿಲನ್ನು ತೆರೆದು ಶರಣಾಗತರಾಗಬೇಕಾಗುತ್ತದೆ. ಇಲ್ಲವೆಂದರೆ ಕೋಟೆಯ ಒಳಗಿನವರು ಆಹಾರವಿಲ್ಲದೆ ಸಾಯುವಂತಹ ವಾತಾವರಣ ಸೃಷ್ಟಿಯಾಗುತ್ತದೆ. ಈ ಉದ್ದೇಶದಿಂದ ಕಣಜಗಳು ಕೋಟೆಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ನಿರ್ಮಿಸಲ್ಪಟ್ಟಿರುತ್ತವೆ. ಅವುಗಳಲ್ಲಿ ಆಹಾರ ಧಾನ್ಯ, ಎಣ್ಣೆ ಪದಾರ್ಥ, ತುಪ್ಪ ಮೊದಲಾದವನ್ನು ಸಂಗ್ರಹಿಸಲಾಗುತ್ತದೆ. ಆದರೆ ತುಪ್ಪ ಮತ್ತು ಎಣ್ಣೆ ಪದಾರ್ಥಗಳ ಕಟ್ಟಡಕ್ಕೂ ಆಹಾರ ಧಾನ್ಯದ ಕಣಜದ ಕಟ್ಟಡಕ್ಕೂ ಶೈಲಿಯಲ್ಲಿ ವ್ಯತ್ಯಾಸವಿರುತ್ತದೆ. ಆದರೂ ಅವೆರಡೂ ಕಟ್ಟಡಗಳನ್ನು ಸೂಕ್ತ ಹವಾಗುಣವನ್ನು ಕಾಯ್ದುಕೊಳ್ಳುವಂತಹ ರೀತಿಯಲ್ಲೆಲ್ಲಿ ನಿರ್ಮಾಣ ಮಾಡಿರುತ್ತಾರೆ. ತುಪ್ಪದ ಕಣಜವನ್ನು ಇಟ್ಟಿಗೆ ಮತ್ತು ಗಾರೆಯಲ್ಲಿ ನೆಲ ಮಟ್ಟದಿಂದ ಕೆಳಗೆ ಇಲ್ಲವೆ ಹೆಬ್ಬಂಡೆಯ ಮೇಲೆ ಅಂಡಾಕಾರವಾಗಿ ನಿರ್ಮಿಸಿರುವುದು ಜಿಲ್ಲೆಯ ತುಪ್ಪದ ಕಣಜಗಳ ಶೈಲಿಯಿಂದ ತಿಳಿಯುತ್ತದೆ. ಆದರೆ ಆಹಾರ ಧಾನ್ಯಗಳನ್ನು ಆಯತ, ವೃತ್ತ, ಚೌಕ ಮಾದರಿಯಲ್ಲಿ ಕತ್ತರಿಸಿದ ಕಲ್ಲಿನಿಂದ ಇಲ್ಲವೆ ಹಸಿಮಣ್ಣಿನ ಇಟ್ಟಿಗೆಗಳಿಂದ ನಿರ್ಮಿಸಲ್ಪಟ್ಟಿವೆ. ಇವುಗಳಲ್ಲಿ ಕೆಲವಕ್ಕೆ ಮಾತ್ರ ಗಾರೆಯ ಲೇಪನವಿದೆ.

ಕೌಟಿಲ್ಯ ಕಣಜಗಳನ್ನು ಭೂಸ್ಪರ್ಶವಿಲ್ಲದಂತೆ ನಿರ್ಮಿಸಬೇಕೆಂದೂ, ಕ್ಷಾರ ವಸ್ತುಗಳನ್ನು ಹುಲ್ಲಿನ ಮೂಟೆಗಳಲ್ಲಿ ಕಟ್ಟಿಡಬೇಕೆಂದೂ, ಎಣ್ಣೆ ಮತ್ತು ತುಪ್ಪಗಳನ್ನು ಮಣ್ಣು ಹಾಗೂ ಮರದ ಪಾತ್ರೆಗಳಲ್ಲಿ ಸಂಗ್ರಹಿಸಬೇಕೆಂದೂ, ಉಪ್ಪನ್ನು ಗಡಿಗೆಗಳಲ್ಲಿ ಸಂಗ್ರಹಿಸಬೇಕೆಂದು ತಿಳಿಸಿದ್ದಾನೆ.[೬] ಆದರೆ ಮಧ್ಯಕಾಲೀನ ಸಂದರ್ಭದಲ್ಲಿ ಬದಲಾದ ಯುದ್ಧ ನೀತಿ ನಿರಂತರ ರಾಜಕೀಯ ಸಂಘರ್ಷಗಳಿಗೆ ಎಡೆಮಾಡಿಕೊಟ್ಟಿತು. ಆದುದರಿಂದ ಕೋಟೆಗಳಲ್ಲಿ ಆಹಾರ ಧಾನ್ಯ ಮತ್ತು ತುಪ್ಪ, ಎಣ್ಣೆಗಳ ಸಂಗ್ರಹಣೆಯು ಅತಿಮುಖ್ಯ ಕಾರ್ಯವಾಗಿ ಪರಿಗಣಿಸಲ್ಪಟ್ಟಿತು. ಹಾಗಾಗಿ ಸೂಕ್ತ ಸ್ಥಳಗಳಲ್ಲಿ ಆಹಾರ ಧಾನ್ಯದ ಕಣಜಗಳು ನಿರ್ಮಾಣಗೊಳ್ಳುತ್ತಿದ್ದವು. ಏಕೆಂದರೆ ಫಿರಂಗಿಗಳ ಬಳಕೆಗಾಗಿ ಯುದ್ಧದ ಸಂದರ್ಭದಲ್ಲಿ ಪ್ರಾಣಿ ಸಂಕುಲ, ಸೈನಿಕರು, ಅಧಿಕಾರಿ ವರ್ಗದವರಿಗೆ ಸಂಭವಿಸುವ ಗಾಯಗಳಿಗೆ ಔಷಧ ಲೇಪನ ಮಾಡಲು, ಗೋಡೆಗಳ ಮೇಲಿಂದ ಕಾದ ಎಣ್ಣೆಯನ್ನು ಶತ್ರುಗಳ ಮೇಲೆ ಸುರಿಯುವಲ್ಲಿ ತುಪ್ಪ ಇಲ್ಲವೆ ಎಣ್ಣೆ ಕಣಜಗಳು ಬಹುಮುಖ್ಯ ಪಾತ್ರವಹಿಸುತ್ತವೆ.

ಜಿಲ್ಲೆಯ ಮಿಡಿಗೇಶಿ, ಭಸ್ಮಾಂಗಿ, ಮಧುಗಿರಿ, ಪಾವಗಡ, ಚೆನ್ನರಾಯನದುರ್ಗ ಮೊದಲಾದ ಕಡೆ ವೃತ್ತ ಮಾದರಿಯಲ್ಲಿ ಗ್ರಾನೈಟ್ ಶಿಲೆಯಿಂದ ನಿರ್ಮಾಣಗೊಂಡ ಕಣಜಗಳಿಗೆ ಒಳಬದಿ ಗಾರೆಯನ್ನು ಲೇಪಿಸಿದ್ದಾರೆ. ಪಾವಗಡ, ನಿಡುಗಲ್ಲು, ಭಸ್ಮಾಂಗಿ, ಮಿಡಿಗೇಶಿ, ಮಧುಗಿರಿ, ಚೆನ್ನರಾಯನದುರ್ಗ, ಹುತ್ರೀದುರ್ಗ, ಹುಲಿಯೂರುದುರ್ಗ, ಕನ್ನಮೇಡಿ ಮೊದಲಾದ ಕೋಟೆಗಳಲ್ಲಿ ಮಾತ್ರ ಇಟ್ಟಿಗೆ ಮತ್ತು ಗಾರೆಯಿಂದ ನಿರ್ಮಿಸಲ್ಪಟ್ಟ ಅಂಡಾಕಾರದ ತುಪ್ಪದ ಕಣಜಗಳಿವೆ. ನಿಡುಗಲ್ಲಿನಲ್ಲಿ ೫ಮೀ.ವರೆಗೂ ಆಳವಾಗಿ ಇವುಗಳನ್ನು ನಿರ್ಮಿಸಿರುವುದು ವಾಸ್ತು ವೈವಿದ್ಯತೆಯನ್ನು ತೋರ್ಪಡಿಸುತ್ತದೆ. ಹುತ್ರೀದುರ್ಗದ ಬಸವನ ಕೋಟೆಯಲ್ಲಿನ ಮಣ್ಣಿನಿಂದ ನಿರ್ಮಾಣಗೊಂಡ ಆಹಾರ ಧಾನ್ಯದ ಕಣಜ ಇಂದಿಗೂ ಹಾಳಾಗದಂತೆ ಸುಭದ್ರವಾಗಿದೆ. ಇದು ಹಸಿ ಇಟ್ಟಿಗೆಯಿಂದ ನಿರ್ಮಾಣಗೊಂಡು ಸುಮಾರು ಐದುನೂರು ವರ್ಷಗಳಾದರೂ ಹಾಳಾಗಿಲ್ಲ ಎಂದರೆ ಅವರ ವಾಸ್ತುರಚನೆಯ ತಂತ್ರಜ್ಞಾನ ಹೇಗಿತ್ತೆಂಬುದು ಅರಿವಾಗುತ್ತದೆ.

೫.೮. ಗರಡಿಮನೆ

ಯಾವುದೇ ಸಾಮ್ರಾಜ್ಯ ಯದ್ಧದಲ್ಲಿ ವಿಜಯ ಪತಾಕೆ ಹಾರಿಸಬೇಕೆಂದರೆ ಅದು ಸೈನಿಕರಲ್ಲಿ ಮೂಡಿದ ಶಿಸ್ತು ಮತ್ತು ದೈಹಿಕ ಕಸರತ್ತಿನಿಂದ ಮಾತ್ರ ಸಾಧ್ಯ. ಏಕೆಂದರೆ ಸೈನಿಕರಿಲ್ಲದ ರಾಜ್ಯವನ್ನು ಊಹಿಸಲು ಸಾಧ್ಯವಿಲ್ಲ. ಯಾವುದೇ ರಾಜ್ಯದ ಜೀವಾಳ ಸೈನಿಕ ವರ್ಗವೆ. ಹಾಗಾಗಿ ಸೈನಿಕರು ದಿನನಿತ್ಯವೂ ಉತ್ಸಾಹಶೀಲರಾಗಿರಲೆಂದು ಅವರಿಗಾಗಿಯೇ ಗರಡಿ ಮನೆಗಳನ್ನು ನಿರ್ಮಿಸಲಾಗಿತ್ತು. ಜಿಲ್ಲೆಯಲ್ಲಿ ಕಂಡುಬರುವ ಗರಡಿಮನೆಗಳು ಸಣ್ಣದಾದ ಕಿಂಡಿಗಳನ್ನು ಮಾತ್ರ ಹೊಂದಿವೆ. ಒಳಗಡೆ ಕತ್ತಲು ಆವರಿಸಿರುತ್ತದೆ. ಏಕೆಂದರೆ ಕತ್ತಿವರಸೆ, ಮಲ್ಲಯುದ್ಧ, ಕುಸ್ತಿ ಮೊದಲಾದ ತರಬೇತಿಗಳನ್ನು ಹೀಗೆಯೇ ಕೈಗೊಳ್ಳಬೇಕಾಗುತ್ತದೆ.

ನಿಡುಗಲ್ಲಿನ ವಸಂತ ಅರಮನೆಗೆ ಹೊಂದಿಕೊಂಡ ಗರಡಿಮನೆ ಆಯತ ಮಾದರಿಯಲ್ಲಿದ್ದು, ಒಳಮುಖವನ್ನು ಗಾರೆಯಿಂದ ನುಣುಪುಗೊಳಿಸಿ ಗಾಳಿ ಬೆಳಕಿಗಾಗಿ ಮೇಲ್ಛಾವಣಿಯಲ್ಲಿ ಕಿಂಡಿಗಳನ್ನು

ಬಿಟ್ಟಿದ್ದಾರೆ. ಹಾಗಾಗಿ ಇದು ಅರಸ ಮತ್ತು ಆತನ ಆಪ್ತವರ್ಗಕ್ಕೆ ಮಾತ್ರ ಸೀಮಿತಗೊಂಡಿತ್ತೆಂಬುದು ಮೈಸೂರು ಒಡೆಯರಿಂದ ಸ್ಪಷ್ಟವಾಗುತ್ತದೆ. ಗರಣಿಯ ಗೌಡನೊಬ್ಬ ಅನುಮತಿ ಪಡೆದ ಸೈನಿಕರಿಗೆ ಗರಡಿ ಮನೆಯಲ್ಲಿ ತರಬೇತಿ ನೀಡಿ ಒಡೆಯರಿಗೆ ಒಪ್ಪಿಸುತ್ತಿದ್ದನಂತೆ. ಅದಕ್ಕಾಗಿ ಇಂತಿಷ್ಟು ದತ್ತಿಯನ್ನು ಪಡೆದುಕೊಂಡಿದ್ದನಂತೆ. ಹಾಗಾಗಿ ಈ ಗ್ರಾಮಕ್ಕೆ ಗರಣಿ ಎಂಬ ಹೆಸರು ಬಂದಿದೆ ಎಂದು ಅಲ್ಲಿಯ ಸ್ಥಳಪುರಾಣ ತಿಳಿಸುತ್ತದೆ. ಗರಣಿ ಎಂಬ ಪದದ ಣಿ ಅಕ್ಷರವು ಡಿ ಎಂಬ ಅಕ್ಷರದ ಅಪಭ್ರಂಶ ರೂಪವೇ ಆಗಿರುವುದರಿಂದ ಜಿಲ್ಲೆಯಲ್ಲಿ ಇಂತಹ ಹಲವು ಪ್ರದೇಶಗಳಲ್ಲಿ ಗರಡಿ ಮನೆ ತರಬೇತಿ ಕೇಂದ್ರಗಳಿದ್ದವೆಂದು ಸ್ಪಷ್ಟವಾಗುತ್ತದೆ. ಏಕೆಂದರೆ ಸಿದ್ಧಾಪುರ, ಹುಸೇನ್‌ಪುರ ಮೊದಲಾದ ಗ್ರಾಮಗಳಲ್ಲಿ ಪಾಳೆಯಗಾರರ ಕಾಲದ ಗರಡಿ ಮನೆ, ಉಪಕರಣಗಳು ಇಂದಿಗೂ ಬಳಸಲ್ಪಡುತ್ತಿವೆ.

೫.೯. ಸೈನಿಕರ ವಸತಿ ನೆಲೆ

ಕೋಟೆಯೊಂದು ಇದ್ದ ಮಾತ್ರಕ್ಕೆ ರಾಜ ನೆಮ್ಮದಿಯಿಂದ ಇರಲು ಸಾಧ್ಯವಿಲ್ಲ. ಏಕೆಂದರೆ ಕೋಟೆಯೊಂದರಿಂದಲೇ ರಾಜಧಾನಿಯನ್ನು ಮತ್ತು ರಾಜ್ಯವನ್ನು ರಕ್ಷಿಸಲಾಗದು. ಕೋಟೆಗೆ ರಕ್ಷಣೆಯಾಗಿ ಸೈನಿಕ ಪಡೆ ಇರಲೇ ಬೇಕಾಗುತ್ತದೆ. ಹಾಗಾಗಿ ಸೈನಿಕರಿಗೂ ರಕ್ಷಣೆ ಬೇಕಿರುವುದರಿಂದ ಅವರಿಗಾಗಿ ವಸತಿ ವ್ಯವಸ್ಥೆಯನ್ನು ಕೋಟೆಯ ಒಳಗೆ ಮಾಡಬೇಕಾಗುತ್ತದೆ. ಒಂದುವೇಳೆ ಕೋಟೆಯ ಹೊರಗೆ ಸೈನಿಕರ ವಸತಿಗಳಿದ್ದರೆ ತುರ್ತು ಸಂದರ್ಭದಲ್ಲಿ ಕೋಟೆಯನ್ನು ರಕ್ಷಿಸಲು ಸಾಧ್ಯವಾಗುವುದಿಲ್ಲ. ಆದುದರಿಂದ ರಾಜಧಾನಿ ಕೇಂದ್ರಿತ ಕೋಟೆಗಳ ಬದಿಯಲ್ಲೇ ಸೈನಿಕರ ವಸತಿ ನಿವೇಶನ ಇರುವಂತೆ ವ್ಯವಸ್ಥೆ ಮಾಡಿದ್ದಾರೆ. ಉಳಿದಂತೆ ರಕ್ಷಣಾ ಕೇಂದ್ರಗಳಲ್ಲಿ ಕೇವಲ ಕಿಲ್ಲೆದಾರನ ಮತ್ತು ಆತನ ಸಂಬಂಧಿಕರ ನಾಲ್ಕೈದು ಕಟ್ಟಡಗಳು ಮಾತ್ರ ಕಂಡುಬರುತ್ತವೆ. ಗ್ರಾಮ ಮಟ್ಟದಲ್ಲಿ ಗ್ರಾಮಸ್ಥರೇ ಸೈನಿಕರಾಗಿ ತಮ್ಮ ಗ್ರಾಮವನ್ನು ರಕ್ಷಿಸಿಕೊಳ್ಳುತ್ತಿದ್ದರಿಂದ ಪ್ರತ್ಯೇಕವಾಗಿ ಸೈನಿಕ ವರ್ಗವೇನು ಇರುತ್ತಿರಲಿಲ್ಲ. ಆದರೆ ತುಮಕೂರು ಜಿಲ್ಲೆಯಲ್ಲಿ ಇಂದು ಯಾವ ಕೋಟೆ –ಕೊತ್ತಲದಲ್ಲಿಯೂ ಸೈನಿಕರ ವಸತಿ ನಿವೇಶನದ ಕಟ್ಟಡ ಪೂರ್ಣ ಪ್ರಮಾಣದಲ್ಲಿ ಕಂಡುಬರುವುದಿಲ್ಲ. ಹಾಗಾಗಿ ಕೇವಲ ತಳಪಾಯದ ಅವಶೇಷ ಮಾತ್ರ ಇರುವ ಕಟ್ಟಡ ಸೈನಿಕರಿಗೆ ಸಂಬಂಧಿಸಿದ್ದಾಗಿದೆ ಎಂದು ನಿರ್ದಿಷ್ಟವಾಗಿ ಗುರುತಿಸಲು ಸಾಧ್ಯವಿಲ್ಲ. ಆದರೆ ಸೈನಿಕರ ಜೀವನ ನಿರ್ವಹಣೆಗಾಗಿ ಪಾಳೆಯಗಾರರು ಉಂಬಳಿಯಾಗಿ ನೀಡುತ್ತಿದ್ದ ಕೋಟೆ ಮಾನ್ಯ ಇಂದಿಗೂ ಅದೇ ಹೆಸರಿನಲ್ಲಿ ಕರೆಯಲ್ಪಡುತ್ತಿದೆ.

೫.೧೦. ತೋಪುಗಳು (ಫಿರಂಗಿ)

ಭಾರತೀಯರಿಗೆ ಫಿರಂಗಿಗಳನ್ನು ಪರಿಚಯಿಸಿದವರೇ ಆಫ್ಘನ್ನರು. ಇವುಗಳ ಬಳಕೆಯಿಂದ ಯುದ್ಧದ ಗತಿಯೇ ಬದಲಾಗುತ್ತಿತ್ತು. ಹಾಗಾಗಿಯೇ ವಿಜಯನಗರ ಸಾಮ್ರಾಜ್ಯವು ಬಹುಮನಿಗಳ ಬಳಿ ಇದ್ದ ಫಿರಂಗಿ ಪಡೆಯಿಂದ ಅವಸಾನ ಹೊಂದಿತ್ತು. ದಖ್ಖನ್ ಪ್ರಾಂತ್ಯಕ್ಕೆ ಫಿರಂಗಿಗಳನ್ನು ಬಹುಮನಿಗಳಿಂದ ಪರಿಚಯಿಸಿದ್ದರಿಂದ ವಿಜಯನಗರದ ಅರಸರು ಸಹ ಫಿರಂಗಿಗಳ ನಿರ್ಮಾಣಕ್ಕೆ ಮುಂದಾದರು. ಇದರ ಪ್ರತಿಫಲವೇ ಜಿಲ್ಲೆಯ ಬಹುತೇಕ ಕೋಟೆ–ಕೊತ್ತಲಗಳಲ್ಲಿ ಫಿರಂಗಿಗಳನ್ನು

ಕಾಣಲು ಸಾಧ್ಯವಾಗಿದೆ. ಏಕೆಂದರೆ ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಪಾಳೆಯಪಟ್ಟುಗಳು ವಿಜಯನಗರದ ಸಾರ್ವಭೌಮತ್ವವನ್ನು ಒಪ್ಪಿಕೊಂಡಿದ್ದರು. ಹಾಗಾಗಿ ಗಡಿ ಪ್ರಾಂತ್ಯದ ರಕ್ಷಣೆಗೆ ಫಿರಂಗಿ ಪಡೆಯನ್ನು ಹೊಂದಿರಲು ಅನುಮತಿ ನೀಡಿದ್ದರು. ಇದರ ಕುರುಹಾಗಿಯೇ ದೇವರಾಯನದುರ್ಗ, ಮಧುಗಿರಿ, ಮಿಡಿಗೇಶಿ, ಭಸ್ಮಾಂಗಿ, ಸಿರಾ, ಪಾವಗಡ, ನಿಡುಗಲ್ಲು, ಹುತ್ತರೀದುರ್ಗ, ಹುಲಿಯೂರುದುರ್ಗ, ಚೆನ್ನರಾಯನದುರ್ಗ ಮೊದಲಾದ ಕೋಟೆಗಳಲ್ಲಿ ಫಿರಂಗಿ ಕಿಂಡಿ, ಗೋಡೆಯ ಮೇಲ್ಭಾಗವೇ ಗಾರೆಯ ಮದ್ದಿನ ಮನೆ, ಫಿರಂಗಿ ವೇದಿಕೆಗಳು ಕಂಡು ಬರುತ್ತವೆ. ನಿಡುಗಲ್ಲು, ಮುಗದಾಳಬೆಟ್ಟ, ಪಾವಗಡ, ಮಿಡಿಗೇಶಿ, ಮಧುಗಿರಿಗಳಲ್ಲಿ ಫಿರಂಗಿಗಳನ್ನು ಕಾಣಬಹುದು. ಇಂದಿಗೂ ಟಿಪ್ಪುವಿನ ಕಾಲಕ್ಕೆ ಫಿರಂಗಿಗಳ ಬಳಕೆ ಹೆಚ್ಚಾಗಿದ್ದು ಮಧುಗಿರಿ, ಮಿಡಿಗೇಶಿ, ಚೆನ್ನರಾಯನದುರ್ಗ, ಭಸ್ಮಾಂಗಿ, ಪಾವಗಡ, ಹುತ್ತರೀದುರ್ಗ, ಹುಲಿಯೂರುದುರ್ಗ, ಸಿರಾ ಕೋಟೆಗಳ ವಿನ್ಯಾಸದಿಂದ ತಿಳಿಯುತ್ತದೆ.

೫.೧೧. ಭಿತ್ತಿಶಿಲ್ಪಗಳು

ನಮ್ಮ ಹಿರಿಯರು ಯಾವುದೇ ನಿರ್ಮಿತಿಯನ್ನು ಮಾಡಿದರೂ ಅದರ ಹಿಂದೆ ವೈಜ್ಞಾನಿಕ ಸತ್ಯ ಅಡಗಿರುತ್ತದೆ. ಈ ರೀತಿಯ ವೈಜ್ಞಾನಿಕ ತಳಹದಿಯನ್ನು ಭಿತ್ತಿಶಿಲ್ಪಗಳಲ್ಲೂ ಕಾಣಬಹುದು. ಏಕೆಂದರೆ ಕೋಟೆಯ ಹೊರ ಭಿತ್ತಿ ಇಲ್ಲವೇ ದ್ವಾರಗಳಲ್ಲಿ ಯಾವುದಾದರೂ ಉಬ್ಬುಶಿಲ್ಪ ಇದೆ ಎಂದರೆ ಅದು ಕೋಟೆಯ ಒಳಗಿನವರಿಗೆ ಎಚ್ಚರಿಕೆಯ ಸಂಕೇತವಾಗಿ ಬಳಕೆಯಾಗುತ್ತದೆ ಕೋಟೆಗಳಲ್ಲಿ ಹೆಚ್ಚಾಗಿ ಕೂರ್ಮ, ಮತ್ಸ್ಯ, ಯಾಳಿ, ನಾಗ, ಗಜ, ಒಂಟೆ, ಅಶ್ವ, ವೃಶ್ಚಿಕ, ಗಜಲಕ್ಷ್ಮಿ, ಊರ್ದ್ವಮುಖ, ರಣರಂಗದ ದೃಶ್ಯಾವಳಿ, ದ್ವಾರಪಾಲಕರು, ಹೂಬಳ್ಳಿ ಲತೆಗಳಿಂದ ಅಲಂಕೃತಗೊಳಿಸಿರುವುದು ನಿಡುಗಲ್ಲು, ಪಾವಗಡ, ಮಧುಗಿರಿ, ಮಿಡಿಗೇಶಿ, ದೇವರಾಯನದುರ್ಗ, ಚಿಕ್ಕನಾಯಕನಹಳ್ಳಿ, ಹಾಗಲವಾಡಿ, ಕುಣಿಗಲ್, ಚೆನ್ನರಾಯನದುರ್ಗ, ಸಿರಾ, ಭಸ್ಮಾಂಗಿ ಮೊದಲಾದೆಡೆ ಕಂಡುಬರುತ್ತವೆ. ಉಳಿದಂತೆ ಬಹುತೇಕ ಕೋಟೆ-ಕೊತ್ತಲಗಳು ಸ್ಥಳೀಯವಾಗಿ ಸಿಗುವಂತಹ ಕಾಡುಗಲ್ಲುಗಳನ್ನು ಗೋಡೆ ನಿರ್ಮಾಣಗೊಂಡಿರುವುದರಿಂದ ಯಾವುದೇ ರೀತಿಯ ಭಿತ್ತಿ ಶಿಲ್ಪಗಳನ್ನು ಅವಕಾಶ ಮಾಡಿಕೊಟ್ಟಿಲ್ಲ. ವಿಜಯನಗರ ಸಾಮ್ರಾಜ್ಯದ ಸಮಕಾಲೀನರಾಗಿ ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಪಟ್ಟುಗಳ ರಾಜಧಾನಿ ಕೇಂದ್ರಗಳಲ್ಲಿ ಮಾತ್ರ ಈ ಉಬ್ಬು ಕೆತ್ತನೆಗಳು ಕಂಡುಬರುತ್ತವೆ. ಹೈದರ್ ಟಿಪ್ಪುವಿನಿಂದ ಜೀರ್ಣೋದ್ಧಾರಗೊಂಡ ಕೋಟೆಗಳಲ್ಲಿ ಹೂಬಳ್ಳಿ ಲತೆಗಳ ಅಲಂಕಾರಗಳು ಹೆಚ್ಚಾಗಿ ಕಂಡುಬರುತ್ತದೆ.

ಬೇರೆ ಬೇರೆ ಕಾರಣಗಳಿಂದಾಗಿ ಈ ಪ್ರತಿಶಿಲ್ಪವು ಕೆತ್ತಲ್ಪಡುತ್ತಿದ್ದದು ಅವುಗಳ ವಿಶ್ಲೇಷಣೆಯಿಂದ ತಿಳಿಯುತ್ತದೆ. ಕೂರ್ಮವು ಜಗತ್ತಿನ ಪ್ರಾಣಿ ಸಂಕುಲಗಳಲ್ಲೇ ತನ್ನ ದೇಹದ ಮೇಲ್ಪದರ ಗಟ್ಟಿಮುಟ್ಟಾದ ಕವಚವಿರುತ್ತದೆ. ಆನೆಯ ಕಾಲುಗಳಿಂದ ತುಳಿಸಿದರೂ ಸಾಯಿಸಲು ಸಾಧ್ಯವಾಗದಂತಹ ಚರ್ಮದ ಹೊದಿಕೆ ಹೊಂದಿರುತ್ತದೆ. ಅಲ್ಲದೆ ಕೂರ್ಮಕ್ಕೆ ಇರುವ ಎಂಟು ಕಾಲುಗಳು ಎಂಟು ದಿಕ್ಕುಗಳನ್ನು ಸೂಚಿಸುವುದರಿಂದ ಅಷ್ಟ ದಿಕ್ಕುಗಳಿಗೂ ಹರಡಿಕೊಂಡಿರುವ ಕೋಟೆ ಕೂರ್ಮದಂತೆ ಬಲಿಷ್ಠವಾಗಿರಲೆಂದು ಈ ಶಿಲ್ಪವನ್ನು ಬಿಡಿಸಲಾಗುತ್ತಿತ್ತು. ಮತ್ಸ್ಯ ಶಿಲ್ಪವು ಮತ್ಸ್ಯೇಂದ್ರನ ಆರಾಧನೆ

ಮತ್ತು ಮತ್ಸ್ಯ ನ್ಯಾಯವನ್ನು ತಿಳಿಸುತ್ತದೆ. ಅಂದರೆ ಸಣ್ಣ ಮೀನನ್ನು ದೊಡ್ಡ ಮೀನು ನುಂಗುವಂತೆ ಕೋಟೆಯು ದೊಡ್ಡ ಮೀನಿನಂತೆ ವಿಸ್ತಾರ ಮತ್ತು ಬಲಿಷ್ಠವಾದ ಕೋಟೆಯನ್ನು ಹೊಂದಿದೆ ಎಂಬುದನ್ನು ಶತ್ರು ಪಾಳೆಯಕ್ಕೆ ಸೂಚಿಸುವ ಸಂಕೇತವಾಗಿಯೂ ಬಳಸಲಾಗುತ್ತಿತ್ತು. ಜೊತೆಗೆ ಕೋಟೆಯ ಒಳಗಿನ ಕಂದಕದಲ್ಲಿ ಮೀನಿನಂತಹ ಜಲಚರ ಜೀವಸಂಕುಲ ಇದ್ದವೆಂಬುದನ್ನು ಸೂಚಿಸುವ ಉದ್ದೇಶವೂ ಇದ್ದಿರುವ ಸಾಧ್ಯತೆಯೂ ಇದೆ. ನಾಗಶಿಲ್ಪವು ಕೋಟೆ ಗೋಡೆಗಳಲ್ಲಿ ಇತ್ತೆಂದರೆ ಆ ಕೋಟೆಯಲ್ಲಿ ಸುಬ್ರಮಣ್ಯನ ಆರಾಧನೆಯಿತ್ತು ಎಂಬುದನ್ನು ಸೂಚಿಸುತ್ತದೆ. ರಕ್ಷಣೆಯ ದೃಷ್ಟಿಯಿಂದ ಶತ್ರು ಪಾಳೆಯಕ್ಕೆ ಕೋಟೆಯ ಒಳಭಾಗ ನಾಗ ಜಾತಿಗೆ ಸೇರಿದ ವಿಷಜಂತುಗಳಿಂದ ರಕ್ಷಣೆ ಪಡೆಯುತ್ತಿದೆ ಎಂಬ ಎಚ್ಚರಿಕೆಯ ಸಂದೇಶವನ್ನು ರವಾನಿಸುವ ಉದ್ದಶೇವೂ ಇದ್ದಿತ್ತು. ಏಕೆಂದರೆ ಕೋಟೆಯಲ್ಲಿ ಇಂತಹ ವಿಷ ಜಂತುಗಳಿವೆ ಎಂಬ ಸುದ್ದಿಯನ್ನು ಮೊದಲೇ ಶತ್ರು ಪಾಳೆಯಕ್ಕೆ ತಿಳಿಸುವುದರಿಂದ ಅವರ ಮನೋಸ್ಥೈರ್ಯವನ್ನು ಕುಗ್ಗಿಸಿ ಅವರ ಮೇಲೆ ಸುಲಭವಾಗಿ ಪ್ರತಿ ದಾಳಿ ಮಾಡಿ ಹಿಮ್ಮೆಟ್ಟಿಸುವ ತಂತ್ರ ಇದರ ಹಿಂದೆ ಅಡಗಿರುತ್ತಿತ್ತು. ಅಲ್ಲದೇ ನಾಗ ಪ್ರಕೃತಿ ಆರಾಧನೆಯ ಸಂಕೇತವಾಗಿರುವುದರಿಂದ ಕೋಟೆಯ ಒಳಗಿನವರು ಪ್ರಕೃತಿ ಆರಾಧಕರಾಗಿದ್ದರು ಎಂಬ ಅಂಶವನ್ನು ಗ್ರಹಿಸಲು ಸಾಧ್ಯತೆಯಿದೆ. ವೃಶ್ಚಿಕ ಶಿಲ್ಪವು ಸಾಮಾನ್ಯವಾಗಿ ಕೋಟೆಯ ದ್ವಾರಗಳಲ್ಲಿ ಮಾತ್ರ ಹೆಚ್ಚಾಗಿ ಇರುವುದರಿಂದ ಶತ್ರು ಪಾಳೆಯಕ್ಕೆ ದ್ವಾರದ ಎರಡೂ ಬದಿಯಲ್ಲಿ ಚೇಳಿನ ಎರಡೂ ಕೊಂಡಿಗಳಲ್ಲಿ ಅಡಗಿರುವ ವಿಷದಂತೆ ಕಾವಲು ಪಡೆಯು ಮಾರಣಾಂತಿಕ ದಾಳಿಯನ್ನು ಮಾಡುತ್ತದೆ ಎಂಬ ಮಾಹಿತಿಯನ್ನು ರವಾನಿಸುವ ಉದ್ದೇಶ ಇದರ ಹಿಂದೆ ಇದ್ದಿತ್ತೆಂಬುದನ್ನು ಒಪ್ಪಿಕೊಳ್ಳಬೇಕಾಗುತ್ತದೆ. ಏಕೆಂದರೆ ಜಿಲ್ಲೆಯ ಪ್ರತಿ ಕೋಟೆಯ ಮುಖ್ಯ ದ್ವಾರಗಳ ಒಳಬದಿಯ ಎರಡೂ ಕಡೆ ಕಾವಲು ಮಂಟಪಗಳಿರುವುದರಿಂದ ಸ್ಪಷ್ಟವಾಗುತ್ತದೆ. ಗಜ ಬಲಾಢ್ಯತೆಯ ಸಂಕೇತವಾಗಿ ಗುರುತಿಸಲ್ಪಟ್ಟಿರುವುದರಿಂದ ಕೋಟೆಯ ಒಳಗೆ ಬಲಿಷ್ಠ ಗಜಪಡೆ ಇದ್ದಿರಬಹುದೆಂಬ ಸಂದೇಹ ಶತ್ರುಗಳಿಗೆ ಉಂಟಾಗುವಂತೆ ಮಾಡುವ ಉದ್ದೇಶವೂ ಅದರ ಹಿಂದಿತ್ತು. ಜಿಲ್ಲೆಯ ರಾಜಧಾನಿ ಕೇಂದ್ರಿತ ಕೋಟೆಗಳಲ್ಲಿ ನಿರ್ಮಾಣಗೊಂಡ ಸುಮಾರು ೧೦ರಿಂದ ೨೦ ಮೀ.ವರೆಗೂ ಎತ್ತರ, ೫ರಿಂದ ೧೦ ಮೀ.ವರೆಗೂ ಅಗಲವಾಗಿರುವ ಮುಖ್ಯ ದ್ವಾರಗಳಿಂದ ಸ್ಪಷ್ಟವಾಗುತ್ತದೆ. ಊರ್ಧ್ವಮುಖ ಶಿಲ್ಪವು ಸಾಮಾನ್ಯವಾಗಿ ದ್ವಾರದ ಮೇಲ್ಭಾಗ ನಿರ್ಮಿಸಲಾಗುತ್ತಿದ್ದರಿಂದ ಶತ್ರು ಪಾಳೆಯ ಈ ಊರ್ಧ್ವಮುಖವನ್ನು ಗಮನಿಸಿಯೇ ಕೋಟೆಯ ಅಭೇದ್ಯತೆಯನ್ನು ತಿಳಿಯಪಡಿಸುವ ಉದ್ದೇಶವೂ ಇತ್ತು. ಗಜಲಕ್ಷ್ಮಿ ಶಿಲ್ಪವನ್ನು ದ್ವಾರದ ಲಲಾಟ ಬಿಂಬದಲ್ಲಿ ಚಿತ್ರಿಸುವ ಉದ್ದೇಶ ಗಜಲಕ್ಷ್ಮಿ ಶಕ್ತಿ ಸಂಪನ್ಮೂಲಗಳನ್ನು ನೀಡುವ ದೇವತೆ ಆಗಿರುವುದರಿಂದ ಕೋಟೆಯಲ್ಲಿ ಸದಾ ಕಾಲ ಸಿರಿಸಂಪತ್ತುಗಳು ತುಂಬಿರಲೆಂದು ಬಿಡಿಸುತ್ತಿದ್ದರು. ಕೋಟೆಯ ಭಿತ್ತಿಯಲ್ಲಿ ಗಜಪಡೆ, ಅಶ್ವಪಡೆ, ಒಂಟೆಪಡೆ, ರಥಪಡೆ, ಕಾಲ್ದಳಗಳನ್ನು ಚಿತ್ರಿಸುವ ಉದ್ದೇಶವೂ ಶತ್ರುಗಳಿಗೆ ಕೋಟೆಯ ಒಳಗಿನ ಅಗಾಧ ಸೈನಿಕ ಶಕ್ತಿಯನ್ನು ತೋರ್ಪಡಿಸಿ ಅವರಲ್ಲಿ ಮಾನಸಿಕ ಖಿನ್ನತೆಯನ್ನು ಉಂಟುಮಾಡುವಂತಹದ್ದೆ ಆಗಿತ್ತು.

ಹೀಗೆ ತುಮಕೂರು ಜಿಲ್ಲೆಯ ಪ್ರತಿ ಕೋಟೆ ಕೊತ್ತಲಗಳನ್ನು ಕಾಲಕಾಲಕ್ಕೆ ಬದಲಾದ ಯುದ್ಧ ನೀತಿಗಳಿಗೆ ಅನುಗುಣವಾಗಿ ವಿವಿಧ ತಂತ್ರೋಪಾಯಗಳನ್ನು ಹೆಣೆಯುತ್ತಿದ್ದರೆಂಬ ಅಂಶ ರಕ್ಷಣಾ ಸಂಬಂಧಿ ಸ್ಮಾರಕಗಳಿಂದ ಗೋಚರವಾಗುತ್ತದೆ. ಆದರೂ ಈ ರಕ್ಷಣಾ ಸಂಬಂಧಿ ಸ್ಮಾರಕಗಳ ಜೊತೆ ಜೊತೆಗೆ ಅಲ್ಲಿಯ ಪ್ರಾಕೃತಿಕ ರಚನೆಯು ಸಹ ಬಹು ಮುಖ್ಯ ಪಾತ್ರವಹಿಸುತ್ತಿತ್ತು ಎಂಬುದು ಜಿಲ್ಲೆಯ ಬೆಟ್ಟಗುಡ್ಡಗಳ ಕಡಿದಾದ ರಚನೆಯಿಂದ ವೇದ್ಯವಾಗುತ್ತದೆ. ಆದುದರಿಂದ ಪ್ರಸ್ತುತ ಮಹಾಪ್ರಬಂಧದಲ್ಲಿ ಸ್ವಾಭಾವಿಕ ಅಭೇದ್ಯತೆಯೊಂದಿಗೆ ರಕ್ಷಣಾ ಸಂಬಂಧಿ ಸ್ಮಾರಕಗಳ ಸಮ್ಮಿಳಿತವು ಹೇಗೆ ಒಟ್ಟೊಟ್ಟಿಗೆ ಕಾರ್ಯನಿರ್ವಹಿಸುತ್ತಿತ್ತು ಎಂಬುದನ್ನು ಸ್ಪಷ್ಟವಾಗಿ ನಿರೂಪಿಸಲಾಗಿದೆ.

ಕೊನೆ ಟಿಪ್ಪಣಿಗಳು

೧. ಮಹದೇವನಾ ಜೋಶಿ, ೨೦೧೧, ಪ್ರಾಚೀನ ಭಾರತೀಯ ರಾಜನೀತಿ, ಪು-೯೭.

೨. Shamasastry r.,1916, koutiliya's Arthasasatra, p-53.

೩. ಶ್ರೀಧರ ಹೆಚ್.ಜಿ., ೨೦೦೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ, ಪ-೧೫೪,೧೫೫.

೪. ಸಚ್ಚಿದಾನಂದ ಶಂಕರ ಭಾರತೀಸ್ವಾಮಿ, ೨೦೦೫, ಕೌಟಿಲೀಯ ಅರ್ಥಶಾಸ್ತ್ರ, ಪ-೯೪.

೫. Shamasastry r.,1916, koutiliya's Arthasasatra, p-53.

೬. ಸಚ್ಚಿದಾನಂದ ಶಂಕರ ಭಾರತೀಸ್ವಾಮಿ, ೨೦೦೫, ಪೂರ್ವೋಕ್ತ, ಪು-೯೭.

೭. ಅದೇ, ಪು-೧೫೮.

ಅಧ್ಯಾಯ ೬

ಸಮಾರೋಪ

ಜಗತ್ತಿನಲ್ಲಿ ಪ್ರತಿಯೊಂದು ಜೀವಿಯು ತನ್ನನ್ನು ತಾನು ರಕ್ಷಿಸಿಕೊಳ್ಳಲು ಸದಾ ಕಾಲವೂ ಒಂದಲ್ಲ ಒಂದು ರೀತಿಯಲ್ಲಿ ಪ್ರಯತ್ನ ಪಡುತ್ತಿರುತ್ತದೆ. ಮನಷ್ಯನು ಸಹ ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗಿದಂತೆ ಒಂದೆಡೆ ನೆಲೆ ನಿಂತು ಗ್ರಾಮ ಸಮುದಾಯ ಜೀವನವನ್ನು ನಡೆಸಲು ಮುಂದಾದನು. ಆ ಮೂಲಕ ತನ್ನ ಸಮುದಾಯದ ರಕ್ಷಣೆಗಾಗಿ ಆರಂಭದಲ್ಲಿ ಮಣ್ಣಿನ ದಿಬ್ಬ, ಮರದ ಬೇಲಿ, ಆಳವಾದ ಕಂದಕಗಳನ್ನು ನಿರ್ಮಿಸಿಕೊಳ್ಳುತ್ತಿದ್ದನು. ಕ್ರಮೇಣ ನಗರ–ರಾಜ್ಯಗಳ ಹುಟ್ಟು ಕೋಟೆ–ಕೊತ್ತಲಗಳು ಮಹತ್ವದ ಸ್ಥಾನ ಗಳಿಸಿಕೊಳ್ಳುವಂತೆ ಮಾಡಿತು. ಹಾಗಾಗಿ ಅದು ರಾಜ್ಯಗಳ ಅಳಿವು ಉಳಿವಿನ ಸಂಕೇತವಾಗಿ ಪರಿಗಣಿಸುವ ಮಟ್ಟಕ್ಕೆ ಬಂದು ಆಕಾಶಮಾರ್ಗದಲ್ಲಿ ವೈಮಾನಿಕ ದಾಳಿ ನಡೆಸುವಂತಹ ತಂತ್ರಜ್ಞಾನ ಹಾಗೂ ಮಾರಕಾಸ್ತ್ರಗಳು ಆವಿಷ್ಕಾರಗೊಳ್ಳುವವರೆಗೂ ಪ್ರಾಮುಖ್ಯತೆ ಪಡೆದುಕೊಂಡಿತ್ತು. ಆದರೂ ಇಂದಿಗೂ ದೇಶದ ಗಡಿ ರಕ್ಷಣೆಗಾಗಿ ಕಲ್ಲಿನ ಗೋಡೆಗೆ ಬದಲಾಗಿ ಕಬ್ಬಿಣದ ಬೇಲಿ ಮತ್ತು ಲೇಸರ್ ಕಿರಣಗಳನ್ನು ಕಾಪುಗೋಡೆಗಳಂತೆ ಬಳಸಿಕೊಳ್ಳುತ್ತಿರುವುದು ಕೋಟೆಗಳ ಮಹತ್ವವನ್ನು ತಿಳಿಯಪಡಿಸುತ್ತದೆ. ಹೀಗೆ ಪ್ರಭುತ್ವಕೇಂದ್ರಿತ ಕೋಟೆಗಳು ನಿರಂತರ ಬದಲಾವಣೆಗೆ ಒಳಪಡುತ್ತಿದ್ದರೂ, ಸಮುದಾಯ ಕೇಂದ್ರಿತ ಅಂದರೆ ಗ್ರಾಮ ರಕ್ಷಣಾ ವಾಸ್ತು ಮಾತ್ರ ಪ್ರಾಚೀನ ಕಾಲದಿಂದ ೨೦ನೆಯ ಶತಮಾನದವರೆಗೂ ಯಾವುದೇ ಬದಲಾವಣೆ ಹೊಂದದೆ ಗ್ರಾಮದ ಸುತ್ತಲೂ ಕೇವಲ ಕಾಪುಗೋಡೆಗಳನ್ನಷ್ಟೇ ಹೊಂದಿರುತ್ತಿದ್ದವು. ಇಂತಹ ಕಾಪುಗೋಡೆಗಳನ್ನು ಆಯಾಯ ಗ್ರಾಮ ಸಮುದಾಯದವರಿಂದಲೇ ನಿರ್ಮಾಣ ಮತ್ತು ಅದರ ಜೀರ್ಣೋದ್ಧಾರ ಕಾರ್ಯ ನಡೆಯುತ್ತಿತ್ತು.

ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪ್ರತಿ ಸಂಸ್ಥಾನವು ಕೋಟೆ–ಕೊತ್ತಲ, ಬುರುಜು, ಸೈನಿಕ ಕೇಂದ್ರ ಮತ್ತು ಪುರ ಎಂಬ ಪ್ರದೇಶಗಳನ್ನು ತಮ್ಮ ಎಲ್ಲೆಯ ಸುತ್ತಲೂ ಗಡಿದುರ್ಗಗಳನ್ನಾಗಿ ಹೊಂದಿದ್ದವೆಂಬುದು ಇಲ್ಲಿ ದೊರೆತ ಐತಿಹ್ಯ, ಸ್ಥಳನಾಮ ನಿಷ್ಪತ್ತಿ, ಶಾಸನ, ಸ್ಥಳ ಪುರಾಣ, ಕಥೆ, ಕಾವ್ಯಗಳಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಪೂರಕವಾಗಿ ಗಡಿದುರ್ಗಗಳನ್ನು ಪಡೆಯಲು ಇವರು

ನಿರಂತರ ಸಂಘರ್ಷದಲ್ಲಿ ತೊಡಗಿರುತ್ತಿದ್ದರೆಂಬ ಅಂಶ ಎರಡು ಮೂರು ಹಂತಗಳಲ್ಲಿ ಜೀರ್ಣೋದ್ದಾರಗೊಂಡ ಕೋಟೆಯ ಲಕ್ಷಣಗಳಿಂದ ಸ್ಪಷ್ಟವಾಗುತ್ತದೆ. ಜಿಲ್ಲೆಯಲ್ಲಿ ಯಾವುದೇ ನದಿ ಸಂಚಯಗಳಿಲ್ಲದ ಕಾರಣ ಅಂತಹ ಹೇಳಿಕೊಳ್ಳುವ ಸಾಮ್ರಾಜ್ಯವಾಗಲಿ, ಇಲ್ಲವೇ ದಖ್ಖನ್‌ನ ಚರಿತ್ರೆಗೆ ರಾಜಕೀಯ ತಿರುವು ನೀಡುವಂತಹ ಯಾವ ರಾಜಕೀಯ ಘಟನೆಯಾಗಲಿ ಸಂಭವಿಸಿಲ್ಲ. ಕೇವಲ ಉತ್ತರ ಇಲ್ಲವೆ ದಕ್ಷಿಣದ ರಾಜ್ಯಗಳಿಗೆ ಗಡಿ ಪ್ರಾಂತ್ಯವಾಗಿಯೇ ಕಾರ್ಯ ನಿರ್ವಹಿಸುತ್ತಿತ್ತು. ಹಾಗಾಗಿಯೇ ಜಿಲ್ಲೆಯಲ್ಲಿ ಯಾವ ಸ್ವತಂತ್ರ ಅರಸು ಮನೆತನ ಏಳಿಗೆ ಹೊಂದಲು ಪೂರಕವಾದ ವಾತಾವರಣ ಸೃಷ್ಟಿಯಾಗಿಲ್ಲ. ಕೇವಲ ಸ್ವತಂತ್ರ ಸಾಮ್ರಾಜ್ಯಗಳ ಸಾಮಂತರಾಗಿ ಆಳ್ವಿಕೆ ನಡೆಸಿದ ಸಣ್ಣಪುಟ್ಟ ಮನೆತನಗಳ ಬಗೆಗೆ ಸಾಕಷ್ಟು ಉಲ್ಲೇಖಗಳು ಸಿಗುತ್ತವೆ. ಆದರೆ ಇಂತಹ ಸಣ್ಣ ಪುಟ್ಟ ಮನೆತನಗಳಿಗೆ ಇಷ್ಟೊಂದು ಸಂಖ್ಯೆಯ ಕೋಟೆ ಕೊತ್ತಲಗಳನ್ನು ನಿರ್ಮಿಸಲು ಆದಾಯದ ಮೂಲ ಏನಾಗಿತ್ತು, ಅದು ಎಲ್ಲಿಂದ ಬರುತ್ತಿತ್ತು ಎಂಬಂತಹ ಸಂದೇಹಗಳು ಸಹಜವಾಗಿ ಉಂಟಾಗುತ್ತವೆ. ಪ್ರತಿ ಸಂಸ್ಥಾನದಲ್ಲಿಯೂ ಸಂಪತ್ತಿನ ಮೂಲವನ್ನು ಸೂಚಿಸುವ ಹೊನ್ನು, ಸುವರ್ಣ, ಹೇಮ, ಕನಕ, ಬಂಗಾರು ಎಂಬ ಸ್ಥಳನಾಮ ಹಾಗೂ ಅದಕ್ಕೆ ಪೂರಕವಾದ ಐತಿಹ್ಯಗಳು ಕಂಡುಬರುತ್ತವೆ. ಆದುದರಿಂದ ಪ್ರತಿ ಸಂಸ್ಥಾನವೂ ವಿಜಯನಗರ ಕಾಲಕ್ಕೆ ಚಿನ್ನದ ಗಣಿಗಾರಿಕೆ ಇಲ್ಲವೆ ಚಿನ್ನದ ಉದ್ಯಮದಲ್ಲಿ ತೊಡಗಿದ್ದವೆಂಬ ಅಂಶ ಸ್ಪಷ್ಟವಾಗಿದೆ. ಏಕೆಂದರೆ ಜಿಲ್ಲೆಯಲ್ಲಿ ೧೯೦೨ರಲ್ಲಿ ಬೆಳ್ಳಾವಿಯಲ್ಲಿ ಗಣಿ ಮತ್ತು ಭೂವಿಜ್ಞಾನ ಸರ್ವೇಕ್ಷಣಾ ಇಲಾಖೆ ಚಿನ್ನದ ನಿಕ್ಷೇಪವನ್ನು ಪತ್ತೆ ಹಚ್ಚಿತು. ಅದೇ ರೀತಿ ಹುಲಿಯೂರುದುರ್ಗದ ಬಳಿ ಮಳೆ ಬಂದಾಗ ಹಳ್ಳಗಳಲ್ಲಿ ಚಿನ್ನದ ಅದಿರು ಹರಿದುಕೊಂಡು ಬರುವುದನ್ನು ಪತ್ತೆ ಮಾಡಿರುವುದು. ನೆರೆಯ ಆಂಧ್ರದ ಬಂಗಾರು ರಾಮಗಿರಿ ಚಿನ್ನದ ನಿಕ್ಷೇಪ ಜಿಲ್ಲೆಯ ಗಡಿಗೆ ೩೦ ಕಿ.ಮೀ., ಕೋಲಾರದ ಚಿನ್ನದ ನಿಕ್ಷೇಪ ಜಿಲ್ಲೆಗೆ ೧೨೦ಕಿ.ಮೀ. ಅಂತರದಲ್ಲಿ ಇರುವುದರಿಂದ ಜಿಲ್ಲೆಯ ಹಲವು ಕೇಂದ್ರಗಳಲ್ಲಿ ಚಿನ್ನದ ವ್ಯಾಪಾರ ಅಥವಾ ಚಿನ್ನದ ಗಣಿಗಾರಿಕೆ ನಡೆಯುತ್ತಿತ್ತು ಎಂಬ ಅಂಶ ಇಂದಿನ ಸಂಪತ್ತಿನ ಮೂಲವನ್ನು ಸೂಚಿಸುವ ಹಲವು ಸ್ಥಳನಾಮಗಳಿಂದ ಸ್ಪಷ್ಟವಾಗುತ್ತದೆ. ಇದಕ್ಕೆ ಪೂರಕವಾಗಿ ಮಿಡಿಗೇಶಿ, ನಿಡುಗಲ್ಲು, ಚಿಕ್ಕನಾಯಕನಹಳ್ಳಿ ಮೊದಲಾದ ಶಾಸನಗಳು ಚಿನ್ನದ ವ್ಯಾಪಾರ ನಡೆಯುತ್ತಿದ್ದನ್ನು ಉಲ್ಲೇಖಿಸುತ್ತವೆ. ಆದುದರಿಂದ ಜಿಲ್ಲೆಯಲ್ಲಿ ೩೦೦ಕ್ಕೂ ಹೆಚ್ಚು ಕೋಟೆ–ಕೊತ್ತಲಗಳು ಕಂಡುಬರುತ್ತದೆ. ಅಲ್ಲದೆ ಮೆಕೆಂಜಿ ಮಧುಗಿರಿ ಪ್ರಾಂತ್ಯ ಒಂದರಲ್ಲೇ ೨೭೨ ಕೋಟೆ ಕೊತ್ತಲ, ಬುರುಜುಗಳಿದ್ದವೆಂದು ತನ್ನ ಬರವಣಿಗೆಗಳಲ್ಲಿ ದಾಖಲಿಸಿದ್ದಾನೆ. ಅಂದರೆ ಇಷ್ಟೊಂದು ಪ್ರಮಾಣದ ಕೋಟೆಗಳ ನಿರ್ಮಾಣಕ್ಕೆ ಚಿನ್ನದ ವ್ಯಾಪಾರ ಇಲ್ಲವೆ ಗಣಿಗಾರಿಕೆಯಿಂದ ಬಂದ ಆದಾಯವೇ ಮುಖ್ಯ ಕಾರಣವಾಗಿತ್ತು. ಜಿಲ್ಲೆಯ ಎಲ್ಲ ಕೋಟೆ – ಕೊತ್ತಲ, ಬುರುಜು, ಸೈನಿಕ ಶಿಬಿರಗಳನ್ನು ರಾಜಧಾನಿ ಕೇಂದ್ರಿತ ಕೋಟೆ, ರಕ್ಷಣಾ ಕೇಂದ್ರಿತ ಕೋಟೆ, ಗ್ರಾಮ ರಕ್ಷಣಾ ವಾಸ್ತು, ಬುರುಜು ಎಂಬುದಾಗಿ ಅಧ್ಯಯನದ ಅನುಕೂಲಕ್ಕಾಗಿ

ವಿಭಾಗಿಸಿಕೊಂಡಿರುವುದರಿಂದ ಕೋಟೆಗಳೊಂದಿಗೆ ಸಾಮಾನ್ಯ ಜನರು ಹೊಂದಿದ್ದ ಸಂಬಂಧವನ್ನು ತಿಳಿಯಲು ಸಹಕಾರಿಯಾಗಿದೆ.

ಅಧ್ಯಯನದ ಫಲಿತಗಳು

ಯಾವುದೇ ಒಂದು ಅಧ್ಯಯನ ಅಥವಾ ಸಂಶೋಧನೆ ಮೌಲ್ಯಯುತವಾಗಿ ಇರಬೇಕೆಂದರೆ, ಅದರಲ್ಲಿ ಹೊಸದಾದ ಸಿದ್ಧಾಂತ ಇಲ್ಲವೆ, ಇರುವ ಸಿದ್ಧಾಂತವನ್ನು ಪರಿಷ್ಕರಿಸುವ ಕಾರ್ಯ ಮಾಡಬೇಕಾಗುತ್ತದೆ. ಪ್ರಸ್ತುತ ಮಹಾಪ್ರಬಂಧದಲ್ಲಿ ಜಿಲ್ಲೆಯ ಕೋಟೆ-ಕೊತ್ತಲ, ಸೈನಿಕ ಶಿಬಿರ, ಪುರಗಳ ಪ್ರಾಚೀನತೆಗೆ ಸಂಬಂಧಿಸಿದಂತೆ ಚಾರಿತ್ರಿಕತೆ, ರಚನೆ, ವಾಸ್ತುವಿನ್ಯಾಸ, ಲಕ್ಷಣ, ತಂತ್ರಗಾರಿಕೆ, ಮಹತ್ವ, ಅವುಗಳ ನಿರ್ಮಾಣದ ಹಿಂದಿನ ಉದ್ದೇಶ ಮೊದಲಾದ ಸಂಗತಿಗಳನ್ನು ಮೊದಲ ಬಾರಿಗೆ ತಲಸ್ಪರ್ಶಿಯಾಗಿ ಅಧ್ಯಯನ ಮಾಡಲಾಗಿದೆ.

ತುಮಕೂರು ಜಿಲ್ಲೆಯಲ್ಲಿರುವ ಎತ್ತರದ ಬೆಟ್ಟ-ಗುಡ್ಡ, ವಿಶಾಲ ಫಲವತ್ತಾದ ಬಯಲುಸೀಮೆ ಸಣ್ಣ ಪುಟ್ಟ ಹಲವು ಸಂಸ್ಥಾನಗಳ ಹುಟ್ಟಿಗೆ ಕಾರಣವಾಗಿದೆ. ಅದರ ಕುರುಹಾಗಿಯೇ ಇಂದು ೩೦೦ಕ್ಕೂ ಹೆಚ್ಚು ಕೋಟೆ-ಕೊತ್ತಲ, ಪುರ, ಸೈನಿಕ ಶಿಬಿರಗಳ ಅವಶೇಷಗಳು ಜಿಲ್ಲೆಯಲ್ಲಿ ಕಂಡುಬರುತ್ತವೆ. ಇಂತಹ ಅವಶೇಷಗಳನ್ನು ಶಾತವಾಹನರ ಕಾಲದಿಂದ ಪ್ರಸ್ತುತ ದಿನಮಾನಗಳವರೆಗೆ ಕ್ರಮಾನುಗತವಾಗಿ ಆಯಾಯ ವಿಷಯವಾರು ಶಾಸನ, ಸಾಹಿತ್ಯ, ಸ್ಥಳ ಪುರಾಣ, ಐತಿಹ್ಯ, ಮೌಖಿಕ ಕಾವ್ಯ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳಿಂದ ಜಿಲ್ಲೆಯ ಕೋಟೆ ಕೊತ್ತಲಗಳ ಚರಿತ್ರೆಯನ್ನು ವಿಶ್ಲೇಷಿಸಲಾಗಿದೆ. ಜಿಲ್ಲೆಯ ಕೋಟೆ ಕೊತ್ತಲ, ಪುರ, ಸೈನಿಕ ಶಿಬಿರಗಳ ಮಾಹಿತಿಗಳನ್ನು ಕ್ಷೇತ್ರಕಾರ್ಯದ ಮೂಲಕ ಸಂಗ್ರಹಿಸಿ ಅವುಗಳ ಹಿಂದಿನ ಸಾಮಾಜಿಕ, ರಾಜಕೀಯ, ಆರ್ಥಿಕ, ಧಾರ್ಮಿಕ, ಸಾಂಸ್ಕೃತಿಕ ಮೊದಲಾದ ಸಂಗತಿಗಳ ತಲಸ್ಪರ್ಶಿ ಅಧ್ಯಯನವನ್ನು ಮಾಡಲಾಗಿದೆ. ಜಿಲ್ಲೆಯಲ್ಲಿ ಆಳ್ವಿಕೆ ಮಾಡಿದ ಪ್ರತಿ ಸಂಸ್ಥಾನವು ಸಹ ತಮ್ಮ ಆರ್ಥಿಕ ಶಕ್ತಿಯ ಮಿತಿಯಲ್ಲಿ ಗಡಿ ಪ್ರಾಂತ್ಯದ ಸುತ್ತಲೂ ಕೋಟೆ ಕೊತ್ತಲ, ಸೈನಿಕ ಶಿಬಿರ ಮತ್ತು ಪುರಗಳನ್ನು ಹೊಂದಿದ್ದವೆಂಬುದನ್ನು ಐತಿಹ್ಯ, ಶಾಸನ, ಸ್ಥಳಪುರಾಣ, ಕೋಟೆಗಳ ಲಕ್ಷಣಗಳನ್ನಾಧರಿಸಿ ಸ್ಪಷ್ಟಪಡಿಸಲಾಗಿದೆ.

- ಪ್ರಸ್ತುತ ಅಧ್ಯಯನದ ಕ್ಷೇತ್ರಕಾರ್ಯದಲ್ಲಿ ಸೂಕ್ಷ್ಮಶಿಲಾಯುಗದಿಂದ ಆರಂಭ ಇತಿಹಾಸ ಕಾಲದವರೆಗಿನ ಒಟ್ಟು ೫೫ ವಸತಿ, ಸಮಾಧಿ ಹಾಗೂ ರೇಖಾಚಿತ್ರಗಳ ನೆಲೆಗಳನ್ನು ಹೊಸದಾಗಿ ಶೋಧಿಸಲಾಗಿದೆ.
- ತುಮಕೂರು ಜಿಲ್ಲೆಯನ್ನು ಒಳಗೊಂಡ ಮೈಸೂರು ಪ್ರಾಂತ್ಯ ಶಾತವಾಹನರ ಮೂಲ ನೆಲೆಯಾಗಿತ್ತು ಎಂಬುದನ್ನು ಜಿಲ್ಲೆಯಲ್ಲಿ ದೊರೆತ ಐತಿಹ್ಯ, ಸ್ಥಳಪುರಾಣ, ಶಾಸನ, ಪ್ರಾಚ್ಯಾವಶೇಷಗಳ ಮೂಲಕ ನಿರೂಪಿಸಲಾಗಿದೆ.

- ಮೌರ್ಯಯುಗದಿಂದ ಸ್ವಾತಂತ್ರ್ಯ ಭಾರತದವರೆಗಿನ ಜಿಲ್ಲೆಯ ಚಾರಿತ್ರಿಕತೆಯನ್ನು ಶಾಸನ, ಸಾಹಿತ್ಯ ಕೃತಿ, ಕಥೆ ಕಾವ್ಯ, ಲಾವಣಿ, ಸ್ಥಳಪುರಾಣ, ಐತಿಹ್ಯ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳನ್ನು ಬಳಸಿಕೊಂಡು ಚಾರಿತ್ರಿಕ ಅಂಶಗಳನ್ನು ಸಮಗ್ರವಾದ ವಿಶ್ಲೇಷಿಸಲಾಗಿದೆ.
- ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ನೊಳಂಬರು, ಮಹಾನಾಡ ಪ್ರಭುಗಳು, ಹಾಗಲವಾಡಿ ನಾಯಕರು, ಹೊಳವನಹಳ್ಳಿ ಸಂಸ್ಥಾನಿಕರು ಮೊದಲಾದ ಸಾಮಂತ ಮನೆತನ ಮತ್ತು ಪಾಳೆಯಪಟ್ಟುಗಳನ್ನು ಎಂ.ಡಿ. ಶ್ರೀನಿವಾಸ, ಡಿ.ಎಂ.ಯೋಗಿಶ್ವರಪ್ಪ, ಎಂ.ಎಂ.ಕಲ್ಬುರ್ಗಿ, ಕಾವಲಮ್ಮ ಮೊದಲಾದ ವಿದ್ವಾಂಸರು ಶಿಷ್ಟ ಸಮುದಾಯಕ್ಕೆ (ವೀರಶೈವ, ಒಕ್ಕಲಿಗ, ಬ್ರಾಹ್ಮಣ) ಸೇರಿದವರೆಂದು ಗುರುತಿಸಿದ್ದಾರೆ. ಈ ಪಾಳೆಯಪಟ್ಟಿನ ಮೂಲ ವಂಶಜರನ್ನು ಸಂದರ್ಶಿಸಿ ಅವರಿಂದ ಮಾಹಿತಿ ಸಂಗ್ರಹಿಸಿಕೊಂಡು, ಅವರ ಕಾಲದ ಶಾಸನ, ಸಾಹಿತ್ಯ ಕೃತಿಗಳನ್ನು ಪರಾಮರ್ಶನಕ್ಕೆ ಒಳಪಡಿಸಿದಾಗ ಎಲ್ಲಿಯೂ ವೀರಶೈವ ಮತಕ್ಕೆ ಮತಾಂತರ ಹೊಂದದೆ ಗೊಲ್ಲ, ಬೇಡ ಬುಡಕಟ್ಟು ಸಮುದಾಯಗಳಲ್ಲೇ ಮುಂದುವರೆದಿರುವ ವಿಷಯ ಸ್ಪಷ್ಟಪಡಿಸಲಾಗಿದೆ.
- ಜಿಲ್ಲೆಯಲ್ಲಿ ಆಳ್ವಿಕೆ ನಡೆಸಿದ ಪಾಳೆಯಪಟ್ಟುಗಳು ತಮ್ಮ ರಕ್ಷಣಾ ಕೇಂದ್ರಗಳಲ್ಲಿಯೇ ಕಬ್ಬಿಣದ ಅದಿರನ್ನು ಶುದ್ಧೀಕರಿಸಿ ಆಯುಧೋಪಕರಣ ತಯಾರಿಸುವ ಕಾರ್ಯಮಾಡುತ್ತಿದ್ದವು ಎಂಬುದಕ್ಕೆ ಜಿಲ್ಲೆಯ ಎಂಟು ಪ್ರದೇಶಗಳಲ್ಲಿ ಕಬ್ಬಿಣದ ಕುಲುಮೆ ಮತ್ತು ಕಿಟ್ಟದ ರಾಶಿಗಳನ್ನು ಹೊಸದಾಗಿ ಶೋಧ ಮಾಡಲಾಗಿದೆ.
- ಜಿಲ್ಲೆಯ ಕೆ.ರಾಂಪುರ ಮತ್ತು ಶ್ರವಣಗುಡಿ ಎಂಬಲ್ಲಿ ಕೆಳದಿ ಅರಸರ ಕಾಲದ ನಾಣ್ಯಗಳನ್ನು ಹೊಸದಾಗಿ ಶೋಧಿಸಲಾಗಿದೆ. ಇದರಿಂದ ಕೆಳದಿ ಸಂಸ್ಥಾನದ ಆಡಳಿತಕ್ಕೆ ಈ ಪ್ರದೇಶ ಒಳಪಟ್ಟಿತ್ತೇ ಎಂಬುದನ್ನು ಆಕರಗಳ ಕೊರತೆಯಿಂದ ನಿರ್ಧರಿಸಲು ಸಾಧ್ಯವಾಗಿಲ್ಲ. ಒಂದು ವೇಳೆ ಈ ನಾಣ್ಯಗಳು ಸ್ಥಳಾಂತರಗೊಂಡಿರುವ ಸಾಧ್ಯತೆಗಳುಂಟು. ಇದರ ಬಗ್ಗೆ ಹೆಚ್ಚಿನ ಅಧ್ಯಯನಕ್ಕೆ ಅವಕಾಶ ಕಲ್ಪಿಸಲಾಗಿದೆ.
- ಜಿಲ್ಲೆಯಲ್ಲಿ ಕಂಡುಬಂದ ೩೦೦ಕ್ಕೂ ಹೆಚ್ಚು ಕೋಟೆ–ಕೊತ್ತಲ, ಬುರುಜು, ಸೈನಿಕ ಕೇಂದ್ರ, ಪುರಗಳ ನಿರ್ಮಾಣದ ಹಿಂದಿನ ಉದ್ದೇಶ, ಮಹತ್ವ ವಿಶೇಷವಾಗಿ ಗುರುತಿಸಲಾಗಿದೆ.
- ಗಡಿದುರ್ಗವಾಗಿ ಬೃಹತ್ ಸಾಮ್ರಾಜ್ಯಗಳಿಗೆ ಜಿಲ್ಲೆಯ ಕೈದಾಳ, ಬೇಗೂರು, ಕುಣಿಗಲ್, ಚಿಕ್ಕನಾಯಕನಹಳ್ಳಿ, ದೇವರಾಯನದುರ್ಗ, ನಿಡುಗಲ್ಲು ಮೊದಲಾದ ಕೋಟೆಗಳು ಕಾರ್ಯ ನಿರ್ವಹಿಸಿವೆ.

- ಪಾಳೆಯಪಟ್ಟುಗಳಿಗೆ ಆಳ್ವಿಕೆ ನಡೆಸಲು ರಾಜಧಾನಿಗಾಗಿ ನಿಡುಗಲ್ಲು, ಮಧುಗಿರಿ, ಸಿರಾ, ಮಿಡಿಗೇಶಿ. ಹಾಗಲವಾಡಿ, ವೈ.ಎನ್.ಹೊಸಕೋಟೆ, ಭಸ್ಮಾಂಗಿ ಮೊದಲಾದ ಕಡೆ ಕೋಟೆಗಳು ನಿರ್ಮಿಸಲ್ಪಟ್ಟಿವೆ.
- ಪಾಳೆಯಪಟ್ಟುಗಳ ರಾಜಧಾನಿ ರಕ್ಷಣೆಗಾಗಿಯೂ ಗಡಿ ಭಾಗದ ಸುತ್ತಲೂ ಕೋಟೆ ಇಲ್ಲವೇ ಸೈನಿಕ ಶಿಬಿರಗಳಿದ್ದವು.
- ಕಾಡುಪ್ರಾಣಿಗಳಿಂದ ಗ್ರಾಮಗಳನ್ನು ರಕ್ಷಿಸಲು ಹೆಬ್ಬೂರು, ಹೆಂಜೇರು ಮೊದಲಾದೆಡೆ ಕೋಟೆಗಳು ನಿರ್ಮಿಸಲ್ಪಟ್ಟಿವೆ.
- ಪಶು ಸಂಪತ್ತಿನ ರಕ್ಷಣೆಗಾಗಿಯೂ ಕಾಮನದುರ್ಗ, ಬೆನಕನಹಳ್ಳಿ, ನಾಗಲಾಪುರ, ಪುಲಮಾಚಿ, ಸತ್ತಿಗಾನಹಳ್ಳಿ ಮೊದಲಾದೆಡೆ ಕೋಟೆಗಳು ನಿರ್ಮಾಣಗೊಂಡಿವೆ.
- ಬುಡಕಟ್ಟು ಸಮುದಾಯಗಳು ವಿಶೇಷವಾಗಿ ಕಾಡುಗೊಲ್ಲ ಮತ್ತು ಬೇಡ ಮಡಿವಂತಿಕೆಯ ವಿಚಾರವಾಗಿ ಇತರೆ ಸಮುದಾಯದವರು ತಮ್ಮ ಹಟ್ಟಿಗಳಿಗೆ ಪ್ರವೇಶ ಮಾಡದಿರಲೆಂದು ಗ್ರಾಮದ ಸುತ್ತಲೂ ಬೇಲಿಗಳನ್ನು ಹಾಕಿಕೊಂಡಿದ್ದಾರೆ. ಇದನ್ನು ಕೋಟೆಯ ಪರಿಧಿಯಲ್ಲಿ ಸೇರ್ಪಡೆ ಮಾಡಿಕೊಳ್ಳಲಾಗಿದೆ. ಉದಾಹರಣೆಗೆ – ಜೆಟ್ಟಿ ಅಗ್ರಹಾರ, ಪುಲಮಾಚಿ ಮೊದಲಾದವು.
- ಊರಳಿವುಗಳಂತಹ ಸಂದರ್ಭದಲ್ಲಿ ಗ್ರಾಮದಲ್ಲಿರುವ ಮಹಿಳೆಯರು, ಮುದುಕರು, ಮಕ್ಕಳಿಗೆ ರಕ್ಷಣೆ ನೀಡಲು ಕೋಟೆಗಳನ್ನು ನಿರ್ಮಿಸಲಾಗಿದೆ. ಉದಾಹರಣೆಗೆ– ಹೊಸಹಳ್ಳಿ, ತಾಯಗೊಂಡನಹಳ್ಳಿ, ಸರ್ಜೆಹೊನ್ನಪ್ಪನಹಳ್ಳಿ, ಗಂಗಸಾಗರ, ಜಾನಕಲ್ಲು ಮೊದಲಾದವು.
- ದೇವಾಲಯ ರಕ್ಷಣೆಗಾಗಿಯೂ ಪ್ರಾಕಾರ ಗೋಡೆಯ ಬದಲಾಗಿ ಪ್ರತ್ಯೇಕವಾಗಿ ಕೋಟೆ–ಕೊತ್ತಲ ನಿರ್ಮಾಣವಾಗಿರುವುದು ಜಿಲ್ಲೆಯಲ್ಲಿ ಕಂಡುಬರುತ್ತದೆ. ಉದಾಹರಣೆಗೆ: ಸೀಬಿ.
- ವ್ಯಾಪಾರಿ ಕೇಂದ್ರಗಳ ರಕ್ಷಣೆಗಾಗಿಯೂ ಕೋಟೆಗಳು ಜಿಲ್ಲೆಯಲ್ಲಿ ನಿರ್ಮಾಣಗೊಂಡಿವೆ. ಉದಾಹರಣೆಗೆ ನಿಟ್ಟೂರು, ಕಾವಲು ರಂಗಾಪುರ, ದೊಡ್ಡ ಮಾಲೂರು ಮೊದಲಾದವು.
- ಜಿಲ್ಲೆಯಲ್ಲಿ ನಿಡುಗಲ್ಲು ಚೋಳರ ಕಾಲದಿಂದ ವಿಜಯನಗರ ಸಾಮ್ರಾಜ್ಯದ ಅಂತ್ಯದವರೆಗೂ ಸಾಮಂತರು, ಪಾಳೆಯಪಟ್ಟುಗಳು, ಪಟ್ಟಣಶೆಟ್ಟಿಗಳು, ಅಧಿಕಾರಿ ವರ್ಗ, ಶ್ರೀಮಂತವರ್ಗ, ಸಾಮಾನ್ಯ ಜನರು ಸಹ ಚಿನ್ನದ ಉದ್ದಿಮೆ ಇಲ್ಲವೇ ಗಣಿಗಾರಿಕೆಯಲ್ಲಿ ತೊಡಗಿದ್ದರು ಎಂಬುದನ್ನು ಶಾಸನ, ಐತಿಹ್ಯ, ಸ್ಥಳ ಪುರಾಣ, ಸ್ಥಳ ನಾಮ ನಿಷ್ಪತ್ತಿ ವಿಶ್ಲೇಷಣೆ, ಶಾಸನಗಳಲ್ಲಿನ ಪಟ್ಟಣಶೆಟ್ಟಿಗಳ ಉಲ್ಲೇಖ, ಗಣಿ ಮತ್ತು ಭೂವಿಜ್ಞಾನ ಇಲಾಖೆಯ ವರದಿ ಮೊದಲಾದ ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳ ಮೂಲಕ ಸ್ಪಷ್ಟಪಡಿಸಲಾಗಿದೆ.

- ಶಾಸ್ತ್ರಗ್ರಂಥಗಳು ಉಲ್ಲೇಖಿಸುವ ಕೋಟೆ–ಕೊತ್ತಲಗಳ ವಾಸ್ತುರಚನೆಗೂ ಮತ್ತು ಜಿಲ್ಲೆಯಲ್ಲಿರುವ ಕೋಟೆ–ಕೊತ್ತಲಗಳ ವಾಸ್ತು ರಚನೆಗೂ ಇರುವ ಸಾಮ್ಯತೆಯನ್ನು ವಿಶ್ಲೇಷಿಸಿ ಜಿಲ್ಲೆಯ ವಾಸ್ತು ವೈವಿಧ್ಯತೆಯನ್ನು ಸ್ಪಷ್ಟಪಡಿಸಲಾಗಿದೆ. ಉದಾಹರಣೆಗೆ– ನೀರಿನ ಶುದ್ಧೀಕರಣ, ಇಳಿಜಾರಾದ ಕಡೆ ಗೋಡೆ ಜರುಗದಂತೆ ತಳಭಾಗಕ್ಕೆ ಕಬ್ಬಿಣದ ಉಳಿಗಳ ಬದಲಿಗೆ ಕಲ್ಲಿನ ಉಳಿಗಳ ಜೋಡಣೆ, ಗೋಡೆ ಸಡಿಲಗೊಳ್ಳದಂತೆ ಗಾರೆ ಗಚ್ಚಿಗೆ ಪರ್ಯಾಯವಾಗಿ ಪ್ರಾಗಿತಿಹಾಸ ಕಾಲದ ವಸತಿ ದಿಬ್ಬಗಳಲ್ಲಿನ ಮಣ್ಣಿನ ಬಳಕೆ. ಸಂಪರ್ಕ ಮಾಧ್ಯಮಗಳನ್ನಾಗಿ ಅಂದರೆ ಶತ್ರುಗಳ ಮುನ್ಸೂಚನೆಯನ್ನು ರಕ್ಷಣಾ ಕೇಂದ್ರಗಳ ಮೂಲಕ ಮುಖ್ಯ ಕೇಂದ್ರಗಳಿಗೆ ಸೂಚಿಸುವ ಸಲುವಾಗಿ ಎತ್ತರದ ಸ್ಥಳದಲ್ಲಿ ಬುರುಜು, ಬತೇರಿ, ಕಾವಲು ಮಂಟಪಗಳ ನಿರ್ಮಾಣ ಮಾಡಲಾಗಿದೆ.

- ಪ್ರಾಥಮಿಕ ಮತ್ತು ಆನುಷಂಗಿಕ ಆಕರಗಳ ಮೂಲಕ ಜಿಲ್ಲೆಯ ಕೋಟೆ–ಕೊತ್ತಲಗಳ ಪ್ರಾಚೀನತೆಯನ್ನು ಬೃಹತ್ ಶಿಲಾಯುಗಕ್ಕೆ ಕೊಂಡೊಯ್ಯುವ ಮೊದಲ ಪ್ರಯತ್ನವನ್ನು ಮಾಡಲಾಗಿದೆ. ಉದಾಹರಣೆಗೆ ಇಟ್ಟಿಗದಿಬ್ಬನಹಳ್ಳಿಯಲ್ಲಿ ಪಾಂಡವರ ಧರ್ಮರಾಯ, ಅರ್ಜುನ, ಭೀಮ, ನಕುಲ, ಸಹದೇವ, ಅಭಿಮನ್ಯು ಏಳು ಸುತ್ತಿನ ಕೋಟೆಯನ್ನು ನಿರ್ಮಿಸಿಕೊಂಡು ಆಳ್ವಿಕೆ ಮಾಡುತ್ತಿದ್ದರೆಂದು ಸ್ಥಳೀಯ ಪ್ರತೀತಿ ಇದೆ. ಈ ಐತಿಹ್ಯವನ್ನು ಅಲ್ಲಿಯೇ ದೊರೆತಿರುವ ೧೪ನೆಯ ಶತಮಾನದ ತೆಲುಗು ಶಾಸನವು ಸಹ ತಿಳಿಸುತ್ತದೆ. ಜಿಲ್ಲೆಯಲ್ಲಿ ಪಾಂಡವರ ಉಲ್ಲೇಖ ಎಲ್ಲಿ ಕಂಡುಬರುತ್ತದೋ ಅಲ್ಲೆಲ್ಲ ಬೃಹತ್ ಶಿಲಾಯುಗದ ಅವಶೇಷಗಳು ಸಹಜವಾಗಿ ಕಂಡುಬರುವುದು ದೃಢಪಟ್ಟಿದೆ. ಆದುದರಿಂದ ಈ ಐತಿಹ್ಯ ಮತ್ತು ಶಾಸನವು ಉಲ್ಲೇಖಿಸುವಂತಹ ಕೋಟೆಯು (ಈಗ ದಿಬ್ಬ ಮಾತ್ರ ಉಳಿದಿದೆ) ಬೃಹತ್ ಶಿಲಾಯುಗದ ಕಾಲಘಟ್ಟಕ್ಕೆ ಸರಿಹೊಂದುತ್ತದೆ. ಏಕೆಂದರೆ ಈ ಪ್ರದೇಶ ಶಾತವಾಹನರ ಕಾಲಕ್ಕಾಗಲೇ ಪ್ರಸಿದ್ಧಿ ಹೊಂದಿತ್ತು ಎಂಬ ಅಂಶ ಪುಲಮಾಚಿ ಎಂಬ ಗ್ರಾಮ ಶಾತವಾಹನರ ವಶಿಷ್ಠಪುತ್ರ ಪುಲಮಾಯಿ ಅರಸನಿಂದ ನಿರ್ಮಾಣಗೊಡಂತಹದ್ದು ಎನ್ನುವ ಐತಿಹ್ಯದಿಂದ ಸ್ಪಷ್ಟವಾಗುತ್ತದೆ. ಅಲ್ಲದೇ ಉತ್ತರದಲ್ಲಿ ಮೌರ್ಯ ಮತ್ತು ಶಾತವಾಹನ ಸಾಮ್ರಾಜ್ಯಗಳು ಅಧಿಕಾರದಲ್ಲಿದ್ದಾಗ ಜಿಲ್ಲೆಯಲ್ಲಿ ಇನ್ನೂ ಬೃಹತ್ ಶಿಲಾಯುಗ ಸಂಸ್ಕೃತಿ ಜೀವಂತವಾಗಿತ್ತು ಎಂಬ ಅಂಶ ಪ್ರಾಚ್ಯಾವಶೇಷಗಳಿಂದ ಸ್ಪಷ್ಟಗೊಳ್ಳುತ್ತದೆ. ಹಾಗಾಗಿ ಶಾತವಾಹನ ಅರಸ ವಶಿಷ್ಠಪುತ್ರ ಪುಲಮಾಯಿಗೂ ಪುಲಮಾಚಿ ಗ್ರಾಮಕ್ಕೂ ಹತ್ತಿರದ ಸಂಬಂಧ ಇರುವುದರಿಂದ ಇದರ ಸಮೀಪವೇ ಇರುವ ಇಟ್ಟಿಗದಿಬ್ಬನಹಳ್ಳಿ ಗ್ರಾಮಕ್ಕೂ ಪುಲಮಾಚಿಗೂ ಸಹ ಸಂಬಂಧ ಇರಬಹುದು.

- ಜಿಲ್ಲೆಯಲ್ಲಿ ಇದುವರೆಗೂ ಕೋಟೆಗಳ ಬಗೆಗೆ ಆಗಿರುವ ಅಧ್ಯಯನಗಳಿಗಿಂತ ಭಿನ್ನವಾಗಿ ನಿಡುಗಲ್ಲು, ಮಿಡಿಗೇಶಿ, ಶೈಲಾಪುರದ ಕೋಟೆಗಳ ಕಾಲಮಾನವನ್ನು ಕ್ರಿ.ಶ. ೭೫೦

ಎಂದೂ, ಕೈದಾಳ ಕೋಟೆಯನ್ನು ಅಮೋಘವರ್ಷನಿಗಿಂತ ಪೂರ್ವದ್ದೆಂದು ಶಾಸನಗಳನ್ನು ಆಧರಿಸಿ ಗುರುತಿಸಲಾಗಿದೆ

- ಜಿಲ್ಲೆಯಲ್ಲಿ ಕಂಡುಬರುವ ಪ್ರಾಚೀನ ಕಾಲದ ಹಲವು ಪಟ್ಟಣಗಳನ್ನು ಸ್ಥಳೀಯವಾಗಿ ದೊರೆತ ಐತಿಹ್ಯ, ಸ್ಥಳಪುರಾಣ, ಶಾಸನ, ಪ್ರಾಚ್ಯಾವಶೇಷಗಳನ್ನು ಆಧರಿಸಿ ಗುರುತಿಸಲಾಗಿದೆ. ಉದಾಹರಣೆಗೆ ಮುಮ್ಮಡಿಪಟ್ಟಣ–ಇಂದಿನ ಇಮ್ಮಡಗೊಂಡನಹಳ್ಳಿ, ಇರಿಗಲ್ವಾಡಿ ಅಥವಾ ಏರಿಗಲ್ವಾಡಿ–ಇಂದಿನ ನಿಡುಗಲ್ಲು, ಮಲ್ಲಿನಾಥಪುರ–ಇಂದಿನ ಬೇಡತ್ತೂರು, ಮಿಡಿಗೆ–ಇಂದಿನ ಮಿಡಿಗೇಶಿ, ಶೈಲೇಂದ್ರ–ಇಂದಿನ ಶೈಲಾಪುರ ಇಲ್ಲವೆ ಇಂದ್ರಬೆಟ್ಟ ಹೀಗೆ ಇನ್ನೂ ಹಲವು ಪ್ರಾಚೀನ ಪಟ್ಟಣಗಳನ್ನು ಗುರುತಿಸುವ ಮೂಲಕ ಅವುಗಳ ಪ್ರಾಚೀನತೆಯನ್ನು ಸ್ಪಷ್ಟೀಕರಿಸಿ ಕೋಟೆಗಳ ಪ್ರಾಚೀನತೆಯನ್ನು ಮತ್ತಷ್ಟು ಹಿಂದಕ್ಕೆ ಕೊಂಡೊಯ್ಯಲಾಗಿದೆ.
- ಜಿಲ್ಲೆಯ ೩೦೦ಕ್ಕೂ ಹೆಚ್ಚು ಕೋಟೆ–ಕೊತ್ತಲ, ಬುರುಜು, ಸೈನಿಕ ಕೇಂದ್ರಗಳನ್ನು ಒಂದೆಡೆ ದಾಖಲಿಸಿ ವಿಶ್ಲೇಷಣೆಗೆ ಒಳಪಡಿಸುವುದರ ಮೂಲಕ ಪಾಳೆಯಪಟ್ಟುಗಳ ಎಲ್ಲೆಯನ್ನು ಸ್ಪಷ್ಟವಾಗಿ ಮೊದಲ ಬಾರಿಗೆ ಗುರುತಿಸಲಾಗಿದೆ.
- ಕೋಟೆ–ಕೊತ್ತಲಗಳಿಗೆ ಪೂರಕವಾದ ರಕ್ಷಣಾ ಸಂಬಂಧಿ ಸ್ಮಾರಕಗಳ ಅನಿವಾರ್ಯತೆ ಹಾಗೂ ಬದಲಾದ ಯುದ್ಧನೀತಿಗೆ ಅನುಗುಣವಾಗಿ ಅವುಗಳಲ್ಲಿ ಆದಂತಹ ಬದಲಾವಣೆ ಹಾಗೂ ಅವುಗಳ ರಚನೆಯಲ್ಲಿ ಬಳಸಿದ ದೇಶಿಯ ತಂತ್ರಜ್ಞಾನವನ್ನು ಮೊದಲ ಬಾರಿಗೆ ಗುರುತಿಸಲಾಗಿದೆ.
- ಅಧ್ಯಯನಕ್ಕೆ ಪೂರಕವಾಗಿ ಅನುಬಂಧದಲ್ಲಿ ಕೋಟೆ ಪದಕೋಶ, ಕೋಟೆ–ಕೊತ್ತಲಗಳ ಪಟ್ಟಿ, ಸೈನಿಕ ಕೇಂದ್ರಗಳ ಪಟ್ಟಿ, ಕೋಟೆಗಳ ನಕಾಶೆ ಮತ್ತು ಛಾಯಾಚಿತ್ರಗಳನ್ನು ನೀಡಲಾಗಿದೆ.

ಹೀಗೆ ತುಮಕೂರು ಜಿಲ್ಲೆಯ ಕೋಟೆ–ಕೊತ್ತಲಗಳನ್ನು ರಕ್ಷಣಾ ವಾಸ್ತುವಿನ ಹಿನ್ನೆಲೆಯಲ್ಲಿ ಚರ್ಚಿಸಿದರೂ ಸಮಗ್ರವಾಗಿ ರಾಜಕೀಯ, ಸಾಮಾಜಿಕ, ಧಾರ್ಮಿಕ, ಸಾಂಸ್ಕೃತಿಕ ಹೀಗೆ ಬೇರೆ ಬೇರೆ ಆಯಾಮಗಳ ಮೂಲಕ ವಿಶ್ಲೇಷಣೆಗೆ ಒಳಪಡಿಸಿ ಅವುಗಳ ಹಿಂದಿನ ಔಚಿತ್ಯಪೂರ್ಣ ಸಂಗತಿಗಳನ್ನು ಹೊರ ಹಾಕುವ ಪ್ರಯತ್ನ ಮಾಡಲಾಗಿದೆ. ಆ ಮೂಲಕ ಸ್ಥಳೀಯರಲ್ಲಿ ವಿಶೇಷವಾಗಿ ಯುವ ಪೀಳಿಗೆಯಲ್ಲಿ ಅವುಗಳ ಬಗೆಗೆ ಅರಿವು ಮೂಡಿಸುವ ಅಂಶಗಳತ್ತ ಪ್ರಸ್ತುತ ಮಹಾಪ್ರಬಂಧದಲ್ಲಿ ಗಮನಹರಿಸಲಾಗಿದೆ.

ಗ್ರಂಥಸೂಚಿ

೧. ಅನಂತರಾಮರಾವ್(ಪ್ರಸಂ.), ೨೦೦೬, ಸುವರ್ಣ ಕರ್ನಾಟಕ ದರ್ಶನ(೫೦ ಸಂವತ್ಸರಗಳು), ವಿದ್ಯಾ ಪಬ್ಲಿಷಿಂಗ್ ಹೌಸ್, ಮಂಗಳೂರು.

೨. ಅಣ್ಣಿಗೇರಿ ಎ.ಎಮ್., ಮೇವುಂಡಿ ಮಲ್ಲಾರಿ, ೧೯೬೧, ಶಾಸನ ಸಾಹಿತ್ಯ ಸಂಚಯ, ಕನ್ನಡ ಸಂಶೋಧನಾ ಸಂಸ್ಥೆ, ಧಾರವಾಡ.

೩. ಅಂಬಳಿಕೆ ಹಿರಿಯಣ್ಣ(ಪ್ರಸಂ.), ೨೦೦೯, ಕನ್ನಡ ವಿಶ್ವಕೋಶ, ಇತಿಹಾಸ ಮತ್ತು ಪುರಾತತ್ವ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೪. ಇರ್ಫಾನ್ ಹಬೀಬ್(ಮೂಲ), ಪ್ರದೀಪ ಬೆಳಗಲ್, ಜೈಕುಮಾರ್ ಹೆಚ್.ಎಸ್.(ಅನು.), ೨೦೧೧, ಸಿಂಧೂ ನಾಗರಿಕತೆ, ಚಿಂತನ ಪುಸ್ತಕ, ಬೆಂಗಳೂರು.

೫. ಇರ್ಫಾನ್ ಹಬೀಬ್(ಮೂಲ), ಪ್ರದೀಪ ಬೆಳಗಲ್, ಜೈಕುಮಾರ್ ಹೆಚ್.ಎಸ್.(ಅನು.), ೨೦೧೧, ಪೂರ್ವೇತಿಹಾಸ, ಚಿಂತನ ಪುಸ್ತಕ, ಬೆಂಗಳೂರು.

೬ ಕಮಲೇಶ್ ಕೆ.ಆರ್., ೨೦೦೯, ಚಿಕ್ಕನಾಯಕನಹಳ್ಳಿ ತಾಲೂಕು ಐತಿಹಾಸಿಕ ಮತ್ತು ಸಾಂಸ್ಕೃತಿಕ ಅಧ್ಯಯನ, ೧೭೨೦-೧೯೦೦, ಅಂಕಿತ ಪ್ರಕಾಶನ, ಬೆಂಗಳೂರು.

೭ ಕರೋವ್ಕಿನ್ ಎಫ್.(ಮೂಲ), ಗೋಪಾಲಕೃಷ್ಣರಾವ್ ಕೆ.ಎಲ್.(ಅನು.), ೧೯೮೧, ಪುರಾತನ ಜಗತ್ತಿನ ಇತಿಹಾಸ, ನವಕರ್ನಾಟಕ ಪ್ರಕಾಶನ, ಬೆಂಗಳೂರು.

೮. ಕಲಬುರ್ಗಿ ಎಂ.ಎಂ., ಬಸವರಾಜು ಕೆ.ಆರ್., ಪರಮಶಿವಮೂರ್ತಿ ಎಸ್.(ಸಂ.), ೧೯೯೫, ಮಹಾನಾಡ ಪ್ರಭುಗಳು ಬಿಜ್ಜಾವರ-ಮಧುಗಿರಿ ವೀರಶೈವ ಅರಸು ಮನೆತನಗಳು, ನೊಳಂಬ ವೀರಶೈವ ಸಂಘ, ಬೆಂಗಳೂರು.

೯. ಕಲಬುರ್ಗಿ ಎಂ.ಎಂ.(ಸಂ.), ೧೯೯೯, ಪ್ರಾಚೀನ ಕರ್ನಾಟಕದ ಆಡಳಿತ ವಿಭಾಗಗಳು, ಭಾಗ-೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೦. ಕವಿತಾಕೃಷ್ಣ(ಸಂ.), ೨೦೦೨, ಜಯಮಂಗಲಿ, ೬೯ನೆಯ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೧. ಕಾವಲಮ್ಮ ಆರ್., ೨೦೦೫, ಮಧುಗಿರಿ ಮಹಾನಾಡ ಪ್ರಭುಗಳು, ಮುದ್ದಪ್ಪ ಕೆ.ಎಸ್., ಸ್ಮಾರಕ ಟ್ರಸ್ಟ್, ಬೆಂಗಳೂರು.

೧೨. ಕೃಷ್ಣರಾವ್ ಎಂ.ಬಿ., ಕೇಶವಭಟ್ಟ ಎ. (ಸಂ.), ೧೯೭೦, ಕರ್ನಾಟಕ ಇತಿಹಾಸ ದರ್ಶನ, ಕರ್ನಾಟಕ ಸಹಕಾರಿ ಪ್ರಕಾಶನ ಮಂದಿರ, ಬೆಂಗಳೂರು.

೧೩. ಕೆಳದಿ ಗುಂಡಾ ಜೋಯಿಸ್(ಅನು.), ೧೯೯೯, ಲಿಂಗಣ್ಣ ಕವಿಯ ಕೆಳದಿ ನೃಪವಿಜಯ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೪. ಕೇಶವಭಟ್ಟ ಟಿ., ೧೯೬೯, ದೇವಪ್ಪಕವಿ ವಿರಚಿತ ರಾಮ ವಿಜಯಕಾವ್ಯ, ಭಾರತೀಯ ಜ್ಞಾನಪೀಠ, ಕಲಕತ್ತಾ.

೧೫. ಕೊಟ್ರೇಶ್ ಎಂ., ೨೦೧೧, ಕಲ್ಯಾಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೬. ಕೊಟ್ರೇಶ್ ಎಂ., ೨೦೧೦, ಹರಪನಹಳ್ಳಿ ತಾಲೂಕಿನ ರಕ್ಷಣಾ ಸ್ಮಾರಕಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೭. ಕೊಟ್ರೇಶ್ ಎಂ., ೨೦೧೦, ಬಳ್ಳಾರಿ ಜಿಲ್ಲೆಯ ಕೋಟೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೮. ಕೋದಂಡರಾಮಯ್ಯ, ೧೯೮೯, ಸಂಗಮ, ಹಾಗಲವಾಡಿಯ ಚರಿತ್ರೆಯನ್ನೊಳಗೊಂಡ ಸಂಚಿಕೆ, ಒಳುವನೇರಲು.

೧೯. ಗಣೇಶಯ್ಯ ಕೆ.ಎನ್., ೨೦೧೪, ಶಿಲಾಕುಲ ವಲಸೆ, ಅಂಕಿತ ಪುಸ್ತಕ, ಬೆಂಗಳೂರು.

೨೦. ಗದ್ದಿಗಿಮಠ ಬಿ.ಎಸ್., ೧೯೮೮, ಗದ್ದಿಗಿ ಮಠದ ಬರಹಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೧. ಗೋಪಾಲ್ ಬಾ.ರಾ., ವೆಂಕಟಾಚಲಶಾಸ್ತ್ರಿ(ಸಂ.), ೧೯೭೫, ಸಂಶೋಧನ ಲೇಖನಗಳು ಶ್ರೀಕಂಠಶಾಸ್ತ್ರಿ ಎಸ್., ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೨೨. ಗೋಪಾಲ್ ಬಾ.ರಾ., ೧೯೮೭, ಕರ್ನಾಟಕದಲ್ಲಿ ನವಶಿಲಾಯುಗ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೩. ಗೋಪಾಲ್ ಬಾ.ರಾ., ೨೦೦೯, ತುಮಕೂರು ಜಿಲ್ಲೆಯ ಇತಿಹಾಸ ಮತ್ತು ಪುರಾತತ್ವ, ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯಗಳ ನಿರ್ದೇಶನಾಲಯ, ಮೈಸೂರು.

೨೪. ಚಕ್ಕರೆ ಶಿವಶಂಕರ್(ಸಂ.), ೨೦೦೩, ಜನಪದ ತಂತ್ರಜ್ಞಾನ, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು.

೨೫. ಚನ್ನಬಸವಯ್ಯ ಹಿರೇಮಠ, ೨೦೧೪, ಪ್ರಾಚೀನ ಕರ್ನಾಟಕದ ರಾಜಕೀಯ ವಿಭಾಗಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨೬. ಚಿಕ್ಕಣ್ಣ ಯಣ್ಣೆಕಟ್ಟೆ, ೨೦೦೮, ಸಿರಾ ಸೀಮೆಯ ಇತಿಹಾಸ ಮತ್ತು ಸಂಸ್ಕೃತಿ, ಗಡಿಗಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ಸಿರಾ.

೨೭. ಚಿಕ್ಕಣ್ಣ ಯಣ್ಣೆಕಟ್ಟೆ(ಸಂ.), ೨೦೦೯, ಒಂಡಿ ಒಂದಾವು ಬಾಳೆ ವನದಾಗೆ, ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ಸಿರಾ.

೨೮. ಚಿಕ್ಕವೀರಯ್ಯ, ೧೯೯೧, ಸಿದ್ದರಬೆಟ್ಟ ಒಂದು ದರ್ಶನ, ಶ್ರೀ ಸಿದ್ದೇಶ್ವರ ಸ್ವಾಮಿ ಸೇವಾ ಸಮಿತಿ, ತುಮಕೂರು.

೨೯. ಚಿದಾನಂದಮೂರ್ತಿ ಎಂ., ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕ್ರಿ.ಶ. ೪೫೦–ಕ್ರಿ.ಶ. ೧೧೫೦, ಸಪ್ನ ಬುಕ್‌ಹೌಸ್, ಬೆಂಗಳೂರು.

೩೦. ಚೆನ್ನಬಸಪ್ಪ ಎಸ್.ಪಾಟೀಲ, ೧೯೯೯, ಕರ್ನಾಟಕ ಕೋಟೆಗಳು, ಸಂಪುಟ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩೧. ಚೆಲುವರಾಜನ್ ಆರ್., ೧೯೮೭, ಪಾವಗಡ ತಾಲ್ಲೂಕು ದರ್ಶನ, ಐ.ಬಿ.ಹೆಚ್.ಪ್ರಕಾಶನ, ಬೆಂಗಳೂರು.

೩೨. ಚೆಲುವರಾಜನ್ ಆರ್., ೨೦೦೯, ಪಾವಗಡ ಕ್ಷೇತ್ರದರ್ಶನ, ಅಲಂಕಾರ್ ಪ್ರಕಾಶನ, ಪಾವಗಡ.

೩೩. ಜಯಮ್ಮ ಎಚ್., ೨೦೦೮, ನೊಳಂಬರ ಶಾಸನಗಳ ಸಾಂಸ್ಕೃತಿಕ ಅಧ್ಯಯನ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ.

೩೪. ಜ್ಯೋತಿ ಆರ್.ಎಸ್., ೧೯೮೫, ಪ್ರಾಚೀನ ಹಾಗೂ ಆರ್ವಾಚೀನ ದಿನಗಳ ಇತಿಹಾಸ, ಕನ್ನಡ ಅಧ್ಯಯನ ವಿಭಾಗ, ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು.

೩೫. ಜಮುನ ಎಂ.(ಪ್ರ.ಸಂ.), ಮಂಜುನಾಥ ಎಂ.ಜಿ.(ಸಂ.), ೨೦೦೬, ಯಲಹಂಕ ನಾಡಪ್ರಭುಗಳ ಶಾಸನ ಸಂಪುಟ, ಶ್ರೀ ಕೆಂಪೇಗೌಡ ಅಧ್ಯಯನ ಪೀಠ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೩೬. ಜೋಶಿ ಎಸ್.ಕೆ., ೨೦೦೮, ಕರ್ನಾಟಕದ ಕೋಟೆ–ಕೊತ್ತಲಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.

೩೭. ತಳವಾರ ಎನ್.ಎಮ್., ೨೦೦೨, ನಂಜುಂಡ ಕವಿಯ ರಾಮನಾಥ ಚರಿತೆ ಸಾಂಸ್ಕೃತಿಕ ಅಧ್ಯಯನ, ಅಭಿರುಚಿ ಪ್ರಕಾಶನ, ಮೈಸೂರು.

೩೮. ತಿಮ್ಮಯ್ಯ ಕೆ., ಚಿಕ್ಕ ಬಾಣಗೆರೆ ಕರಿಯಮ್ಮ, ತಳಗವಾದಿ ಪ್ರಕಾಶನ, ಮೈಸೂರು.

೩೯. ದಯಾನಂದ ಕೆ.ಎ., ೨೦೧೪, ಕರ್ನಾಟಕದ ಪರಂಪರೆ ಸಂಪುಟ.೧, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು.

೪೦. ದುರ್ಗದ ರಾಜೇಗೌಡ, ೧೯೯೮, ಹೇಮಗಿರಿ ವರದರಾಜ ದೇವಸ್ಥಾನ ಹುಲಿಯೂರುದುರ್ಗ, ಹೇಮಗಿರಿ ವರದರಾಜ ಪ್ರಕಾಶನ, ಬೆಂಗಳೂರು.

೪೧. ದೀಕ್ಷಿತ್ ಜಿ.ಎಸ್., ರಾಮಸ್ವಾಮಿ ಬಿ., ಶ್ರೀನಿವಾಸ ರಿತ್ತಿ., ೨೦೦೦, ನೀತಿವಾಕ್ಯಾಮೃತಂ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪೨. ದೇವರಕೊಂಡಾರೆಡ್ಡಿ, ೧೯೯೪, ತಲಕಾಡಿನ ಗಂಗರ ದೇವಾಲಯಗಳು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೩. ನಂಜಣ್ಣವರ ಎಸ್.ಎಸ್., ೧೯೮೭, ಮಾನವ ಭೂಗೋಳಶಾಸ್ತ್ರ, ವಿಜಯ ಬುಕ್ ಡಿಪೋ, ಗದಗ.

೪೪. ನಂಜುಂಡಸ್ವಾಮಿ ಎ.ಎಸ್., ೧೯೭೧, ಕದಂಬ ಮತ್ತು ಗಂಗರ ಇತಿಹಾಸ, ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ.

೪೫. ನಂಜುಂಡಸ್ವಾಮಿ ಎ.ಎಸ್., ೧೯೮೬, ಕರ್ನಾಟಕದ ಪಾಳೆಯಗಾರರು ಮತ್ತು ಒಡೆಯರ ಇತಿಹಾಸ, ಕರ್ನಾಟಕ ಇತಿಹಾಸ ಮಾಲಿಕೆ, ಸಮಾಜ ಪುಸ್ತಕಾಲಯ, ಧಾರವಾಡ.

೪೬ ನಂಜುಂಡಸ್ವಾಮಿ ಬಿ., ೨೦೦೨, ಕಲ್ಪಸಿರಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೪೭ ನಂದೀಶ್ವರ ಎನ್., ೨೦೦೮, ಸಿರಾ ತಾಲ್ಲೂಕಿನ ಸ್ಮಾರಕಗಳು ಹಾಗೂ ಶಾಸನಗಳು, ಪೂರ್ಣಚಂದ್ರ ತೇಜಸ್ವಿ ಪ್ರಕಾಶನ, ಸಿರಾ.

೪೮. ನರಸಿಂಹಮೂರ್ತಿ ಎಂ.ಎಲ್., ೧೯೮೭, ಮಧುಗಿರಿ ದಂಡಿನ ಮಾರಮ್ಮ, ಕರ್ನಾಟಕ ಜಾನಪದ ಯಕ್ಷಗಾನ ಅಕಾಡೆಮಿ, ಬೆಂಗಳೂರು.

೪೯. ನಾಗಭೂಷಣ ಸಿ., ೧೯೯೧, ಗುಬ್ಬಿ ಒಂದು ಸಾಂಸ್ಕೃತಿಕ ದರ್ಶನ, ಸಿರಿಗನ್ನಡ ಪ್ರಕಾಶನ, ಬೆಂಗಳೂರು.

೫೦. ನರಸಿಂಹಮೂರ್ತಿ ಎ.ವಿ., ೨೦೧೦, ಕರ್ನಾಟಕ ಪುರಾತತ್ವ ಕೆಲವು ಅಧ್ಯಯನಗಳು, ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೫೧. ನರಸಿಂಹಚಾರ್ಯ ಆರ್., ೧೯೭೫, ಶಾಸನ ಪದ್ಯಮಂಜರಿ, ಪ್ರಕಟಣ ಮತ್ತು ಪ್ರಚಾರೋಪನ್ಯಾಸ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ, ಬೆಂಗಳೂರು.

೫೨. ನಾಗರಾಜ್ ಎಂ.ಜಿ., ಕೃಷ್ಣಮೂರ್ತಿ ಪಿ.ವಿ.(ಸಂ.), ೨೦೦೮, , ಕರ್ನಾಟಕ ಇತಿಹಾಸ ಅಕಾದೆಮಿ, ಬೆಂಗಳೂರು.

೫೩. ನಾಗಯ್ಯ ಜೆ.ಎಂ., ೧೯೯೨, ಆರನೆಯ ವಿಕ್ರಮಾದಿತ್ಯನ ಶಾಸನಗಳು: ಒಂದು ಅಧ್ಯಯನ(ಆಡಳಿತಕ್ಕೆ ಸಂಬಂಧಿಸಿದಂತೆ), ವೀರಶೈವ ಅಧ್ಯಯನ ಅಕಾಡೆಮಿ, ಬೆಳಗಾವಿ.

೫೪. ನಾಗರಾಜರಾವ್ ಎಂ.ವಿ., ೧೯೮೨, ಶ್ರೀ ಸಿದ್ಧಗಂಗಾ ಕ್ಷೇತ್ರ, ಐ.ಬಿ.ಹೆಚ್. ಪ್ರಕಾಶನ, ಬೆಂಗಳೂರು.

೫೫. ನಾಗರಾಜರಾವ್ ಎಂ.ವಿ., ೧೯೮೫, ಚಿಕ್ಕನಾಯಕನಹಳ್ಳಿ ತಾಲ್ಲೂಕುದರ್ಶನ, ಐಬಿಹೆಚ್ ಪ್ರಕಾಶನ, ಬೆಂಗಳೂರು.

೫೬ ನಾಗರಾಜರಾವ್ ಎಂ.ವಿ. (ಸಂ.), ೨೦೦೦, ಚಿಕ್ಕನಾಯಕನಹಳ್ಳಿ ತಾಲ್ಲೂಕು ಒಂದು ಸಮಗ್ರ ಪರಿಚಯ, ಶೃಂಗಾರ ಪ್ರಕಾಶನ, ತುಮಕೂರು.

೫೭ ನಾಯಕ ಹಾ.ಮಾ.(ಪ್ರ.ಸಂ.), ೨೦೦೫, ಕನ್ನಡ ವಿಷಯ ವಿಶ್ವಕೋಶ ಕರ್ನಾಟಕ ಸಂಪುಟ.೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೫೮. ಪರಮಶಿವಮೂರ್ತಿ ಡಿ.ವಿ., ೧೯೯೬, ಸಂಶೋಧನೆಯ ಸಿರಿ(ಕೆಲವು ಪಾಳೆಯಗಾರರ ಅಧ್ಯಯನ), ಗುಣನಿಧಿ ಪ್ರಕಾಶನ, ಬೆಂಗಳೂರು.

೫೯. ಪರಮಶಿವಮೂರ್ತಿ ಡಿ.ವಿ., ೨೦೧೧, ತುಳುಗೋಳ್ ಸಂಕಥನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬೦. ಪುಟ್ಟಪ್ಪ ಕೆ.ವಿ.(ಪ್ರ.ಸಂ.), ಶ್ರೀಕಂಠಯ್ಯ ಕೆ.(ಸಂ.), ೧೯೮೩, ಕನ್ನಡ ಕಾವ್ಯಗಳಲ್ಲಿ ಸಮರ ಚಿತ್ರಗಳು, ಪ್ರಸಾರಾಂಗ ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೬೧. ಪುಟ್ಟಸ್ವಾಮಿ ಬಿ.ಎಸ್., ೨೦೦೭, ಕೈಫಿಯತ್ತು ಕಂಡ ಮೈಸೂರು ರಾಜಕೀಯ ಚರಿತ್ರೆ, ಕೆ.ಎಸ್.ಮುದ್ದಪ್ಪ ಸ್ಮಾರಕ ಟ್ರಸ್ಟ್, ಕೃಷ್ಣಾಪುರದೊಡ್ಡಿ.

೬೨. ಪುಟ್ಟಸ್ವಾಮಿ ಬಿ.ಎಸ್., ೨೦೧೧, ಯಲಹಂಕನಾಡ ಪ್ರಭು ಕೆಂಪೇಗೌಡ ಮತ್ತು ಆತನ ವಂಶಸ್ಥರು, ಮನೋಜ್ ಪಬ್ಲಿಕೇಷನ್, ಬೆಂಗಳೂರು.

೬೩. ಪುಷ್ಪ ತಾ.ಸ., ೧೯೮೫, ನಿಡುಗಲ್ ವೈಭವ (ಐತಿಹಾಸಿಕ ಕಾದಂಬರಿ), ಶ್ರೀಗೀತಾ ಪ್ರಕಾಶನ, ಚಿತ್ರದುರ್ಗ.

೬೪. ಬಸವರಾಜ ಕೆ.ಪಿ., ೨೦೧೦, ಸಿರಾ ಸೀಮೆಯ ಸಾಂಸ್ಕೃತಿಕ ವೀರರು, ಇಡಗೂರು ರುದ್ರಕವಿ ಪ್ರಕಾಶನ, ಮಧುಗಿರಿ.

೬೫. ಬಸವರಾಜು ಕೆ.ಆರ್., ೨೦೦೫, ನೊಳಂಬ ಇತಿಹಾಸ ದರ್ಶನ, ಲಕ್ಷ್ಮೀ ಮುದ್ರಣಾಲಯ, ಬೆಂಗಳೂರು.

೬೬. ಬಸವರಾಜ್ ಡಿ.ಆರ್., ೨೦೦೬, ನಿಡುಗಲ್ಲುದುರ್ಗ, ಪ್ರಮೋದ ಪ್ರಕಾಶನ, ಬೆಂಗಳೂರು.
೬೭. ಬಸವರಾಜ್ ಡಿ.ಆರ್., ೧೯೮೪, ನಿಡುಗಲ್ಲು ಬೆಟ್ಟದ ಮೇಲೆ, ಜಗದಾಂಬ ಪ್ರಕಾಶನ, ಬೆಂಗಳೂರು.
೬೮. ಬಸವರಾಜ ಕುಂಚೂರು, ೨೦೦೭, ಕುಂಬಾರಿಕೆ ವೃತ್ತಿ ಪದಕೋಶ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೬೯. ಬಾಶಮ್ ಎ.ಎಲ್.(ಮೂಲ), ಮಿರ್ಜಿ ಡಿ.ಆರ್.(ಅನು.), ೨೦೧೨, ಪ್ರಾಚೀನ ಭಾರತವೆಂಬ ಅದ್ಭುತ, ಐಬಿಹೆಚ್ ಪ್ರಕಾಶನ, ಬೆಂಗಳೂರು.
೭೦. ಬಾಲಗೋಪಾಲ್ ಕೆ.(ಮೂಲ), ಶ್ರೀಮತಿ ಎಚ್.ಎಸ್.(ಅನು.), ೨೦೧೨, ಪ್ರಾಚೀನ ಭಾರತದ ಚರಿತ್ರೆ, ಡಿ.ಡಿ.ಕೋಸಾಂಬಿ ಅವರ ಚಿಂತನೆಗಳು, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.
೭೧. ಬಿರಾದರ ಎಂ.ಜಿ., ೨೦೦೪, ಪಳೆಯುಳಿಕೆಗಳು, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೭೨. ಬೆಟಗೇರಿ ಕೃಷ್ಣಶರ್ಮ., ೧೯೮೩, ಕರ್ನಾಟಕ ಜನಜೀವನ, ಪ್ರಥಮ ವಿಶ್ವಕನ್ನಡ ಸಮ್ಮೇಳನ ಸಾಹಿತ್ಯ ಮಾಲೆ ವಿಚಾರ ಸಾಹಿತ್ಯ, ಬೆಂಗಳೂರು.
೭೩. ಬ್ರಹ್ಮಪ್ಪ ಜಿ., ೧೯೮೩, ಕರ್ನಾಟಕ ಜನ ಜೀವನ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.
೭೪. ಬ್ರಹ್ಮಪ್ಪ ಜಿ., ೧೯೮೫, ತುಮಕೂರು ಮತ್ತು ಕೋಲಾರ ಜಿಲ್ಲೆಯ ಪ್ರಾಚೀನ ಜೈನ ಸ್ಮಾರಕಗಳು, ಜೈನಶಾಸ್ತ್ರ ಮತ್ತು ಪ್ರಾಕೃತ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೭೫. ಭಟ್‌ಸೂರಿ ಕೆ.ಜಿ., ೨೦೦೬, ಶಾಸನ ಅಧ್ಯಯನ ಸಂಪುಟ–೩, ಸಂಚಿಕೆ–೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೭೬. ಭೋಯಿ ಮ.ಭಾ.(ಅನು.), ೧೯೯೯, ತಿರುಮಲಾರ್ಯ ವಿರಚಿತ ಚಿಕ್ಕದೇವರಾಜ ವಂಶಾವಳಿ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೭೭. ಭೈರಪ್ಪ ಕೆ., ೧೯೯೭, ತುರುವೇಕೆರೆ ತಾಲ್ಲೂಕು ದರ್ಶನ, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.
೭೮. ಮದ್ದೇವು ಮಾಧವರೆಡ್ಡಿ, ೨೦೦೨, ಬಂಗಾರನಾಯಕನದುರ್ಗ, ದೊಡ್ಡೇನಹಳ್ಳಿ ಬಸವರಾಜು ಪ್ರಕಾಶನ, ವೀರ್ಲಗೊಂದಿ.
೭೯. ಮಂಜುನಾಥ ಎಂ.ಜಿ., ೨೦೦೯, ಕರ್ನಾಟಕದ ಸಾಂಸ್ಕೃತಿಕ ಇತಿಹಾಸ, ಸುಮುಖ ಪ್ರಕಾಶನ, ಬೆಂಗಳೂರು.
೮೦. ಮಂಜುಳ ಎಸ್.ಎಸ್., ಲಕ್ಷ್ಮಣ್ ಬಿ.ವಿ., ೧೯೮೭, ಉತ್ತರೀದುರ್ಗ(ಚಾರಿತ್ರಿಕ ಕಥಾನಕ), ಇತಿಹಾಸ ಕಥಾ ಸಂಗ್ರಾಹಕರು, ಬೆಂಗಳೂರು.
೮೧. ಮಂಜುನಾಥನ್ ಜಿ.ಜಿ., ೨೦೦೨, ಆಚಣ್ಣ–ಅಗ್ಗಳ ಸಂಪುಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೮೨. ಮಹಾದೇವಯ್ಯ ಟಿ.ಆರ್., ೧೯೮೫, ಗುಬ್ಬಿ ತಾಲ್ಲೂಕು ದರ್ಶನ, ಐಬಿಹೆಚ್ ಪ್ರಕಾಶನ, ಬೆಂಗಳೂರು.
೮೩. ಮಹಾದೇವ ನಾ.ಜೋಶಿ., ೨೦೧೧, ಪ್ರಾಚೀನ ಭಾರತೀಯ ರಾಜನೀತಿ, ರೂಪ ಪ್ರಕಾಶನ, ಧಾರವಾಡ.

೮೪. ಮಲ್ಲಿಕಾರ್ಜುನ ಕೆ., ಮಾಳಿ ವಿ.ಎಸ್., ಬಿರಾದರ ಬಿ.ಎಸ್., ಅಶೋಕ ನರೋಡೆ, ೨೦೧೨, ಡಾ.ಬಿ.ಆರ್.ಹಿರೇಮಠರ ಶಾಸನ ಅಧ್ಯಯನ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೫. ಮಹದೇವ ಸಿ. (ಸಂ.), ೨೦೧೧, ನಾಗಮಂಗಲ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೬. ಮುದ್ದಾಚಾರಿ ಬಿ., ೧೯೭೫, ಮೈಸೂರು ಮರಾಠರ ಬಾಂಧವ್ಯ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮೭. ಮುದ್ದಾಚಾರಿ ಬಿ., ೨೦೦೧, ಮರಾಠರ ಅತಿಕ್ರಮಣ ಮೈಸೂರಿನ ಪ್ರತಿಭಟನೆ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೮೮. ಮೋಹನ್‌ಕೃಷ್ಣ ರೈ, ೨೦೦೬, ವಸಾಹತುಪೂರ್ವ ಕರ್ನಾಟಕದ ನಗರ ಚರಿತೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮೯. ಮೋಹನ್ ಎಸ್., ೨೦೧೦, ನಾಗಾರಾಧನೆ ಪರಂಪರೆ–ಸ್ಥಿತ್ಯಂತರಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೦. ಯೋಗೀಶ್ವರಪ್ಪ ಡಿ.ಎನ್., ೧೯೯೯, ಹಾಗಲವಾಡಿ ನಾಯಕರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೯೧. ಯೋಗೀಶ್ವರಪ್ಪ ಡಿ.ಎನ್., ೨೦೦೯, ಮಧ್ಯಕಾಲೀನ ಕರ್ನಾಟಕದ ಪಾಳೆಯಗಾರರು, ಧಾತ್ರಿ ಪುಸ್ತಕ ಮಾಲೆ, ಬೆಂಗಳೂರು.

೯೨. ಯೋಗೀಶ್ವರಪ್ಪ ಡಿ.ಎನ್., ೨೦೧೨, ಕಲ್ಪಶೋಧ, ಪ್ರಗತಿ ಗ್ರಾಫಿಕ್ಸ್, ಬೆಂಗಳೂರು.

೯೩. ರಂಗಲಕ್ಷ್ಮಿ ಪಿ.ಎ., ೨೦೦೫, ಪಾವಗಡ ತಾಲ್ಲೂಕಿನ ಜಾನಪದ ವೀರನಾಯಕರು, ಸುಮುಖ ಪ್ರಕಾಶನ ಮಾಲೆ, ಬೆಂಗಳೂರು.

೯೪. ರಂಗಸ್ವಾಮಿ(ಪ್ರ.ಸಂ.), ಜಯಪ್ಪಗೌಡ(ಲೇ.), ೨೦೧೧, ಪ್ರಾಚೀನ ಕರ್ನಾಟಕದ ಅಧಿಕಾರ ಕೇಂದ್ರಗಳು, ಕನ್ನಡ ಅಧ್ಯಯನ ಮತ್ತು ಸಂಶೋಧನಾ ವಿಭಾಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು.

೯೫. ರಾಜಶೇಖರಪ್ಪ ಹೆಚ್.ವೈ., ೨೦೦೮, ತುಮಕೂರು ಜಿಲ್ಲೆಯ ಅಂಕಿ–ಅಂಶಗಳ ನೋಟ–೨೦೦೭–೦೮, ಜಿಲ್ಲಾ ಪಂಚಾಯ್ತಿ, ತುಮಕೂರು.

೯೬ ರಾಜಶೇಖರಪ್ಪ ಹೆಚ್.ವೈ., ೨೦೦೯, ತುಮಕೂರು ಜಿಲ್ಲೆಯ ಅಂಕಿ ಅಂಶಗಳ ನೋಟ–೨೦೦೮–೦೯, ಜಿಲ್ಲಾ ಪಂಚಾಯ್ತಿ, ತುಮಕೂರು.

೯೭ ರಾಜಶೇಖರಪ್ಪ, ೨೦೧೨, ತುಮಕೂರು ಜಿಲ್ಲೆಯ ಅಂಕಿ–ಅಂಶಗಳ ನೋಟ, ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳವರ ಕಛೇರಿ, ಜಿಲ್ಲಾ ಪಂಚಾಯತ್, ತುಮಕೂರು.

೯೮. ರಾಜೇಗೌಡ ಹ.ಕ., ೨೦೦೫, ಬೆಂಗಳೂರು ಕೆಂಪೇಗೌಡ ಮತ್ತು ಅವನ ವಂಶಸ್ಥರು, ಕೆಂಪೇಗೌಡ ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೯೯. ರಾಮಚಂದ್ರಪ್ಪ ಹ., ೨೦೦೪, ಪಿನಾಕಿನಿ ಸ್ಮರಣ ಸಂಚಿಕೆ(೪ನೆಯ ತಾಲೂಕು ಕನ್ನಡ ಸಾಹಿತ್ಯ ಸಮ್ಮೇಳನ) ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು, ಪಾವಗಡ.

೧೦೦. ರಾಮಚಂದ್ರೇಗೌಡ ಹಿ.ಶಿ.(ಪ್ರಸಂ.), ೨೦೦೭, ಕನ್ನಡ ವಿಷಯ ವಿಶ್ವಕೋಶ, ಕರ್ನಾಟಕ ಸಂಪುಟ–೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೧೦೧. ರಾಮಶೇಷನ್ ನೀ.ಕೃ., ೧೯೮೮, ಮಧುಗಿರಿ, ಐಬಿಹೆಚ್. ಪ್ರಕಾಶನ, ಬೆಂಗಳೂರು.
೧೦೨. ರೊಮಿಲಾ ಥಾಪರ್.(ಮೂಲ)., ಸದಾನಂದ ಕನವಳ್ಳಿ.(ಅನು.), ೧೯೭೯, ಭಾರತದ ಇತಿಹಾಸ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೧೦೩. ಲಕ್ಷ್ಮಣ ಸಿ.ಎಂ., ೨೦೦೦, ತುಮಕೂರು ಜಿಲ್ಲೆಯ ಭೌಗೋಳಿಕ ಪರಿಸರ ಮತ್ತು ಅಭಿವೃದ್ಧಿ, ದರ್ಶನ್ ಪ್ರಕಾಶನ, ತುಮಕೂರು.
೧೦೪. ಲಕ್ಷ್ಮಣ್ ತೆಲಗಾವಿ, ೨೦೦೮, ಕರ್ನಾಟಕ ಪಾಳೆಯಗಾರರ ನ್ಯಾಯಾಡಳಿತ, ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
೧೦೫. ಲಕ್ಷ್ಮಣ್ ತೆಲಗಾವಿ., ಶ್ರೀನಿವಾಸ್ ಎಂ.ವಿ. (ಸಂ.), ೧೯೭೬, ಹುಲ್ಲೂರು ಶ್ರೀನಿವಾಸ ಜೋಯಿಸರ ಐತಿಹಾಸಿಕ ಲೇಖನಗಳು, ಹುಲ್ಲೂರು ಶ್ರೀನಿವಾಸ ಜೋಯಿಸ ಗ್ರಂಥ ಪ್ರಕಟಣ ಸಮಿತಿ, ಚಿತ್ರದುರ್ಗ.
೧೦೬. ಲಕ್ಷ್ಮಣ್ ತೆಲಗಾವಿ, ೨೦೧೦, ಎಪ್ಪತ್ತೇಳು ಪಾಳೆಯಗಾರರು(ಸಂಖ್ಯಾ ಆಶಯ ನೆಲೆಯ ಚಾರಿತ್ರಿಕ ವಿವೇಚನೆ), ವಾಲ್ಮೀಕಿ ಸಾಹಿತ್ಯ ಸಂಪದ, ಹರ್ತಿಕೋಟೆ.
೧೦೭. ಲಕ್ಷ್ಮೀನಾರಾಯಣ, ಪಂಚಮುಖಿ ರಾ.ಸ್ವಾ, ೨೦೦೮, ಕರ್ನಾಟಕದ ಅರಸುಮನೆತನಗಳು, ಕರ್ನಾಟಕ ಇತಿಹಾಸ ಸಂಶೋಧನ ಮಂಡಲ, ಧಾರವಾಡ.
೧೦೮. ವಸು ಎಂ.ವಿ. (ಸಂ.), ೨೦೦೧, ದಕ್ಷಿಣ ಕರ್ನಾಟಕದ ಅರಸು ಮನೆತನಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೦೯. ವಾಸುದೇವ ಬಡಿಗೇರ, ೨೦೦೮, ಹಾನಗಲ್ಲು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೧೦. ವಿರೂಪಾಕ್ಷಿ ಪೂಜಾರಹಳ್ಳಿ, ೨೦೧೦, ವಾಲ್ಮೀಕಿ ಮತ್ತು ತಿರುವಳ್ಳುವರ್ ರಾಜನೀತಿಯ ಪರಿಕಲ್ಪನೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೧೧. ವೀರಣ್ಣ ರಾಜೂರ, ೧೯೮೬, ಹಾಗಲವಾಡಿಯ ಮುದ್ವೀರ ಸ್ವಾಮಿಯ ಸ್ವರವಚನಗಳು, ವೀರಶೈವ ಅಧ್ಯಯನ ಸಂಸ್ಥೆ, ಗದಗ.
೧೧೨. ವೆಂಕಟಾಚಲಶಾಸ್ತ್ರೀ, ೧೯೮೬, ಪ್ರಾಕ್ತಾನ, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೧೧೩. ಶಂಕರ ನಾರಾಯಣರಾವ್., ೨೦೦೭, ಆವತಿನಾಡ ಪ್ರಭುಗಳು, ಸಪ್ನ ಬುಕ್‌ಹೌಸ್, ಬೆಂಗಳೂರು.
೧೧೪. ಶಾಂತವೀರಯ್ಯ, ೧೯೭೯, ನಿಟ್ಟೂರು ಶಾಂತಿನಾಥ, ಶ್ರೀಪ್ರಸಾದ ಪ್ರಕಾಶನ, ಬೆಂಗಳೂರು.
೧೧೫. ಶಿವಣ್ಣ ಡಿ.ಕೆ., ೧೯೮೮, ಮಾನವಶಾಸ್ತ್ರ, ಕಲಾ ಪ್ರಕಾಶನ, ಬೆಂಗಳೂರು.
೧೧೬. ಶಿವತಾರಕ್ ಕೆ.ಬಿ., ೨೦೦೧, ಕರ್ನಾಟಕದ ಪುರಾತತ್ವ ನೆಲೆಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೧೭. ಶಿವರಾಮ ಕಾರಂತ., ೧೯೭೯, ನಾಗರಿಕತೆಯ ಹೊಸ್ತಿಲಲ್ಲಿ, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೧೧೮. ಶಿಲ್ಪಾ., ೧೯೮೯, ಪ್ರಕೃತಿ ಮತ್ತು ಮಾನವ, ಪ್ರಕಾಶ ಸಾಹಿತ್ಯ, ಬೆಂಗಳೂರು.
೧೧೯. ಶೇಷನವರತ್ನ(ಅನು.), ೨೦೦೯, ಮನುಸ್ಮೃತಿ, ಸಮಾಜ ಪುಸ್ತಕಾಲಯ, ಧಾರವಾಡ.
೧೨೦. ಶೇಷಾದ್ರಿ(ಸಂ.), ೧೯೭೭, ಭುಗಿಲು, ರಾಷ್ಟ್ರೋತ್ತಾನ ಸಾಹಿತ್ಯ, ಬೆಂಗಳೂರು.

೧೨೧. ಶೇಷಗಿರಿರಾವ್ ಎಲ್.ಎಸ್., ೧೯೯೪, ಕಿರಿಯರ ಕರ್ನಾಟಕ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.
೧೨೨. ಶ್ಯಾಮಲ ಸಿ.ಆರ್., ೨೦೦೮, ಪೂರ್ವ ಕರ್ನಾಟಕದ ಪಾಳೆಯಗಾರರು ಒಂದು ಅಧ್ಯಯನ, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೨೩. ಶ್ರೀಕಂಠಶಾಸ್ತ್ರಿ ಎಸ್., ೧೯೭೫, ಸಂಶೋಧನ ಲೇಖನಗಳು, ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೧೨೪. ಶ್ರೀಧರ ಎಚ್.ಜಿ., ೨೦೦೨, ಪ್ರಾಚೀನ ಕನ್ನಡ ಸಾಹಿತ್ಯದಲ್ಲಿ ಯುದ್ಧಕಲೆ(ಕ್ರಿ.ಶ.೪೫೦-೧೩೫೦), ಶಿವರಾಮ ಕಾರಂತ ಅಧ್ಯಯನ ಕೇಂದ್ರ, ಪುತ್ತೂರು.
೧೨೫. ಶ್ರೀನಿವಾಸ ಪಾ.ಶ., ೨೦೦೭, ತಿರುಕ್ಕುಱಳ್, ಪ್ರಿಯದರ್ಶಿನಿ ಪ್ರಕಾಶನ, ಬೆಂಗಳೂರು.
೧೨೬. ಶ್ರೀನಿವಾಸ ಎಂ.ಡಿ., ೧೯೮೭, ಮಧುಗಿರಿ ಇತಿಹಾಸ, ಸುಧಾ ಪ್ರಕಾಶನ, ಮಧುಗಿರಿ.
೧೨೭. ಶ್ರೀನಿವಾಸ್ ಎಂ.ಡಿ., ೨೦೦೯, ಮಿಡಿಗೇಶಿ, ಬನಶಂಕರಿ ಪ್ರಕಾಶನ, ತುಮಕೂರು.
೧೨೮. ಶ್ರೀನಿವಾಸ್ ಎಂ.ಡಿ., ೨೦೧೦, ಭಸ್ಮಾಂಗಿ, ಬನಶಂಕರಿ ಪ್ರಕಾಶನ, ತುಮಕೂರು.
೧೨೯. ಸಣ್ಣನಾಗಪ್ಪ, ೨೦೦೭, ನಿಡುಗಲ್ಲು ಶೂಲದ ಈರಣ್ಣ ಜನಪದ ಸಂಗ್ರಹ, ಸ್ಫೂರ್ತಿ ಪ್ರಕಾಶನ, ಪಾವಗಡ.
೧೩೦. ಸಣ್ಣನಾಗಪ್ಪ, ೨೦೦೩, ಪವಾಡ ಪುರುಷ ಶ್ರೀ ವೆಂಕಾವಧೀತ ಸ್ವಾಮಿ, ಸ್ಫೂರ್ತಿ ಪ್ರಕಾಶನ, ಪಾವಗಡ.
೧೩೧. ಸಣ್ಣನಾಗಪ್ಪ, ೨೦೦೬, ಇತಿಹಾಸ ಪ್ರಸಿದ್ಧಿ ಕಾಕಾದ್ರಿ ಪರ್ವತ ಶ್ರೀ ವರದಾಂಜನೇಯ, ಸ್ಫೂರ್ತಿ ಪ್ರಕಾಶನ, ಪಾವಗಡ.
೧೩೨. ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿ, ೨೦೦೫, ಕೌಟಿಲೀಯ ಅರ್ಥಶಾಸ್ತ್ರ, ಅಂಕಿತ ಪುಸ್ತಕ, ಬೆಂಗಳೂರು.
೧೩೩. ಸರೋಜಾ ಜಿ.ವಿ.ಪಿ., ೨೦೦೫, ಕನ್ನಡ ಐತಿಹ್ಯಗಳು, ಚೇತನ ಬುಕ್ ಹೌಸ್, ಮೈಸೂರು.
೧೩೪. ಸಿದ್ಧಗೌರಿ ನಂಜುಂಡಸ್ವಾಮಿ, ೨೦೧೩, ಶ್ರೀಕ್ಷೇತ್ರ ಸಿದ್ಧರಬೆಟ್ಟ, ವೀರಭದ್ರ ಶಿವಾಚಾರ್ಯಸ್ವಾಮಿ ಪ್ರಕಾಶನ, ಸಿದ್ಧರಬೆಟ್ಟ.
೧೩೫. ಸಾಮಕ್ ಎಸ್.ಜಿ., ಜಗದೀಶ, ರಮೇಶ ಜೋಯೀಸ್ ಎಂ.ವ್ಹಿ. (ಸಂ.), ೨೦೦೮, ಕದಂಬರ ಅರೆತಲಗದ್ದೆಯ ಅಪೂರ್ವ ತಾಮ್ರಶಾಸನಗಳ ಭಂಡಾರ, ಕರ್ನಾಟಕ ಇತಿಹಾಸ ಸಂಶೋಧನಾ ಮಂಡಲ, ಧಾರವಾಡ.
೧೩೬. ಸಾಲೆತ್ತೊರೆ ಬಿ.ಎ., ದೇಸಾಯಿ ಪಾಂಡುರಂಗರಾಯ, ೨೦೦೫, ಕನ್ನಡ ನಾಡಿನ ಚರಿತ್ರೆ, ಭಾಗ-೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.
೧೩೭. ಸುಂದರ ಅ., ೧೯೭೧, ಇತಿಹಾಸಪೂರ್ವ ಕರ್ನಾಟಕ ಅಥವಾ ಕರ್ನಾಟಕದ ಪ್ರಾಗೈತಿಹಾಸ, ಐಬಿಹೆಚ್ ಪ್ರಕಾಶನ, ಬೆಂಗಳೂರು.
೧೩೮. ಸುಜಾತಾ ಎಚ್.ಎಸ್., ೧೯೮೫, ಹಾಗಲವಾಡಿ ಪಾಳೆಯಗಾರರು, ಐಬಿಹೆಚ್. ಪ್ರಕಾಶನ, ಬೆಂಗಳೂರು.
೧೩೯. ಸುದರ್ಶನಸ.ರ., ೨೦೦೭, ಕರ್ನಾಟಕದ ಭೂವಿಸ್ಮಯಗಳು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೧೪೦. ಸೂರ್ಯನಾಥ ಯು.ಕಾಮತ್(ಸಂ.), ೧೯೮೬, ಭಾರತದ ಗ್ಯಾಸೆಟಿಯರ್, ಕರ್ನಾಟಕ ರಾಜ್ಯ ಗ್ಯಾಸೆಟಿಯರ್, ಭಾಗ-೨, ಕರ್ನಾಟಕ ರಾಜ್ಯ ಸರ್ಕಾರದ ಪ್ರಕಟಣೆ, ಬೆಂಗಳೂರು.

೧೪೧. ಸೋಮಶೇಖರ್ ಎಸ್.ವೈ.(ಸಂ.), ೨೦೧೦, ಜಗಲೂರು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೨. ಸೋಮಶೇಖರ್ ಎಸ್.ವೈ.(ಸಂ.), ೨೦೧೦, ಬ್ರಹ್ಮಗಿರಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪೩. ಸೀತಾರಾಮಯ್ಯ ಎಂ.ಬಿ., ಆಚಾರ್ಯ ವಿ.ಎಸ್.ಎಸ್.(ಸಂ.), ೧೯೮೩, ಶ್ರೀಕೃಷ್ಣದೇವರಾಯನ ದಿನಚರಿ, ಬಿ.ಎಂ.ಸ್ಮಾರಕ ಪ್ರತಿಷ್ಠಾನ, ಬೆಂಗಳೂರು.

೧೪೪. ಹಿರೇಮಠ ಬಿ.ಆರ್., ೧೯೮೬, ಶಾಸನಗಳಲ್ಲಿ ಕರ್ನಾಟಕದ ವರ್ತಕರು, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೧೪೫. ಹುಳಿಯೂರು ಶ್ರೀನಿವಾಸ ಅಯ್ಯಂಗಾರ್ ಕೃಷ್ಣಸ್ವಾಮಿ, ೧೯೮೫, ಅವಲೋಕನ ಕರ್ನಾಟಕ ಪರಂಪರೆಯ ಸಮೀಕ್ಷೆ, ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯ, ಬೆಂಗಳೂರು.

ಕರ್ನಾಟಕ ಇತಿಹಾಸ ದರ್ಶನ ಸಂಪುಟಗಳು

೧. ಇತಿಹಾಸದರ್ಶನ, ಸಂಪುಟ–೩

೨. ಇತಿಹಾಸ ದರ್ಶನ, ಸಂಪುಟ–೬

೩. ಇತಿಹಾಸ ದರ್ಶನ, ಸಂಪುಟ–೭

೪. ಇತಿಹಾಸ ದರ್ಶನ, ಸಂಪುಟ–೮

೫. ಇತಿಹಾಸ ದರ್ಶನ, ಸಂಪುಟ–೯

೬. ಇತಿಹಾಸ ದರ್ಶನ, ಸಂಪುಟ–೧೦

೭. ಇತಿಹಾಸ ದರ್ಶನ, ಸಂಪುಟ–೧೧

೮. ಇತಿಹಾಸ ದರ್ಶನ, ಸಂಪುಟ–೧೨

೯. ಇತಿಹಾಸ ದರ್ಶನ, ಸಂಪುಟ–೧೩

೧೦. ಇತಿಹಾಸ ದರ್ಶನ, ಸಂಪುಟ–೧೪

೧೧. ಇತಿಹಾಸ ದರ್ಶನ, ಸಂಪುಟ–೧೫

೧೨. ಇತಿಹಾಸ ದರ್ಶನ, ಸಂಪುಟ–೧೬

೧೩. ಇತಿಹಾಸ ದರ್ಶನ, ಸಂಪುಟ–೧೭

೧೪. ಇತಿಹಾಸ ದರ್ಶನ, ಸಂಪುಟ–೧೮

೧೫. ಇತಿಹಾಸ ದರ್ಶನ, ಸಂಪುಟ–೧೯

೧೬. ಇತಿಹಾಸ ದರ್ಶನ, ಸಂಪುಟ–೨೦

೧೭. ಇತಿಹಾಸ ದರ್ಶನ, ಸಂಪುಟ–೨೧

೧೮. ಇತಿಹಾಸ ದರ್ಶನ, ಸಂಪುಟ–೨೨

೧೯. ಇತಿಹಾಸ ದರ್ಶನ, ಸಂಪುಟ–೨೩

ಅಪ್ರಕಟಿತ ಪಿಹೆಚ್.ಡಿ. ಮಹಾಪ್ರಬಂಧಗಳು

1. ಕೊಟ್ರೇಶ ಎಂ., ೨೦೦೨, ಕೋಟೆ ಕೊತ್ತಲಗಳು ಒಂದು ಅಧ್ಯಯನ ಬಳ್ಳಾರಿ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

2. ತಿಪ್ಪೇಸ್ವಾಮಿ ಎಸ್., ೨೦೦೪, ರಕ್ಷಣಾ ವಾಸ್ತುಶಿಲ್ಪ : ಚಿತ್ರದುರ್ಗ ಜಿಲ್ಲೆ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

3. ಮುದ್ವೀರಪ್ಪ, ೨೦೦೪, ತುಮಕೂರು ಜಿಲ್ಲೆಯ ಕೋಟೆ ಕೊತ್ತಲಗಳ ಜಾನಪದೀಯ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

4. ಮುನಿರಾಜು, ೨೦೧೫, ತುಮಕೂರು ಜಿಲ್ಲೆಯ ಗಿರಿದುರ್ಗಗಳ ಐತಿಹಾಸಿಕ ಅಧ್ಯಯನ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

5. ಶ್ರೀನಿವಾಸ ಬಡಿಗೇರ, ೨೦೧೪, ಬೆಳಗಾವಿ ಜಿಲ್ಲೆಯ ರಕ್ಷಣಾ ವಾಸ್ತುಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಅಪ್ರಕಟಿತ ಎಂ.ಫಿಲ್. ನಿಬಂಧಗಳು

೧. ದಾಸಪ್ಪ ಎನ್., ೨೦೧೦, ಕೋರಾ ಹೋಬಳಿ ಪರಿಸರದ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ನಾಗೇಂದ್ರ ಬಿ.ಸಿ., ೨೦೧೨, ತುಮಕೂರು ಪಟ್ಟಣದ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೩. ಮಹೇಶ್ ಕುಮಾರ್ ಡಿ.ಎಚ್., ೨೦೧೦, ಚೆನ್ನರಾಯನದುರ್ಗ ಪರಿಸರದ ಇತಿಹಾಸ ಮತ್ತು ಪುರಾತತ್ವ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೪. ರವೀಶ ಜಿ.ಎನ್., ೨೦೧೦, ನಿಡುಗಲ್ಲು ಪರಿಸರದ ರಕ್ಷಣಾ ವಾಸ್ತುಶಿಲ್ಪ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ರಾಘವೇಂದ್ರ, ೨೦೦೭, ಪಾವಗಡ ಪರಿಸರದ ಚರಿತ್ರೆ ಮತ್ತು ಪುರಾತತ್ವ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೬ ರೇವಣಸಿದ್ದಪ್ಪ, ೨೦೧೪, ಕುಣಿಗಲ್ ಪಟ್ಟಣದ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೭ ಶ್ರೀನಿವಾಸ ಎ.ಜಿ., ೨೦೧೧, ನಿಟ್ಟೂರು ಪರಿಸರದ ಸಾಂಸ್ಕೃತಿಕ ಅಧ್ಯಯನ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ಆಂಗ್ಲ ಪುಸ್ತಕಗಳು

1. Amrit verma, 1996, Forts of India, Publications division ministary of Information and broadcasting goverment of India, Delhi.

2. Chakravarthi P.C., 1987, The art of war in Ancient India, Karan Publications, Delhi.

3. Gautham C.P, 1995, Forts of Andhra Pradesh (From the earliest times upto lbth C.A.D.) Bharatiya Kala Prakashana, Delhi

4. Internet information (different websites)

5. Gautham C.P, 1995, Forts of Andhra Pradesh (From the earliest times upto lbth C.A.D.) Bharatiya Kala Prakashana, Delhi

6. Shamasastry R, 1929, KAUTILYA'S Arthasastra, padam pringting, Mysore.
7. Singh A.P, 1993, Forts and Fortifications india, Agam kala prakhashana, Delhi.
8. Stephen Francis Wyles, 1990, A Dictionary of military Architecture, Angelfire.com(Sevensemail@lycos.com.
9. Venkesha, Ramesh K.V., 2000, South India. Feupatory Dynasties, Sharada Publishing House, Delhi.

ಶಾಸನ ಸಂಪುಟ ಮತ್ತು ವರದಿಗಳು

೧. ಗಂಗಾನಾಯಕ್ ಕೆ.ಎನ್.(ಪ್ರ.ಸಂ.), ನಾಗಯ್ಯ ಜೆ.ಎಂ.(ಸಂ.), ೨೦೧೧, ಕಲ್ಯಾಣ ಚಾಲುಕ್ಯರ ಶಾಸನಗಳು, ಸಂಪುಟ-೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೨. ಗಂಗನಾಯಕ್ ಕೆ.ಎನ್(ಪ್ರ.ಸಂ.), ಪುಟ್ಟಸ್ವಾಮಿ(ಸಂ.), ೨೦೧೨, ಪಾಳೆಯಗಾರರ ಶಾಸನಗಳು ಸಂಪುಟ-೨, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೩. ಗಂಗಾನಾಯಕ್ ಕೆ.ಎನ್(ಪ್ರ.ಸಂ.), ಶೈಲಜ ಬಿ.ಎಂ.(ಸಂ.), ೨೦೧೨, ಪಾಳೆಯಗಾರರ ಶಾಸನಗಳು, ಸಂಪುಟ.೧, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
೪. ಶ್ರೀನಿವಾಸ ರಿತ್ತಿ(ಸಂ.), ಮಂಜುನಾಥ ಎಂ.ಜಿ.(ಉ.ಸಂ.), ೨೦೦೯, ಎಪಿಗ್ರಾಫಿಯ ಸಂಪುಟ.೨೪, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.
5. Annual report Indian Ephigraphi.
6. Annual report on South Indian Inscription.
7. Ephigraphia Indica volumes.
8. Ephigraphia carnatica volumes.
9. Gopal B.R, 1990, Vijayanagara Inscriptions, Volume-III, Directorate of Archaeology and museums, Mysore.
10. Gezatteer – State, district, taluka http://gazetteer.kar.nic.in/
11. Indian Archaeological Review.
12. Lewis Rice B., Asian educational service, Nwe Delhi.
13. Mysore Archaeological Report.
14. Nilakanta Shastri K.A., 1958, Epigraphia Carnatica vol-XVI supplementary Inscriptions in the tumkur District, The Deputy Director Government Branch Press, Mysore.
15. South Indian Inscription Volumes.
16. Vasudevan C.S., 1999, Kannada Inscriptions of Andrapradesh, Prasaranga, Kannada University, Hampi

ನಿಯತಕಾಲಿಕೆಗಳು

೧. ಚಿನ್ನಸ್ವಾಮಿ ಸೋಸಲೆ(ಸಂ.), ೨೦೧೦, ಚರಿತ್ರೆ ಅಧ್ಯಯನ ಸಂಪುಟ.೫, ಸಂಚಿಕೆ-೨, ಜನವರಿ-ಜೂನ್ ೨೦೧೦, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೨. ನಾಗಮಣಿ ಪದ್ಮನಾಭ(ಸಂ.), ೨೦೦೩ ಆಗ್ನೇಯವಾಣಿ ಕೊರಟಗೆರೆ ತಾಲ್ಲೂಕು ದರ್ಶನ, ೫ನೆಯ ವಾರ್ಷಿಕ ವಿಶೇಷ ಸಂಚಿಕೆ, ಯಶು-ಅಭಿ ಪ್ರಕಾಶನ, ಕೊರಟಗೆರೆ.

೩. ಲಕ್ಷ್ಮಣ್ ತೆಲಗಾವಿ(ಸಂ.), ೨೦೦೬, ಚರಿತ್ರೆ ಅಧ್ಯಯನ ಸಂಪುಟ-೧, ಸಂಚಿಕೆ-೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

ದಿನಪತ್ರಿಕೆಗಳು

೧. ಕನ್ನಡಪ್ರಭ.

೨. ಪ್ರಜಾವಾಣಿ.

೩. ವಿಜಯ ಕರ್ನಾಟಕ.

4. Deccan Herald.

ಪದಕೋಶ

೦೧. ಅಂತರ್ಗೃಹ	–	ಮನೆಯ ಒಳಭಾಗ
೦೨. ಅಂಬುಕಿಂಡಿ	–	ಕೋಟೆಯ ಕೊತ್ತಲದಲ್ಲಿ ಮರೆಯಾಗಿ ನಿಂತು ಹೊರಗಿರುವ ಶತ್ರುಗಳ ಮೇಲೆ ಬಾಣ ಬಿಡುವುದಕ್ಕಾಗಿ ಇರುವ ಕಿಂಡಿ.
೦೩. ಆಳ್ವೇರಿ	–	ಕೋಟೆಯ ಸುತ್ತಣಗೋಡೆ, ಕೋಟೆಯ ಎತ್ತರವಾದ ಗೋಡೆ.
೦೪. ಇಳಿವೊರೆ	–	ಕೋಟೆ ಗೋಡೆಯ ರಕ್ಷಣೆಗಾಗಿ ಹಾಕಿರುವ ಮಣ್ಣಿನ ದಿಬ್ಬ,
೦೫. ಉರ	–	ಎದೆ; ವೃಕ್ಷಸ್ಥಳ
೦೬. ಐರಿಣ	–	ಹಳ್ಳ, ಮುಳ್ಳು, ಕಲ್ಲುಗಳಿಂದ ಕೂಡಿರುವುದು.
೦೭. ಔದಕ	–	ನಡುಗಡ್ಡೆ, ನೀರಿನಿಂದ ಸುತ್ತುವರೆದ ಕಂದಕ.
೦೮. ಕಂದಕ	–	ಕೋಟೆಯ ಸುತ್ತಲಿರುವ ಅಗಳು
೦೯. ಕಣಜ	–	ಧಾನ್ಯಗಳನ್ನು ಸಂಗ್ರಹಿಸುವ ಸ್ಥಳ.
೧೦. ಕೀರ್ತಿಮುಖ	–	ದೇವಾಲಯ ಅಥವಾ ಕೋಟೆಯ ದ್ವಾರಗಳಲ್ಲಿರುವ ಸಿಂಹಾಕೃತಿಯ ಶಿಲ್ಪ.
೧೧. ಕೂರ್ಮ	–	ಆಮೆ, ವಿಷ್ಣುವಿನ ಹತ್ತು ಅವತಾರಗಳಲ್ಲಿ ಮೂರನೆಯದು
೧೨. ಕೋರಿ	–	ಉಗ್ರಾಣ, ಕೋಣೆ
೧೩. ಕೊತ್ತಲ	–	ಕೋಟೆಯ ಪ್ರಾಕಾರದ ಮೇಲೂ, ಗೋಪುರದ ತುದಿಯಲ್ಲಿ ಕಟ್ಟುವ ವರ್ತುಲಾಕಾರದ ಕಟ್ಟಡ.
೧೪. ಗರಡಿ	–	ವ್ಯಾಯಾಮ ಶಾಲೆ
೧೫. ಗಹ್ವರ	–	ಗವಿ, ಗುಹೆ, ಕಾಡು ; ವನ, ಪ್ರವೇಶಿಸಲು ಆಗದ; ಅಗಮ್ಯವಾದ ಸ್ಥಳ
೧೬. ಗುರಾಣಿ	–	ಅಡ್ಡಣ ; ಹರಿಗೆ ; ಢಾಲು.
೧೭. ಗುಂಡು	–	ದಪ್ಪಗಿರುವ ಕಲ್ಲು.
೧೮. ಗೋಪುರ	–	ನಗರದ ಹೆಬ್ಬಾಗಿಲು; ಮಹಾದ್ವಾರ, ನಗರದ ಅಥವಾ ದೇವಸ್ಥಾನಗಳ ಮಹಾದ್ವಾರದ ಮೇಲಿನ ಗುಮ್ಮಟ.
೧೯. ಜಗತಿ	–	ವೇದಿಕೆ
೨೦. ಚಿಲುಮೆ	–	ನೀರು ಉಕ್ಕುವ ಸ್ಥಳ.
೨೧. ಠಾಣ್ಯ	–	ನೆಲೆ ; ಬೀಡು; ಸೈನ್ಯದ ಶಿಬಿರ.
೨೨. ಪಂಕ	–	ಕೆಸರು, ರಾಡಿ, ಹೊಲಸು.
೨೩. ಪರಿಕೆ	–	ಕೋಟೆಯ ಅಗಳು ; ಕಂದಕ.
೨೪. ಪರಿಖ	–	ಪಟ್ಟದ ಅಥವಾ ಕೋಟೆಯ ಸುತ್ತಲೂ ಅಗೆದಿರುವ ಕಂದಕ; ಅಗಳು.

೨೫. ಪರಿಘ	–	ಅಗುಳಿ, ಲಾಳ ವಿಂಡಿಗೆ, ಕಬ್ಬಿಣದ ಆಯುಧ.
೨೬. ಪಹರೆ	–	ಗಸ್ತು; ಕಾವಲು.
೨೭. ಪಾದರಿ	–	ಒಂದು ಜಾತಿಯ ಮರ ಮತ್ತು ಸುವಾಸನೆಯುಳ್ಳ ಅದರ ಹೂವು.
೨೮. ಪಾಷಾಣ	–	ಕಲ್ಲು, ಶಿಲೆ, ಮಣಿ, ರತ್ನ, ಒಂದು ಬಗೆಯ ವಿಷ.
೨೯. ಪ್ರಾಕಾರ	–	ಸುತ್ತುಗೋಡೆ, ಅಂಕಣ, ಆವಾರ, ಆವರಣ.
೩೦. ಫಿರಂಗಿ	–	ದೊಡ್ಡ ತುಬಾಕಿ, ತೋಪು.
೩೧. ಬತೇರಿ	–	ಕೋಟೆಯ ಮೇಲಿನ ತೋಪುಖಾನೆ.
೩೨. ಬಾಚಿ	–	ಮರವನ್ನು ಕೆತ್ತಲು ಬಡಗಿಗಳು ಬಳಸುವ ಅಗಲವಾದ ಬಾಯಿಯ ಒಂದು ಬಗೆಯ ಕಬ್ಬಿಣದ ಸಾಧನ.
೩೩. ಬುರುಜು	–	ಕೋಟೆಯ ಪ್ರಾಕಾರದ ಮೇಲೂ ಗೋಪುರದ ತುದಿಯಲ್ಲೂ ಕಟ್ಟುವ ವರ್ತುಲಾಕಾರದ ಕಟ್ಟಡ.
೩೪. ಭದ್ರಮ್	–	ಒಂದೇ ಬಂಡೆಯ ಮೇಲೆ ನೀರಿರುವ ಎತ್ತರವಾದ ಗುಹೆಗಳು.
೩೫. ಭಿತ್ತಿ	–	ಗೋಡೆ.
೩೬. ಮಂಟಪ	–	ಸಮತಲವಾದ ಚಾವಣಿಯುಳ್ಳ ಬಾಗಿಲಿಲ್ಲದ ಚಪ್ಪರದಾಕಾರದ ಕಲ್ಲಿನ ಕಟ್ಟಡ.
೩೭. ಮತ್ಸ್ಯ	–	ಮೀನು, ವಿಷ್ಣುವಿನ ದಶಾವತಾರಗಳಲ್ಲಿ ಮೊದಲನೆಯದು.
೩೮. ಮದ್ದು	–	ಸಿಡಿಮದ್ದು
೩೯. ಮಹೀ	–	ಭೂಮಿ, ಪೃಥ್ವಿ.
೪೦. ಮುಗಿಲಟ್ಟಣೆ	–	ಕೋಟೆಗೋಡೆಯ ಮೇಲೆ ಸೈನಿಕರು ಮತ್ತು ಮದ್ದುಗುಂಡುಗಳನ್ನು ಇಡಲು ವಿಶಾಲವಾದ ಉಪ್ಪರಿಗೆ, ಗಗನವನ್ನು ಮುಟ್ಟುವಷ್ಟು ಎತ್ತರವಾಗಿರುವ ಬುರುಜು.
೪೧. ಮೊನೆ	–	ತುದಿ, ಕೊನೆ, ಹರಿತವಾದದು.
೪೨. ತೆನೆ	–	ಗೋಡೆಯ ಮೇಲ್ಭಾಗ ಕಂಡಿಯುಳ್ಳ ರಚನೆ.
೪೩. ತೋಪು	–	ತುಪಾಕಿ, ಫಿರಂಗಿ.
೪೪. ದಂಡ	–	ಅಧಿಕಾರದಂಡ, ಶಿಕ್ಷೆ.
೪೫. ದಾರುಮಯ	–	ಸುತ್ತಲೂ ಶಸ್ತ್ರಸಜ್ಜಿತರಾದ ಯೋಧರನ್ನು ನಿಲ್ಲಿಸಿ ತಯಾರಿಸಿರುವ ಕೋಟೆ.
೪೬. ದುರ್ಗ	–	ಕೋಟೆ, ಕಾಡು, ಅಡವಿ, ಪಟ್ಟಣ.
೪೭. ದುರ್ಗಮ	–	ಹೋಗಲು ಅಸಾಧ್ಯವಾದುದು.
೪೮. ದಿಡ್ಡಿ	–	ಹೆಬ್ಬಾಗಿಲಿನಲ್ಲಿ ಅಥವಾ ಅದರ ಪಕ್ಕದಲ್ಲಿ ಅದು ಮುಚ್ಚಿದಾಗ ತೆರೆದಿರುವ ಸಣ್ಣಬಾಗಿಲು, ಕಿಂಡಿ.
೪೯. ದಿಬ್ಬ	–	ದಿಣ್ಣೆ, ತಗ್ಗು
೫೦. ದೊಣೆ	–	ಬೆಟ್ಟದ ಮೇಲಿರುವ ಸ್ವಾಭಾವಿಕವಾದ ಹೊಂಡ.
೫೧. ದ್ವಾರ	–	ಬಾಗಿಲು; ಕದ
೫೨. ಧನು	–	ಬಿಲ್ಲು; ಧನಸ್ಸು

೫೩. ಧಾನ್ವನ – ಸುತ್ತಲೂ ಐದು ಯೋಜನೆಗಳವರೆಗೆ, ಮರುಭೂಮಿ, ಬಿಲ್ಲು, ಧನಸ್ಸು.

೫೪. ನರ – ಸುತ್ತಲೂ ಸೈನ್ಯ ಬಲವುಳ್ಳದ್ದು.

೫೫. ನಾಗ – ಸರ್ಪ, ಕಶ್ಯಪನ ಪತ್ನಿಯಾದ ಕದ್ರು ಎಂಬುವಳಲ್ಲಿ ಜನಿಸಿದ ಪುರಾಣೋಕ್ತವಾದ ಒಂದು ದೇವಸಂತತಿ.

೫೬. ನಾಭ – ಆಕಾಶ; ಗಗನ; ಮೋಪ; ಮುಗಿಲು.

೫೭. ರಥ – ಚತುರಂಗ ಸೇನೆಗಳಲ್ಲಿ ಒಂದು.

೫೮. ರುಚಿರ – ಕೆಂಪು ಬಣ್ಣದ ಕುದುರೆ, ಸೌಂದರ್ಯ; ಚೆಲುವೆ.

೫೯. ವಪ್ರ – ಸುತ್ತುಗೋಡೆ; ಪ್ರಾಕಾರ.

೬೦. ವರ್ಧಮಾನಮ್ – ಮೃದಂಗದ ಆಕಾರ.

೬೧. ವೀರಗಲ್ಲು – ಯುದ್ಧದಲ್ಲಿ ಸತ್ತ ವೀರನ ಸ್ಮರಣಾರ್ಥವಾಗಿ ನೆಡುವ ಕಲ್ಲು.

೬೨. ವೃತ್ತಿಕಾಮಯಮ್ – ಮಣ್ಣಿನಿಂದ ಕೂಡಿರುವ ದಿನ್ನೆ.

೬೩. ವೃಶ್ಚಿಕ – ಚೇಳು.

೬೪. ವ್ಯಾಘ್ರ – ಹುಲಿ.

೬೫. ಶಂಖ – ಸೇನಾರಚನೆಯ ಒಂದು ವಿಧ, ವ್ಯೂಹಬೇದ,

೬೬. ಶಾಲ – ಸುತ್ತುಗೋಡೆ; ಆವರಣ; ಮನೆ.

೬೭. ಶಿಲ್ಪ – ಕೆತ್ತನೆಯ ಕೆಲಸ.

೬೮. ಶೈಲ – ಬೆಟ್ಟ, ಪರ್ವತ.

೬೯. ಸಾಸಿರ – ಸೂರ್ಯ.

೭೦. ಸೀಮೆ – ಎಲ್ಲೆ, ಗಡಿ, ಮೇರೆ.

೭೧. ಸುಜನ – ಸಜ್ಜನಿಕೆಯಿಂದ ಕೂಡಿದ, ಒಳ್ಳೆಯ.

೭೨. ಸೇಂದಿ – ಮದ್ಯ, ಹೆಂಡ.

ಅನುಬಂಧ-೨

ಶಾಸನಗಳಲ್ಲಿ ಉಲ್ಲೇಖವಿರುವ ತುಮಕೂರು ಜಿಲ್ಲೆಯ ಪುರ(ಕೋಟೆ) ಮತ್ತು ಸೀಮೆ, ಪಾಳ್ಯ, ವಾಡೆ, ನಾಡು

ಕುಣಿಗಲ್ಲು ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಜೇಡರಹಳ್ಳಿ	ಚೌಡಾಪುರ	--	--	--
೨. ಲಕ್ಕಶೆಟ್ಟಿಪುರ	ಜಕ್ಕಿಸೆಟ್ಟಿಪುರ	ಸೂರಪ್ಪರಾಜ	--	ಕ್ರಿ.ಶ.೧೫೪೩
೩. ಸೋಮದೇವನಪಾಳ್ಯ	ಶ್ರೀಪುರ	ಮಾದನಾಯಕ	--	ಕ್ರಿ.ಶ.೧೫೧೫
೪. ಅಂಕನಾಥನಹಳ್ಳಿ	ಅಂಕನಾಥನಪುರ	--	--	--
೫. ಲಕ್ಷ್ಮೀಪುರ	--	--	--	ಕ್ರಿ.ಶ.೧೬೦೮
೬. ಬೇಡರಪುರ	--	--	--	--
೭. ಹೊಸಪುರ	--	--	--	ಕ್ರಿ.ಶ.೧೬೬೩
೮. ರಾಮದೇವಪುರ	--	--	--	ಕ್ರಿ.ಶ.೧೬೬೩
೯. ಶೆಟ್ಟಿಪುರ	--	--	--	ಕ್ರಿ.ಶ.೧೬೬೩
೧೦. ಹನುಮಾಪುರ	--	--	--	ಕ್ರಿ.ಶ.೧೬೬೩
೧೧. ಚೆನ್ನರಾಯಪುರ	--	--	--	ಕ್ರಿ.ಶ.೧೬೬೩
೧೨. ಡಣಾಯಕಪುರ	--	--	--	ಕ್ರಿ.ಶ.೧೬೬೩
೧೩. ಎಲೆಯೂರು ಸೀಮೆ	--	ಚೆನ್ನಪ್ಪನಾಯಕ	ಕೆಂಪೇಗೌಡ	ಕ್ರಿ.ಶ.೧೫೮೫

ಪಾವಗಡ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ನಸನಕೋಟೆಯ ಸೀಮೆ	--	--	--	--
೨. ವಿರುಪಸಮುದ್ರ ಸೀಮೆ	--	ಕ್ರಿಷ್ಣಪ್ಪನಾಯಕ	ಸದಾಶಿವರಾಯ	--
೩. ವೆಂಕಟಾಪುರ	--	--	--	--
೪. ಸಿದ್ದಾಪುರ	--	--	--	--
೫. ರಾಜವಂತಿ	ತಿರುಮಲಾಪುರ	ಕ್ರಿಷ್ಣಪ್ಪನಾಯಕ	ಸದಾಶಿವರಾಯ	--
೬. ಹರಿಹರಪುರ	--	--	--	ಕ್ರಿ.ಶ.೧೫೫೮

೭. ಆರ್ಲಹಳ್ಳಿ	ಶ್ರೀರಾಮಚಂದ್ರ ಸರ್ವಮ್ಯಾನದಪುರ		--	-- --
೮. ಕೋಣನಕುರಿಕೆ	ವಿಠಲಾಪುರ	ತಮ್ಮಿಸೆಟ್ಟಿ	ಸದಾಶಿವರಾಯ	--
೯. ಕುರುಬನಪಾಳ್ಯ	--	--	--	--
೧೦. ಗೊಲ್ಲನಕುಂಟೆ	ವೀರಭದ್ರಪುರ	ಜಕ್ಕನಾಯಕ	--	--
೧೧. ವೆಂಕಟಾಪುರ	--	--	--	--
೧೨. ನಾಗಲಾಪುರ	--	--	--	--
೧೩. ಚನ್ನಕೇಶವಪುರ	--	--	--	--
೧೪. ಓಬಳಾಪುರ	--	--	--	--
೧೫. ಕನ್ನಮೇಡಿ	ಹರಿಹರರಾಯ ಸಮುದ್ರ	--	--	೧೪೭೯

ಚಿಕ್ಕನಾಯಕನಹಳ್ಳಿ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಪಂಕಜನಹಳ್ಳಿ	ಪಂಕಜಪುರ	ಚೆನ್ನಿಸೆಟ್ಟಿ	ಕೃಷ್ಣದೇವರಾಯ	--
೨. ಬಾನವಾಡಿ	--	--	--	ಕ್ರಿ.ಶ.೧೪೮೯
೩. ಬೆಳುಗಲಿ	ಬೆಳವಾಡಿ	--	--	--
೪. ನಾಯಿಗೆರೆ	ಮಲ್ಲಪ್ಪನಪಾಳ್ಯ	--	--	--
೫. ಕಾಮಲಾಪುರ	--	--	--	--
೬. ತಿಮ್ಮನಗೇರೆನಾಡು	--	--	--	೧೫೨೫
೭. ಲಕುಮಪುರ	--	--	--	--
೮. ಮಾರುಹೊಳೆ	ಪ್ರಸನ್ನಕೇಶವಪುರ	ಬಸವಿನಾಯಕ	--	೧೨೨೬-೨೭
೯. ಶೆಟ್ಟಿಕೆರೆ	ಶ್ರೀಭರಿತಪ್ರಕಾಶಪುರಿ	--	--	೧೨೬೧
೧೦. ಆದಿಗೌಡನಹಳ್ಳಿ	ಬ್ರಹ್ಮಪುರಿ	--	ಬಲ್ಲಾಳ	--
೧೧. ಬುಮ್ಲಾಪುರ	--	ರಣದುಲ್ಲಾಖಾನ್	--	--
೧೨. ವಿಭೂತಿಪುರ	--	--	--	೧೬೩೬
೧೩. ಸೀಲವಂತಪುರ	--	ಮದಿಯಪ್ಪನಾಯಕ	--	--
೧೪. ನಾಯಿಗೆರೆ	ಮಲ್ಲಪ್ಪನಪಾಳ್ಯ	--	--	೧೦೩೭

ಗುಬ್ಬಿ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ

೧. ಕೆರೆಗೋಡುನಾಡು	--	--	--	--
೨. ಲಕ್ಷ್ಮೀಪುರ	--	--	--	೧೫೩೦
೩. ಅರಮಡಿಸೀಮೆ	--	--	--	--
೪. ಕೋಡಿಪಾಳ್ಯ	--	--	--	--
೫. ಮಾದಾಪುರ	--	--	ಮೈಸೂರು ಒಡೆಯರು	೧೫೪೧
೬. ವೋಬಳಾಪುರ	--	--	--	೧೪ನೇ ಶತಮಾನ
೭. ಸಮುದ್ರನಕೋಟೆ	--	ಭೈರಪ್ಪನಾಯಕ	--	--

ಮಧುಗಿರಿ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಬಜ್ಜಾಪುರಂ	--	--	--	--
೨. ಹಂದರಾಳು	ಹಂದರಾಳಪುರ	ತಮ್ಮೇನಾಯಕ	ಸಾಳ್ವಇಮ್ಮಡಿ ನರಸಿಂಹ	೧೫೦೩
೩. ತಿಪ್ಪಾಪುರ	--	--	--	--
೪. ಚಿಕ್ಕಣ್ಣನಪಾಳ್ಯ	--	--	--	--
೫. ನಾಗೇನಹಳ್ಳಿ	ಸೋಮಪುರ	--	--	--
೬. ವೀರಾಪುರ	--	--	--	--
೭. ಸಿದ್ದರಾಮನಾಯ್ಕನಹಳ್ಳಿ ಸೀಮೆ	--	--	--	--
೮. ತಿಮ್ಲಾಪುರ	--	--	--	--
೯. ಪುರವರ	--	--	--	--

ತಿಪಟೂರು ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಶಿವರ	--	--	--	--
೨. ಕೆರೆಗೋಡಿ ರಂಗಾಪುರ	--	--	ಎರಡನೆಯರಾಚಮಲ್ಲ	--
೩. ಬಂಗವಾಡಿ	--	--	--	--
೪. ದುಂಡ	--	--	--	೧೨೫೩
೫. ಕೊಡಿಗೇನಹಳ್ಳಿ	ಪುರ	--	--	--
೬. ಭೈರಾಪುರ	--	ವಿವರಾಜ ಒಡೆಯ	ಅಚ್ಯುಕನಾಯಕ ಬಾವಯ್ಯನಾಯಕ	--
೭. ಬಯಳವಾಡಿ	--	ಸಯ್ಯನಾಯಕ, ಮೈಯ್ಯ		

		ನಾಯಕ, ಬಾವಯ್ಯನಾಯಕ--		--
೮. ತುಂಬೇಪುರ	--	ಬಯ್ಯನಾಯಕ	ವೀರಸೋಮೇಶ್ವರ	--
೯. ಇಂಗಳಸಂತೆ	ವಿಜಯಗೋಪಾಳಪುರ--		--	--
೧೦. ನಾರಾಯಣಪುರ	--	--	ಸದಶಿವರಾಯ	--
೧೧. ಭುವನಹಳ್ಳಿ (ಸಂಪಿಗೆ ಸೀಮೆ)	ಜಗನ್ನಾಥಪುರ	ಜಗನ್ನಾಥರಾಜ	ಸದಾಶಿವರಾಯ	೧೫೫೦
೧೨. ಸಾವಿತ್ರಿಪುರ	--	--	ಹರಿಹರ	--
೧೩. ಹೊನ್ನೆನಹಳ್ಳಿ ಸೀಮೆ	ರಾಜಯ್ಯ (ಸಾಮಂತ)		ಸದಾಶಿವರಾಯ	--
೧೪. ಮಾಚನಕಟ್ಟೆ	ಪುರ	ಚಿಕ್ಕಮಲೆಯನಾಯಕ	--	೧೯೯೫
೧೫. ಚೌಡೇನಹಳ್ಳಿ	ಭಳಾಪುರ	--	ಕೃಷ್ಣದೇವರಾಯ	--
೧೬. ಕೋಟಿನಾಯಕನಹಳ್ಳಿ		ಶಿಂಗನದಂಡನಾಯಕ	ವೀರಬಲ್ಲಾಳ	೧೨೨೫

ಗುಬ್ಬಿ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಶಿವಪುರ	--	--	--	೧೨೫೨
೨. ಕೋಡಿಹಳ್ಳಿ	--	--	--	೧೬೯೬
೩. ಲಿಂಗಪುರ	--	ಸಿದ್ದಪ್ಪನಾಯಕ	--	--
೪. ಚಿನಚಗೆರೆ	ಬ್ರಹ್ಮದೇವಪುರ	--	--	೧೩೩೧
೫. ದಂಡಿನಶಿವರ	--	--	ವೀರನರಸಿಂಹ	೧೨೨೭
೬. ಪುರ	--	--	--	೧೨೭೩
೭. ಬಿದರೆ	--	--	--	--
೮. ನಿಟ್ಟೂರು	--	--	--	೧೧೧೬

ಕೊರಟಗೆರೆ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ರಾನಾಪುರ	--	--	--	--
೨. ಅರಶೀಪುರ	--	--	--	--
೩. ಹನುಮಂತಗಿರಿ	--	--	--	--
೪. ತುಂಬಾಡಿ	--	--	--	--

ತುರುವೇಕೆರೆ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ನಾರಾಣಿಪುರ	--	--	--	--
೨. ನಿರ್ದುಂದವಾಡಿ (ತುರುವೇಕೆರೆ)	ವಿಜಯನರಸಿಂಹಪುರ	--	ನರಸಿಂಹದೇವ	--
೩. ತಂಡಗ	ಶಂಕರನಾರಾಯಣಪುರ		ವೀರಬಲ್ಲಾಳ	--
೪. ನಾಗಲಾಪುರ	--	--	--	--

ತುಮಕೂರು ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಕೆಂಚನಪಾಳ್ಯ	-- (ಕೆಂಚನಕೋಟೆ)	--	--	--
೨. ಕೊಟಪುರ	--	--	--	--
೩. ಹೊನ್ನುಡಿಕೆ	ನಾರಾಯಣಪುರ	ಜನರಚಾನಕಯ್ಯನಾಥ ಮಾಂಡಳಿಕ	ವೀರರಾಮನಾಥ	೧೨೯೮
೪. ರಾಯಾಪುರ		ರಾಜನಾಚಯ್ಯನಾಥ	ವೀರರಾಮನಾಥದೇವ	--
೫. ಬ್ಯಾಟರಾಯನಪಾಳ್ಯ	--	--	--	--
೬. ಗೋಬರಕೋಟೆ	--	ಪೆರುಮಾಳ	--	೧೫೬೫
೭. ವಂಚಿಹಳ್ಳಿ	ಕಲ್ಲಪಡಿಕೋಟೆ	--	--	೧೪೬೫
೮. ಬಟವಾಡಿ	--	--	ಹೊಯ್ಸಳರು	೧೩೧೪

ಸಿರಾ ತಾಲೂಕು

ಸ್ಥಳ	ಪ್ರತಿನಾಮ	ಸ್ಥಳೀಯ ನಾಯಕ	ಅರಸ	ಕಾಲ
೧. ಕಾಳಾಪುರ	--	--	--	--
೨. ರಂಗಾಪುರಸೀಮೆ	ಲಕುಮನಾಯಕ	--	--	--
೩. ನಾರಾಣಾಪುರ	--	--	--	--
೪. ಗಾಣದಹುಣಸೆ	ಪುರ	ಹರತಿಕೆಂಚಪ್ಪನಾಯಕ	ವೆಂಕಟಪತಿರಾಯ	೧೫೮೩
೫. ನರಸಿಂಗರಾಯನಪಾಳ್ಯ	--	--	--	--
೬. ಚಿಕ್ಕನಕೋಟೆ	--	--	--	--
೭. ಪದ್ಮಾಪುರ	--	--	--	--
೮. ದೇವರಪುರ	--	--	--	--
೯. ಕಲ್ಲುಕೋಟೆ	--	--	--	--
೧೦.ಮೆಳೆಕೋಟೆ	--	--	--	--

ಅನುಬಂಧ-೩

ಕ್ರಸಂ.	ಸ್ಥಳ/ತಾಲೂಕು	ಕಾಲ	ಅರಸ	ವಂಶಾವಳಿ	ಪ್ರಾಗಿತಿಹಾಸದ ಕುರುಹು	ಇತರೆ
೦೧.	ನಿಡುಗಲ್ಲು/ಪಾವಗಡ	(೭೫೦)	ಧನುಂಜಯ	ನೊಳಂಬರು, ನಿಡುಗಲ್ಲು ಚೋಳರು	ರಕ್ಷಣಾ ಕೇಂದ್ರ	ರಾಜಧಾನಿ
		೧೧೦೬	೧ನೆಯ ಇರುಂಗೋಳ			
೦೨.	ಪಾವಗಡ	೧೪೦೫	ಗೋಪಣ್ಣ	ಪಾವಗಡ ಪಾಳೆಯಗಾರ (ವಿಜಯನಗರ ಸಾಮಂತ)		ರಾಜಧಾನಿ
೦೩.	ಯಲ್ಲಪ್ಪನಾಯಕದುರ್ಗ	೧೬೫೪	ಯಲ್ಲಪ್ಪನಾಯಕ	ಕುಂದುರ್ಪಿ ವಂಶಸ್ಥರು		ರಾಜಧಾನಿ
೦೪.	ಯಲ್ಲಪ್ಪನಾಯಕನಹಳ್ಳಿ	೧೬೫೪	ಯಲ್ಲಪ್ಪನಾಯಕ	ಕುಂದುರ್ಪಿ ವಂಶಸ್ಥರು		ಬುರುಜು
೦೫.	ಮಾರವ್ವನಹಳ್ಳಿ	೧೬೫೪		ಆಶ್ರಿತ	ನವಶಿಲಾಯುಗ	ರಕ್ಷಣಾ ಕೇಂದ್ರ
೦೬.	ಹೊಸದುರ್ಗ	೧೬೫೪	ಯಲ್ಲಪ್ಪನಾಯಕ	ಕುಂದುರ್ಪಿ ವಂಶಸ್ಥರು	ನವಶಿಲಾಯುಗ	ರಕ್ಷಣಾ ಕೇಂದ್ರ
೦೭.	ಇಂದ್ರಬೆಟ್ಟ	೧೬೫೪	ಯಲ್ಲಪ್ಪನಾಯಕ	ಕುಂದುರ್ಪಿ ವಂಶಸ್ಥರು	ನವಶಿಲಾಯುಗ/ಗಿರುಚಿತ್ರ	ರಕ್ಷಣಾ ಕೇಂದ್ರ
೦೮.	ಕಾಮನದುರ್ಗ	೧೬೫೪	ಯಲ್ಲಪ್ಪನಾಯಕ	ಕುಂದುರ್ಪಿ ವಂಶಸ್ಥರು	ನವಶಿಲಾಯುಗ/ಗೀರುಚಿತ್ರ	ರಕ್ಷಣಾ ಕೇಂದ್ರ
೦೯.	ಕೆ.ರಾಂಪುರ	೧೬೫೪		ಆಶ್ರಿತ	ನವಶಿಲಾಯುಗ/ಗೀರುಚಿತ್ರ	ನಾಣ್ಯ
೧೦.	ತೆಲುಗಲಕೊಂಡ	೧೬೫೪		ಆಶ್ರಿತ		ರಕ್ಷಣಾ ಕೇಂದ್ರ
೧೧.	ಯರ್ರಮನಹಳ್ಳಿ			೧೮ ಮತ್ತು ೧೯ನೆಯ ಶತಮಾನ	ನವಶಿಲಾಯುಗ	ಗ್ರಾಮ ರಕ್ಷಣೆ
೧೨.	ಕನ್ನಮೇಡಿ	೧೭೦೦	ಇಂದುರಾಯ	ಕನ್ನಮೇಡಿ ಪಾಳೆಯಗಾರ	ನವಶಿಲಾಯುಗ/ಗೀರುಚಿತ್ರ	ರಾಜಧಾನಿ
೧೩.	ಬಂಗಾರನಾಯಕದುರ್ಗ	೧೭೦೦	ಬಂಗಾರನಾಯಕ	ಬಂಗಾರನಾಯಕನ ವಂಶಸ್ಥ	ನವಶಿಲಾಯುಗ/ಗೀರುಚಿತ್ರ	ರಾಜಧಾನಿ

೧೪.	ಮುಗುದಾಳಬೆಟ್ಟ	೧೫೦೦		ನಿಡುಗಲ್ಲು ಪಾಳೆಯಗಾರ	ನವಶಿಲಾಯುಗ	ರಕ್ಷಣಾಕೇಂದ್ರ
೧೫.	ಕೋಟಗುಡ್ಡ	೧೭೦೦		ನಿಡುಗಲ್ಲು ಪಾಳೆಯಗಾರ	ನವಶಿಲಾಯುಗ	ರಕ್ಷಣಾಕೇಂದ್ರ
೧೬.	ಬ್ಯಾಡನೂರು	೧೭೦೦	ರಂಗಪ್ಪ		ನವಶಿಲಾಯುಗ	ರಕ್ಷಣಾಕೇಂದ್ರ
೧೭.	ತಿಪ್ಪಯ್ಯನದುರ್ಗ	೧೭೦೦	ತಿಪ್ಪನಾಯಕ	ಕುಂದುರ್ಪಿಯ ಸಾಮಂತ	ನವಶಿಲಾಯುಗ/ಗೀರುಚಿತ್ರ	ರಕ್ಷಣಾಕೇಂದ್ರ
೧೮.	ಅರಕ್ಯಾತನಹಳ್ಳಿ			ನಿಡುಗಲ್ಲು ಪಾಳೆಯಗಾರ		ರಕ್ಷಣಾಕೇಂದ್ರ
೧೯.	ಒಬೇನಹಳ್ಳಿ	೧೭೦೦	ಒಬೇನಾಯಕ	ಬಂಗಾರನಾಯಕನ ವಂಶಸ್ಥರು	ನವಶಿಲಾಯುಗ	ರಕ್ಷಣಾಕೇಂದ್ರ
೨೦.	ಹೊಸಹಳ್ಳಿತಾಂಡ(ಪಳವಳ್ಳಿ)	೧೫೮೫	ಬಲ್ಲಪ್ಪನಾಯಕ	ಪಾವಗಡ ಪಾಳೆಯಗಾರ(ವೆಂಕಟಪತಿಯ ಸಾಮಂತ)	ನವಶಿಲಾಯುಗ	ರಕ್ಷಣಾಕೇಂದ್ರ
೨೧.	ಹಳೇಹೊಸಹಳ್ಳಿ	೧೭೦೦	ಗುರುದೇವಪ್ಪ	ನಿಡುಗಲ್ಲು ಪಾಳೆಯಗಾರರ ಆಶ್ರಿತ	ನವಶಿಲಾಯುಗ	ರಕ್ಷಣಾಕೇಂದ್ರ
೨೨.	ಹೊಸಹಳ್ಳಿ			ನಿಡುಗಲ್ಲು ಪಾಳೆಯಗಾರರ ಆಶ್ರಿತ		ಬುರುಜು
೨೩.	ಗಂಗಸಾಗರ	೧೭೦೦		ಪಾವಗಡ ಪಾಳೆಯಗಾರರು	ನವಶಿಲಾಯುಗ	ಬುರುಜು
೨೪.	ಕನಿಕಲಬಂಡೆ	೧೯೦೦		ಪಾವಗಡ ಪಾಳೆಯಗಾರರು		ರಕ್ಷಣಾಕೇಂದ್ರ
೨೫.	ಪೊನ್ನಸಮುದ್ರ	೧೮೦೦-೧೯		ಗ್ರಾಮ ರಕ್ಷಮಾ ವಾಸ್ತು	ನವಶಿಲಾಯುಗ	ಗ್ರಾಮ ರಕ್ಷಣೆ
೨೬.	ಕತ್ತಿಕ್ಯಾತನಹಳ್ಳಿ	೧೮೦೦-೧೯				ರಕ್ಷಣಾಕೇಂದ್ರ
೨೭.	ಕಾವಲುರಂಗಾಪುರ			ವಿಜಯನಗರ ಆಶ್ರಿತ		ರಕ್ಷಣಾಕೇಂದ್ರ
೨೮.	ಬೂದಿಬೆಟ್ಟ			ಕುಂದಿರ್ಪಿ ಆಶ್ರಿತ		ರಕ್ಷಣಾಕೇಂದ್ರ
೨೯.	ಅರಸೀಕೆರೆ	೧೮೦೦-೧೯		ನಿಡುಗಲ್ಲು ಪಾಳೆಯಗಾರರು		ರಕ್ಷಣಾಕೇಂದ್ರ
೩೦.	ತೂಮಕುಂಟೆ	೧೫೫೫	ಕೃಷ್ಣಯ್ಯದೇವ	ಸದಶಿವರಾಯನ ಸಾಮಂತ		ಗ್ರಾಮ ರಕ್ಷಣೆ

೩೧.	ಜಂಗಮರಹಳ್ಳಿ	೧೮೦೦-೧೯		ಗ್ರಾಮ ರಕ್ಷಣಾ ವಾಸ್ತು		ಗ್ರಾಮ ರಕ್ಷಣೆ
೩೨.	ಹನುಮಂತನಹಳ್ಳಿ	೧೮೦೦-೧೯		ಗ್ರಾಮ ರಕ್ಷಣಾ ವಾಸ್ತು		ಗ್ರಾಮ ರಕ್ಷಣೆ
೩೩.	ಸ್ವಾರಮ್ಮನಹಳ್ಳಿ	೧೭೦೦	ಹೊಟ್ಟೆಪ್ಪನಾಯಕ	ನಿಡುಗಲ್ಲು ಪಾಳೆಯಗಾರರ ಆಶ್ರಿತ		ರಕ್ಷಣಾ ಕೇಂದ್ರ
೩೪.	ಟಿ.ಎನ್.ಬೆಟ್ಟ	೧೭೦೦	ತಿರುಮಲನಾಯಕ	ನಿಡುಗಲ್ಲು ಪಾಳೆಯಗಾರ ಆಶ್ರಿತ		ರಕ್ಷಣಾ ಕೇಂದ್ರ
೩೫.	ದವಡಬೆಟ್ಟ	೧೭೦೦	ರಂಗಪ್ಪ ಮತ್ತು ಈರಪ್ಪ	ಆಶ್ರಿತ	ನವಶಿಲಾಯುಗ	ರಕ್ಷಣಾ ಕೇಂದ್ರ
೩೬.	ಸೂಲನಾಯಕನಹಳ್ಳಿ	೧೫೦೦-೧೬	ಸೂಲನಾಯಕ	ನಿಡುಗಲ್ಲು ಪಾಳೆಯಗಾರ ಆಶ್ರಿತ	ನವಶಿಲಾಯುಗ	ರಾಜಧಾನಿ
೩೭.	ಸಿಂಗರೆಡ್ಡಿಹಳ್ಳಿ	೧೫೦೦-೧೬	ಸಿಂಗರೆಡ್ಡಿ	ನಿಡುಗಲ್ಲು ಪಳೆಯಗಾರರ ಆಶ್ರಿತ	ನವಶಿಲಾಯುಗ	ರಕ್ಷಣಾ ಕೇಂದ್ರ
೩೮.	ಬೊಮ್ಮತನಹಳ್ಳಿ	೧೫೦೦-೧೬	ಸಿಂಗರೆಡ್ಡಿ	ಪಾವಗಡ ಪಾಳೆಯಗಾರರ ಆಶ್ರಿತ	ನವಶಿಲಾಯುಗ	ರಕ್ಷಣಾ ಕೇಂದ್ರ
೩೯.	ಗುಂಡ್ಲಹಳ್ಳಿ	೧೨೯೨- ೧೩೨೦	ಸಿಂಗರೆಡ್ಡಿ	೪ನೆಯ ಇರುಂಗೋಳ ದೇವ	ನವಶಿಲಾಯುಗ	ರಾಜಧಾನಿ
೪೦.	ಗುಂಡಾರ್ಲಹಳ್ಳಿ	೧೮೦೦-೧೯		ಗ್ರಾಮ ರಕ್ಷಣಾ ವಾಸ್ತು		೧೮೪೦ರ ನಾಣ್ಯ
೪೧.	ಗಂಗಾಧರಗುಡ್ಡ	೧೮೦೦-೧೯				ರಕ್ಷಣಾ ಕೇಂದ್ರ
೪೨.	ರಾಜವಂತಿ	೧೮೦೦-೧೯		ಪಾವಗಡ ಪಾಳೆಯಗರರು		ರಕ್ಷಣಾ ಕೇಂದ್ರ
೪೩.	ಮಿಡಿಗೇಶಿ(ಮಿಡಿಗೆ)	೮೯೮	ಧನುಂಜಯ	ನೊಳಂಬ ಪಲ್ಲವ		ರಾಜಧಾನಿ
೪೪.	ಮುಮ್ಮಡಿ ಪಟ್ಟಣ(ಇಂದಿನ ಕೂಡ್ಲಾಪುರ ಮತ್ತು	೧೩೮೪	ಮಾರೆಗೌಡ	ಮಧುಗಿರಿ ಮಹಾನಾಡ ಪ್ರಭು		ರಾಜಧಾನಿ

	ಇಮ್ಮಡಗೊಡನಹಳ್ಳಿ)					
೪೫.	ಸಿದ್ದಾಪುರ	೧೫೯೩	ಇಮ್ಮಡಿ ಚಿಕ್ಕಪ್ಪಗೌಡ	ಮಧುಗಿರಿ ಮಹಾನಾಡಪ್ರಭು		ರಾಜಧಾನಿ
೪೬.	ಬಿಜವರ	೧೫೯೩	ಇಮ್ಮಡಿ ಚಿಕ್ಕಪ್ಪಗೌಡ	ಮಧುಗಿರಿ ಮಹಾನಾಡಪ್ರಭು		ರಾಜಧಾನಿ
		(೧೫೨೪)				
೪೭.	ಮಧುಗಿರಿ	೧೬೦೧	ಇಮ್ಮಡಿ ಚಿಕ್ಕಪ್ಪಗೌಡ	ಮಧುಗಿರಿ ಮಹಾನಾಡಪ್ರಭು		ರಾಜಧಾನಿ
೪೮.	ಕೊಡಗದಾಲ	೧೫೩೪	ಇಮ್ಮಡಿ ಚಿಕ್ಕಪ್ಪಗೌಡ	ಮಧುಗಿರಿ ಮಹಾನಾಡಪ್ರಭು		ರಾಜಧಾನಿ
೪೯.	ಬೇಡತ್ತೂರು	೧೧೨೯	ದೇವಲನಾಯಕ		ನವಶಿಲಾಯುಗ	ರಕ್ಷಣಾಕೇಂದ್ರ
	(ಮಲ್ಲಿನಾಥಪುರ)		(ಮಲ್ಲಪ್ಪರಾಯ)		ಬೃಹತ್‌ಶಿಲಾಯುಗ	
೫೦.	ಗುಟ್ಟೆ	೧೭೦೦	ರಾಮಣ್ಣನಾಯಕ	ಆಶ್ರಿತ	ನವಶಿಲಾಯುಗ	ರಕ್ಷಣಾ ಕೇಂದ್ರ
೫೧.	ಭಸ್ಮಾಂಗಿ	೧೬೫೦	ಬೂದಿಬಸಪ್ಪ	ಸಿರಾ ಪಾಳೆಯಗಾರರ ಆಶ್ರಿತ	ನವಶಿಲಾಯುಗ	ರಕ್ಷಣಾ ಕೇಂದ್ರ
೫೨.	ಚಂದ್ರಗಿರಿ			ಮಧುಗಿರಿ ಮಹಾನಾಡು	ಸೂಕ್ಷ್ಮಶಿಲಾಯುಗ	ರಕ್ಷಣಾ ಕೇಂದ್ರ
೫೩.	ಶಂಬೋನಹಳ್ಳಿ			ಮಧುಗಿರಿ ಮಹಾನಾಡು		ರಕ್ಷಣಾ ಕೇಂದ್ರ
೫೪.	ವೀರಣ್ಣೇಶ್ವರನಹಳ್ಳಿ			ಮಧುಗಿರಿ ಮಹಾನಾಡು	ನವಶಿಲಾಯುಗ	ರಕ್ಷಣಾ ಕೇಂದ್ರ
೫೫.	ರೆಡ್ಡಿಹಳ್ಳಿ			ಮಿಡಿಗೇಶಿ ಪಾಳೆಯಗಾರರು	ನವಶಿಲಾಯುಗ	ರಕ್ಷಣಾ ಕೇಂದ್ರ
೫೬.	ಪುಲಮಾಚಿ			ಮಧುಗಿರಿ ಮಹಾನಾಡ ಪ್ರಭು	ನವಶಿಲಾಯುಗ	ರಕ್ಷಣಾ ಕೇಂದ್ರ
೫೭.	ಗರಣಿ			ಮೈಸೂರು ಒಡೆಯರು		ಸೈನಿಕ ಕೇಂದ್ರ
೫೮.	ತೋಟಮಡಗು			ಮಿಡಿಗೇಶಿ ಪಾಳೆಯಗಾರರು		ರಕ್ಷಣಾ ಕೇಂದ್ರ

೫೯.	ಮೀನಗೊಂದಿ			ಮಧುಗಿರಿ ಮಹಾನಾಡಪ್ರಭು		ರಕ್ಷಣಾ ಕೇಂದ್ರ
೬೦.	ಕೊಡಿಗೇನಹಳ್ಳಿ			ಮಧುಗಿರಿ ಮಹಾನಾಡಪ್ರಭು		ರಕ್ಷಣಾ ಕೇಂದ್ರ
೬೧.	ದೊಡ್ಡಮಾಲೂರು			ರತ್ನಗಿರಿ ಪಾಳೆಯಗಾರ ಸಮಕಾಲೀನ		ಗ್ರಾಮ ರಕ್ಷಣೆ
೬೨.	ತಿಂಗಳೂರು	೧೬-೧೭				ಗ್ರಾಮ ರಕ್ಷಣೆ
೬೩.	ಕಡಗತ್ತೂರು	೧೪-೧೫		ಮಧುಗಿರಿ ಮಹಾನಾಡಪ್ರಭು	ನವಶಿಲಾಯುಗ	ಗ್ರಾಮ ರಕ್ಷಣೆ
೬೪.	ಕಲಿದೇವಪುರ	೧೭-೧೮		ಮಧುಗಿರಿ ಮಹಾನಾಡ ಪ್ರಭುಕಾಲ ಘಟು		ಗ್ರಾಮ ರಕ್ಷಣೆ
೬೫.	ತೆರಿಯೂರು	೧೪೦೦	ಚನ್ನಪ್ಪಗೌಡ	ಮಹಾನಾಡ ಪ್ರಭುಗಳು		ರಾಜಧಾನಿ
೬೬.	ಬೋಳಿಬೆಟ್ಟ (ಕೊರಟಗೆರೆ ಹತ್ತಿರ)	೧೬೦೦	ರಣಿಬೈರೇಗೌಡ	ಹೊಳವನಹಳ್ಳಿ ಪಾಳೆಯಗಾರ		ರಕ್ಷಣಾ ಕೇಂದ್ರ
೬೭.	ದೊಡ್ಡೇರಿ	೧೪-೧೫		ಸಿರಾ ಪಾಳೆಯಗಾರರ ಆಶ್ರಿತ		ರಕ್ಷಣಾ ಕೇಂದ್ರ
೬೮.	ಕೋಟೆಕಲ್ಲೇಶ್ವರ	೧೫-೧೬	ಕೋಟಮ್ಮ(ರಂಗಮ್ಮ)	ಮಧುಗಿರಿ ಮಹಾನಾಡ ಪ್ರಭು ಆಶ್ರಿತ		ರಕ್ಷಣಾ ಕೇಂದ್ರ
೬೯.	ತಾಯಗೊಂಡನಹಳ್ಳಿ	೧೫-೧೬		ಮಧುಗಿರಿ ಮಹಾನಾಡ ಪ್ರಭು ಆಶ್ರಿತ		ಕಬ್ಬಿಣದ ಕುಲುಮೆ ಮತ್ತು ಬುರುಜು
೭೦.	ಬಡಗುಂಡನಹಳ್ಳಿ	೧೮-೧೯				ಗ್ರಾಮ ರಕ್ಷಣೆ
೭೧.	ಚುಂಚೇನಹಳ್ಳಿ	೧೮-೧೯				ಗ್ರಾಮ ರಕ್ಷಣೆ
೭೨.	ದೇವರಹಳ್ಳಿ	೧೬-೧೭		ಮಧುಗಿರಿ ನಾಡಪ್ರಭು ಆಶ್ರಿತ		ಬುರುಜು
೭೩.	ಬೆಲ್ಲದಮಡಗು	೧೫-೧೬	ರಂಗಪ್ಪ	ಮಧುಗಿರಿ ನಾಡಪ್ರಭು ಆಶ್ರಿತ		ರಕ್ಷಣಾ ಕೇಂದ್ರ

೭೪.	ತಿಮ್ಲಾಪುರ	೧೫-೧೬		ಮಧುಗಿರಿ ನಾಡಪ್ರಭು ಆಶ್ರಿತ	ರಕ್ಷಣಾ ಕೇಂದ್ರ
೭೫.	ಸತ್ತಿಗಾನಹಳ್ಳಿ	೧೮-೧೯		ಮಧುಗಿರಿ ಮಹಾನಾಡ ಆಶ್ರಿತ	ರಕ್ಷಣಾ ಕೇಂದ್ರ
೭೬.	ಬೆನಕನಹಳ್ಳಿ	೧೬-೧೭		ಮಿಡಿಗೇಶಿ ಪಾಳೆಯಗಾರರ ಆಶ್ರಿತ	ರಕ್ಷಣಾ ಕೇಂದ್ರ
೭೭.	ಮಲ್ಲನಾಯಕನಹಳ್ಳಿ	೧೬-೧೭		ಮಿಡಿಗೇಶಿ ಪಾಳೆಯಗಾರರ ಆಶ್ರಿತ	ರಕ್ಷಣಾ ಕೇಂದ್ರ
೭೮.	ದೊಡ್ಡಬೋಳಿ	೧೭-೧೮		ಮಧುಗಿರಿ ಮಹಾನಾಡ ಆಶ್ರಿತ	ರಕ್ಷಣಾ ಕೇಂದ್ರ
೭೯.	ಚೆನ್ನರಾಯನದುರ್ಗ (ಕೊರಟಗೆರೆ)	೧೬೧೩	ಇಮ್ಮಡಿ ಚಿಕ್ಕಪ್ಪಗೌಡ	ಮಧುಗಿರಿ ಮಹಾನಾಡು	ರಕ್ಷಣಾ ಕೇಂದ್ರ
೮೦.	ಸಿದ್ದರಬೆಟ್ಟ	೧೬೧೩	ಕುರ‍್ರಂಗರಾಯ	ಮಧುಗಿರಿ ಮಹಾನಾಡು	ರಕ್ಷಣಾ ಕೇಂದ್ರ
೮೧.	ಕೊರಟಗೆರೆ	೧೬೦೦	ರಣಭೈರೇಗೌಡ	ಕೊರಟಗೆರೆ ಪಾಳೆಯಗಾರರು	ರಕ್ಷಣಾ ಕೇಂದ್ರ
೮೨.	ತುಂಬಾಡಿ		ಮಲ್ಲನಾಯಕ	ಕೊರಟಗೆರೆ ಪಾಳೆಯಗಾರರ ಸಾಮಂತ	ರಾಜಧಾನಿ
೮೩.	ಹೊಳವನಹಳ್ಳಿ			ಕೊರಟಗೆರೆ ಪಾಳೆಯಗಾರರ ಸಾಮಂತ	ರಾಜಧಾನಿ
೮೪.	ಹೊನ್ನಾವಳ್ಳಿ(ತಿಪಟೂರು)	೧೫೦೦	ಭೈರೇಗೌಡ	ಮಹಾನಾಡ ಪ್ರಭು	ರಕ್ಷಣಾ ಕೇಂದ್ರ
೮೫.	ನೊಣವಿನಕೆರೆ	೧೫೦೦		ಮಹಾನಾಡ ಪ್ರಭು	ರಕ್ಷಣಾ ಕೇಂದ್ರ
೮೬.	ತಂಡಗ,(ತುರುವೇಕೆರೆ)			ಹೊಯ್ಸಳರು	ದೇವಾಲಯ, ಗ್ರಾಮ ರಕ್ಷಣೆ
೮೭.	ತುರುವೇಕೆರೆ		ಅಣ್ಣನಾಯಕ	ಹೊಯ್ಸಳರ ೩ನೆಯ ನರಸಿಂಹನ ಸೇನಾಪತಿ	ರಕ್ಷಣಾ ಕೇಂದ್ರ
೮೮.	ಚಿಕ್ಕನಾಯಕನಹಳ್ಳಿ	೧೫೬೧	ಭೈರವನಾಯಕ	ಹಾಗಲವಾಡಿಯ ಪಾಳೆಯಗಾರರು	ರಾಜಧಾನಿ
೮೯.	ಹೊಸಹಳ್ಳಿ			ಹಾಗಲವಾಡಿಯ ಪಾಳೆಯಗಾರರು	ರಕ್ಷಣಾ ಕೇಂದ್ರ

೯೦.	ಕಂದಿಕೆರೆ	೧೫೬೧	ಭೈರವನಾಯಕ	ಹಾಗಲವಾಡಿಯ ಪಾಳೆಯಗಾರರು	ರಕ್ಷಣಾ ಕೇಂದ್ರ
೯೧.	ಹಂದನಕೆರೆ	೧೫೬೧	ಭೈರನಾಯಕ ಶೈಲೇಂದ್ರ)	ಹಾಗಲವಾಡಿಯ ಪಾಳೆಯಗಾರರು	ರಕ್ಷಣಾ ಕೇಂದ್ರ
೯೨.	ಹುಳಿಯಾರು	೧೧೫೨–೧೧೭೩	ಬಿಟ್ಟಿದೇವ	ಹೊಯ್ಸಳರ ಮೊದಲ ನರಸಿಂಹನ ಆಶ್ರಿತ	ರಕ್ಷಣಾ ಕೇಂದ್ರ
೯೩.	ಯಳನಾಡು	೧೭೪೬	ಮರಿಸಿದ್ದೇಗೌಡ	ಸಿದ್ದಪ್ಪಗೌಡನ ಮಗ	ರಕ್ಷಣಾ ಕೇಂದ್ರ
೯೪.	ಚಿಕ್ಕಎಣ್ಣೆಗೆರೆ			ಮಧುಗಿರಿ ಮಹಾನಾಡಪ್ರಭು	ರಾಜಧಾನಿ
೯೫.	ಗಂಗೊಂಡನಹಳ್ಳಿ (ತಿಪಟೂರು)	೧೮–೧೯			ಗ್ರಾಮ ರಕ್ಷಣೆ
೯೬.	ರಂಗನಾಥಪುರ	೧೫–೧೬		ಮಧುಗಿರಿ ಮಹಾನಾಡಪ್ರಭು	ಗ್ರಾಮ ರಕ್ಷಣೆ
೯೭.	ಕುಂಬರಹಳ್ಳಿ	೧೫–೧೬		ಹಾಗಲವಾಡಿ ಪಾಳೆಯಗಾರರು	ಗ್ರಾಮ ರಕ್ಷಣೆ
೯೮.	ಚಿಕ್ಕಗ್ರಹಾರ	೧೮–೧೯		ಹಾಗಲವಾಡಿ ಪಾಳೆಯಗಾರರು	ಗ್ರಾಮ ರಕ್ಷಣೆ
೯೯.	ಬಟ್ಟಿಗನಹಳ್ಳಿ	೧೮–೧೯		ಹಾಗಲವಾಡಿ ಪಾಳೆಯಗಾರರು	ಗ್ರಾಮ ರಕ್ಷಣೆ
೧೦೦.	ಹೊಸಬಿಜ್ಜನಬೆಳ್ಳ	೧೮–೧೯		ಹಾಗಲವಾಡಿ ಪಾಳೆಯಗಾರರು	ಗ್ರಾಮ ರಕ್ಷಣೆ
೧೦೧.	ಹಳೇ ಬಿಜ್ಜನಹಳ್ಳಿ	೧೮–೧೯		ಹಾಗಲವಾಡಿ ಪಾಳೆಯಗಾರರು	ಗ್ರಾಮ ರಕ್ಷಣೆ
೧೦೨.	ಕುರೆಹಳ್ಳಿ–ಭೂತಪ್ಪನಬೆಟ್ಟ ರಾಮಲಿಂಗಾಪುರ	೧೮–೧೯		ಹಾಗಲವಾಡಿ ಪಾಳೆಯಗಾರರು	ರಕ್ಷಣಾ ಕೇಂದ್ರ

೧೦೩.	ಜಾನಕಲ್ಲು	೧೮-೧೯			ಬುರುಜು
೧೦೪.	ಬುಕ್ಕಾಪಟ್ಟಣ	೧೮-೧೯		ಸಿರಾ ಪಾಳೆಯಗಾರರು	ರಕ್ಷಣಾ ಕೇಂದ್ರ
೧೦೫.	ದೊಡ್ಡಗುಣಿ(ಗುಬ್ಬಿ)	೧೮-೧೯			ಗ್ರಾಮ ರಕ್ಷಣೆ
೧೦೬.	ಜೋಗಿಹಳ್ಳಿ	೧೮-೧೯			ಗ್ರಾಮ ರಕ್ಷಣೆ
೧೦೭.	ಮಂಚಲದೊರೆ			ಹಾಗಲವಾಡಿ ಪಾಳೆಯಗಾರರು	ರಕ್ಷಣಾ ಕೇಂದ್ರ
೧೦೮.	ಕುಂಟರಾಮನಪಾಳ್ಯ	೧೮-೧೯			ಗ್ರಾಮ ರಕ್ಷಣೆ
೧೦೯.	ಮೂಗನಾಯಕನಕೋಟೆ	೧೫೭೨	ಮೂಗನಾಯಕ	ಹಾಗಲವಾಡಿ ಸಾಮಂತ	ಗ್ರಾಮ ರಕ್ಷಣಾ
೧೧೦.	ಮುಚ್ಚವೀರನಹಳ್ಳಿ	೧೮-೯	ಮಂಚಲ್‌ದೊರೆ	ಬ್ರಿಟಿಷ್ ಅಧಿಕಾರಿ	
೧೧೧.	ಚೇಳೂರು	೧೪-೧೫		ಹಾಗಲವಾಡಿ	ರಕ್ಷಣಾ ಕೇಂದ್ರ
೧೧೨.	ಗುಬ್ಬಿ	೧೪-೧೫		ಹಾಗಲವಾಡಿ	ರಕ್ಷಣಾ ಕೇಂದ್ರ
೧೧೩.	ಗುಬ್ಬಿ ಹೊಸಹಳ್ಳಿ	೧೩೪೬	ತೋಟಪ್ಪಗೌಡ	ಮಹಾನಾಡ ಪ್ರಭು	ರಾಜಧಾನಿ
೧೧೪.	ಕಡಬ	೧೩೪೬		ವಿಜಯನಗರ	ರಕ್ಷಣಾ ಕೇಂದ್ರ
೧೧೫.	ಕೈದಾಳ	೧೩೪೬		ಗಂಗರು/ಕದಂಬರು	ರಕ್ಷಣಾ ಕೇಂದ್ರ
೧೧೬.	ದೇವರಾಯನದುರ್ಗ	೧೭-೧೮		ಹೊಯ್ಸಳರು	ರಕ್ಷಣಾ ಕೇಂದ್ರ
೧೧೭.	ತಮಕೂರು	೧೭-೧೮		ಕದಂಬ/ಗಂಗ	ರಕ್ಷಣಾ ಕೇಂದ್ರ
೧೧೮.	ಇಳಕಲ್ಲುಬೆಟ್ಟ (ಸಿದ್ದಗಂಗೆ)	೧೭-೧೮			೨ ಸುತ್ತಿನ ಕೋಟೆ

೧೧೯.	ಕೋರಾ	೧೩೪೬	ಕಾಳಣ್ಣಗೌಡ	ಮಹಾನಾಡ ಪ್ರಭು	ರಾಜಧಾನಿ
೧೨೦.	ಸೀಬಿ	೧೮೦೦		ಮೈಸೂರು ಒಡೆಯರು	ರಾಜಧಾನಿ
೧೨೧.	ಕುಣಿಗಲ್	೭೫೦	ಶಿವಮಾರ	ಗಂಗರು	ಉಪರಾಜಧಾನಿ
೧೨೨.	ಹುಲಿಯೂರುದುರ್ಗ	೧೬೩೮	ಕೆಂಪೇಗೌಡ	ಯಲಹಂಕನಾಡು	ರಕ್ಷಣಾ ಕೇಂದ್ರ
೧೨೩.	ಹುತ್ರಿದುರ್ಗ	೧೬೩೮	ಕೆಂಪೇಗೌಡ	ಯಲಹಂಕನಾಡಪ್ರಭು	ರಕ್ಷಣಾ ಕೇಂದ್ರ
೧೨೪.	ಚಿಕ್ಕವನಹಳ್ಳಿ	೧೮–೧೯	ಚಿಕ್ಕವ್ವ		ಗ್ರಾಮ ರಕ್ಷಣೆ
೧೨೫.	ವೀರಭದ್ರಗಿರಿ(ಹೊಸಹಳ್ಳಿ)	೧೮–೧೯		ಯಲಹಂಕ ಪ್ರಭು	ರಕ್ಷಣಾ ಕೇಂದ್ರ
೧೨೬.	ಕಲ್ಲುಕೋಟೆ(ಸಿರಾ)	೧೮–೧೯	ಗಂಗೆಗೌಡ	ಗೌಡಿಕೆ	ರಕ್ಷಣಾ ಕೇಂದ್ರ
೧೨೭.	ಸಿರಾ	೧೫೮೦	ಕಸ್ತೂರಿರಂಗಪ್ಪನಾಯಕ	ಸಿರಾ ಪಾಳೆಯಗಾರರು	ರಾಜಧಾನಿ
೧೨೮.	ಬರಗೂರು	೧೫೮೦	ಮಹೇಂದ್ರ	ನೊಳಂಬರು	ರಕ್ಷಣಾ ಕೇಂದ್ರ
೧೨೯.	ಹಾಗಲವಾಡಿ(ಗುಬ್ಬಿ)	೧೬೧೮	ಹಿರಿಮುದಿಯಪ್ಪನಾಯಕ	ಹಾಗಲನಾಡಿ ಪಾಳೆಯಗಾರ	ರಾಜಧಾನಿ
೧೩೦.	ಬಾಗೆಯೂರು(ಬೇಗೂರು)	೮೯೮	೧ನೇ ಮಹೇಂದ್ರ	ನೊಳಂಬರು	ರಕ್ಷಣಾ ಕೇಂದ್ರ
೧೩೧.	ಪ್ರಭುವನಹಳ್ಳಿ		ವೀರಪ್ಪಗೌಡ	ಗುಬ್ಬಿಹೊಸಳ್ಳಿ ಪಾಳೆಯಗಾರ	ರಕ್ಷಣಾ ಕೇಂದ್ರ
೧೩೨.	ಚೀಲನಹಳ್ಳಿ(ಎಂ.ಡಿ)	೧೬೯೮	ಬಮ್ಮಣ್ಣ		
೧೩೩.	ಎರಕಟ್ಟೆ(ಗುಬ್ಬಿ)	೧೪೭೮	ಹಿರಿಮಾದನಾಯಕ	ಹಾಗಲವಾಡಿ ನಾಯಕರು	ರಾಜಧಾನಿ
೧೩೪.	ಗುಡಿಯಕುಂಟೆ(ಸಿರಾ)	೧೩೩೭	ಭೈರರಸ	ನಿಡುಗಲ್ಲು ಚೋಳರು	ರಾಜಧಾನಿ
೧೩೫.	ಕ್ಯಾತಗೊಂಡನಹಳ್ಳಿ (ಎಂ.ಡಿ) (ಬಿದರಕೆರೆ		ಆಶ್ರಿತ	ಮಹಾನಾಡ ಪ್ರಭುಗಳ ಸಾಮಂತ	ರಕ್ಷಣಾ ಕೇಂದ್ರ

	ಕಾವಲು)				
೧೩೬.	ಹೊಸಕೋಟೆ(ಎಂ.ಡಿ)		ನಾಗಿರೆಡ್ಡಿ	ಮಿಡಿಗೇಶಿ ಪಾಳೆಯಗಾರ	ಗ್ರಾಮ ರಕ್ಷಣೆ
೧೩೭.	ಆನಂದರಾಯನಬೆಟ್ಟ (ಎಂ.ಡಿ)		ಆನಂದರಾವ್	ಮರಾಠ ಅಧಿಕಾರಿ	ಗ್ರಾಮ ರಕ್ಷಣೆ
೧೩೮.	ಕೊಡಿಗನಹಳ್ಳಿ(ಪಿವಿಜಿ)	೧೭೦೫	ದೊಡ್ಡಗಿರಿಯಪ್ಪಗೌಡ	ಮುಮ್ಮಡಿ ಹೊಟ್ಟಣ ನಾಯಕನ ಅಧಿಕಾರಿ	ಗ್ರಾಮ ರಕ್ಷಣೆ
೧೩೯.	ಹಂಪಯ್ಯನದುರ್ಗ (ಪಿವಿಜಿ)			ಹರತಿ ನಿಡುಗಲ್ಲು ಪಾಳೆಯಗಾರರು	ರಕ್ಷಣಾ ಕೇಂದ್ರ
೧೪೦.	ಕಮ್ಮನಕೋಟೆ	೯೭೮		ನೊಳಬಂರ ಕಾಲದಲ್ಲಿ	ಗ್ರಾಮ ರಕ್ಷಣೆ
೧೪೧.	ಬಿದರೆ			ಹಾಗಲವಾಡಿ ಪಾಳೆಯಗಾರರು	ರಕ್ಷಣಾ ಕೇಂದ್ರ
೧೪೨.	ಚಿಕ್ಕನಾಯರವಂಗಳ(ಜಿಯು)				ಗ್ರಾಮ ರಕ್ಷಣೆ
೧೪೩.	ಗೋಬರ್‌ಕೋಟೆ(ಕೋರಾ)	೧೫೬೯		ಚೊಳೆಯನಾಯಕ	ರಕ್ಷಣಾ ಕೇಂದ್ರ
೧೪೪.	ಕೆಂಚನಕೋಟೆ (ತುಮಕೂರು)	೧೫೧೩	ಕೆಂಚಸೋಮಣ್ಣ ನಾಯಕ		ಗ್ರಾಮ ರಕ್ಷಣೆ
೧೪೫.	ಕರಿಕೆರೆ(ಟಿಯು)	೧೫೯೮	ಕರಿಯಪ್ಪಗೌಡ	ಮಹಾನಾಡಪ್ರಭು ವಂಶಸ್ಥ	ಗ್ರಾಮ ರಕ್ಷಣೆ
೧೪೬.	ಬೆಟ್ಟದಹಳ್ಳಿ(ಕವಿ)				ಗ್ರಾಮ ರಕ್ಷಣೆ
೧೪೭.	ರಾಮಾಪುರ(ಕೊರಟಗೆರೆ)				ಗ್ರಾಮ ರಕ್ಷಣೆ
೧೪೮.	ಒಜಗೂರು(ಟಿಪಿ)	೧೫೫೧	ಶ್ರೀಪತಿರಾಜರಂಗರಾಜಯ್ಯದೇವ	ಸದಾಶಿವರಾಯನ ಅಧಿಕಾರಿ	ಗ್ರಾಮ ರಕ್ಷಣೆ

೧೪೯.	ಬಿಟ್ನಕುರಿಕೆ(ಟಿವಿ)		ಮಾಚಿನಾಯಕ	ಮಹಾನಾಡಪ್ರಭುವಿನಿಂದ ಗೌಡಿಕೆ ಪಡೆದಾತ	ಗ್ರಾಮ ರಕ್ಷಣೆ
೧೫೦.	ಚಿನಗ(ಟಿವಿ)	೧೧೬೩	ಮಾಚಿನಾಯಕ	ಹೊಯ್ಸಳ ಸಾಮಂತ	ಗ್ರಾಮ ರಕ್ಷಣೆ
೧೫೧.	ಕಿಬ್ಬಾವಾಡಿ(ಕೆಯು)	೧೫೬೭		ಸದಾಶಿವರಾಯನ ಗೌಡಿಕೆ ನೀಡಿದ್ದು	ಗ್ರಾಮ ರಕ್ಷಣೆ
೧೫೨.	ಮೆಳೆಕೋಟೆ(ಟಿಯು)	೧೩೧೪	ಬೀಚಿ	ಹೊಯ್ಸಳ ಸಾಮಂತ	ಗ್ರಾಮ ರಕ್ಷಣೆ
೧೫೩.	ಯಿಡಗೂರು(ಜಿಯು)	೧೪೦೦		ಶ್ರೀವಿರೂಪಾಕ್ಷನ ಅಧಿಕಾರಿ	ಗ್ರಾಮ ರಕ್ಷಣೆ
೧೫೪.	ನಿಟ್ಟೂರು(ಜಿಯು)	೧೨೧೯		೧ನೆಯ ಬಲ್ಲಾಳನ ಅಧಿಕಾರಿ	ಗ್ರಾಮ ರಕ್ಷಣೆ
೧೫೫.	ನಂದಿವಾಳ(ಸಿಎಚ್)	೧೨೬೧		ಗೋಪಾಳದಂಡನಾಯಕ ಹೊಯ್ಸಳ	ಗ್ರಾಮ ರಕ್ಷಣೆ
೧೫೬.	ಶೆಟ್ಟಿಕೆರೆ(ಸಿಎಚ್)	೧೨೬೧	ಗೋಪಾಳದಂಡನಾಯಕ	ಹೊಯ್ಸಳ ಅಧಿಕಾರಿ	ಗ್ರಾಮ ರಕ್ಷಣೆ
೧೫೭.	ಮಾರುಹೊಳೆ(ಸಿಎಚ್)		ದಳವಾಯಿ ಬಸವಿನಾಯಕ	ಹೊಯ್ಸಳ ಅಧಿಕಾರಿ	ಗ್ರಾಮ ರಕ್ಷಣೆ
೧೫೮.	ಬೂದಿಹಾಳು(ಸಿಎಚ್)	೧೫೩೫	ರಾಮಪ್ಪಯ್ಯ	ಅಚ್ಯುತರಾಯನ ಸಾಮಂತ	ಗ್ರಾಮ ರಕ್ಷಣೆ
೧೫೯.	ಆಲ್ಬೂರು(ಸಿಎಚ್)		ಚನ್ನಯ್ಯ ನಾಯಕ	೧ನೆಯ ಬುಕ್ಕ	ಗ್ರಾಮ ರಕ್ಷಣೆ
೧೬೦.	ಹೆಬ್ಬೂರು (ಟಿಯು) ಈ ಪ್ರದೇಶದಲ್ಲಿ ಹುಲಿಗಳ ಕಾಟ ಇದ್ದಿದ್ದರಿಂದ ಅವಗಳಿಂದ ರಕ್ಷಣೆ ಪಡೆಯುವುದಕ್ಕಾಗಿ ಹಳೇಗೌಡ ಮತ್ತು ತಿಮ್ಮೇಗೌಡರ ಕಾಲದಲ್ಲಿ ನಿರ್ಮಾಣವಾಯಿತು. ನಂತರ ಕತ್ತಿ ಕಾಮಣ್ಣ ವಿಜಯನಗರ ಅಧಿಕಾರಿಯಾಗಿ ನೇಮಕಗೊಂಡ.				ಗ್ರಾಮ ರಕ್ಷಣೆ
೧೬೧.	ಚಿಕ್ಕನಕೋಟೆ(ಎಸ್ಐ)	೧೬೦೦ನೇ ಶತಮಾನ	--	--	ರಕ್ಷಣಾ ಕೇಂದ್ರ
೧೬೨.	ದೇವರಬೆಟ್ಟ(ಪಿವಿಜಿ)	೧೬೦೦ನೇ ಶತಮಾನ	--	--	ರಕ್ಷಣಾ ಕೇಂದ್ರ
೧೬೩.	ರಾಜನಬಂಡೆ(ಪಿವಿಜಿ)	೧೬೦೦ನೇ ಶತಮಾನ	--	--	ರಕ್ಷಣಾ ಕೇಂದ್ರ

೧೬೪.	ಅಪ್ಪೇನಹಳ್ಳಿ(ಎಂಡಿ)	೧೮ನೇ ಶತಮಾನ	--	--	ರಕ್ಷಣಾ ಕೇಂದ್ರ
೧೬೫.	ಮಂಗಳವಾಡ	೧೬ನೇ ಶತಮಾನ	--	--	ಗ್ರಾಮ ರಕ್ಷಣೆ
೧೬೬.	ಜಂಗಮರಹಳ್ಳಿ	೧೭–೧೮ನೇ ಶತಮಾನ	--	--	ಗ್ರಾಮ ರಕ್ಷಣೆ
೧೬೭.	ಸಿದ್ಧಕುಂಟಾ	೧೬–೧೭ನೇ ಶತಮಾನ	--	ನಿಡಗಲ್ಲು ಪಾಳೆಯಗಾರರು	ಗ್ರಾಮ ರಕ್ಷಣೆ
೧೬೮.	ನಾಗಲಾಪುರ	೧೬–೧೭ನೇ ಶತಮಾನ	--	ಕುಂದುರ್ಪಿ ಪಾಳೆಯಗಾರರು	ಗ್ರಾಮ ರಕ್ಷಣೆ
೧೬೯.	ರಾಯಚೆರ್ಲು	೧೬–೧೭ನೇ ಶತಮಾನ	--	ಅರವೀಡು ಮನೆತನದ ಆಶ್ರಯ	ಗ್ರಾಮ ರಕ್ಷಣೆ
೧೭೦.	ಹುಣಸವಾಡಿ	೧೫–೧೬ನೇ ಶತಮಾನ	--	ಮಹಾನಾಡ ಪ್ರಭುಗಳ ಆಶ್ರಯ	ಗ್ರಾಮ ರಕ್ಷಣೆ

ಸೂಚಿಗಳು

ಟಿ.ಯು–ತುಮಕೂರು

ಪಿ.ವಿ.ಜಿ–ಪಾವಗಡ

ಎಸ್.ಐ–ಶಿರಾ

ಎಂ.ಡಿ–ಮಧುಗಿರಿ

ಟಿ.ಪಿ–ತಿಪಟೂರು

ಕೆ.ಯು–ಕುಣಿಗಲ್

ಜಿ.ಯು–ಗುಬ್ಬಿ

ಸಿ.ಎಚ್–ಚಿಕ್ಕನಾಯಕನಹಳ್ಳಿ

ತುಮಕೂರು ಜಿಲ್ಲೆಯ ಕೋಟೆಗಳು


Tumkur District Forts



1. ಗುಂಡಾರ್ಲಹಳ್ಳಿ
2. ಬಂಗಾರನಾಯಕನದುರ್ಗ
3. ಕಾವಲು ರಂಗಾಪುರ
4. ನರಸನಾಯಕನದುರ್ಗ
5. ರಾಜವಂತಿ
6. ಯಲ್ಲಪ್ಪನಾಯಕನಹಳ್ಳಿ
7. ಮಾರವ್ವನಹಳ್ಳಿ
8. ಹೊಸದುರ್ಗ
9. ಇಂದ್ರಬೆಟ್ಟ
10. ಕಾಮನದುರ್ಗ
11. ಹೊಸಹಳ್ಳಿ (ತಾಂಡ)
12. ಕೆ.ರಾಂಪುರ
13. ಯರ್ರಮ್ಮಹಳ್ಳಿಬೆಟ್ಟ
14. ಯರ್ರಮ್ಮನಹಳ್ಳಿ
15. ಮುಗದಾಳಬೆಟ್ಟ
16. ದೇವರಬೆಟ್ಟ
17. ತಿಪ್ಪಯ್ಯನದುರ್ಗ
18. ಅರಕ್ಯಾತನಹಳ್ಳಿ
19. ಒಬೇನಹಳ್ಳಿ
20. ಹಳೇ ಹೊಸಹಳ್ಳಿ
21. ಹೊಸಹಳ್ಳಿ
22. ಗಂಗಸಾಗರ
23. ಕನಿಕಲಬಂಡೆ
24. ಪೊನ್ನಸಮುದ್ರ
25. ಕತ್ತಿಕ್ಯಾತನಹಳ್ಳಿ
26. ಬೂದಿಬೆಟ್ಟ
27. ಅರಸೀಕೆರೆ
28. ಪಾವಗಡ
29. ಕನ್ನಮೇಡಿ
30. ಬ್ಯಾಡನೂರು
31. ಕೋಟಗುಡ್ಡ
32. ನಿಡುಗಲ್ಲು
33. ತೂಮಕುಂಟೆ
34. ಜಂಗಮರಹಳ್ಳಿ
35. ಹನುಮಂತನಹಳ್ಳಿ
36. ಸ್ವಾರಮ್ಮನಬೆಟ್ಟ
37. ಟಿ.ಎನ್.ಬೆಟ್ಟ
38. ದವಡಬೆಟ್ಟ
39. ಸಿಂಗರೆಡ್ಡಿಹಳ್ಳಿ
40. ಬೊಮ್ಮತನಹಳ್ಳಿ
41. ಗುಂಡ್ಲಹಳ್ಳಿ
42. ಗಂಗಾಧರಗುಡ್ಡ
43. ಮಿಡಿಗೇಶಿ
44. ಇಟ್ಟಿಗದಿಬ್ಬನಹಳ್ಳಿ
45. ತೆರಿಯೂರು
46. ಕೊಡಿಗೇನಹಳ್ಳಿ
47. ಮಧುಗಿರಿ
48. ಕಲಿದೇವಪುರ
49. ಮುಮ್ಮಡಿ ಪಟ್ಟಣ
50. ಬಿಜವರ
51. ಸಿದ್ಧಾಪುರ
52. ಕೊಡಗದಾಲ
53. ಬೇಡತ್ತೂರು
54. ಗುಟ್ಟೆ
55. ಭಸ್ಮಾಂಗಿ
56. ಚಂದ್ರಗಿರಿ
57. ಶಂಭೋನಹಳ್ಳಿ
58. ವಿರಣ್ಣೇಶ್ವರಬೆಟ್ಟ
59. ರೆಡ್ಡಿಹಳ್ಳಿ
60. ಸತ್ತಿಗಾನಹಳ್ಳಿ
61. ಬೇನಕನಹಳ್ಳಿ
62. ಮಲ್ಲನಾಯಕನಹಳ್ಳಿ
63. ಪುಲಮಾಚಿ
64. ಗರಣಿ
65. ತೋಟಮಡಗು
66. ಮೀನಗೊಂದಿ
67. ದೊಡ್ಡಮಾಲೂರು
68. ಕಡಗತ್ತೂರು
69. ತಿಂಗಳೂರು
70. ದೊಡ್ಡಬೋಳಿ
71. ಕೂಡ್ಲಾಪುರ
72. ದೊಡ್ಡೇರಿ
73. ಕೋಟೆಕಲ್ಲೇಶ್ವರ
74. ತಾಯಗೊಂಡನಹಳ್ಳಿ
75. ಬಡಗುಂಡನಹಳ್ಳಿ
76. ಚುಂಚೆನಹಳ್ಳಿ
77. ದೇವರಹಳ್ಳಿ
78. ಬೆಲ್ಲದಮಡಗು
79. ತಿಮ್ಲಾಪುರ
80. ಚೆನ್ನರಾಯನದುರ್ಗ
81. ಸಿದ್ದರಬೆಟ್ಟ
82. ಕೊರಟಗೆರೆ
83. ತುಂಬಾಡಿ
84. ಹೊಳವನಹಳ್ಳಿ
85. ಹೊನ್ನವಳ್ಳಿ
86. ನೊಣವಿನಕೆರೆ
87. ತಂಡಗ
88. ನಾಗಲಾಪುರ
89. ತಿಪಟೂರು
90. ತುರುವೇಕೆರೆ
91. ಚಿಕ್ಕನಾಯಕನಹಳ್ಳಿ
92. ಹೊಸಹಳ್ಳಿ
93. ಕಂದಿಕೆರೆ
94. ಹಂದನಕೆರೆ
96. ಹುಳಿಯಾರು
97. ಯಳನಾಡು
98. ಚಿಕ್ಕ ಎಣ್ಣೆಗೆರೆ
99. ಗಂಗೊಂಡನಹಳ್ಳಿ
100. ರಂಗನಾಥಪುರ
101. ಬಟ್ಟಿಗನಹಳ್ಳಿ
102. ಹೊಸಬಿಜ್ಜನಬೆಳ್ಳ
103. ಹಳೇಬಿಜ್ಜನಬೆಳ್ಳ
104. ಕುರೆಹಳ್ಳಿ
105. ಜಾನಕಲ್ಲು
106. ಬುಕ್ಕಾಪಟ್ಟಣ
107. ಶಿರಾ
108. ಬರಗೂರು
109. ಕಲ್ಲುಕೋಟೆ
110. ಕುಂಬರಹಳ್ಳಿ
111. ಚಿಕ್ಕ ಅಗ್ರಹಾರ
112. ಸೀಬಿ
113. ತುಮಕೂರು
114. ದೇವರಾಯನದುರ್ಗ
115. ಕೈದಾಳ
116. ಇಳಕಲ್‌ಬೆಟ್ಟ
117. ಕೋರಾ
118. ದೊಡ್ಡಗುಣಿ
119. ಜೋಗಿಹಳ್ಳಿ
120. ಮಂಚಲದೊರೆ
121. ಕುಂಟಾರಾಮನಪಾಳ್ಯ
122. ಮೂಗನಾಕನಕೋಟೆ
123. ಮುಚ್ಚಿವೀರನಹಳ್ಳಿ
124. ಚೇಳೂರು
125. ಗುಬ್ಬಿ
126. ಗುಬ್ಬಿ ಹೊಸಹಳ್ಳಿ
127. ಕಡಬ
128. ಹಾಗಲವಾಡಿ
129. ಕುಣಿಗಲ್
130. ಹುಲಿಯೂರುದುರ್ಗ
131. ಹುತ್ತರಿದುರ್ಗ
132. ಚಿಕ್ಕವನಹಳ್ಳಿ
133. ಹೊಸಹಳ್ಳಿ(ವೀರಭದ್ರಗಿರಿ)
134. ವೈ.ಎನ್.ಹೊಸಕೋಟೆ
135. ಬಟವಾಡೆ
136. ಸರ್ಜೆಚಿನ್ನಪ್ಪನಹಳ್ಳಿ
137. ಎರೆಕಟ್ಟೆ
138.ಚಿನ್ನೇನಹಳ್ಳಿ
139.ಮಂಳವಾಡ
140.ಬಾಗೆಯೂರು
141.ಪ್ರಭುವನಹಳ್ಳಿ
141.ಚೀಲನಹಳ್ಳಿ
142.ಎರಕಟ್ಟೆ
143.ಗುಡಿಯಕುಂಟೆ
144.ಕ್ಯಾತಗೊಂಡನಹಳ್ಳಿ
145.ಹೊಸಕೋಟೆ
146.ಆನಂದರಾಯನಬೆಟ್ಟ
147.ಕೊಡಿಗೇನಹಳ್ಳಿ
148.ಹಂಪಯ್ಯನದುರ್ಗ
149.ಕಮ್ಮನಕೋಟೆ
150.ಬಿದರೆ
151.ಚಿಕ್ಕನಾರವಂಗಳ
152.ಗೋಬರ್‌ಕೋಟೆ
153.ಕೆಂಚನಕೋಟೆ
154. ಕರಿಕೆರ
155.ಬೆಟ್ಟದಹಳ್ಳಿ
156.ರಾಮಾಪುರ
157. ಒಜಗೂರು
158.ಬಿಟ್ನಕುರಿಕೆ
159.ಚಿನಗ
160.ಕಿಚ್ಚವಾಡಿ
161.ಮಲೆಕೋಟೆ
162.ಯಿಡಗೂರು
163.ನಿಟ್ಟೂರು
164.ನಂದಿವಾಳ
165.ಶೆಟ್ಟಿಕೆರೆ
167.ಮಾರುಹೊಳೆ
168.ಬೂದಿಹಾಳು
169.ಬೂದಿಹಾಳು.
170.ಆಲ್ಲೂರು.
171.ಹೆಬ್ಬೂರು
172.ಅಪ್ಪೇನಹಳ್ಳಿ
173.ಹುಣಸವಾಡಿ
174.ಸಿದ್ಧಕುಂಟೆ
175.ರಾಯಚರ್ಲು
176.ಹುಣಸವಾಡಿ
177.ನಾಗಲಾಪುರ
178.ಸಿದ್ಧಗಂಗೆ
179.ಕೃಷ್ಣಗಿರಿ
180.ಕೋಟಬಂಡೆ

ನಿಡುಗಲ್ಲು ಕೋಟೆಯ ತಲನಕ್ಷೆ

Nidugallu Fort Map



ಮಧುಗಿರಿ ಕೋಟೆಯ ತಲನಕ್ಷೆ


Madhugiri Hill Fort Map



* B - Natural Bolleder


* m - Mitter

ಚನ್ನರಾಯನದುರ್ಗದ ತಲನಕ್ಷೆ
Channarayana Fort Map



ಹುತ್ರಿದುರ್ಗ ಕೋಟೆಯ ತಲನಕ್ಷೆ

Hutridurga Fort Map



ಭಸ್ಮಾಂಗಿ ಗಿರಿದುರ್ಗದ ತಲನಕ್ಷೆ

Basmangi Hill Fort Map




ಪಾವಗಡ ಗಿರಿದುರ್ಗದ ತಲನಕ್ಷೆ

Pavagada Hill Fort Map




ಗುಟ್ಟೆ ಗಿರಿದುರ್ಗದ ತಲನಕ್ಷೆ

Gutte Hill Fort Map




ಹೊಸಹಳ್ಳಿ ತಾಂಡದ ಗಿರಿದುರ್ಗ ತಲನಕ್ಷೆ

Hosahalli Tanda Hill Fort Map




ಹುಲಿಯೂರು ಗಿರಿದುರ್ಗದ ತಲನಕ್ಷೆ

Huliyurudurga Hill Fort Map




ಗಂಗಾಸಾಗರ ಬುರುಜಿನ ತಲನಕ್ಷೆ

Gangasagara Fort Map



ಮಿಡಿಗೇಶಿ ಕೋಟೆಯ ತಲನಕ್ಷೆ

Midigeshi Fort Map




ದೇವರಾಯನದುರ್ಗದ ತಲನಕ್ಷೆ

Devarayanadurga Hill Fort Map



ಶಿರಾ ಕೋಟೆಯ ತಲನಕ್ಷೆ

Shira Fort Map



ವೈ.ಎನ್. ಹೊಸಕೋಟೆ ಗಿರಿದುರ್ಗದ ತಲನಕ್ಷೆ
Y.N. Hoskote Hill Fort Map




ಒಡೇರಹಳ್ಳಿ (ವೀರಣ್ಣೇಶ್ವರ) ಗಿರಿದುರ್ಗದ ತಲನಕ್ಷೆ

Oderahalli Hill Fort Map




ಕಾಮನದುರ್ಗ ಗಿರಿಯದುರ್ಗದ ತಲನಕ್ಷೆ
Kamanadurga Hill Fort Map



* B - Natural Bolleder
* m - Mitter


ಸಿದ್ಧಾಪುರ ಸ್ಥಳದುರ್ಗದ ತಲನಕ್ಷೆ

Siddapura Fort Map




ಕೊರಟಗೆರೆ ಗಿರಿದುರ್ಗದ ತಲನಕ್ಷೆ

Koratagere Hill Fort Map




ಸಿದ್ಧರಬೆಟ್ಟ ಗಿರಿದುರ್ಗದ ತಲನಕ್ಷೆ


Siddarabetta Hill Fort Map




ಬಸವನದುರ್ಗದ ತಲನಕ್ಷೆ
Basavanadurga Hill Fort Map



ಕೊಡಗದಾಲ ಗಿರಿದುರ್ಗದ ತಲನಕ್ಷೆ
Kodagadala Hill Fort Map




ಚಂದ್ರಗಿರಿಯ ಗಿರಿದುರ್ಗದ ತಲನಕ್ಷೆ
Chandragiri Hill Fort Map




ಹೊಸಹಳ್ಳಿ ಬುರುಜಿನ ತಲನಕ್ಷೆ

Hosahalli Fort Map




ತಿಮ್ಮನಾಯಕನ ಗಿರಿದುರ್ಗದ ತಲನಕ್ಷೆ
T.N. Hill Fort Map



* B - Natural Bolleder
* m - Mitter


ತೆಲುಗಲಕೊಂಡ ಗಿರಿದುರ್ಗದ ತಲನಕ್ಷೆ

Telugalakonda Hill Fort Map




ದವಡಬೆಟ್ಟದ ತಲನಕ್ಷೆ


Davadabetta Hill Fort Map



ಸೀಬಿ ಸ್ಥಳದುರ್ಗದ ತಲನಕ್ಷೆ
Sibi Hill Fort Map




ಪಾವಗಡ ಕೋಟೆ



ಕೈಪಿಡಿ ಗೋಡೆ
ಕಂಡಿ
ಕಂಡಿ
1.55m
1.50m.
0.85m.
4.10m.
0.70m
1.86m.
0.8m.
0.70m.
1.60m
1.60m.
ಮದ್ದಿನಮನೆ
ಫಿರಂಗಿ ಕಂಡಿ
ಕಂಡಿ
ಫಿರಂಗಿ ಕಂಡಿ
1.22m.
0.98m.
2.27m.
0.67m
0.95m.
0.95m.
0.92m
0.52m.
2.02m.
0.85m
0.60m.
0.60m.
0.60m.
ಕಂಡಿ
ಕೈಪಿಡಿ ಗೋಡೆ
ಕಂಡಿ
ಇಟ್ಟಿಗೆ
0.40m.
1.54m.
1.30m.
0.8m.
0.40m.
1.84m.
2.10m.
0.10m
0.15m.
0.22m.
0.22m.
0.15m.
ಕಂಡಿ
ಕಂಡಿ
ಕೈಪಿಡಿ ಗೋಡೆ
ಕಂಡಿ
ಕೈಪಿಡಿ ಗೋಡೆ
0.7m
0.8m.
1.10m.
2.87m.
0.40m.
1.80m.
1.80m.
0.24m
0.34m.
0.8m
1.56m.
0.10m
2C


ಪಾವಗಡ ಕೋಟೆ




ಕಿಂಡಿ
ಕೈಪಿಡಿ ಗೋಡೆ
ಕೈಪಿಡಿ ಗೋಡೆ
ಕಿಂಡಿ
1.56m
1.40m
ಕಿಂಡಿ
ಕಿಂಡಿ
ಕಿಂಡಿ
ಕಿಂಡಿ
1.15m
1.14m
ಕೈಪಿಡಿ ಗೋಡೆ
ವೀಕ್ಷಣಾ ಕಿಂಡಿ
0.56m

ಸಿರಾ ಕೋಟೆ


ಕಂಡಿ




ಕಂಡಿ




ಕೊತ್ತಲ




ತೆನೆ




ಕೈಪಿಡಿ ಗೋಡೆ



ಫಿರಂಗಿ ಕಂಡಿ



ಭಸ್ಮಾಂಗೆ ಕೋಟೆ



ಫಿರಂಗಿ ಕಿಂಡಿ
2.18m.
0.60m
ಕೈಪಿಡಿ ಗೋಡೆ
ಕಿಂಡಿ
0.40m.
2.4m.
0.7m.
ಕಿಂಡಿ
0.65m
2.03m.
0.10m.
ಕೊತ್ತಲ
9.68 m.
ಕಿಂಡಿ
0.60m
0.10m.
ಮದ್ದಿನ ಮನೆ
0.70m
0.70m
ಬುರುಜು
2.24m.
5 m



ನವಶೋಧಿತ ಸೂಕ್ಷ್ಮ ಶಿಲೋಪಕರಣಗಳು - ತುಮುಕೂರು ಜಿಲ್ಲೆ



ನವಶೋಧಿತ ಆಯುಧಗಳು - ತುಮಕೂರು ಜಿಲ್ಲೆ




ನವಶಿಲಾಯುಗದ ಕೈಗೊಡಲಿ - ಎಮ್ಮೆತಿಮ್ಮನಹಳ್ಳಿ, ಮಧುಗಿರಿ ತಾಲೂಕು




ನವಶಿಲಾಯುಗದ ಕೈಗೊಡಲಿ - ಕಡಗತ್ತೂರು, ಮಧುಗಿರಿ ತಾಲೂಕು




ಮೃತ್‌ಪಾತ್ರೆ ಅವಶೇಷಗಳು - ತುಮಕೂರು ಜಿಲ್ಲೆ




ರೇಖಾಚಿತ್ರಗಳು- ಹೊಸಹಳ್ಳಿ, ಪಾವಗಡ ತಾಲೂಕು



ಹುಲಿಯ ರೇಖಾಚಿತ್ರ - ಹೊಸಹಳ್ಳಿ, ಪಾವಗಡ ತಾಲೂಕು



ಕಾಲ್ಪನಿಕ ರೇಖಾಚಿತ್ರ - ಕೆ.ರಾಂಪುರ, ಪಾವಗಡ ತಾಲೂಕು



ರೇಖಾಚಿತ್ರಗಳು- ಕನ್ನಮೇಡಿ, ಪಾವಗಡ ತಾಲೂಕು



ಕಂಡಿಕೋಣೆ ಸಮಾಧಿ -ಒಬೇನಹಳ್ಳಿ.




ಕಂಡಿಕೋಣೆ ಸಮಾದಿ - ಒಬೇನಹಳ್ಳಿ.




ಕಾಳಹಸ್ತೇಶ್ವರ ಕೋಟೆ - ನಿಡುಗಲ್ಲು



ಮಿಡಿಗೇಶಿ ಕೋಟೆ



ಮಧುಗಿರಿ ಕೋಟೆ



ಪಾವಗಡ ಕೋಟೆ



ಇಂದ್ರ ಬೆಟ್ಟದ ಕೋಟೆ



ಕುಂಭಿದುರ್ಗ - ದೇವರಾಯನದುರ್ಗ



ದೇವರಬೆಟ್ಟ ಕೋಟೆ



ಬುರುಜು - ಹಾಗಲವಾಡಿ



ಬುರುಜು - ಗಂಗಸಾಗರ



ಬುರುಜು - ಹೊಸಹಳ್ಳಿ



ಶಿರಾ ಕೋಟೆ



ಕುಂಜಿದುರ್ಗ - ಚೆನ್ನರಾಯನದುರ್ಗ



ಭಸ್ಮಾಂಗಿ ಕೋಟೆ



ಹುಲಿಯೂರುದುರ್ಗ



ಕನ್ನಮೇಡಿ ಕೋಟೆ



ಹೊನ್ನವಳ್ಳಿ ಕೋಟೆ



ಪ್ರಾಕಾರ ಗೋಡೆ - ಮಧುಗಿರಿ



ಮಣ್ಣಿನ ಪ್ರಾಕಾರ ಗೋಡೆ - ದೊಡ್ಡೇರಿ



ಪ್ರಾಕಾರ ಗೋಡೆ - ಮಧುಗಿರಿ




ಕಂದಕ - ಶಿರಾ



ಅಟ್ಟಾಲಕ - ಮಿಡಿಗೇಶಿ



ಅಟ್ಟಾಲಕ - ಭಸ್ಮಾಂಗಿ



ಅಟ್ಟಾಲಕ - ಮಧುಗಿರಿ



ಅಟ್ಟಾಲಕ - ಪಾವಗಡ



ಅಟ್ಟಾಲಕ - ಶಿರಾ



ಶೃಂಗಾರದ ಬಾಗಿಲು - ಮಧುಗಿರಿ



ವಜ್ರದ ಊರ ಬಾಗಿಲು - ನಿಡುಗಲ್ಲು



ಬಸವನದುರ್ಗದ ದ್ವಾರ - ಹುತ್ತರೀದುರ್ಗ



ಕೈಪಿಡಿ ಗೋಡೆ ಮತ್ತು ಬಂಕರ್ - ಭಸ್ಮಾಂಗಿ



ಕೈಪಿಡಿ ಗೋಡೆ - ಮದುಗಿರಿ



ವೀಕ್ಷಣಾಕಿಂಡಿ - ಶಿರಾ



ವೀಕ್ಷಣಾಕಿಂಡಿ - ಮಧುಗಿರಿ



ಫಿರಂಗಿಕಿಂಡಿ - ಮಧುಗಿರಿ



ಕಾವಲು ಮಂಟಪ - ಕನ್ನಮೇಡಿ



ಕಾವಲು ಮಂಟಪ - ನಿಡುಗಲ್ಲು



ಕೋಟೆ ತೆನೆ - ಹುತ್ತರೀದುರ್ಗ



ಕೋಟೆತೆನೆ - ಮಧುಗಿರಿ



ತುಪ್ಪದ ಕಣಜ - ಪಾವಗಡ



ನೀರಿನ ಶುದ್ಧೀಕರಣ - ಮಧುಗಿರಿ



ಗಾರೆಬಾವಿ -ಮಿಡಿಗೇಶಿ



ಜಲ್ದಿಬಾವಿ - ಸ್ವಾರಮ್ಮನಬೆಟ್ಟ



ಜಲ್ಲಿಬಾವಿ - ಭಸ್ಮಾಂಗಿ



ಹನ್ನೆರೆಡು ಸೊಪಾನ ಬಾವಿ - ಹಂದನಕೆರೆ




ಗರಡಿಮನೆ - ನಿಡುಗಲ್ಲು



ಮದ್ದಿನಮನೆ - ಹುತ್ತರೀದುರ್ಗ



ಬಂಕರ್ - ಪಾವಗಡ



ಫಿರಂಗಿ - ನಿಡುಗಲ್ಲು




ಅರಮನೆ - ನಿಡುಗಲ್ಲು



ಆಂಜನೇಯ ಮಧುಗಿರಿ ಬಾಗಿಲು - ಚೆನ್ನರಾಯನದುರ್ಗ



ಗರುಡಾಂಜನೇಯ ಕಾಳಗ ಕುಂಜಿ ೨ ನೇದ್ವಾರ - ದೇವರಾಯನದುರ್ಗ



ಶಾಸನ - ಕೂಡ್ಲಾಪುರ




ವೀರಮಹಾಸತಿಕಲ್ಲು - ಇಟ್ಟಿಗದಿಬ್ಬನಹಳ್ಳಿ



ವೀರಗಲ್ಲು - ಬ್ಯಾಡನೂರು



ಮಂತ್ರಗಾತಿ ಶಿಲ್ಪ - ಹೊನ್ನವಳ್ಳಿ



ವೀರಗಲ್ಲು - ಬೇಡತೂರು



ಮಹಾಸತಿಕಲ್ಲು - ಸೂಲನಾಯಕನಹಳ್ಳಿ



ಗಜ - ಭಿತ್ತಿ ಶಿಲ್ಪ - ಬೇನಕನಹಳ್ಳಿಬೆಟ್ಟ



ಗಜ - ಭಿತ್ತಿ ಶಿಲ್ಪ - ಭಸ್ಮಾಂಗಿ



ಗಜ - ಭಿತ್ತಿ ಶಿಲ್ಪ - ಶಿರಾ



ಭಿತ್ತಿ ಶಿಲ್ಪ - ಕೈದಾಳ



ರಥ ಶಿಲ್ಪ - ನಿಡುಗಲ್ಲು



ಹುಲಿ ಶಿಲ್ಪ - ನಿಡುಗಲ್ಲು



ಗೂಳಿ - ತಿಪ್ಪಯ್ಯನದುರ್ಗ



ಯಾಳಿ - ಹುಲಿಯೂರುದುರ್ಗ




ಮತ್ಸ್ಯ ಶಿಲ್ಪ -ಭಸ್ಮಾಂಗಿ



ನಾಗ ಶಿಲ್ಪ - ಕೊಡಿಗೇನಹಳ್ಳಿ




ಕಹಳೆ ಊದುತ್ತಿರುವ ಕಾವಲುಗಾರ
ಭಿತ್ತಿ ಶಿಲ್ಪ - ಕುಣಿಗಲ್



ಕಹಳೆ ಊದುತ್ತಿರುವ ಕಾವಲುಗಾರ
ಭಿತ್ತಿ ಶಿಲ್ಪ - ಚೆನ್ನರಾಯನದುರ್ಗ



ಹಾಗಲವಾಡಿ ನಾಯಕರ ಭಿತ್ತಿಶಿಲ್ಪ - ಹಾಗಲವಾಡಿ



ವೀರಗಲ್ಲು ಮತ್ತು ಮಹಾಸತಿಕಲ್ಲು - ಭೂತಪ್ಪನಬೆಟ್ಟ



ಮಿಥುನ ಮತ್ತು ನಾಗ ಭಿತ್ತಿಶಿಲ್ಪ
ಮರಡಿಗುಡ್ಡ




ನಾಗ ಮತ್ತು ಶಿವಲಿಂಗ ಶಿಲ್ಪ - ಕುಣಿಗಲ್




ಕಾಲ್ಪನಿಕ ಶಿಲ್ಪ - ಮರಡಿಗುಡ್ಡ



ಲಜ್ಜಾಗೌರಿ ಭಿತ್ತಿ ಶಿಲ್ಪ - ಹಾಗಲವಾಡಿ



ದಾಸ ಭಿತ್ತಿ ಶಿಲ್ಪ - ದೇವರಾಯನದುರ್ಗ



ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ